ಸಾಮಾಜಿಕ ಬದಲಾವಣೆಗಳ ಸಂದರ್ಭದಲ್ಲಿ ಆಧುನಿಕ ಕನ್ನಡ ಮಹಿಳಾ ಕಾವ್ಯಗಳ ಅಧ್ಯಯನ

(ಆಯ್ದ ಕವಯಿತ್ರಿಯರ ಕಾವ್ಯವನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ

ಸಂಶೋಧಕರು

ಅರುಣಕುಮಾರಿ ಬಿ. ಎನ್.

(ನೋಂದಣಿ ಸಂಖ್ಯೆ : ೧೪೨೦೦೧೦೨೦೦೧೭)

ಮಾರ್ಗದರ್ಶಕರು

ಡಾ. ಜಿ. ರವಿ

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ಕೆ.ಆರ್. ಪುರಂ, ಬೆಂಗಳೂರು

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬.

ಮಾನ್ಯತಾ ಸಂಸ್ಥೆ : ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು - ೫೬೦೦೧೮

೨೦೧೯

ಸಾಮಾಜಿಕ ಬದಲಾವಣೆಗಳ ಸಂದರ್ಭದಲ್ಲಿ
ಆಧುನಿಕ ಕನ್ನಡ ಮಹಿಳಾ ಕಾವ್ಯಗಳ ಅಧ್ಯಯನ

(ಆಯ್ದ ಕವಯಿತ್ರಿಯರ ಕಾವ್ಯವನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ

ಸಂಶೋಧಕರು

ಅರುಣಕುಮಾರಿ ಬಿ ಎನ್

(ನೋಂದಣಿ ಸಂಖ್ಯೆ : ೧೪೨೦೦೧೦೨೦೦೧೭)

ಮಾರ್ಗದರ್ಶಕರು

ಡಾ. ಜಿ. ರವಿ

ಸಹ ಪ್ರಾಧ್ಯಾಪಕರು ಕನ್ನಡ ವಿಭಾಗ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ಕೆ. ಆರ್. ಪುರಂ, ಬೆಂಗಳೂರು

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬.

ಮಾನ್ಯತಾ ಸಂಸ್ಥೆ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ,

ಬೆಂಗಳೂರು – ೫೬೦೦೧೮

೨೦೧೯

ಸಂಶೋಧಕರ ಪ್ರಮಾಣ ಪತ್ರ

'ಸಾಮಾಜಿಕ ಬದಲಾವಣೆಗಳ ಸಂದರ್ಭದಲ್ಲಿ ಆಧುನಿಕ ಕನ್ನಡ ಮಹಿಳಾ ಕಾವ್ಯಗಳ ಅಧ್ಯಯನ' (**ಆಯ್ದ ಕವಯಿತ್ರಿಯರ ಕಾವ್ಯವನ್ನು ಅನುಲಕ್ಷಿಸಿ**) ಎಂಬ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದು ಇದನ್ನು ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ.

ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಮತ್ತು ಇದು ಬಿಡಿಯಾಗಿ ಇಲ್ಲವೇ ಇಡಿಯಾಗಿ ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಅರುಣಕುಮಾರಿ ಬಿ.ಎಸ್

ಸಂಶೋಧಕರು,
ಮಾನ್ಯತಾ ಸಂಸ್ಥೆ, ಕನ್ನಡ ಸಾಹಿತ್ಯ ಪರಿಷತ್ತು,
ಚಾಮರಾಜಪೇಟೆ, ಬೆಂಗಳೂರು.

ದಿನಾಂಕ : 18/09/2019
ಸ್ಥಳ : ಬೆಂಗಳೂರು

ಮಾರ್ಗದರ್ಶಕರ ದೃಢೀಕರಣ ಪತ್ರ

ಅರುಣಕುಮಾರಿ ಬಿ.ಎನ್ ಇವರು ನನ್ನ ಮಾರ್ಗದರ್ಶನದಲ್ಲಿ **'ಸಾಮಾಜಿಕ ಬದಲಾವಣೆಗಳ ಸಂದರ್ಭದಲ್ಲಿ ಆಧುನಿಕ ಕನ್ನಡ ಮಹಿಳಾ ಕಾವ್ಯಗಳ ಅಧ್ಯಯನ'** (ಆಯ್ದ **ಕವಯಿತ್ರಿಯರ ಕಾವ್ಯವನ್ನು ಅನುಲಕ್ಷಿಸಿ**) ಎಂಬ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದು ಇದನ್ನು ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಮತ್ತು ಇದು ಬಿಡಿಯಾಗಿ ಇಲ್ಲವೇ ಇಡಿಯಾಗಿ ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಿದೆ.

ಡಾ. ಜಿ. ರವಿ

ಮಾರ್ಗದರ್ಶಕರು

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ಕೆ. ಆರ್. ಪುರಂ, ಬೆಂಗಳೂರು

ದಿನಾಂಕ : 18/09/2019

ಸ್ಥಳ : ಬೆಂಗಳೂರು.

ಡಾ॥ ಜಿ. ರವಿ.
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೆ.ಆರ್. ಪುರಂ, ಬೆಂಗಳೂರು-560 036.

ಪರಿವಿಡಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧.೧ ಪೀಠಿಕೆ.

ಕಳೆದ ಶತಮಾನದ ಕೊನೆಯ ಭಾಗವು ಭಾರತದ ಮಟ್ಟಿಗಂತೂ ವಿಶೇಷವಾದ ಪರಿವರ್ತನೆಗಳ ಕಾಲ. ರಾಜಕಾರಣ, ಧಾರ್ಮಿಕತೆ, ವೈಚಾರಿಕತೆ, ವಿಜ್ಞಾನ-ತಂತ್ರಜ್ಞಾನ, ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣಗಳು ಭಾರತವನ್ನು ಹೊಸ ಎತ್ತರಕ್ಕೆ ಕರೆದುಕೊಂಡು ಹೋದ ಕಾಲ. ಮಾಧ್ಯಮಗಳ ಬೆಳವಣಿಗೆ, ಅತ್ಯಾಧುನಿಕ ಶಿಕ್ಷಣ, ಆಕರ್ಷಿಸಬಹುದಾದ ಜೀವನ ಕ್ರಮ – ಇವೆಲ್ಲವೂ ಈ ಕಾಲಮಾನದ ಮುಖ್ಯ ಸಂಗತಿಗಳು. ಪೂರ್ವ-ಪಶ್ಚಿಮ ಸಂಸ್ಕೃತಿಗಳ ಅಂತರ್ ಸಂಬಂಧದ ಹಲವು ಆಯಾಮಗಳನ್ನು ಈಗ ನಾವು ಕಾಣುವಂತಾಗಿದೆ. ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿಯ ಪಾರಂಪರಿಕ ವ್ಯವಸ್ಥೆಯನ್ನು ಒಂದು ರೀತಿಯಲ್ಲಿ ಅಲುಗಾಡಿಸಿದರೆ ಈ ಮೇಲಿನ ಸಂಗತಿಗಳು ಇನ್ನೂ ದಟ್ಟವಾಗಿ ಮತ್ತು ಆಳವಾಗಿ ನಮ್ಮ ಸಂಸ್ಕೃತಿ ಮತ್ತು ಪರಂಪರೆಗಳನ್ನು ಅಲುಗಾಡಿಸಿ ಪ್ರಭಾವಿಸಿದವು. ಇದರ ಭಾಗವಾಗಿ ಭಾರತದಲ್ಲಿ ಒಂದು ಮುಂದುವರಿದ ಕಲ್ಪನೆ ಮತ್ತು ಸಾಮಾಜಿಕ ಜಾಗೃತಿಗಳು ಉಂಟಾಗುತ್ತಿರುವುದನ್ನು ನೋಡಬಹುದು. ಎಲ್ಲಾ ಜಾತಿ ವರ್ಗಗಳ ಜನರಿಗೆ ದೊರೆತ ಸಮಾನ ಶಿಕ್ಷಣ, ಉನ್ನತ ತಾಂತ್ರಿಕತೆ, ಉದ್ಯೋಗಗಳು, ಸಾಮಾಜಿಕ ಗೌರವ ಮತ್ತು ಘನತೆಗಳು ಹಾಗೂ ಸಮುದಾಯದಲ್ಲಿ ಪಾಲುಗೊಳ್ಳುವಿಕೆಗಳು ಭಾರತವನ್ನು ಜಾಗತಿಕ ಅಭಿವೃದ್ಧಿಯಲ್ಲಿ ಗುರುತಿಸಿಕೊಳ್ಳುವಂತೆ ಮಾಡಿದವು. ಶಿಕ್ಷಣ ಮತ್ತು ಆಧುನಿಕತೆಗಳ ಮೂಲಕ ಸಮಾಜದಲ್ಲಿ ಕಂಡು ಬಂದ ಹೊಸ ಅರಿವು ಮತ್ತು ಚಿಂತನಾ ಕ್ರಮಗಳು ಬಹಳ ವೇಗವಾಗಿ ಭಾರತದಲ್ಲಿ ಸಾಮಾಜಿಕ ಬದಲಾವಣೆಗಳನ್ನು ತರಲು ಕಾರಣವಾದವು.

೧೯೭೬ನೇ ಇಸವಿಯಲ್ಲಿ ಮೈಸೂರಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ದಶಮಾನೋತ್ಸವದ ಅಂಗವಾಗಿ ನಡೆದ ಲೇಖಕಿಯರ ಸಮ್ಮೇಳನ ಮತ್ತು ಬೆಂಗಳೂರಿನಲ್ಲಿ ಸ್ಥಾಪನೆಯಾದ ಕರ್ನಾಟಕ ಲೇಖಕಿಯರ ಸಂಘಗಳು ಮಹಿಳಾ ಸಾಹಿತ್ಯ ಸಂಘಟನೆಗೆ ಪ್ರಮುಖ ಮೈಲಿಗಲ್ಲಾದವು. ಇದರ ತರುವಾಯ ಆರಂಭಗೊಂಡ ಹಲವಾರು ಗೋಷ್ಠಿಗಳು, ವಿಚಾರ ಸಂಕಿರಣಗಳು, ಚರ್ಚೆಗಳು ಮಹಿಳಾ ಸಾಹಿತ್ಯಕ್ಕೆ ಹೊಸ ಆಯಾಮ ಕೊಟ್ಟವು.

ಇದರ ಜೊತೆಗೆ ಮಹಿಳಾ ಪ್ರಕಾಶಕರು, ದಲಿತ ಬಂಡಾಯ ಚಳುವಳಿಗಳು, ಸಾಹಿತ್ಯ ಸಂಘಟನೆಯ ಮೂಲಕ ಮಹಿಳಾ ವಲಯವನ್ನು ವಿಸ್ತರಿಸಿದವು. ಇದೆಲ್ಲದರ ಪರಿಣಾಮದಿಂದ ಮಹಿಳೆ ಶಿಕ್ಷಣದ ಕಡೆಗೆ ಹೆಚ್ಚು ಒತ್ತು ಕೊಟ್ಟಿದ್ದರಿಂದಾಗಿ ಸಮಾಜದ ಆಗು ಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸುವ ಮಟ್ಟಕ್ಕೆ ಬಂದಳು. ಪುರುಷ ನಿರ್ಮಿತ ಹೆಣ್ಣು ನೋಟವನ್ನು ಹೊಸ ಬಗೆಯೊಂದಿಗೆ ತನ್ನನ್ನು ತಾನು ಕಂಡುಕೊಂಡಳು. ಹೀಗಾಗಿ ಅವಳ ಅನುಭವಲೋಕ ವಿಶಿಷ್ಟತೆ ಪಡೆದುಕೊಂಡಿತು. ಅನುಕಂಪದ ಕೂಸಾಗಿದ್ದ ಮಹಿಳೆ ಸ್ವತಂತ್ರ್ಯ ಮನೋಭಾವ ಹೊಂದಿದ್ದು ಈ ಕಾಲಘಟ್ಟದಲ್ಲಿಯೆ. ಸಾಮಾಜಿಕವಾಗಿ ಅವಳು ಕಂಡುಕೊಂಡ ಹೊಸನೋಟ ಮತ್ತು ಜೀವನ ಅವಳಲ್ಲಿ ವಿಶಿಷ್ಟ ಮನೋಭಾವನೆ ಮೂಡಲು ಸಹಕಾರಿಯಾಯಿತು. ಈ ನಿಟ್ಟಿನಲ್ಲಿ ಮಹಿಳಾ ಸಾಹಿತ್ಯವೆಂಬುದು ರಿಯಾಯಿತಿ, ಅನುಕಂಪಗಳನ್ನು ನಿರಾಕರಿಸಿ, ಸಾಮಾಜಿಕ ಬದಲಾವಣೆಯತ್ತ ಹೇಗೆ ಮುಖ ಮಾಡಿದ್ದಾಳೆ ಮತ್ತು ಆ ಬದಲಾವಣೆ ಅವಳಲ್ಲಿ ಹೇಗೆ ಜಾಗೃತವಾಗಿದೆ ಎಂಬ ಅಂಶಗಳನ್ನು ಮನಗಂಡು ಮಹಿಳಾ ಕಾವ್ಯದಲ್ಲಿ ಕಂಡುಬರುವ ಸಾಮಾಜಿಕ ಬದಲಾವಣೆಗಳೇನು? ಎಂಬುದನ್ನು ಗುರ್ತಿಸುವ ಪ್ರಯತ್ನದೊಂದಿಗೆ ಪ್ರಸ್ತುತ ಅಧ್ಯಯನ ಸಾಗಿದೆ.

೧.೨ ಅಧ್ಯಯನದ ಉದ್ದೇಶ

'ಸಾಮಾಜಿಕ ಬದಲಾವಣೆಗಳ ಸಂದರ್ಭದಲ್ಲಿ ಕನ್ನಡ ಮಹಿಳಾ ಕಾವ್ಯಗಳ ಅಧ್ಯಯನ' ಎಂಬ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲು ಇರುವ ಕಾರಣ ಮತ್ತು ಉದ್ದೇಶಗಳನ್ನು ಈ ಕೆಳಗಿನಂತೆ ಗುರ್ತಿಸಬಹುದು. ಸಾಹಿತ್ಯದ ಆಶಯ, ವಸ್ತು, ಶೈಲಿ, ಮುಂತಾದ ರೂಪಗಳಲ್ಲಿ ಹೆಣ್ಣಿನ ಪ್ರಾತಿನಿಧ್ಯವಿದ್ದರೂ ಅದು ಹೇಗೆ ಸ್ಥಗಿತ ರೂಪ ಪಡೆಯಿತೆಂಬುದು ಮುಖ್ಯ ಸಂಗತಿ. ಸಾಹಿತ್ಯಿಕವಾಗಿ ಚಲನಶೀಲತೆ ಇದ್ದರೂ ಮಹಿಳಾ ಪ್ರತಿನಿಧೀಕರಣ ರೂಪದಲ್ಲಿ ಅದು ಗೌಣವಾಗಿದ್ದ ಕಾಲಘಟ್ಟ ಇವೆಲ್ಲವನ್ನೂ ಸಾಮಾಜಿಕವಾಗಿ ಬದಲಾವಣೆ ಬಯಸುವಲ್ಲಿ ಮಹಿಳಾ ಕಾವ್ಯ ಪ್ರಮುಖ ಪಾತ್ರ ವಹಿಸಿದ್ದನ್ನು ಗುರ್ತಿಸುವ ಪ್ರಯತ್ನವಾಗಿದೆ.

ಇಪ್ಪತ್ತೊಂದನೇ ಶತಮಾನದ ಸಾಹಿತ್ಯ ಚಿಂತನೆಯಲ್ಲಿ ಮಹಿಳಾ ಕಾವ್ಯ ಪ್ರತ್ಯೇಕ ಅಧ್ಯಯನ ಶಿಸ್ತಾಗಿ ಬೆಳೆದಿದೆ. ಹೆಣ್ಣು ತನ್ನ ಅಸ್ತಿತ್ವವನ್ನು ಸಾಮಾಜಿಕ ಸುಧಾರಣೆಯ ಮುಖ್ಯ ಭಾಗವಾಗಿ ಇಂದು ನಿರೂಪಿಸಿರುವ ಬಗೆಯನ್ನು ವ್ಯವಸ್ಥೆ ಅರ್ಥ ಮಾಡಿ ಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಮಹಿಳಾ ಕಾವ್ಯ ರೂಪಿಸಿದ ವಸ್ತು ಶೈಲಿಗಳು ಸರಳವಾಗಿ ಅರ್ಥೈಸಿರುವ ಬಗೆಯನ್ನು ಗಮನಿಸಬಹುದು.

ಪುರಾಣ ಮತ್ತು ಚರಿತ್ರೆ ಪಾತ್ರಗಳಿಂದ ಪ್ರಸ್ತುತ ವಾಸ್ತವದ ಪಾತ್ರಗಳ ಬಹುಮುಖಿ ನೋಟವು ತೌಲನಿಕ ಅಧ್ಯಯನವಾಗಿಯು, ಪ್ರತ್ಯೇಕ ಅಧ್ಯಯನವಾಗಿಯು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಸಂಶೋಧನೆಯ ಅಧ್ಯಯನದ ಉದ್ದೇಶಗಳನ್ನು ರೂಪಿಸಲಾಗಿದೆ.

ಆಧುನಿಕ ಕನ್ನಡ ಮಹಿಳಾ ಕಾವ್ಯದಲ್ಲಿ ಜಾಗತಿಕ ಸಮಸ್ಯೆಗಳಾದ ಭಯೋತ್ಪಾದನೆ ಯುದ್ಧ ನೀತಿಯಂತಹ ಮಾರಕ ಸನ್ನಿವೇಶಗಳಿಗೆ ಪ್ರತಿಕ್ರಿಯಿಸುವ ಸಂದರ್ಭ ಹೇಗೆ ಬಿಂಬಿತವಾಗಿದೆ ಎಂಬುದನ್ನು ಗ್ರಹಿಸುವುದು. ಈ ಗ್ರಹಿಕೆಗಳು ಸಾಮಾಜಿಕ ಬದಲಾವಣೆಯ ನೆಲೆಯಲ್ಲಿ ಹೇಗೆ ಪ್ರತಿಬಿಂಬಿತಗೊಂಡಿವೆ ಎಂಬುದನ್ನು ದಾಖಲಿಸುವುದಾಗಿದೆ.

ಆಧುನಿಕ ಕನ್ನಡ ಮಹಿಳಾ ಕಾವ್ಯ ಹೆಚ್ಚು ಪ್ರಸ್ತುತವಾಗುತ್ತಿದೆ. ಈ ಹಿಂದೆ ಇದ್ದ ಮಹಿಳಾ ಸಂವೇದನೆಗಿಂತ ಜಾಗತೀಕರಣದ ಪ್ರಭಾವಕ್ಕೆ ಒಳಗಾದ ಮಹಿಳಾ ಬದುಕಿನ ಚಿತ್ರಣವನ್ನು ಆಧುನಿಕ ಮಹಿಳಾ ಕಾವ್ಯ ಹೇಗೆ ಅಭಿವ್ಯಕ್ತಿಸಿದೆ ಎಂಬುದನ್ನು ಕಾವ್ಯದ ಓದಿನೊಂದಿಗೆ ಅರಿಯುವುದಾಗಿದೆ.

ಕಾವ್ಯಕ್ಕೆ ಪಾರಂಪರಿಕ ಅಭಿವ್ಯಕ್ತಿ ಇರುವಂತೆ ಮಹಿಳಾ ಕಾವ್ಯಕ್ಕೂ ಅಭಿವ್ಯಕ್ತಿ ಇದೆ ಎಂಬುದನ್ನು ಆಧುನಿಕ ಮಹಿಳಾ ಕಾವ್ಯ ಸಾಬೀತುಪಡಿಸಿದೆ.

ಉದಾ: ಪುರಾಣ, ಚರಿತ್ರೆ, ಸ್ವಗತ, ದಾಂಪತ್ಯ, ಕುಟುಂಬ, ರಾಷ್ಟ್ರೀಯತೆ ಮತ್ತು ಸ್ವಾತಂತ್ರ್ಯದ ಮಾದರಿಗಳನ್ನು ತನ್ನದೇ ಆದ ನೆಲೆಯಲ್ಲಿ ಚಿಂತನೆಗೊಳಗು ಮಾಡಿವೆ. ಆದರೆ ಇದು ಎಲ್ಲೋ ಏಕಮುಖ ಚಿಂತನೆಯಲ್ಲಿ ನೆಲೆಗೊಂಡಿಲ್ಲ. ಸಮುದಾಯದ ಜಾಗೃತ ಪ್ರಜ್ಞೆ ಪ್ರತಿಸ್ಪಂದನೆಯ ರೂಪದಲ್ಲಿ ನೆಲೆ ನಿಂತಿವೆ. ಈ ಎಲ್ಲಾ ಅಂಶಗಳು ಸಾಮಾಜಿಕ ಬದಲಾವಣೆಗೆ ಕಾರಣವಾಗಿವೆ ಎಂಬುದನ್ನು ಆಧುನಿಕ ಕನ್ನಡ ಮಹಿಳಾ ಕಾವ್ಯದಲ್ಲಿ ನೋಡಬಹುದು.

ಕಳೆದ ಇಪ್ಪತ್ತು ವರ್ಷಗಳಿಂದೀಚೆಗೆ ಮಹಿಳಾ ಸಾಹಿತ್ಯ ಹೊಸ ಪ್ರವರ್ಧಮಾನಕ್ಕೆ ಬಂದಿತೆನ್ನಬಹುದು. ಏಕೆಂದರೆ ಬರವಣಿಗೆಯನ್ನು ಹವ್ಯಾಸಕ್ಕೆ ಮಾತ್ರ ಸೀಮಿತಗೊಳಿಸದೆ, ಕ್ರಾಂತಿಯೋಪಾದಿಯಲ್ಲಿ ಮಹಿಳಾ ಸಾಹಿತಿಗಳು ಜಾಗೃತಿ ಮೂಡಿಸುತ್ತಿದ್ದಾರೆ. ಅದರಲ್ಲೂ ಮಹಿಳಾ ಕಾವ್ಯ ಸಾಮಾಜಿಕವಾಗಿ ಬದಲಾವಣೆಯನ್ನುಂಟು ಮಾಡುವಲ್ಲಿ ಮುಂಚೂಣಿಯಲ್ಲಿದೆ. ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಪಲ್ಲಟಗಳನ್ನು ಮಹಿಳಾ ಕಾವ್ಯ ಜರೂರಾಗಿ ಅರಗಿಸಿಕೊಂಡಿದೆ. ಆ ಮೂಲಕ ನವೀನ ಪ್ರಯೋಗಗಳೊಂದಿಗೆ ಬದಲಾವಣೆಯ ಹೊಸ ಹಾದಿ ತೋರಿವೆ. ಒಟ್ಟಾರೆಯಾಗಿ ಸಾಮಾಜಿಕ ಬದಲಾವಣೆಯ ಅಂಶಗಳು ಆಧುನಿಕ ಮಹಿಳಾ ಕಾವ್ಯದಲ್ಲಿ ಮೂಡಿ ಬಂದ ಬಗೆ ಹೇಗೆಂಬುದನ್ನು ಗುರ್ತಿಸುವ ಉದ್ದೇಶ ಈ ಅಧ್ಯಯನ ಹೊಂದಿದೆ.

ಕನ್ನಡ ಸಾಹಿತ್ಯಕ್ಕೆ ಕಾಲಾವಾರು ಪಂಥ ವಿಂಗಡಣೆ ಮತ್ತು ಅನನ್ಯತೆ ಇರುವಂತೆ ಮಹಿಳಾ ಸಾಹಿತ್ಯಕ್ಕೆ ಪ್ರತ್ಯೇಕ ಪಂಥಗಳ ಅನಿವಾರ್ಯತೆ ಇದೆ. ಇದು ಪೈಪೋಟಿಯ ಹಂತ ಮಾತ್ರವಾಗಿರದೆ ಅಸ್ಮಿತೆಯ ಹೊಸ ಹಾದಿಗೂ ಅಗತ್ಯವಾಗಿದೆ. ಇದರೊಂದಿಗೆ ಸಾಮಾಜಿಕ ಬದಲಾವಣೆಗಳು ಸಾಹಿತ್ಯಿಕವಾಗಿ ಉಂಟು ಮಾಡುವ ಶ್ರೇಷ್ಠತೆಯನ್ನು ಗುರ್ತಿಸುವುದೂ ಒಂದು ಅನನ್ಯತೆಯೇ.

೧.೩ ಅಧ್ಯಯನದ ವ್ಯಾಪ್ತಿ

'ಸಾಮಾಜಿಕ ಬದಲಾವಣೆಗಳ ಸಂದರ್ಭದಲ್ಲಿ ಕನ್ನಡ ಮಹಿಳಾ ಕಾವ್ಯಗಳ ಅಧ್ಯಯನ' ಎಂಬ ವಿಷಯದ ವ್ಯಾಪ್ತಿ ಮತ್ತು ಮಿತಿಗಳನ್ನು ಕವಯಿತ್ರಿಯರ ಕಾಲ ಮತ್ತು ಕೃತಿಗಳಿಗೆ ಅನುಗುಣವಾಗಿ ಅಧ್ಯಯನ ನಡೆಸಲಾಗಿದೆ.

ಹೆಣ್ಣು ಎಲ್ಲದಕ್ಕೂ ಪ್ರಮುಖಗಳು ಹಾಗೂ ಪ್ರತಿನಿಧೀಕರಣ ಗುಣ ಅವಳಲ್ಲಿಯೇ ಇರುವಂತದ್ದು. ಅಡುಗೆ ಮನೆಗೆ ಸೀಮಿತಗೊಂಡವಳು, ಇಂದು ತನ್ನ ತಿಳುವಳಿಕೆ ಮತ್ತು ಜಾಗೃತತೆಯಿಂದ ಹೊಸ ಲೋಕಕ್ಕೆ ತೆರೆದುಕೊಂಡಿದ್ದಾಳೆ. ಅಕ್ಕನ ಪ್ರೇರಣೆಯಿಂದ ಚಾಲನೆ ಪಡೆದ ಕನ್ನಡ ಮಹಿಳಾ ಕಾವ್ಯಲೋಕ ಇಂದು ಹೊಸ ಮಾದರಿಯ ಪರಂಪರೆಗೆ ರುವಾರಿಯೂ ಆಗಿದೆ. ಈ ಬದಲಾವಣೆಗೆ ವಚನಕಾರ್ತಿಯರ ಕ್ರಾಂತಿ, ೨೦ನೇ ಶತಮಾನದ ಜಾಗತಿಕ ಬದಲಾವಣೆಗಳು ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಬದಲಾವಣೆಗೂ ಕಾರಣವಾದವು. ಆದ್ದರಿಂದ ೧೯೭೫ ರಿಂದೀಚೆಗಿನ ಆಯ್ದ ಕವಯಿತ್ರಿಯರ ಕಾವ್ಯದ ಅಧ್ಯಯನ ಒಳಗೊಂಡಿದೆ. ಅತಿ ಕಡಿಮೆ ಅವಧಿಯಲ್ಲಿ ಹೆಚ್ಚು ಪ್ರಯೋಗಶೀಲತೆ ಅಳವಡಿಸಿಕೊಂಡ ಹೆಗ್ಗಳಿಕೆ ಆಧುನಿಕ ಮಹಿಳಾ ಕಾವ್ಯದ್ದು. ಚರಿತ್ರೆ ಮತ್ತು ಪುರಾಣಗಳೂ ಹೊಸ ನೋಟ ಕಂಡದ್ದೂ ಸಹ ಇಲ್ಲಿಯೆ. ಆದ್ದರಿಂದ ಆಧುನಿಕ ಮಹಿಳಾ ಕಾವ್ಯ ಹೊಸ ಆಲೋಚನೆಗೆ ದಾರಿ ಮಾಡಿಕೊಟ್ಟಿತು. ಅಧ್ಯಯನದ ಸೀಮಿತತೆಯ ದೃಷ್ಟಿಯಿಂದ ಆಯ್ದ ಕವಯಿತ್ರಿಯರ ಕವನ ಸಂಕಲನಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮಹಾಕಾವ್ಯ, ನಾಟಕ, ಶಿಶು ಸಾಹಿತ್ಯ, ಕತೆ, ಕಾದಂಬರಿ ಅಧ್ಯಯನವನ್ನು ಒಳಗೊಂಡಿಲ್ಲ. ಆಧುನಿಕ ಮಹಿಳಾ ಕಾವ್ಯದಲ್ಲಿ ಸಾಮಾಜಿಕ ಬದಲಾವಣೆಗೆ ಕಾರಣವಾದ ಅಂಶಗಳನ್ನು ಗುರ್ತಿಸುವುದಾಗಿದೆ. ಕವಯಿತ್ರಿಯರ ಸಮಗ್ರ ಕವನ ಸಂಕಲನಗಳು ಅಭ್ಯಾಸದ ದೃಷ್ಟಿಯಿಂದ ಕೂಡಿದವಾಗಿವೆ. ಒಬ್ಬ ಕವಯಿತ್ರಿಯ ಒಂದಕ್ಕಿಂತ ಹೆಚ್ಚಿನ ಕವನಗಳನ್ನು ಸನ್ನಿವೇಶಕ್ಕೆ ತಕ್ಕಂತೆ ಬಳಸಲಾಗಿದೆ ಮತ್ತು ಕವಿತೆಗಳು ಪುನರಾವರ್ತನೆಯಾದರೂ ಹೊಸದೃಷ್ಟಿಯಲ್ಲಿ ಕಟ್ಟಿಕೊಡುವ ಪ್ರಯತ್ನವಿದೆ.

ಎಂಟು ಕವಯಿತ್ರಿಯರ ಲಭ್ಯವಿರುವ ಕವನ ಸಂಕಲನಗಳನ್ನು ಆಯ್ಕೆ ಮಾಡಿ ಅಧ್ಯಯನಕ್ಕೊಳ ಪಡಿಸಲಾಗಿದೆ. ಬೆಳಗೆರೆ ಜಾನಕಮ್ಮ, ಪ್ರತಿಭಾ ನಂದಕುಮಾರ್, ಲಲಿತಾ ಸಿದ್ದಬಸವಯ್ಯ, ಶಶಿಕಲಾ ವೀರಯ್ಯಸ್ವಾಮಿ, ಕೆ.ಷರೀಫಾ, ಬಿ.ಟಿ.ಲಲಿತಾನಾಯ್ಕ, ಹೆಚ್.ಎಲ್.ಪುಷ್ಪ, ದು.ಸರಸ್ವತಿಯವರ ಪ್ರಾತಿನಿಧಿಕ ಕವನಗಳ ಅಧ್ಯಯನ ಮಾಡಲಾಗಿದೆ.

೧.೪ ಅಧ್ಯಯನದ ವಿಧಾನ

ಆಧುನಿಕ ಕನ್ನಡ ಮಹಿಳಾ ಕಾವ್ಯವನ್ನು ಹೊಸ ವಿಚಾರಧಾರೆಗಳೊಂದಿಗೆ ಗ್ರಹಿಸಬಹುದು. ಇದು ಸಮಾಜದ ಸ್ತರ ವಿನ್ಯಾಸಗಳನ್ನು ಬಹು ಬೇಗ ಗ್ರಹಿಸಲು ಕಾವ್ಯ ಮಾಧ್ಯಮವೇ

ಪ್ರಮುಖ ವಲಯವಾಯಿತು. ಮುಖ್ಯವಾಗಿ ಆಧುನಿಕ ಕನ್ನಡ ಮಹಿಳಾ ಕಾವ್ಯವನ್ನು ಕುರಿತ ಅಧ್ಯಯನವಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿಧಾನಗಳ ರೂಪು ರೇಷೆಗಳನ್ನು ನಾವು ಹೀಗೆ ಗ್ರಹಿಸಬಹುದು.

- ಸಾಮಾಜಿಕ ಬದಲಾವಣೆಗಳು ಮಹಿಳಾ ಕಾವ್ಯದ ಮೇಲೆ ಉಂಟುಮಾಡಿದ ಪರಿಣಾಮ ಮತ್ತು ಪ್ರಭಾವಗಳನ್ನು ಗುರ್ತಿಸುವುದು.
- ಸಾಮಾಜಿಕ ಬದಲಾವಣೆಯ ಅಂಶಗಳನ್ನು ಪುರಾಣ ಮತ್ತು ಚರಿತ್ರೆಯೊಂದಿಗೆ ಆಧುನಿಕ ಮಹಿಳಾ ಕಾವ್ಯ ಹೇಗೆ ಬೆಸೆದುಕೊಂಡಿವೆ ಮತ್ತು ಅವು ಧ್ವನಿಸುವ ಅಂಶಗಳು ಯಾವುವು ಎಂಬುದನ್ನು ದಾಖಲಿಸುವುದು.
- ಕಾವ್ಯದ ಮಾದರಿಗಳು ಸಾಮಾಜಿಕ ಬದಲಾವಣೆ ಉಂಟುಮಾಡುವಲ್ಲಿ ಹೇಗೆ ರೂಪು ಪಡೆದಿವೆ ಎಂಬುದನ್ನು ಕವಯಿತ್ರಿಯರ ಕವಿತೆಗಳಲ್ಲಿ ದಾಖಲಾದ ಅಂಶಗಳ ಮೂಲಕ ಅಭ್ಯಸಿಸ ಹೊರಡುವುದು.
- ಸಾಮಾಜಿಕ ಬದಲಾವಣೆಯನ್ನು ಪ್ರತಿಯೊಬ್ಬ ಕವಯಿತ್ರಿಯೂ ಕಂಡುಕೊಂಡ ಬಗೆ ಮತ್ತು ಅವುಗಳ ಅನನ್ಯತೆಯನ್ನು ದಾಖಲಿಸುವ ಪ್ರಯತ್ನವಾಗಿದೆ.

ಈ ಮೇಲಿನ ಅಂಶಗಳ ಆಧಾರದ ಮೇಲೆ ಸಾಮಾಜಿಕ ಬದಲಾವಣೆಗಳ ಸಂದರ್ಭದಲ್ಲಿ ಕನ್ನಡ ಮಹಿಳಾ ಕಾವ್ಯದ ಅಧ್ಯಯನ ಮಾಡಲಾಗುತ್ತದೆ. ಈ ಅಧ್ಯಯನ ಪ್ರಯೋಗಾತ್ಮಕವೋ ಅಥವಾ ಆಶಯ ಪ್ರಧಾನ ಮಾದರಿಯೋ ಆಗದೆ ಸಂವೇದನೆಯ ನೆಲೆ ಮತ್ತು ಅಸ್ಮಿತೆಯ ನೆಲೆಯ ಜೊತೆಗೆ ಸಾಮಾಜಿಕ ಬದಲಾವಣೆಗೆ ಕಾರಣವಾದ ಅಂಶಗಳನ್ನು ದಾಖಲಿಸುವ ಪ್ರಯತ್ನದೊಂದಿಗೆ ಈ ಅಧ್ಯಯನವಿದೆ.

* * * * *

ಪ್ರಮುಖ ವಲಯವಾಯಿತು. ಮುಖ್ಯವಾಗಿ ಆಧುನಿಕ ಕನ್ನಡ ಮಹಿಳಾ ಕಾವ್ಯವನ್ನು ಕುರಿತ ಅಧ್ಯಯನವಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿಧಾನಗಳ ರೂಪು ರೇಷೆಗಳನ್ನು ನಾವು ಹೀಗೆ ಗ್ರಹಿಸಬಹುದು.

- ಸಾಮಾಜಿಕ ಬದಲಾವಣೆಗಳು ಮಹಿಳಾ ಕಾವ್ಯದ ಮೇಲೆ ಉಂಟುಮಾಡಿದ ಪರಿಣಾಮ ಮತ್ತು ಪ್ರಭಾವಗಳನ್ನು ಗುರ್ತಿಸುವುದು.
- ಸಾಮಾಜಿಕ ಬದಲಾವಣೆಯ ಅಂಶಗಳನ್ನು ಪುರಾಣ ಮತ್ತು ಚರಿತ್ರೆಯೊಂದಿಗೆ ಆಧುನಿಕ ಮಹಿಳಾ ಕಾವ್ಯ ಹೇಗೆ ಬೆಸೆದುಕೊಂಡಿವೆ ಮತ್ತು ಅವು ಧ್ವನಿಸುವ ಅಂಶಗಳು ಯಾವುವು ಎಂಬುದನ್ನು ದಾಖಲಿಸುವುದು.
- ಕಾವ್ಯದ ಮಾದರಿಗಳು ಸಾಮಾಜಿಕ ಬದಲಾವಣೆ ಉಂಟುಮಾಡುವಲ್ಲಿ ಹೇಗೆ ರೂಪು ಪಡೆದಿವೆ ಎಂಬುದನ್ನು ಕವಯಿತ್ರಿಯರ ಕವಿತೆಗಳಲ್ಲಿ ದಾಖಲಾದ ಅಂಶಗಳ ಮೂಲಕ ಅಭ್ಯಸಿಸ ಹೊರಡುವುದು.
- ಸಾಮಾಜಿಕ ಬದಲಾವಣೆಯನ್ನು ಪ್ರತಿಯೊಬ್ಬ ಕವಯಿತ್ರಿಯೂ ಕಂಡುಕೊಂಡ ಬಗೆ ಮತ್ತು ಅವುಗಳ ಅನನ್ಯತೆಯನ್ನು ದಾಖಲಿಸುವ ಪ್ರಯತ್ನವಾಗಿದೆ.

ಈ ಮೇಲಿನ ಅಂಶಗಳ ಆಧಾರದ ಮೇಲೆ ಸಾಮಾಜಿಕ ಬದಲಾವಣೆಗಳ ಸಂದರ್ಭದಲ್ಲಿ ಕನ್ನಡ ಮಹಿಳಾ ಕಾವ್ಯದ ಅಧ್ಯಯನ ಮಾಡಲಾಗುತ್ತದೆ. ಈ ಅಧ್ಯಯನ ಪ್ರಯೋಗಾತ್ಮಕವೋ ಅಥವಾ ಆಶಯ ಪ್ರಧಾನ ಮಾದರಿಯೋ ಆಗದೆ ಸಂವೇದನೆಯ ನೆಲೆ ಮತ್ತು ಅಸ್ಮಿತೆಯ ನೆಲೆಯ ಜೊತೆಗೆ ಸಾಮಾಜಿಕ ಬದಲಾವಣೆಗೆ ಕಾರಣವಾದ ಅಂಶಗಳನ್ನು ದಾಖಲಿಸುವ ಪ್ರಯತ್ನದೊಂದಿಗೆ ಈ ಅಧ್ಯಯನವಿದೆ.

* * * * *

ಅಧ್ಯಾಯ – ೨

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ - ೨

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಪ್ರಸ್ತುತ ಸಂಶೋಧನಾ ವಿಷಯವಾದ "ಸಾಮಾಜಿಕ ಬದಲಾವಣೆಗಳ ಸಂದರ್ಭದಲ್ಲಿ ಆಧುನಿಕ ಕನ್ನಡ ಮಹಿಳಾ ಕಾವ್ಯಗಳ ಅಧ್ಯಯನ" ಎಂಬ ವಿಷಯದಲ್ಲಿ ಇಲ್ಲಿಯವರೆಗೆ ಯಾವುದೇ ಗಂಭೀರವಾದ ಅಧ್ಯಯನಗಳು ನಡೆದಂತಿಲ್ಲ. ಈ ಶೀರ್ಷಿಕೆಯೊಂದಿಗೆ ಯಾವುದೇ ಕೃತಿಗಳು ಪ್ರಕಟವಾಗಿಲ್ಲ. ಆಧುನಿಕ ಮಹಿಳಾ ಕಾವ್ಯದ ಕುರಿತು ಬೇರೆ ಬೇರೆ ದೃಷ್ಟಿಕೋನದಲ್ಲಿ ಅಧ್ಯಯನಗಳು ನಡೆದಿವೆ. ಆದರೆ ಸಾಮಾಜಿಕ ಬದಲಾವಣೆಗಳನ್ನು ಮಹಿಳಾ ಕಾವ್ಯವು ಒಳಗೊಳ್ಳುವ ಬಗೆಯನ್ನು ಕುರಿತು ನೇರವಾದ ಅಧ್ಯಯನಗಳು ನಡೆದಿಲ್ಲ. ಆದ್ದರಿಂದ ಮಹಿಳಾ ಕಾವ್ಯವನ್ನು ಕುರಿತು ಇದುವರೆಗೆ ಪ್ರಕಟವಾಗಿರುವ ಕೆಲವು ವಿಮರ್ಶಾ ಕೃತಿಗಳನ್ನು ಹಾಗೂ ಪಿಹೆಚ್.ಡಿ ಸಂಶೋಧನಾ ಮಹಾಪ್ರಬಂಧಗಳನ್ನು ಇಲ್ಲಿ ಪರಾಮರ್ಶನ ಕೃತಿಗಳನ್ನಾಗಿ ಪರಿಗಣಿಸಲಾಗಿದೆ. ಈ ಕೃತಿಗಳು ಸಂಶೋಧನಾ ಪ್ರಬಂಧವನ್ನು ರಚಿಸಲು ಆಕರಗಳ ರೂಪದಲ್ಲಿ ಮಾಹಿತಿಯನ್ನೊದಗಿಸುತ್ತವೆ. ಕೆಲವು ಗಮನಾರ್ಹವಾದ ಕೃತಿಗಳೆಂದರೆ

೧. ಕನ್ನಡ ಮಹಿಳಾ ಚರಿತ್ರೆ ---- ಸಂ.ಶ್ರೀಮತಿ. ಹೆಚ್.ಎಸ್

೨. ಕಣ್ಣಹನಿಗಳೆ ಕಾಣಿಕೆ. ---- ರಾಘವೇಂದ್ರರಾವ್. ಹೆಚ್.ಎಸ್

೩. ನಡುವೆ ಸುಳಿವ ಆತ್ಮ ---- ಆಶಾದೇವಿ. ಎಂ.ಎಸ್

೪. ಸ್ತ್ರೀಮತವನ್ನುತ್ತರಿಸಲಾಗದೆ. ---- ಆಶಾದೇವಿ. ಎಂ.ಎಸ್

೫. ಕಾವ್ಯ ಪ್ರೀತಿ ---- ಅಶೋಕ.ಟಿ.ಪಿ

೬. ಮಹಿಳೆ-ಚರಿತ್ರೆ, ಪುರಾಣ ---- ರಾಮಲಿಂಗಪ್ಪ.ಟಿ.ಬೇಗೂರು

೭. ಆಧುನಿಕ ಮಹಿಳಾ ಅಭಿವ್ಯಕ್ತಿ ---- ಗೀತಾಪ್ರಸಾದ್

೮. ಆಧುನಿಕ ಕನ್ನಡ ಕಾವ್ಯದಲ್ಲಿ ಮಾತೃತ್ವದ ಸ್ವರೂಪ. ---- ಸೋ.ಮು.ಭಾಸ್ಕರಾಚಾರ್

೯. ಇತ್ತೀಚಿನ ಕನ್ನಡ ಕಾವ್ಯ: ಸ್ಥಾಪಿತ ನೆಲೆಗಳು. --- ಶರೀಫ್‌ಸಾಬ್

೧೦. ಮಹಿಳಾ ಕಾವ್ಯ: ಸ್ಥಾಪಿತ ನೆಲೆಗಳ ಅನುಸಂಧಾನ ಮತ್ತು ಪುನರ್ ರಚನೆಯ ಪ್ರಕ್ರಿಯೆ. --- ಸುಧಾ ಬಿ.ಎಸ್

೧೧. ಮಹಿಳಾ ಸಾಹಿತ್ಯ: ಅಭಿವ್ಯಕ್ತಿ ಕ್ರಮದ ತಾತ್ವಿಕ ಸ್ವರೂಪ. --- ಉಷಾರಾಣಿ ಎಂ ತಗ್ಗಿನಮಠ

೧೨. ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆ --- ಆಶಾಕುಮಾರಿ.ಬಿ.ಪಿ

೧೩. ಆಧುನಿಕ ಮಹಿಳಾ ಕಾವ್ಯ: ಅಭಿವ್ಯಕ್ತಿಯ ವಿನ್ಯಾಸಗಳು --- ಅನ್ನಪೂರ್ಣ.ಹೆಚ್

೧. ಕಾವ್ಯ ಪ್ರೀತಿ: ಅಶೋಕ.ಟಿ.ಪಿ. ೨೦೦೦

ಕನ್ನಡ ಕವಿತೆಗಳನ್ನು ಕೇಂದ್ರೀಕರಿಸಿದ ೫೦ ಲೇಖನಗಳ ಸಂಗ್ರಹ ಇದಾಗಿದೆ. ಸಂಸ್ಕೃತಿ ಮತ್ತು ಭಾಷಿಕ ನೆಲೆಯಲ್ಲಿ ರಚಿತಗೊಂಡ ಕೃತಿ. ಕಾಲಘಟ್ಟವನ್ನು ಆಧರಿಸಿದ ಸಾಹಿತ್ಯ ಪಂಥ ಮತ್ತು ಪೀಳಿಗೆಯ ಸಮನ್ವಯತೆಯಿದೆ. ಈ ಕೃತಿಯಲ್ಲಿ ಸರ್ವಮಂಗಳ, ವೈದೇಹಿ, ಪ್ರತಿಭಾ ನಂದಕುಮಾರ್, ಮಾಲತಿ ಪಟ್ಟಣಶೆಟ್ಟಿ ಮುಂತಾದ ಕವಯಿತ್ರಿಯರ ಕವನಗಳ ವಿಮರ್ಶೆಯಿದೆ. ಲೇಖಕರು ಹಲವು ವಿಚಾರಗಳನ್ನು ಚರ್ಚಿಸುತ್ತಲೇ ಹೆಣ್ಣುತನವನ್ನು ಗುರ್ತಿಸಿಕೊಳ್ಳುವ ಸಂದರ್ಭದಲ್ಲಾದ ತಲ್ಲಣಗಳ ಮಾದರಿಯನ್ನು ಮೂರು ಬಗೆಯಲ್ಲಿ ವಿಂಗಡಿಸುತ್ತಾರೆ.

೧. ಎಲ್ಲವನ್ನೂ ಮೌನವಾಗಿ ಸಹಿಸಿ ತನ್ನೊಳಗೇ ನೊಂದು ನಾಶವಾದ ಸಮುದಾಯ. [ಶಿಕ್ಷಣದಿಂದ ವಂಚಿತವಾಗಿ ಸಂಪ್ರದಾಯದ ಸುಳಿಯಲ್ಲಿ ಸಿಲುಕಿದ ಮಹಿಳೆಯರು]

೨. ಗೊಣಗುತ್ತಲೇ ಕ್ಷೀಣ ದನಿಯಲ್ಲಿ ಪ್ರತಿಭಟಿಸಿದರೂ ಚೌಕಟ್ಟಿನಾಚೆ ಬರಲಾರದೆ ಉಳಿಯುವ ಮಂದಿ. [ಅವಕಾಶ ವಂಚಿತರು. ಸಮಾಜದ ಬದಲಾವಣೆಗೆ ಸದಾ ಹಾತೊರೆಯುವ ಮಂದಿ]

೩. ನೋವನ್ನು ಸಹಿಸಿ ಕೊನೆಗೆ ತಮ್ಮ ಚೌಕಟ್ಟನ್ನು ದಿಟ್ಟತನದಲ್ಲಿ ದಾಟ ಬಯಸುವವರು ಇವರ ಸಂಖ್ಯೆ ತೀರಾ ಕಡಿಮೆ. [ಸ್ತ್ರೀವಾದ ಮತ್ತು ಆಧುನಿಕ ಬದುಕಿನ ಆಲೋಚನೆಗೆ ತಮ್ಮನ್ನು ತಾವು ತೆರೆದುಕೊಂಡವರು]

ಇಂತಹ ಅಂಶಗಳನ್ನು ಗುರ್ತಿಸುತ್ತಾ ಮಹಿಳಾ ಕಾವ್ಯದ ವಿವಿಧ ಮಾದರಿಗಳನ್ನು ವಿಶಿಷ್ಟತೆಯೊಂದಿಗೆ ಚರ್ಚಿಸುತ್ತಾರೆ.

೨. ಕನ್ನಡ ಮಹಿಳಾ ಚರಿತ್ರೆ ಸಂ.ಶ್ರೀಮತಿ.ಹೆಚ್.ಎಸ್ ೨೦೦೬

ಮಹಿಳಾ ಅಸ್ತಿತ್ವದ ನೆಲೆಗಳನ್ನು ಮತ್ತು ಗಟ್ಟಿತನವನ್ನು ಶೋಧಿಸಿ ಹೊಸ ಸಂವೇದನೆಯನ್ನು ದಾಖಲು ಮಾಡುವ ಪ್ರಯೋಗಾತ್ಮಕ ಕೃತಿ ಇದಾಗಿದೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಇದು ಮುಖ್ಯ ದಾಖಲೆಯಾಗಿದೆ. ಮಹಿಳೆಯರ ಸಾಹಿತ್ಯ ನಿರ್ಮಾಣವನ್ನು ಪುರುಷ ವರ್ಗ ಕಡೆಗಣಿಸುತ್ತಾ ಬಂದಿರುವುದನ್ನು ದಾಖಲಿಸುತ್ತಲೇ, ಹೊಸ ದೃಷ್ಟಿ ಮತ್ತು ಸೃಷ್ಟಿಯೊಂದಿಗೆ ಕಟ್ಟುವ ಕೆಲಸ ಈ ಕೃತಿಯದ್ದಾಗಿದೆ. ಈ ಕೃತಿಯಲ್ಲಿ ಪ್ರಾಚೀನ ಸಾಹಿತ್ಯ, ಮಧ್ಯಕಾಲೀನ ಸಾಹಿತ್ಯ, ಆಧುನಿಕ ಮಹಿಳಾ ಸಾಹಿತ್ಯ ಎಂಬ ಮೂರು ಘಟ್ಟಗಳಲ್ಲಿ ವಷಯವನ್ನು ಚರ್ಚಿಸಲಾಗಿದೆ. ಇದರೊಂದಿಗೆ ಶಿಷ್ಟ ಸಾಹಿತ್ಯದಿಂದ ಹೊರಗುಳಿದ ಮೌಖಿಕ ಸಾಹಿತ್ಯ ಪರಂಪರೆಯ ಮತ್ತು ಮಹಿಳಾ ಜನಪದ ಸಾಹಿತ್ಯದ ಮಹತ್ವವನ್ನು ಎಳೆ ಎಳೆಯಾಗಿ ಚಿತ್ರಿಸುತ್ತದೆ.

ಲೇಖಕರು ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಮಹಿಳಾ ಸಾಹಿತ್ಯದ ಪ್ರಾತಿನಿಧ್ಯ ಎಂತಹದ್ದು ಎಂಬುದನ್ನು ಪುರಾಣ ಮತ್ತು ಚರಿತ್ರೆಯ ಆದಿಯಾಗಿ ಜನಪದ ಸಾಹಿತ್ಯದ ಶ್ರೇಷ್ಠತೆಯೊಂದಿಗೆ ಕಟ್ಟಿಕೊಡುತ್ತಾರೆ. ಮಹಿಳಾ ಸಾಹಿತ್ಯದಲ್ಲಿ ಸೃಜನಶೀಲತೆ ಮತ್ತು ಸಾಮಾಜಿಕ ವಾಸ್ತವ ಸ್ಥಿತಿಯನ್ನು ಭಿನ್ನ ನೆಲೆಯೊಂದಿಗೆ ಈ ಕೃತಿ ಕಂಡಿದೆ. ವಚನಕಾರ್ತಿಯರ ಬಗೆಗಿನ ಚರ್ಚೆಯು ಇಂದಿನ ಸಮಾಜ ಮತ್ತು ಸಾಹಿತ್ಯಕ್ಕೆ ಎಷ್ಟು ಪ್ರಸ್ತುತ ಎಂಬ ವಿಚಾರಗಳನ್ನು ವಿವರಿಸುತ್ತಾರೆ ಹಾಗೂ ಕಾಲಘಟ್ಟಗಳ ಗಣನೆಯೊಂದಿಗೆ ಚರ್ಚಿಸುತ್ತಾರೆ. ಸಮಕಾಲೀನ ಮಹಿಳಾ ಸಾಹಿತ್ಯದ ಪ್ರಸ್ತುತತೆಯನ್ನು ಹೇಳುತ್ತಲೇ ಕಾವ್ಯ, ಕಥಾ ಸಾಹಿತ್ಯ, ವಿಮರ್ಶೆ, ಭಾಷಾಂತರ, ಮತ್ತು ವಿಜ್ಞಾನದ ಬರಹಗಳಲ್ಲಿ ಮಹಿಳಾ ಬರವಣಿಗೆಯ ಪ್ರಾಮುಖ್ಯತೆ ಮತ್ತು ಪ್ರಸ್ತುತತೆಯ ಬಗ್ಗೆ ತಿಳಿಸುತ್ತಾರೆ.

೩. ನಡುವೆ ಸುಳಿವ ಆತ್ಮ : ಆಶಾದೇವಿ.ಎಂ.ಎಸ್ ೨೦೧೧

ಈ ಕೃತಿಯು ಮುಖ್ಯವಾಗಿ ಗಂಡು ಹೆಣ್ಣಿನ ನಡುವಿನ ದೇಹ ಮತ್ತು ಆತ್ಮದಾಚೆಗಿನ ಸಂಬಂಧಗಳನ್ನು ಶೋಧಿಸುವ ನೆಲೆಯಲ್ಲಿ ರಚಿತವಾಗಿದೆ. ಸಾಹಿತ್ಯದಲ್ಲಿ ಸ್ತ್ರೀಯ ಸಹಜ ಅಭಿವ್ಯಕ್ತಿಗಳು ಮೂಡಿದಾಗ ಉಂಟಾಗುವ ಸಾಂಸ್ಕೃತಿಕ ಚಹರೆಗಳು ಪ್ರತಿಭಟನೆಯ ನೆಲೆಯಲ್ಲಿ ಅವು ಪಡೆದುಕೊಳ್ಳುವ ಆಯಾಮವನ್ನು ಕೃತಿ ಚರ್ಚಿಸಿದೆ. ಕಲೆ ಮತ್ತು ಸಾಹಿತ್ಯಕ್ಕೆ ವಸ್ತುವಾದ ಹೆಣ್ಣು ಹೇಗೆ ತನ್ನ ಅಭಿವ್ಯಕ್ತಿಯನ್ನು ಸೃಜಿಸಲು ಸಿದ್ಧಳಾಗುತ್ತಾಳೆಂಬುದನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ. ನೋಟ ಗಂಡಿನದು ಎಂಬ ಮಾತನ್ನು ಇದು ಗೌಣವಾಗಿಸುತ್ತಲೇ ಹೆಣ್ಣಿನ ಬದುಕಿನ ಶೋಧಕ್ಕೆ ಹೊಸ ಮೌಲ್ಯ ಕೊಡುತ್ತದೆ. ಅಂತರಂಗ ಮತ್ತು ಬಹಿರಂಗಗಳ ಕಲ್ಪನೆ ಹೆಣ್ಣಿನದು. ಅದು ನೆಲ ಮೂಲ ಸಂಸ್ಕೃತಿಯದು ಎಂಬುದನ್ನು ಸೀತೆ ಮತ್ತು ದ್ರೌಪದಿಯ ಪಾತ್ರಗಳಲ್ಲಿ ಚಿತ್ರಿಸುತ್ತಾರೆ. ಬೇಂದ್ರೆಯವರ 'ಸಖೀಗೀತ', ಶಿವರಾಮ ಕಾರಂತರ 'ಸ್ತ್ರೀಲೋಕ', ರಾಜರತ್ನಂರ 'ಸಾಹಿತ್ಯದಲ್ಲಿ ಸ್ತ್ರೀ', ಲಂಕೇಶ್‌ಕೃತಿಗಳ

ಹೆಣ್ಣು, ತೇಜಸ್ವಿ ಕಥನ ಮತ್ತು ಮಹಿಳಾಲೋಕ ಮುಂತಾದ ಲೇಖಕರ ಸಾಹಿತ್ಯ ಕೃಷಿಯಲ್ಲಿ ಬಂದ ಹೆಣ್ಣುಗಳ ಅಭಿವ್ಯಕ್ತಿ ಕ್ರಮಗಳನ್ನು ಲೇಖಕಿ ಚರ್ಚೆಗೊಳಪಡಿಸುತ್ತಾರೆ.

ಕೃತಿಯಲ್ಲಿ ವಿಮರ್ಶೆಗಿಂತ ಹೆಣ್ಣಿನ ದೃಷ್ಟಿಕೋನಕ್ಕೆ ಹೊಸ ವ್ಯಾಖ್ಯಾನ ಮತ್ತು ನೋಟ ಕೊಡುವ ಕ್ರಮ ಬಹಳ ಮುಖ್ಯವಾದುದೆಂದು ಹೇಳುತ್ತಲೇ 'ಮಹಿಳಾ ಸಾಹಿತ್ಯ' ಕುರಿತ ಚರ್ಚೆಯನ್ನು ಹೊಸ ದೃಷ್ಟಿಯಲ್ಲಿ ಕಟ್ಟಿಕೊಡುತ್ತಾರೆ. ತ್ರಿವೇಣಿ, ಅಬ್ಬೂಬಕ್ಕರ್, ವೈದೇಹಿ, ವೀಣಾ, ಸವಿತಾ ನಾಗಭೂಷಣ, ಪ್ರತಿಭಾ ನಂದಕುಮಾರ್, ಚಿತ್ರಾ ಮುದ್ಗಲ್ ಮುಂತಾದವರ ಸಾಹಿತ್ಯ ಕೃಷಿಯನ್ನು ಇಡಿಯಾಗಿ ಚರ್ಚಿಸುತ್ತಲೇ ಭಿನ್ನ ಆಲೋಚನೆಗೆ ಒಳಗು ಮಾಡುವಂತೆ ಇವರ ಚಿಂತನೆಗಳಿವೆ. ಇಲ್ಲಿ ಗಂಡು ಹೆಣ್ಣಿನ ಬರವಣಿಗೆಯ ಭಿನ್ನತೆಗಿಂತ ಸ್ಥಾಪಿತ ಮೌಲ್ಯಗಳನ್ನು ಮುರಿದು ಕಟ್ಟುವ ಕೆಲಸ ಮತ್ತು ಮರು ನಿರ್ಮಾಣ ಕ್ರಿಯೆ ಇವರ ಚಿಂತನೆಯ ಬರಹಗಳಲ್ಲಡಗಿದೆ. ಚರಿತ್ರೆ ಮತ್ತು ಪುರಾಣದ ಪಾತ್ರಗಳು ಮತ್ತೆ ಮತ್ತೆ ವಿಮರ್ಶೆಗೊಳಪಟ್ಟರೂ, ಅವು ಕೊನೆಯಲ್ಲಿ ಸ್ತ್ರೀ ಸ್ವ ಪ್ರಜ್ಞೆಯ ವಿಶಿಷ್ಟ ಅಭಿವ್ಯಕ್ತಿಗಳಾಗಿವೆ ಎಂಬುದನ್ನು ಈ ವಿಮರ್ಶಾ ಕೃತಿ ತಿಳಿಸಿಕೊಡುತ್ತದೆ. ಸ್ತ್ರೀಯಾತ್ಮಕ ದೃಷ್ಟಿಕೋನಕ್ಕೆ ಒಳ್ಳೆಯ ಮಾದರಿ ವಿಮರ್ಶಾ ಕೃತಿಯಾಗಿದೆ.

೪. ಕಣ್ಣಹನಿಗಳೆ ಕಾಣಿಕೆ. ರಾಘವೇಂದ್ರರಾವ್.ಹೆಚ್.ಎಸ್ ೨೦೧೨

ಕೃತಿಯ ಶೀರ್ಷಿಕೆಯೇ ಹೆಣ್ತನದ ಅಂತರಂಗವನ್ನು ಧ್ವನಿಸುತ್ತದೆ. ಬೆನ್ನುಡಿಯಲ್ಲಿ ಲೇಖಕರೇ ಹೇಳುವಂತೆ ಸಾಹಿತ್ಯ ಮತ್ತು ಹೆಣ್ಣಿನ ಸಂಬಂಧ ಬಹಳ ವಿಶೇಷವಾದುದು.

"ಹೆಣ್ತನದ ನಸು ಲೇಪ ಇಲ್ಲದವನು ಸಾಹಿತಿಯಾಗಲು ಸಾಧ್ಯವೇ ಇಲ್ಲ. ಹಾಗೆಯೇ ಇದು ಎಲ್ಲ ಹೆಂಗಸರಿಗೂ ಸಾಧ್ಯವಾಗದೆಯೂ ಇರಬಹುದು. ಹೆಂಗಸರು ರೂಪಿಸುವ ತಾತ್ವಿಕತೆಯಲ್ಲಿ, ಬೇರೆ ಯಾವುದೇ ದನಿಯನ್ನು ಮೂಕವಾಗಿಸುವ ಪ್ರಯತ್ನ ಇರುವುದಿಲ್ಲ. ಗಂಡು ಮತ್ತು ಹೆಣ್ಣುಗಳನ್ನು ಪರಸ್ಪರ ಸೇಡು ತೀರಿಸಿಕೊಳ್ಳಲು ಸದಾ ಸನ್ನದ್ಧರಾಗಿರುವ ಶತೃಗಳೆಂದು ತಿಳಿಯುವುದು ಅಗತ್ಯವಲ್ಲ. ಅಂತಹ ಅಜೆಂಡಾವನ್ನು ಹೊಂದಿರುವ ಬರವಣಿಗೆಯು ಬರವಣಿಗೆಯೇ ಅಲ್ಲ" ಎಂದು ಉಲ್ಲೇಖಿಸುತ್ತಾರೆ. ಹೆಣ್ಣಿನ ಶಕ್ತಿ ಎಲ್ಲವನ್ನೂ ಒಳಗೊಂಡದ್ದು ಎಂಬ ಅಂಶವನ್ನು ಈ ಮಾತುಗಳು ಧ್ವನಿಸಿವೆ.

ಈ ಕೃತಿ ಭಾಷೆಯ ಬಗೆಗಿನ ಪ್ರಶ್ನೆಯೊಂದಿಗೆ ಚರ್ಚೆಗೆ ಆಹ್ವಾನಿಸುತ್ತದೆ. ಮಹಿಳಾ ಸಾಹಿತ್ಯದಲ್ಲಿನ ವಿಭಿನ್ನ ಆಯಾಮಗಳನ್ನು ಲೇಖಕರು ಚರ್ಚಿಸಿದ್ದಾರೆ. 'ಹೆಣ್ಣುತನ' ಮತ್ತು 'ಗಂಡುತನ'ಗಳ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತಲೇ, ಲೇಖಕಿಯರ ಬರವಣಿಗೆಯಲ್ಲಿ ವಿಶಿಷ್ಟವಾದ ಹೆಣ್ಣುತನವನ್ನು ನಿರೀಕ್ಷಿಸುವುದು ಪುರುಷ ಪ್ರಧಾನ ವ್ಯವಸ್ಥೆಯ ಮತ್ತು ಸಂಸ್ಕೃತಿಯ ಒತ್ತಡಗಳಿಂದ ಇರಬಹುದು. ಆದರೆ ಪುರುಷ ರಚಿತ ಸಾಹಿತ್ಯದಲ್ಲಿ 'ಗಂಡುತನ' ಎಂಬ ವಿಶಿಷ್ಟ ಅಭಿವ್ಯಕ್ತಿ ಇದೆಯೇ? ಎಂಬ ಪದ ಸೂಚಕ ಪ್ರವೃತ್ತಿಯನ್ನು ವ್ಯಂಗ್ಯದಿಂದಲೇ ಪ್ರಶ್ನಿಸುತ್ತಾರೆ.

'ಅತ್ತೆ ಕಾಟ' ಎಂಬ ದಿನನಿತ್ಯದ ವಾಡಿಕೆಯ ಮಾತು ಸಹಜವೆಂಬಂತೆ ಹಿಂದಿನಿಂದಲೂ ಬೆಳೆದು ಬಂದಿದೆ. ಆದರೆ 'ಮಾವನ ಕಾಟ' ಎಂಬ ಮಾತು ಬಳಕೆಯಲ್ಲಿ ಇಲ್ಲ. ಇದನ್ನು ಬಯಸುವುದೂ ಇಲ್ಲ ಎಂಬ ಮಾತನ್ನು ತಾರ್ಕಿಕವಾಗಿ ಪ್ರಶ್ನಿಸುತ್ತಾರೆ. ಹೀಗೆ ಚರ್ಚಿಸುತ್ತಲೇ ಮಹಿಳಾ ಕಾವ್ಯದ ಭಿನ್ನತೆಯನ್ನು ಮತ್ತು ವಿಶಿಷ್ಟತೆಯನ್ನು ಹಲವು ಮಾದರಿಗಳ ಮೂಲಕ ಉದಾಹರಿಸುತ್ತಾರೆ.

೧. ಪ್ರತಿಭಾ ನಂದಕುಮಾರ್‌ರ ಕಾವ್ಯದಲ್ಲಿ ಹೆಣ್ಣಿನ ಬದುಕಿನ ಸಾರ್ಥಕತೆ ಹಾಗೂ ಅದರಲ್ಲಿ ಮಡುಗಟ್ಟಿದ ವಿಶಾದ ಮತ್ತು ಒಂಟಿತನದ ತಳಮಳಗಳನ್ನು ಹೊಸ ನೋಟದೊಂದಿಗೆ ಚರ್ಚೆಗೊಳಪಡಿಸುತ್ತಾರೆ.

೨. ಹೇಮಾ ಪಟ್ಟಣಶೆಟ್ಟಿಯವರ 'ವಿರಹೋತ್ಸವ' ಕವಿತೆಯಲ್ಲಿ ಮೂಡಿ ಬಂದಿರುವ ಹೆಣ್ತನದ ವಿಶಿಷ್ಟ ನೆಲೆಯು ವೈಭವೀಕರಣಗೊಂಡ ಅಂಶಗಳನ್ನು ದಾಖಲಿಸುತ್ತಾರೆ.

೩. ವಿನಯಾ ಒಕ್ಕುಂದರ 'ಶಕ್ತಿ ಮತ್ತು ಶಿಲುಬೆ' ಕವಿತೆ ಕ್ರೌರ್ಯದ ಕರಾಳತೆಯನ್ನು ಬಿಚ್ಚಿಡುತ್ತಲೇ ಧರ್ಮ ಸೂಕ್ಷ್ಮತೆಯ ಕಟ್ಟುಪಾಡು ಹೆಣ್ಣಿಗೆ ತಂದಿರುವ ರಿವಾಜುಗಳನ್ನು ಚರ್ಚಿಸುತ್ತಾ ಹಣ್ಣಿನ ಅಸ್ಮಿತೆಯ ಹುಡುಕಾಟ ನಡೆಸುವ ಬಗೆಯನ್ನು ವಿಮರ್ಶಾ ನೆಲೆಯಲ್ಲಿ ವಿವರಿಸುತ್ತಾರೆ.

ಒಟ್ಟಾರೆಯಾಗಿ ೨೭ ಲೇಖನಗಳನ್ನು ಒಳಗೊಂಡ ಈ ಕೃತಿಯಲ್ಲಿ ಮಹಿಳಾ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳಿವೆ. ಮಹಿಳೆಯರ ಅಂತರಂಗದ ನಿವೇದನೆ, ಆತ್ಮಾಭಿಮಾನದ ಚಿತ್ರಣ ಹೊರ ಸೂಸುವ ವಾಸ್ತವ ಚಿತ್ರಣವನ್ನು ಈ ಕೃತಿಯು ಹಿಡಿದಿಟ್ಟಿದೆ.

೫. ಮಹಿಳೆ – ಚರಿತ್ರೆ – ಪುರಾಣ. ರಾಮಲಿಂಗಪ್ಪಟಿ.ಬೇಗೂರು, ೨೦೧೪

ಆಧುನಿಕ ಮಹಿಳಾ ಕಾವ್ಯವು ಪುರಾಣ ಮತ್ತು ಚರಿತ್ರೆಯ ಪಾತ್ರ, ವಸ್ತು ಮತ್ತು ಘಟ್ಟಗಳನ್ನು ನಿರ್ವಚಿಸಿದ ಬಗೆ ಹೇಗೆಂಬುದನ್ನು ಈ ಕೃತಿ ಕಟ್ಟಿಕೊಡುತ್ತದೆ. ಈ ಕೃತಿಯಲ್ಲಿ ಪುರಾಣ ಮತ್ತು ಚರಿತ್ರೆಯನ್ನು ವಸ್ತುವನ್ನಾಗಿ ಹೊಂದಿರುವ ಕವಿತೆಗಳಿಗೆ ಪ್ರಾತಿನಿಧ್ಯ ಕೊಡಲಾಗಿದೆ. ಇವರ ವಿಮರ್ಶೆಯ ಉದ್ದೇಶ ಪುರಾಣ ಮತ್ತು ಚರಿತ್ರೆಯ ವಸ್ತು ವಿನ್ಯಾಸವು ಮಹಿಳಾ ಕಾವ್ಯದೊಳಕ್ಕೆ ಪ್ರವೇಶಿಸುವ ವೈಚಿತ್ರ್ಯವನ್ನು ಕಂಡುಕೊಳ್ಳಲು ಮಾಡಿದ ಪ್ರಯತ್ನವಾಗಿದೆ. ಪುರಾಣ ಮತ್ತು ಚರಿತ್ರೆಯಲ್ಲಿ ಬರುವ ಪಾತ್ರಗಳ ಸಂಕ್ಷಿಪ್ತ ವಿವರಣೆ ಇದೆ. ಪುರಾಣ ಮತ್ತು ಚರಿತ್ರೆ ಪಾತ್ರಗಳ ಕಲ್ಪನೆಯ ಮಿಥ್‌ಗಳನ್ನು ಕವಯಿತ್ರಿಯರು ಒಡೆದ ಬಗೆಯನ್ನು ಲೇಖಕರು ತಮ್ಮದೇ ಆದ ದೃಷ್ಟಿಕೋನದಲ್ಲಿ ವಿಮರ್ಶಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತ ಎರಡರ ಸಾಹಿತ್ಯ – ಪುರಾಣ – ಚರಿತ್ರೆಯನ್ನು ಮಹಿಳಾ ಕಾವ್ಯ ನಿರಂತರವಾಗಿ ಪ್ರಶ್ನಿಸುವ ಬಗೆ ಹೇಗೆಂಬುದನ್ನು ವಿವರಿಸುತ್ತಾ, ಪುರಾಣ ಮತ್ತು ಚರಿತ್ರೆಯ ಬಹುಪಾಲು ಸಂಕಥನಗಳನ್ನು ಮಹಿಳಾ ಕಾವ್ಯ ಒಡೆದಿದೆ ಎಂಬ ಮಾತನ್ನು ಹಲವು ಉದಾಹರಣೆಗಳೊಂದಿಗೆ ತಿಳಿಸುತ್ತಾರೆ. ಇಂತಹ ನಿರಾಕರಣೆಗಳನ್ನ ಮತ್ತು ಮುರಿದು

ಕಟ್ಟುವ ಕೆಲಸವನ್ನು ಮಹಿಳಾ ಕಾವ್ಯ ಹೇಗೆ ಮಾಡಿ ತೋರಿಸಿದೆ ಎಂಬುದರ ಸ್ಥೂಲವಾದ ವಿವರಣೆ ಈ ಕೃತಿಯಲ್ಲಿದೆ. ಮಹಿಳಾ ಸಾಹಿತ್ಯ ಸಂಶೋಧನೆ ಕೈಗೊಂಡವರಿಗೆ ಕೈಪಿಡಿಯ ರೂಪದಲ್ಲಿ ಈ ಪುಸ್ತಕವು ಮಾಹಿತಿ ಒದಗಿಸುತ್ತದೆ.

೬. ಸ್ತ್ರೀಮತವನುತ್ತರಿಸಲಾಗದೆ: ಆಶಾದೇವಿ. ಎಂ.ಎಸ್. ೨೦೧೬

ಸಾಹಿತ್ಯ ಮತ್ತು ಸಂಸ್ಕೃತಿ ವಿಮರ್ಶೆ ಕುರಿತ ಇಪ್ಪತ್ತೆರಡು ಲೇಖನಗಳನ್ನು ಒಳಗೊಂಡ ಗ್ರಂಥವು ಇದಾಗಿದೆ. ಕನ್ನಡ ಸಾಹಿತ್ಯ ಪರಂಪರೆಯ ವಿಚಾರಗಳನ್ನು ಲೇಖನಗಳ ಮೂಲಕ ಲೇಖಕಿಯು ಇಲ್ಲಿ ಚರ್ಚಿಸಿದ್ದಾರೆ. ಈ ಕೃತಿಯಲ್ಲಿ ಹಲವು ಲೇಖಕರ ಲೇಖನಗಳು ಮತ್ತು ಮಹಿಳಾ ಕಾವ್ಯದ ಚರ್ಚೆಯಿದೆ. ಪ್ರಮುಖವಾಗಿ ವೈದೇಹಿಯವರ 'ನೋಡಬಾರದು ಚೀಲದೊಳಗನು' ಕವಿತೆಯ ಬಗ್ಗೆ ಸುಧೀರ್ಘವಾದ ವಿಮರ್ಶೆಯಿದೆ. ಇದರೊಂದಿಗೆ ಸಾಹಿತ್ಯದ ಆಯಾಮದಲ್ಲಿ ಹೆಣ್ಣು ಸಂಸ್ಕೃತಿಯ ತುಡಿತ ಮತ್ತು ಒಳನೋಟಗಳನ್ನು ವಿಮರ್ಶಾ ದೃಷ್ಟಿಯೊಂದಿಗೆ ತೆರೆದಿಡುವ ಪ್ರಯತ್ನವಿದೆ. ಪ್ರಸ್ತುತಕ್ಕೆ ಹೆಚ್ಚು ಪರಿಣಾಮಕಾರಿಯಾದ ಅರ್ಥ ವಿನ್ಯಾಸಗಳು ಕೃತಿಯಲ್ಲಡಗಿದೆ.

ರೂಪಕಗಳ ಮೂಲಕ ಹೆಣ್ಣು ತನ್ನ ಅಂತರಂಗವನ್ನು ತೆರೆದಿಡುವ ವಿವಿಧಾಂತರಗಳ ವಿನ್ಯಾಸ ಕೃತಿಯಲ್ಲಡಗಿದೆ. ಹೆಣ್ಣು ತನ್ನ ಸ್ವಾತಂತ್ರ್ಯವನ್ನು, ಗಂಡಿನಂತೆ ಮುಕ್ತವಾಗಿ ಪಡೆದುಕೊಳ್ಳಲಾಗದ ವಾಸ್ತವವನ್ನೂ ತಮ್ಮ ಚಿಂತನೆಗಳೊಂದಿಗೆ ತೆರೆದಿಡುತ್ತಾರೆ. ಆದರೆ ಇದನ್ನು ಹೆಣ್ಣು ಸಾಧ್ಯವಾಗಿಸಿಕೊಂಡದ್ದು ರೂಪಕಗಳ ಮುಖಾಂತರ. ಇದು ಮಹಿಳಾ ಕಾವ್ಯಾಭಿವ್ಯಕ್ತಿಯ ಅನನ್ಯತೆಗೆ ಹಿಡಿದ ಕನ್ನಡಿಯಂತಿದೆ. ವಿಮರ್ಶಾ ಕೃತಿಯಾದರೂ ವಾಸ್ತವತೆಯ ಅಂಶಗಳಿಗೆ ಸಾಮಿಪ್ಯ ಒದಗಿಸುತ್ತದೆ ಮತ್ತು ಹೊಸ ನೆಲೆಯ ಚಿಂತನೆಗೆ ದಾರಿ ಮಾಡಿಕೊಡುತ್ತದೆ.

೭. ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆ: ಆಶಾಕುಮಾರಿ.ಬಿ.ಪಿ. ೨೦೦೩

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ. ಕೃತಿ ರೂಪದಲ್ಲಿ ಪ್ರಕಟವಾಗಿದೆ. ಈ ಕೃತಿಯಲ್ಲಿ ಲೇಖಕರು ಮಹಿಳಾ ಕಾವ್ಯ ಹಲವು ಕಾಲಮಾನದಲ್ಲಿ ವಿಶ್ಲೇಷಣೆಗೊಂಡ ಬಗೆ ಹೇಗೆಂಬುದನ್ನು ವಿವರಿಸುತ್ತಾರೆ. ಮಹಿಳಾ ಕಾವ್ಯವೆಂದರೆ ಕೇವಲ ಆಲೋಚನೆಯ ಪ್ರೇರಕ ಸ್ಥಿತಿಯಲ್ಲಿ ರಚಿತಗೊಂಡದ್ದಲ್ಲ. ಹೊಸ ಚಿಂತನೆಯ ಹೊಳಹಿಗೆ ದಾರಿ ಮಾಡಿಕೊಂಡು ಅಸ್ಮಿತೆಯನ್ನು ಪಡೆದುಕೊಂಡ ಬಗೆ ಹೇಗೆಂಬುದನ್ನು ಕೃತಿ ಕಟ್ಟಿಕೊಡುತ್ತದೆ. ಆರಂಭದಲ್ಲಿ ಬೆರಳೆಣಿಕೆಯ ಕವಯಿತ್ರಿಯರು ಕಂಡರೂ ೮೦ರ ದಶಕದಿಂದೀಚೆಗೆ ಅಗಣಿತವಾದ ಸಾಹಿತ್ಯ ಪರಂಪರೆ ಬೆಳೆಯಲು ಮೂಲ ಪ್ರೇರಣೆ ಸ್ತ್ರೀವಾದದ ಪ್ರಭಾವ. ಅದರಲ್ಲೂ ಕಾವ್ಯ ಮಾಧ್ಯಮ ಮಹಿಳೆಗೆ ಆಪ್ಯಾಯಮಾನವಾದ ಬಗೆ ಹೇಗೆಂಬುದನ್ನು ಕೃತಿ ತಿಳಿಸುತ್ತದೆ. ಮಹಿಳೆ ಪುರುಷ ಪ್ರಧಾನ ಸಮಾಜವನ್ನು ವಿರೋಧಿಸುವ ನೆಲೆ ಯಾವ ರೀತಿಯದು ಮತ್ತು ಧೋರಣೆಗಳ ಬಗೆ ಹೇಗೆಂಬುದರ ಒಟ್ಟಾರೆ ಅಂಶಗಳು ಇಲ್ಲಿವೆ.

೮. ಆಧುನಿಕ ಮಹಿಳಾ ಅಭಿವ್ಯಕ್ತಿ: ಗೀತಾ ಪ್ರಸಾದ್ ೨೦೦೯

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ ವಾಗಿದ್ದು, ಕೃತಿ ರೂಪದಲ್ಲಿ ಹೊರಬಂದಿದೆ. ಸಮಾಜದಲ್ಲಿ ಪುರುಷನ ಅಧಿಕಾರ ದಟ್ಟವಾಗಿರುವುದು ರೂಢಿಗತವಾಗಿ ನಡೆದು ಬಂದಿರುವ ವಿದ್ಯಮಾನ. ಕಲೆಗಳ ಅಭಿವ್ಯಕ್ತಿಯಲ್ಲೂ ಮುಂದುವರೆದಿರುವ ರೀತಿಯನ್ನು ಕೃತಿಯು ವಿಮರ್ಶಿಸುತ್ತದೆ. ಕಂತಿ, ವಚನಕಾರ್ತಿಯರು, ಸಂಚಿ ಹೊನ್ನಮ್ಮ, ಹೆಳವನಕಟ್ಟೆ ಗಿರಿಯಮ್ಮನವರ ಸಾಧನೆಗಳನ್ನು ಸೂಕ್ಷ್ಮವಾಗಿ ಮಂಡಿಸಿ ನಂತರ ಆಧುನಿಕ ಬರಹಗಾರ್ತಿಯರ ಸಾಹಿತ್ಯದಲ್ಲಿನ ಒಳನೋಟವನ್ನು ನೋಡುವುದರೊಂದಿಗೆ ಪ್ರಾತಿನಿಧಿಕವಾಗಿ ಮುಖ್ಯ ಲೇಖಕಿಯರನ್ನು ಚರ್ಚಿಸುತ್ತದೆ. ಎಲ್ಲರ ಅಭಿವ್ಯಕ್ತಿಯಲ್ಲಿನ ವಿವಿಧತೆಗಳನ್ನು ಚರ್ಚಿಸುತ್ತಲೇ ಕತೆ, ಕಾದಂಬರಿ, ಕಾವ್ಯ, ನಾಟಕ, ಪ್ರಬಂಧ ಇತ್ಯಾದಿ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ತಮ್ಮ ಅಭಿವ್ಯಕ್ತಿಯನ್ನು ಕಂಡುಕೊಳ್ಳಲು ಇವರು ನಡೆಸಿದ ಪ್ರಯತ್ನ ಇವರ ಮಹಾಪ್ರಬಂಧದಲ್ಲಿದೆ. ಹೆಣ್ಣಿನ ಸ್ವಾತಂತ್ರ್ಯದ ಬಗ್ಗೆ ಸ್ಪಷ್ಟ ಅರಿವು ಮತ್ತು ಕಲ್ಪನೆ ಇಲ್ಲದ ಕಾಲದಲ್ಲಿ, ಮಹಿಳೆಯರಿಗೆ ಸಾಮಾಜಿಕ ಬಂಧನಗಳು ಬಿಗಿಯಾದ ಕಾಲದಲ್ಲಿ ಅನೇಕ ಮಹಿಳೆಯರು ಪತ್ರಿಕೆ ಆರಂಭಿಸಿ ಪ್ರಕಾಶನಗಳನ್ನು ನಡೆಸಿರುವುದು ಬೆರಗು ಹುಟ್ಟಿಸುವ ವಿಚಾರವೆನ್ನುವುದನ್ನು ತಿಳಿಸುತ್ತಾರೆ.

ಈ ಮಹಾಪ್ರಬಂಧದಲ್ಲಿ ಮಾಸ್ತಿಯವರು ಚರ್ಚಿಸುವ ವಿಚಾರಗಳನ್ನು ದಾಖಲಿಸುತ್ತಾ, ಮಾಸ್ತಿಯವರು ಪೂರ್ವ ನಿರ್ಧರಿತ ಮಾನದಂಡಗಳ ಆಚೆ ಹೋಗಲಾಗದೆ ಮಹಿಳಾ ಸಾಹಿತ್ಯವನ್ನು ವಿಮರ್ಶಿಸಿದ ಬಗೆಯನ್ನು ಚರ್ಚಿಸುತ್ತಾರೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸಾಹಿತ್ಯ ರಾಜಕೀಯ ಹೇಗೆ ಕಾಲದಿಂದ ಕಾಲಕ್ಕೆ ಮಹಿಳೆಯನ್ನು ವ್ಯವಸ್ಥಿತವಾಗಿ ನಿರ್ಲಕ್ಷ್ಯಕ್ಕೆ ಒಳಪಡಿಸಿತೆಂಬುದನ್ನು ಅನೇಕ ವಿವರಗಳ ಮೂಲಕ ಕಟ್ಟಿಕೊಡುತ್ತಾರೆ. ಈ ಕೃತಿ ಅನೇಕ ಲೇಖಕಿಯರ ಬದುಕು ಮತ್ತು ಕೃತಿಗಳ ಬಗ್ಗೆ ಮಾಹಿತಿ ಒದಗಿಸುತ್ತದೆ ಮತ್ತು ಮುಂದಿನ ಪೀಳಿಗೆಗೆ ಇವುಗಳ ಮಹತ್ವ ಎಷ್ಟೆಂಬುದನ್ನು ತೋರಿಸಿಕೊಡುವಲ್ಲಿ ಯಶಸ್ವಿಯಾಗಿದೆ. ಒಂಭತ್ತು ಅಧ್ಯಾಯಗಳಿಂದ ಕೂಡಿದ ಈ ಕೃತಿಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿನ ಚಾರಿತ್ರಿಕ ಅಂಶಗಳನ್ನು ಹೇಳುತ್ತಲೇ ಬಾಲ್ಯ ವಿವಾಹ, ವಿಧವಾ ವಿವಾಹ, ಶಿಕ್ಷಣ ಕುರಿತಂತೆ ಇರುವ ಸಾಮಾಜಿಕ ನಂಬಿಕೆಗಳನ್ನು ಗುರ್ತಿಸಿದ್ದಾರೆ. ಒಟ್ಟಾರೆಯಾಗಿ ಲೇಖಕಿಯರ ಅನುಭವ ಮತ್ತು ಭಾವ ಪ್ರಧಾನ್ಯತೆಗೆ ಒತ್ತುಕೊಟ್ಟು ಅಭಿವ್ಯಕ್ತಿ ಪ್ರಕ್ರಿಯೆಯ ಸ್ವರೂಪವನ್ನು ತಿಳಿಸುತ್ತಾರೆ.

೯. ಆಧುನಿಕ ಕನ್ನಡ ಕಾವ್ಯದಲ್ಲಿ ಮಾತೃತ್ವದ ಸ್ವರೂಪ: ಸೋ.ಮು.ಭಾಸ್ಕರಾಚಾರ್.೨೦೧೦

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ. ಕೃತಿ ರೂಪದಲ್ಲಿ ಹೊರಬಂದಿದೆ. ಈ ಕೃತಿಯಲ್ಲಿ ಮಾತೃತ್ವದ ಪರಿಕಲ್ಪನೆ ಎಂಬುದು ಜೈವಿಕ, ಸಾಮಾಜಿಕ, ಕೌಟುಂಬಿಕ, ಧಾರ್ಮಿಕ, ಪೌರಾಣಿಕ, ಸ್ತ್ರೀವಾದಿ, ಸಾಹಿತ್ಯಕ ನೆಲೆಗಳಲ್ಲಿ

ಮೂಡಿಬಂದ ಬಗೆಯನ್ನು ತಿಳಿಸುತ್ತಾರೆ. ಮಾತೃತ್ವದ ಕಲ್ಪನೆ ಎಂಬುದು ರಾಷ್ಟ್ರ, ನಾಡು, ನುಡಿಗಳಲ್ಲಿ ಹೇಗೆ ಧ್ವನಿತವಾಗಿವೆ ಎಂಬುದನ್ನು ಗುರ್ತಿಸುವ ಪ್ರಯತ್ನವಿದೆ. ಪ್ರಕೃತಿಗೆ ಎಲ್ಲವನ್ನೂ ಕೊಡುವ ತಾಯಿ ಗುಣವಿದೆ ಎಂಬುದನ್ನು ಹೇಳುತ್ತಲೇ, ಕವಯಿತ್ರಿಯರಲ್ಲೂ ಮಾತೃತ್ವದ ಕಲ್ಪನೆ ಮತ್ತು ಸ್ವರೂಪಗಳು ಬರವಣಿಗೆಯಲ್ಲಿ ಹೇಗೆ ಜೀವಂತಿಕೆ ಪಡೆದಿವೆ ಎಂಬುದನ್ನು ಗುರ್ತಿಸುತ್ತಾರೆ.

ಪ್ರತಿಯೊಬ್ಬ ಕವಯಿತ್ರಿಯಲ್ಲೂ ಸಾಮಾಜಿಕ ಬದಲಾವಣೆಯತ್ತ ತುಡಿತ ಮತ್ತು ಮಾನವ ಪ್ರೇಮಗಳು. ಪ್ರತಿಯೊಬ್ಬರಲ್ಲೂ ದೇಶ ಮತ್ತು ಭಾಷಾಭಿಮಾನ, ಪ್ರಕೃತಿಯ ಬಗೆಗಿನ ವಿಸ್ಮಯಗಳು ತಮ್ಮದೇ ಆದ ಪ್ರತ್ಯೇಕತೆಯ ಭಾವನೆಗಳೊಂದಿಗೆ ಚಿತ್ರಿತಗೊಳ್ಳುತ್ತವೆ. ಇವೆಲ್ಲದಕ್ಕೂ ಮೂಲ ಪ್ರತಿಭೆ. ಇಂತಹ ಪ್ರತಿಭೆ ಜಾಗೃತಗೊಳ್ಳುವುದು ವಯಕ್ತಿಕ ನೆಲೆಯಲ್ಲಿ. ಕಾವ್ಯ ಕೃಷಿಯನ್ನು ಗಂಭೀರವಾಗಿ ಪರಿಗಣಿಸಿದ ಕವಯಿತ್ರಿಯರ ಕವನಗಳಲ್ಲಿ ಕಂಡ ಭಿನ್ನ ಸ್ವರೂಪದ ಮಾತೃತ್ವದ ಕಲ್ಪನೆಯನ್ನು ಗುರ್ತಿಸುವ ಪ್ರಯತ್ನ ಕೃತಿಯಲ್ಲಿದೆ. ಕವಿ ಮತ್ತು ಕವಯಿತ್ರಿಯರ ಕವಿತೆಗಳನ್ನು ಪ್ರಾತಿನಿಧಿಕವಾಗಿ ತೆಗೆದುಕೊಂಡರೂ ಭೌಗೋಳಿಕ, ಪ್ರಾದೇಶಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಹಿನ್ನಲೆಯಲ್ಲಿ ಕವಿತೆಗಳ ಅಧ್ಯಯನ ನಡೆಸಿದರೂ ಮಾತೃತ್ವದ ಸ್ವರೂಪವನ್ನು ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಗುರ್ತಿಸುತ್ತಾರೆ.

೧೦. ಮಹಿಳಾ ಸಾಹಿತ್ಯ: ಅಭಿವ್ಯಕ್ತಿ ಕ್ರಮದ ತಾತ್ವಿಕ ಸ್ವರೂಪ: ಉಷಾರಾಣಿ.ಎಂ. ತಗ್ಗಿನಮಠ ೨೦೧೫

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ. ಇವರ ಸಂಶೋಧನಾ ಪ್ರಬಂಧದಲ್ಲಿ ಮಹಿಳಾ ಸಾಹಿತ್ಯದ ಅಧ್ಯಯನದ ಸ್ಥೂಲ ಸಮೀಕ್ಷೆ ನಡೆಸುವುದರೊಂದಿಗೆ ಅದರ ಸಾಂಸ್ಕೃತಿಕ ಪರಿಸರವನ್ನೂ ದಾಖಲಿಸುತ್ತಾರೆ. ಸ್ವಾತಂತ್ರ್ಯ ಪೂರ್ವ ಕಾಲದ ಮಹಿಳಾ ಕಾವ್ಯ ಹಾಗೂ ಸ್ವಾತಂತ್ರ್ಯೋತ್ತರ ಮಹಿಳಾ ಕಾವ್ಯ ಎಂದು ಎರಡು ವಿಭಾಗಗಳನ್ನಾಗಿ ಅಧ್ಯಯನ ನಡೆಸಿದ್ದಾರೆ. ಅಭಿವ್ಯಕ್ತಿ ಕ್ರಮವೆಂಬುದು ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯ ಸಾಹಿತ್ಯ ಪಂಥಗಳ ತಾತ್ವಿಕ ಹಿನ್ನಲೆಯಲ್ಲಿ ಚರ್ಚಿಸಿದ್ದಾರೆ. ಇವರು ತಮ್ಮ ಸಂಶೋಧನೆಯಲ್ಲಿ ಕತೆ ಮತ್ತು ಕಾದಂಬರಿ ಪ್ರಕಾರಗಳಿಗೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದಾರೆ. ಆದ್ದರಿಂದ ಕಾವ್ಯದ ಕಡೆಗಿನ ಒಲವು ವಿರಳವಾದುದು.

೧೧. ಆಧುನಿಕ ಮಹಿಳಾ ಕಾವ್ಯ: ಅಭಿವ್ಯಕ್ತಿಯ ವಿನ್ಯಾಸಗಳು. ಅನ್ನಪೂರ್ಣ.ಹೆಚ್.೨೦೧೫

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ. ೮ ಅಧ್ಯಾಯಗಳನ್ನೊಳಗೊಂಡ ಸಂಶೋಧನಾ ಪ್ರಬಂಧದಲ್ಲಿ ಮಹಿಳಾ ಕಾವ್ಯ ಸಂವೇದನೆಯ ಹಲವು ಬರಹಗಳಿವೆ. ತಮ್ಮ ಸಂಶೋಧನಾ ಪ್ರಬಂಧದಲ್ಲಿ ಮಹಿಳಾ ಕಾವ್ಯದ ಭಾಷಿಕ ವಿಶಿಷ್ಟತೆ ಮತ್ತು ಮಹತ್ವತೆಯ ಬಗ್ಗೆ ತಿಳಿಸಿದ್ದಾರೆ. ಸ್ವಗತದ ಮಾದರಿ, ವ್ಯಂಗ್ಯ ಮತ್ತು ನಾಟಕೀಯತೆಯನ್ನು ಮಹಿಳಾ ಕಾವ್ಯ ಹೇಗೆ ಬಳಸಿಕೊಂಡಿದೆ ಎಂಬುದರ ಚಿತ್ರಣವಿದೆ.

ಪ್ರಕೃತಿ ಮತ್ತು ಮನುಷ್ಯನ ನಡುವಿನ ಅಗಾಧ ಸಂಬಂಧಗಳನ್ನು ತಿಳಿಸುತ್ತಲೇ ಜೈವಿಕ ಬದಲಾವಣೆ ಹೊಂದಿದ ಹೆಣ್ಣು ಪ್ರಕೃತಿಯೊಂದಿಗೆ ಹೇಗೆ ಸಮೀಕರಿಸಿ ಕೊಳ್ಳುತ್ತಾಳೆಂಬುದನ್ನು ಈ ಪ್ರಬಂಧ ಧ್ವನಿಸುತ್ತದೆ.

ಇವರ ಮಹಾಪ್ರಬಂಧದಲ್ಲಿ ಕಾವ್ಯವನ್ನು ಅಧ್ಯಯಿನಿಸುವುದರ ಜೊತೆಗೆ ಹನಿಗವನಗಳ ಪ್ರಾಮುಖ್ಯತೆ ಏನು? ಎಂಬುದನ್ನು ಕಟ್ಟಿಕೊಡುತ್ತಾರೆ ಮತ್ತು ಹೊಸ ಸಂವೇದನೆಗೆ ತೆರೆದುಕೊಂಡ ಕವಯಿತ್ರಿಯರ ಕಾವ್ಯವನ್ನು ಅಧ್ಯಯಿಸುವ ಪ್ರಯೋಗವಿದೆ. ಇವರು ಅಭಿವ್ಯಕ್ತಿ ಮಾಧ್ಯಮಕ್ಕೆ ಹೆಚ್ಚು ಒತ್ತು ಕೊಟ್ಟದ್ದರಿಂದ ಮಹಿಳಾ ಕಾವ್ಯ ಅಧ್ಯಯನದ ಒಂದು ಮಗ್ಗುಲೆನ್ನಬಹುದು.

೧೨. ಮಹಿಳಾ ಕಾವ್ಯ: ಸ್ಥಾಪಿತ ನೆಲೆಗಳ ಅನುಸಂಧಾನ ಮತ್ತು ಪುನರ್ರಚನೆಯ ಪ್ರಕ್ರಿಯೆ.
ಸುಧಾ.ಬಿ.ಎಸ್ ೨೦೧೭.

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ. ಮಹಿಳಾ ಕಾವ್ಯವನ್ನು ಕುರಿತ ಸಂಶೋಧನಾ ಪ್ರಬಂಧವಾಗಿದೆ. ಈ ಮಹಾಪ್ರಬಂಧದಲ್ಲಿ ಸಮುದಾಯ ಹಾಗೂ ಮೌಲ್ಯ ಸಂರಚನೆಗಳು ಸ್ಥಾಪಿತ ಮೌಲ್ಯಗಳ ಅನುಸಂಧಾನ ಪ್ರಕ್ರಿಯೆ ಮತ್ತು ಅವುಗಳ ಮುಖಾಮುಖಿ ಹೇಗೆ ಮಹಿಳಾ ಕಾವ್ಯದಲ್ಲಿ ಅಡಕಗೊಂಡಿವೆ ಎಂಬುದನ್ನು ಗುರ್ತಿಸುತ್ತಾರೆ. ಈ ಸ್ಥಾಪಿತ ಮೌಲ್ಯಗಳ ಕಾರ್ಯ ಮಾದರಿಗಳು ಮತ್ತು ಪಿತೃ ಸಂಸ್ಕೃತಿ, ಸ್ತ್ರೀವಾದಿ ಹಿನ್ನಲೆಯಲ್ಲಿ ಹೇಗೆ ರಚಿತಗೊಂಡಿವೆ ಎಂಬುದನ್ನು ಸಂಶೋಧನಾ ಪ್ರಬಂಧದಲ್ಲಿ ಮಂಡಿಸಿದ್ದಾರೆ.

ಮಹಿಳಾ ಕಾವ್ಯದಲ್ಲಿ ಸ್ವಂತಿಕೆಯ ಹುಡುಕಾಟ, ಸಮಾನತೆಯ ಆಶಯ, ಸ್ತ್ರೀತ್ವದ ಶೋಧ ಮತ್ತು ಪುನರಚನೆಗಳನ್ನು ಕಾವ್ಯದ ಮುಖಾಂತರ ಹುಡುಕುವ ಪ್ರಯತ್ನವಿರುವುದು ಕಂಡುಬರುತ್ತದೆ. ಜೊತೆಗೆ ಪರಂಪರೆಯ ಪ್ರಜಾ ವಿನ್ಯಾಸಗಳು ರಚಿತಗೊಂಡ ಬಗೆ ಹೇಗೆ? ಸ್ವ ಮರುಕ ಮತ್ತು ಪುರುಷಾಧಿಕಾರದ ಹಿಡಿತದ ನೆಲೆ ಹೇಗಿದೆ ಎಂಬುದನ್ನು ಹೇಳುತ್ತಲೇ ಮಹಿಳಾ ಆಯ್ಕೆಯ ದ್ವಂದ್ವಗಳ ವಿನ್ಯಾಸ ಯಾವ ಬಗೆಯವು ಎಂಬುದನ್ನು ಗುರ್ತಿಸುತ್ತಾರೆ.

ಬೆಳಗೆರೆ ಜಾನಕಮ್ಮ ವಿಜಯಾದಬ್ಬೆ, ಪ್ರತಿಭಾ ನಂದಕುಮಾರ್ ಮುಂತಾದ ಕವಯಿತ್ರಿಯರ ಕಾವ್ಯಗಳಲ್ಲಿ ಚರ್ಚಿತವಾದ ಅಸ್ಮಿತೆಯ ಬಗ್ಗೆ ಮಹಿಳಾ ಕಾವ್ಯದ ಓದಿನೊಂದಿಗೆ ತಮ್ಮ ಸಂಶೋಧನಾ ಪ್ರಬಂಧದಲ್ಲಿ ಕಟ್ಟಿಕೊಡುತ್ತಾರೆ.

೧೩. ಇತ್ತೀಚಿನ ಕನ್ನಡ ಕಾವ್ಯ: ತಾತ್ವಿಕ ನೆಲೆಗಳು. ಶರೀಫ್‌ಸಾಬ್. ೨೦೧೮

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ. ಎಂಟು ಅಧ್ಯಾಯಗಳಿಂದ ಕೂಡಿದ ಸಂಶೋಧನಾ ಮಹಾಪ್ರಬಂಧ ಇದಾಗಿದೆ. ಕನ್ನಡ

ಕಾವ್ಯ ಆರಂಭಗೊಂಡ ಕಾಲಘಟ್ಟದಿಂದ ಹಿಡಿದು, ಜಾಗತೀಕರಣ ಯುಗದ ಕಾವ್ಯದ ಬಗ್ಗೆ ಚರ್ಚೆಯಿದೆ. ಇತ್ತೀಚಿನ ಕನ್ನಡ ಕಾವ್ಯ ಮನರಂಜನೆಯ ಮನೋಭಾವನೆಗೆ ಮಾತ್ರ ಸೀಮಿತವಾಗದೆ ರಾಜಕೀಯ, ಆರ್ಥಿಕ, ಸಾಮಾಜಿಕ ಕಳಕಳಿ ಮತ್ತು ಜಾಗೃತಿ ಒಳಗೊಂಡಿರುವುದನ್ನು ತಿಳಿಸಿದ್ದಾರೆ.

ಭಿನ್ನ ದೃಷ್ಟಿಕೋನ ಮತ್ತು ಭಿನ್ನ ವಾತಾವರಣಗಳು ಕಾವ್ಯದ ಹುಟ್ಟುವಿಕೆಗೆ ಹೇಗೆ ಕಾರಣವಾಗುತ್ತದೆಂಬುದನ್ನು ತಿಳಿಸುತ್ತಲೇ ಯುವ ಬರಹಗಾರರ ಆಲೋಚನೆಗಳು ಶೈಲಿಯಲ್ಲಿಯೂ ಭಿನ್ನತೆ ಹೊಂದಿದವು ಎಂಬುದನ್ನು ತಿಳಿಸಿದ್ದಾರೆ. ಪ್ರಸ್ತುತತೆಗೆ ಹೆಚ್ಚು ಮಹತ್ವ ಕೊಡುವಂತಹ ಅಂಶಗಳನ್ನು ಹೇಳುತ್ತಲೇ ಯುದ್ಧ ಮತ್ತು ಭಯೋತ್ಪಾದನೆಯಂತಹ ವಿಚಾರಗಳು ಹೊಸ ನೆಲೆಯಲ್ಲಿ ಚರ್ಚಿತವಾದರೆ ಅವು ಕಾವ್ಯ ಕಟ್ಟುವಲ್ಲಿ ಹೇಗೆ ಪ್ರೇರಕವಾಗುತ್ತವೆ ಎಂಬುದನ್ನು ವ್ಯಕ್ತಪಡಿಸುತ್ತಾರೆ. ಇದರ ಜೊತೆಗೆ ಯುದ್ಧದ ಬಗೆಗಿನ ಕ್ರೌರ್ಯದ ನೆಲೆಯ ವಿರೋಧವೂ ಇದೆ. ೨೦೦೦ದಿಂದ ೨೦೧೬ರ ವರೆಗಿನ ಕನ್ನಡ ಕಾವ್ಯವನ್ನು ಕುರಿತ ಚರ್ಚೆಯಿದೆ. ಸಾಮಾಜಿಕ ಕಳಕಳಿ ಮತ್ತು ಪ್ರೀತಿಗಳು ಮಾನವೀಯ ಮೌಲ್ಯಗಳನ್ನು ಬಯಸುತ್ತವೆ ಎಂಬುದನ್ನು ಇವರ ಸಂಶೋಧನಾ ಮಹಾಪ್ರಬಂಧ ತಿಳಿಸುತ್ತದೆ.

ಇದುವರೆಗಿನ ಅಧ್ಯಯನಗಳನ್ನು ಗಮನಿಸಿದರೆ ಸಾಮಾಜಿಕ ಬದಲಾವಣೆಗಳನ್ನು ಕೇಂದ್ರೀಕರಿಸಿ ಗಂಭೀರವಾದ ಅಧ್ಯಯನಗಳು ನಡೆದಿಲ್ಲವೆಂಬುದು ಖಾತ್ರಿಯಾಗುತ್ತದೆ. ಆದರೆ ಮಹಿಳಾ ಸಾಹಿತ್ಯದ ನೆಲೆಗಳನ್ನು ಹಲವು ಸಂಶೋಧಕರು, ವಿಮರ್ಶಕರು ತುಂಬ ವಿಸ್ತೃತವಾಗಿಯೇ ಶೋಧನೆಗೊಳಪಡಿಸಿದ್ದಾರೆ. ಸಂವೇದನಾ ಸ್ವರೂಪವೆಂಬುದು ಕಾಲ, ದೇಶ ಮತ್ತು ವ್ಯಕ್ತಿಗಳನ್ನೊಳಗೊಂಡರೂ ಆಲೋಚನೆಯಲ್ಲಿ ವಿಶಿಷ್ಟ ಸ್ವರೂಪ ಪಡೆದುಕೊಂಡಿದೆ. ಈ ಸ್ವರೂಪಗಳು ಆಧುನಿಕ ಮಹಿಳಾ ಕಾವ್ಯದಲ್ಲಿ ಹೇಗೆ ಜೀವ ತಳೆದಿವೆ ಮತ್ತು ಈ ಜೀವಂತಿಕೆ ಸಾಮಾಜಿಕ ಬದಲಾವಣೆಗೆ ಹೇಗೆ ದಾರಿದೀಪಗಳಾಗಿವೆ ಎಂಬುದನ್ನು ಹಲವು ದೃಷ್ಟಿಕೋನಗಳೊಂದಿಗೆ ಕಂಡುಕೊಳ್ಳುವ ಪ್ರಯತ್ನವನ್ನು ನನ್ನ ಸಂಶೋಧನಾ ಪ್ರಬಂಧದಲ್ಲಿ ಮಾಡಲಾಗಿದೆ.

* * * * *

ಅಧ್ಯಾಯ - ೩

ಆಧುನಿಕ ಕನ್ನಡ ಮಹಿಳಾ ಕಾವ್ಯ : ಚಾರಿತ್ರಿಕ ನೋಟ

ಅಧ್ಯಾಯ – ೩

ಆಧುನಿಕ ಕನ್ನಡ ಮಹಿಳಾ ಕಾವ್ಯ : ಚಾರಿತ್ರಿಕ ನೋಟ

೩.೧ : ಆಧುನಿಕ ಮಹಿಳಾ ಕಾವ್ಯ

ಮನುಷ್ಯ ಸಹಜವಾಗಿ ಕ್ರಿಯಾಶೀಲ. ಪ್ರತಿಯೊಂದನ್ನು ಹೊಸತನದಿಂದಲೇ ಕಂಡುಕೊಳ್ಳುವ ಹುಮ್ಮಸ್ಸು ಅವನಲ್ಲಿದೆ. ಈ ಕಂಡುಕೊಳ್ಳುವಿಕೆ ಆಕಸ್ಮಿಕವಲ್ಲ ತಕ್ಷಣವೇ ಒಪ್ಪುವಂತದ್ದೂ ಅಲ್ಲ ಬದಲಾಗಿ ಎಲ್ಲವನ್ನೂ ಪ್ರಶ್ನಿಸುವ, ಪರಿಶೀಲಿಸುವ ಮತ್ತು ಆ ಮೂಲಕ ಅದನ್ನು ವಿಶಿಷ್ಟತೆಯೊಂದಿಗೆ ಒಪ್ಪಿಕೊಳ್ಳುವ ಗುಣ ಅವನದು. ತಾನು ಸೃಷ್ಟಿಸಿದ ಸಂಗತಿಗಳಾಗಲೀ, ಕಂಡುಹಿಡಿದ ಅನ್ವೇಷಣೆಗಳಾಗಲೀ ಎಲ್ಲವನ್ನೂ ಹೊಸ ಆವಿಷ್ಕಾರಗಳ ಮುಖಾಂತರವೇ ಸ್ವೀಕರಿಸುವ ಗುಣ ಅವನಲ್ಲಿದೆ. ಇಂತಹ ಕುತೂಹಲಕಾರಿಯಾದ ಗುಣ ಹೊಸತನಕ್ಕೆ ದಾರಿಯೂ ಹೌದು. ಸಮಾಜದಲ್ಲಿ ಚಲನೆಯಲ್ಲಿರುವ ಮೂರ್ತ ವಸ್ತುಗಳ ಬಗ್ಗೆ ಪ್ರಶ್ನಿಸುವ ಅವನು, ತನ್ನ ಮನೋ ಪ್ರಪಂಚದ ಹೊಯ್ದಾಟಗಳನ್ನೂ, ತಲ್ಲಣಗಳನ್ನೂ ಇದೇ ನೆಲೆಯಲ್ಲಿ ಕಂಡುಕೊಳ್ಳುತ್ತಾನೆ. ಈ ವಿಚಾರಗಳು ಕನ್ನಡ ಸಾಹಿತ್ಯ ಬೆಳೆದು ಬಂದ ರೀತಿಯನ್ನು ನಿದರ್ಶಿಸುತ್ತವೆ. ಅದರಲ್ಲೂ ಕಾವ್ಯ ಮಾಧ್ಯಮ ತನ್ನ ವಿಶಿಷ್ಟತೆ ಉಳಿಸಿಕೊಂಡಿರುವುದು ಇಂತಹ ಗುಣದಿಂದಲೇ.

ಇಂತಹ ಮೂರ್ತ ಮತ್ತು ಅಮೂರ್ತ ಚಿಂತನೆಗಳಿಗೆ ರೂಪು ಕೊಟ್ಟಿದ್ದು ಕಾವ್ಯ. ಇಂತಹ 'ಕಾವ್ಯ' ಮೂಡಿಸಿರುವ ಚಿಂತನೆಗಳಿಗೆ, ಆಲೋಚನೆಗಳಿಗೆ, ಪ್ರಶ್ನೆಗಳಿಗೆ ಮತ್ತು ಆ ಮೂಲಕ ಬೆಳೆದಿರುವ ಚರ್ಚೆಗಳಿಗೆ ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸಕರು. ಚಿಂತಕರು, ದಾರ್ಶನಿಕರು ತಮ್ಮದೇ ಮಾತಿನಲ್ಲಿ ಕಟ್ಟಿಕೊಟ್ಟಿದ್ದಾರೆ. 'ನಾಟ್ಯ ಶಾಸ್ತ್ರ'ದ ಪಿತಾಮಹ ಭರತಮುನಿ ಕಾವ್ಯ ಚಿಂತನೆಯನ್ನು ಕುರಿತು ಚರ್ಚಿಸುತ್ತಾನೆ. ಅವನ ಚರ್ಚೆ ಮುಖ್ಯವಾಗಿ ಕಂಡು ಬರುವುದು 'ನಾಟಕ ಕಲೆ'ಯಲ್ಲಿ. ಆದರೆ ಇದು 'ರಸ ಸೂತ್ರ'ದ ಹಾದಿಗೆ ದಾರಿ ಮಾಡಿಕೊಟ್ಟಿದ್ದರಿಂದ ಇದರ ವ್ಯಾಪ್ತಿ ವ್ಯಾಪಕವಾಯಿತು. ಮುಂದೆ ಇದರ ಚರ್ಚೆಯನ್ನು 'ಭಾಮಹ' ಮುಂದುವರೆಸಿದ. "ಶಬ್ದಾರ್ಥೌ ಸಹಿತೌ ಕಾವ್ಯಂ"[1] ಎಂದು ಕಾವ್ಯಕ್ಕೆ ಚಿಂತನೆಯನ್ನು ತಂದುಕೊಟ್ಟ ಮೊದಲಿಗನು ಇವನು. ಮುಂದೆ ಬಂದ ಮೀಮಾಂಸಕರಿಗೆ ಇದು ಕೈಗನ್ನಡಿಯಂತಿದೆ. ಮುಂದುವರೆದು "ಗದ್ಯಂ

ಪದ್ಯಂ ಚ ತದ್‌ದ್ವಿಧಾ"[೨] ಅಂದರೆ ಗದ್ಯವೂ ಕಾವ್ಯವಾಗಬಲ್ಲದೆಂಬುದನ್ನು ನಮ್ಮ ಮೀಮಾಂಸಕರು ಮೊದಲೇ ಒಪ್ಪಿರುವುದು ತಿಳಿದ ವಿಚಾರ. ಮುಂದೆ ಬಂದ ದಂಡಿ 'ಅಲಂಕಾರ' ಎಂಬ ವಿಷಯದ ಚರ್ಚೆಯನ್ನು ಕುರಿತು ವ್ಯಾಖ್ಯಾನಿಸಿದ. ತನ್ನ ಕೃತಿ 'ಕಾವ್ಯಾದರ್ಶ'ದಲ್ಲಿ "ಶರೀರಂ ತಾವದಿಷ್ಟಾರ್ಥ ವ್ಯವಚ್ಛಿನ್ನಾ ಪದಾವಲೀ"[೩] ಅಂದರೆ "ಇಷ್ಟಾರ್ಥದೊಡನೆ ಕೂಡಿ ಬರುವ ಪದ ಸಮೂಹವೇ ಕಾವ್ಯದ ಶರೀರ" ಎಂಬ ಮಾತು ಕವಿಯಿಂದ ರಚಿತಗೊಂಡ ಕಾವ್ಯ ಸಮಾಜ ಮುಖಿ ಸಂತೋಷವನ್ನು ಬಯಸುತ್ತದೆಂಬ ಅರ್ಥದಲ್ಲಿ ಚಿತ್ರಿತಗೊಂಡಿದೆ.

ಕಾವ್ಯದಲ್ಲಿನ ಜೀವಂತಿಕೆಯನ್ನು ಕುರಿತು ಮೊದಲು ಹೇಳಿದವನು ವಾಮನ. ಇವನ 'ರೀತಿರಾತ್ಮ ಕಾವ್ಯಸ್ಯ'[೪] ಕಾವ್ಯದಲ್ಲಿನ ಆತ್ಮದ ಬಗ್ಗೆ ಕುರಿತು ಚರ್ಚಿಸಿದವರಲ್ಲಿ ಈತನೇ ಮೊದಲಿಗ. ಕಾವ್ಯದಲ್ಲಿನ ಗುಣಗಳನ್ನು ರೀತಿಗೆ ಅನುಸರಿಸಿ ವಿಶಿಷ್ಟತೆಯನ್ನು ತಂದುಕೊಟ್ಟನು. ಮುಂದೆ ಬಂದ ಆನಂದವರ್ಧನ ತನ್ನ ಧ್ವನ್ಯಾಲೋಕದಲ್ಲಿ 'ಸಹೃದಯಾಹ್ಲಾದಿ ಶಬ್ದಾರ್ಥಮಯತ್ವ ಮೇವ ಕಾವ್ಯ ಲಕ್ಷಣಂ'[೫] ಎಂದಿದ್ದಾನೆ. ಅಂದರೆ ಶಬ್ದಾರ್ಥಗಳಿಂದ ಕೂಡಿರುವುದು ಕಾವ್ಯದ ಲಕ್ಷಣವಾದರೂ, ಅದು ಸಹೃದಯರ ಹೃದಯವನ್ನು ಸಂತೋಷಗೊಳಿಸುವ ಶಬ್ದಾರ್ಥಗಳಿಂದ ಕೂಡಿದೆ ಎಂದು ವ್ಯಾಖ್ಯಾನಿಸುತ್ತಾನೆ.

ಮಮ್ಮಟ ತನ್ನ 'ಕಾವ್ಯಪ್ರಕಾಶ'ದಲ್ಲಿ ದೋಷ ರಹಿತವಾದ ಗುಣ ಸಹಿತವಾದ, ಶಬ್ದ ಮತ್ತು ಅರ್ಥಗಳನ್ನುಳ್ಳದ್ದು ಕಾವ್ಯ ಎಂದನು. ಶಬ್ದ ಮಾತ್ರವೇ ಕಾವ್ಯವೆಂದು ಪ್ರತಿಪಾದಿಸಿದವನು ಜಗನ್ನಾಥ ಪಂಡಿತ. 'ರಮಣೀಯಾರ್ಥ ಪ್ರತಿಪಾದಕಃ ಶಬ್ದಃಕಾವ್ಯ'[೬] ಎಂದು ಹೇಳುತ್ತಲೇ ತರ್ಕ ಮಂಡಿಸಿದನು. ಕಾವ್ಯದಲ್ಲಿನ ಚಮತ್ಕಾರತ್ವವೇ ಅದರ ತಿರುಳು ಎಂದು ಹೇಳುತ್ತಾನೆ. ಶಬ್ದ ಮತ್ತು ಅರ್ಥಗಳು ಬೇರ್ಪಡಿಸಲಾಗದ ಅವಿನಾಭಾವ ಸಂಬಂಧಗಳು. ಎರಡೂ ಪರಸ್ಪರ ಕೂಡಿಕೊಂಡಾಗ ಕಾವ್ಯದ ಸೊಗಸನ್ನು ಹೆಚ್ಚಿಸುತ್ತವೆ. ಈ ಎಲ್ಲ ಅಲಂಕಾರಿಕರ ವಾದ ಏನೇ ಆದರೂ ಕೊನೆಗೆ ಪ್ರತಿಪಾದಿಸುವುದು ಆನಂದವನ್ನೇ, ಅದು ದೊರೆಯುವುದು ಕಾವ್ಯದ ಮೂಲಕ ಎಂಬ ಮಾತು ಈ ವಿಚಾರಗಳಿಂದ ತಿಳಿಯುತ್ತದೆ. ಮೇಲಿನ ಈ ಮಾತುಗಳನ್ನು ಪುಷ್ಠೀಕರಿಸುವಂತೆ ನಮ್ಮ ಕನ್ನಡದ ಕಾವ್ಯ ಚಿಂತಕರು ಒಪ್ಪಿಕೊಂಡು ಮುಂದಿನ ಸಾಹಿತ್ಯದತ್ತ ಮುಖ ಮಾಡಿದ್ದು ವಿಶೇಷ.

ಪಾಶ್ಚಾತ್ಯರಲ್ಲಿ ಕವಿಗಳನ್ನು ಮತ್ತು ಕಾವ್ಯವನ್ನು ವಿರೋಧಿಸುತ್ತಲೇ ಕಾವ್ಯಮೀಮಾಂಸೆಗೆ ಹೊಸ ಮಾರ್ಗವನ್ನು ತೋರಿಸಿದ ಪ್ಲೇಟೋನಿಂದಲೇ ಕಾವ್ಯವನ್ನು ಕುರಿತ ಚರ್ಚೆ ಆರಂಭವಾಗುತ್ತದೆ. ಅನುಕರಣಾವಾದವೇ ಮೊದಲ ಬುನಾದಿಯಾಗುತ್ತದೆ. ಇದು ಕಾವ್ಯ ಖಂಡನೆಗಾಗಿಯಾದರೆ ಅರಿಸ್ಟಾಟಲ್ ಕಾವ್ಯ ಸಮರ್ಥನೆಗೆ ಬಳಸಿಕೊಂಡ. ಇದು ಕವಿ ಮತ್ತು ಕಾವ್ಯದ ಮೇಲಿನ ಮೆರುಗನ್ನು ಹೆಚ್ಚಿಸುವಂತದ್ದು. ಮುಂದೆ ಬಂದ ಅನೇಕ ವಿಮರ್ಶಕರು ಕಾವ್ಯವನ್ನು ಕುರಿತು ಅರ್ಥೈಸಿದ್ದಾರೆ.

ಸ್ಯಾಮ್ಯುಯಲ್ ಜಾನ್ಸನ್ ಈ ರೀತಿ ಅರ್ಥೈಸುತ್ತಾನೆ.

"Poetry is the Art of uniting pleasure with beauty by calling imagination to the help of reason." 7

'ಕಾವ್ಯವೆಂದರೆ ಸೌಂದರ್ಯ ಮತ್ತು ಸಂತೋಷವನ್ನು ಒಟ್ಟಿಗೆ ಬೆಸೆಯುವ ಕಲೆ ಎಂದಿದ್ದಾನೆ. ಮುಂದೆ ಬಂದ ಕೋಲ್‌ರಿಜ್ ವರ್ಡ್ಸ್‌ವರ್ತ್‌ನ ಮಾತನ್ನು ಸಮರ್ಥಿಸುತ್ತಾ ಹಲವು ವಾದಗಳನ್ನು ಮಂಡಿಸುತ್ತಾನೆ.

"Poetry is the spontaneous overflow of powerful feelings" 8

'ತೀವ್ರ ತರವಾದ ಭಾವನೆಗಳನ್ನು ಹೊರ ಹಾಕುವುದೇ ಕಾವ್ಯ' ಎಂದನು.

ಮ್ಯಾಥ್ಯೂ ಆರ್ನಾಲ್ಡ್ ಕಾವ್ಯಕ್ಕೆ ಭಾಷೆಯ ಅಗತ್ಯ ಮತ್ತು ಮಹತ್ವ ಎಷ್ಟಿದೆ ಎಂಬುದನ್ನು ತಿಳಿಸುತ್ತಾನೆ.

"Poetry is nothing less than the most perfect speech of man that in which he comes nearest to being able to utter the truth" [9]

ಕಾವ್ಯವೆಂಬುದು ಮನುಷ್ಯನ ಭಾಷೆಯ ಅತ್ಯಂತ ಪರಿಪೂರ್ಣ ರೂಪ ಮತ್ತು ಆ ರೂಪದಲ್ಲಿಯೇ ಅದು ಸತ್ಯಾನ್ವೇಷಣೆಯ ಅತಿ ಹತ್ತಿರಕ್ಕೆ ಬರುತ್ತದೆ ಎಂದಿದ್ದಾನೆ.

"Poetry is at bottom a criticism of life" [10] ಎಂದು ಜೀವನವನ್ನು ಕುರಿತು ಹೇಳಿರುವ ಮಾತು ಹೆಚ್ಚು ಚರ್ಚಿತವಾಗಿರುವಂತದ್ದು. ಈ ಎಲ್ಲ ಮಾತುಗಳು ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವಂತವುಗಳು. ಕಾವ್ಯವೆನ್ನುವುದು ಸತ್ಯ ಮತ್ತು ಸೌಂದರ್ಯಗಳ ಅನ್ವೇಷಣೆಯಲ್ಲಿ ವ್ಯಕ್ತಗೊಂಡ ಮೂರ್ತರೂಪ.

ಲೀ.ಹಂಟ್ ಹೇಳುವಂತೆ. "ಕಾವ್ಯವೆನ್ನುವುದು ಸತ್ಯ, ಸೌಂದರ್ಯ ಮತ್ತು ಸಾಮರ್ಥ್ಯಗಳ ತೀವ್ರ ಅಭೀಪ್ಸೆಗೆ ಕೊಟ್ಟ ವ್ಯಕ್ತರೂಪ. ಪ್ರತಿಭೆ ಮತ್ತು ಕಲ್ಪನೆಗಳ ನೆರವಿನಿಂದ ತನ್ನ ಅನುಭವದ ಪರಿಕಲ್ಪನೆಗಳಿಗೆ ಅದು ರೂಪವನ್ನು ಕೊಡುತ್ತದೆ. ಏಕತೆಯಲ್ಲಿ ವಿವಿಧತೆಯ ಆಧಾರದ ಮೇಲೆ ಭಾಷೆಯನ್ನು ರೂಪುಗೊಳಿಸಿಕೊಳ್ಳುತ್ತದೆ. ಇಡೀ ವಿಶ್ವವೇ ಅದರ ವಸ್ತು, ಆನಂದ ಮತ್ತು ಉದ್ಗಾರವೇ ಅದರ ಗುರಿ ಎಂದು ಹೇಳುತ್ತಾ, ಕಾವ್ಯದ ಧ್ಯೇಯ, ಧೋರಣೆ, ವಸ್ತುರೂಪ, ಆಶಯ-ಗುರಿ ಮುಂತಾದುವುಗಳನ್ನು ಒಳಗೊಂಡ ಚರ್ಚೆ ವ್ಯಾಪಕತೆಯಿಂದ ಕೂಡಿದೆ."[೧೧] ಎಂದಿದ್ದಾನೆ.

ಹೀಗೆ ಕವಿಯ ಅನುಭವ ಮೂಸೆಯಲ್ಲಿ ರೂಪುಗೊಳ್ಳುವ ಕಾವ್ಯ ಕ್ರಿಯೆಯ ಗುಣ ಲಕ್ಷಣಗಳನ್ನು ಭಾರತೀಯ ಅಲಂಕಾರಿಕರು ಅರ್ಥೈಸಿದರೆ, ಇನ್ನೊಂದು ಹೆಜ್ಜೆ ಮುಂದೆ ಎಂಬಂತೆ ಈಗಾಗಲೇ ನಿರ್ಮಿತವಾದ ಕೃತಿ ಅಥವಾ ಕೃತಿಕಾರರ ಬಗೆಗೆ ವಿವೇಚಿಸುವುದು ಪಾಶ್ಚಾತ್ಯ ಕಾವ್ಯ ಮೀಮಾಂಸೆ. ಎರಡರ ಗುರಿ ಒಂದೆ. ಎರಡರ ಚಿಂತನೆಯ ನೆಲೆಗಳನ್ನು

ಅದರ ಪರಿಮಿತಿಯನ್ನು ಚಿಂತಕರಾದ ಡಾ.ಓ.ಎಲ್. ನಾಗಭೂಷಣಸ್ವಾಮಿ ನಾಲ್ಕು ಬಗೆಗಳಲ್ಲಿ ವಿಂಗಡಿಸುತ್ತಾರೆ.

೧: ಕವಿಯನ್ನು ಕೇಂದ್ರವಾಗಿಟ್ಟುಕೊಂಡು ನಿರೂಪಿಸಿದ ಲಕ್ಷಣಗಳು.

"ಕವೇ: ಕರ್ಮ್ಯ ಕಾವ್ಯಂ"

"The whole soul of man in activity" The spontaneous over flow of powerful feelings"

೨: ಕಾವ್ಯ ಮಾಧ್ಯಮದ ಭಾಷೆ ಮತ್ತು ಇತರ ಕಾವ್ಯ ತಂತ್ರಗಳನ್ನು ಆಧರಿಸಿದ ಲಕ್ಷಣಗಳು.

'ಶಬ್ದಾರ್ಥೌ ಸಹಿತಾ ಕಾವ್ಯಂ" 'ಇಷ್ಟಾರ್ಥ ವ್ಯವಚ್ಛಿನ್ನ ಪದಾವಲೀ' ಕಾವ್ಯಂಗ್ರಾಹ್ಯ ಮಲಂಕಾರಾತ್ 'ರೀತಿರಾತ್ಮ ಕಾವ್ಯಸ್ಯ' ವಕ್ರೋಕ್ತಿಯುಳ್ಳ ವಾಕ್ಯ ವಿನ್ಯಾಸದಲ್ಲಿ ಸೇರಿರುವ ಶಬ್ದಗಳು ಒಟ್ಟಿಗೆ ಕಾವ್ಯ.

"Beautiful words are the very and peculiar light of the mind." "The Best words in the best order; significant form,"

೩: ಓದುಗನ ಮೇಲಾಗುವ ಪರಿಣಾಮಗಳನ್ನು ಆಧರಿಸಿ ಕಾವ್ಯದ ಅರ್ಥವನ್ನು ವಿವರಿಸಲು ಮಾಡಿರುವ ಪ್ರಯತ್ನಗಳು.

'ರಮಣೀಯಾರ್ಥವನ್ನು ಪ್ರತಿಪಾದಿಸುವ ಶಬ್ದವು ಕಾವ್ಯ; ಬಂಧೇ ವ್ಯವಸ್ಥಿತಾ ಕಾವ್ಯಂ ತದ್ವಿದಾಹ್ಲಾದ ಕಾರಿಣಿ.'

"Delight in chief of not the only end", 'Empathy favourable to our existence.'

೪: ಕವಿಕಾವ್ಯ ಪ್ರಪಂಚದ ವಾಸ್ತವಿಕತೆಗಳ ಸಂಬಂಧವನ್ನು ಗಮನಿಸಿದ ಕಾವ್ಯದ ವಿವರಣೆ.

"A criticism of life, the expression of impression, The disimprisonment of soul of fact."

"ಕಾವ್ಯಂ ಯಶಸೇ, ಅರ್ಥಕೃತೇ ಶಿವೇತರಕ್ಷತಯೋ ವ್ಯವಹಾರವಿದೆ ಸದ್ಯ ಪರನಿರ್ವೃತಯೆ." ೨

ಮೇಲಿನ ಹೇಳಿಕೆಗಳನ್ನು ಗಮನಿಸಿದಂತೆಲ್ಲ ಕಾವ್ಯವು ಶಬ್ದ ರೂಪವೆಂದೂ, ಅರ್ಥ ರೂಪವೆಂದು ಕರೆದರೂ ಎರಡೂ ಮುಖ್ಯ ಎಂದು ಹೇಳುವ ಮಾತಿದೆ. ಇಷ್ಟಾದರೂ 'ಕಾವ್ಯ' ಎಂಬ ಪದಕ್ಕೆ ಒಂದೇ ವ್ಯಾಖ್ಯಾನ ದೊರತಿಲ್ಲ. ಪ್ರತಿ ಸಂದರ್ಭದಲ್ಲೂ ನವ ನವೋನ್ಮೇಷ ಶಾಲಿನಿಯಾದ ಈ ಕಾವ್ಯಭಾಷೆ, ಪದರಚನೆ, ಪ್ರತಿಭೆ, ವ್ಯುತ್ಪತ್ತಿ, ಧ್ವನಿ, ಅಲಂಕಾರ, ಔಚಿತ್ಯ, ಗುಣ, ದೋಷ ಮುಂತಾದುವುಗಳಲ್ಲಿ ಸೃಜನಶೀಲವಾಗಿ ತನ್ನ ವ್ಯಾಪಕತೆಯನ್ನು ವಿಸ್ತರಿಸಿಕೊಂಡಿದೆ. ಅನುಭವ ಜನ್ಯವಾದ ಕಾವ್ಯ ಒಂದೇ ವಾಕ್ಯಕ್ಕೋ ಅಥವಾ ಪದಕ್ಕೆ ನಿಲುಕದೆ ತನ್ನ ವಿಶಿಷ್ಟತೆಯನ್ನು ಸದಾ ಮೈಗೂಡಿಸಿಕೊಂಡಿದೆ. ಇದು

ಕವಿಯಿಂದ ಹೊರಹೊಮ್ಮಿದರೂ ಅದು ರಚಿತಗೊಂಡಾಗ ಸಾರ್ವತ್ರೀಕರಣಗೊಳ್ಳುವ ಕ್ರಿಯೆಯ ಕಾವ್ಯದ ಅಂದಕ್ಕೆ ಸೊಗಸೆನ್ನಬಹುದು.

೩.೨ ಸಾಮಾಜಿಕ ಬದಲಾವಣೆ

ಸಮಾಜ ನಿತ್ಯ ಪರಿವರ್ತನಾ ಶೀಲವಾದುದು. ಬದಲಾವಣೆ ನಿರಂತರ ಪ್ರಕ್ರಿಯೆ ಅದಿಲ್ಲದೆ ಹೋದರೆ ಸಮಾಜ ಅನಾರೋಗ್ಯದ ಗೂಡಾಗುತ್ತದೆ. ಸಮಾಜದಲ್ಲಿ ಬದಲಾವಣೆ ಎಂಬುದು ಕಾಲವನ್ನು ಮೀರಿದ್ದು. ಅದು ಗೋಚರ ಅಥವಾ ಅಗೋಚರ ಸಂಗತಿಗಳನ್ನೂ ಬದಲಾವಣೆಯ ಹಾದಿಗೆ ಕರೆದೊಯ್ಯುತ್ತದೆ. ಪ್ರಾಚೀನ ಶಾಸ್ತ್ರಜ್ಞರು ಸಮಾಜವೆಂದರೆ ಶಾಶ್ವತ ಎನ್ನುವ ಕಲ್ಪನೆಯಲ್ಲಿದ್ದರು. ಇಂದಿನ ಸಮಾಜಶಾಸ್ತ್ರಜ್ಞರ ಪ್ರಕಾರ ನಿರಂತರ ಬದಲಾವಣೆಯೇ ಸಮಾಜದ ಜೀವಂತಿಕೆ ಎಂದಿದ್ದಾರೆ. ಇಂತಹ ಬದಲಾವಣೆ ಮಾನವ ಸಮಾಜದ ಮುಖ್ಯ ಲಕ್ಷಣವೂ ಹೌದು.

ಸಾಮಾಜಿಕ ಬದಲಾವಣೆ ಎಂಬುದು ಒಂದು ಪ್ರಕ್ರಿಯೆ. ಈ ಬದಲಾವಣೆ ಉತ್ಪಾದನೆಯಲ್ಲ, ಒಂದು ಜೀವಿಯಲ್ಲ ಅಥವಾ ನಿಂತ ನೀರೂ ಅಲ್ಲ. ಅದು ಒಂದು ಪ್ರಕ್ರಿಯೆ '[Process] "ಬೆಳವಣಿಗೆ ಮತ್ತು ಅಳಿವು, ಸಂಘರ್ಷಣೆ ಮತ್ತು ಅಸಂಘರ್ಷಣೆ, ಸಹಕಾರ ಮತ್ತು ಸಂಘರ್ಷ, ಐಕ್ಯತೆ ಮತ್ತು ಅನೈಕ್ಯತೆ ಯಾವಾಗಲೂ ಸಮಾಜದಲ್ಲಿ ಕಂಡುಬರುತ್ತದೆ. ಸಮಾಜವು ಇವುಗಳಿಂದ ಕೂಡಿದುದಾಗಿದೆ. ಅದನ್ನು ಕಾಲಹರಣದಿಂದ ಉಳಿಸಿ ಪ್ರಾಣಿ ಸಂಗ್ರಹಾಲಯ ಅಥವಾ ಸಂಗ್ರಹಾಲಯದಲ್ಲಿರಲು ಸಾಧ್ಯವಿಲ್ಲ. ಹೀಗೆ ಪರಿವರ್ತನೆಗೊಳ್ಳುವ ಕ್ರಿಯೆಯ ಬದಲಾವಣೆ." [೧೩]

ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ನೋಡುವುದಾದರೆ, ಸಾಮಾಜಿಕ ಬದಲಾವಣೆ ಎಂದರೆ "ಸಮಾಜದಲ್ಲಾಗುವ ಬದಲಾವಣೆ ಎಂದರ್ಥ" [೧೪] ಅಂದರೆ ಜನರ ಜೀವನ ಕ್ರಮದಲ್ಲಾದ ಪರಿವರ್ತನೆಗಳನ್ನು ಸಾಮಾಜಿಕ ಬದಲಾವಣೆ ಎಂದು ಗುರ್ತಿಸಬಹುದು.

ಕಿಂಗ್ಸ್ಲೇ ಡೆವಿಸ್ ಹೇಳುವಂತೆ. "ಸಾಮಾಜಿಕ ಸಂಘಟನೆ, ಅಂದರೆ ಸಮಾಜದ ಸಂರಚನೆ ಮತ್ತು ಕಾರ್ಯಗಳಲ್ಲಿ ಆದ ಬದಲಾವಣೆಯೇ ಸಾಮಾಜಿಕ ಬದಲಾವಣೆ"[೧೫] ಎಂದಿದ್ದಾರೆ.

"ಸಾಮಾಜಿಕ ಪ್ರಕ್ರಿಯೆ, ಸಾಮಾಜಿಕ ಮಾದರಿ, ಸಾಮಾಜಿಕ ಅಂತಃಕ್ರಿಯೆ ಅಥವಾ ಸಾಮಾಜಿಕ ಸಂಘಟನೆ ಇವುಗಳ ಯಾವುದೇ ಮುಖದಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ಅಥವಾ ಮಾರ್ಪಾಡುಗಳಲ್ಲಾದ ಬದಲಾವಣೆ" [೧೬] ಸಾಮಾಜಿಕ ಬದಲಾವಣೆ ಎಂದು ಎಂ.ಇ.ಜೋನ್ಸ್ ಅಭಿಪ್ರಾಯಿಸುತ್ತಾರೆ.

"ಸಂಸ್ಕೃತಿ ಮತ್ತು ನಾಗರೀಕತೆಗಳ ನಡುವಿನ ವ್ಯತ್ಯಾಸವೇ ಸಾಮಾಜಿಕ ಬದಲಾವಣೆ."[೧೭] ಎಂದು ಮ್ಯಾಕ್ಸ್‌ವೇಬರ್ ವ್ಯಾಖ್ಯಾನಿಸುತ್ತಾರೆ.

ಇಂತಹ ಸಾಮಾಜಿಕ ಬದಲಾವಣೆ ಸಂಸ್ಕೃತಿ ಮತ್ತು ಸಾಹಿತ್ಯಿಕ ಬದಲಾವಣೆಗಿಂತ ಭಿನ್ನವಾದುದು. ಸಾಂಸ್ಕೃತಿಕ ಬದಲಾವಣೆ ಎಂಬುದು ವ್ಯಾಪಕಾರ್ಥವನ್ನು ಪಡೆದಿದೆ.

ಸಮಾಜದ ಸಂಸ್ಕೃತಿಯಲ್ಲಿ ಆದ ಬದಲಾವಣೆಗಳು ಸಾಂಸ್ಕೃತಿಕ ಬದಲಾವಣೆಯ ಪ್ರೇರಣೆಗಳು. ಧರ್ಮ, ನೀತಿ, ಜೀವನದ ಮೌಲ್ಯಗಳೆಂದು ಬಿಂಬಿತವಾದ ಸಂಗೀತ, ಕಲೆ, ಸಾಹಿತ್ಯ, ಸಾಮಾಜಿಕ ಆರ್ಥಿಕ, ರಾಜಕೀಯ ವ್ಯವಸ್ಥೆ, ಮತ್ತು ಸಂರಚನೆಗಳಲ್ಲಿ ಆಗುವ ಬದಲಾವಣೆಗಳನ್ನು ಸಾಮಾಜಿಕ ಬದಲಾವಣೆಗಳು ಎಂದು ಕರೆಯಬೇಕೆಂದರೆ ಅವು ಮಾನವ ಸಂಬಂಧಗಳ, ಸಾಮಾಜಿಕ ಸಂಘಟನೆಗಳ ಮೇಲೆ ಪ್ರಭಾವವನ್ನುಂಟು ಮಾಡಿದಾಗ ಈ ಬದಲಾವಣೆ ತನ್ನ ಅರ್ಥ ವ್ಯಾಪ್ತಿಯನ್ನು ವಿಸ್ತರಿಸಿ ಕೊಳ್ಳುತ್ತದೆ.

ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಕಂಡುಕೊಂಡ ಸಾಮಾಜಿಕ ಬದಲಾವಣೆಯ ವ್ಯಾಖ್ಯಾನವು ಆಧುನಿಕ ಕನ್ನಡ ಮಹಿಳಾ ಸಾಹಿತ್ಯಕ್ಕೆ ಎಷ್ಟು ಪ್ರಸ್ತುತ ಎಂಬ ಹಿನ್ನೆಲೆಯಲ್ಲಿ ಮೇಲಿನ ವಿಚಾರಗಳು ಪುಷ್ಟಿಯನ್ನೊದಗಿಸುತ್ತವೆ. ಮಹಿಳಾ ಸಾಹಿತ್ಯದ ಅಧ್ಯಯನ, ಪ್ರತ್ಯೇಕತೆಯಲ್ಲಿ ತನ್ನದೇ ಆದ ಸೌಂದರ್ಯ ಮೀಮಾಂಸೆಯಾಗಿದ್ದು ರೂಢಿಗತ ಸಮಾಜದ ಬದಲಾವಣೆಯ ಸೌಂದರ್ಯ ಮೀಮಾಂಸೆಯನ್ನು ಬಯಸುತ್ತದೆ. ಇಂತಹ ಬಯಕೆ ಅಥವಾ ಬದಲಾವಣೆಗಳು ಸಮಾಜದಲ್ಲಿರುವ ಚರಿತ್ರೆಗಳ ಘಟನೆಗಳನ್ನು ಪುನರ್ ವ್ಯಾಖ್ಯಾನಿಸಲು ಸಹಕಾರಿಯಾಗುತ್ತವೆ. ಮಹಿಳಾ ಸಾಹಿತ್ಯವನ್ನು ಏಕೆ ಓದಬೇಕು? ಅದರಲ್ಲಿ ಹೊಸತನವಿದೆಯೆ? ಪ್ರಸ್ತುತತೆಗೆ ಎಂತಹ ಸವಾಲೊಡ್ಡುವ ಬರಹಗಳಿವೆ? ಎಂಬ ಪ್ರಶ್ನೆಗಳೊಂದಿಗೆ ಮಹಿಳಾ ಸಾಹಿತ್ಯವನ್ನು ಅಧ್ಯಯನಿಸುವ ಜವಾಬ್ದಾರಿ ಪ್ರತಿಯೊಬ್ಬರದು.

ಪುರಾಣವಾದರೂ ಪ್ರಸ್ತುತ ಸಮಸ್ಯೆಗಳಿಗೆ ಅದು ಸ್ಪಂದಿಸುವ ರೀತಿ ಮುಖ್ಯವೆಂಬ ಅಂಶಗಳಿಂದ ಸಾಹಿತ್ಯದ ಓದು ಅನಿವಾರ್ಯ ಎಂಬ ಅಂಶಗಳು ಪೂರಕವಾದುವು.

ಬಿ,.ಎನ್.ಸುಮಿತ್ರಾಬಾಯಿಯವರು ಹೇಳುವಂತೆ,

"ಮಹಿಳಾ ಸಾಹಿತ್ಯ ಕೃತಿಗಳನ್ನು ಪ್ರಚಲಿತ ಸಂಸ್ಥೆಗಳ, ಸಂಸ್ಕೃತಿಗಳ ವಕ್ತಾರಿಕೆ ವಹಿಸುವ ಹೊಸ ಸ್ಮಾರಕಗಳ ಹಾಗೆ ಓದಬಾರದು ಬದಲಾಗಿ ಅವುಗಳನ್ನು ವ್ಯಕ್ತಿ ಹಾಗೂ ಸಂಸ್ಥೆಗಳ ಏಜೆನ್ಸಿಯ ನಡುವಿನ ಹೋರಾಟದ ಅಭಾಸದ ದಾಖಲೆಗಳೆಂದು ನೋಡಬೇಕು. ಸಾಮ್ರಾಜ್ಯ ಮತ್ತು ರಾಷ್ಟ್ರಗಳಲ್ಲಿ ಹೊಮ್ಮಿ ಬಂದ ಬಂಡವಾಳ ಶಾಹಿ ಮತ್ತೆ ಪಿತೃ ಪ್ರಧಾನ್ಯಕ್ಕೆ ಹೊಸ ಲಕ್ಷಣಗಳಿಂದ ಬಲ ಪಡಿಸುತ್ತಿರುವ ಸಂದರ್ಭದಲ್ಲಿ ಅದೇ ವ್ಯವಸ್ಥೆಯ ಅಂಚುಗಳಿಂದ ಈ ಜಗತ್ತನ್ನು ವಾಸ ಯೋಗ್ಯವಾಗಿ ಅನುಗೊಳಿಸುವ ಯತ್ನಗಳೆಂದು ಮಹಿಳಾ ಬರಹವನ್ನು ಓದಬೇಕು." ೧೮

ಈ ಮಾತುಗಳು ಮಹಿಳಾ ಸಾಹಿತ್ಯದ ಗಟ್ಟಿತನಕ್ಕೆ ಸಾಕ್ಷಿ. ಸಂಕುಚಿತಾರ್ಥದಿಂದ ಹೊರಬಂದ ಮಹಿಳಾ ಸಾಹಿತ್ಯ ಇಂದು ಎಷ್ಟು ಪ್ರಸ್ತುತ ಮತ್ತು ಪರಿಣಾಮಕಾರಿ ಎಂಬ ವಿಚಾರವು ಮುಖ್ಯವಾಗುತ್ತದೆ. ಆಧುನಿಕ ಮಹಿಳಾ ಕಾವ್ಯ ದೃಷ್ಟಿಕೋನದಲ್ಲಿ ಮಾತ್ರವಲ್ಲದೆ ಹೋರಾಟದ ಕಿಚ್ಚು ಹಚ್ಚುವಲ್ಲಿಯೂ ಕಾರ್ಯ ನಿರ್ವಹಿಸುತ್ತಿದೆ. ಕಥೆ, ಕಾದಂಬರಿಗಿಂತ ಬಹುಬೇಗ ಜನರ ನಾಡಿ ಮಿಡಿತವನ್ನು ಹಿಡಿಯಬಲ್ಲವು. ಸಾಂಸ್ಕೃತಿಕ ಬದಲಾವಣೆಯ

ಮೂಲ ಆಶಯವನ್ನಿಟ್ಟುಕೊಂಡ ಇವು ಜನರಿಗೆ ಯಾವ ರೀತಿಯಲ್ಲಿ ತಲುಪುತ್ತಿವೆ ಎಂಬ ವಿಚಾರಗಳು ಮುಖ್ಯವಾಗುತ್ತವೆ. ಮಹಿಳಾ ಕಾವ್ಯ ಮತ್ತು ಕವಿಗಳು ಹೇಗೆ ಪ್ರತಿಬಂಧಾತ್ಮಕ ಮತ್ತು ಪ್ರತಿಸ್ಪರ್ಧಾತ್ಮಕ ವಿಚಾರಗಳಿಗೆ ಸ್ಪಂದಿಸುತ್ತಾರೆ ಹಾಗೂ ಕಟ್ಟುಪಾಡುಗಳನ್ನು ದಾಟುತ್ತಾರೆಂಬುದು ಪ್ರಮುಖ ಅಂಶ. ಸಮಾಜದಲ್ಲಿ ಈಗಾಗಲೇ ತಮ್ಮದೆಂದು ನಿರ್ಮಿತಿಗೊಂಡಿರುವ ಸಿದ್ಧ ಮಾದರಿಗಳನ್ನು ಬದುಕಿನ ಯೋಜನೆಗಳನ್ನು ಹೇಗೆ ದಾಟುತ್ತಾರೆಂಬುದು ಚರ್ಚಿಸುವ ವಿಚಾರ ಮತ್ತು ಅವುಗಳನ್ನು ನಿರ್ವಹಿಸಿದ ಬಗೆ ಹೇಗೆ? ಹೆಣ್ಣು ಮಾದರಿಗಳೆಂದು ಬರೆದ ರಾಚನಿಕ ಮಾದರಿಗಳು ಹೇಗೆ ಪ್ರಶ್ನೆಗೊಳಪಟ್ಟಿವೆ ಮತ್ತು ಮತ್ತೊಮ್ಮೆ ಹೇಗೆ ಪ್ರಶ್ನಿಸಲ್ಪಟ್ಟಿವೆ? ಎಂಬುವು ಸಾಮಾಜಿಕ ಪರಿವರ್ತನೆಯ ಅಂಶಗಳಾಗುತ್ತವೆ. ಸಾಮಾಜಿಕ ಬದಲಾವಣೆಗಳು ಮತ್ತು ಅವುಗಳ ಚಲನೆಯನ್ನು ಆಧುನಿಕ ಮಹಿಳಾ ಕಾವ್ಯ ಕಂಡುಕೊಂಡ ಬಗೆ ಹೇಗೆ? ಎಂಬುದನ್ನು ಕಟ್ಟಿಕೊಡುವ ಪ್ರಯತ್ನ ಇಲ್ಲಿದೆ.

ಅಧ್ಯಾಯ – ೪

ಕನ್ನಡ ಮಹಿಳಾ ಕಾವ್ಯದಲ್ಲಿ ಹೆಣ್ತನದ ನಿರ್ವಚನದ ಸ್ವರೂಪ : ಹಲವು ಬಗೆಗಳು

೪.೧ ಸಮಕಾಲೀನ ಸಂದರ್ಭದಲ್ಲಿ ಹೆಣ್ತನದ ನಿರ್ವಚನಗಳು

೪.೨ ಸಾಮಾಜಿಕ ಬದಲಾವಣೆಯ ಆಶಯ

೪.೩ ಸಾಮಾಜಿಕ ಬದಲಾವಣೆಯ ಹೆಜ್ಜೆಗಳು

೪.೪ ಹೊಸ ಚಿಂತನೆಯ ಗ್ರಹಿಕೆಗಳು

೪.೫ ವಿಶಿಷ್ಟ ಅಭಿವ್ಯಕ್ತಿಯ ನೆಲೆಗಳು

ಅಧ್ಯಾಯ – ೪

ಕನ್ನಡ ಮಹಿಳಾ ಕಾವ್ಯದಲ್ಲಿ ಹೆಣ್ತನದ ನಿರ್ವಚನದ ಸ್ವರೂಪ : ಹಲವು ಬಗೆಗಳು

'ಯತ್ರ ನಾರ್ಯಂತು ಪೂಜ್ಯಂತೇ ರಮಂತೇ ತತ್ರ ದೇವತಾ:' ಎಂಬ ವೇದಕಾಲೀನ ಮಾತು ಇಂದಿಗೂ ಜನಜನಿತವಾಗಿದೆ. ಮಹಿಳಾ ಸ್ವಾತಂತ್ರದ ಬಗ್ಗೆ ಪ್ರಾಚೀನ ಕಾಲದಿಂದಲೂ ಅಂತಹ ಒಳ್ಳೆಯ ಆಲೋಚನೆಗಳಿರಲಿಲ್ಲವೆಂಬುದು ಭಾರತೀಯ ಚರಿತ್ರೆಯಲ್ಲಿ ತಿಳಿದು ಬರುತ್ತದೆ. ಹಿಂದಿನ ಕಾಲದಲ್ಲಿ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಮಾತಿನ ಮೂಲಕ ಹೆಣ್ಣು ಗೃಹ ಬಂಧಿಯಾದಳು. ದಾಸಿಯಾಗಿಯೇ ಉಳಿದ ಅವಳ ಜೀವನ ಸಂಸಾರದಲ್ಲಿಯೇ ಮುಳುಗಲಾರಂಭಿಸಿತು. ಪ್ರಾಚೀನ ಕಾಲದ ಋಷಿ ಮುನಿಗಳು ಆ ಕಾಲಮಾನದ ಸಂದರ್ಭಕ್ಕೆ ತಕ್ಕಂತೆ ನಿಯಮ, ನಿಬಂಧನೆಗಳನ್ನು ಧರ್ಮಶಾಸ್ತ್ರಗಳ ರೂಪದಲ್ಲಿ ಬರೆದಿಟ್ಟರು.

ಸೃಷ್ಠಿ ಕ್ರಿಯೆಯಲ್ಲಿ ಸ್ತ್ರೀ ಪುರುಷರು ಲಿಂಗ ಸಮಾನರೆಂದು ಗುರ್ತಿಸಿಕೊಂಡರೂ ಸಹ ಸ್ತ್ರೀಯು ಪುರುಷನಿಗಿಂತ ಕೆಳ ದರ್ಜೆಯವಳು, ಅವನ ಅಧೀನದಲ್ಲೇ ಬದುಕು ನಡೆಸಬೇಕೆಂಬ ಕಟ್ಟುಪಾಡುಗಳು ಹಿಂದಿನ ಕಾಲದಿಂದಲೂ ಬೆಳೆದು ಬಂದಿವೆ. ಇಂದಿನ ವಿದ್ಯಾವಂತ ಮಹಿಳಾ ಸಮುದಾಯದಲ್ಲಿಯೂ ಮೇಲು ನೋಟದಲ್ಲಿ ಉದಾರವಾದಿಗಳಂತೆ ಮಾತನಾಡಿದರೂ ಸಹ ಅಂತರಂಗದಲ್ಲಿ ಗಂಡಿನಿಂದಲೇ ಸ್ತ್ರೀ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಬೇಕೆಂಬ ನಂಬಿಕೆಯಲ್ಲಿ ಬದುಕುತ್ತಿದ್ದಾರೆ. ಭ್ರೂಣ ಹತ್ಯೆ ಹೆಚ್ಚುತ್ತಿರುವ ಇಂತಹ ಕಾಲದಲ್ಲಿ ಹೆಣ್ಣು ಮಗುವನ್ನು ಪ್ರಪಂಚ ನೋಡುವ ಮೊದಲೇ ಇಲ್ಲವಾಗಿಸುವ ಪ್ರಕ್ರಿಯೆ ಇಂದು ತೀರಾ ಸಾಮಾನ್ಯವಾದುದು. ಹೆಣ್ಣಿನ ಬಗ್ಗೆ ಸಮಾಜ ತಾಳಿರುವ ಪಕ್ಷಪಾತ ಧೋರಣೆ ಅವಳನ್ನು ಕುಟುಂಬದ ಹೊರೆಯಾಗಿ, ಶಾಪವಾಗಿ ಪರಿಗಣಿಸುವ ಸ್ಥಿತಿ ಎದುರಾಗಿದೆ. ಗಂಡಿಗಿರುವ ಸ್ವಾತಂತ್ರ್ಯ, ಸಮಾನತೆ ಹೆಣ್ಣಿಗಿಲ್ಲದಿರುವುದು ದುರಂತವೇ ಸರಿ. ಹೆಂಡತಿಯಾದವಳು ಸಂಗಾತಿ, ಮಗಳಾದರೋ ಸಂಕಷ್ಟಗಳನ್ನು ತರುವವಳು, ಮಗ ಮೋಕ್ಷಕ್ಕೆ ಮೂಲ ಎಂಬ ಮಾತು ಇಂದೂ ಸಹ ಭಾರತೀಯ ಮನಸ್ಸುಗಳಲ್ಲಿ ಮನೆಮಾಡಿದೆ.

೪.೧ ಸಮಕಾಲೀನ ಸಂದರ್ಭದಲ್ಲಿ ಹೆಣ್ತನದ ನಿರ್ವಚನಗಳು

ಶತ ಶತಮಾನಗಳಿಂದ ಅಕ್ಷರದಿಂದ ವಂಚಿತಳಾದ ಮಹಿಳೆಯನ್ನು ಪುರುಷ ಸಮಾಜ ಮೂಲೆಗೆ ತಳ್ಳಿತು. ಅವಳಿಗೆ ಯಾವುದೇ ರೀತಿಯ ಅವಕಾಶಗಳನ್ನು ಕೊಡದೆ ಅವಳನ್ನು ತೊತ್ತಿನಂತೆ ಕಾಣಲು ಶುರುಮಾಡಿತು. ಕಾಲ ಬದಲಾದಂತೆ ಹೆಣ್ಣು ತನ್ನ ಅಸ್ತಿತ್ವವನ್ನು ತಾನೇ ಕಂಡುಕೊಳ್ಳಲು ಶುರು ಮಾಡಿದಾಗ ಬದಲಾವಣೆಯ ಬೆಳಕು ಕಾಣಲು ಶುರುವಾಯಿತು. ಕನ್ನಡದ ಮೊದಲ ಕವಯಿತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾದ ಅಕ್ಕಮಹಾದೇವಿಯು ಮಹಿಳಾ ಸ್ವಾತಂತ್ರ್ಯದ ಗುರುತಾಗಿ ಕಂಡು ಬರುತ್ತಾಳೆ. ಅಕ್ಕಮಹಾದೇವಿಯು ಲೌಕಿಕ ಮತ್ತು ಅಲೌಕಿಕವಾದ ಎರಡು ರೀತಿಗಳಲ್ಲಿ ತನ್ನ ಜೀವನವನ್ನು ನಡೆಸಿದವಳು. ಲೌಕಿಕದಲ್ಲಿರುವ ನೋವು, ದುಃಖ, ಸಂಕಟ, ನಿರಾಶೆ, ಆತಂಕಗಳನ್ನು ತನ್ನ ಕಾವ್ಯ ತಂತ್ರವಾದ ಕನಸು, ಕನವರಿಕೆ, ಸ್ವಗತ ಇವುಗಳ ಮೂಲಕ ವ್ಯಕ್ತಪಡಿಸುತ್ತಾ, ಅಲೌಕಿಕದಲ್ಲಿ ತನಗೆ ಬೇಕಾದ ಪ್ರೀತಿಯನ್ನು ಪ್ರಕೃತಿಯೊಂದಿಗೆ ಬೆರೆಯುವುದರೊಂದಿಗೆ ಪಡೆಯುತ್ತಿದ್ದಳು. ತನ್ನ ಗಂಡನೆಂದು ಪರಿಭಾವಿಸಿದ ಚನ್ನಮಲ್ಲಿಕಾರ್ಜುನನನ್ನು ಆಧ್ಯಾತ್ಮೀಕರಿಸ ಬಯಸುವ ಸ್ವಾತಂತ್ರ್ಯವನ್ನು ತನಗೆ ತಾನೇ ಕಂಡು ಕೊಂಡಿದ್ದಳು ಅಕ್ಕಮಹಾದೇವಿ. ಅದನ್ನೇ ತನ್ನ ವಚನಗಳಲ್ಲಿ ಪ್ರತಿಬಿಂಬಿಸಿದಳು.

"ಇಹಕ್ಕೊಬ್ಬ ಗಂಡನೇ? ಪರಕ್ಕೊಬ್ಬ ಗಂಡನೇ
ಲೌಕಿಕಕೊಬ್ಬ ಗಂಡನೇ? ಪಾರಮಾರ್ಥಕ್ಕೊಬ್ಬ ಗಂಡನೇ
ನನ್ನ ಗಂಡ ಚನ್ನ ಮಲ್ಲಿಕಾರ್ಜುನ ದೇವರಲ್ಲದೆ
ಮಿಕ್ಕಿನ ಗಂಡರೆಲ್ಲ ಮುಗಿಲ ಮರೆಯ ಬಣ್ಣದ ಬೊಂಬೆಯಂತೆ" [೧]

ಎಂದು ಲೌಕಿಕ ಗಂಡನನ್ನು ನಿರಾಕರಿಸಿದಳು. ಈ ರೀತಿ ಪುರುಷ ಸಮಾಜವನ್ನು ಧಿಕ್ಕರಿಸಿ ಹೊರಟಾಗ ಹಲವು ಅಪಮಾನ, ದುಃಖ, ನೋವುಗಳನ್ನು ಅನುಭವಿಸಿದ್ದರಿಂದ ಅಕ್ಕ ಮಹಾದೇವಿಯೇ ಹೇಳುವಂತೆ 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯಾ......', 'ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದರೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು' ಎನ್ನುತ್ತಾಳೆ. ಅಕ್ಕಮಹಾದೇವಿಯ ನಂತರ ಗೊಗ್ಗವ್ವೆ ಲಿಂಗಸಮಾನತೆಯ ಬಗ್ಗೆ ಪ್ರಶ್ನಾರ್ಹವಾಗಿಯೂ ಮಾತನಾಡುತ್ತಾಳೆ.

"ಮೊಲೆಮುಡಿ ಬಂದಡೆ ಹೆಣ್ಣೆಂಬರು
ಮೀಸೆಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ ಹೆಣ್ಣೋಗಂಡೋ ನಾಸ್ತಿನಾಥ" [೨]

ಗಂಡು ಹೆಣ್ಣೆಂಬುದು ಲಿಂಗ ವಿಶಿಷ್ಟತೆ ಸೂಚಿಸುವ ಜೈವಿಕ ಲಕ್ಷಣಗಳು ದೇಹ ರಚನೆಗೆ ಮಾತ್ರ ಸಂಬಂಧಿಸಿರುವಂತಹವು. ಆದರೆ ಜ್ಞಾನಕ್ಕೆ ತಿಳುವಳಿಕೆಗೆ ಯಾವ ಲಿಂಗ

ಬೇಧದ ಅವಶ್ಯಕತೆ ಇಲ್ಲ ಎನ್ನುತ್ತಾ ಸ್ತ್ರೀ ಪುರುಷರಿಬ್ಬರು ಸಮಾನತೆ ಉಳ್ಳವರೆಂಬ ಅಂಶವನ್ನು ಗೊಗ್ಗವ್ವೆ ತಿಳಿಸುತ್ತಾಳೆ. ಇದೇ ಮಾತುಗಳನ್ನು ಅನುಮೋದಿಸುತ್ತಾ 'ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ ಅರಿವಿಗೆ ಬೇರೊಂದೊಡಲುಂಟೆ' ಎಂಬ ಮಾತು ಹೆಣ್ಣಿನ ವೈಚಾರಿಕ ಬೆಳವಣಿಗೆಯ ಪ್ರತೀಕ ಎಂದು ಲಕ್ಕಮ್ಮ ಹೇಳುತ್ತಾಳೆ.

ಒಟ್ಟಾರೆಯಾಗಿ ೧೨ನೇ ಶತಮಾನವು ಕನ್ನಡದ ಕ್ರಾಂತಿಯುಗವಾಗಿದ್ದು, ಹೆಣ್ಣಿನ ಮನಸ್ಥಿತಿಗೆ ವೇದಿಕೆಯಾದ ಒಂದು ಕಾಲಘಟ್ಟ ಎನ್ನಬಹುದು. 'ಮಾನವ ಕುಲಂ ತಾನೊಂದೆ ವಲಂ' ಎಂಬ ಪಂಪನ ವಾಣಿಯನ್ನು ಪುನರ್ ಸೃಜಿಸಿದ ಕಾಲ ಎನ್ನಬಹುದು. ಈ ಕಾಲಘಟ್ಟದಲ್ಲಿ ವ್ಯಕ್ತಿ ಸ್ವಾತಂತ್ರ್ಯವು ಒಂದು ಮಹತ್ವದ ಮೈಲಿಗಲ್ಲು. ಏಕೆಂದರೆ ಎಲ್ಲಾ ಸಮುದಾಯ, ಜಾತಿ, ವರ್ಗದವರೂ ಆಲೋಚನೆಯಲ್ಲಿ ತೊಡಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದುದು ವಿಶೇಷ. ಆದ್ದರಿಂದಲೇ ವಚನ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವನ್ನು ನೀಡಲಾಗಿದೆ.

ಡಾ. ಸಿ. ವೀರಣ್ಣನವರ ಅಭಿಪ್ರಾಯವನ್ನು ಉಲ್ಲೇಖಿಸುವುದಾದರೆ,

"ಕಾವ್ಯ ರಚಿಸುತ್ತಿದ್ದೇವೆ ಎಂಬ ಕವಿ ಪಟ್ಟಿ ಕಟ್ಟಿಕೊಳ್ಳದೇ ಧಾರ್ಮಿಕ ಚರ್ಚೆಯಲ್ಲಿ ತಮಗೆ ತೋರಿದ್ದನ್ನು ಹೇಳಿದ್ದೇವೆ ಎಂಬ ನಿರ್ದಿಷ್ಠ ಉದ್ದೇಶದಲ್ಲೇ ಅಪೂರ್ವವಾದ ಸಾಧನೆಯನ್ನು ವಚನ ಚಳುವಳಿ ಮಾಡಿದೆ. ಅಲ್ಲದೆ ಸ್ತ್ರೀಯರು ಮಾತನಾಡಿದ್ದು ಈ ಶತಮಾನದಲ್ಲಿ. ಇದನ್ನು ಬಿಟ್ಟರೆ ೨೦ನೇ ಶತಮಾನದ ವರೆಗೂ ಕಾಯಬೇಕಾಯಿತು, ಆದ್ದರಿಂದಲೇ ವಚನ ಸಾಹಿತ್ಯ ಸಮುದ್ರದ ನಡುವೆ ಅಕಸ್ಮಾತ್ ಕಾಣಿಸಿಕೊಳ್ಳುವ ದ್ವೀಪದಂತೆ ಕಂಡು ಮರೆಯಾಗುತ್ತದೆ. ಇಲ್ಲಿ ಅನೇಕ ವಚನಕಾರ್ತಿಯರು ರೂಪುಗೊಂಡದ್ದು ಕನ್ನಡ ಸಾಹಿತ್ಯಕ್ಕೆ ಅನನ್ಯವಾದ ಕೊಡುಗೆ" [೬] ಎಂದಿದ್ದಾರೆ.

೪.೨ ಸಾಮಾಜಿಕ ಬದಲಾವಣೆಯ ಆಶಯ

ಭಾರತೀಯ ಸಾಹಿತ್ಯದಲ್ಲಿ ವೈಚಾರಿಕತೆಯ ಬೇರುಗಳು ಸಂಪೂರ್ಣವಾಗಿ ಆವರಿಸಿದ್ದರೂ ಸಾಮಾಜಿಕ ನಿಯಮುಗಳಲ್ಲಿ ಪುರುಷ ಕೇಂದ್ರಿತ ನೆಲೆಯಿದೆ. ಅಕ್ಕಮಹಾದೇವಿ, ಸಂಚಿಹೊನ್ನಮ್ಮ, ಶೃಂಗಾರಮ್ಮನವರ ಕಾವ್ಯಾಭಿವ್ಯಕ್ತಿ ಕೂಡ ಪುರುಷನಿಂದಲೇ ಗೌರವಿಸಿಕೊಂಡು ಸೃಷ್ಟಿಸಿಕೊಂಡ ಪುರುಷ ಚಿಂತನೆಯ ಇನ್ನೊಂದು ಮುಖವಾಗಿದೆ. ಆದ್ದರಿಂದ ಮಹಿಳಾಭಿವ್ಯಕ್ತಿಯ ಉಗಮಕ್ಕಾಗಿ ಪಾಶ್ಚಾತ್ಯ ಬದುಕಿನ ಮತ್ತು ಚಿಂತನೆಗಳ ಉಗಮದವರೆಗೆ ಕಾಯಬೇಕಾಯಿತು.

ಸಾಮಾನ್ಯವಾಗಿ ಮಹಿಳಾ ಸಾಹಿತ್ಯಕ್ಕೆ ಮೂಲ ಪ್ರೇರಣೆ ಪಾಶ್ಚಾತ್ಯ ಸ್ತ್ರೀವಾದ. ಅಮೇರಿಕಾ ಮತ್ತು ಪ್ರಾನ್ಸ್ ದೇಶಗಳಲ್ಲಿ ಬೆಳೆದು ಬಂದಂತಹ ಸ್ತ್ರೀ ಸ್ವಾತಂತ್ರ್ಯದ ಚಳುವಳಿಯ ಒಂದು ಭಾಗವೇ ಸ್ತ್ರೀವಾದ. ವಿಶ್ವದ ಹಲವಾರು ರಾಷ್ಟ್ರಗಳಲ್ಲಿ ಸ್ತ್ರೀವಾದವು ಪ್ರಚಲಿತವಾಗಿದೆ. ಸಮಾಜದಲ್ಲಿ ಲಿಂಗಾಧಾರಿತ ಸಮಸ್ಯೆಗಳ ಅರಿವನ್ನು ಮೂಡಿಸಿಕೊಂಡು ಸಮಾಜದ

ವಿವಿಧ ಸಂಸ್ಥೆಗಳಲ್ಲಿ ಸ್ತ್ರೀಯರ ಶೋಷಣೆ, ಉದ್ಯೋಗ, ಆಸ್ತಿಯ ಹಕ್ಕು, ವಿವಾಹ, ವಿಚ್ಛೇದನ, ಸಂತಾನ ನಿಯಂತ್ರಣ ಮುಂತಾದ ಕ್ಷೇತ್ರಗಳಲ್ಲಿ ಪ್ರತಿಭಟನೆಗಳಿದ್ದರೂ ಇವುಗಳಲ್ಲಿ ಬಹುತೇಕವಾಗಿ ತಾತ್ವಿಕ ಒಪ್ಪಿಗೆ ದೊರೆಯುತ್ತಿದೆಯೆ ವಿನಃ ಆಚರಣೆಯ ರೂಪದಲ್ಲಲ್ಲ. ಸಮಾಜದ ವಿವಿಧ ಪದರಗಳಲ್ಲಿ ಹಾಸು ಹೊಕ್ಕಾಗಿರುವ ಲಿಂಗಾಧಾರಿತ ಅಸಮಾನತೆಯನ್ನು ಪ್ರಶ್ನಿಸಿ, ಪ್ರತಿಭಟಿಸಿ, ಕಿತ್ತೊಗೆದಾಗ ಮಾತ್ರ ಸ್ತ್ರೀ ಸಮಾನತೆಯ ಹೋರಾಟಕ್ಕೆ ಒಂದು ಅರ್ಥಪೂರ್ಣತೆ ಬರುತ್ತದೆ ಎಂಬ ಮಾತು ಸಮಕಾಲೀನ ಸ್ತ್ರೀವಾದದ ಧ್ಯೇಯವಾಗಿದೆ.

ಸ್ತ್ರೀವಾದವೆಂದರೆ ಮಹಿಳೆಯರು ಪುರುಷರನ್ನು ವಿರೋಧಿಸುವ ಅಥವಾ ಆ ನಿಟ್ಟಿನ ಪ್ರತಿರೋಧವೇನಲ್ಲ. ಬದಲಿಗೆ ಇದು ಸಮಾಜದಲ್ಲಿ ರೂಪುಗೊಂಡಿರುವ ಅನಾರೋಗ್ಯಕರ ಸ್ತ್ರೀ ವಿರೋಧಿ ಮನೋಭಾವ ಹಾಗೂ ನಿಯಮಾವಳಿಗಳನ್ನು ಸ್ತ್ರೀ ಪುರುಷರಿಬ್ಬರಿಗೂ ಅರ್ಥವಾಗುವಂತೆ ವಿವರಿಸಿ, ವಿಶ್ಲೇಷಿಸಿ ಸಮಾನತೆಯ ತತ್ವಕ್ಕೆ ಹೊಂದಿಸಿ ಪುನರೂಪಿಸುವ ಸಾಮಾಜಿಕ ಚಿಂತನೆ. ಈ ಮೂಲಕ ಸ್ತ್ರೀ ಪುರುಷ ಸಂಬಂಧಗಳಲ್ಲಿ ಕರಾಳವಾಗಿ ವ್ಯಾಪಿಸಿರುವ ವೈಷಮ್ಯವನ್ನು ಇಲ್ಲವಾಗಿಸುವ ಒಂದು ಸ್ನೇಹಪೂರ್ಣ ಪ್ರಯತ್ನ. ಇಷ್ಟಾದರೂ ಸಹ ಇಂದಿನ ಸಾಹಿತ್ಯ ವಲಯದಲ್ಲಿ ಮತ್ತು ಜಾಗತೀಕರಣ ಯುಗದಲ್ಲೂ ಸ್ತ್ರೀವಾದವೆಂದರೆ ಸಂಕುಚಿತವಾಗಿ, ಪ್ರಶ್ನಾರ್ಥಕವಾಗಿ ನೋಡುವ ಮನೋಭಾವನೆ ಕಂಡುಬರುತ್ತಿದೆ. ಆದರೆ ಶೋಷಿತ ವರ್ಗದ ವಿರುದ್ಧ ಪ್ರಜ್ಞಾವಂತ ಸಮಾಜ ನಿರಂತರವಾಗಿ ಹೋರಾಡುವುದು ಅನಿವಾರ್ಯವಾಗಿದೆ. ಸಮಾಜ ಎಂದ ಕೂಡಲೇ ಸ್ತ್ರೀ ಮತ್ತು ಪುರುಷ ವರ್ಗ ಒಟ್ಟಾರೆ ಗ್ರಹಿಕೆಯ ನೆಲೆಗಳಾಗಿ ಕಂಡುಬರುತ್ತವೆ. ಸಮಾಜದ ಕುಂದುಕೊರತೆ, ಜಾತಿ, ಜನಾಂಗ, ಮುಂತಾದ ಸಾಮುದಾಯಕ ಹೋರಾಟಗಳಲ್ಲಿ ಈ ಎರಡು ವರ್ಗಗಳು ಕೂಲಂಕುಷವಾಗಿ ಮುಖ್ಯವಾಗುತ್ತವೆ. ಒಟ್ಟಾರೆಯಾಗಿ ಹೇಳುವುದಾದರೆ ಪಾರಂಪರಿಕವಾಗಿ ಮುಂದುವರೆಸಿಕೊಂಡು ಬಂದ ಮಹಿಳಾ ಶೋಷಣೆಯ ನೆಲೆಯಿಂದ ಕೂಡಿದ ನಮ್ಮ ಸಾಮಾಜಿಕ ಸ್ತರವನ್ನು ಇಂದು ಪ್ರಜ್ಞಾವಂತರು ಮರು ಶೋಧಿಸಬೇಕಾದುದು ಅಗತ್ಯ ಮತ್ತು ಅನಿವಾರ್ಯವೂ ಹೌದು.

೪.೩ ಬದಲಾವಣೆಯ ಹೆಜ್ಜೆಗಳು

ಅಕ್ಕಮಹಾದೇವಿಯ ನಂತರ ಕಾವ್ಯ ರಚನೆಯಲ್ಲಿ ತೊಡಗಿಕೊಂಡವರಲ್ಲಿ ಸಂಚಿಹೊನ್ನಮ್ಮ ಮತ್ತು ಶೃಂಗಾರಮ್ಮ ಮುಖ್ಯವಾಗುತ್ತಾರೆ. ಸಂಚಿ ಹೊನ್ನಮ್ಮ ಪುರುಷ ನಿರ್ಮಿಸಿದ ಸಮಾಜದಲ್ಲಿ ಬದುಕುತ್ತಿದ್ದರಿಂದ ಪುರುಷಪರ ಕಾವ್ಯವನ್ನೇ ಹೆಚ್ಚು ಬರೆದದ್ದು. ತನ್ನ "ಹದಿಬದೆಯ ಧರ್ಮ ಮತ್ತು ಸ್ತ್ರೀ ಧರ್ಮ ಸಾಂಗತ್ಯ" ಕೃತಿಗಳಲ್ಲಿ ಹೇಳಿದ್ದೂ ಸಹ ಹೆಣ್ಣು ಬದುಕುವ ಕ್ರಮವನ್ನು. ಆದರೆ ಇದಕ್ಕೆ ವಿರುದ್ಧವಾಗಿ ತನ್ನ ವ್ಯಕ್ತಿ ಸ್ವಾತಂತ್ರ್ಯದ ಮಾತೆಂಬಂತೆ

"ಪೆಣ್ಣಲ್ಲವೆ ನಮ್ಮನೆಲ್ಲ ಪಡೆದತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು"[೪]

ಎಂದು ಹೆಣ್ಣಿನ ಬಗ್ಗೆ ಸಮಾಜ ಹೊಂದಿದ್ದ ಅನಾದರವನ್ನು ವಿರೋಧಿಸುತ್ತಲೇ ಹೆಣ್ಣಿನ ಘನತೆಯನ್ನು ಎತ್ತಿ ಹಿಡಿಯುವ ಪ್ರಯತ್ನವನ್ನು ಮಾಡಿದ್ದಾಳೆ. ಗಂಡಾದರೆ ಬಂದ ಗುಣವೇನು? ಹೆಣ್ಣಾದರೆ ಬಂದ ಕುಂದೇನು? ಎಂದು ಪ್ರಶ್ನಿಸುತ್ತಾ, ಉಗುರಿನಿಂದ ನುಡಿವ ವೀಣೆಗೆ ಒನಕೆಯನು ಉಪಯೋಗಿಸಬಾರದೆಂದು ಹೇಳಿ ಹೆಣ್ಣಿನ ದೌರ್ಜನ್ಯದ ವಿರುದ್ಧ ತೋರಿದ ಪ್ರತಿಭಟನೆಯ ಸಂಕೇತಗಳಾಗಿಯೂ ಇವಳ ವಚನಗಳಿವೆ. ಈ ಮಾತಿಗೆ ಪೂರಕವಾಗಿ ಚಂಪಾರವರು 'ಹದಿಬದೆಯ ಧರ್ಮ' ಕೃತಿಯನ್ನು ಕುರಿತು ಈ ರೀತಿ ಹೇಳಿದ್ದಾರೆ.

"ಸಂಚಿ ಹೊನ್ನಮ್ಮನ ಹದಿಬದೆಯ ಧರ್ಮ ಅಂದಿನ ಗೃಹಿಣಿಯರ ಜೀವನವನ್ನು ಮೂಡಿಸುವ ಕನ್ನಡಿ"[೫] ಎಂದಿದ್ದಾರೆ.

ಡಾ. ಜಿ.ಎಸ್. ಶಿವರುದ್ರಪ್ಪನವರು ಹೇಳುವಂತೆ,

"ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಅಕ್ಕಮಹಾದೇವಿ ಮತ್ತು ಸಂಚಿಹೊನ್ನಮ್ಮ ಇಬ್ಬರೂ ಮಹಿಳೆಯರಿಗೆ ಸಂಬಂಧಿಸಿದ ಎರಡು ಮಾದರಿಗಳನ್ನು ಪ್ರತಿನಿಧಿಸುತ್ತಾರೆಂದು ಹೇಳಿದ್ದಾರೆ"[೬]

ಮುಂದೆ ಬಂದ ಹೆಳವನಕಟ್ಟೆ ಗಿರಿಯಮ್ಮ, ಹರಪ್ಪನಹಳ್ಳಿ ಭೀಮವ್ವ ಕಥೆ ಹಾಗೂ ಕೀರ್ತನಗಳನ್ನು ರಚಿಸುತ್ತಾರೆ. ಆದರೆ ಕಾವ್ಯದ ದೃಷ್ಟಿಯಿಂದ ತಿರುಮಲಾಂಬ ಹಾಗೂ ಬೆಳಗೆರೆ ಜಾನಕಮ್ಮನವರು ಮುಖ್ಯರಾಗುತ್ತಾರೆ. ತಿರುಮಲಾಂಬ ಕಾವ್ಯವನ್ನು ರಚಿಸುವುದರ ಮೂಲಕ 'ಕರ್ನಾಟಕ ನಂದಿನಿ' ಎಂಬ ಪತ್ರಿಕೆಯಲ್ಲಿ ವೈಚಾರಿಕ ಲೇಖನಗಳನ್ನು ಪ್ರಕಟಿಸುತ್ತಿದ್ದರು. ಇವರು ಹೆಚ್ಚು ಕಾದಂಬರಿಗಳನ್ನು ಬರೆಯುವುದರಲ್ಲಿ ಆಸಕ್ತಿ ಹೊಂದಿದ್ದರೂ 'ಸತಿ ಹಿತೈಷಿಣಿ' ಎಂಬ ಗ್ರಂಥ ಮಾಲೆಯನ್ನು ಆರಂಭಿಸಿ ಕಥೆ, ಕಾದಂಬರಿ, ಲೇಖನಗಳನ್ನು ಮಹಿಳೆಯರು ಬರೆಯುವಂತೆ ಉತ್ತೇಜಿಸಿದವರಲ್ಲಿ ಮೊದಲಿಗರನ್ನಬಹುದು. ಇವರ ಸಮಕಾಲೀನರಾದ ಬೆಳಗೆರೆ ಜಾನಕಮ್ಮನವರು ಜೀವನದಲ್ಲಿ ಎದುರಾದ ಕಷ್ಟ, ನೊವು, ನಲಿವು, ಬೇಸರ ಮುಂತಾದವುಗಳನ್ನು ತಮ್ಮ ಕವನಗಳಲ್ಲಿ ಚಿತ್ರಿಸಿದರು.

"ಗಂಡನೆಂದರೆ ಪ್ರಾಣ ಹೆಣ್ಣೆ, ನೀಗಂಡನ ಕೂಡಿಕೊಂಡ್ಯ
ನೋಡು ಮಂಡೂಕ ಸರ್ಪದ ನೆಳಲಿಗೆ ಹೋದಂತೆ
ಬಂಡಿಗೆ ಬಿಸದನು ಶಿರಬಾಗಿಕೊಂಡಂತೆ"[೭]

ಎಂಬ ಸಾಲುಗಳಲ್ಲಿ ಗಂಡನಿಂದಾಗುವ ದೌರ್ಜನ್ಯದ ಸೂಕ್ಷ್ಮತೆಗಳನ್ನು ಚಿತ್ರಿಸಿದ್ದಾರೆ. ಇದು ಒಂದು ರೀತಿಯ ಪುರುಷ ಸಮಾಜದ ವಿರುದ್ಧ ನಡೆದ ಪ್ರತಿಭಟನೆಯ ವಿಧಾನವೆನ್ನಬಹುದು. ಇದೇ ಕಾಲಘಟ್ಟದಲ್ಲಿ ಬರುವ ಎಂ.ತಂಗಮ್ಮನವರು 'ಇಂದ್ರಗೋಪ', 'ಅರಳಿದಮೊಗ್ಗು', 'ಕೊಡಗಿನಮಲ್ಲಿಗೆ' ಕವನ ಸಂಕಲನಗಳನ್ನು ಬರೆದಿದ್ದಾರೆ ಹಾಗೂ ಪ್ರಕೃತಿ, ಪ್ರೇಮ, ಸೌಂದರ್ಯ ಮುಂತಾದವುಗಳನ್ನು ತಮ್ಮ ಕಾವ್ಯದ ವಸ್ತುವಾಗಿಸಿಕೊಂಡಿದ್ದಾರೆ.

ಇಲ್ಲಿಂದ ಮುಂದೆ ನವ್ಯ ಸಾಹಿತ್ಯದಲ್ಲಿ ರಚನೆಯಾದ ಮಹಿಳಾ ಕಾವ್ಯ, ತನ್ನ ಕಾವ್ಯಕ್ಕೆ ಬೇರೆಯದೇ ಆದ ವಸ್ತುವನ್ನಿಟ್ಟುಕೊಂಡು ರಚಿತವಾಯಿತು. ಇದಕ್ಕೆ ಕಾರಣ ಕಥೆ, ಕಾದಂಬರಿಗಳು ಕೇವಲ ಅಡುಗೆ ಮನೆ ಸಾಹಿತ್ಯ, ಜೊಳ್ಳು ಸಾಹಿತ್ಯ ಎಂದೆಲ್ಲಾ ಪುರುಷ ಸಾಹಿತ್ಯದ ಟೀಕೆಯಿಂದ ಹೊರಬರಲು ಹಾಗೂ ನೇರವಾಗಿ ಹೇಳಲಾಗದ ತನ್ನ ಅಭಿಪ್ರಾಯ ಆಸೆ, ಆಕಾಂಕ್ಷೆಗಳನ್ನು ವ್ಯಕ್ತಪಡಿಸಲು, ಅಕ್ಕಮಹಾದೇವಿಯವರ ಕಾವ್ಯ ತಂತ್ರಗಳಾದ ಕನಸು, ಕಲ್ಪನೆಗಳ ಮೂಲಕ ತಾವು ತಿಳಿಸಬೇಕಾದ ವಿಚಾರಗಳನ್ನು ತಿಳಿಸಲು ಕಾವ್ಯ ಮಾರ್ಗವೇ ಉತ್ತಮವಾದದ್ದೆಂದು ತಿಳಿದು ಕಾವ್ಯದ ಬೆಳವಣಿಗೆಗೆ ಕಾರಣರಾದವರು ಹಲವು ಕವಯಿತ್ರಿಯರು.

ಗಿರಡ್ಡಿ ಗೋವಿಂದರಾಜುರವರು ಹೇಳುವಂತೆ,

"ತನ್ನ ಕಾಲದ ಸಾಮಾಜಿಕ ಸ್ಥಿತಿಯ ಚಿತ್ರಣಕ್ಕೆ ಬೇಕಾದ ವ್ಯಂಗ್ಯ, ಟೀಕೆ, ಕಟಿಕಿ, ಆತ್ಮವಿಮರ್ಶೆ ತಾಂತ್ರಿಕ ಉಪಕರಣಗಳನ್ನು ಸಾಧಿಸಿಕೊಂಡು ಹೊಸ ವಸ್ತುಗಳನ್ನು ಕಾವ್ಯಕ್ಕೆ ನವ್ಯ ಸಾಹಿತ್ಯ ತಂದಿತು"[೮] ಎಂದಿದ್ದಾರೆ.

ಕಾವ್ಯವನ್ನು ಕುರಿತು ಕೆ.ವಿ. ನಾರಾಯಣ್‌ರವರು ಹೇಳುವಂತೆ

"ಪ್ರಚಲಿತ ಕೌಟುಂಬಿಕ ಚೌಕಟ್ಟನ್ನು ಒಪ್ಪಿ ಬರೆದವರು ಕಥೆ, ಕಾದಂಬರಿ ರಚಿಸುತ್ತಾ ವಯಕ್ತಿಕತೆಯ ಅರಿವು ತೀವ್ರವಾದವರು ಕಾವ್ಯ ರಚಿಸುತ್ತಾರೆ"[೯] ಎಂಬ ಮಾತು ಸತ್ಯವೂ ಹೌದು.

೪.೪ ಹೊಸ ಚಿಂತನೆಯ ಗ್ರಹಿಕೆಗಳು

ಕಳೆದೆರಡು ದಶಕಗಳಲ್ಲಿ ಕನ್ನಡದಲ್ಲಿ ಸಾಕಷ್ಟು ಸ್ತ್ರೀವಾದಿ ಚಿಂತನೆಗಳು ಬೆಳೆದುಬಂದಿವೆ. ತೇಜಸ್ವಿನೀ ನಿರಂಜನ, ಡಾ. ಎಚ್.ಎಸ್ ಶ್ರೀಮತಿ, ಡಾ. ವಿಜಯಾದಬ್ಬೆ, ಡಾ. ಬಿ.ಎನ್. ಸುಮಿತ್ರಾಬಾಯಿ, ನೇಮಿಚಂದ್ರ, ಎನ್. ಗಾಯತ್ರಿ, ಬಿ.ಎಂ. ರೋಹಿಣಿ ಮುಂತಾದ ಚಿಂತಕಿಯರು ತಮ್ಮ ಮಹಿಳಾ ಪರ ಆಶಯ ಹಾಗೂ ಕಾಳಜಿಗಳಿಂದ ಪ್ರಸಿದ್ಧರಾಗಿದ್ದಾರೆ.

ಇತ್ತೀಚಿನ ಮಹಿಳಾ ಕಾವ್ಯವನ್ನು ಕುರಿತು ಕವಿ 'ಆಕ್ಟೋವಿಯೋ ಪೌಜ್' ಈ ರೀತಿ ಹೇಳುತ್ತಾರೆ. "ಕಾವ್ಯವೆನ್ನುವುದು ಏಕಕಾಲದಲ್ಲಿ ಜನತೆಯ ಭಾಷೆ, ಆಯ್ದ ಅಲ್ಪಸಂಖ್ಯಾತರ ಭಾಷೆ, ಏಕಾಂಗಿಗಳ ಭಾಷೆ"[೧೦] ಎಂದು ಹೇಳುತ್ತಾರೆ.

ಆಧುನಿಕ ಮಹಿಳಾ ಕಾವ್ಯದ ಪ್ರಕಾರ 'ಪರಂಪರೆ' ಎಂದರೆ ಹೆಣ್ಣಿನ ಶೋಷಣೆ, 'ಚರಿತ್ರೆ' ಎಂದರೆ ಹೆಣ್ಣು ಗಂಡಿನ ಅಸಮಾನ ಸಂಬಂಧಗಳ ಭೂತ ಎಂದು ಕರೆದಿದೆ. ಅಂದರೆ ನಮ್ಮಲ್ಲಿ ರಚನೆಯಾಗಿರುವ ಇದುವರೆಗಿನ ಚರಿತ್ರೆಯಾಗಿರಬಹುದು, ಬಂದಿರುವ ಪುರಾಣಗಳಾಗಿರಬಹುದು ಅದು ಪುರುಷರಿಂದ ರಚನೆಯಾಗಿರುವುದರಿಂದ ಹೆಣ್ಣನ್ನು ಶೋಷಿಸಿ ಅಸಮಾನತೆಯಿಂದ ಕಾಣುವುದೇ ನ್ಯಾಯವೆಂಬಂತೆ ನಂಬಿಸಿಕೊಂಡು ಬರಲಾಗಿದೆ. ಇದನ್ನು ಆಧುನಿಕ ಮಹಿಳಾ ಕಾವ್ಯ ಹಲವು ಕವಿತೆಗಳ ಮೂಲಕ ಪ್ರಶ್ನಿಸುತ್ತದೆ. ಪುರಾಣ ಪಾತ್ರಗಳನ್ನೂ ಮತ್ತೆ ಮತ್ತೆ ಪುನರಚಿಸುವ, ಮಾತಿಗೆಳೆಯುವ ಪ್ರಯತ್ನವನ್ನೂ ಮಾಡುತ್ತಲೇ ಬಂದಿವೆ.

ಉದಾ: ಡಾ. ಎಚ್.ಎಲ್. ಪುಷ್ಪರವರ, 'ಅಮೃತಮತಿ ಸ್ವಗತ', 'ಮಾಧವಿ', ಶಶಿಕಲಾ ವೀರಯ್ಯಸ್ವಾಮಿರವರ 'ಮದ್ದಾನೆ ಮತ್ತು ಮಾವುತ', ದು.ಸರಸ್ವತಿಯವರ 'ಜೀವಸಂಪಿಗೆ' ಕವಿತೆಗಳು ಇಂದಿಗೂ ಸಹ ಹೆಣ್ಣಿನ ಗೊತ್ತಿರದ ಇನ್ನೊಂದು ಮುಖವನ್ನು ಪರಿಚಯಿಸುತ್ತವೆ. ಹೆಣ್ತನದ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಮಹಿಳಾ ಕಾವ್ಯವನ್ನು ಮಹಿಳೆಯೇ ಬರೆದಾದ ಮೇಲೆ ಹೆಣ್ತನದ ಬಗ್ಗೆ ಮಾತೇಕೆ? ಎಂಬ ಪ್ರಶ್ನೆಯೂ ನಮ್ಮ ಮುಂದಿದೆ. ಕವಯಿತ್ರಿಯರೇ ಹೇಗೆ ವಿಭಿನ್ನ ದೃಷ್ಟಿಕೋನಗಳಿಂದ ನೋಡುತ್ತಾರೆ? ಎಂಬುದು ನಮಗೆ ಮುಖ್ಯ. ಆದ್ದರಿಂದ ಮಹಿಳಾ ಕಾವ್ಯದಲ್ಲಿ ವ್ಯಕ್ತವಾಗಿರುವ ಹೆಣ್ತನದ ಹಲವು ನೆಲೆಗಳನ್ನು ಗುರ್ತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಆಡ್ರಿನ್ ರಿಚ್ ಎನ್ನುವ ಲೇಖಕಿ ಹೇಳುವಂತೆ,

"ಹೆಣ್ಣಾಗಿ ನನ್ನ ಅನುಭವಗಳನ್ನು, ಅವುಗಳ ಸಂಪೂರ್ಣತೆಯಲ್ಲಿ ಅವುಗಳ ಸಮಸ್ತ ವಿವರಗಳಲ್ಲಿ ನನಗೆ ನಾನೇ ಯಾವುದೇ ನಿರ್ಬಂಧಗಳನ್ನು ಹೇರಿಕೊಳ್ಳದೆ ಅಭಿವ್ಯಕ್ತಿಸಲು ಕಲಿತರೆ ನನ್ನ ಮೇಲೆ ಹೇರಲಾದ ವರ್ಗೀಕರಣಗಳು ಮತ್ತು ಮಾನದಂಡಗಳನ್ನು ಲೆಕ್ಕಿಸದೆ ನನ್ನ ಅನುಭವದ ಘನತೆಯಲ್ಲಿ ಅದರ ಸಾಂದ್ರತೆ ಮತ್ತು ಅಧಿಕೃತತೆಯಲ್ಲಿ ನಂಬಿಕೆಯಿಟ್ಟು ಬರೆಯುವುದನ್ನು ಕಲಿತೆನಾದರೆ, ಆ ಗಳಿಕೆಯಲ್ಲಿ ನಾನು ಹೊಸ ಭಾಷೆಯನ್ನು ಮಾತನಾಡುತಿದ್ದೇನೆ ಎಂದೇ ಅರ್ಥ ಎಂದು ಹೇಳುವ ಮಾತು ಮುಖ್ಯ" [೧೧] ಎಂದಿದ್ದಾರೆ. ಈ ಮಾತು ಹೆಣ್ತನದ ಪಾರದರ್ಶಕತೆಗೆ ಹಿಡಿದ ಕನ್ನಡಿ ಮತ್ತು ಹೆಣ್ಣು ಮನಸ್ಸಿನ ಅನುಭವ ಲೋಕದ ಅನನ್ಯತೆಯನ್ನು ಒತ್ತಿ ಹೇಳುತ್ತದೆ.

ಆಧುನಿಕ ಮಹಿಳಾ ಕಾವ್ಯವು ಸಮಾಜಮುಖಿ ಚಿಂತನೆಗೆ ದಾರಿ ಮಾಡಿಕೊಟ್ಟಿದೆ. ಈ ಕಾಲಘಟ್ಟದಲ್ಲಿ ಪ್ರೇಮ, ಕಾಮ, ದಾಂಪತ್ಯ, ಪುರಾಣ, ಪಾತಿವ್ರತ್ಯ, ಸ್ತ್ರೀ ಶೋಷಣೆ ಮೊದಲಾದುವುಗಳನ್ನು ಕಾವ್ಯ ವಸ್ತುವಾಗಿಟ್ಟುಕೊಂಡು ಪುರುಷನನ್ನು ನೇರವಾಗಿ ತರಾಟೆಗೆ ತೆಗೆದುಕೊಳ್ಳುವ ಕವಿತೆಗಳೂ ಹೊರ ಬಂದವು.

ಉದಾ: ಪ್ರತಿಭಾ ನಂದಕುಮಾರ್‌ರವರ 'ನಾವು ಹುಡುಗಿಯರೇ ಹೀಗೆ', ಚ.ಸರ್ವಮಂಗಳರವರ 'ಭಂಡರು', 'ಅವನು ಬಸವ', ಹೆಚ್.ಎಲ್. ಪುಷ್ಪರವರ 'ಅಮೃತಮತಿ

ಸ್ವಗತ', ಹೆಚ್.ಎಸ್. ಮುಕ್ತಾಯಕ್ಕ ನವರ 'ನಾವು ಪತಿವ್ರತೆಯರಲ್ಲ', ಸುಕನ್ಯಾರವರ 'ಅಹಲ್ಯೆ', ಎನ್.ವಿ. ಭಾಗ್ಯಲಕ್ಷ್ಮೀರವರ 'ಬೆರಳ ಸಂದಿಯ ಬದುಕು' ಮುಂತಾದ ಕವಿತೆಗಳು ಹೊಸ ಆಲೋಚನೆಗೆ ದಾರಿ ಮಾಡಿಕೊಟ್ಟವು. 'ಹೆಣ್ಣು ರೂಪಿತಗೊಳ್ಳುತ್ತಾಳೆ' ಎಂಬ ಸಿಮನ್ ದ ಬೋವಾಳ ಮಾತನ್ನು ಆಧುನಿಕ ಮಹಿಳಾ ಕಾವ್ಯ ತನ್ನದೇ ಆದ ರೀತಿಯಲ್ಲಿ ಚಿಂತನೆಗೊಳಪಡಿಸಿದೆ.

೧೯೭೦ರ ದಶಕವು ಕವಯಿತ್ರಿಯರ ಸಂಖ್ಯೆ ಹೆಚ್ಚಲು ಅನೇಕ ಕಾರಣಗಳನ್ನು ಒದಗಿಸಿತು. ಜೊತೆಗೆ ತನ್ನ ಕಾವ್ಯಶಕ್ತಿ, ಪ್ರತಿಭಾ ಶಕ್ತಿಯಿಂದ ಇಂದು ಏಕಮುಖವಾಗಿದ್ದ ಪುರುಷ ಪ್ರಜ್ಞೆಯನ್ನು ಬೇರೊಂದು ಕಡೆ ತಿರುಗಿಸುವ ಪ್ರಯತ್ನವನ್ನು ಮಹಿಳಾ ಕಾವ್ಯ ಮಾಡಿತು. ಪ್ರಸ್ತುತ ಸಮಾಜದಲ್ಲಿ ಎದುರಾಗುವ ಯಾವುದೇ ಸಮಸ್ಯೆಗಳನ್ನು ಕಾವ್ಯದ ಮೂಲಕವೇ ಪ್ರತಿಭಟಿಸಿರುವುದು ಕಾವ್ಯಕ್ಕಿರುವ ಶಕ್ತಿಯನ್ನು ತಿಳಿಸುತ್ತದೆ. ಇಂದು ಅನೇಕ ಕವಯಿತ್ರಿಯರು ಕಾವ್ಯಕ್ಕೆ ಜೀವ ತುಂಬುವ ಕೆಲಸವನ್ನು ಮಾಡುತ್ತಾ ಪ್ರಸ್ತುತತೆಗೆ ತಕ್ಕಂತೆ ಕಾವ್ಯದ ವಸ್ತುಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಎಲ್ಲಾ ಕವಯಿತ್ರಿಯರ ಭಾಷೆ, ವಸ್ತು ಅಥವಾ ವ್ಯಕ್ತಪಡಿಸುವ ಮಾಧ್ಯಮ ಬೇರೆ ಬೇರೆಯಾಗಿದ್ದರೂ ಅವರೆಲ್ಲರ ಕಾವ್ಯ ಹೊಂದಿರುವ ಸತ್ವ ಒಂದೇ ಆಗಿರುತ್ತದೆ. ಅಂದರೆ ಸ್ತ್ರೀ ಶೋಷಣೆಯನ್ನು ತಡೆಗಟ್ಟಿ, ಸಮಾನತೆಯನ್ನು ಸಾಧಿಸುವುದಾಗಿದೆ. ಒಟ್ಟಾರೆಯಾಗಿ ಮಹಿಳಾ ಕಾವ್ಯ ಹೆಣ್ತನದ ಪ್ರತೀಕ ಎಂದರೆ ತಪ್ಪಾಗಲಾರದು.

ಪ್ರತಿಭಾ ನಂದಕುಮಾರ್‌ರವರ ಕಾವ್ಯ ಹೊಸ ನೋಟಕ್ಕೆ ಒಳಗು ಮಾಡಿದೆ. ಇವರ ಕವಿತೆಗಳನ್ನು ಓದುವಾಗ ಹೆಣ್ಣು ತನ್ನ ಆತ್ಮಕಥೆಯ ಮುಖವೇನೋ ಎಂಬಂತೆ ಭಾಸವಾಗುತ್ತದೆ. ಗಂಡು ಹೆಣ್ಣಿನ ನಡುವಿನ ಭಿನ್ನತೆ ಇವರ ಕವಿತೆಗಳಲ್ಲಿ ಕಂಡು ಬರುವುದಿಲ್ಲ. ಹೆಣ್ಣಿನ ಮನೋಧರ್ಮವನ್ನು ಬರಹಗಳಲ್ಲಿ ಕಟ್ಟಿಕೊಟ್ಟ ಕವಯಿತ್ರಿ ಪ್ರತಿಭಾರವರು. ಪಾತ್ರಗಳ ಮೂಲಕ ಹೆಣ್ಣಿನ ಅಂತರ್ಗತ ಅಭಿವ್ಯಕ್ತಿಯನ್ನು ನೇರವಾಗಿ ಹೇಳುವ ಪ್ರಯತ್ನ ಮಾಡಿದರು. 'ನಾವು ಹುಡುಗಿಯರೇ ಹೀಗೆ' ಕವಿತೆ ಮೂಡಿಸಿದ ತಲ್ಲಣ, ನೇರಮಾತು ಬರವಣಿಗೆ ಪ್ರೌಢಿಮೆಯ ಪ್ರತೀಕ.

'ಅರ್ಧನಾರೀಶ್ವರ' ಕವಿತೆಯಲ್ಲಿ ಗಂಡು ಹೆಣ್ಣು ಸಮಾನತೆಯ ಪ್ರತಿಬಿಂಬವೆಂದು ತೋರಿಸಲು ಅರ್ಧನಾರೀಶ್ವರನ ಕಲ್ಪನೆ ಮೂಡಿಸುತ್ತಾರೆ. ಕೆಲವು ಚಿತ್ರವಷ್ಟೇ ಹೊರತು ಮನಸ್ಸುಗಳ ಅಂತರ ದೂರದ್ದು ಎಂಬುದನ್ನು ತೀಕ್ಷ್ಣವಾಗಿ, ತೀವ್ರವಾಗಿ ಹಾಗೂ ನೇರವಾಗಿ ಖಂಡಿಸುತ್ತಾರೆ.

"ನಾಚಿಕೆಯಾಗಬೇಕು ಜೀವಕ್ಕೆ
ಅರ್ಧಕ್ರೆಡಿಟ್ ತೆಗೆದುಕೊಳ್ಳುವುದಕ್ಕೆ
ಹೆಣ್ತನದ ಸೂಚನೆಯೆಂದು ಒಂದು
ಸ್ತನ ಧರಿಸಿಬಿಟ್ಟರೆ ಆಯಿತೇ ಲಿಂಗಕ್ಕೆ

ಅರೆಬಸಿರು ತಡೆದುಕೊಂಡೀತೇ ಪೂರ್ಣ ಗರ್ಭದ ಹೊರೆ?
ಇಡೀ ದೇಹವೇ ತಡೆಯಲಾಗದು
ಪಾರ್ಶ್ವಕ್ಕೆ ಸಾಕೆ ಪ್ರಣಯ ಬೇಗೆ?"[೧೨]

ಎಂಬ ಸಾಲುಗಳಲ್ಲಿ ಕೇವಲ ವ್ಯಂಗ್ಯವಿಲ್ಲ. ಶತಮಾನಗಳಿಂದ ಹೆಣ್ಣನ್ನು ಕಂಡ ರೀತಿಯೂ ಶೋಷಣೆಯ ಪ್ರತೀಕ ಎಂಬುದನ್ನು ತಿಳಿಸುತ್ತಾರೆ. ಪೂರ್ಣವಾದ ಹೆಣ್ಣಾದವಳಲ್ಲಿ ಕಾಣಿಸದ ಹೆಣ್ತನ ಅರ್ಧನಾರಿಶ್ವರನಲ್ಲಿ ಹೇಗೆ ಕಾಣುತ್ತದೆ? ಎಂಬ ಪ್ರಶ್ನೆ ಮಾಡುತ್ತಾರೆ. ಪ್ರಶ್ನಿಸುತ್ತಲೇ ಮುಖವಾಡಗಳನ್ನು ಕಳಚುವ ಪ್ರಯತ್ನವೂ ಇಲ್ಲಿದೆ. ಹೆಣ್ಣು ಪುಟಿವ ಚೆಂಡಿದ್ದಂತೆ, ಎಂದಿಗೂ ಅವಳು ದುರ್ಬಲೆಯಲ್ಲ, ಅಬಲೆ ಎಂಬ ಪಟ್ಟ ಕಟ್ಟಿ ಹೆಣ್ಣನ್ನು ಗಂಡು ತನ್ನ ಅಧೀನದಲ್ಲಿಟ್ಟುಕೊಂಡರೂ ತನ್ನ ತನವನ್ನು ಬಿಟ್ಟುಕೊಡದ ದಿಟ್ಟೆ ಎಂಬುದನ್ನು ಸಾಬೀತು ಪಡಿಸಿದವಳು ಹೆಣ್ಣು. ಇದನ್ನೇ ಹೆಣ್ತನದ ರೂಪದಲ್ಲಿ ನಾವು ಕಂಡುಕೊಂಡದ್ದು.

"ಲತೆಯಾದರೆ ದಬ್ಬೆ ಕಟ್ಟುತ್ತಾನೆ
ಚಪ್ಪರವಾಗಿ ಹರಿಯುತ್ತೇನೆ
ಬಾಳೆಯಾದರೆ ಕತ್ತರಿಸಿದರೂ
ಪುಟಿ ಪುಟಿದು ನೂರೆಂಟು ಕುಡಿಗಳು
ಮಾವು, ಹಲಸು, ತೇಗವಾದರೆ
ನೆಟ್ಟಗೆ ಆಕಾಶಕ್ಕೆ ಮುಖಮಾಡಿ
ಕುರ್ಚಿ, ಮೇಜು, ಮಂಚವಾಗಿ ಪರಿವರ್ತನೆಗೊಂಡು
ನಾನು ಸಾಯುವುದಿಲ್ಲ"[೧೩]

ಈ ಸಾಲುಗಳು ನಿಸರ್ಗವೇ ಹೆಣ್ಣೆಂದು ತನ್ನನ್ನೇ ತಾನು ತೆರೆದಿಟ್ಟುಕೊಂಡ ಬಗೆಯನ್ನು ಧ್ವನಿಸುತ್ತದೆ. ಇದನ್ನೇ ಅಕ್ಕಮಹಾದೇವಿ ಕಂಡುಕೊಂಡದ್ದು. ನಿರಂತರ ಹರಿವು ಕವಿತೆಯ ಮೂಲಕ ಹೆಣ್ಣಿನ ಹೆಣ್ತನದ ಪ್ರತಿಬಿಂಬವನ್ನು ಕವಯಿತ್ರಿ ಕಟ್ಟಿ ಕೊಡುತ್ತಾರೆ. ಕವಿತೆಯ ಶೀರ್ಷಿಕೆಯೇ 'ಹಿಮದ ಹಾದಿ'. ಬದುಕಿನ ಬೆವರು ಬಿಸಿಯಾದಾಗ ಹಿಮವೂ ಕರಗಿ ನೀರಾಗುತ್ತದೆ ಎಂಬುದನ್ನು ಕವಯಿತ್ರಿ ಧ್ವನಿಸಿದ್ದಾರೆ.

ಶಶಿಕಲಾ ವೀರಯ್ಯಸ್ವಾಮಿಯವರ 'ಹೆಂಗ ಹೇಳಲೇ ಗೆಳತಿ' ಕವಿತೆ ಸಮಾಜದಲ್ಲಿ ಹೆಣ್ಣಿನ ಬಗೆಗಿನ ತಿರಸ್ಕಾರವನ್ನು ಕುರಿತು ಸಿಡಿದೇಳುವ ರೀತಿಯಲ್ಲಿ ರಚಿತವಾಗಿದೆ. ಹೆಣ್ಣಿನ ನೋವನ್ನು ಮತ್ತೊಬ್ಬ ಹೆಣ್ಣೇ ಅರ್ಥ ಮಾಡಿಕೊಳ್ಳಲು ಸಾಧ್ಯ ಎಂಬುದು ಕವಿತೆಯ ಆಶಯವಾಗಿದೆ.

"ಸುತ್ತ ಕುಣಿಯುತ್ತಿರುವ ನಯವಂಚಕರ ಭೂತ ನೃತ್ಯ
ಕಂಡು ಬೆದರಿದ್ದೇನೆ
ರೆಕ್ಕೆ ಕತ್ತರಿಸಿ ಹಾರು ಎನ್ನುವ

ಕಾಲು ಮುರಿದು ಓಡು ಎನ್ನುವ
ಹಿತೈಷಿಗಳ ಹಿತನುಡಿಗೆ ಬೆರಗಾಗಿ
ಬೆರಳು ಕಚ್ಚಿದ್ದೇನೆ" [೧೪]

ಜೀವನೋತ್ಸಾಹ ತುಂಬಿದ ಹೆಣ್ಣು ಸಮಾಜವನ್ನು ಕಂಡುಕೊಂಡ ರೀತಿ, ಸಮಾಜದಿಂದ ಅವಳಿಗಾಗುವ ಮೋಸ ಎಲ್ಲವನ್ನೂ ಅಸಹಾಯಕಳ ರೀತಿಯಲ್ಲಿ ವಿವರಿಸಿದ್ದಾಳೆ. ಸಮಕಾಲೀನ ಮನಸ್ಥಿತಿಗಳಿಗೆ ಕಾವ್ಯದ ಮೂಲಕ ಸ್ಪಂದಿಸಿದವರು ಡಾ. ಹೆಚ್.ಎಲ್.ಪುಷ್ಪ. ಪುರಾಣ ಮತ್ತು ಪರಂಪರೆಯ ಮೌಲ್ಯಗಳಲ್ಲಿ ಕಳೆದು ಹೋದ ಹೆಣ್ಣಿನ ಹೆಣ್ತನಕ್ಕೆ ಹೊಸ ಆಯಾಮವನ್ನೊದಗಿಸಿದ ಕವಯಿತ್ರಿ, ಹೊಸ ಸಂವೇದನೆಗಳನ್ನು ಸ್ತ್ರೀ ಪ್ರಜ್ಞೆಯಲ್ಲಿ ಕಾಣುತ್ತಾರೆ.

ಮಹಿಳಾ ಕಾವ್ಯದ ವಿಶಿಷ್ಟತೆ ಎಂದರೆ ಪಾತ್ರಗಳನ್ನು ಮಾತನಾಡಿಸುವ ಕ್ರಮ. ಇದನ್ನು ಕಾವ್ಯದ ಮೂಲಕ ಅರಗಿಸಿಕೊಂಡವರು ಡಾ. ಹೆಚ್.ಎಲ್. ಪುಷ್ಪರವರು.

'ಅಮೃತಮತಿಯ ಸ್ವಗತ' ಕವಿತೆ ಮತ್ತೆ ಮತ್ತೆ ಕಾಡುತ್ತದೆ. ಏಕೆಂದರೆ ವೈಭವೀಕರಿಸಿದ ಜನ್ನನ ಅಮೃತಮತಿ ಮರೆತೇ ಹೋಗುತ್ತಾಳೆ. ವ್ಯಭಿಚಾರಿಣಿಯಾದ ಪಾತ್ರಕ್ಕೆ ವೈಚಾರಿಕ ಜೀವ ಬಂದಿದ್ದು ಪುಷ್ಪರವರ ಕಾವ್ಯದ ಮೂಲಕ. ಸ್ವಗತ ಮಾದರಿಯ ಕಾವ್ಯ ಬಂದದ್ದರಿಂದಲೇ ಕನ್ನಡ ಮಹಿಳಾ ಕಾವ್ಯ ಪ್ರಸ್ತುತತೆಯನ್ನು ಎಂದಿಗೂ ಕಾಯ್ದುಕೊಂಡು ಬಂದಿವೆ. ಆದ್ದರಿಂದಲೇ ಸೀತೆ, ಸಾವಿತ್ರಿ, ಅಮೃತಮತಿ, ದ್ರೌಪದಿ, ಅಹಲ್ಯೆ ಮತ್ತೆ ಮತ್ತೆ ಜೀವಂತಿಕೆ ಪಡೆಯುತ್ತಲೇ ಇರುತ್ತಾರೆ. ಶೋಷಣೆಯನ್ನು ಪ್ರತಿಭಟಿಸಲು ಮತ್ತು ವಾಸ್ತವವನ್ನು ಪ್ರಶ್ನಿಸಲು

"ಸವಿಯಿದೆ ನೋಡು
ಒರಟು ಚಾಟಿಯ ಚುಂಬನದಲ್ಲಿ
ಅದಕೆ ನೋಡು ದೊರೆ
ನಿನ್ನ ಚಂದನ ಗಂಧ ಸುವಾಸಿತ ತೆಕ್ಕೆ
ಬಿಟ್ಟು ಈ ಕಾಡ ಪೊದೆಯ ಕರೆಗೆ
ಹಾಡಾಗಿ ಹಾಡಿದ್ದು" [೧೫]

ಅಷ್ಟಾವಕ್ರನಾದವನು ಅಮೃತಮತಿಗೆ ಅಲಂಕಾರ ಪುರುಷ. ಬಯಸಿದಂತೆ ಬದುಕು ನಡೆಸುವ ಸ್ವೇಚ್ಛೆಯ ಗುಣದ ಹೆಣ್ಣಿಗಿಂತ ಅಮೃತಮತಿಯು ಭಿನ್ನವಾಗಿ ಕಂಡುಬರುತ್ತಾಳೆ. ತೋಳ್ತೆಕ್ಕೆಯಲ್ಲಿದ್ದವಳಿಗೆ ಬದೆಗನ ಹಾಡು ಹಿಡಿಸಿತೆಂದರೆ ಅವನ ಮೇಲಿನ ಮೋಹವೊಂದೆ ಅವಳ ಗುರಿಯಲ್ಲ, ಬಾಳು ಕೂಡ ಮುಖ್ಯ ಎಂಬುದು ಸತ್ಯದ ಸಂಗತಿಯಾಗಿದೆ. ಇದೇ ಕವಿತೆಯ ಸಾಲುಗಳು ಮುಂದುವರೆದು ಹೆಣ್ಣಿನ ವಯಕ್ತಿಕ ಅಭಿವ್ಯಕ್ತಿ ವ್ಯಕ್ತಗೊಳ್ಳುತ್ತದೆ. ಇದನ್ನೇ ನಾವು ಹೆಣ್ತನದ ರೂಪದಲ್ಲಿ ಕಂಡುಕೊಳ್ಳುತ್ತೇವೆ. ಈ ಕವಿತೆ ಅಮೃತಮತಿಯ ವ್ಯಕ್ತಿತ್ವವನ್ನೇ ಮತ್ತೊಂದು ಮಗ್ಗುಲಿಗೆ ಕೊಂಡೊಯ್ಯುತ್ತದೆ. ಅಂದರೆ ಜನ್ನನ ಕಲ್ಪನಾ

ವಿಲಾಸಕ್ಕೆ ತೆರೆಬಿದ್ದು ಹೆಣ್ಣಿನ ವಾಸ್ತವ ಮತ್ತು ನೈಜತೆಯ ಬದುಕಿನ ಅನಾವರಣವನ್ನು ಮಾಡುತ್ತದೆ. ಪರಂಪರೆಯ ಮೌಲ್ಯಗಳ ಪ್ರತಿಬಿಂಬವನ್ನು ತೆರವುಗೊಳಿಸುತ್ತದೆ.

"ನಾವು ಜನ್ಮವೆತ್ತುತ್ತಲೇ ಇದ್ದೇವೆ
ಅಮೃತಮತಿಯರಾಗಿ
ನಿನ್ನಂಥವನ ಗದ್ದುಗೆಯ ರಾಣಿಯರಾಗಿ
ಅವನು ಬದಗನಾಗಿ ನಮಗುತ್ತರವಾಗಿ" ೧೬

ಈ ಸಾಲುಗಳನ್ನು ಓದುವಾಗ ಪ್ರತಿಭಾ ನಂದಕುಮಾರರ 'ನಾವು ಹುಡುಗಿಯರೇ ಹೀಗೆ' ಕವಿತೆ ನೆನಪಿಗೆ ಬರುತ್ತದೆ. ಅದೂ ಸ್ವಗತವೇ ಇದೂ ಸ್ವಗತವೇ. ಆದರೆ ಬದಲಾವಣೆಯ ಮಾದರಿಗಳು ಬೇರೆ. ಆಯ್ಕೆಯ ಅವಕಾಶಗಳು ಇಲ್ಲದಾಗ ಆಗುವ ಅನಾಹುತಗಳ ಪರಿಚಯವನ್ನು ಕಟ್ಟಿಕೊಡುತ್ತದೆ. 'ಮಯ್ಯ ವಾಸನೆಗೆ ಜನ್ಮಾಂತರಗಳಿಲ್ಲ' ಎಂಬ ಮಾತು ಎಲ್ಲ ಸಾಂಪ್ರದಾಯಿಕ ನಂಬಿಕೆಗಳನ್ನೂ ತಿರಸ್ಕರಿಸುವಂತದ್ದೇ. ಪ್ರಶ್ನಿಸುತ್ತಲೇ ಮುಂದು ವರೆಯುವ ಕವಿತೆ ಕೊನೆಗೆ ಉತ್ತರವನ್ನು ಕಂಡುಕೊಳ್ಳುವುದು ಬದಗನಲ್ಲಿ. ಇದನ್ನೇ ನಾವು ಸ್ತ್ರೀ ಸ್ವಾತಂತ್ರ್ಯವೆನ್ನುವುದು. ಮಹಿಳಾ ಕಾವ್ಯ ಚಿಂತನೆಗೆ ಅರಿವು ಮೂಡಿಸಿದ್ದು ಸಹ ಇದನ್ನೇ.

"ಜಾರುವ ಕಾಮನ ಬಿಲ್ಲಿನಡಿ
ಬೆಚ್ಚಗೆ ಮಲಗಿಕೊಂಡೇ ತೇಪೆ ಹಾಕುತ್ತಾ
ಚಳಿಗಾಲದ ಈ ದಿನಗಳಲಿ
ಹೌದು ನಾನು ಹೆಣ್ಣು
ನಾನೊಂದು ಸುಂದರ ಕೌದಿ" ೧೭

ಹೆಣ್ಣಿನ ಅಂತರಂಗದ ಭಾವನೆಗಳಿಗೆ ಹಿಡಿದ ಕನ್ನಡಿಯಂತೆ ಈ ಸಾಲುಗಳು ರಚಿತವಾಗಿವೆ. ಕ್ಷಣಿಕತೆಯನ್ನು ಪ್ರತಿಬಿಂಬಿಸುವ ಕವಿತೆಯಲ್ಲಿ ಹೆಣ್ಣಿನ ಅಂತರಂಗದ ಭಾವನೆಗಳು ವ್ಯಕ್ತಗೊಂಡಿವೆ. ಕೌದಿಯ ಚಿತ್ತಾರದಂತೆ ಅವಳ ಭಾವನೆಗಳೂ ವಿಸ್ತಾರವಾದವು. ಮಿಂಚಿ ಮರೆಯಾಗುವ ಕಾಮನ ಬಿಲ್ಲನ್ನು ನೋಡಿ ಆಸೆಪಡುವ ಹೆಣ್ಣು ಬದುಕಿನ ಬಗ್ಗೆ ಕನಸು ಕಾಣುವುದು ಸಹಜ, ಆದರೆ ನಾನು ಹೆಣ್ಣು ಎಂಬ ಮಾತು ಎಲ್ಲವನ್ನೂ ಗುಪ್ತವಾಗಿಡಲು ಬಯಸುತ್ತದೆ. ಇದು ಸ್ವಯಂ ಘೋಷಿತ ನಿರ್ಧಾರವಲ್ಲ, ಸುಂದರ ಕೌದಿಯ ಪ್ರತಿರೂಪವೇ ಈ ಸಮಾಜದ ನಿಲುವುಗಳೆಂಬುದನ್ನು ಕವಿತೆಯಲ್ಲಿ ನೋಡಬಹುದು. ಇದೇ ಹೆಣ್ತನದ ಸೂಕ್ಷ್ಮತೆಯ ಅರಿವು ಸಹ.

ಕವಿ,ವಿಮರ್ಶಕ ಹೆಚ್. ಎಸ್. ಶಿವಪ್ರಕಾಶ್‌ರವರು ಗುರುತಿಸುವಂತೆ,

"ವ್ಯಕ್ತಿ, ಅನುಭವ ಮತ್ತು ಭಾಷೆಯಲ್ಲಿ ಸಿಕ್ಕುವ ಒಂದು ಸಣ್ಣ ಸುಳುಹನ್ನು ಹಿಡಿದುಕೊಂಡು ಹಿಂದೆ ಮೈ ಮರೆಸಿಕೊಂಡಿರುವ ವಿಷಾದವನ್ನು ಹುಡುಕುತ್ತಾ ಹೋಗುತ್ತಾರಲ್ಲ ಅಂತಹ

ಭಾಷಿಕ ಪ್ರಯತ್ನಗಳೇ ನಮ್ಮನ್ನು ಗಾಢವಾಗಿ ಕಲಕುವ ಕವಿತೆಗಳು. ಮಿಕ್ಕವು ಅವುಗಳ ಕುಸುರಿ ಕಸುಬುಗಾರಿಕೆ ಏನಿದ್ದರೂ ಅಂದಂದೆ ಹುಟ್ಟುವುವು, ಅಂದಂದೆ ಸಾಯುವುವು. ಅರೆರೂಪ ತಳೆದ ಮೂಲ ಭಾವನೆಗಳು ಅಂಗೈಯಲ್ಲಿ ಹಿಡಿದು ನೋಡಿದ ಇಂದು ನಾಳೆಗಳು ಖಾಲಿ ಮಾತುಗಳ ಕಳಚೋಗರ ದಿಗಂಬರ ಮೌನಗಳು ಇಡೀ ನಿಮ್ಮ ಕವಿತೆಗಳು ಅಪೂರ್ಣ ಕಟ್ಟಡಗಳ ಇಟ್ಟಿಗೆಗಳು" [೧೮] ಎಂದಿದ್ದಾರೆ. ಈ ಹೇಳಿಕೆ ಹೆಚ್.ಎಲ್. ಪುಷ್ಪಾರವರ ಕಾವ್ಯ ಕೃಷಿಗೆ ತುಂಬಾ ಅರ್ಥಪೂರ್ಣವಾಗಿ ಒಪ್ಪುತ್ತವೆ ಎನ್ನಬಹುದು.

ತಳ ಸಮುದಾಯದ ನೋವಿಗೆ ದನಿಯಾದವರು ಬಿ.ಟಿ. ಲಲಿತಾನಾಯಕ್. ಅಕ್ಷರ ವಂಚಿತ ಸಮುದಾಯದಿಂದ ಬಂದರೂ, ಇಡೀ ಮಹಿಳೆಯರ ಬದುಕನ್ನು ತಮ್ಮ ಕಾವ್ಯದಲ್ಲಿ ಕ್ರೂಢೀಕರಿಸಿದರು. ದೇವದಾಸಿಯರ ಬದುಕನ್ನು ಕಂಡು ಅವರ ನೋವಿಗೆ ಮರುಗಿ ಕನಿಕರವನ್ನೀಯದೆ, ಸಮಾಜದ ಹೊಲಸಿನ ಅನಾವರಣ ಮಾಡುತ್ತ ಎಚ್ಚರಿಕೆಯನ್ನಿತ್ತವರು. 'ನಿತ್ಯ ಸುಮಂಗಲಿ' ಎಂದು ಕರೆಸಿಕೊಳ್ಳುವ ಹೆಣ್ಣಿನ ವ್ಯಥೆಯ ಬದುಕನ್ನು ಚಿತ್ರಿಸಿದವರು. 'ಬೇಡ ದಾಸಿಯಪಟ್ಟ' ಎಂಬ ಕವಿತೆಯಲ್ಲಿ ಕೇವಲ ದೇವದಾಸಿಯ ಚಿತ್ರಣ ಮಾತ್ರವಿರದೆ, ಹೆಣ್ಣನ್ನು ದಾಸಿಯನ್ನಾಗಿಸಿದವರನ್ನು ಪ್ರಶ್ನಿಸುತ್ತಲೇ ಎಚ್ಚರಿಸುತ್ತಾರೆ.

"ನಂದ ದೀವಿಗೆ ಹಿಡಿದ
ಕೆಂಪುಹಾದಿಯ ಪಯಣಿಗಳೇ
ಸುರ ನರ ದಾನವರಿಂದ
ದಾಳಿಗೀಡಾದವಳೇ
ನಿನ್ನ ಬದುಕಿನ ಸೂರ್ಯನುದಯವೆಂದು?" [೧೯]

ಬೆಳಕನ್ನು ಹಿಡಿದು ಹೊರಟವಳ ಬದುಕಲ್ಲಿ ಕತ್ತಲೆಯೇ ತುಂಬಿದ ರೀತಿಯನ್ನು ಕವಿತೆ ಚಿತ್ರಿಸಿದೆ. ರಕ್ಷಿಸುವವರೇ ಭಕ್ಷಕರಾದಾಗ ಹೆಣ್ಣು ದುರ್ಬಲಳಾಗುವ ಚಿತ್ರಣ ಇಲ್ಲಿದೆ. ಬದುಕಿನ ಸೂರ್ಯನನ್ನು ಶತಮಾನಗಳಿಂದಲೂ ಹೆಣ್ಣು ಹುಡುಕುತ್ತಲೇ ಇದ್ದಾಳೆ, ಆದರೆ ಅವನ ಸುಳಿವಿಲ್ಲ. ಇದೇ ಕವಿತೆ ಮುಂದುವರೆದು.

"ಕಿತ್ತೆಸೆದು ಬಿಡು ಕಂದಾಚಾರಿಗಳು ಕಟ್ಟಿರುವ
ಕಳಂಕದ ಹೆಜ್ಜೆ ವಜ್ಜೆಗಳನ್ನು
ಇಕ್ಕು ಮೂಲೆಗೆ
ಮೂಢರು ಮುಚ್ಚಿಕೊಳ್ಳುವಂತೆ" [೨೦]

ಎಂಬ ಸಾಲುಗಳಲ್ಲಿ ಪ್ರತಿಭಟನೆಯ ಎಚ್ಚರಿಕೆ ಇದೆ. ಇದು ಹೆಣ್ಣಿನ ಅಂತರಂಗವನ್ನು ತಟ್ಟಿ ಎಬ್ಬಿಸುವ ಸಾಲುಗಳಾಗಿ ಮೂಡಿ ಬಂದಿವೆ. ಇದೇ ಹೆಣ್ತನ. ಪರಂಪರೆಯ ಮೌಲ್ಯಗಳನ್ನು ಹೋರಾಟದ ಮೂಲಕ ಪ್ರತಿಭಟಿಸುವ ಪ್ರಯತ್ನ ಕವಯಿತ್ರಿಗಿದೆ. ಹೆಣ್ಣಿಗೆ ಮತ್ತೊಬ್ಬಳು ನೈತಿಕ ಸ್ಥೈರ್ಯವನ್ನು ತುಂಬುವ ರೀತಿಯಲ್ಲಿ ಕವಿತೆ ಬಿಂಬಿತವಾಗಿದೆ.

'ಕೇಳಿ ಮಾನಿನಿಯರೇ' ಎಂಬ ಕವನದಲ್ಲಿ ನಮಗೆ ನಾವೇ, ಯಾರೂ ನಮ್ಮ ಉದ್ಧಾರಕ್ಕೆ ಬರುವುದಿಲ್ಲ ಎಂಬುದನ್ನು ಇಡೀ ಸಮಾಜದ ಹೆಣ್ಣು ಮಕ್ಕಳಿಗೆ ಕರೆ ಕೊಟ್ಟ ರೀತಿಯಲ್ಲಿ ಕವಿತೆಯು ರಚಿತವಾಗಿದೆ.

"ಕೇಳಿ ಕೇಳಿ ಸೋದರಿಯರೇ
ತುಳಿತದಲ್ಲಿ ಸಿಲುಕಿ ನಾವು
ಹಲವು ತೆರದಿ, ಬವಣೆಯನ್ನು ಪಡುತಲಿರಲು
ಕಷ್ಟ ನಷ್ಟ ಹೀನತನವು
ನಮ್ಮ ಮುತ್ತಿ ಕಾಡುತಿರಲು
ನಮ್ಮ ಸಲುಹಲಿಕ್ಕೆ ಬೇರೆ
ಯಾರೂ ಬರರು ಕೇಳಿ ನಿಜದಿ॥" ೨೦

ನಮಗೆ ನಾವೇ ಶತ್ರುಗಳಾಗಬಾರದೆಂಬುದನ್ನು ಹೇಳುವಂತಿದೆ ಈ ಕವಿತೆ. ಸಮಾಜ ಹಾಕಿದ ಮೌಲ್ಯಗಳ ಮೇಲೆ ನಾವು ನಿಂತರೆ ಎಂದಿಗೂ ನಮಗೆ ಅದರಿಂದ ಅಳಿವೇ. ಆದ್ದರಿಂದ ತುಳಿತದಲ್ಲಿ ಸಿಕ್ಕಿದರೂ ನಾವು ಮತ್ತೆ ಪುಟಿದೇಳಬೇಕೆಂಬುದನ್ನು ಸೋದರಿಯರಿಗೆ ಕರೆ ಕೊಟ್ಟಂತೆ ತಿಳಿಸುತ್ತಾರೆ. ಸಮಾಜದಲ್ಲಿ ಅತ್ತೆ, ಸೊಸೆಯರೂ ಹೆಣ್ಣೆ, ಇವರಿಬ್ಬರೂ ಅರಿತರೆ ಮಾವನಿಗೆ ಜಾಗವೇ ಇರುವುದಿಲ್ಲ. ಅಂದರೆ ಗಂಡಿನ ದೌರ್ಜನ್ಯದಿಂದ ಮುಕ್ತಿ ಪಡೆಯಬೇಕಾದರೆ ಹೆಣ್ಣು ಮತ್ತೊಬ್ಬ ಹೆಣ್ಣನ್ನು ಆಧರಿಸಬೇಕೆಂಬುದು ಈ ಸಾಲುಗಳಲ್ಲಿ ಧ್ವನಿತವಾಗಿವೆ. ಜಾರೆಯನ್ನಾಗಿ ಮಾಡಿದ ನಮ್ಮನ್ನು ನಾವೇ ಜಾಣೆಯರೆಂದು ತೋರಿಸಬೇಕು. ಅದಕ್ಕೆಲ್ಲವೂ ಅಗತ್ಯವಾದದ್ದು ವೈಚಾರಿಕ ಬೆಳವಣಿಗೆ. ಆದ್ದರಿಂದ ಹೊಸ ದಿಗಂತದತ್ತ ಮುಖ ಮಾಡುವ ಕನಸನ್ನು ಕವಯಿತ್ರಿ ಆತ್ಮವಿಶ್ವಾಸದೊಂದಿಗೆ ಮೂಡಿಸಿದ್ದಾರೆ.

ಸ್ತ್ರೀ ದಾಸ್ಯವನ್ನೇ ವಿರೋಧಿಸುವ ರೀತಿಯಲ್ಲಿ ಲಲಿತಾರವರ 'ಅವ್ವನಿಗೆ ಅವಕಾಶ' ಎನ್ನುವ ಕವಿತೆ ಮೂಡಿ ಬಂದಿದೆ. ಸಮಾಜದ ವಾಸ್ತವ ಹಾಗೂ ಕಟು ಸತ್ಯವನ್ನು ಈ ಕವಿತೆ ಧ್ವನಿಸುತ್ತದೆ.

"ಹೆತ್ತವಳು ಅಷ್ಟೇ ಅವ್ವ
ಬರೆದವನು ಹಣೆಬರಹವ ಅಪ್ಪ
ಎಲ್ಲ ಅವ್ವಂದಿರಿಗೂ
ಅವರಪ್ಪ ಅಜ್ಜರದೇ ಬರಹ" ೨೨

ಪುರುಷನ ಸರ್ವಾಧಿಕಾರದ ಮನೋಭಾವನೆ ಹಾಗೂ ನಿಯಂತ್ರಕ ಗುಣಗಳನ್ನು ಈ ಕವಿತೆ ಹೇಳುತ್ತದೆ. ಸಮಾಜದ ಆಮೂಲಾಗ್ರ ಬದಲಾವಣೆ ಆಗಬೇಕೆಂದರೆ ಎಷ್ಟು ಶತಮಾನಗಳು ಕಾಯಬೇಕೋ? ತಲೆಮಾರುಗಳ ಬಿಗಿಹಿಡಿತ, ಮಾರ್ಗದರ್ಶನ ಎಲ್ಲವೂ ಗಂಡಿನದೆ. ಸೃಷ್ಟಿಕರ್ತನೇ ಬ್ರಹ್ಮನಾಗಿರುವಾಗ, ಹೆಣ್ಣಿನ ಬದುಕಿನ ಸೃಷ್ಟಿಕರ್ತ ಗಂಡಾಗಿರುವಾಗ ಅವಳ ಭಾವನೆಗೆ ಜಾಗವೆಲ್ಲಿದೆ? ಎಂಬುದನ್ನು ತಿಳಿಸುತ್ತದೆ. ಬರೆಯಲೇಬೇಕೆಂಬ ಹಟದಿಂದ

ಹುಟ್ಟಿದವಲ್ಲ. ಮಹಿಳಾ ಕಾವ್ಯ ಬದುಕಿನ ಭಾವನೆಗಳ ಬೆವರಲ್ಲಿ ಮುಟಿದಂತವು. ಆದ್ದರಿಂದಲೇ ಈ ಕಾವ್ಯ ಹೆಣ್ಣಿಗೆ ಆಪ್ತತೆ ತಂದು ಕೊಡುವಲ್ಲಿ ಯಶಸ್ವಿಯೂ ಆಗಿದೆ. ಸೂಕ್ಷ್ಮವಾಗಿ ಗಮನಿಸಿದರೆ, ಭಾರತದ ಮಟ್ಟಿಗೆ ಸಾಹಿತ್ಯದಲ್ಲಿ ಸ್ತ್ರೀವಾದಿ ಮಾರ್ಗವಿರಬೇಕು. ಆದರೆ ಅದರ ಹಿಂದೆ ನಿರ್ಮಾತೃಗಳಾಗಿ ಪುರುಷರು ಎಲ್ಲಾ ವಾದಗಳ ಹರಿಕಾರರಾಗಿ ಇರಬೇಕೆಂಬ ಹಂಬಲವೂ ಇದೆ. ಇದೂ ಸಹ ರೂಪಿಸುವಿಕೆಯೇ ತಾನೆ?

ಷರೀಫಾರವರ ಕವಿತೆಗಳು ಕೇವಲ ಸಮುದಾಯದ ಕಲ್ಪನೆಯಲ್ಲಿ ಮೂಡಿಬಂದವುಗಳಲ್ಲ. ಇಲ್ಲಿ ಒಟ್ಟಾರೆ ಮಹಿಳಾ ಬದುಕನ್ನು ಕಟ್ಟಿಕೊಡುವ ರೀತಿಯಲ್ಲಿ ಉದಯಿಸಿದಂತವುಗಳು.

"ನಾನವನ ಅರ್ಧಾಂಗಿ
ಅವನ ಯಾವ ಅಂಗದ ಮೇಲೆ
ನನಗೆ ಅಧಿಕಾರವಿದೆ ಹೇಳು?
ನನ್ನ ನಗು, ಅಳುವಿನ
ಮೇಲೆಯೂ ಅವನದೇ ಅಧಿಕಾರ" [೨೩]

ಶೋಷಣೆಯ ನೇರ ಮುಖ ಇಲ್ಲಿದೆ. ಗಂಡಿನ ಅಧಿಕಾರ ಕೇಂದ್ರಿತ ಮುಖವಾಡ ಕಳಚುವ ಪ್ರಯತ್ನವನ್ನು ಈ ಕವಿತೆ ಮಾಡುತ್ತದೆ. ಜೈವಿಕ ಕ್ರಿಯೆಯೇ ಮುಖ್ಯವಾದಾಗ ಅಂತರಂಗದ ಮಾತುಗಳು ಕೊಲೆಯಾಗುತ್ತವೆ ಎಂಬುದು ಈ ಕವಿತೆಯಲ್ಲಡಗಿದೆ. ಹಡೆದವ್ವನಿಗೆ ಪ್ರಶ್ನಿಸುವ ಮಗಳು ತಾಯಿಯ ಹಿಂದೆ ನಡೆದ ಪುರುಷ ಕ್ರೌರ್ಯದ ಮಸಲತ್ತನ್ನು ಅನಾವರಣಗೊಳಿಸುತ್ತಾರೆ. ಏಕೆಂದರೆ ಅವಳದೂ ಇದೇ ಕಥೆ. ಕಥೆ ಬೇರೆಯಾದರೂ ಹೆಣ್ಣಿನ ವ್ಯಥೆಯೊಂದೆ ಎಂಬುದನ್ನು ಕವಿತೆ ನೇರವಾಗಿ ಧ್ವನಿಸುತ್ತದೆ. ಅರ್ಧನಾರೀಶ್ವರ ಶಿವ. ಆದರೆ ಗಂಡಾದವನು ಹೆಣ್ಣಾಗ ಬಯಸಿದನೆಂದರೆ ಅವನಿಗೆ ಹೆಣ್ತನದ ಮಹತ್ವ ಗೊತ್ತು. ಆದರೆ ಹೆಣ್ಣನ್ನೇ ಮೌಲ್ಯಗಳು ಅರ್ಧಾಂಗಿಯಾಗ ಬಯಸಿದ್ದು ಸಹ ಅಧಿಕಾರ ಕೇಂದ್ರಿತ ನೆಲೆಯಲ್ಲಿಯೇ ಎಂಬುದರ ಅರಿವಾಗುತ್ತದೆ. ಮಾತು ಮತ್ತು ಮೌನ ಬರವಣಿಗೆ ಸಾಧನಗಳು. ಮೌನ ಬರವಣಿಗೆ ರೂಪ ಪಡೆದಾಗ ಮಾತನಾಡುವವರ ಸಂಖ್ಯೆಯೂ ಹೆಚ್ಚುತ್ತದೆ.

"ಕಣ್ಣೀರ ಹನಿಗಳು
ಹೃದಯದಾಳಕ್ಕಿಳಿದು
ಘನವಾಗುತ್ತಾ ಹೋದಂತೆ
ಮಾತುಗಳು
ಮೌನವಾಗುತ್ತಾ ಹೋದವು
ಈಗ ಜನ ಕೇಳುತ್ತಿದ್ದಾರೆ
ನಿನ್ನ ಕಥೆ ಏನೆಂದು?" [೨೪]

ಮತ್ತದೇ ಸಮಾಜದ ಪ್ರಶ್ನೆ ಮತ್ತದೇ ಮೌನ. ಹೆಣ್ಣಿನ ಮೌನ ಬದುಕಿಗೆ ಹಿಡಿದ ಕನ್ನಡಿಯಂತೆ. ಬದುಕಿನ ವಿಷಾದದ ಜೀವಂತ ಚಿತ್ರಣವನ್ನು ಈ ಕವಿತೆ ಚಿತ್ರಿಸುತ್ತದೆ. ಈ ಸಾಲುಗಳಿಗೆ ಪೂರಕವಾಗಿ ದು.ಸರಸ್ವತಿಯವರ 'ಹೂ ಅರಳುವ ಸದ್ದು' ಕವಿತೆ ಮಾತನಾಡುತ್ತದೆ.

"ಸದ್ದೆ ಇಲ್ಲ
ತಾಳ – ತಂತಿಗಳಿಲ್ಲ
ಕಾಗುಣಿತ ವ್ಯಾಕರಣಗಳ ಬಂಧವಿಲ್ಲ
ಬರಿ ಆಲಾಪ
ಹಿಡಿಯಲು ಅವಳು
ಉಸಿರಿಡಿದು
ಕಲ್ಲ ಹೂವಾದಳು
ಹೂ ಅರಳಿದ ಸದ್ದು / ಅವನ ತಟ್ಟಿತೆ?" ೨೫

ಇಲ್ಲಿ ಒಂದು ಸಮಗ್ರತೆ ಇದೆ. ಆದರೆ ಕವಿತೆ ಕಟ್ಟುವಲ್ಲಿನ ಸಾಲುಗಳಿಗೆ ಸಮಗ್ರತೆಯ ಅವಶ್ಯಕತೆಯಿಲ್ಲ. ಹೇಳುವ ಕ್ರಮಕ್ಕಿಂತ ಬರವಣಿಗೆಯಲ್ಲಿನ ಅರ್ಥವಂತಿಕೆ ಅರ್ಥೈಸಿಕೊಂಡರೆ ಅದರ ಒಳಗಿನ ವಿಚಾರವಂತಿಕೆ ಮೂರ್ತ ರೂಪ ಪಡೆಯುತ್ತದೆಂಬುದನ್ನು ಕಂಡುಕೊಂಡಿದೆ. ಹೆಣ್ಣಿನ ಹೃದಯ ಮತ್ತು ಮನಸ್ಸಿನ ಸೂಕ್ಷ್ಮತೆ ಕವಿತೆಯಲ್ಲಡಗಿದೆ. 'ಆಮೆ ಆಗಿದ್ದರೆ' ಕವಿತೆ ಗಂಡು ಹೆಣ್ಣಿನ ರೂಪಕಗಳನ್ನು ಕಟ್ಟಿಕೊಡುತ್ತದೆ.

"ನಿಲ್ಲದ ಧರಣಿ
ಚಲನೆ ಎಂಬೊದಾರಿಗೆ
ಚಾಲನೆ ನೀಡಿದವಳು
ನಾ ಹೆಂಗೂಸಾಗಿದ್ದವಳು
ಚಿಪ್ಪಿಲ್ಲದೆ
ವೇಗದ ಹೊಡೆತಕ್ಕೆ
ಸಿಕ್ಕಿ ಮುಕ್ಕಾದವಳು" ೨೬

ಹೆಣ್ಣನ್ನು ಅಸಹಾಯಕಳನ್ನಾಗಿ ಮಾಡಿದ್ದರ ಪ್ರತಿಬಿಂಬ ಇಲ್ಲಿದೆ. ಸೋತ ಮೊಲದ ಕಥೆಯೇ ಹೆಚ್ಚಿನದಾಗುತ್ತದೆಯೇ ವಿನಃ ಸಮಾಧಾನದಿಂದ ಸಾಧನೆ ಮಾಡಿದ ಆಮೆ ಇಲ್ಲಿ ಪಾಪದ ಪ್ರಾಣಿ. ಕವಿತೆ ಆಮೆಯ ಸೋಲನ್ನು ಎಂದಿಗೂ ಒಪ್ಪಿಕೊಳ್ಳುವುದಿಲ್ಲ. ಸೋಲು ಎಂದರೆ ಚಲನೆಯ ವೇಗದ ಸೋಲೇ ಹೊರತು ಇಡೀ ಸಮೂಹದ್ದಲ್ಲ ಎಂಬುದು ಇಲ್ಲಿಯ ಧ್ವನಿತ. ಆಮೆಗೆ ರಕ್ಷಾ ಕವಚವಿದೆ ಆದರೆ ಇಲ್ಲಿನ ಹೆಣ್ಣಿಗಿಲ್ಲ. ಹೆಂಗಸು ಮತ್ತು ಹೆಂಗೂಸು ಎರಡೂ ಅಮಾಯಕ ಮತ್ತು ಅಸಹಾಯಕತೆಯ ಪ್ರತಿರೂಪವೆ, ಆದರೂ ಆತ್ಮವಿಶ್ವಾಸಕ್ಕೆ ಎಲ್ಲಿಯೂ ಕುಂದು ಬಂದಿಲ್ಲವೆಂಬುದನ್ನು ಈ ಕವಿತೆ ಬಿಂಬಿಸಿದೆ.

ಹೆಣ್ಣಿನ ಅಂತರಂಗದ ತೂಗುಯ್ಯಾಲೆಯ ಪ್ರತಿಬಿಂಬವೆಂಬಂತೆ 'ಬಿಳಲುಗಳು' ಕವಿತೆ ರಚಿತವಾಗಿದೆ. ಬದುಕು ಮತ್ತು ಹೊಂದಾಣಿಕೆಗಳು ಸಮಾನವಾಗಿದ್ದರೆ ಜೀವನ ಸುಗಮ ಸಮಾಜದಲ್ಲಿ ಅವಕಾಶ ವಂಚಿತಳಾದ ಹೆಣ್ಣಿನ ಜೀವನದ ಬಹುಮುಖತೆಯ ಬಯಕೆಯನ್ನು ಈ ಕವಿತೆಯಲ್ಲಿ ಕಾಣುತ್ತೇವೆ.

"ಮುಗಿಲಿಗೆ ಏರದ / ಮಣ್ಣಿಗೆ ಊರದ
ಬಿಳಲುಗಳ / ಅಳಲು
ತೂಗುತ್ತಿವೆ / ಸಾಗುವದಾರಿಗೆ
ಬಿಡುಗಡೆಯ ಬಾಗಿಲಿಗೆ / ಕಾದು"[೨]

ಆಲದ ಮರವೆಂದರೆ ಒಂದು ಕಲ್ಪನೆ ಬೃಹತ್ತಾದದ್ದೆಂದು. ಸಮಾಜವೆಂಬ ಆಲದ ಮರ ಹೆಣ್ಣಿನ ಬದುಕನ್ನು ಹೇಗೆ ಹಿಡಿದಿಟ್ಟಿದೆ ಎಂಬುದನ್ನು ಕವಿತೆ ತಿಳಿಸುತ್ತದೆ. ಸ್ವಯಂ ನಿರ್ಧಾರವನ್ನು ತೆಗೆದುಕೊಳ್ಳಲಾಗದ ಹೆಣ್ಣಿನ ನೋವಿನ ವ್ಯಥೆ ಇಲ್ಲಿದೆ. ಹೆಣ್ಣಿನ ಬದುಕಿನ ಸೂಕ್ಷ್ಮತೆಯನ್ನು ಇವರ ಪ್ರತಿಯೊಂದು ಕವಿತೆ ಸುಧೀರ್ಘವಾಗಿ ಚರ್ಚಿಸುತ್ತದೆ.

೪.೫ ವಿಶಿಷ್ಟ ಅಭಿವ್ಯಕ್ತಿಯ ನೆಲೆಗಳು

ಮಹಿಳಾ ಸಾಹಿತ್ಯ ಕುರಿತು ಚರ್ಚಿಸುವಾಗ ಮುಖ್ಯವಾಗಿ ಮಹಿಳಾ ಕಾವ್ಯವು ನೇರವಾದ ಮಾಧ್ಯಮವಾಗಿ ಕಂಡುಬರುತ್ತದೆ. ಏಕೆಂದರೆ ವಾಚ್ಯ ರೂಪದಲ್ಲಿ ಆಲೋಚನೆಗೊಂಡ ಕಾವ್ಯವು ಬರಹ ರೂಪಗೊಂಡು ಹೊಸ ಪ್ರಪಂಚವನ್ನೇ ಸೃಷ್ಠಿ ಮಾಡಬಲ್ಲವು. ಪ್ರತಿಯೊಬ್ಬ ಕವಯಿತ್ರಿಯಲ್ಲೂ ನಿರಂತವಾಗಿ ಜಾಗೃತ ಅರಿವು ಮತ್ತು ಜಾಗೃತ ಅಭಿವ್ಯಕ್ತಿತನಗಳು ಒಟ್ಟಿಗೆ ಕೆಲಸ ಮಾಡುತ್ತವೆ. ಅಂದರೆ ಸಾಮಾಜಿಕವಾಗಿ ಕಾಡುವ ಅತ್ಯಾಚಾರ, ವೇಶ್ಯಾವಾಟಿಕೆ ಮುಂತಾದುವುಗಳ ವಿರುದ್ಧ ಹೋರಾಡುವ ಕ್ರಮ. ಆಲೋಚನೆಯಲ್ಲಿ ಸಾಧ್ಯವಾದದ್ದು ಬರವಣಿಗೆಯಲ್ಲಿ ಬೇರೆಯದೇ ವಿನ್ಯಾಸ ಪಡೆದುಕೊಳ್ಳುತ್ತದೆ. ವ್ಯಕ್ತಿಗತ ನೆಲೆಯಲ್ಲಿ ರೂಪುಗೊಂಡ ಮಹಿಳಾ ಕಾವ್ಯ ಸಾಮಾಜಿಕವಾಗಿ ದಟ್ಟ ಪ್ರಭಾವಕ್ಕೊಳಪಟ್ಟಿರುವುದು ಗಮನಾರ್ಹ ಸಂಗತಿ.

ಮಹಿಳಾ ಕಾವ್ಯದಲ್ಲಿ ಮಹಿಳೆಯರ ಆಶೆಯಗಳೇ ಪ್ರಧಾನವಾಗಿರುವುದಿಲ್ಲ. ಅಂದರೆ ಹೆಣ್ಣಿನ ಪ್ರತಿನಿಧೀಕರಣದ ತಾತ್ವಿಕ ಮಹತ್ವ ಮಹಿಳಾ ಕಾವ್ಯದಲ್ಲಿದೆ. ಸಮಾಜದ ಬಗ್ಗೆ ತಿರಸ್ಕಾರವಾಗಲೀ, ಗಂಡಿನ ಪ್ರಾಧಾನ್ಯತೆಯನ್ನು ಖಂಡಿಸುವುದಾಗಲೀ ಅಲ್ಲ. ಸಮಾಜದ ಮುಖೇನ ಗಂಡು ಹೆಣ್ಣಿನ ಬಗ್ಗೆ ತಳೆದಿರುವ ಅನಾದರವನ್ನು ತಿಳಿಸುವ ಪ್ರಯತ್ನವೇ ಮಹಿಳಾ ಕಾವ್ಯದ ಆಶಯ. ಇದು ಸಾಧ್ಯವಾದದ್ದು ಸ್ತ್ರೀವಾದದ ಧೋರಣೆಯಿಂದಲೇ. ಅಂದರೆ ಮಹಿಳೆಯ ಸ್ಥಾನ ಗಂಡಿನ ಅಹಮಿಕೆಯಲ್ಲಿ ಹೇಗೆ ಉಡುಗಿ ಹೋಯಿತು? ಅವಳಿಗೆ ಸ್ವಂತಿಕೆ ಇಲ್ಲವೆ? ಎಂಬ ಪ್ರಶ್ನೆಗಳಿಂದಲೇ ತನ್ನ ತನವನ್ನು ತೋರಿಸುವ, ತನ್ನ ಅಸ್ತಿತ್ವವನ್ನು ಬಿಂಬಿಸುವ ಅಚಲ ಪ್ರಯತ್ನವೇ ಸ್ತ್ರೀವಾದದ ಮೊದಲ ಮೆಟ್ಟಿಲು. ಇದನ್ನು ಆಧುನಿಕ ಕನ್ನಡ ಮಹಿಳಾ ಕಾವ್ಯ ರೂಢಿಸಿಕೊಂಡಿದೆ.

ಎನ್.ಗಾಯತ್ರಿಯವರು ಹೇಳುವಂತೆ,

"ಸ್ತ್ರೀವಾದವೆನ್ನುವುದು ಬೌದ್ಧಿಕ ಕಸರತ್ತು ಏನಲ್ಲ. ಸ್ವಾಭಿಮಾನಿಯಾದ ಹೆಣ್ಣೊಬ್ಬಳು ತನ್ನ ಘನತೆ ಗೌರವದ ಬಗ್ಗೆ ಜಾಗೃತಳಾಗಿ ತನ್ನ ಸುತ್ತಣ ಪರಿಸರದಿಂದಲೂ ಅಂತಹುದೇ ಪ್ರತಿಕ್ರಿಯೆಯನ್ನು ಬಯಸುವಂತಾಗಬಹುದಾಗಿದೆ. ಪ್ರಜ್ಞಾವಂತ ಪುರುಷರು, ಸ್ತ್ರೀಯರಿಗೆ ತನ್ನ ಘನತೆ ಗೌರವಗಳಿಂದ ಅವರನ್ನು ಕಾಣುವುದು ಸ್ತ್ರೀವಾದವಾಗಿದೆ" ೨೮.

ಅಂದರೆ ಪುರುಷ ಸಮಾಜದಿಂದ ನಿರೀಕ್ಷೆಯ ಪ್ರತಿಫಲವನ್ನು ಬಯಸುವಂತಹ ಮಾತುಗಳಿವು. ಅದು ಅಗತ್ಯವೂ ಹೌದು. ಕನ್ನಡದ ಮೊದಲ ವಚನಕಾರ್ತಿಯಾದ ಅಕ್ಕನ ಜೊತೆಗೆ ಕೆಳ ಮಧ್ಯಮ ವರ್ಗದ ಹೆಣ್ಣುಮಕ್ಕಳ ಬಾಯಿ ತೆರೆಯುವಂತೆ ಮಾಡಿದ್ದು ವಚನ ಚಳುವಳಿ. ಕೆಳ ವರ್ಗದ ವಚನಕಾರ್ತಿಯರೆಂದು ಕರೆದರೂ ಇಲ್ಲಿ ಜಾತಿಗಿಂತ ಅವರಿಗೆ ಸಿಕ್ಕ ಮನ್ನಣೆ ಬಹುಮುಖ್ಯವಾದುದು. ಲಿಂಗ ಸಮಾನತೆ ಕುರಿತು ಚರ್ಚೆ ನಡೆದದ್ದು ಇಲ್ಲಿಯೇ. ಬಸವಣ್ಣ ೧೨ನೇ ಶತಮಾನದಲ್ಲಿ ಮಾತಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದರಿಂದಲೇ, ಶತಮಾನಗಳಿಂದ ಮೂಕವಾಗಿದ್ದ ಜಾತಿ ಸಂಕುಲದಲ್ಲೇ ನಲುಗಿದ್ದ ಜನತೆ ಮಾತಾಡುವಂತಾಯಿತು. ಆ ಮೂಲಕವೇ ಅಭಿವ್ಯಕ್ತಿಗೆ ಅವಕಾಶ ದೊರೆಯಿತು. ಇದನ್ನೇ ಕಾವ್ಯ ಮಾಧ್ಯಮ ಮುಖ್ಯ ಆಶಯವನ್ನಾಗಿ ಪರಿಗಣಿಸಿದ್ದು ಸಹ.

ಅಕ್ಕಮಹಾದೇವಿಯ ಈ ವಚನದಲ್ಲಿ ಹೆಣ್ತನದ ದಿಟ್ಟ ಪ್ರತಿಬಿಂಬವನ್ನು ನಾವು ದಟ್ಟವಾಗಿ ಕಾಣಬಹುದಾಗಿದೆ.

> "ಅಯ್ಯ, ನೀ ಕೇಳಿದರೆ ಕೇಳು, ಕೇಳದಿದ್ದರೆ ಮಾಣು,
> ನಾನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ
> ಅಯ್ಯಾ, ನೀನೊಲಿದರೆ ಒಲಿ, ಒಲಿಯದಿದ್ದರೆ ಮಾಣು,
> ನಾನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯ!
> ಅಯ್ಯ, ನೀ ಮೆಚ್ಚಿದರೆ ಮೆಚ್ಚು. ಮೆಚ್ಚದಿದ್ದರೆ ಮಾಣು
> ನಾನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯ
> ಚನ್ನಮಲ್ಲಿಕಾರ್ಜುನಯ್ಯ ನಾ ನಿಮ್ಮ ಪೂಜಿಸಿ
> ಹರುಷದಲೋಲಾಡುವೆನಯ್ಯ" [೨೯]

ಇಲ್ಲಿ ಲೌಕಿಕತೆಗಿಂತ ಅಲೌಕಿಕತೆಯ ಕಡೆಗಿನ ಒಲವು ತೀವ್ರತರವಾದುದು. ಆದರೂ ಸಮಾಜವನ್ನು ಧಿಕ್ಕರಿಸಿ ತನ್ನ ನಡೆಗೆ ತಾನು ಹೊರಟದ್ದು ಸವಾಲೇ ಸರಿ ಇದನ್ನು ಸಾಧಿಸಿದ್ದು ಅಕ್ಕಮಹಾದೇವಿ. ಇದು ಹೆಣ್ತನದ ದಿಟ್ಟತೆಯ ಪ್ರತಿಬಿಂಬ ಎನ್ನಬಹುದು. ಕಾವ್ಯದ ಅಧ್ಯಯನಕ್ಕೆ ತೊಡಗಿದಂತೆಲ್ಲಾ ಮಹಿಳಾ ಕಾವ್ಯವು ಹೊಸ ಮಾದರಿಯನ್ನು ಕಟ್ಟಿಕೊಡುತ್ತದೆ. ಸಾಹಿತ್ಯದಲ್ಲಿ ಪುರುಷ ನಿರ್ಮಿತ ಸ್ತ್ರೀ ದೃಷ್ಟಿಕೋನ ಬಹಳ ವ್ಯಾಪಕವಾದುದು. ಆದರೂ ಮಹಿಳಾ ಸಾಹಿತಿಗಳಿಗೆ ಹಿಂದಿನ ಸಾಹಿತ್ಯದಲ್ಲಿ ರಚಿತವಾದ ಪಾತ್ರಗಳಲ್ಲಿರುವ

ಸ್ತ್ರೀ ಪಾತ್ರದ ಪ್ರತಿನಿಧೀಕರಣವೇನು? ಪಾತ್ರಗಳು ವ್ಯಾಪಕವಾಗಿದ್ದರೂ ಅದು ಬಹುಮುಖತೆಯಿಂದ ಕೂಡಿದೆಯೆ? ಎಂಬ ಪ್ರಶ್ನೆಗಳು ಸಹಜವಾಗಿ ಮೂಡಿತು. ಆ ಸಂದರ್ಭದಲ್ಲಿ ಸ್ತ್ರೀವಾದಿ ಚಿಂತನೆಯ ಮರು ಓದನ್ನು, ಹೊಸ ದೃಷ್ಟಿಕೋನವನ್ನು ಸಾಹಿತ್ಯದ ಮುಖಾಂತರ ಕಂಡುಕೊಳ್ಳಲು ಸಾಧ್ಯವಾಯಿತು. ಅಂದರೆ ಸಾಹಿತ್ಯದ ಮುಖಾಂತರ ಹೆಣ್ಣು ಜಗತ್ತನ್ನು ಹೇಗೆ ಕಂಡಿದ್ದಾಳೆ? ಹಾಗೂ ಅವಳ ಜಗತ್ತಿನಲ್ಲಿ ಹೆಣ್ತನದ ಮಾದರಿಯ ಮಹತ್ವವೇನು? ಎಂದು ಹುಡುಕುವ ಪ್ರಯತ್ನ ನಡೆದವು. ಇದು ಹೆಚ್ಚು ಸಾಧ್ಯವಾದುದು ಕಾವ್ಯದ ಮುಖಾಂತರವೆ.

ಆಧುನಿಕ ಆಲೋಚನೆಗಳಿಂದ ಆಡಂಬರದ, ವೈಭವೀಕರಣದ ಪಾತ್ರಗಳನ್ನು ವಾಸ್ತವಕ್ಕೆ ತಂದು ನೋಡುವ ಪ್ರಯತ್ನ ಹೆಚ್ಚು ನಡೆದದ್ದು ಮಹಿಳಾ ಕಾವ್ಯದಲ್ಲಿ. ದ್ರೌಪದಿಯ ದಿಟ್ಟತನ, ಸೀತೆಯ ಅಸಹಾಯಕತೆ, ಅಮೃತಮತಿಯ ಆಯ್ಕೆಯ ಸ್ವಾತಂತ್ರ್ಯ, ಊರ್ಮಿಳೆಯ ನಿಷ್ಠೆ, ಅಕ್ಕನ ವ್ಯಕ್ತಿತ್ವ ಮತ್ತು ಮುಕ್ತತೆ ಇವೆಲ್ಲವೂ ಪುನರ್ ವಿಮರ್ಶೆ ಮತ್ತು ವ್ಯಾಖ್ಯಾನಗೊಂಡದ್ದು ಆಧುನಿಕ ಮಹಿಳಾ ಕಾವ್ಯದಲ್ಲಿಯೆ.

ಪಿತೃ ಸಂಸ್ಕೃತಿಯ ಪ್ರಧಾನತೆಯನ್ನು ಮಹಿಳಾ ಕಾವ್ಯ ಪ್ರಶ್ನಿಸಿದೆ. ಭೋಗಕ್ಕೆ ಬಳಕೆಯಾಗುವ ವಸ್ತು ಎಂಬಂತೆ ಹೆಣ್ಣನ್ನು ಕಂಡ ಪುರುಷ ಪ್ರಧಾನ ಸಮಾಜಕ್ಕೆ ಒಮ್ಮುಖ ಬೆಳವಣಿಗೆಯ ಗಂಡಿನ ಪ್ರವೃತ್ತಿಯನ್ನು ಇಂದು ಆಧುನಿಕ ಮಹಿಳಾ ಕಾವ್ಯ ವಿರೋಧಿಸುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯ ಸಿದ್ಧ ಮಾದರಿಗಳಿಗೆ ಒಮ್ಮೆಲೇ ಸಿಡಿದೇಳುವ ತುಡಿತ ಅವಳಲ್ಲಿ ಉಂಟಾದಾಗಲೇ ಬರವಣಿಗೆ ಎಂಬುದು ಒಂದು ಜಾಗೃತ ಪ್ರಜ್ಞೆಯ ಆಯುಧವಾಯಿತು. ಇದು ಕಾವ್ಯದ ರೂಪಾಂತರವೂ ಹೌದು.

ಹೆಣ್ತನದ ಮಹತ್ವ ಮತ್ತು ಕಾವ್ಯದ ಸ್ಪಷ್ಟತೆಯಲ್ಲಿ ಅದು ಬೆಳಕು ಕಂಡ ಬಗೆಯನ್ನು **ಹೇಮಾ ಪಟ್ಟಣ ಶೆಟ್ಟಿಯವರು** ಈ ರೀತಿ ಹೇಳುತ್ತಾರೆ.

"ಈಗ ಹೊರಗಿನ ಸಿದ್ಧ ಮಾದರಿಗಳ ಪ್ರಭಾವದಿಂದ ಮುಕ್ತವಾಗಿ ಮಹಿಳೆಯ ತುಡಿತಗಳಿಂದಲೇ ಅವಳ ಸಾಹಿತ್ಯ ಸ್ಪಷ್ಟವಾಗಿ ನಿರ್ದೇಶಿಸಲ್ಪಡುವ ದಿನಗಳು ಆರಂಭವಾಗಿವೆ. ಆದುದರಿಂದಲೇ ಯಾವುದು ಹಲವು ವರ್ಷಗಳ ಹಿಂದಿನ ಮಹಿಳಾ ಬರಹಗಾರರಿಗೆ ಕಥಾ ಮಾಧ್ಯಮದ ಸಂದರ್ಭದಲ್ಲಿ ಸಾಧ್ಯವಾಗಲಿಲ್ಲವೋ ಅದು ಇಂದಿನ ಕವಯಿತ್ರಿಯರಿಗೆ ಸಾಧ್ಯವಾಗಿದೆ"[೨೦] ಎಂಬ ಮಾತು ಅಕ್ಷರಶಃ ಸತ್ಯವಾದುದು.

ಪುರಾಣಗಳಲ್ಲಿ ಚಿತ್ರಿತವಾದ ಸ್ತ್ರೀ ಪಾತ್ರಗಳು ಮಹಿಳಾ ಕಾವ್ಯದಲ್ಲಿ ಪುನರ್ ವಿಮರ್ಶೆಗೊಂಡಿವೆ. ಹೆಣ್ತನದ ಅರಿವು ಗಂಡಿನ ಅಧಿಕಾರದ ಕಾವಿನಲ್ಲಿ ಕರಗುವ ಕರಾಳತನವನ್ನು ಹಲವು ಕವಯಿತ್ರಿಯರು ಸ್ತ್ರೀಯಾತ್ಮಕ ದೃಷ್ಟಿಕೋನದಿಂದ ಮತ್ತೆ ಕಟ್ಟಿದ್ದಾರೆ.

"ಏ ದುರ್ಗೆ ನಿನ್ನ ನೆನೆಸಿಕೊಂಡರೆ ಅಸೂಯೆಯಾಗುತ್ತದೆ.
ನೀನೊಬ್ಬಳೇ ಆದಿ ನಿನ್ನ ನಂತರದವರೆಲ್ಲ

ಮಾಯೆಯಾಗಿ, ಮೋಹವಾಗಿ, ಮೋಹಿನಿಯಾಗಿ
ಕೊನೆಗೆ ಬರಿ ಮಾನಿನಿಯರಾಗಿ
ಈಗೆಲ್ಲ ಷಂಡರಿಗೂ ಹೆದರುವ ಮಂಕುಗಳಾಗಿ
ದುರ್ಗೆ ನಿನ್ನಂಶವೆಲ್ಲೂ ಇಲ್ಲ
ನಮ್ಮ ಕೈಯಲ್ಲಿ ಆಯುಧಗಳಿಲ್ಲ"[೩೧]

ಕಲ್ಪಿತ, ವೈಭವೀಕೃತ ಪಾತ್ರಗಳಿಗೆ ಆಯುಧ ಕೊಡುವ ಪುರುಷ ಪ್ರೇರಿತ ಸಮಾಜ, ಜೀವಂತ ಹೆಣ್ಣನ್ನು ಅಡುಗೆ ಮನೆಯ ಬಂಧಿಯಾಗಿಸಿದ್ದು ಒಂದು ಹುನ್ನಾರವೇ ಆಗಿದೆ. ಷಂಡ ಎನ್ನುವ ಪದ ಗಂಡಿನ ಬಗ್ಗೆ ಆಕ್ರೋಶ ಅಥವಾ ಬೈಗುಳದ ಪದವಾಗಿರದೆ, ಸೋಗಲಾಡಿತನದ, ಗಂಡಿನ ಮುಖವಾಡವನ್ನು ಕಳಚುವ ಪ್ರಯತ್ನ ಇಲ್ಲಿದೆ. ಇದರ ಜೊತೆಗೆ ಹೆಣ್ಣು ತನ್ನ ಪೂರ್ವಾಪರ ಪರಂಪರೆಯನ್ನು ಕೆದಕುವ ಪ್ರಯತ್ನವಿದೆ.

ಹೆಣ್ಣನ್ನು ಭೋಗದ ವಸ್ತುವನ್ನಾಗಿ ಮಾಡಿದ ಪುರುಷನ ವಿರುದ್ಧ ಸಿಡಿದೇಳುವ ಕಾವ್ಯ ನಮ್ಮಲ್ಲಿ ಹಲವಿವೆ. ತನ್ನ ಲೈಂಗಿಕ ತೃಷೆಗೆ, ಕಾಮದಾಟಕ್ಕೆ ಹೆಣ್ಣನ್ನು ಬಳಸಿದ ಪುರುಷನಿಗೆ ನೇರವಾಗಿ ಛೀಮಾರಿ ಹಾಕಿ ಪ್ರತಿಭಟಿಸುವ ಪ್ರಯತ್ನವು ಗಮನಾರ್ಹವಾಗಿದೆ.

"ನಮ್ಮಲ್ಲಿ ಮನುಷ್ಯರಿರುವುದೇ ಹೀಗೆ
ನೆನಪಾದರೇ ಮೈ ಜುಮ್ಮೆನ್ನುವ ಹಾಗೆ
ನೆರಮನೆಗೆ ಬೆಂಕಿಬಿದ್ದರೆ । ಮೈ ಕಾಯಿಸಿ ಬೀಡಿ ಹಚ್ಚೋ
ಕೇಡಿಗರು । ಉಂಡ ಗಂಗಾಳದಲ್ಲೇ ಉಚ್ಚೆಹೊಯ್ದು
ಭಂಡತನಾ ಮೆರೆಸೋ । ತಾಯಿಗಂಡರು"[೩೨].

ಜನಪದ ಹೆಣ್ಣು ಮಗಳಿಗಿರುವ ದಿಟ್ಟತನದ ಪ್ರತಿರೂಪ ಇಲ್ಲಿದೆ. ಹೆಣ್ಣಿನ ಅಸಹಾಯಕತೆಗೆ ಸಹಾಯ ಹಸ್ತ ಚಾಚುವುದಕ್ಕಿಂತ ಅವಕಾಶವಾದಿತನ ಗಂಡಿನಲ್ಲಿ ಹೇಗೆ ಜಾಗೃತವಾಗುತ್ತದೆ ಎಂಬುದನ್ನು ತಿಳಿಸುತ್ತದೆ. ಇದು ಪ್ರಸ್ತುತತೆಗೆ ಮಾದರಿ. ಹೆಣ್ತನದ ಸ್ವರೂಪವನ್ನೇ ಮರೆಸುವಂತ ವಿಕೃತಕಾಮಿಗಳು, ಅತ್ಯಾಚಾರ, ವ್ಯಭಿಚಾರ ಮುಂತಾದುವುಗಳಲ್ಲಿ ಗಂಡು ಭಾಗಿಯಾದಾಗ ಹೆಣ್ಣಿನ ವ್ಯಕ್ತಿತ್ವ ಗೌಣವಾಗುತ್ತದೆ. ಇದನ್ನೂ ಸಹ ಯಾವುದೇ ಅಂಜಿಕೆ ಇಲ್ಲದೆ ಬಿಗುಮಾನವಿಲ್ಲದೆ ಕಾವ್ಯದಲ್ಲಿ ಚಿತ್ರಿಸುವ ಕವಯಿತ್ರಿಯ ಮನಸ್ಸು ಹೆಣ್ಣಿನ ಹೆಣ್ತನದ ಪ್ರತಿನಿಧೀಕರಣವೂ ಹೌದು. ನಂಬಿಕೆ ದ್ರೋಹಕ್ಕೆ ಒಳಗಾದ ಹೆಣ್ಣಿನ ಚಿತ್ರಣದ ಸೂಕ್ಷ್ಮತೆ ಇಲ್ಲಿದೆ.

ಹೆಣ್ಣಿನ ಅಸ್ತಿತ್ವ, ಸ್ವಾತಂತ್ರ್ಯದ ಬಗ್ಗೆ ಮಾತನಾಡುವ ನಾವೇ ಅಯ್ಯೋ ನಾವು 'ಗಂಡಾಗಿದ್ದರೆ'! ಎಂಬ ಒಂದು ಕ್ಷಣದ ಆಲೋಚನೆಗಳೂ ಸಹ ಆಧುನಿಕ ಮಹಿಳಾ ಕಾವ್ಯದಲ್ಲಿ ಬೆಳಕು ಕಂಡಿದೆ. ವ್ಯಂಗ್ಯೋಕ್ತಿಯ ಸಾಲುಗಳಾದರೂ ಅವು ಗಂಡಿನ ಅಹಮಿಕೆಯ ದರ್ಶನ ಮಾಡುತ್ತವೆ.

"ನಾವು ಗಂಡಸರಲ್ಲ
ಎಲ್ಲಿ ಹೋದರೂ ಹುಡುಗಿಯರನ್ನು ಕಂಡಾಗ
ಕಣ್ಣು ಮಿಟುಕಿಸಿ ವಕ್ರನಗೆ ಬೀರುವವರಲ್ಲ
ಮಿತಿ ಮೀರಿ ಮರ್ಯಾದೆ ತೋರಿದರೂ
ಮನಸ್ಸಿನಲ್ಲೇ ಅವರನ್ನು ಬೆತ್ತಲಾಗಿಸುವವರಲ್ಲ
ಆದರೂ। ನಮ್ಮಲ್ಲಿ ಇವರಿಗಿರುವ ಬೆಲೆಯನು ಕಂಡು
'ಅಯ್ಯೋ ನಾನು ಗಂಡಾಗಲಿಲ್ಲವಲ್ಲಾ' ಎಂದು
ಮಿಡುಕುವ ನಾವು
ಹೆಂಗಸರು"[೩೩]

ಕವಿತೆ ದ್ವಿಮುಖ ನೆಲೆಯನ್ನು ಪಡೆದಿದೆ. ಹೆಣ್ಣಿನ ನೋವು ಹಪಹಪಿಕೆಯ ಸೂಕ್ಷ್ಮತೆ ಈ ಕವಿತೆಯಲ್ಲಡಗಿದೆ. ಹೆಣ್ಣು ಭಾವನಾ ಜೀವಿ ಎಂಬ ಮಾತನ್ನು ನೆನಪಿಸುತ್ತದೆ. ತಾನು ಗಂಡಾಗಿದ್ದರೆ? ಎಂಬ ಭಾವ ಬಂದರೂ ಮನದಲ್ಲೇ ಸ್ವ ವ್ಯಂಗ್ಯದಿಂದ ವಾಸ್ತವವನ್ನು ಬಿಚ್ಚಿಡುತ್ತದೆ. ಸ್ವ ವಿಮರ್ಶೆ ಮತ್ತು ಆತ್ಮಾವಲೋಕನ ಮಾಡುತ್ತಾ ಹೆಣ್ಣಿನ ಬಗೆಗಿರುವ ಗಂಡಿನ ಆಲೋಚನಾಕ್ರಮದ ಸೀಮಿತತೆಯ ಪರಿಧಿಯನ್ನು ಕೆಣಕುತ್ತದೆ. ಕವಿತೆಯಲ್ಲಿ ಗಂಡು ಹೆಣ್ಣಿನ ಅಂತರಕ್ಕಿಂತ ಹೆಣ್ತನದ ಸ್ವರೂಪವನ್ನು ವಿಶಿಷ್ಟವಾಗಿ ಕಟ್ಟಿಕೊಡುವ ಪ್ರಯತ್ನ ಇಲ್ಲಿದೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವೈಚಾರಿಕವಾಗಿ ಅಕ್ಕಮಹಾದೇವಿ ಪ್ರಸ್ತುತಳು. ಮಹಿಳಾ ಕಾವ್ಯವೂ ಸಹ ಅಕ್ಕನನ್ನೇ ಪ್ರೇರಣೆಯ ಸಂಕೇತವಾಗಿ ನೋಡಿದೆ. ಕೌಶಿಕನನ್ನು ತೊರೆದು ಮೋಕ್ಷಕ್ಕೆ ಹೋದ ಅಕ್ಕ ನಮಗೆ ಆಧುನಿಕ ಮಹಿಳಾ ಕಾವ್ಯದಲ್ಲಿ ಗೌಣಳಾಗುತ್ತಾಳೆ. ಏಕೆಂದರೆ ಅವಳು ದಿಟ್ಟ ಮಹಿಳೆಯ ಪ್ರತಿರೂಪವೇ ಹೊರತು, ಆಧ್ಯಾತ್ಮಿಕ ನೆಲೆಯಲ್ಲಿಲ್ಲ ಎಂಬುದು ಮಹಿಳಾ ಕಾವ್ಯದ ಆಶಯ. ಅಕ್ಕಮಹಾದೇವಿ ಮಹಿಳಾ ಪರ ಚಿಂತನೆಗಳಿಂದ ವಿಮುಖಳಾಗಿದ್ದಾಳೆಂಬುದು ಹಲವರ ಅಭಿಪ್ರಾಯ. ಏಕೆಂದರೆ ಚನ್ನಮಲ್ಲಿಕಾರ್ಜುನನ ಹುಡುಕಾಟದಲ್ಲೇ ತೊಡಗಿದ್ದಳೇ ವಿನಃ ಹೆಣ್ಣಿನ ಬಗೆಗಿನ ಹೆಚ್ಚಿನ ಕಾಳಜಿ ಅವಳ ವಚನಗಳಲ್ಲಿಲ್ಲ ಎಂಬ ಮಾತಿದೆ. ಆದರೂ ಅಕ್ಕನ ದಿಟ್ಟತನ, ನಿಷ್ಠೆ, ಏಕಾಂಗಿತನ ಇವೆಲ್ಲವೂ ಸ್ವಾಭಿಮಾನಿ ಮತ್ತು ಸ್ವಾವಲಂಬಿ ಮಹಿಳೆಗಿರಬೇಕಾದ ಅಗತ್ಯ ಗುಣಗಳೆಂದು ಮಹಿಳಾ ಕಾವ್ಯದಲ್ಲಿ ಅಕ್ಕನನ್ನು ಮಹಿಳಾಶಯಗಳ ಪ್ರತಿನಿಧಿಯಾಗಿ ಕಂಡಿದ್ದಾರೆ.

"ಅಕ್ಕ ನೀನು ಪುಣ್ಯವಂತೆ ಕಣೆ
ಮೈ ಮನಗಳನ್ನು ಬೆತ್ತಲೆಗೆ ಬಿಚ್ಚಿಟ್ಟ । ದಿಟ್ಟೆಯಾದೆ
ನಾ ನೋಡು । ಅಜ್ಜ ಹೊಲಿದಿಟ್ಟ
ಕೌದಿಯ ಸುರುಳಿಯಲ್ಲಿ

ಇವನ ಬವಣೆಯ ತೊತ್ತಾಗಿ
ಅರಮನೆಗೆ ಮೇಣದ ಬತ್ತಿಯಾಗಿ
ಒಳಗೆ ಉರಿಯುತ್ತಾ । ಬಿಸಿಗೆ ಕರಗುತ್ತ
ಹೆಪ್ಪುಗಟ್ಟುತ್ತಿದ್ದೇನೆ" [೩೪]

ಮಹಿಳಾ ಪರ ಹೋರಾಟಗಳಿಗೆ ಆದರ್ಶ ಅಕ್ಕಮಹಾದೇವಿ. ಅಂದರೆ ಸಮಾಜದ ಬಗೆಗಿನ ನಿರ್ಲಿಪ್ತತೆ, ಮುಕ್ತತೆ, ಮಹಿಳೆಗಿರಬೇಕೆಂದು ಬಯಸಿದ ಹೋರಾಟಗಾರರ ಮನಸ್ಸು ಅಕ್ಕನನ್ನು ಕೇಂದ್ರೀಕರಿಸಿವೆ. ದೈಹಿಕವಾಗಿ, ಕಾಮದ ಸಂಕೇತವಾಗಿ ಹೆಣ್ಣನ್ನು ನೋಡುವ ಗಂಡಿನ ಅಹಮಿಕೆ, ಬಂಧಿಸುವ ಗುಣ ಎಲ್ಲವೂ ಹೆಣ್ಣಿಗೆ ನುಂಗಲಾರದ ತುತ್ತಾಗಿ ಹೇಗೆ ಪರಿಣಮಿಸುತ್ತದೆಂಬುದನ್ನು ಕವಿತೆ ನೇರವಾಗಿ ತಿಳಿಸುತ್ತದೆ. ಅವಳಿಗೆ ವೈಭವೋಪೇತವಾದ ಜೀವನವಿದ್ದರೂ, ಬೇಕಾದ ಮನಸ್ಸಿಲ್ಲ. ಅದೂ ಸಹ ಅವನ ವಶವೆ, ಎಂಬುದನ್ನು ವಿಶಾದದಿಂದ ಕೂಡಿದ ಮಾತುಗಳಲ್ಲಿ ಹೆಣ್ಣು ವ್ಯಕ್ತಪಡಿಸುವಂತಿದೆ. ಬಲವಂತದ ಗಂಡಿನ ಬಯಕೆ, ಕಾಮರೂಪದ ಪ್ರೀತಿ ಹೆಪ್ಪುಗಟ್ಟಿದೆ ಎಂಬ ಮಾತು ಜಡತ್ವವನ್ನು ಸೂಚಿಸುವಂತಿದೆ ಎಂಬುದನ್ನು ಕವಿತೆ ಧ್ವನಿಸುತ್ತದೆ. ಇದರ ಜೊತೆಗೆ ಸಂಪ್ರದಾಯದ ಚೌಕಟ್ಟನ್ನು ಮೀರಿದ ಅಕ್ಕನ ನಡೆ ನಮಗಿಲ್ಲವಲ್ಲ ಎಂಬ ಹಪಹಪಿಕೆಯೂ ಇಲ್ಲಿದೆ.

ಇಂದು ಮಹಿಳಾ ಜಾಗೃತಿ, ಸ್ವಾತಂತ್ರ್ಯ, ಸಬಲೀಕರಣದ ಬಗ್ಗೆ ಹಲವಾರು ವಿಚಾರ ಸಂಕಿರಣಗಳು, ಲೇಖನಗಳು, ಚಿಂತನೆಗಳು ಹೆಚ್ಚು ಜಾಗೃತಗೊಳ್ಳುತ್ತಿವೆ. ಇದು ಇಂದಿನ ಅಗತ್ಯವೂ ಹೌದು. ಆದರೆ ಸಮಾಜದಲ್ಲಿ ಬೆಳಕಿಗೆ ಬಾರದ ಮುಗ್ಧ ಹೆಣ್ಣುಗಳ ಮಾರಾಟ, ವೇಶ್ಯಾವಾಟಿಕೆ, ಸಾಮೂಹಿಕ ಅತ್ಯಾಚಾರಗಳು ನಿರಂತರವಾಗಿ ನಡೆಯುತ್ತಲೇ ಇವೆ. ಆದರೆ ಅದು ಸಾಕಷ್ಟು ಪ್ರಮಾಣದಲ್ಲಿ ದಾಖಲಾಗುತ್ತಿಲ್ಲ. ಕೆಲವು ವೇಳೆ ದೌರ್ಜನ್ಯಕ್ಕೊಳಗಾದ ಹೆಣ್ಣು ಮಕ್ಕಳು ಮುಂದೆ ಬಾರದೆ, ಅನ್ಯಾಯಕ್ಕೆ ಹೋರಾಡದೆ ಆತ್ಮಹತ್ಯೆಯ ಹಾದಿ ಹಿಡಿಯುವುದೂ ದಾರುಣವಾದ ಸಂಗತಿ. ಮಾಡದ ತಪ್ಪಿಗೆ ವೇಶ್ಯಾವಾಟಿಕೆಯ ಬಲೆಗೆ ಬಿದ್ದ ಹೆಣ್ಣು ಮಕ್ಕಳು ಅನಿವಾರ್ಯವಾಗಿ ದುಡಿಮೆಯ ಮಾರ್ಗವಾಗಿ ಪಾಪಕೂಪಕ್ಕೆ ಬಿದ್ದು ನಲುಗುವ ಸಂದರ್ಭಗಳೂ ನಮ್ಮ ಮುಂದಿವೆ. ಲೈಂಗಿಕ ಕಾರ್ಯಕರ್ತೆಯರಾಗಿ ದುಡಿಯುವ ಹೆಣ್ಣುಗಳ ಜೀವನದ ಮತ್ತೊಂದು ಮಗ್ಗುಲಿನ ಬದುಕನ್ನು ನೋಡುವಲ್ಲಿ ಸಮಾಜದ ಜನ ಎಷ್ಟು ಉದಾರವಾದಿ ಮನಸ್ಸಿನವರಾಗಿದ್ದಾರೆ? ಎಂಬುದು ಪ್ರಶ್ನೆಯಾಗುತ್ತದೆ. ಇದನ್ನು ನಮ್ಮ ಆಧುನಿಕ ಮಹಿಳಾ ಕಾವ್ಯ ವಿಭಿನ್ನ ದೃಷ್ಟಿಕೋನದಲ್ಲಿ ಕಟ್ಟಿಕೊಟ್ಟಿದೆ.

"ಕಟಕಟೆಯಲಿ ನಿಲ್ಲಬೇಕಿದೆ ನಾನು
ತತ್ತರಿಸುವ ಕಾಲು
ತುಂಬಿದ ಜನಜಂಗುಳಿಯ ನಡುವೆ
ಸುಯ್ಯನೆ ನಿಟ್ಟುಸಿರು

ತಬ್ಬಲಿ ಭಾವ । ಹರಕೆಯ ಕುರಿ
ಪಿಸುಮಾತಿನ ಮುದುಕಿ ಪಿಚಕ್ಕನೆ ಉಗಿದು ಎಲೆ ಅಡಿಕೆ, ಕೇಳುತ್ತಾಳೆ
'ಏನು ಮಾಮೂಲಿನಾ'?" ೩೫

ಹೆಣ್ಣಿನ ಬದುಕು ಕಟ್ಟು ಕಟ್ಟಳೆಯಿಂದ ಕೂಡಿರುವಂತದ್ದು. ನಿತ್ಯ ಬದುಕಿನಲ್ಲಿ ಸಮಾಜದ ಒಂದಿಲ್ಲೊಂದು ವಿಧಿ-ವಿಧಾನ ಅವಳನ್ನು ಕಟಕಟೆಗೆ ನೂಕುವಂತೆ ಮಾಡುತ್ತದೆ. ತನ್ನ ತಪ್ಪಿಲ್ಲದೆಯೂ ವೇಶ್ಯಾವಾಟಿಕೆಯ ಕೂಪಕ್ಕೆ ತಳ್ಳಲ್ಪಟ್ಟವಳನ್ನು, ಅದೇ ಪಾಪ ಕೂಪಕ್ಕೆ ಸಿಲುಕಿದ ಹೆಣ್ಣೇ ಪ್ರಶ್ನೆ ಮಾಡುತ್ತಾಳೆ. 'ಏನು ಮಾಮೂಲಿನಾ'? ಎಂಬ ಪದ ನಿರಂತರವಾಗಿ ಸಂಕಷ್ಟಕ್ಕೆ ಸಿಲುಕಿದ ಹೆಣ್ಣಿನ ಕರಾಳ ಜೀವನ ಚಿತ್ರಣವನ್ನು ಬಿಚ್ಚಿಡುತ್ತದೆ. ಎರಡು ಹೆಣ್ಣುಗಳ ದ್ವಿಮುಖ ಬದುಕಿನ ರೀತಿ ಮತ್ತು ಅಸಹಾಯಕತೆಗಳನ್ನು ಕವಿತೆ ಚಿತ್ರಿಸುತ್ತದೆ. ಅನುಭವ ಮತ್ತು ಅಮಾಯಕತೆಯ ಪ್ರತಿರೂಪ ಕವಿತೆಯಲ್ಲಿ ಹೆಣ್ಣಿನ ಮಾದರಿಯಲ್ಲಿ ವ್ಯಕ್ತಗೊಂಡಿದೆ. ಈ ಅನುಭವ ಮುದುಕಿಗೂ ಆಗಿರುತ್ತದೆ. ಹೆಣ್ಣು ಭೋಗದ ವಸ್ತುವಾದಾಗ ಅವಳಲ್ಲಿ ಬದುಕಿನ ಬಗೆಗಿನ ಹಂಬಲ, ಜೀವನೋತ್ಸಾಹಕ್ಕಿಂತ ತಾತ್ಸಾರವೇ ಹೆಚ್ಚು ಕಂಡುಬರುತ್ತದೆ, ಎಂಬುದು ಕವಿತೆಯ ಆಶಯ.

ಆಧುನಿಕ ಮಹಿಳಾ ಕಾವ್ಯದಲ್ಲಿ ಹೆಣ್ತನದ ನಿರ್ವಚನದ ಸ್ವರೂಪ ಬಹು ವಿಶಿಷ್ಟವಾದುದು. ಏಕೆಂದರೆ ಲಿಂಗಾಧಾರಿತ ಸಮಸ್ಯೆಗಳು, ಶ್ರೇಣೀಕರಣ ವ್ಯವಸ್ಥೆ ಬಹು ಹಿಂದಿನದು. ಗತ ಕಾಲದಿಂದಲೂ ಹೆಣ್ಣನ್ನು ಭೋಗದ ವಸ್ತು, ಗಂಡಿನ ಅಧೀನ, ಮಕ್ಕಳನ್ನು ಹೆರುವ ಯಂತ್ರ ಎಂದು ಪುರುಷ ವರ್ಗ ಭಾವಿಸಿದ್ದ ಕಾಲ ಇಂದು ದೂರವಾಗಿದೆ. ಹೆಣ್ಣಿಗೆ ಸ್ವಾತಂತ್ರ್ಯ ಮತ್ತು ಸಮಾನತೆ ಬೇಕು ಎಂದು ಈಗ ಹೋರಾಟ ನಡೆಸಿದರೆ ಅದು ಹೆಚ್ಚು ಪ್ರಸ್ತುತವಲ್ಲ. ಏಕೆಂದರೆ ಕಾಲ ಬದಲಾದಂತೆ, ಹೆಣ್ಣು ಶಿಕ್ಷಣ ಪಡೆದಾಗಲೇ ಅವಳ ಆಲೋಚನೆಗಳು ಹೊಸದೊಂದು ಮಾರ್ಗದ ಕಡೆಗೆ ವಾಲಿತು. ವಾಸ್ತವದ ತಿಳುವಳಿಕೆ ಯೊಂದಿಗೆ ಮಹಿಳೆಯರಲ್ಲಿ ಸ್ವಂತಿಕೆಯ ಅರಿವು ಜಾಗೃತವಾಗುತ್ತಾ ಬಂದಿತು. ಸ್ವ ಪ್ರಜ್ಞೆ ಮತ್ತು ಅಸ್ಮಿತೆಯ ಹುಡುಕಾಟ ಪ್ರಾರಂಭವಾದ್ದರಿಂದ ಮಹಿಳಾ ಸಬಲೀಕರಣದತ್ತ ಜಾಗೃತ ಮಹಿಳೆಯರ ಮನಸ್ಥಿತಿ ಹೊಸ ನೆಲೆಯನ್ನು ಕಂಡುಕೊಳ್ಳಲು ಕಾರಣವಾಯಿತು. ಹುಟ್ಟಿನೊಂದಿಗೇ ಅನ್ಯಾಯಕ್ಕೆ ಬಲಿಯಾಗುವ ಹೆಣ್ಣಿನ ಹೋರಾಟ ಹೊಸ ಹಾದಿ ಹಿಡಿಯಿತು. ಇದೆಲ್ಲದರ ಪರಿಣಾಮದಿಂದ ಸಾಹಿತ್ಯದಲ್ಲಿ ತನ್ನ ಅರಿವನ್ನು ತಾನೇ ಕಂಡುಕೊಳ್ಳಲು ಮಹಿಳಾ ಬರಹಗಳು ವಿಶಿಷ್ಟವಾಗಿ ರೂಪು ತಳೆದವು. ಮಹಿಳಾ ಬರಹಗಳಲ್ಲಿ ನಮಗೆ ಹೆಚ್ಚಾಗಿ ಕಂಡು ಬರುವುದು, ಸಾಹಿತ್ಯವೆಂದರೆ ಸಾಮಾಜಿಕ ಮನೋಭಾವದಿಂದ ರೂಢಿಸಿಕೊಂಡದ್ದಲ್ಲ. ಅಂದರೆ ಅದು ಹೆಣ್ಣಿನ ವಯಕ್ತಿಕ ನೆಲೆಯಿಂದ ಸೃಜಿಸಿ ಅದು ಸಾಮಾಜಿಕವಾಗುತ್ತಾ ಹೋಗುತ್ತವೆ ಎನ್ನುವುದನ್ನು ಮಹಿಳಾ ಕಾವ್ಯ ದಟ್ಟನೆಲೆಯಿಂದ ಸ್ವೀಕರಿಸಿದೆ. ಹೆಣ್ತನಕ್ಕೆ ಅವಳ ಆಲೋಚನೆಗೆ ಮೊದಲ ಪ್ರಾಶಸ್ತ್ಯ ಕೊಟ್ಟಾಗ ಮಾತ್ರ ಅವಳಲ್ಲಿ ಹೊಸತನ ಹುಡುಕಲು ಸಾಧ್ಯ! ಎಂಬುದನ್ನು ಮನಗಂಡವು.

ನಿತ್ಯ ಬದುಕಿಗೆ ಜೋತು ಬಿದ್ದ ಹೆಣ್ಣಿಗೆ ಮನೆ ಕೆಲಸವೂ ಒಂದು ಉದ್ಯೋಗವಿದ್ದಂತೆ. ಅದನ್ನು ಗಂಡು ಅವಳನ್ನು ತೊತ್ತಿನಂತೆ ಕಂಡಾಗ ತಾನು ಮಾಡಿದ ಕೆಲಸಕ್ಕೆ ತಾತ್ಸಾರವೇ ಪ್ರತಿಫಲವೆಂಬುದನ್ನು ಷರೀಫರ ಕವಿತೆ ಕಟ್ಟಿಕೊಡುತ್ತದೆ.

"ನೀನು ಗಳಿಸುತ್ತಿಲ್ಲ
ನೀನು ನಿರುದ್ಯೋಗಿ
ಅಷ್ಟೇ ಏಕೆ ಬಡವಿಯೂ ಕೂಡ
ನಿನಗೆ ಅಬಲೆಯ ಪಟ್ಟ
ಮೇಲೆ ಕಳಿಸವಿಟ್ಟಂತೆ" [೩೬]

ಲಿಂಗಾಧಾರಿತ ವ್ಯವಸ್ಥೆಯ ಪ್ರತಿರೂಪವಾಗಿದೆ ಈ ಕವಿತೆ. ಗೃಹಿಣಿಯಾಗಿಯೇ ಸದ್ಗತಿ ಪಡೆಯಬೇಕೆಂಬ ಗಂಡಿನ ಆಜ್ಞೆಯನ್ನು ಪಾಲಿಸುತ್ತಲೇ ಬದುಕು ಸವೆಸಿದ ಹೆಣ್ಣಿನ ಮನೋವ್ಯಥೆಯ ಸೂಕ್ಷ್ಮತೆಯ ನೋವು ಈ ಕವಿತೆಯಲ್ಲಿದೆ. ಮುಂದುವರೆದು

"ಸಾಯಂಕಾಲ ಸವಾರಿ ಬಂದಾಗ
ಅಲಂಕರಿಸಿಕೊಂಡು ನಗುನಗುತ್ತಾ
ಸ್ವಾಗತ ಲಘು ಉಪಹಾರ
ಇಷ್ಟೇ ಅಲ್ಲದೆ ಒಬ್ಬ ಪುಕ್ಕಟೆ ಸೇವಕಿಗೆ
ಅನೇಕ ಕೆಲಸಗಳು / ಅವಳಿಗೆ ಪ್ರತ್ಯೇಕ
ತನಗಾಗಿ ಸಮಯವೆಲ್ಲಿ? / ಇಡೀ ದಿನ ಸತತ
ಬಿಡುವಿಲ್ಲದ ದುಡಿತ ಮೇಲೆ / ಅವಹೇಳನದ ಮಾತು ಬೇರೆ
ಇದಕ್ಕಿಂತ ದೊಡ್ಡದಾದ / ಪ್ರತಿಫಲ ಇನ್ನೇನು ಬೇಕು"?[೩೭]

ಕಳೆದು ಹೋದ ಹೆಣ್ಣಿನ ಸ್ಥಾನದಲ್ಲಿ ಅವಳ ಅಸ್ತಿತ್ವವೇ ಇಲ್ಲವಾದಾಗ ಹೆಣ್ಣಾದವಳ ಹೆಣ್ತನ ಬರಿ ಭ್ರಮೆ ಎಂಬುದನ್ನು ಹಲವು ಕವಿತೆಗಳು ಕಟ್ಟಿಕೊಟ್ಟಿವೆ. ಹೆಣ್ಣಾದವಳು ಗಂಡಿನ ಆಸರೆಯಲ್ಲಿಯೇ ಇರಬೇಕೆಂಬುದು ಸಮಾಜದ ಹಳೆಯ ನಿಯಮ. ಇದು ಎಲ್ಲಾ ಧರ್ಮಗಳಲ್ಲೂ, ಜಾತಿಗಳಲ್ಲೂ ಇರುವಂತದ್ದೇ. ಆದರೆ ಅದರ ಮಗ್ಗುಲುಗಳು ಮಾತ್ರ ಬೇರೆ ಬೇರೆ ರೀತಿಯವು. ಹಿಂದೂ, ಮುಸ್ಲಿಂ, ಜೈನ ಮುಂತಾದ ಧರ್ಮಗಳಲ್ಲಿ ಒಂದೊಂದು ರೀತಿಯ ಆಚರಣೆಗಳಿದ್ದರೂ ಅದರ ಪರಿಣಾಮ ಮಾತ್ರ ಹೆಣ್ಣಿನ ಮೇಲಾಗುತ್ತದೆ ಎನ್ನುವುದನ್ನು ಹಲವು ಕವಿತೆಗಳಲ್ಲಿ ಕಾಣಬಹುದು.

"ನನ್ನ ಮನೆಯ ಒಡತಿ ನೀನು
ನನ್ನ ಮಕ್ಕಳ ತಾಯಿ ನೀನು
ಮೌನವಾಗಿ ತಲೆತಗ್ಗಿಸಿ
ಎಲ್ಲರ ಸೇವೆ ಮಾಡುವ ನಿನಗೆ

ಸ್ವರ್ಗಲೋಕದಲ್ಲಿ ಸ್ಥಾನಭದ್ರ
ಮರಿಯಮ್, ಖತೀಜಾ, ಹಾಗೂ
ಬೀ ವಿ ಪಾತೀಮಾರಂತೆ
ನಾವು ಮಾಡಿದ ಕಟ್ಟಳೆಗಳನ್ನು
ನೀನೂ ತಲೆ ಮೇಲಿಟ್ಟು ಪಾಲಿಸು" [೩೮]

ಎಂಬ ಸಾಲುಗಳಲ್ಲಿ ಸಂಪ್ರದಾಯಕ್ಕೆ ಬಲಿಯಾದ ಹೆಣ್ಣುಗಳೇ ಆದರ್ಶಮಯ ಚಿತ್ರಣಗಳಾಗಿ ನಿದರ್ಶನದ ಮಾದರಿಗಳಾಗಿಯೂ ಇವೆ. ಇಲ್ಲಿ ಧರ್ಮ ಹೇರಿದ ಕಟ್ಟಳೆಗೆ ಕೊರಳೊಡ್ಡಿದ ಹೆಣ್ಣುಗಳು ಮುಂದಿನ ಸಂಪ್ರದಾಯ ಶೀಲತೆಗೆ ಬದ್ಧರಾಗುವ ಹೆಣ್ಣುಗಳಿಗೆ ಮಾದರಿಗಳ ದಾರಿದೀಪಗಳಾಗಿದ್ದಾರೆ. ಕವಿತೆ ಮುಂದುವರೆದು

"ಒಂಟಿಯಾಗಿ ಹೊರಗೆ
ಹೋಗುವೆಯಾ ಜೋಕೆ!
ಜನ ನಿನ್ನ ರಸ್ತೆಯಲಿ
ದುರುಗಟ್ಟಿ ನೋಡಿಯಾರು
ನಿನ್ನ ನಾಜೂಕು ದೇಹಕ್ಕೆ
ಜನರ ದೃಷ್ಟಿಯಾದೀತು!
ಮನೆತನದ ಮರ್ಯಾದೆ
ನಡುಬೀದಿಯಲಿ ಜನರೆದುರು
ನೀಲಾಮು ಆದಿತು
ನಿನ್ನ ಮಾನರಕ್ಷಣೆಯ ಹೊಣೆ
ತಂದೆ, ಪತಿ, ಸುತರು
ಹೊತ್ತಿರುವಾಗ ನಿನಗೇತಕೆ ಪ್ರತ್ಯೇಕ ಸ್ವಾತಂತ್ರ್ಯ
ಅಸ್ತಿತ್ವಗಳ ಜಂಜಾಟ" [೩೯]

ಇಲ್ಲಿ ಧರ್ಮ ಸೂಕ್ಷ್ಮತೆಗೆ ಒಳಗಾದ ಹೆಣ್ಣಿನ ಚಿತ್ರಣ ಮಾತ್ರವಿಲ್ಲ. ಸಾಮಾಜಿಕ ಅನ್ಯಾಯಗಳಿಗೆ ಬಲಿಯಾದ, ನಿತ್ಯ ನಿರಂತರ ಕೂಪಕ್ಕೆ ತಳ್ಳಲ್ಪಟ್ಟ ಅಸಹಾಯಕ ಹೆಣ್ಣಿನ ಚಿತ್ರಣವಿದೆ. ಮನೆಯ ಒಡತಿಯಾದರೂ, ಸ್ವಾತಂತ್ರ್ಯವನ್ನು ಕಸಿದುಕೊಂಡ ಗಂಡಿನ ನಯವಂಚಕತನ, ನಾಜೂಕು, ಹೆಣ್ಣನ್ನು ಕೇವಲ ದೈಹಿಕ ಆಕರ್ಷಣೆಯ ಪ್ರತಿರೂಪದಂತೆ ಭಾವಿಸಿದ ಗಂಡಿನ ಸೋಗಲಾಡಿತನ ಕವಿತೆಯಲ್ಲಡಗಿದೆ. ಸಾರ್ವಜನಿಕ ಮುಕ್ತತೆಯ ಸ್ವಾತಂತ್ರ್ಯವಿಲ್ಲದಿರುವಾಗ ಹೆಣ್ಣನ್ನು ಹೇಗೆ ಸಂಬಂಧಗಳ ನೆಪದಲ್ಲಿ ಗಂಡು ಬಂಧಿಯಾಗಿಸುತ್ತಾನೆ ಎನ್ನುವ ನಿಜಮುಖ ದರ್ಶನವನ್ನು ಬಯಲು ಮಾಡುತ್ತದೆ. ಸಾಮಾಜಿಕವಾಗಿಯೂ ಹೆಣ್ಣು ಭೋಗದ ವಸ್ತುವೇ ಎಂಬ ಗಂಡಿನ ಸೀಮಿತ ಆಲೋಚನೆಯ ಕರಾಳತೆಯನ್ನು ಚಿತ್ರಿಸಿದೆ.

ಹೆಣ್ಣು ಸದಾ ಆತ್ಮವಿಶ್ವಾಸದಿಂದ ಕೂಡಿದವಳು. ಗಂಡಿನ ದೃಷ್ಟಿಕೋನದಲ್ಲಿ ಅವಳು ಅಬಲೆಯಿರಬಹುದು, ಆದರೆ ಅವಳಲ್ಲಿ ಸಾಧಿಸುವ ಛಲ ನಿರಂತರವಾಗಿ ಪುಟಿಯುತ್ತದೆ ಎಂಬುದನ್ನು ಮಹಿಳಾ ಕಾವ್ಯ ಸ್ಪಷ್ಟಪಡಿಸುತ್ತದೆ ಎನ್ನುವುದು ಮುಖ್ಯವಾದುದು.

"ಏನಾದರೂ ಮಾಡಲೇಬೇಕು
ಹೇಗಾದರೂ ಸಾಧಿಸಲೇಬೇಕು
ಧಗಧಗನೆ ಉರಿಯುತ್ತಿರುವ
ತಂಪುಕಾಣದೇ
ಬಾಯ್ಬಿರಿದು ನಿಂತಧರೆಗೆ
ತಂಪು ಮಳೆಯಾಗಿ
ಕಂಪಸೂಸುವ ಆಸೆಯೆ ನಗೆ" ೪೦

ಪುರಾಣದ ಸೀತೆ ಇಲ್ಲಿ ಮತ್ತೆ ಪ್ರತಿಬಿಂಬಿತಳಾಗಿದ್ದಾಳೆ. ಆದರೆ ಪುರುಷ ಮಾರ್ಗದ ಅನುಸರಣೀಯ ಪಾತ್ರದಲ್ಲಲ್ಲ, ಮಳೆ ಹನಿಯ ರೂಪದಲ್ಲಿ. ತಾನಿರುವ ವಾತಾವರಣ ಸದಾ ತಂಪಿನಿಂದ ಕೂಡಿ ಸುಖದಿಂದಿರಬೇಕೆಂದು ಬಯಸುವ ಹೆಣ್ಣಿನ ರೂಪದಲ್ಲಿ. ನಿಸರ್ಗದೊಂದಿಗೆ ಹೆಣ್ಣಿನ ಹೊಂದಾಣಿಕೆಯ ಬದುಕು ಮತ್ತು ಪ್ರೀತಿಯನ್ನು ಕವಿತೆ ಕಟ್ಟಿಕೊಡುತ್ತದೆ. ಎಂತಹ ಸಂದರ್ಭದಲ್ಲೂ ಆತ್ಮವಿಶ್ವಾಸವನ್ನು ಕಳೆದುಕೊಳ್ಳದ ಒಬ್ಬ ದೇಸೀಯ ಹೆಣ್ಣು ಮಗಳ ಮಣ್ಣಿನ ಗುಣದ ಪ್ರತಿರೂಪದಂತಿದೆ.

ಮಹಿಳೆಯರು ಬರವಣಿಗೆಗೆ ತೊಡಗಿದಾಗ ಸಮಾಜದಲ್ಲಿರುವ ಪುರುಷ ವರ್ಗವನ್ನು ಎದುರಿಸುವುದಿರಲಿ, ತನ್ನ ಮನೆಯಲ್ಲಿಯ ಗಂಡನನ್ನೂ ಓಲೈಸುವುದು ಅತಿಕಷ್ಟ ಎಂಬುದನ್ನು ಹಲವಾರು ಕವಯಿತ್ರಿಯರು ತಮ್ಮ ಕವಿತೆಗಳಲ್ಲಿ ಚಿತ್ರಿಸಿದ್ದಾರೆ. ಬರವಣಿಗೆ ಬಯಸುವುದು ಮುಕ್ತತೆಯನ್ನು, ಸರಿ ತಪ್ಪುಗಳ ಅನ್ವೇಷಣೆಯನ್ನು ನೇರವಾಗಿ ಬರಹಕ್ಕಿಳಿಸಿದಾಗ ಬರಹಗಾರ್ತಿಯರಿಗಾದ ಅಪನಿಂದನೆಯೂ ಅನಿವಾರ್ಯವಾಗಿ ಸಹಿಸಿಕೊಳ್ಳಬೇಕಾದ ಸಂದರ್ಭ ಒದಗಿಬರುತ್ತದೆ. 'ಮನೆಗೆದ್ದು ಮಾರುಗೆಲ್ಲು' ಎಂಬಗಾದೆ ಮಾತು ಇಂತಹ ಸನ್ನಿವೇಶದ ಪ್ರತಿಫಲವೇ ಇರಬೇಕು. ವಾಸ್ತವ ಜೀವನವನ್ನು ಕೆದಕಿ ಬರೆದಾಗ ಪತಿರಾಯ ಅದನ್ನು ಸ್ವೀಕರಿಸುವ ಮನಸ್ಥಿತಿಯನ್ನು ಕವಿತೆ ವಿಡಂಬಿಸುತ್ತದೆ.

"ಬರೆದು ನಾನೊಂದು ಕವನ
ರಾಯನಿಗೆ ಕೇಳಿದೆ
ಹೇಗಿದೆ ಈ ಕವನ"
"ನಾಕಂಡ ಕನಸುಗಳೆಲ್ಲಾ
ನೀರಮೇಲಿನ ಗುಳ್ಳೆ

ಬರೀ ಹೊಡೆತ ನಿಂದನೆ
ತುಂಬಿದೆ ಬದುಕೆಲ್ಲಾ"
"ಇತ್ಯಾದಿ .... ಇತ್ಯಾದಿ
ಓದುತ್ತಿದ್ದಂತೆಯೇ ರಾಯ
ತಾಳಿದ ರಾವಣನ ಅವತಾರ
ಮತ್ತೇಬ್ಬೈಗುಳು ಹೊಡೆತ" ೪೧

ಈ ಸಾಲುಗಳಲ್ಲಿ ಮುಕ್ತಮನಸ್ಸಿನ ಹೆಣ್ಣಿನ ಮೇಲಾದ ದೌರ್ಜನ್ಯದ ಕರಾಳತೆಯ ದರ್ಶನವಾಗುತ್ತದೆ. ಬರೆಯಬೇಕೆಂಬ ಹಂಬಲ, ಬರಹರೂಪಕ್ಕೆ ಬಂದಾಗ ಸಿಗುವ ಮುಕ್ತತೆಯ ಭಾವನೆ ಸಹಜವಾದುದು. ಇಲ್ಲಿ ಹೆಂಡತಿ ಗಂಡನಿಗೆ ಬರೆದ ಕವನ ಮಾತ್ರವಾಗಿರದೆ ಸಾಮಾಜಿಕವಾಗಿ ಹೆಣ್ಣಿನ ಪರಿಸ್ಥಿತಿಯ ಬಗೆಗಿನ ದರ್ಶನವಾಗುತ್ತದೆ. ಆದರೆ ಗಂಡನಾದವನು ಅದನ್ನು ಸ್ವೀಕರಿಸುವುದು ಗಂಡಿನ ಸೀಮಿತ ನೆಲೆಯಲ್ಲಿಯೆ. ಕವಿತೆ ಮುಂದುವರೆದು ಗಂಡು ಹಾಕಿದ ಮಾರ್ಗದಲ್ಲಿಯೇ ಹೆಣ್ಣಿನ ಆಲೋಚನೆ ಮತ್ತು ಬರವಣಿಗೆಯೂ ಇರಬೇಕೆಂಬ ನಿರ್ದೇಶನ ನೀಡುವುದಿದೆಯಲ್ಲಾ ಅದು ದೌರ್ಜನ್ಯದ ಪ್ರತಿರೂಪವೆ.

"ನಿನಗೆ ಬರೆಯಲು ಬೇರೆ
ವಿಷಯಗಳೇ ಇಲ್ಲವೆ?
ನಿನ್ನ ಕವನ ನನ್ನನ್ನು
ನಿಂದಿಸಿದಂತಿದೆಯಲ್ಲ?
ಬರೆಯುವುದೇ ಆಗಿದ್ದರೆ
ನನ್ನ ಹೊಗಳಿ ಬರೆ.....
ಇಲ್ಲವಾದರೆ ಗೊತ್ತಿದೆಯಲ್ಲಾ
ಕಾದ ಕಬ್ಬಿಣದ ಬರೆ" ೪೨

ಎಂಬ ಸಾಲುಗಳು ಹೆಣ್ಣಿನ ಮೇಲಿನ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ಬಯಲಿಗೆಳೆಯುತ್ತವೆ. 'ನನ್ನನ್ನು' ಎಂಬ ಪದ ಕೇವಲ ಗಂಡನ ಚಿತ್ರಣವಾಗದೆ ಮೊದಲು ಬರಹಕ್ಕಿಳಿದ ಮುಕ್ತ ಆಲೋಚನೆಯಿಂದ ಬರೆದ ಹಲವು ಕವಯಿತ್ರಿಯರು ಎದುರಿಸಿದ ಸಮಸ್ಯೆಯ ಚಿತ್ರಣವೂ ಇರಬಹುದು. ಸಾಹಿತ್ಯದಲ್ಲಿ ಮಹಿಳೆ ತನ್ನ ನೆಲೆಯನ್ನು ಕಂಡುಕೊಳ್ಳುವುದು, ಬರಹವನ್ನು ರೂಢಿಸಿಕೊಳ್ಳುವುದು ಕೌಟುಂಬಿಕ ನೆಲೆಯಲ್ಲಿಯೆ. ಹೆಣ್ತನದ ಪರಿಧಿ ವಿಸ್ತಾರಗೊಳ್ಳುವುದೂ ಮತ್ತು ಮುಕ್ತ ಆಲೋಚನೆ ಸೃಜಿಸುವುದು ಸಹ ಇಲ್ಲಿಯೆ. ಆದ್ದರಿಂದ ಈ ಕವಿತೆಯಲ್ಲಿ ಧಾರ್ಮಿಕ ಕಟ್ಟು ಕಟ್ಟಳೆಯ ನಿಯಮ ನಮಗೆ

ಗೌಣವಾಗುತ್ತದೆ. ಹೆಣ್ಣಾದವಳು ಕೇವಲ ಪುರುಷನ ಆಜ್ಞಾ ಪಾಲಕಳು ಎಂಬ ಮಾತನ್ನು ಧ್ವನಿಸಿದರೂ ಮುಕ್ತತೆಯನ್ನು ಬಯಸುವುದು ಬರಹದಿಂದಲೇ ಎಂಬ ಮಾತನ್ನು ಸಾಕ್ಷೀಕರಿಸಿದೆ.

ಹೆಣ್ಣು ಸಹನಾಮಯಿ, ಗಂಡಿನ ಬಯಕೆಯ ಪ್ರತಿರೂಪ ಎನ್ನುವ ಮಾತುಗಳು ಹೆಣ್ಣಿನ ಹೆಣ್ತನದ ಸ್ವರೂಪವನ್ನು ಕಟ್ಟುವಲ್ಲಿ ಗಂಡು ಮಾಡಿಕೊಂಡ ಮಾರ್ಪಾಡುಗಳು, ಇದನ್ನು ಮಹಿಳಾ ಕಾವ್ಯ ಪ್ರಶ್ನಿಸಿವೆ ಮತ್ತು ಖಂಡಿಸಿವೆ. ಗಂಡಿನ ಕಲ್ಪನಾ ಮನೋಭಾವದಲ್ಲಿ ಕಟ್ಟಿದ ಪುರಾಣದ ಹೆಣ್ಣಿನ ಪಾತ್ರಗಳ ಚಿತ್ರಣವನ್ನು ಮರು ವ್ಯಾಖ್ಯಾನಗೊಳಿಸಿವೆ. ಆಧುನಿಕ ಮಹಿಳಾ ಕಾವ್ಯದ ಈ ವಿಶಿಷ್ಟ ಹೊರೆ ಅಚ್ಚಿನಿಂದ ತೆಗೆದ ಪೌರಾಣಿಕ ಪಾತ್ರಗಳು ಹೊಸದೊಂದು ನೆಲೆಯಲ್ಲಿ ನಿಲ್ಲಲು ಸಾಧ್ಯವಾಯಿತು. ಸಂಪ್ರದಾಯದ ಆಚರಣೆ ಮತ್ತು ಪಾಲನೆ ಹೆಣ್ಣಿಗೆ ಹುಟ್ಟಿನಿಂದಲೇ ಬರುವಂತದ್ದು. ಅದು ಕಾಲಗತಿಯಲ್ಲಿ ಬದಲಾವಣೆಯಾಗಬಹುದು. ಆದರೆ ಒಂದಿಲ್ಲೊಂದು ಸಂದರ್ಭದಲ್ಲಿ ಅವಳು ಸದಾ ಸ್ಪರ್ಧೆಗೆ ಸಿದ್ಧಳಾಗಿರುತ್ತಾಳೆ ಎಂಬುದು ನಮ್ಮೆಲ್ಲರಿಗೂ ತಿಳಿದ ಸಂಗತಿಯೆ.

ಪ್ರತಿಯೊಂದು ಸಂದರ್ಭದಲ್ಲೂ ಪರೀಕ್ಷೆಗೊಳಪಡುವ ಹೆಣ್ಣಿನ ಬದುಕಿನಲ್ಲಿ ಗೊಂದಲಗಳಿದ್ದಾಗ ಅವಳೇ ಸ್ವ ಆತ್ಮವಿಮರ್ಶೆಗೆ ತೊಡಗುವ ಸಂದರ್ಭವೂ ಒದಗಿ ಬರುತ್ತದೆಂಬುದನ್ನು ಹಲವು ಕವಯಿತ್ರಿಯರು ಕವಿತೆಗಳ ಮೂಲಕ ಹೆಣ್ಣಿನ ಸಹಜ ಸ್ವಭಾವಗಳಲ್ಲಿ ಚಿತ್ರಿಸಿದ್ದಾರೆ. ಪುರುಷ ಸಮಾಜದ ಒತ್ತಡಗಳನ್ನು ಅರಿಯುವ, ಅವರನ್ನು ಮೆಚ್ಚಿಸುವ, ಅವರ ನಿರೀಕ್ಷೆಗಳನ್ನು ಪೂರೈಸುವ ರೀತಿಯಲ್ಲಿ ಮಹಿಳಾ ಕಾವ್ಯವಿಲ್ಲ. ಪುರುಷ ಕೇಂದ್ರಿತ ನೆಲೆಯಲ್ಲಿ ರಚಿತಗೊಂಡ ಹೆಣ್ಣಿನ ಕಲ್ಪನೆಯ ಪಾತ್ರವನ್ನು ಪುನರ್ ವಾಖ್ಯಾನಿಸುವ ಹೊಸ ಆಯಾಮವನ್ನು ತಂದುಕೊಡುವ ನಿಟ್ಟಿನಲ್ಲಿ ಮಹಿಳಾ ಕಾವ್ಯ ರೂಪುಗೊಂಡಿದೆ. ಹೆಣ್ಣಿನ ಮನೋವ್ಯಥೆ ಕವನಗಳ ರೂಪವನ್ನು ಪಡೆದಾಗ ಅದು ಹೊರ ಹೊಮ್ಮಿಸುವ ಭಾವನಾತ್ಮಕ ಲೋಕಕ್ಕಿಂತ ವಾಸ್ತವ ನಿಜ ದರ್ಶನದ ಪ್ರತಿಫಲವೆನ್ನಬಹುದು. ಸಂಪ್ರದಾಯದ ಬಿಸಿಯುಸಿರಿನಲ್ಲಿ ನಲುಗಿದರು, ತಂಗಾಳಿ ಬಯಸುವ ಪ್ರೀತಿಯ ಕೇಂದ್ರೀಕರಣದ ನೆಲೆಯ ಪ್ರತಿರೂಪ ಹೆಣ್ತನ ಎಂಬುದನ್ನು ಹಲವು ಕವಿತೆಗಳು ಚಿತ್ರಿಸಿವೆ.

"ಆಗಸದಷ್ಟು ವಿಶಾಲ ಹೆಣ್ಣುಗಳ
ಹೃದಯಾಂತರದ ನೋವಿನ ಹರವು
ಹೆಜ್ಜೆ ಹೆಜ್ಜೆಗೆ ಕಟ್ಟಳೆಗಳ
ಬಂಧಿನಿ, ಕಣ್ಣಿದ್ದು ಮೈ ತುಂಬಾ
ಎಚ್ಚರವಹಿಸಿ, ಶೋಧಿಸಿ, ಪರೀಕ್ಷಿಸಿ
ಒಂದೊಂದೇ ಹೆಜ್ಜೆ ಮುಂದಿಟ್ಟಾಗ
ಚಿಗುರನು ಚಿವುಟುವ ಕೈಗಳು
ಮೈಮೇಲೆ ಸಾವಿರಾರು ಗಾಯಗಳು"[೪೩]

ಕಾಲ ಬದಲಾದಂತೆ ಹೆಣ್ಣು ಬಯಸುವ ಮುಕ್ತ ಸ್ವಾತಂತ್ರ್ಯ ಎಲ್ಲೋ ಒಂದು ಕಡೆ ಅವಳಿಗರಿವಿಲ್ಲದೆಯೆ ಅವಳನ್ನು ಬಂಧಿಸುತ್ತದೆ. ಕ್ಷಣ ಕ್ಷಣಕ್ಕೂ ಅವಳು ಪರೀಕ್ಷೆಗೊಳಗಾಗುತ್ತಾಳೆ. ಇದು ಎಲ್ಲಾ ಕಾಲಕ್ಕೂ ಪ್ರಸ್ತುತವೆ, ಅದರ ಮಾದರಿಗಳು ಬೇರೆಯಷ್ಟೆ. ಕವಿತೆಯ ಸಾಲುಗಳು ಹೆಣ್ಣಿನ ಮಾನಸಿಕ ಮತ್ತು ದೈಹಿಕ ದೌರ್ಜನ್ಯದ ಸೂಕ್ಷತೆಯನ್ನು ತಿಳಿಸುತ್ತದೆ. ಗಂಡಿನ ಆಸೆಯನ್ನು ಪೂರೈಸುವ ಹೆಣ್ಣಿಗೆ ಸ್ವಂತ ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ಕಳೆದುಕೊಂಡಾಗ ಪ್ರತಿಯೊಂದು ಕ್ಷಣದಲ್ಲೂ ಆಕೆ ಪರೀಕ್ಷೆಗೊಳಪಡುತ್ತಾಳೆ ಎಂಬುದನ್ನು ಕವಿತೆಯಲ್ಲಡಗಿರುವ ಮಹಿಳಾ ಧ್ವನಿ ಮುಕ್ತತೆಯಿಂದ ಪ್ರಕಟಿಸುತ್ತದೆ. ಕವಿತೆ ಮುಂದುವರೆದು, ನಿಜ ಬದುಕಿನ ಕರಾಳತೆಯ ದರ್ಶನ ಮಾಡುತ್ತದೆ.

"ನೋವಿನ ಕುಲುಮೆಯಲಿ
ಕುದಿಕುದಿದು ಹೊರಬರುವ
ಕೆಂಡ ದುಂಡೆಗಳಂತಹ ಕವನಗಳು
ಸಿಡಿದರೆ ಕಿಡಿಗಳಾದಾವು – ಪ್ರೀತಿಯ
ಸಿಂಚನದಲಿ – ತಂಗಾಳಿಯಾದಾವು" ¹¹

ಹಲವು ವೇಳೆ ಹೆಣ್ಣಿನ ದುಡಿಮೆ, ಪ್ರೀತಿ, ಬದುಕಿನ ವಿವಿಧ ಹಂತಗಳು ದುಡಿಮೆಯೆಂದು ಗುರ್ತಿಸದೆ ಇರಬಹುದು, ಅದು ದುಡಿಮೆಗಿಂತ ಕರ್ತವ್ಯದ ರೂಪಾಂತರ ಪಡೆಯುತ್ತದೆ. ಇದು ಅವಳ ಬದುಕಿನ ದ್ವಿಮುಖತೆಯ ಫಲ. ಕವನ ಕಟ್ಟುವುದು ಎಲ್ಲೋ ಒಂದು ಕಡೆ ತಣ್ಣನೆ ಕುಳಿತೋ, ಪ್ರಕೃತಿಯನ್ನು ವೈಭವೀಕರಿಸುವುದೋ ಅಲ್ಲ, ಅದು ಹೆಣ್ಣಿನ ನೆಲಮೂಲ ಸಂಸ್ಕೃತಿಯ ಬದುಕಿನ ಸಂಘರ್ಷದಿಂದ ಜೀವ ಪಡೆದವು ಎಂಬುದನ್ನು ತಿಳಿಸುತ್ತದೆ. ಕವಿತೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಸಂಘರ್ಷಕ್ಕಿಂತ ಸಹಬಾಳ್ವೆಯನ್ನು ಸ್ವೀಕರಿಸುವ ಗುಣ ಹೆಣ್ಣಿನದು ಎಂಬುದು ತಿಳಿಯುತ್ತದೆ.

ವ್ಯಕ್ತಿಗತ ನೆಲೆಗೆ ಮಹಿಳಾ ಕಾವ್ಯ ಹೆಚ್ಚು ಒತ್ತುಕೊಟ್ಟಿದೆ. ಗಂಡಿನ ಸಮಾನತೆಗಿಂತಲೂ ಹೆಣ್ಣು ಭಿನ್ನತೆಯಿಂದ ಕೂಡಿದವಳು, ವಿಶಿಷ್ಟವಾದ ಗುಣಗಳನ್ನು ಹೊಂದಿದವಳು ಎಂಬುದನ್ನು ಮಹಿಳಾ ಕಾವ್ಯ ತೋರಿಸಿಕೊಟ್ಟಿದೆ. ಅಂದರೆ ಗಂಡು ಹೆಣ್ಣಿನ ಲೈಂಗಿಕತೆ, ಗಂಡಿನ ಮೇಲು ನೋಟದ ಆದರ್ಶದ ಸಿದ್ಧಾಂತಗಳ ರೂಢಿ ಸಂಪ್ರದಾಯಗಳ ಪೊರೆಯನ್ನು ನೇರವಾಗಿ ಕಳಚುವ ಪ್ರಕರಣಗಳು ಕವಿತೆಗಳಾಗಿ ಮೂಡಿವೆ. ಲೈಂಗಿಕತೆ, ಗಂಡು, ಹೆಣ್ಣುಗಳು ಪ್ರತಿಮೆಯ ರೂಪಪಡೆದು ವಯಕ್ತಿಕ ನೆಲೆಯಲ್ಲಿ ಇಂಗದೆ ಸಾಮಾಜಿಕ ನೆಲೆಯ ಆಯಾಮವನ್ನು ಪ್ರತಿಭಾರವರ ಕವಿತೆಗಳು ಒಳಗೊಂಡಿವೆ. ಇವರ ಕವಿತೆಗಳಲ್ಲಿ ಹೆಣ್ತನದ ನಿರ್ವಚನದ ಭಿನ್ನತೆ ವಿಶಿಷ್ಟತೆಯಿಂದ ಕೂಡಿದೆ. ಇವರ ಬರವಣಿಗೆ ನೇರವಾಗಿ ವಾಸ್ತವದ ಬದುಕನ್ನು ಕಟ್ಟಿಕೊಡುತ್ತವೆ.

"ಹೇಳಿದ್ದೇನೆ / ಸತ್ತರೂ ನನ್ನ ನವರಂಧ್ರಗಳಲ್ಲಿ
ಹತ್ತಿ ತೂರಿಸಬೇಡಿ / ತೆರೆದುಕೊಂಡಿರಲಿ ಅವು ಎಲ್ಲ
ವಾಸನೆಗೆ, ರುಚಿಗೆ, ಸ್ಪರ್ಶಕ್ಕೆ / ನೋಟಕ್ಕೆ" [೪೫]

ಕವಿತೆ ನೇರವಾಗಿ ಮುಕ್ತತೆಯನ್ನು ಬಯಸುತ್ತದೆ. ಆತ್ಮವಿಶ್ವಾಸದ ಹಂತ ಸತ್ತಮೇಲೂ ವ್ಯಕ್ತಿಗತ ನೆಲೆಯಿಂದ ಕೂಡಿರುವಂತದ್ದು ಎಂಬುದನ್ನು ಈ ಕವಿತೆ ಕಟ್ಟಿಕೊಡುತ್ತದೆ. ಕವಿತೆಯಲ್ಲಿ ವ್ಯಕ್ತಿಗತ ನೆಲೆಯ ಮನೋಧರ್ಮ, ಗಂಡು ಹೆಣ್ಣಿನ ನಡುವಿನ ಸಮಾನಾಂತರ ದೃಷ್ಟಿಕೋನ ಸಹಜತೆಯಿಂದ ಕೂಡಿದ ಬಗೆಯನ್ನು ತಿಳಿಸಿಕೊಡುತ್ತದೆ. ನೀರಸ ಜೀವನಕ್ಕಿಂತ ಜೀವನೋತ್ಸಾಹ ದೇಹ ಮತ್ತು ಆತ್ಮಕ್ಕೂ ಮಿಗಿಲೆಂಬುದು ಸಾದೃಶ್ಯ ರೂಪವಾಗಿದೆ.

ಸೀತೆಯ ಬಗ್ಗೆ ನಮಗೆ ಮಹಾಕಾವ್ಯಗಳು ಸಾಧ್ವಿಯ ರೂಪವನ್ನು ಅನುಸರಣೀಯ ಮಾರ್ಗದ ಮುಖಾಂತರ ರೂಪಿತವಾದ ಚಿತ್ರಣಗಳನ್ನು ಕೊಟ್ಟಿದ್ದಾರೆ. ಆದರೆ ಹೆಣ್ತನದ ಮಾದರಿ ಸ್ವರೂಪ ಅವಳಲ್ಲಿ ಹೇಗೆ ರೂಪಾಂತರವಾಗಿತ್ತೆಂಬುದನ್ನು ಪ್ರತಿಭಾರವರು ರಾವಣನ ವ್ಯಕ್ತಿತ್ವದಿಂದ ಸೀತೆಯ ಮನಸ್ಥಿತಿಯನ್ನು ಕಟ್ಟಿಕೊಡುತ್ತಾರೆ. ಇದು ಆಲೋಚನೆಯ ಮತ್ತೊಂದು ಮಗ್ಗುಲೆನ್ನಬಹುದು ಪ್ರಕೃತಿಗೆ ಉತ್ತರಿಸುವ ಸೀತೆ, ರಾವಣನ ವ್ಯಕ್ತಿತ್ವವನ್ನು, ರೂಪವನ್ನು ತನಗರಿವಿಲ್ಲದಂತೆ ಕಟ್ಟಿಕೊಂಡ ಚಿತ್ರಣವನ್ನು ಅವಳೇ ಬಿಚ್ಚಿಡುವ ರೀತಿಯನ್ನು ಚಿತ್ರಿಸಿದ್ದಾರೆ.

"ಹೇಳು ರಾವಣನಿಗೆ
ನಾನವನನ್ನು ನೋಡಿಲ್ಲ
ನೋಡಿಯೇ ಇಲ್ಲ ಅವನ ದುಂಡುಕಾಲಬೆರಳು
ಬೆರಳ ಹಿಂದಿನ ಹರಡು, ಹರಡಿನ ಮೇಲಿನ ಮಂಡಿ
ಅದಕ್ಕಂಟಿದ ಸುಪುಷ್ಟ ತೊಡೆ । ತೊಡೆಗಾನಿದ ಸಣ್ಣನಡು
ಹರವಾದ ಎದೆ,ಎದೆಯ ಎರಡೂ ಪಕ್ಕ ಚಾಚಿದ ತೋಳುಗಳು
ಮತ್ತವನ ಮುಖ" [೪೬]

ಹೆಣ್ಣಿನ ಮುಕ್ತ ಮನಸ್ಸು ಒಬ್ಬ ಅಪರಿಚಿತನನ್ನು ಅವಲೋಕಿಸುವ ರೀತಿಯ ಮಾದರಿಯಂತಿದೆ. ಸೀತೆ ರಾವಣನಿಗೆ ಅವನ ಸುಪುಷ್ಟ ದೇಹಕ್ಕೆ ಮನಸೋತಿದ್ದಾಳೆಂಬ ಸಂಕುಚಿತ ಅರ್ಥದಲ್ಲಿಲ್ಲ. ಉದಾತ್ತ ರಾವಣನ ಬಗ್ಗೆ ಕೇಳಿ ತಿಳಿದುಕೊಂಡ ಸೀತೆ ತನ್ನ ಮನದಲ್ಲಿ ಚಿತ್ರಿಸಿಕೊಂಡ ರಾವಣನ ಕಲ್ಪನೆಯದು. ಪುರಾಣಗಳಲ್ಲಿ ಅಂತರಂಗದ ಆಲೋಚನೆಯಿಂದ ರಚಿಸುವ ಚಿತ್ರಣದ ರೀತಿ ಇಲ್ಲಿದೆ. ಅಂದರೆ ಸಾರ್ವಜನಿಕವಾಗಿ ಹೆಣ್ಣು ತನ್ನ ಅಭಿಪ್ರಾಯವನ್ನು ಮುಕ್ತತೆಯಿಂದ ಹೇಳಿಕೊಳ್ಳಲಾಗದೆ ಪ್ರಕೃತಿಯೊಂದಿಗೆ ಸಂವಹನ ನಡೆಸುವ ಕ್ರಿಯೆಯಂತೆಯೂ ಇದೆ. ಪ್ರತಿಭಾರವರ ಕವಿತೆಗಳು ಹಿಂಸೆ ತುಂಬಿದ ಜಗತ್ತಿನಲ್ಲಿ ಹೆಣ್ಣಾದವಳು ಅದಕ್ಕೆ ತೆರೆದುಕೊಳ್ಳುವ ರೀತಿಯನ್ನು ಯಾವ ನಯ ನಾಜೂಕಿನ

ಪದರವಿಲ್ಲದೆ ನೇರವಾಗಿ ಚಿತ್ರಿಸುತ್ತಾರೆ. ಇದು ಭಾಷೆಯ ಹರಿತವಿರಬಹುದು. ಆದರೆ ಅದೇ ಸತ್ಯ ಎಂಬುದರ ಅರಿವನ್ನು ಕಟ್ಟಿಕೊಡುತ್ತವೆ. ಅಕ್ಕಮಹಾದೇವಿಯ ಸಂಗ ಸುಖದ ಬಗೆಗಿನ ಚನ್ನಮಲ್ಲಿಕಾರ್ಜುನನನ್ನು ಕವಿತೆಯ ಮೂಲಕ ಕೇಳುತ್ತಾರೆ.

"ಈ ಸಾವ ಕೆಡುವ ಗಂಡರು ಬೇಯುವ
ಬಲೆಯೊಳಗೆ ಅಟ್ಟ ಅಡಿಗೆ ತಿಂದು ತೇಗುತ್ತ
ಸಾವಿರದ ಕರುಣೆ ತೋರುವ ಪ್ರಭುವೇ
ಸಾವಯವ ನಿರವಯವಗಳ ನಡುವೆ ಬಿಕ್ಕುವ
ಹುಡುಗಿ ಹೊರಳುವಾಗ ನೀನೆಲ್ಲಿದ್ದೆ?
ಸಂಗ ಸುಖವದು ಬಲು / ದುಃಖ ಎಂದಳಲುತ್ತೀಯಾ?
ಪ್ರತಿಮೆಗಳಲ್ಲಿ ಬರೆದರೆ ತಿಳಿಯುದಿಲ್ಲವಂತೆ
ನೇರವಾಗಿ ಬಿಚ್ಚಿಕೊಂಡರೆ ಅರ್ಥವಾಗುವುದಂತೆ
ಬಿಚ್ಚಿಬಿಚ್ಚಿದಾಗ ನೀನು ಎಲ್ಲಿ ಬಚ್ಚಿಟ್ಟುಕೊಂಡಿದ್ದೆ?" [೪೭]

ಅಕ್ಕಮಹಾದೇವಿಗೆ ಆಧ್ಯಾತ್ಮ ಲೇಪವನ್ನು ಹಚ್ಚಿದರೂ ಗಂಡಿನ ಪ್ರತಿರೂಪ ಮಾತ್ರ ಚನ್ನಮಲ್ಲಿಕಾರ್ಜುನನೇ. ನಿರಾಕಾರದ ಪ್ರತಿರೂಪವಾದರೂ, ಸಾಮಾಜಿಕ ಚಿಂತನೆಗೊಳ ಪಡಿಸಿದಾಗ ಇಲ್ಲಿ ದೈವತ್ವದ ನಿಲುವು ಕರಗುತ್ತದೆ. ಸಾಂಸ್ಕೃತಿಕವಾಗಿ ಒಂದು ಹೆಣ್ಣಿನ ಬೆತ್ತಲಾದ ದೇಹಕ್ಕೆ ಯಾವ ರೀತಿಯ ದೃಷ್ಟಿಕೋನಗಳು ಸಾಮಾಜಿಕವಾಗಿ ಮೂಡಿದ್ದವು ಎಂಬುದಕ್ಕೆ ಉತ್ತರ ೧೨ನೇ ಶತಮಾನದಲ್ಲಿ ಸ್ಪಷ್ಟತೆ ಇಲ್ಲ. ಅಕ್ಕ ದಿಟ್ಟೆ ಎಂದು ನೋಡುವ ನಾವುಗಳು ಅವಳು ಸಾಮಾಜಿಕವಾಗಿ ಎದುರಿಸಿದ ಸಂಕಟ, ನೋವುಗಳನ್ನು ಸ್ತ್ರೀ ಪರ ಕಾಳಜಿಯಿಂದ ನೋಡಿದಾಗ "ಹೆಣ್ಣಿನ ದುಃಖ ಹೆಣ್ಣಿಗೇ ಅರ್ಥಮಾಡಿಕೊಳ್ಳಲು ಸಾಧ್ಯ" ಎಂಬ ಮಾತು ಪರಿಪೂರ್ಣತೆ ಪಡೆಯುತ್ತದೆ. ಹೆಣ್ತನದ ದೃಷ್ಟಿಕೋನ ಈ ನಿಟ್ಟಿನಲ್ಲಿ ಸಾಧ್ಯ ಎಂಬುದಕ್ಕೆ ಅಕ್ಕ ಮಾದರಿ.

ಅಡುಗೆ ಮನೆಗೆ ಸೀಮಿತಳಾದ ಹೆಣ್ಣು ಪ್ರತಿಭಾರವರ ಕವಿತೆಗಳಲ್ಲಿ ಹಲವು ಸ್ತರಗಳಲ್ಲಿ ನಿಲ್ಲುತ್ತಾಳೆ. ಮುಗ್ಧ ಹೆಣ್ಣಿನ ಆಸೆ, ಉದ್ಯೋಗಸ್ಥ ಮಹಿಳೆಯ ಹಂಬಲ, ಮುದುಕಿಯಾದಾಗ ಅವಳ ಜೀವನೋತ್ಸಾಹ, ಕಾಫಿ ಕ್ಲಬ್ಬಿನಲ್ಲಿ ನಡೆಸುವ ಸಂಭಾಷಣೆ ಇವೆಲ್ಲವೂ ಕವಯಿತ್ರಿಗೆ ಅಭಿವ್ಯಕ್ತಿಯ ಅವಸ್ಥಾಂತರಗಳೇ. ಪ್ರತಿಯೊಂದು ವರ್ಗದಲ್ಲೂ ಹೆಣ್ತನದ ಮೂಲವನ್ನು ಅಚ್ಚುಕಟ್ಟಾಗಿ ಶೋಧಿಸುವಲ್ಲಿ ಪ್ರತಿಭಾರವರು ಯಶಸ್ವಿಯಾದವರು. ಅವರ ಕಾವ್ಯವನ್ನು ಓದುವಾಗ ಮುಚ್ಚಿಟ್ಟ ಬಯಕೆಗಳೆಲ್ಲಾ ಒಮ್ಮೆಲೇ ಪಟಾರೆಂದು ಸಿಡಿದು ಹೊಸ ಲೋಕದ ವಾಸ್ತವತೆಗೆ ಜಿಗಿಯುವಂತೆ ಮಾಡುತ್ತದೆ. ಮೂಲ ಸಂಸ್ಕೃತಿಯ ಪಾಲುದಾರಳಾದ ಹೆಣ್ಣು ಇಲ್ಲಿ ನೆಲಮೂಲ ಸಂಸ್ಕೃತಿಯ ಹಕ್ಕುದಾರಳೂ ಆಗುತ್ತಾಳೆನ್ನುವಲ್ಲಿ ಸಂಶಯವಿಲ್ಲ.

ಒಟ್ಟಾರೆಯಾಗಿ ಮಹಿಳಾ ಕಾವ್ಯ ಸಾಹಿತ್ಯದ ಆಪ್ತತೆಯನ್ನು ಇಮ್ಮಡಿಗೊಳಿಸುವುದರಲ್ಲಿ ಯಶಸ್ವಿಯಾಗಿವೆ. ಪುರುಷ ನೆಲೆಯ ಹೇರಿಕೆಯ ಕಟ್ಟು ಪಾಡುಗಳನ್ನು ವಿರೋಧಿಸುತ್ತವೆ. ಆದರೆ ಪುರುಷನ ವ್ಯಕ್ತಿತ್ವವನ್ನು ವಿರೋಧಿಸುವುದಿಲ್ಲ. ಮೇಲಿನ ಅಂಶಗಳನ್ನು ಗಮನಿಸುತ್ತಾ ಬಂದರೆ ಮಹಿಳಾ ಕಾವ್ಯವನ್ನು ಕವಯಿತ್ರಿಯರೇ ಬರೆದಾದ ಮೇಲೆ ಹೆಣ್ತನವನ್ನು ಹುಡುಕುವ ಅಗತ್ಯವಿದೆಯೆ? ಎಂಬ ಪ್ರಶ್ನೆ ಉದ್ಭವಿಸಬಹುದು. ಆದರೆ ಕವಯಿತ್ರಿಯರ ಮನಸ್ಥಿತಿಯಲ್ಲಿ ಕಾವ್ಯ ಕಟ್ಟುವಾಗಿನ ಸಂದರ್ಭ ಮತ್ತು ಒಂದೇ ವಸ್ತು ಅಥವಾ ಸಂದರ್ಭವನ್ನು ನೋಡುವ ರೀತಿ ಮತ್ತು ದೃಷ್ಟಿಕೋನ ಭಿನ್ನವಾಗಿರಬಹುದು. ಹಾಗಾಗಿ ಈ ಅಂಶಗಳು ಮುಖ್ಯವಾಗುತ್ತವೆ. ಕವಯಿತ್ರಿಯರ ಆಲೋಚನಾ ಶಕ್ತಿ ದಿಟ್ಟವಾಗಿದ್ದಾಗ ಸೃಜಿಸುವ ಕವಿತೆಗಳೂ ನೇರ ಮತ್ತು ಸ್ಪಷ್ಟವಾಗಿರುತ್ತವೆ. ಆಗ ರಚಿತಗೊಂಡ ಕವನಗಳೂ ಸಂಕುಚಿತತೆ ಪಡೆಯುವುದಿಲ್ಲ. ಬದುಕಿನ ಬಗ್ಗೆ ಹಪಹಪಿಕೆ ಇಲ್ಲದಾದಾಗ ನೀರಸವಾಗುವುದನ್ನು ಮಹಿಳಾ ಕಾವ್ಯ ವಿರೋಧಿಸುತ್ತದೆ. ಗಂಡಸಿನ 'ಗಂಡ' ಎನ್ನುವ ತನವನ್ನೂ ವಿಡಂಬಿಸುತ್ತದೆ. ಬೆಳಗೆರೆ ಜಾನಕಮ್ಮನವರು ಮಹಿಳಾ ಕಾವ್ಯ ಬೆಳಕಿಗೆ ಬರುವ ಸಂದರ್ಭವನ್ನು ಗಟ್ಟಿಗೊಳಿಸಿದರು. 'ಗಂಡನೆಂದರೆ, ಅವನ ನಂಬಿದರೆ, ಸರ್ಪದ ಕೆಳಗೆ ಮಂಡೂಕ ವಾಸಿಸಿದಂತೆ' ಎಂದರೆ ಭವಿಷ್ಯದ ಮುನ್ಸೂಚನೆಯ ಕರಾಳತೆಯನ್ನು ಮಹಿಳಾ ಲೋಕಕ್ಕೆ ತಿಳಿಸಿದ್ದಾರೆ. ಇದು ಅವರ ವಯಕ್ತಿಕ ಅನುಭವ ಎನ್ನುವುದಕ್ಕಿಂತ ಇಡೀ ಮಹಿಳಾ ಸ್ವಾತಂತ್ರ್ಯದ ಬಯಕೆಯ ಪ್ರತಿಬಿಂಬ ಎನ್ನಬಹುದು. ಮಹಿಳಾ ಕಾವ್ಯವೆಂದರೆ ಮಹಿಳೆ ಬರೆದದ್ದು ಎಂಬ ಸಂಕುಚಿತತೆ ಇಲ್ಲವಾಗಬೇಕು. ಇದನ್ನು ಮಹಿಳಾ ಕಾವ್ಯ ಮಾಡಿದೆ. ಅದರ ಗಟ್ಟಿತನವೇ ತನ್ನ ತನ ಮತ್ತು ಹೆಣ್ತನ. ಇಂತಹ ಸಾಧನೆಗಳು ನಿರಂತರವಾಗಿ ಮಹಿಳಾ ಸಾಹಿತ್ಯ ಲೋಕದಲ್ಲಿ ನಡೆಯುತ್ತಲೇ ಇವೆ. ಬದುಕಿನ ಬಗ್ಗೆ ಬದುಕಿನ ಕುರಿತಾಗಿ ಕೇವಲ ಕನಸ್ಸನ್ನು ಮಹಿಳಾ ಕಾವ್ಯ ಕಾಣುತ್ತಿಲ್ಲ. ಬದುಕಿನ ತೀವ್ರ ತರವಾದ ಹಂಬಲ ಪ್ರತಿಯೊಂದು ಕವಿತೆಯಲ್ಲೂ ಕಂಡುಬರುತ್ತದೆ.

ಉಲ್ಲೇಖಗಳು

೧.	ವೀರಣ್ಣ.ಸಿ,	ಕನ್ನಡ ಕಾವ್ಯ ಕಂಡಹೆಣ್ಣು,	೨೦೧೦	ಪು.ಸಂ. ೧೨೫
೨.	ಶ್ರೀಮತಿ.ಹೆಚ್.ಎಸ್,(ಸಂ)	ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ,	೨೦೦೬.	ಪು.ಸಂ. ೯೨
೩.	ವೀರಣ್ಣ.ಸಿ,	ಕನ್ನಡ ಕಾವ್ಯ ಕಂಡ ಹೆಣ್ಣು,	೨೦೧೦	ಪು.ಸಂ. ೧೨೭
೪.	ಶ್ರೀಮತಿ.ಹೆಚ್.ಎಸ್,(ಸಂ)	ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ,	೨೦೦೬.	ಪು.ಸಂ.೨೫೦
೫.	ಶ್ರೀಮತಿ.ಹೆಚ್.ಎಸ್,(ಸಂ)	ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ,	೨೦೦೬.	ಪು.ಸಂ.೧೭೬
೬	ಶ್ರೀಮತಿ.ಹೆಚ್.ಎಸ್, (ಸಂ)	ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ,	೨೦೦೬.	ಪು.ಸಂ.೨೫೧
೭	ಬೆಳಗೆರೆಜಾನಕಮ್ಮ,	ಕಲ್ಯಾಣ (ಸಮಗ್ರ),	೨೦೧೧.	ಪು.ಸಂ.೧೧೯
೮.	ಬೆಳಗೆರೆಜಾನಕಮ್ಮ,	ಕಲ್ಯಾಣ (ಸಮಗ್ರ),	೨೦೧೧.	ಪು.ಸಂ.೩೮೫
೯.	ಬೋರಲಿಂಗಯ್ಯ.ಹೀ.ಚಿ / ಶಿವಾನಂದ.ಎಸ್.ವಿರಕ್ತಿಮಠ,(ಸಂ),	ಮಹಿಳಾಅಧ್ಯಯನ,	೨೦೦೨.	ಪು.ಸಂ.೧೧೯
೧೦.	ಬೋರಲಿಂಗಯ್ಯ.ಹೀ.ಚಿ / ಶಿವಾನಂದ.ಎಸ್.ವಿರಕ್ತಿಮಠ,(ಸಂ),	ಮಹಿಳಾಅಧ್ಯಯನ,	೨೦೦೨,	ಪು.ಸ೦.೯
೧೧.	ಆಶಾದೇವಿ.ಎಂ.ಎಸ್,	ನಾರಿಕೇಳಾ,	೨೦೧೬.	ಪು.ಸಂ.೧೮
೧೨.	ಪ್ರತಿಭಾನಂದಕುಮಾರ್,	ಆಹಾ!ಪುರುಷಾಕಾರಂ.	೨೦೦೦.	ಪು.ಸಂ.೧೦೩
೧೩.	ಪ್ರತಿಭಾನಂದಕುಮಾರ್,	ಆಹಾ!ಪುರುಷಾಕಾರಂ.	೨೦೦೦.	ಪು.ಸಂ.೬೯
೧೪.	ಶಶಿಕಲಾವೀರಯ್ಯಸ್ವಾಮಿ,	ಹೆಂಗಹೇಳಲೇಗೆಳತಿ.	೧೯೮೯.	ಪು.ಸಂ.೧೨
೧೫	ಪುಷ್ಪ.ಹೆಚ್.ಎಲ್,	ಅಮೃತಮತಿಸ್ವಗತ,	೧೯೯೨,	ಪು.ಸಂ.೧೬
೧೬.	ಪುಷ್ಪ.ಹೆಚ್.ಎಲ್,	ಅಮೃತಮತಿಸ್ವಗತ,	೧೯೯೨,	ಪು.ಸಂ.೧೭
೧೭.	ಪುಷ್ಪ.ಹೆಚ್.ಎಲ್,	ಅಮೃತಮತಿಸ್ವಗತ,	೧೯೯೨,	ಪು.ಸಂ.೧೭
೧೮.	ವೀರಣ್ಣ.ಸಿ,	ಕನ್ನಡ ಕಾವ್ಯ ಕಂಡ ಹೆಣ್ಣು,	೨೦೧೦,	ಪು.ಸಂ.೩೪
೧೯.	ಲಲಿತಾನಾಯಕ್ ಬಿ.ಟಿ,	ಬಿದಿರುಮೆಳೆ ಕಂಟಿಯಲಿ,	೧೯೯೭,	ಪು.ಸ೦.೯
೨೦.	ಲಲಿತಾನಾಯಕ್ ಬಿ.ಟಿ,	ಬಿದಿರುಮೆಳೆ ಕಂಟಿಯಲಿ,	೧೯೯೭,	ಪು.ಸಂ.೧೦
೨೧.	ಲಲಿತಾನಾಯಕ್ ಬಿ.ಟಿ,	ಬಿದಿರುಮೆಳೆ ಕಂಟಿಯಲಿ,	೧೯೯೭,	ಪು.ಸಂ.೪೫
೨೨.	ಲಲಿತಾನಾಯಕ್ ಬಿ.ಟಿ,	ಬಿದಿರುಮೆಳೆ ಕಂಟಿಯಲಿ,	೧೯೯೭,	ಪು.ಸಂ.೪೮
೨೩.	ಷರೀಫಾ ಕೆ,	ನೂರೇನಳ ಅಂತರಂಗ,	೧೯೯೭,	ಪು.ಸಂ.೬
೨೪.	ಷರೀಫಾ ಕೆ,	ನೂರೇನಳ ಅಂತರಂಗ,	೧೯೯೭,	ಪು.ಸಂ.೧೫
೨೫.	ದು.ಸರಸ್ವತಿ;	ಜೀವಸಂಪಿಗೆ,	೨೦೦೬,	ಪು.ಸಂ.೪೪
೨೬.	ದು.ಸರಸ್ವತಿ;	ಜೀವಸಂಪಿಗೆ,	೨೦೦೬,	ಪು.ಸಂ.೨೭
೨೭.	ದು.ಸರಸ್ವತಿ;	ಜೀವಸಂಪಿಗೆ,	೨೦೦೬,	ಪು.ಸಂ.೨೯
೨೮.	ಸಾಹಿತ್ಯ ಅಕಾಡೆಮಿ;	ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ,	೨೦೦೨,	ಪು.ಸಂ.೧೩
೨೯.	ಬಸವರಾಜು ಎಲ್,	ಅಕ್ಕನವಚನಗಳು,	೧೯೬೬.	ಪು.ಸಂ.೭೪

೩೦. ರಾಗೌ;(ಸಂ)	ಮಹಿಳಾ ಅಧ್ಯಯನದ ಆಯಾಮಗಳು,	೨೦೦೮,	ಪು.ಸಂ.೬೫
೩೧. ಪ್ರತಿಭಾನಂದಕುಮಾರ್;	ಈತನಕ,	೧೯೮೮,	ಪು.ಸಂ.೩೨
೩೨. ಶಶಿಕಲಾವೀರಯ್ಯಸ್ವಾಮಿ;	ಹೆಂಗಹೇಳಲೇಗೆಳತಿ.	೧೯೮೯.	ಪು.ಸಂ.೭೧
೩೩. ಪ್ರತಿಭಾನಂದಕುಮಾರ್;	ನಾವು ಹುಡುಗಿಯರೇ ಹೀಗೆ,	೧೯೮೩,	ಪು.ಸಂ.೭೩
೩೪. ಶಶಿಕಲಾವೀರಯ್ಯಸ್ವಾಮಿ;	ಗುಬ್ಬಿಮನಿ.	೧೯೭೯.	ಪು.ಸಂ.೪೯
೩೫. ಪುಷ್ಪ.ಹೆಚ್.ಎಲ್,	ಅಮೃತಮತಿ ಸ್ವಗತ,	೧೯೯೨,	ಪು.ಸಂ.೧೪
೩೬. ಷರೀಫಾ ಕೆ,	ನೂರೇನಳ ಅಂತರಂಗ,	೧೯೯೭,	ಪು.ಸಂ.೨೦
೩೭. ಷರೀಫಾ ಕೆ,	ನೂರೇನಳ ಅಂತರಂಗ,	೧೯೯೭,	ಪು.ಸಂ.೨೦
೩೮. ಷರೀಫಾ ಕೆ,	ನೂರೇನಳ ಅಂತರಂಗ,	೧೯೯೭,	ಪು.ಸಂ.೨೩
೩೯. ಷರೀಫಾ ಕೆ,	ನೂರೇನಳ ಅಂತರಂಗ,	೧೯೯೭,	ಪು.ಸಂ.೩೩
೪೦. ಷರೀಫಾ ಕೆ,	ನೂರೇನಳ ಅಂತರಂಗ,	೧೯೯೭,	ಪು.ಸಂ.೯
೪೧. ಷರೀಫಾ ಕೆ,	ನೂರೇನಳ ಅಂತರಂಗ,	೧೯೯೭,	ಪು.ಸಂ.೨೨
೪೨. ಷರೀಫಾ ಕೆ,	ನೂರೇನಳ ಅಂತರಂಗ,	೧೯೯೭,	ಪು.ಸಂ.೨೨
೪೩. ಷರೀಫಾ ಕೆ,	ನೂರೇನಳ ಅಂತರಂಗ,	೧೯೯೭,	ಪು.ಸಂ.೩
೪೪. ಷರೀಫಾ ಕೆ,	ನೂರೇನಳ ಅಂತರಂಗ,	೧೯೯೭,	ಪು.ಸಂ.೩
೪೫. ರಾಘವೇಂದ್ರರಾವ್ ಹೆಚ್.ಎಸ್,	ಕಣ್ಣಹನಿಗಳಕಾಣಿಕೆ,	೨೦೦೨,	ಪು.ಸಂ.೧೨೧
೪೬. ರಾಘವೇಂದ್ರರಾವ್ ಹೆಚ್.ಎಸ್,	ಕಣ್ಣಹನಿಗಳಕಾಣಿಕೆ,	೨೦೦೨,	ಪು.ಸಂ.೧೨೨
೪೭. ಸುಬ್ಬಣ್ಣ ಕೆ.ವಿ;	ಪ್ರತಿಭಾ ನಂದಕುಮಾರ್ ಆಯ್ದ ಕವಿತೆಗಳು,	೨೦೦೭,	ಪು.ಸಂ.೩೫

* * * * *

ಅಧ್ಯಾಯ – ೫

ಮಹಿಳಾ ಕಾವ್ಯ: ಅಧ್ಯಯನದ ವಿವಿಧ ಮಾದರಿಗಳು

೫.೧ ಬೆಳಗೆರೆ ಜಾನಕಮ್ಮನವರ ಕಾವ್ಯದ ವಿನ್ಯಾಸ

೫.೨ ನಿರ್ಲಕ್ಷಿತ ಸಮುದಾಯ ಪ್ರಜ್ಞೆಯ ಪ್ರತಿನಿಧೀಕರಣ :
ಬಿ.ಟಿ. ಲಲಿತಾ ನಾಯಕ್‌ರವರ ಕಾವ್ಯ

೫.೩ ಪರಂಪರೆ ಮತ್ತು ಆಧುನಿಕತೆಗಳ ನೆಲೆಯಲ್ಲಿ ಶಶಿಕಲಾ ವೀರಯ್ಯಸ್ವಾಮಿಯವರ ಕಾವ್ಯ

೫.೪ ಹೆಣ್ಣಿನ ಅಸ್ಮಿತೆಯ ಹುಡುಕಾಟ, ಸ್ವಾತಂತ್ರ್ಯದ ಅಭಿಲಾಷೆ :
ಪ್ರತಿಭಾ ನಂದಕುಮಾರ್‌ರವರ ಕಾವ್ಯ

೫.೫ ತಾಯ್ತನದ ಹುಡುಕಾಟ : ಲಲಿತಾ ಸಿದ್ದಬಸವಯ್ಯನವರ ಕಾವ್ಯ

೫.೬ ಹೆಣ್ಣಿನ ಆತಂಕದ ನೆಲೆಗಳು : ಕೆ.ಷರೀಫಾರವರ ಕಾವ್ಯ

೫.೭ ಬಂಡಾಯ ಪ್ರಜ್ಞೆಯ ನೆಲೆಯಲ್ಲಿ : ಹೆಚ್. ಎಲ್. ಪುಷ್ಪ ಅವರ ಕಾವ್ಯ

೫.೮ ದಲಿತ ಮಹಿಳೆಯ ಪ್ರಶ್ನೆಗಳು : ದು.ಸರಸ್ವತಿಯವರ ಕಾವ್ಯ

ಅಧ್ಯಾಯ – ೫

ಮಹಿಳಾ ಕಾವ್ಯ: ಅಧ್ಯಯನದ ವಿವಿಧ ಮಾದರಿಗಳು

ಮಹಿಳಾ ಕಾವ್ಯ ರಚನೆಗೊಂಡ ಬಗೆ, ಅದರ ಸಾಧಕ ಬಾದಕಗಳನ್ನು ಸರಳೀಕರಣಗೊಳಿಸಿ ಹೇಳಿಕೆ ಕೊಡುವುದು ಸೂಕ್ತವಲ್ಲ. ಕವಿತೆ ರಚಿಸುವಾಗಿನ ತುಡಿತ, ಅಲ್ಲಿನ ಸಾಮಾಜಿಕ ಪರಿಸ್ಥಿತಿಗಳು ಹೀಗೆ ಎಲ್ಲವನ್ನೂ ಗಣನೆಗೆ ತೆಗೆದುಕೊಂಡು ಚರ್ಚಿಸಬೇಕಾದ ಅಗತ್ಯವಿದೆ.

ಇಪ್ಪತ್ತನೆಯ ಶತಮಾನವು ಆಧುನಿಕ ಕನ್ನಡ ಕಾವ್ಯದ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾದ ಕಾಲ. ಈ ಸಂದರ್ಭದ ಕವಿಗಳು ಕವಯಿತ್ರಿಯರೆಲ್ಲರೂ ಹೆಚ್ಚಾಗಿ ಮಧ್ಯಮ–ವರ್ಗದವರ ಆಶೋತ್ತರಗಳಿಗೆ ಹೆಚ್ಚಿನ ಮಹತ್ವ ಕೊಟ್ಟು ಬರೆದವರೆ. ಅಕ್ಷರ ಜ್ಞಾನದ ದಾಹ ಒಂದೆಡೆಯಾದರೆ ಬರೆಯಲೇಬೇಕೆಂಬ ತುಡಿತ ಹೆಚ್ಚಿನವರಲ್ಲಿದ್ದುದು ಕಂಡುಬರುತ್ತದೆ. ಆಧುನಿಕ ಕನ್ನಡ ಸಾಹಿತ್ಯ ಲೋಕಕ್ಕೆ ಮಹಿಳೆಯರು ಅಡಿ ಇಟ್ಟಾಗ ಅವರು ಎದುರಿಸಿದ ಸಮಸ್ಯೆಗಳು ಹಲವಾರು. ಸಮಾಜದೊಂದಿಗಿನ ಮುಖಾಮುಖಿ, ತನ್ನವರೊಂದಿಗಿನ ಹೆಣಗಾಟ, ಲೋಕ ಜ್ಞಾನದ ಅರಿವಿನ ಹಂಬಲ ಹಾಗೂ ಸಂಸಾರ ಬಂಧನಗಳೆಲ್ಲವನ್ನೂ ದಾಟಿ ಸಾಹಿತ್ಯ ಲೋಕದಲ್ಲಿ ಗುರ್ತಿಸಿಕೊಂಡವರು ಕೆಲವು ಮಂದಿ ಮಾತ್ರ. ಆದರೆ ಬೆಳಕಿಗೆ ಬರದ ಅದೆಷ್ಟೋ ಮಂದಿ ಇರಬಹುದು. ನವೋದಯ ಸಾಹಿತ್ಯವು ಅಧ್ಯಯನದೊಂದಿಗೆ ಅನುಭವ ರೂಪಿಯಾದ ಕಾಲಘಟ್ಟವಿದು. ಮನುಷ್ಯನ ಬದುಕು ವ್ಯವಸ್ಥಿತವಾದ ಮಾರ್ಗವೊಂದನ್ನು ರೂಪಿಸಿಕೊಂಡಿತ್ತು. ಪರಿವರ್ತನೆಯ ಚಿಂತನೆಯನ್ನು ನವೋದಯ ಕಾಲಘಟ್ಟವು ಅಳವಡಿಸಿಕೊಂಡಿತ್ತು. ಇದನ್ನು 'ಚಳುವಳಿ' ಎಂಬ ಹೆಸರಿನಿಂದಲೂ ನಿರೂಪಿಸಬಹುದು. 'ಸ್ವಾತಂತ್ರ್ಯವನ್ನು ಹಂಬಲಿಸುತ್ತಿದ್ದ ಜನತೆಗೆ 'ಶಿಕ್ಷಣ' ಎಂಬುದು ಮುಖ್ಯ ವಾಹಿನಿಯಾಯಿತು. ರಾಷ್ಟ್ರೀಯ ಚಿಂತನೆ – ಪ್ರಕೃತಿ ಆರಾಧನೆ, ಆದರ್ಶ ಮೈತ್ರಿ ಇವೆಲ್ಲವೂ ಕಲ್ಯಾಣದ ಹಾದಿಯನ್ನೇ ಮುಖ್ಯ ಕಾರ್ಯವಾಗಿ ಸ್ವೀಕರಿಸಿದವು. ಮಹಿಳೆ ಸಹ ಶಿಕ್ಷಣ ಪಡೆಯಬೇಕೆಂಬ ಹಂಬಲ ಹೊಂದಿದ್ದಳು. ಇಲ್ಲಿನ ಕುಟುಂಬ ವ್ಯವಸ್ಥೆಗಳು, ಸಂಪ್ರದಾಯ ನಿಷ್ಠವಾಗಿ ಅಜ್ಞಾನದ ಕೂಪ ಮಂಡೂಕಗಳಾಗಿದ್ದವು. ಮಹಿಳೆ ತನ್ನ ಅಭಿವ್ಯಕ್ತಿಯನ್ನು ಪುರುಷ ಚಿಂತನೆಗೆ ಪೂರಕವಾಗಿಯೇ ನೀಡಬೇಕಾದ ಸಂದರ್ಭ ಒದಗಿತು. ಈ ಸಂದರ್ಭದಲ್ಲಿ ಮಹಿಳೆಯು ಶಿಕ್ಷಣ ಪಡೆದ ಇತಿಹಾಸವು ಮೈಲಿಗಲ್ಲು. ಅದೊಂದು ಪ್ರತ್ಯೇಕ ಅಧ್ಯಯನ. ಈಗಾಗಲೇ ಸಂಶೋಧನೆಗೊಂಡ ಇತಿಹಾಸ.

ನವೋದಯ ಕವಯಿತ್ರಿಯರಾದ ನಂಜನಗೂಡು ತಿರುಮಲಾಂಬ, ಬೆಳಗೆರೆ ಜಾನಕಮ್ಮ, ತಿರುಮಲೆ ರಾಜಮ್ಮ, ಸರಸ್ವತಿಬಾಯಿ ರಾಜವಾಡೆ ಮುಂತಾದವರು ತಮ್ಮ ಮೊದಲ ಸಾಹಿತ್ಯ ಕೃಷಿ ಬೆಳೆಗೆ ಸಾಕ್ಷಿಯಾದವರು. ಈ ಕಾಲದ ಲೇಖಕಿಯರಿಗೆ ಸಾಹಿತ್ಯ ಎಂತಹ ಸವಾಲಾಗಿತ್ತೆಂದರೆ ಬರಹ ರಚಿಸುವ ಸ್ವಾತಂತ್ರ್ಯದ ಜೊತೆಗೆ, ಓದುಗರನ್ನೂ ಸೃಷ್ಟಿಸಿಕೊಳ್ಳಬೇಕಾದ ಅನಿವಾರ್ಯತೆ ಅವರಿಗಿತ್ತು. ಇವೆಲ್ಲವುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಬಂದರೆ ಆ ಕಾಲದ ಸಂಪ್ರದಾಯದ ಬಿಗಿಹಿಡಿತ ಹೇಗಿತ್ತೆಂಬುದು ತಿಳಿಯುತ್ತದೆ. ಇವರ ಕವಿತೆಗಳಲ್ಲಿ ದೇಶಪ್ರೇಮ, ಪರಿಸರ ಕಾಳಜಿ, ದಾಂಪತ್ಯ, ಆಧ್ಯಾತ್ಮ, ನಿವೇದನೆ, ಸ್ವಾತಂತ್ರ್ಯ ಬಯಕೆ, ಹೆಣ್ತನ ಮುಂತಾದ ಅಂಶಗಳನ್ನು ಯಾವುದೇ ಅಳುಕಿಲ್ಲದೆ ಬರಹದಲ್ಲಿ ಚಿತ್ರಿಸಿದ್ದಾರೆ. ಸಂಪ್ರದಾಯ ಕುಟುಂಬದ ಒಳಗಿದ್ದರೂ, ಆ ಕಾಲದ ದುಷ್ಟ ಪದ್ಧತಿಯನ್ನು ಒಪ್ಪಿಕೊಳ್ಳದೆ ಮುಕ್ತ ಪ್ರಪಂಚ ಬಯಸುವ ಸೂಕ್ಷ್ಮತೆಯೂ ಇವರ ಬರಹಗಳಲ್ಲಿ ಕಾಣಬಹುದು.

ಕಾವ್ಯ ಮಾಧ್ಯಮವನ್ನು ನವೋದಯ ಕವಯಿತ್ರಿಯರಲ್ಲಿ ಗಂಭೀರವಾಗಿ ಪರಿಗಣಿಸಿದವರಲ್ಲಿ ಪ್ರಮುಖವಾಗಿ ಬೆಳೆಗೆರೆ ಜಾನಕಮ್ಮನವರನ್ನು ಗುರ್ತಿಸಬಹುದು. ಇವರ ಕಾಲಕ್ಕೆ ಕಾವ್ಯ ಸೃಷ್ಟಿ ಸೀಮಿತವಾಗಿತ್ತು. ಏಕೆಂದರೆ ಶಿಕ್ಷಣದ ಜೊತೆಗೆ ಆ ಕಾಲದ ಜನತೆಯ ಮನೋಧರ್ಮ ಸ್ವಾತಂತ್ರ್ಯದ ಕೊರತೆ. ಇಂತಹ ವೈವಿಧ್ಯತೆಯ ಕೊರತೆಯ ಕಾಲದಲ್ಲೂ ಬೆಳಗೆರೆ ಜಾನಕಮ್ಮನವರ ಸಾಹಿತ್ಯ ಸೃಷ್ಟಿ ಉತ್ಕೃಷ್ಟವಾಗಿತ್ತೆಂದರೆ ಆಶ್ಚರ್ಯವಲ್ಲ. ಸಂಪ್ರದಾಯ ಮತ್ತು ಸಾಮಾಜಿಕ ಪ್ರಜ್ಞೆಯ ನಡುವೆ ಹುಟ್ಟುವ ಬರವಣಿಗೆ ಸೂಕ್ಷ್ಮತೆ ಹಾಗೂ ಗಟ್ಟಿತನದ್ದಾಗಿರುತ್ತದೆ. ಇದನ್ನು ನಾವು ಬೆಳಗೆರೆ ಜಾನಕಮ್ಮನವರ ಕವಿತೆಗಳಲ್ಲಿ ಕಾಣುತ್ತೇವೆ. ಪ್ರಸ್ತುತ ಅಧ್ಯಯನದಲ್ಲಿ ಪ್ರಾತಿನಿಧಿಕವಾಗಿ ಕೆಲವು ಕವಯಿತ್ರಿಯರ ಕವನ ಸಂಕಲನಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರಮುಖವಾಗಿ ಕವಯಿತ್ರಿಯರ ಮನೋಭಿಲಾಷೆಗಿಂತ ಕಾವ್ಯದ ರಚನಾ ಮಾದರಿಗಳು ಮುಖ್ಯವಾದ ಅಂಶಗಳಾಗಿವೆ. ಉದಾ:ಬೆಳೆಗೆರೆ ಜಾನಕಮ್ಮ, ಪ್ರತಿಭಾ ನಂದಕುಮಾರ್, ಬಿ.ಟಿ.ಲಲಿತಾನಾಯಕ್, ಲಲಿತಾ ಸಿದ್ದಬಸವಯ್ಯ, ಶಶಿಕಲಾ ವೀರಯ್ಯಸ್ವಾಮಿ, ಹೆಚ್.ಎಲ್. ಪುಷ್ಪ, ಕೆ.ಷರೀಫಾ, ದು.ಸರಸ್ವತಿ, ಮೊದಲಾದವರ ಕವಿತೆಗಳಲ್ಲಿ ಕಂಡುಬರುವ ವಸ್ತು ನಿಷ್ಠ ಅಂಶಗಳನ್ನು ಅಧ್ಯಯನದ ಮಾದರಿಗಳಾಗಿ ಕಂಡುಕೊಳ್ಳುವ ಪ್ರಯತ್ನವಿದೆ. ಆದ್ದರಿಂದ ಬೆಳಗೆರೆ ಜಾನಕಮ್ಮನವರನ್ನು ಅಧ್ಯಯನದ ಮೊದಲ ಕವಯಿತ್ರಿಯಾಗಿ ಗುರುತಿಸಲಾಗಿದೆ. ಏಕೆಂದರೆ ಕನ್ನಡ ಮಹಿಳಾ ಕಾವ್ಯ ಕ್ಷೇತ್ರದಲ್ಲಿ ಮೊದಲಿಗರಾದ ಇವರು ಕವನ ಕಟ್ಟಿದ ವಿವಿಧ ಮಾದರಿಯ ಅಂಶಗಳು ಮೊದಲ ಆದ್ಯತೆಯಾಗಿ ಕಂಡುಬರುತ್ತದೆ. 'ಕವಿತೆ ಬರೆವ ಜಾನಕಮ್ಮ' ಎಂದೇ ಪ್ರಸಿದ್ಧರಾದ ಇವರು ಆ ಕಾಲದಲ್ಲಿ ಸಾಹಿತ್ಯ ಕ್ರಾಂತಿ ಮಾಡಿದವರಲ್ಲಿ ಪ್ರಮುಖರೆನ್ನಬಹುದು.

"ನನ್ನವನಲ್ಲದ ನೀನು ನನ್ನ ತನವನ್ನು ಒರೆ ಹಚ್ಚಬೇಡ ಗೆಳೆಯಾ" ಎಂಬ ಸಾಲುಗಳು ಮಹಿಳಾ ಸಾಹಿತ್ಯ ಲೋಕದಲ್ಲಿ ಪ್ರತಿಧ್ವನಿಯಂತಿವೆ. ಏಕೆಂದರೆ ಹೆಣ್ಣಿನ ಅಂತರಂಗದ

ವಿಭಿನ್ನ ಮಾದರಿಗಳನ್ನು ತೆರೆದಿಡುವ ಪ್ರಯತ್ನ ಮಾಡುವುದೂ ಸಹ ಕಾವ್ಯದಿಂದಲೇ. ಇಂತಹ ಸಂಬಂಧವನ್ನು ಗಟ್ಟಿಗೊಳಿಸಿಕೊಂಡವರಲ್ಲಿ ಬೆಳಗೆರೆ ಜಾನಕಮ್ಮನವರು ಮೊದಲಿಗರು.

೫.೧ ಬೆಳಗೆರೆ ಜಾನಕಮ್ಮನವರ ಕಾವ್ಯದ ವಿನ್ಯಾಸ

೧೯೧೨ ಚಳ್ಳಕೆರೆ ತಾಲ್ಲೂಕು ಬೆಳೆಗೆರೆಯಲ್ಲಿ ಜನನ. ತಂದೆ ಚಂದ್ರಶೇಖರ ಶಾಸ್ತ್ರಿ, ತಾಯಿ ಅನ್ನಪೂರ್ಣಮ್ಮ. ವಿಧ್ಯಾಭ್ಯಾಸ ಎರಡನೆ ತರಗತಿಯಾದರೂ ಬರವಣಿಗೆಯ ಪ್ರೌಢಿಮೆ ಸಿದ್ದಿಸಿದ್ದು ಕಾವ್ಯ ಬರೆಯುವ ಮೂಲಕವೇ ಮಗನಿಗಾಗಿ ಹೇಳುತ್ತಿದ್ದ ಹಾಡುಗಳು ಬರವಣಿಗೆಯ ರೂಪ ಪಡೆಯಲು ತಂದೆಯೇ ಪ್ರೇರಣೆ. ಸಂಪ್ರದಾಯ ಬದ್ಧ ಜನಿವಾರವನ್ನೇ ಆಧ್ಯಾತ್ಮಿಕ ಸ್ಥಳವಾದ ಶೃಂಗೇರಿಯಲ್ಲಿ ಕಿತ್ತೆಸೆದವರು ಚಂದ್ರಶೇಖರ ಶಾಸ್ತ್ರಿಗಳು. ಸಂಪ್ರದಾಯಕ್ಕಿಂತ ಶುಚಿತ್ವಕ್ಕೆ ಬೆಲೆ ಕೊಡುವ ಮನೆತನದಲ್ಲಿ ಹುಟ್ಟಿ ಬೆಳೆದವರು ಜಾನಕಮ್ಮ. ಇವರಿಗೆ ಪಾಂಡಿತ್ಯ ಓದಿನಿಂದ ಬಂದದ್ದಲ್ಲ ಅಥವಾ ಬರೆಯಬೇಕೆಂಬ ಹಂಬಲದಿಂದಲೂ ಹೊರ ಬಂದದ್ದಲ್ಲ. ದಿನನಿತ್ಯದ ಬದುಕಿನ ಇತರ ಕ್ರಿಯೆಗಳೆಂಬಂತೆ ಅವರ ಕವಿತೆಗಳ ರಚನೆ ಮೂಡಿಬಂದಿದೆ. ಹತ್ತನೇ ವಯಸ್ಸಿನಲ್ಲಿಯೇ ತನ್ನ ಸೋದರತ್ತೆಯ ಮಗನಾದ ಮಲ್ಲೂರು ಕೃಷ್ಣಶಾಸ್ತ್ರಿಯನ್ನು ಮದುವೆಯಾದರು. ಬಡತನವೆಂಬ ಅಂಶ ಎಂದಿಗೂ ಇವರಿಗೆ ಮುಳುವಾಗಲಿಲ್ಲ. ತಂದೆಯ ಪ್ರೋತ್ಸಾಹವೇ ಇವರು ಬರೆದ ಕವಿತೆಗಳನ್ನು ದಾಖಲು ಮಾಡಲು ಪ್ರೇರೇಪಿಸಿತೆನ್ನಬಹುದು. ತಮ್ಮ ೧೭ನೇ ವಯಸ್ಸಿಗೆ ಅಂದರೆ ೧೯೨೯ರಲ್ಲಿ ತನ್ನ ಮಗನನ್ನು ತೊಟ್ಟಿಲಲ್ಲಿ ತೂಗುತ್ತಾ ಮಗನಿಗಾಗಿ ಕವಿತೆ ರಚಿಸಿದರು.

"ಕಮಲನಾಭ ಬಾರೋ ಹಸೆಗೆ ವಿಮಲ ಸುಂದರ
ಕಂದ ಬಾರೋ ಚಂದದಿಂದ ಇಂದು ಹಸೆಗೆ"[೧]

ಈ ಕವಿತೆಯಲ್ಲಿ ಒಂದು ಸುಂದರ ಲಾಲಿತ್ಯ ಕಂಡುಬರುತ್ತದೆ. ಸಾಹಿತ್ಯ ಕ್ಷೇತ್ರವಾದ ಬಳ್ಳಾರಿಗೆ ಅನೇಕ ಜನ ವಿದ್ವಾಂಸರು ಬರುತ್ತಿದ್ದ ಕಾಲವಾದ್ದರಿಂದ ಎಲ್ಲರೂ ಇವರ ಮನೆಗೆ ಬಂದು ಹಾಡಿಸಿ ಸಂತೋಷ ಪಡುತ್ತಿದ್ದರೆಂದರೆ ಜಾನಕಮ್ಮನವರ ಕವನ ರಚನೆ ಮತ್ತು ಕಂಠ ಸಿರಿಯ ಪ್ರೌಢಿಮೆ ತಿಳಿಯುತ್ತದೆ. ಜಾನಕಮ್ಮನವರ ಕವನಗಳ ಪ್ರಚಾರಕರಾಗಿಯೂ ಇವರ ತಂದೆ ಕೆಲಸ ಮಾಡಿದ್ದರು. ಕ್ಲಿಷ್ಟ ಪದಗಳನ್ನು ಮಗನ ಶಾಲೆಯ ಮೇಷ್ಟರಿಂದ ನಿವಾರಿಸಿಕೊಳ್ಳುತ್ತಿದ್ದರು. ಅನೇಕ ವಿದ್ವಾಂಸರು ಜಾನಕಮ್ಮನವರ ಕವಿತೆಗಳನ್ನು ಮೆಚ್ಚಿದವರಾಗಿದ್ದರು. ಅವರಲ್ಲಿ ಜಿ.ಪಿ.ರಾಜರತ್ನಂ, ಬೇಂದ್ರೆ, ಆಂಧ್ರದ ವೆಣ್ಣಲವೇಟಿ ವೆಂಕಟಕೃಷ್ಣಶರ್ಮ, ಕಲ್‌ಗೋಡು ಅಶ್ವತ್ಥರಾಯ ಮತ್ತು ಸಂಗಯ್ಯ ಇವರೆಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಅನಾರೋಗ್ಯ ಪೀಡಿತರಾದ ಜಾನಕಮ್ಮನವರು ಸಂಸಾರ ಮತ್ತು ಸಾಹಿತ್ಯ ಇವೆರಡನ್ನೂ ಸರಿದೂಗಿಸುವ ಜವಾಬ್ದಾರಿ ಹೊತ್ತವರು. ಏಕೆಂದರೆ ಅಂದಿನ ಕಾಲದಲ್ಲಿ ಮಹಿಳೆಗೆ ಅಕ್ಷರ ಜ್ಞಾನವೇ ಒಂದು ಶಾಪವಾಗಿದ್ದ ಸಂದರ್ಭದಲ್ಲಿ ಜಾನಕಮ್ಮನ ಬರವಣಿಗೆ ನೋಡಿ ಹೀಯಾಳಿಸಿದ ಮಂದಿ ಅನೇಕ.

"ಗಂಡನೆಂದರೆ ಪ್ರಾಣ, ಹೆಣ್ಣೆ ನೀ ಗಂಡನ ಕೂಡಿಕೊಂಡ್ಯ
ನೋಡು ಮಂಡೂಕ ಸರ್ಪದ ನೆಳಲಿಗೆ ಹೊಗಂತೆ
ಬಂಡಿಗೆ ಬಿಸದನು ಶಿರಬಾಗಿ ಕೊಂಡಂತೆ।
ಎಚ್ಚರದಿಂದಿರು ಹೆಣ್ಣೆ – ಇಂತು ಬರೆದಿಹನು ಬ್ರಹ್ಮಣ್ಣ
ತಪ್ಪಿಸಲಳವುಂಟೆ ಸ್ತ್ರೀ ಪುರುಷರೊಡನಾಟ
ಲೀಲಾಮಾನುಷ ಭಕ್ತ ವತ್ಸಲನ ಆಟ" [೨]

ಗಂಡ ಹೆಂಡಿರ ಸಂಬಂಧ ಕಪ್ಪೆ ಸರ್ಪದ ಸಂಬಂಧ. ಅಂದರೆ ಹಾವಿನ ಹೆಡೆಯ ಆಶ್ರಯದಲ್ಲಿ ಕಪ್ಪೆಯ ಬದುಕು ಹೇಗೆ ದುರ್ಬಲವೋ ಗಂಡ ಹೆಂಡಿರ ಸಂಬಂಧ ನಿರಂತರ ಹೊಂದಾಣಿಕೆಯದು ಎಂದಿದ್ದಾರೆ. ಹಾವಿನ ನೆರಳು ಕಪ್ಪೆಗೆ ಶಾಶ್ವತವಲ್ಲ ಎಂಬ ಸೂಕ್ಷ್ಮತೆಯನ್ನೂ ಕವಯಿತ್ರಿ ಮುಂದಿಡುತ್ತಾರೆ. ಇಲ್ಲಿ ಪ್ರತಿಮೆಗಳ ರೂಪದಲ್ಲಿ ಎತ್ತು ಮತ್ತು ಕಪ್ಪೆಯನ್ನು ತಂದಿದ್ದಾರೆ. ಮೂಕ ಪ್ರಾಣಿಯ ನೋವು ಹೆಣ್ಣಿನ ಮೂಕ ವೇದನೆಯ ಪ್ರತಿಬಿಂಬದಂತೆ ಕಂಡಿದೆ.

ಕವನ ಹುಟ್ಟುವುದು ಬೇಸರದಿಂದಲ್ಲ ಅರಸಿಕತೆ ಮತ್ತು ತಾತ್ಸಾರ ಮನೋಭಾವದವರ ನಡುವೆ ಕವನದ ಮಹತ್ವ ಯಾವ ಬಗೆಯಲ್ಲಿಯೂ ರುಚಿಸುವುದಿಲ್ಲವೆಂಬುದನ್ನು ಕವಿತೆಯಲ್ಲಿಯೇ ಉತ್ತರಿಸುತ್ತಾರೆ.

"ಎಲ್ಲ ಬಿಟ್ಟು ಈ ಅರಸಿಕರ ಮನೆಯಲ್ಲೇ ಬಂದು
ಜನಿಸಬೇಕೆ ಈ ಕವಿತೆಯ ಕೂಸು
ಮಂದಗತಿಗಳ ಗೃಹದಿ ನಿನ್ನ ಜನನವೆ ಕವಿತೆ.
ಸಂಕುಚಿತ ಗೃಹವಿದು ನೀನೇಕೆ ಮೆಚ್ಚಿದೆ
ನೀನಿರೆಮ್ಮಡಿಯೊಳಗೆ ನಿನ್ನ ವಾಸನೆ ಅಕಟ
ಆವ ಮುನಿ ಶಾಪದಿಂ ನೀ ನಿಲ್ಲಗೈ ತಂದೆ" [೩]

ಈ ಸಾಲಿನಲ್ಲಿ ಹತಾಷೆ ಮತ್ತು ನೋವಿನಿಂದ ರಚಿತವಾದ ಕವಿತೆ. ಇದು ಸಂಬಂಧದೊಳಗಿದ್ದು ಅನ್ಯಾಯವನ್ನು ಪ್ರತಿಭಟಿಸಲಾರದ ಪರಿಸ್ಥಿತಿ ಜಾನಕಮ್ಮನವರಿಗಿದೆ. ಕವಿತೆ ಎಂಬುದು ಆಸ್ವಾದಿಸುವ ಸಂಕೇತವಾಗಬೇಕು. ಅರಸಿಕತೆ ಎಲ್ಲಿರುತ್ತದೋ ಅಲ್ಲಿ ಸತ್ಯಹೀನವೆಂದು ಕವಯಿತ್ರಿಯು ನೋವು ಮತ್ತು ಹತಾಷೆಯಿಂದ ಚಿತ್ರಿಸಿದ್ದಾರೆ. ಕವನ ರಚನೆ ಜಾನಕಮ್ಮನವರ ಪಾಂಡಿತ್ಯದ ಜೊತೆ ಅವರ ಬದುಕಿನ ನೆಲೆ ಹಾಗೂ ಕಲೆ ಎರಡೂ ಆಗಿದೆ. ಏಕೆಂದರೆ ತನ್ನಣ್ಣನ ಮದುವೆ ಮನೆಯಲ್ಲೇ ಪದ ಕಟ್ಟಿ ಹಾಡುವ ಜಾಣ್ಮೆ ಜಾನಕಮ್ಮನವರಲ್ಲಿತ್ತು. ಹೀಗಾಗಿ ಅಕ್ಷರ ಜೋಡಣೆಯಲ್ಲಿ ಶ್ರಮವಹಿಸಿದರೇ ಹೊರತು ಸಾಹಿತ್ಯವನ್ನು ರೂಪಿಸುವಿಕೆಯಲ್ಲಲ್ಲ ಎಂಬ ಅಂಶ ಇವರ ಕವನಗಳ ಮೂಲಕ ತಿಳಿಯುತ್ತದೆ.

"ಕರ್ಕಶದ ನುಡಿಗಳನು ಕೇಳಿ ವೇದನೆಗೊಂಡು
ಆಕ್ರೋಶದಲಿ ಬೀಳೆ ಕುಕ್ಷಿತನು ಎಂಬುವರು
ಪೆಸರನಿಕ್ಕುವರೊಂದ ಪಶುವು ನೀನೆಂದು
ದಕ್ಕದು ನಿನ್ನ ಮನಕೆ ಶಾಂತಿಯ ಕೊನೆಗೆ
ಅಕ್ಕರದ ನುಡಿಗಳನು ನುಡಿದು ಪ್ರೀತಿಸು ಜನರ
ಸಿಕ್ಕುವುದು ನಿನ್ನ ಮನಕಾಗ ಸಂತಸವು"[೪]

ಸಮಾಜದ ಜನರ ಮನಸ್ಥಿತಿಗಳನ್ನು ಕಾವ್ಯ ಸೃಷ್ಟಿಯ ಮೂಲಕವೇ ಖಂಡಿಸುತ್ತಾರೆ. ಮನುಷ್ಯ ಮತ್ತು ಪ್ರಾಣಿಗಳಿಗಿರುವ ವಿವೇಕವನ್ನು ಪರಿಚಯಿಸಿ ಕೊಡುತ್ತಾರೆ. ಕೆಟ್ಟದ್ದಕ್ಕಿಂತ ಒಳ್ಳೆಯದರ ಒಳಿತಿನ ಬಗೆಗೆ ಸೂಕ್ಷ್ಮತೆ ಇಲ್ಲಿದೆ. ಇದರ ಜೊತೆಗೆ ಸಮಾಜದ ಕುಹಕ ನುಡಿಗಳಿಗೆ ತಮ್ಮ ಕವಿತೆಯ ಮೂಲಕವೇ ಉತ್ತರಿಸುತ್ತಾರೆ.

"ಕವಿಗಳನು ಕೆಣಕದಿರಿ ದಮ್ಮಯ್ಯ ನೀವು
ಕವಿಯಲ್ಲದವರಿಗೆ ಗೊತ್ತೆ ಕವಿತನವು
ಭಳಿ ಭಳಿಕೆ ಭಳರೆಂದು ಹೊಗಳದಿರಿಸಾಕು
ಹೊಗಳಿಕೆಯು ತೆಗಳಿಕೆಯು ಕವಿಗೇನುಬೇಕು"[೫]

ಪ್ರತಿಭಾ ಶಕ್ತಿ ಇದ್ದವರಿಗೇ ಕವಿತ್ವ ಬರವಣಿಗೆ ಎಂದರೆ ಸಾಮಾನ್ಯದ್ದಲ್ಲ. ಕವಿಯಾದವನಿಗೆ ಹೊಗಳಿಕೆ, ತೆಗಳಿಕೆ ಯಾವುದೂ ಬೇಡ, ಕವಿತ್ವವೇ ಪರಮ ಸುಖ ಎಂದು ನಂಬಿದವರು ಜಾನಕಮ್ಮನವರು. ಓದಿದ್ದು ಅಲ್ಪವಾದರೂ ತಿಳಿದದ್ದು ಅಪಾರ. ತಂದೆಯವರ ಬೆಂಬಲ, ವಿದ್ವಾಂಸರ ಆಗಮನ, ಅತಿಥಿಗಳ ಉಪಚಾರ ಇವೆಲ್ಲವೂ ಅವರ ವ್ಯಕ್ತಿತ್ವವನ್ನು ಇಮ್ಮಡಿ ಗೊಳಿಸಿದವು. ಸಂಸಾರದಿಂದ ವಿಮುಕ್ತಳಾಗದೆ ಸಾಹಿತ್ಯದ ಘನತೆಯನ್ನು ಎತ್ತಿ ತೋರಿಸಿದರು ಮಹಿಳಾ ಕಾವ್ಯ ಲೋಕಕ್ಕೆ ಅಡಿಗಲ್ಲಾದರು. ಹೀಗಿದ್ದರೂ ಪತಿಯು ವರ್ತನೆ ಸಮಾಜದೊಂದಿಗಿನ ಹೊಂದಾಣಿಕೆಯ ಸ್ವಭಾವ ತಮ್ಮ ಸಾಹಿತ್ಯಕ್ಕೆ ಅವರಿಂದ ಸಿಗದ ಪ್ರೋತ್ಸಾಹವನ್ನು ತಮ್ಮ ಕವಿತೆಯಲ್ಲಿ ಪ್ರತಿಭಟಿಸಿರುವುದು ಕಂಡುಬರುತ್ತದೆ.

ಬಳ್ಳಾರಿಯಲ್ಲಿ ಜನಿಸಿದರೂ ಸಾಹಿತ್ಯ ಗೋಷ್ಠಿಗಳಿಗೆ ವೇದಿಕೆ ಹತ್ತಿದ್ದು ಒಂದೆರಡು ಸಲ ಮಾತ್ರ. ಸಾಹಿತಿ ಎಂಬ ಯಾವುದೇ ಅಹಮಿಕೆ ಇಲ್ಲದೆ ತನ್ಮಯತೆಯಿಂದ ತಾನು ರಚಿಸಿದ ಕವನಗಳನ್ನು ಹಾಡುತ್ತಿದ್ದ ರೀತಿಗೆ ಎಂತಹ ವಿದ್ವಾಂಸರೂ ತಲೆದೂಗುತ್ತಿದ್ದಂತಹ ವ್ಯಕ್ತಿತ್ವ ಇವರದು. ಕವಿತೆ ಹೆಚ್ಚು ಪ್ರಚಲಿತದಲ್ಲಿಲ್ಲದ ಕಾಲದಲ್ಲಿಯೇ ಭಕ್ತಿ, ಆಧ್ಯಾತ್ಮ, ಪ್ರಕೃತಿ ವೈಭವ, ಸ್ತ್ರೀ ಪರ ಕಾಳಜಿ, ತತ್ವ ಚಿಂತನೆ, ವ್ಯಕ್ತಿ ಚಿತ್ರಣ, ದೇಶಪ್ರೇಮ, ಮುಂತಾದವುಗಳ ಬಗ್ಗೆ ಕವಿತೆ ರಚಿಸುವ ಜ್ಞಾನ ಶಕ್ತಿ ಜಾನಕಮ್ಮನವರಿಗಿತ್ತು. ಐತಿಹಾಸಿಕ ಸ್ಮಾರಕಗಳಿಗೆ ಬಳ್ಳಾರಿ ಜಿಲ್ಲೆ ಹೆಸರುವಾಸಿ. ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯ ತನ್ನದೇ ಆದ ಛಾಪನ್ನು ಮೂಡಿಸಿದೆ. ಇಂತಹ ಹಂಪೆಯ ಗತವೈಭವ ನೋಡುಗನ ಕುತೂಹಲವನ್ನು

ಮತ್ತೆ ಮತ್ತೆ ಹೆಚ್ಚಿಸುತ್ತದೆ. ಈ ಹಂಪೆಗೆ ಬಳ್ಳಾರಿ ಜಿಲ್ಲೆಯವರಾದರೂ ಜಾನಕಮ್ಮನವರು ಹೋದದ್ದು ಎರಡು ಬಾರಿ ಮಾತ್ರ. ಇಂತಹ ಹಂಪೆಯ ಗತ ವೈಭವ ಇದರ ಇತಿಹಾಸ ಮಹತ್ವವನ್ನು ವರ್ಣಿಸುತ್ತಲೇ ಅದರ ಶಿಥಿಲ ವ್ಯವಸ್ಥೆಗೆ ಮರುಗಿದಂತೆ ಕವಿತೆಯ ಮೂಲಕ ಪ್ರತಿಕ್ರಿಯಿಸಿದ್ದಾರೆ.

"ಬನ್ನಿರಣ್ಣೋ ಬನ್ನಿರಣ್ಣೋ ಭಾರತೀಯರ ಹಂಪೆಗೆ
ಮೌಲ್ಯವಂತ ಮತಂಗ ರುಷಿಯ ಹೇಮಕೂಟದ ಬೀಡಿಗೆ
ಏನಿದೆಚ್ಚರ ಪ್ರಕೃತಿದೇವಿಯು ನೃತ್ಯಗೈದಿಹಳೇ ಎಡೆ
ಮನುಜರೆದೆಯನು ಬೇಧಿಸಿ ಮುಗ್ಧ ಗೊಳಿಸುವುದೀ ಎಡೆ.
ಲೆಕ್ಕವಿಲ್ಲದ ದೇಗುಲಂಗಳು ದಿಕ್ಕುಕಾಣದೆ ನಿಂತಿವೆ
ಮಸಣವಾಗಿದೆ ಪಟ್ಟಣವು ವಿಧಿಮಹಿಮೆ ತಿಳಿಯಲು ಸಾಧ್ಯವೇ?[೬]

ಪ್ರಕೃತಿಯಾಟದ ಮುಂದೆ ಮನುಷ್ಯನ ವೈಭವ ಜೀವನ ಕನಿಷ್ಠ ಎಂಬುದನ್ನು ಕವಯತ್ರಿ ಹಂಪೆಯ ಪ್ರತಿಮಾ ರೂಪದಲ್ಲಿ ಕಟ್ಟಿ ಕೊಡುತ್ತಾರೆ. ಹಂಪೆಯನ್ನು ಕಂಡ ಪ್ರತಿಯೊಬ್ಬನ ಮನಸ್ಸು ವಿಹ್ವಲವಾಗುತ್ತದೆ. ಪ್ರಕೃತಿ ದೇವಿಯ ನೃತ್ಯವೇ ರೂಪಕವಾಗಿ ಧರೆಗಿಳಿದಿದೆ ಎನ್ನುವಲ್ಲಿ ಸಂಭ್ರಮಿಸುವ ಕವಯಿತ್ರಿಗೆ ಹಾಳು ಹಂಪೆಯ ನೋಟ ನೋವನ್ನುಂಟು ಮಾಡುತ್ತದೆ. ಎಲ್ಲವನ್ನೂ ಅಸ್ವಾದಿಸುವ ಮನಸ್ಥಿತಿ ಹೆಣ್ಣಾದವಳಿಗಿದೆ ಎಂಬುದನ್ನು ಕವಯಿತ್ರಿ ಸ್ಪಷ್ಟ ಪಡಿಸುತ್ತಾರೆ.

ಅಕ್ಷರಗಳನ್ನು ಕಲಿಯುತ್ತಲೇ ಕವನ ರಚನೆಯನ್ನು ಹವ್ಯಾಸವಾಗಿಸಿ ಕೊಂಡವರು ಜಾನಕಮ್ಮನವರು. ತಂದೆಯ ಸಾಹಿತ್ಯ ಪ್ರೋತ್ಸಾಹವಿದ್ದರೂ, ಸಮಾಜಕ್ಕೆ ಹೆದರಬೇಕಾದ ಅನಿವಾರ್ಯತೆ ಅವರ ಅನೇಕ ಬರಹಗಳಲ್ಲಿ ಕಾಣಬಹುದು. ಬಡತನದ ನಡುವೆ ಸ್ವಾತಂತ್ರ್ಯವಿಲ್ಲದ ಹೆಣ್ಣಿನ ಬಗ್ಗೆ ಧ್ವನಿಸಿದ್ದಾರೆ ಮತ್ತು ಪರಿತಪಿಸಿದ್ದಾರೆ.

"ಕುದಿಯುವುದು ಒಳಗೊಳಗೆ
ಸ್ವಾತಂತ್ರ್ಯವಿಲ್ಲೆನುತ
ದುಡಿಯುವುದು ಹಗಲಿರುಳು"[೭]

ಎಂಬ ಸಾಲುಗಳು ಹೆಣ್ಣಿನ ಬದುಕೇ ನಿತ್ಯ ದುಡಿತ ಎಂಬುದನ್ನು ಅಭಿವ್ಯಕ್ತಗೊಳಿಸಿವೆ. ಸಂಸಾರ ಮತ್ತು ಸಮಾಜದೊಂದಿಗಿನ ಹೆಣಗಾಟ ಅವಳಿಗೆ ಸುದೀರ್ಘ ಹೊಂದಾಣಿಕೆಯ ಪಾಠವನ್ನೇ ಬೋಧಿಸುತ್ತದೆ. ತನ್ನ ನೋವನ್ನು ಎಂದಿಗೂ ಅವಳು ಹೊರ ಹಾಕಲಾರದ ಸನ್ನಿವೇಶವನ್ನು ಕವಿತೆಯು ಧ್ವನಿಸುತ್ತದೆ. ಇವರ ಕವನ ರಚನೆಗೆ ಸ್ಫೂರ್ತಿಯಾದವರು ತಂಗಿ ಪಾರ್ವತಮ್ಮ. ಕಿರಿಯ ವಯಸ್ಸಿಗೆ ಎರಡನೆ ಹೆಂಡತಿಯಾಗಿ ಹೋದವಳು ಮಲಮಕ್ಕಳ ದೌರ್ಜನ್ಯಕ್ಕೊಳಗಾಗಿ ಜಾನಕಮ್ಮನವರ ಮನೆ ಸೇರಿ ಅವರಿಗೆ ಸಾಹಿತ್ಯಿಕ ಪ್ರೇರಣೆಯನ್ನೊದಗಿಸಿ ದರು. ಇವರ ಪ್ರೋತ್ಸಾಹದಿಂದಲೇ ಜಾನಕಮ್ಮನವರ ಕವಿತಾ ಪ್ರೌಢಿಮೆ ಉತ್ತುಂಗಕ್ಕೇರಿತೆನ್ನ

ಬಹುದು. ಜಾನಪದ ಶೈಲಿಯಲ್ಲಿ ಕವಿತೆ ಬರೆಯುತ್ತಿದ್ದ ಬೇಂದ್ರೆಯವರ ಪ್ರಭಾವ ಜಾನಕಮ್ಮನವರ ಮೇಲೆ ಅಪಾರವಾಗಿತ್ತು. ೧೯೪೫ರಲ್ಲಿ ಬೇಂದ್ರೆಯವರನ್ನು ಎಂದೂ ನೋಡಿರದ ಕವಯಿತ್ರಿ ಪತಿಯ ಮೂಲಕ ಬೇಂದ್ರೆಯವರಿಗೆ ಒಂದು ಕವಿತೆಯನ್ನು ಬರೆದು ಕಳುಹಿಸಿದರು.

"ದೋಷರಾಹಿತ್ಯದಾ ಕಲ್ಪನಾರಾಜ್ಯದೊಳು
ಸಗ್ಗದುಂಟವನುಣುವ ಹಿರಿಯ ಕಬ್ಬಿಗನೆ
ಜಡಮನಕೆ ಚೇತನವ ಕಲ್ಪಿಸುವ ಮಾನ್ಯ
ತೇಲಿಬಿಡು ಆ ನಿನ್ನ ಭಾವಗಳನೊಮ್ಮೆ" [೮]

ಎಂದು ಭಾವ ತುಂಬಿದ ದಾಟಿಯಲ್ಲಿ ಬರೆದುಕಳುಹಿಸಿದರು. ಈ ಪತ್ರಕ್ಕೆ ಮರುವಾರದಲ್ಲೇ ಬೇಂದ್ರೆಯವರಿಂದ ಉತ್ತರ ಬಂದಿತು.

"ತಂಗಿ ಜಾನಕಿ ನಿನ್ನ
ವೈದೇಹ ದೊಲವಿನಲಿ
ಓಲೆ ಬಂದಿತು ಒಂದು
ಇತ್ತತೇಲಿ,
ವಿಷಯ ವಿಷ ವಿಷಯವನು
ತಳ್ಳಿ ಪದತಲದಾಚೆ
ಸಪ್ತ ಸ್ವರ್ಗವ ಸೀಳಿ
ಮೇಲೆ ಹಾರು" [೯]

ಎಂಬ ಸಾಲುಗಳಲ್ಲಿ ನೋವು. ಅವಮಾನಗಳನ್ನು ಕಾಣುವುದರ ಜೊತೆಗೆ ನೂಕಾಚೆ ಎಂಬ ಎಚ್ಚರಿಕೆಯ ಮಾತೂ ಕಂಡುಬರುತ್ತದೆ. ಹೆಣ್ಣಾದವಳು ಬರವಣಿಗೆಯ ಸ್ವಾತಂತ್ರ್ಯವನ್ನು ಮೈಗೂಡಿಸಿಕೊಂಡಾಗ ಸಮಾಜದಲ್ಲಾಗುವ ಸಂಚಲನದ ಅರಿವನ್ನು ಮನಗಾಣಿಸುವ ರೀತಿಯಲ್ಲಿ ಬೇಂದ್ರೆಯವರ ಉತ್ತರವಿದೆ.

ಬಡತನವನ್ನೂ ಹಾಸ್ಯಮಯವಾಗಿ ಕಾಣುವ ಜಾಣ್ಮೆ ಜಾನಕಮ್ಮನವರಿಗಿತ್ತು. ರತ್ನನ ಪದಗಳ ರೂಪದಲ್ಲೇ ಒಂದು ಕವಿತೆ ಬರೆದರು. ಬಡತನದಿಂದ ಮಗನ ಕಾಲೇಜಿನ ಶುಲ್ಕ ಭರಿಸಲಾಗದ ಸಂದರ್ಭದಲ್ಲೂ ಇವರ ಕವಿತಾ ಜಾಣ್ಮೆ ಮೆಚ್ಚುವಂತದ್ದು. ಹಾಗಾಗಿಯೇ ಸುತ್ತ ಮುತ್ತಲಲ್ಲಿ ಕವಿತೆ ಬರೆವ ಜಾನಕಮ್ಮ ಎಂದು ಪ್ರಸಿದ್ದಿ ಪಡೆದದ್ದು. ಲಕ್ಷ್ಮೀ ಮತ್ತು ಸರಸ್ವತಿಯರೂ ಹೆಣ್ಣೆ. ಇಲ್ಲಿ ಹೆಣ್ಣಾದವಳೊಬ್ಬಳು ಕಷ್ಟದಲ್ಲಿದ್ದರೆ ನೀವು ನನ್ನನ್ನೇ ದೂಡುವುದು ಸರಿಯಲ್ಲ. ನಮ್ಮಲ್ಲಿ ಹೊಂದಾಣಿಕೆ ಇರಬೇಕೆಂದು ರತ್ನನ ಪದದ ರೂಪದಲ್ಲಿಯೇ ಪದ ಕಟ್ಟಿದ್ದಾರೆ.

"ಸರಸೋತಮ್ಮ ನಮಗೆ
ಪರಸನ್ನಾಗ ಬೇಕಂದ್ರ
ಲಕ್ಸ್ಮಮ್ಮನ್ ಗೆಳೆತನ ಮೊದಲಾಗ್ಬೇಕು.
ನಾವ್ ನಾವ್ ಎಣ್ ಮಕ್ಳಂದ್ರೆ
ಎಂಗಿರ್‌ಬೇಕುಗೊತ್ತ
ಅಣಿಮುತ್ತ ಹವಳಾನ
ಪೋಣಿಸಿದಂಗಿರ್ಬೇಕು
ಅಸುಗೂಸಿನ್ ಗಲ್ಲಕ್ಕ
ಮುತ್ಕೊಟ್ಟಂಗಿರಬೇಕು" [೧೦]

ದೇವರನ್ನು ಹೆಣ್ಣಿನ ರೂಪದಲ್ಲಿ ನೋಡುವ ರೀತಿ ಹೆಣ್ಣಿನ ಕಷ್ಟವನ್ನು ಹೆಣ್ಣಾದವಳೇ ಅರ್ಥ ಮಾಡಿಕೊಳ್ಳಬೇಕೆಂಬ ಮಾತು ಇಲ್ಲಿ ಧ್ವನಿಸುತ್ತದೆ. ಒಟ್ಟಾರೆಯಾಗಿ ಬೆಳೆಗೆರೆ ಜಾನಕಮ್ಮನವರ ಕವಿತಾ ಪ್ರೌಢಿಮೆ ಉನ್ನತ ಮಟ್ಟದಲ್ಲಿ ಸೃಜಿಸಲು ನೆರವಾದವರು ಅವರ ತಂದೆ ಚಂದ್ರಶೇಖರ ಶಾಸ್ತ್ರಿಗಳು. ಮಡಿ ಮೈಲಿಗೆಗಿಂತ ಪಾಂಡಿತ್ಯಕ್ಕೆ ಬೆಲೆ ಕೊಡಬೇಕೆಂಬ ಉದಾರ ಮನಸ್ಸಿನ ವ್ಯಕ್ತಿತ್ವದವರು. ಆದ್ದರಿಂದಲೇ ಜಾನಕಮ್ಮನವರ ಸಾಹಿತ್ಯ ಕೃಷಿ ಹುಲುಸಾಗಿ ಬೆಳೆಯಲು ಕಾರಣವಾಯಿತೆನ್ನಬಹುದು.

೫.೧ ನಿರ್ಲಕ್ಷಿತ ಸಮುದಾಯ ಪ್ರಜ್ಞೆಯ ಪ್ರತಿನಿಧೀಕರಣ : ಬಿ.ಟಿ. ಲಲಿತಾ ನಾಯಕ್‌ರವರ ಕಾವ್ಯ

ಕ್ರಿಯಾಶೀಲತೆಯ ಪ್ರತಿರೂಪವಾಗಿ ಬಿ.ಟಿ. ಲಲಿತಾನಾಯಕ್‌ರವರ ವ್ಯಕ್ತಿತ್ವವನ್ನು ಗುರುತಿಸಬಹುದು. ಸಮಾಜ ಸೇವಕಿಯಾಗಿ, ಸಂಘಟನಾ ಕಾರ್ಯಗಳಲ್ಲಿ ನಿರಂತರವಾಗಿ ತೊಡಗಿಸಿ ಕೊಂಡವರು. ಸಾಹಿತಿಯಾಗಿ ದಮನಿತರ ಪರ ಕಾಳಜಿ ವಹಿಸಿ ಹಲವು ಹೋರಾಟಗಳಲ್ಲಿ ಭಾಗವಹಿಸಿದವರು. ಇವರ ಕವಿತೆಗಳಲ್ಲೂ ಹೋರಾಟದ ಕುರುಹು ಇದೆ. ಇದು ಸಮುದಾಯದ ಜಾಗೃತಿ ಪ್ರಜ್ಞೆಯ ಮುನ್ನುಡಿಯೂ ಹೌದೆನ್ನಬಹುದು. ಪ್ರತಿಯೊಬ್ಬ ಲೇಖಕಿಯ ಮನಸ್ಥಿತಿಯು ಬೇರೆ ಬೇರೆಯಾಗಿರುತ್ತದೆ. ಅವರು ಬೆಳೆದು ಬಂದ ಪರಿಸರ ಸಮುದಾಯದ ಹಿನ್ನೆಲೆ, ಸಮಾಜದ ಆಗು ಹೋಗುಗಳಿಗೆ ಪ್ರತಿಸ್ಪಂದಿಸುವ ರೀತಿ ಮುಖ್ಯವಾದುದಾಗಿರುತ್ತದೆ. ಆದ್ದರಿಂದ ಕೆಲವೊಂದು ದೃಷ್ಟಿಕೋನಗಳ ಹಿನ್ನೆಲೆಯಲ್ಲಿ ಕವಯಿತ್ರಿಯರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದರಲ್ಲಿ ಲಲಿತಾನಾಯಕ್‌ರವರೂ ಮುಖ್ಯರಾಗುತ್ತಾರೆ.

ಇವರ "ಬಿದಿರುಮೆಳೆ ಕಂಟಿಯಲಿ" ಸಂಕಲನದಲ್ಲಿನ ಕೆಲವು ಕವಿತೆಗಳನ್ನು ಅಧ್ಯಯನಕ್ಕೆ ಒಳಗು ಮಾಡಿದ್ದು ಇಲ್ಲಿ ವಿವರಿಸಲಾಗಿದೆ. ಹಲವು ಹೋರಾಟಗಳಲ್ಲಿ ಭಾಗಿಯಾಗಿದ್ದ ಇವರದು ಸೃಜನಶೀಲ ಮನಸ್ಸು. ಜೆ.ಪಿ ಆಂದೋಲನ, ಜನತಾ ಪಾರ್ಟಿ,

ಗೋಕಾಕ್ ಚಳುವಳಿ, ಬಾಬ್ರಿ ಮಸೀದಿ ಪ್ರಕರಣ ಮುಂತಾದವುಗಳ ಬಗ್ಗೆ ತನ್ನದೇ ಆದ ಛಾಪನ್ನು ಮೂಡಿಸಿದವರು. ಇವರ ಬರವಣಿಗೆಯಲ್ಲಿ ಸ್ಪಷ್ಟತೆ ಇರುತ್ತದೆ. ಅಕ್ಷರ ವಂಚಿತ ಸಮುದಾಯದಿಂದ ಬಂದರೂ ಆ ಅಕ್ಷರಗಳಿಂದಲೇ ಇಂದು ಸಮಾಜದಲ್ಲಿ ಜಾಗೃತಿಯನ್ನು ಮೂಡಿಸುತ್ತಿರುವುದೇ ಕವಯಿತ್ರಿಯ ವಿಶಿಷ್ಟತೆಯಾಗಿದೆ.

ಕನ್ನಡ ನಾಡು, ನುಡಿ, ನೆಲ, ಜಲದ ಬಗ್ಗೆ ಹೋರಾಟಗಳು ನಡೆಯುತ್ತಲೇ ಇವೆ. ಈ ಹೋರಾಟಗಳು ಇಂದು ದುರಂತದ ಸ್ಥಿತಿಯನ್ನು ತಲುಪಿರುವುದು ವಾಸ್ತವ ಸಂಗತಿ. ಕನ್ನಡ ಭಾಷೆ ಇಂದು ಅಳಿವಿನಂಚಿನಲ್ಲಿದೆ ಎಂದು ಕನ್ನಡಿಗರೇ ಹೇಳುವ ದುಸ್ಥಿತಿಯನ್ನು ತಂದು ಕೊಂಡಿದ್ದೇವೆ. ನವಂಬರ್ ನಾಯಕರು ಕನ್ನಡಾಭಿಮಾನವನ್ನು ಕೇವಲ ನವಂಬರ್ ತಿಂಗಳಿಗೆ ಮಾತ್ರವೇ ಸೀಮಿತಗೊಳಿಸಿದ್ದಾರೆ. ಅಂತಹ ಸನ್ನಿವೇಶದಲ್ಲಿ ಕವಯಿತ್ರಿಯು ಭಾಷೆಗಾದ ಅನ್ಯಾಯದ ಬಗ್ಗೆ ಕವಿತೆಗಳನ್ನು ಚಿತ್ರಿಸಿದ್ದಾರೆ. ಸ್ವತಂತ್ರಳಾಗಿ ವಿರಾಜಿಸುತ್ತಿದ್ದ ಕನ್ನಡಮ್ಮ, ಮನೆ ಕೆಲಸದ ಆಂಗ್ಲ ಗೆಳತಿಯನ್ನು ಊರೂರು ಸುತ್ತಿಸಿ ಬೆಂಗಳೂರಿಗೆ ಬಂದಾಗ ಹೊಸದರ ವ್ಯಾಮೋಹಕ್ಕೆ ಸಿಕ್ಕಿ ಜನ ಆದರಿಸುವ ರೀತಿಯು ನೋವನ್ನುಂಟು ಮಾಡುತ್ತದೆ ಎಂದಿದ್ದಾರೆ.

> "ಕನ್ನಡಮ್ಮನೊಡನೆ ಇದ್ದ 'ಲೇಡಿಯನ್ನು ಕಂಡು ಜನರು
> ಅಡ್ಡಬಿದ್ದೆ 'ಮಮ್ಮಿ' ಎನುತ ಅಪ್ಪಿಕೊಂಡರು.
> ಹಾರಾ ತುರಾಯಿ ತೊಡಿಸಿ
> ಬೀದಿ ಬೀದಿಯಲ್ಲಿ ಮೆರೆಸಿ ಲೇಡಿಯನ್ನು ಎತ್ತಿಕೊಂಡು ಲಲ್ಲೆಗೈದರು
> ಕನ್ನಡಮ್ಮ ನಾಚಿಕೊಂಡು
> ಆಚೆ ಈಚೆ ನೋಡಿಕೊಂಡು
> ಗಲ್ಲಿಯೊಂದರಲ್ಲಿ ಬೇಗ ತೂರಿಕೊಂಡಳು
> ತಲೆಯು ಸುತ್ತು ಬಂದು ನೆಲಕ್ಕೆ ಬಿದ್ದು ಬಿಟ್ಟಳು" [೧೧]

ಈ ಸಾಲುಗಳಲ್ಲಿ ಕನ್ನಡ ಭಾಷೆ ಮತ್ತು ಕನ್ನಡಾಂಬೆಗಾದ ದುಸ್ಥಿತಿಯ ಚಿತ್ರಣವಿದೆ. ಪರಭಾಷಾ ವ್ಯಾಮೋಹದಿಂದ ಮಾತೃಭಾಷೆಗಾದ ಅನ್ಯಾಯವನ್ನೂ ಕವಯಿತ್ರಿ ಪ್ರತಿಭಟಿಸುತ್ತಾರೆ. ಆಂಗ್ಲ ಭಾಷೆಯ ಹಿಡಿತದ ಜೊತೆಗೆ ತಮಿಳು, ಮರಾಠಿ, ತೆಲುಗು, ಹಿಂದಿಯ ಪ್ರಭಾವದಿಂದ ಕನ್ನಡ ತನವನ್ನು ನಾವೇ ಮರೆತು ಬಿಟ್ಟೆವೆಲ್ಲಾ ಎಂಬ ಕೊರಗೂ ಈ ಸಾಲುಗಳಲ್ಲಿದೆ.

ಧರ್ಮ ಒಂದು ಸಮುದಾಯದ ಪ್ರತಿಬಿಂಬ. ಆ ಧರ್ಮವೇ ಇಂದು ಕೋಮು ಗಲಭೆಗೆ ಕಾರಣವಾಗಿದೆ. ರಾಮ ನಾಮ ಜಪಿಸುತ್ತಾ ರಾವಣನ ವರ್ತನೆ ಗೈಯುವವರ ಸಂಖ್ಯೆ ಹೆಚ್ಚಿದೆ. ಇಲ್ಲದ ರಾಮನಿಗೆ ನೆಲೆ ಒದಗಿಸುವ ಹುಂಬತನ ಪ್ರದರ್ಶಿಸುವವರ ಬಗ್ಗೆ ಕವಯಿತ್ರಿ ತೀಕ್ಷ್ಣವಾಗಿ ಟೀಕಿಸುತ್ತಾರೆ. ಸಾಮಾಜಿಕ ಕಳಕಳಿ ಸದಾ ಜಾಗೃತವಾಗುವಂತೆ "ರಾಮ ಅರ್ಜಿ ಹಾಕಿದ್ದಾನೆ" ಕವಿತೆಯಲ್ಲಿ ವಾಸ್ತವ ಸಮಸ್ಯೆಗಳ ಅನಾವರಣ ಮಾಡುತ್ತಾರೆ.

"ರಾಮನಾಮದ ಹಿಂದೆ ರಾಜ ಭೋಗದ ಬಯಕೆ
ಜೊಲ್ಲು ತೊಟ್ಟಿಕ್ಕುತ್ತಿದೆ
ಕಣ್ತೆರೆದು ನೋಡಿ
ನಕಲಿ ಧರ್ಮದ ಅಮಲು
ಬಲಿ ಪೀಠ ನಿರ್ಮಿಸಿದೆ
ಎಷ್ಟು ಕೊರಳುಗಳ ಗುರಿಯೋ ಎಣಿಸಿ ಕೊಳ್ಳಿ" ೧೨

ಪ್ರತಿಷ್ಠೆಯೇ ಮನುಷ್ಯನ ಸ್ವಾಭಿಮಾನ ಎಂಬ ಅತಿರೇಕದಲ್ಲಿ ನಾವಿದ್ದೇವೆ. ಇಲ್ಲಿ ಮುಸ್ಲಿಂ-ಹಿಂದೂಗಳ ಪರ ಅಥವಾ ವಿರೋಧದ ನೆಲೆಯನ್ನು ನಾವು ಪ್ರಶ್ನಿಸುತ್ತಿಲ್ಲ. ಕೋಮುವಾದದ ದಳ್ಳುರಿಗೆ ಅಮಾಯಕರ ಬಲಿದಾನ ಎಷ್ಟು ಸರಿ ಎಂಬುದು ನಮ್ಮ ಪ್ರಶ್ನೆಯಾಗಿದೆ. ವಿಚಾರಕ್ಕಿಂತ ನಮಗೆ ಆದರ್ಶಗಳೇ ಹೆಚ್ಚಿನವು. ಸತ್ಯಕ್ಕಿಂತ ಸುಳ್ಳಿನ ಹೊದಿಕೆಯೇ ಚೆಂದ ಕಾಣುತ್ತದೆ. ಪರಂಪರೆಯ ಮೌಲ್ಯಗಳಲ್ಲಿನ ಸತ್ಯವಿಂದು ನಮಗೆ ಬೇಕಿಲ್ಲ. ಎಲ್ಲವೂ ಸ್ಪರ್ಧೆಯ ರೂಪದಲ್ಲೇ ಕಾಣುವ ನಮಗೆ ರಾಮನ ರಾಜ್ಯಕ್ಕಿಂತ ಅಮಾಯಕರ ಬಲಿಪೀಠವೇ ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತದೆ ಎಂಬುದನ್ನು ಮನಗಾಣಿಸುತ್ತದೆ. ಹೀಗೇ ಮುಂದುವರೆದರೆ ಸಮಾಜ ಜಡತ್ವ ಹೊಂದುತ್ತದೆ. ಬಲಿಪೀಠ ರಕ್ತಸಿಕ್ತವಾದಾಗ ಹೊರಗಿನ ಆಕ್ರಮಣಕ್ಕಿಂತ ನಮ್ಮ ಅಂತ್ಯ ನಮ್ಮಿಂದಲೇ ಎಂಬುದನ್ನು ಕವಯಿತ್ರಿ ಮುಂದಿನ ಸಾಲುಗಳಲ್ಲಿ ಸ್ಪಷ್ಟೀಕರಿಸಿದ್ದಾರೆ.

"ಮುಕ್ತಾಯ ಕಾಂಡವಿದು
ಎಂದು ಭ್ರಮಿಸದಿರಿ
ರಾಮ ರಾವಣರ ಕದನ ಮುಗಿದಿಲ್ಲ
ಕುಂಭಕರ್ಣರು ನಾವಾಗುತ್ತೇವಾದರೆ
ಕಥೆಯು ಇಂದೇ ಆರಂಭ" ೧೩

ಮೇಲಿನ ಸಾಲುಗಳಲ್ಲಿ ಕುಂಭಕರ್ಣ ಎಂಬ ಪದ ಬಳಕೆಯಾಗಿದೆ. ಸಮಾಜ ಎಚ್ಚರಗೊಂಡಿರಬೇಕು, ಪ್ರತಿಯೊಬ್ಬರಲ್ಲೂ ಸ್ವಾಭಿಮಾನದ ಕಿಡಿ ಇರಬೇಕೇ ಹೊರತು ಪ್ರತೀಕಾರದ ಕಿಡಿಯಲ್ಲ ಎಂಬುದನ್ನು ತಿಳಿಸುತ್ತದೆ. ಕೇವಲ ರಾಮ ಮಂದಿರ ಮತ್ತು ಬಾಬ್ರಿ ಮಸೀದಿಯ ವಿವಾದ ಮಾತ್ರವಲ್ಲ ಹೆಣ್ಣಿನ ಮೇಲೆ, ಅಸಹಾಯಕರ ಮೇಲಾಗುವ ದೌರ್ಜನ್ಯಕ್ಕೆ ಕೊನೆಯೇ ಇಲ್ಲದಂತಾಗಿದೆ. ಸಮಾಜ ಚಲನಶೀಲವಾಗಬೇಕೆಂದರೆ ನಾವು ಅಹಂಕಾರದ ಮೌಢ್ಯವನ್ನು ಬಿಡಬೇಕೆಂದು ಕವಿತೆಯ ಮೂಲಕ ತಿಳಿಯ ಪಡಿಸುವ ಹಂಬಲ ಕವಯಿತ್ರಿಯದು.

ಬಿ.ಟಿ.ಲಲಿತಾನಾಯಕ್‌ರವರ ಕಾವ್ಯದಲ್ಲಿ ಕಂಡು ಬರುವ ಮುಖ್ಯ ಅಂಶವೆಂದರೆ ಸಾಮುದಾಯಕ ಪ್ರಜ್ಞೆ. ಅನಕ್ಷರಸ್ಥ ಕುಟುಂಬದಿಂದ ಬಂದ ಹೆಣ್ಣು ಮಗಳು ಅಕ್ಷರ ಕಲಿತು ತನ್ನವರ ಬದುಕಿನ ಬಗ್ಗೆ ಕಾವ್ಯ ರಚನೆ ಮಾಡುವಾಗಿನ ಸಂಭ್ರಮ ಮತ್ತು

ಸ್ವಾನುಭವವೂ ಇಲ್ಲಿದೆ. ಕಟ್ಟಿಗೆ ಮಾರಿ ಜೀವನ ನಡೆಸುವ ಲಂಬಾಣಿ ಸಮುದಾದ ತಲ್ಲಣಗಳು ಇಲ್ಲಿವೆ. ನಗರದಲ್ಲಿನ ಸಂಪಿಗೆಯ ವಾಸನೆ, ಕಾಡಂಚಿನ ತಾಂಡಾದಲ್ಲಿ ಬದುಕುವ ಜನರ ಬೆವರಿಗೆ ಸಮವಲ್ಲ. ಹಸಿವು, ಬಡತನ, ಪ್ರೀತಿ,ಬದುಕು ಇವೆಲ್ಲವನ್ನೂ 'ನೆನಪುಗಳು ಸಮಾದಿ ಹೊಂದುತ್ತದೆ' ಕವಿತೆಯಲ್ಲಿ ಹಿಡಿದಿರುತ್ತಾರೆ.

"ತಲೆ ಹೊರೆ ಹೊತ್ತು ದಾಪುಗಾಲಿಕ್ಕುವ
ನನ್ನವರ ಬೆವರು ವಾಸನೆ
ಅಡಗಿ ಹೋಗುತ್ತದೆ
ರಾಜಭವನದ ದಾರಿಯುದ್ದಕ್ಕೂ
ಗಮ ಗಮಿಸುವ ಮೊಲ್ಲೆ ಸಂಪಿಗೆಯ
ಹಸಿರು ನಂದನದಲ್ಲಿ
ಒಣಕೆರೆ ಬಾವಿ ಕಟ್ಟೆ ಬದಿ
ಕೊಡ ಹಿಡಿದು ಹನಿಹನಿ ಎಣಿಸುತ
ಬಾಯಾರಿ ನಿಂತ ಗೌರಿಯರ ಗಂಟಲ ಪಡೆ ಆರಿ
ನುಡಿಗಳಿಗೆ ಸಿಡಿಲು ಬಡಿಯುತ್ತದೆ"[೧೪]

ಹಳ್ಳಿ ಮತ್ತು ನಗರ ಜೀವನಗಳ ಅಂತರ ಕವಿತೆಯಲ್ಲಿ ದೊಡ್ಡ ಮಟ್ಟದಲ್ಲಿ ಕಂಡುಬರುತ್ತದೆ. ಸೂಕ್ಷ್ಮವಾಗಿ ಗಮನಿಸುವುದಾದರೆ ಬಡತನದಲ್ಲಿ ಬದುಕಿದ ಕವಯಿತ್ರಿಗೆ ಅಕ್ಷರ ಜ್ಞಾನ ದೊರೆತಾಗ ಅವಳಲ್ಲಾಗುವ ಸಂಚಲನ ಬಹಳ ಮುಖ್ಯವಾಗಿರುತ್ತದೆ. ತನ್ನವರು ಮತ್ತು ನಗರವನ್ನು ಹೋಲಿಕೆ ಮಾಡುವ ಸಂದರ್ಭ ಕೇವಲ ವ್ಯತ್ಯಾಸದ ಹೋಲಿಕೆ ಮಾಡದೆ, ನನ್ನ ಸಮುದಾಯಕ್ಕೂ ಓದಿನ ಅಗತ್ಯವಿದೆ, ಶಿಕ್ಷಿತಳಾದರೆ ಸಮುದಾಯದ ಏಳ್ಗೆ ಸಾಧ್ಯ ಎಂಬುದನ್ನು ಕವಯಿತ್ರಿ ಚಿತ್ರಿಸಿದ್ದಾರೆ. ನನ್ನಂತೆ ನನ್ನ ಸಮುದಾಯವೂ ಜಾಗೃತವಾಗಬೇಕೆಂಬ ಬಯಕೆಯಿದೆ. ಮನುಷ್ಯನ ದೈಹಿಕ ಶ್ರಮವನ್ನೂ ಕುರಿತು ಮಾತನಾಡುತ್ತಾರೆ. ಕಾಡುಜೀವನವನ್ನು ತನ್ನ ಸಮುದಾಯದವರು ನಡೆಸಿದರೂ ಮೈ ಮುರಿದು ದುಡಿದು ಬದುಕುವ ರೀತಿಯ ಅಗತ್ಯ ಮತ್ತು ಅನಿವಾರ್ಯತೆಗಳನ್ನು ತಿಳಿಸಿ ಕೊಡುತ್ತಾರೆ. ಭೂಮಿಗೆ ಒಂದು ಕಳೆ ಬರುವುದು ರೈತನ ಬೆವರು ಹರಿದಾಗ. ಅಂತಹ ರೈತನ ಬದುಕು ದುಃಸ್ಥಿತಿಗೆ ತಲುಪಿದ್ದರ ಬಗ್ಗೆ ಎಲ್ಲರಿಗೂ ಬೇಸರವಿದೆ.

"ನನ್ನ ಜನರ ಮೈ ಬೆವರ
ಹನಿಯಾಗಿ ಹರಿದಾಗ
ಭೂಮಿಗೇ ಬಂತೋ ಯೌವನ
ಉಡಿಯ ತುಂಬ ತೆನೆಯ ಸರ
ಮುಡಿಯೊಳಗೆ ಮೊಲ್ಲೆ ಮಾಲೆ

ಮೊಗ್ಗ ಮಿಡಿ ಸೂಸೆ ನೆರೆದವೋ
ಮುಗಿಲ ಚುಕ್ಕೆ ಮುದದಿಂದ
ನೆಲಕೆ ಇಳಿದವೋ- - - - -” [೧೫]

ಈ ಕವಿತೆಯನ್ನು ಓದುವಾಗ ಇದು ಕೇವಲ ಒಂದು ಸಮುದಾಯವನ್ನು ಕುರಿತು ಬರೆದದ್ದಲ್ಲ. ಇಡೀ ರೈತ ಸಮುದಾಯದ, ಶ್ರಮಜೀವಿಗಳ ಚಿತ್ರಣ ಕಣ್ಣಮುಂದೆ ಬರುತ್ತದೆ. ಬೋಳುಗುಡ್ಡ ಬಿತ್ತಿ ಹಸನು ಮಾಡಿದ ರೈತನ ಶ್ರಮ ಗಣಿಗಾರಿಕೆಗೆ ಸಿಲುಕಿ ಇಂದು ಪ್ರಕೃತಿಯೇ ನಶಿಸುತ್ತಿದೆ. ಹವಾಮಾನ ವೈಪರಿತ್ಯ, ಪ್ರಕೃತಿ ವಿಕೋಪಗಳು ಮನುಷ್ಯನ ಸರ್ವನಾಶ ಮಾಡುವಂತಿವೆ. ಇವೆಲ್ಲವನ್ನೂ ಕವಯಿತ್ರಿಯು ತಮ್ಮ ಕವನದಲ್ಲಿ ಹಿಡಿದಿಟ್ಟಿದ್ದಾರೆ.

ಶ್ರಮಿಕ ವರ್ಗವನ್ನು ಕಡೆಗಣಿಸಲಾಗುವ ಕಾಲದಲ್ಲಿ ‘ದುಡಿವ ಕರುಳಿನ ಕೂಗು’ ಕವಿತೆ ಬರೆಯುತ್ತಾರೆ. ಬಡವ ಮತ್ತು ಶ್ರೀಮಂತರ ನಡುವಿನ ಅಂತರವನ್ನು ತಿಳಿಸಿದರೂ ಸಾಮಾಜಿಕ ಸಮಾನತೆಯ ಬೇರುಗಳು ಅಳಿಸಲಾಗದಂತಹವು ಎಂಬುದನ್ನು ತಿಳಿಸುತ್ತದೆ. ಏಕೆಂದರೆ ನಾನು ನನ್ನದು ಎನ್ನುವವರ ಮುಂದೆ ಸಹಾಯ ಎಂಬ ಪದ ನಗಣ್ಯ. ಇಟ್ಟಿಗೆ, ಕಟ್ಟಿಗೆ ಹೊರುವ ಜನ, ಸೂರಿಲ್ಲದೆ ಕೊರಗಿ ಸಾಯುವ ಜನಗಳ ಬದುಕನ್ನು ಅವರ ಧಾರುಣ ಸ್ಥಿತಿಯನ್ನು ಕವಿತೆಯಲ್ಲಿ ನೋಡಬಹುದು.

“ಇಟ್ಟಿಗೆ ಕಂಕರು ಪಟ್ಟಿ ಹೊರುತ್ತೇವೆ
ನಿಮಗಾಗಿ ಭಾರೀ ಬಂಗಲೆ ಕಟ್ಟುತ್ತೇವೆ
ಕೊಳಚೆ ಕೂಪದ ಅರೆ ತಡಿಕೆಯಾಸರೆಯಲ್ಲಿ
ಮುದುಡಿಕೊಳ್ಳುತ್ತೇವೆ
ಕೂಗಿ ಕೇಳುತ್ತಿದ್ದೇವೆ ಈಗ ಹೇಳಿ
ಬೆನ್ನಿಗಂಟಿದ ನಮ್ಮೀ ಬಡತನಕೆ
ಸಾವೇ ಪರಿಹಾರವೇನು?
ಪರಾನ್ನ ಭಕ್ಷಕರಿಂದ ನಾವು ಕೀಳೇನು?
ಶ್ರಮಿಕ ಶಕ್ತಿಗೆಂದಾದರೂ ಬೆಲೆ ದೊರಕಿತೇನು?
ನ್ಯಾಯ ಸಿಕ್ಕಿತೇನು?” [೧೬]

ಮಹಿಳಾ ಕಾವ್ಯವೇ ಹಾಗೆ. ಕವಿತೆಗಳನ್ನು ಓದುವಾಗ ಅವು ಸಹೃದಯರನ್ನು ಸ್ವಪ್ನ ಲೋಕದಲ್ಲಿ ತೇಲಾಡಿಸುವುದಿಲ್ಲ, ಅತಿರೇಕದ ಅಂಚಿನಲ್ಲಿ ತಳ್ಳಿ ಬಿಡುವುದಿಲ್ಲ. ದರ ಬದಲಿಗೆ ಸತ್ಯ ಮತ್ತು ಸೌಂದರ್ಯವನ್ನು ಎಳೆ ಎಳೆಯಾಗಿ ಚಿತ್ರಿಸುತ್ತಾ ವಾಸ್ತವತೆಯ ಅರಿವನ್ನು ನಮ್ಮ ಮುಂದಿಡುತ್ತದೆ. ಹಸಿವು, ಬಡತನ, ಅನಾಥ ಪ್ರಜ್ಞೆ ಸಮುದಾಯದ ಉದ್ಧಾರ, ಶೋಷಣೆಗೆ ಪರಿಹಾರಬೇಕೆಂಬ ಕೂಗು ಮಹಿಳಾ ಕಾವ್ಯದಲ್ಲಿದೆ. ಭಾರತ ಮುಂದುವರೆದ ದೇಶವಾದರೂ ಇಲ್ಲಿ ನಿರಂತರವಾಗಿ ಶೋಷಣೆ ಮತ್ತು ಅತ್ಯಾಚಾರ ಗಲಭೆಗಳು ನಡೆಯುತ್ತಲೇ

ಇವೆ. ಇಂದಿಗೂ ಶಿಕ್ಷಣ ಪಡೆಯದ, ನಾಗರೀಕತೆಯ ಅರಿವೇ ಇಲ್ಲದ ಸಮುದಾಯಗಳು ಬೆಳಕಿಗೆ ಬಾರದೆ ಇರುವುದು ಶೋಚನೀಯ. ದುಡಿವ ವರ್ಗದ ಮೌಲ್ಯವನ್ನು ಕವಿತೆಯ ಮೇಲಿನ ಸಾಲುಗಳು ಒತ್ತಿ ಹೇಳುತ್ತವೆ. ದುಡಿವವರಿಗಿಂತ ಕಸಿದುಕೊಂಡು ತಿನ್ನುವವರೇ ಈಗಿನ ಕಾಲದಲ್ಲಿ ಹೆಚ್ಚು. ಅವರಿಗಿಂತ ನಾವುಗಳೇ ಮೇಲೆಂಬ ಭಾವನೆ (ಅಂದರೆ ಶ್ರಮಿಕ ವರ್ಗದವರು) ಕವಯಿತ್ರಿಗಿದೆ. ಇದು ಸತ್ಯವೂ ಹೌದು. 'ಬೆತ್ತಲಾಗಬೇಕು' ಕವಿತೆಯಲ್ಲಿ ಆಧ್ಯಾತ್ಮದ ಒಂದು ನಿಜವಾದ ಅರ್ಥವನ್ನು ಸೂಚಿಸಿದ್ದಾರೆ.

"ಬೆತ್ತಲಾಗಬೇಕು ನಾವು
ಬರೆ ಬೆತ್ತಲಾಗಬೇಕು
ಸ್ವಾರ್ಥವಂಚನೆಯ ಮುಸುಕು
ಹರಿದೊಗೆಯ ಬೇಕು
ಅಂತರಂಗದ ಕಸವ
ಗುಡಿಸಿ ಬಿಡಬೇಕು" [೧೭]

ಬೆತ್ತಲಾಗುವುದೆಂದರೆ ಮನಸ್ಸುಗಳ ಮುಕ್ತತೆ. ಅಕ್ಕಮಹಾದೇವಿ ಮತ್ತು ಗೊಮ್ಮಟನ ಪ್ರತಿಮೆಯನ್ನು ಕವಿತೆಯಲ್ಲಿ ಸಶಕ್ತವಾಗಿ ತರುತ್ತಾರೆ. ಬೆಟ್ಟ, ಪರ್ವತ, ಜಾನುವಾರು, ಹಸು ಕಂದ ಎಲ್ಲರನ್ನೂ ಉದಾಹರಿಸುತ್ತಾ ಕವಿತೆಯನ್ನು ಕಟ್ಟುತ್ತಾರೆ. ಈ ಕವಿತೆಯ ಒಟ್ಟಾರೆ ಆಶಯ ಮುಕ್ತತೆ, ಕೇವಲ ಬಟ್ಟೆ ಕಳಚಿದ ಮಾತ್ರಕ್ಕೆ ಬೆತ್ತಲಾಗುವುದಿಲ್ಲ ಮನುಷ್ಯತ್ವದಿಂದ ಅಹಂಕಾರ, ನಾನು, ನನ್ನದು ಎನ್ನುವುದನ್ನು ಬಿಟ್ಟಾಗಲೇ ಅವನು ಉನ್ನತ ಮಟ್ಟಕ್ಕೇರುತ್ತಾನೆ ಎಂಬುದು ಇಲ್ಲಿನ ಆಶಯ. ಆದರೂ ಪ್ರತಿಯೊಬ್ಬ ಮನುಷ್ಯನೂ ದುರಾಸೆಯ ಪುತ್ರನೇ. ವರ್ತಮಾನಕ್ಕಿಂತ ನಮಗೆ ಭವಿಷ್ಯದ ಚಿಂತೆಗಳೇ ಜಾಸ್ತಿಯಾದಾಗ ಮಾನವೀಯತೆ ನಮ್ಮಿಂದ ಮರೆಯಾಗುತ್ತದೆ. ಕವಿತೆಯ ಮೂಲಕ ಸ್ವಚ್ಛ ಸಮಾಜದ ಆಶಯವನ್ನು ಕವಯಿತ್ರಿ ವ್ಯಕ್ತಪಡಿಸುತ್ತಾರೆ.

ಜೀತ ಪದ್ಧತಿಯನ್ನು ಕವಯಿತ್ರಿಯು ವಿರೋಧಿಸುತ್ತಾ, ಧರ್ಮ ಶಾಸ್ತ್ರಗಳ ಹೆಸರು ಹೇಳಿ ಜನರನ್ನು ವಂಚಿಸುತ್ತಾ ಬಂದವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳುತ್ತಾರೆ. ಶಾಸ್ತ್ರ, ಪುರಾಣಗಳನ್ನು, ಪಾರಾಯಣ ಮಾಡುತ್ತಾ ದಲಿತ ಮತ್ತು ಶೋಷಿತ ಸಮುದಾಯಕ್ಕೆ ಭಯವನ್ನೇ ಬಿತ್ತುವ ಬ್ರಾಹ್ಮಣ್ಯವನ್ನೇ ಪ್ರಶ್ನಿಸುತ್ತಾರೆ. 'ಅದುಮಿಟ್ಟ ಕೊರಳು' ಎಂಬ ಕವಿತೆ ಶತಮಾನಗಳ ಧರ್ಮದ ಹೆಸರಿನಲ್ಲಿ ನಡೆದ ಅನ್ಯಾಯದ ಅನಾವರಣ ಮಾಡುತ್ತದೆ.

"ಎಷ್ಟೆಂದು ಬರೆಯುವುದು
ಮತ್ತೆ ಮತ್ತೆ ಏಕಿಷ್ಟು ಕೊರೆಯುವುದು?
ಶತಮಾನಗಳಿಂದ ಹೇಳಿದ್ದೇ ಹೇಳುವುದು
ಕೇಳಿಸಿ ಕೊಲ್ಲುವುದು" [೧೮]

ಬಲವಂತದ ಶೋಷಣೆಯು ಅಮಾಯಕರನ್ನು ಶತಮಾನಗಳ ಕಾಲ ಭಯಾನಕವಾದ ರೀತಿಯಲ್ಲಿ ಹಿಂಸಿಸಿದ ಚಿತ್ರಣ ಇಲ್ಲಿದೆ. ಇದು ಶತಮಾನಗಳ ಶೋಷಣೆ. ಕಾಲಕಳೆದಂತೆ ಇದರ ರೀತಿ ಸ್ವಲ್ಪ ಬದಲಾಗಿರಬಹುದು. ಆದರೆ ಹಿಂಸೆಯ ಆಧುನಿಕ ಚಿತ್ರಣ ಇಲ್ಲಿದೆ. ಇದೇ ಕವಿತೆಯಲ್ಲಿ ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ಕುರಿತು ಬರೆದಿದ್ದಾರೆ.

"ಸ್ನಾನ ಪೂಜೆ ಕಾಣಿಕೆ ವಸೂಲಿ
ಇದ ಹೊರೆತು ಮುಟ್ಟಲಿಲ್ಲ ಹಾರೆ ಗುದ್ದಲಿ
ಉತ್ತಲಿಲ್ಲ ಬಿತ್ತಲಿಲ್ಲ ಹಸಿ ಬೆವರು ಹರಿಸಲಿಲ್ಲ
ಜೀತ ಗೇಯಲಿಲ್ಲ ನೇಗಿಲು ಹಿಡಿಯಲಿಲ್ಲ
ಕೇರಲಿಲ್ಲ, ತೂರಲಿಲ್ಲ, ಮಣ್ಣು ಹೊತ್ತು ಶ್ರಮಿಸಲಿಲ್ಲ
ಶೌರ್ಯ ಮೆರೆಯಲಿಲ್ಲ ಶರಣು ಎನ್ನಲಿಲ್ಲ" ೧೯

ದುಡಿವ ಬೆವರಿಗಿಂತ ಹೋಮ ಕುಂಡದ ನಡುವಿನ ಕಾವೇ ಹೆಚ್ಚಾದಂತೆ ಕಂಡರೂ ಪುರಾಣ ಹೇಳುವ ಪುರೋಹಿತರ ಹೊಟ್ಟೆ ತುಂಬುವುದೂ ನಮ್ಮಿಂದಲೇ. ಅಂದರೆ ಶ್ರಮಿಕರಿಂದಲೇ ಎಂಬುದು ಸತ್ಯದ ಮಾತು ಹೇಳುತ್ತಾ ನಿಜವಾದ ಶ್ರಮಕ್ಕೆ ಬೆಲೆ ಇಲ್ಲದಂತಾಗಿದೆ ಎಂಬುದನ್ನು ಈ ಕವಿತೆ ಕೊನೆಯಲ್ಲಿ ಇನ್ನಾದರೂ ಬಿಡುಗಡೆ ಹೊಂದಬೇಕೆಂಬ ಆಶಯವನ್ನೂ ವ್ಯಕ್ತಪಡಿಸುತ್ತಾರೆ.

"ತುಳಿದು ಆಳಿದ್ದು ಸಾಕು / ಅಳಿಸಿ ಬಾಳಿದ್ದು ಸಾಕು
ಇನ್ನಾದರು ತುತ್ತೂರಿಗೆ ವಿಶ್ರಾಂತಿ ಬೇಕು
ಅದುಮಿಟ್ಟು ಕೊರಳು ಹಾಡಲಾರಂಭಿಸಿವೆ.
ಅನುಭವದ ದನಿಗೆ ಕಿವಿಗೊಡಬೇಕು" ೨೦

ಜೀತ ಪದ್ಧತಿಯ ವಿರೋಧ ಕಾವ್ಯದಲ್ಲಿ ಕಂಡುಬರುವ ಇನ್ನೊಂದು ಅಂಶ. ತುತ್ತೂರಿ ಎಂಬ ಪದ ಸನಾತನ ಧರ್ಮದ ಹೇರಿಕೆಯ ಮೌಲ್ಯಗಳನ್ನು ವಿರೋಧಿಸುತ್ತದೆ. ಪುರಾಣವೆಂಬ ಬದನೆಕಾಯಿ ನಮಗೆ ಬೇಡ ಎಂದು ಕೂಗಿ ಹೇಳುವ ಕಾಲ ಬಂದರೂ ಮೌಢ್ಯತೆಗೆ ಜೋತು ಬೀಳುವುದು ಬೇಡವೆಂದಿದ್ದಾರೆ. ಅನುಭವದ ದನಿ ಎಂದರೆ ಆತ್ಮವಿಶ್ವಾಸಕ್ಕೆ ಬೆಲೆ ಕೊಡಬೇಕೆಂದಿದ್ದಾರೆ.

ಮತೀಯವಾದಿಗಳಾಗಿ, ಜಾತಿವಾದಿಗಳಾಗಿ ಇರುವುದರಿಂದ ಯಾವ ಪ್ರಯೋಜನವೂ ಇಲ್ಲ. 'ಮಾನವಕುಲಂ ತಾನೊಂದೆವಲಂ' ಎಂಬ ಮಾತು ಪ್ರತಿಯೊಬ್ಬರ ಹೃದಯದಲ್ಲಿದ್ದರೆ ನಾವೆಲ್ಲರೂ ಒಂದೇ ಎಂಬ ಭಾವನೆ ಪ್ರತಿಯೊಬ್ಬರಲ್ಲಿರುತ್ತದೆ ಎಂಬುದನ್ನು 'ಒಂದೇ ಒಂದು ಬಾರಿ ಹೊರಬನ್ನಿ' ಎಂಬ ಕವಿತೆಯಲ್ಲಿದೆ.

"ಒಂದೇ ಒಂದು ಬಾರಿ ಹೊರಬನ್ನಿ ನೀವಾಗಿ
ತೋಡಿಕೊಂಡಿರುವ ಹೊಂಡದೊಗರುಗಳ ಮುಚ್ಚಿ
ಕಟ್ಟಿಕೊಂಡಿರುವ ಗೋಡೆ, ಗೋಪುರಗಳ ಕೆಡವಿ
ಒಂದೇ ಒಂದು ಬಾರಿ ಹೊರಬರುವಿರಾದರೆ
ಮಠ, ಮಂದಿರ ಚರ್ಚು ಮಸೀದಿಯ
ಬಾಗಿಲುಗಳು ನಿಮ್ಮ ಒಲೆಗೆ ಸೌದೆಗಳಾಗುತ್ತವೆ" ೨೧

ಭಾರತ ವಿವಿಧತೆಯಲ್ಲಿ ಏಕತೆಯನ್ನು ಕಾಣುವ ರಾಷ್ಟ್ರ. ನಾವೆಲ್ಲರೂ ಒಂದೇ ಎಂಬ ಮಾತುಗಳನ್ನು ವೇದಿಕೆಗಳಲ್ಲಿ ಘಂಟಾ ಘೋಷವಾಗಿ ಸಾರುತ್ತಿದ್ದರೂ ಪೂರ್ಣವಾದ ಯಶಸ್ಸು ಪಡೆಯಲು ಸಾಧ್ಯವಾಗುತ್ತಿಲ್ಲ. ಅಂತರ್ ರಾಷ್ಟ್ರ, ರಾಜ್ಯಗಳಲ್ಲಿ ಗಲಭೆಗಳಾದರೆ ನಮ್ಮವರನ್ನೇ ಹಿಂಸಿಸುವ ಕ್ರೂರತೆಗೆ ನಾವು ಬಂದಿದ್ದೇವೆ. ಜಾತಿ ನೀತಿಯ ಕಲ್ಪನೆ ನಮಗೆ ನಾವೇ ತೋಡಿಕೊಂಡ ಹಳ್ಳ. ಮಾನವೀಯತೆಯೊಂದೇ ಸಮಾನತೆಯ ಮಂತ್ರ, ಕುವೆಂಪುರವರ ಮಾತಿನಂತೆ 'ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ' ಎಂಬ ಮಾತು ಎಲ್ಲವನ್ನೂ ತಿರಸ್ಕರಿಸುವುದೆಂದಲ್ಲ, ಈ ಸಾಲಿನಲ್ಲಿ ಮೌಢ್ಯತೆಯನ್ನು ಬಿಡಬೇಕೆಂಬ ತುಡಿತವಿದೆ. ಒಟ್ಟಾರೆಯಾಗಿ ದಮನಿತರ ಬದುಕಿನ ಬಗ್ಗೆ, ಗಾಢವಾಗಿ ಚಿಂತಿಸುವ ಮನಸ್ಥಿತಿ ಕವಯಿತ್ರಿಯದು. ಹೋರಾಟವಿರಲಿ, ಬರವಣಿಗೆ ಇರಲಿ ಮುಚ್ಚುಮರೆ ಇಲ್ಲದೆ ಎಲ್ಲವನ್ನೂ ಮೇಳೈಸುವ ಎದೆಗಾರಿಕೆ ಇವರದು. ಕವಯಿತ್ರಿಯೇ ಹೇಳುವಂತೆ ಮೊದಲು ಇವರ ಕವಿತೆಗಳು ಪ್ರಕಟಗೊಂಡದ್ದು ಲಂಕೇಶ್ ಪತ್ರಿಕೆಯಲ್ಲಿ. ಇವರ 'ಬಿದಿರುಮೆಳೆ ಕಂಟಿಯಲಿ' ಕೃತಿಗೆ ಮುನ್ನುಡಿ ಬರೆಯುತ್ತಾ **'ಲಂಕೇಶ್' ರವರು** ಹೇಳುವಂತೆ,

"ಲಲಿತಾನಾಯಕ್ ಒಳ್ಳೆಯ ಕವಿ. ಈಕೆಯ ತಂದೆ ತಾಯಿಗಳನ್ನೂ ಕೂಡ ನೋಡಿರುವ, ಈಕೆ ಬೆಳೆದ ಲಂಬಾಣಿ ಜನಾಂಗದ ವಾತಾವರಣವನ್ನೂ ಕಣ್ಣಾರೆ ಕಂಡಿರುವ ನನಗೆ ಈಕೆಯ ಎಲ್ಲ ಗ್ರಹಿಕೆ ಕುತೂಹಲಕರ ಮತ್ತು ಅರ್ಥಪೂರ್ಣ. ನೇರವಾಗಿ ಸ್ಪಷ್ಟವಾಗಿ ಬರೆಯುವ ಈ ಹೆಣ್ಣು ಮಗಳು, ಹೆಣ್ಣಿನ ಮನಸ್ಸಿನ ಒಳ ಕೋಣೆಗಳನ್ನು ಮತ್ತು ಎಂದೂ ಮಾತಾಡದ ಜನಾಂಗವೆಂದು ಮಾತಾಡುವ ಸ್ವಚ್ಛ ಶೈಲಿಯನ್ನು ತೋರಿದವರು ಲಲಿತಾ. ತಮ್ಮ ಕವನ ಬರೆದಮೇಲೆ, ಇವು ನಿಜಕ್ಕೂ ಕವನಗಳಾಗಿರುವುದರಿಂದ, ಇವರ ಕಾವ್ಯದ ಚಿಂತೆಗೇ ಇವರ ಸಾಮಾಜಿಕ ಬದ್ಧತೆ ಮತ್ತು ನೋವುಗಳನ್ನು ಚರ್ಚಿಸುವುದು ಅನಿವಾರ್ಯವಾಗಿರುವುದು ಲಲಿತಾ ಎಂಬ ಲಂಬಾಣಿ ಹೆಣ್ಣು ಮಗಳು ಎಸೆದಿರುವ ಸವಾಲು" ೨೨ ಎಂದಿದ್ದಾರೆ.

೫.೩ ಪರಂಪರೆ ಮತ್ತು ಆಧುನಿಕತೆಗಳ ನೆಲೆಯಲ್ಲಿ ಶಶಿಕಲಾ ವೀರಯ್ಯಸ್ವಾಮಿಯವರ ಕಾವ್ಯ

ಉತ್ತರ ಕರ್ನಾಟಕದ ದೇಸೀ ಸೊಗಡನ್ನು ತಮ್ಮ ಕಾವ್ಯ ಭಾಷೆಯೊಳಕ್ಕೆ ತಂದವರು ಶಶಿಕಲಾರವರು. ಹೆಣ್ಣಿನ ಮನದ ತಲ್ಲಣಗಳು, ನಿರೀಕ್ಷೆ, ನೋವು ಮುಂತಾದುವನ್ನು ತಮ್ಮ ಕವಿತೆಗಳ ಮೂಲಕ ಹೊಸ ಬಗೆಯಲ್ಲಿ ಧ್ವನಿಸುವಂತೆ ಮಾಡಿದವರು. ಪುರಾಣ, ಚರಿತ್ರೆಯಿಂದ ಆಧುನಿಕತೆಯವರೆಗೂ ಹೆಣ್ಣಿನ ಪಾರಂಪರಿಕ ಮೌಲ್ಯಗಳು ಅವುಗಳ ಪಾತ್ರ ಚಿತ್ರಿತಗೊಂಡ ಬಗೆಯನ್ನು ಪ್ರಶ್ನಿಸುತ್ತಲೇ ಬರವಣಿಗೆಗೆ ತೊಡಗಿದವರು ಶಶಿಕಲಾರವರು.

ಜೀವನಪ್ರೀತಿ, ಬದುಕು, ಗೆಳತಿ, ಅಮ್ಮ, ತಂಗಿ, ಸಮಾಜ ಎಲ್ಲ ಅಂಶಗಳನ್ನು ತಮ್ಮ ಕವನಗಳಲ್ಲಿ ಪ್ರತಿಮೆಯ ಮಾದರಿಗಳಾಗಿ ತಂದಿದ್ದಾರೆ. ಇವರ "ಮಧ್ಯಂತರದ ಒಂದು ಗದ್ಯಗೀತೆ" ಕವನ ಸಂಕಲನದಲ್ಲಿ (ಬೆನ್ನುಡಿ) ಹೆಣ್ಣಿನ ವ್ಯಕ್ತಿತ್ವ ಮತ್ತು ಸಮುದಾಯದ ಚಿತ್ರಣಗಳನ್ನು ಚಿತ್ರಿಸಿರುವ ರೀತಿ ವಿಶಿಷ್ಟವಾದುದು.

"ನನ್ನವರ ಕವಿತೆಯು
ಕಳವಳದ ಕಾವಳದಲಿ ಮರೆತ ಮಾತೇ
ದಟ್ಟಡವಿಯ ಒಡಲ ಹಾಡಿನ ಮೌನಗೀತೆ.
ನನ್ನವರ ಕವಿತೆಯು
ಕತ್ತಲಲಿ ಅತ್ತತ್ತು ಕರೆದ ಕಂಬನಿ
ಮುಂಬೆಳಗಿನಲರಳಿದ ಹೂದಳಗಳ ಇಬ್ಬನಿ" [೨೩]

ಇಲ್ಲಿ ಸಮುದಾಯದ ಚಿತ್ರಣವಿದೆ. ಇಡೀ ಹೆಣ್ಣು ಸಮೂಹಕ್ಕೇ ತಂದುಕೊಟ್ಟ ಸ್ವಾತಂತ್ರ್ಯದಂತಿದೆ. ಸ್ವಾತಂತ್ರ್ಯದ ಹಿಂದಿನ ಹೋರಾಟ ಕ್ರಾಂತಿಯ ಮಹತ್ವ, ಹೋರಾಟದ ನಡುವಿನ ಸಂಬಂಧಗಳ ಬೆಸೆಯುವಿಕೆಯನ್ನು ಕವಿತೆಯ ಈ ಸಾಲು ಕಟ್ಟಿಕೊಡುತ್ತದೆ. ನನ್ನವರು ಎಂಬ ಮಾತು ವ್ಯಕ್ತಿತ್ವದ ಒಂದು ಮಾದರಿಯ ರೂಪದಲ್ಲಿ ನೋಡ ಬಯಸುತ್ತದೆ. ಕವಯಿತ್ರಿಯ ಮತ್ತೊಂದು ವಿಶಿಷ್ಟತೆ ಎಂದರೆ ತಮ್ಮ ವಯಕ್ತಿಕ ನೆಲೆಯಲ್ಲಿಯೇ ಸಾಮಾಜಿಕ ಸತ್ಯಗಳನ್ನು ಕವಿತೆಗಳ ಮೂಲಕ ಹೇಳ ಹೊರಟಿರುವುದು. ಏಕೆಂದರೆ ಗಂಡಿನ ಅಂತರಂಗದಲ್ಲಿ ಹೆಣ್ಣಿನ ಪಾತ್ರ ಚಿತ್ರಿತಗೊಳ್ಳುತ್ತದೆ. ಇದು ಹಿಂದಿನಿಂದಲೂ ಮುಂದುವರೆದದ್ದೇ. ಆದರೆ ಇತ್ತೀಚಿನ ಮಹಿಳಾ ಕಾವ್ಯದಲ್ಲಿ ಗಂಡಿನ ವ್ಯಕ್ತಿತ್ವ ರೂಪಿಸಿದ ಹೆಣ್ಣಿನ ಬಗ್ಗೆ ವಾಸ್ತವ ನೆಲೆಯಲ್ಲಿಯೇ ಇದೆ ಎಂಬುದನ್ನು ನಮ್ಮ ಕವಯಿತ್ರಿಯರ ಹಲವು ಕವನಗಳು ನಿರೂಪಿಸಿವೆ.

'ಗುಬ್ಬಿಮನಿ' ಕವನ ಸಂಕಲನಕ್ಕೆ ಮುನ್ನುಡಿ ಬರೆಯುವ ಸಂದರ್ಭದಲ್ಲಿ ಯು.ಆರ್ ಅನಂತಮೂರ್ತಿರವರು ಶಶಿಕಲಾರವರ "ಗುಬ್ಬಿ ಮತ್ತು ನಾನು" ಕವಿತೆ ಕುರಿತು ಹೀಗೆ ವಿಶ್ಲೇಷಿಸುತ್ತಾರೆ.

“ಹಸಿಯಾದ ಈ
ಮಸಿಯ ಅಕ್ಷರಗಳ
ನಡುವೆ ಬೆತ್ತಲಾಗುತ್ತ
ಉಟ್ಟ ಸೀರೆಯ ಸೆರಗು
ಜಾರದಂತೆ
ಕಳಸ ತುಂಬಿ ಗುಡಿಗೆ
ಹೊರಟಿದ್ದೇನೆ” [೨೪]

“ಕವಿತೆಯಲ್ಲಿ ಸಾಂಪ್ರದಾಯಕ ಹೆಣ್ಣಿನ ಚಿತ್ರ ಮತ್ತು ಆ ಚಿತ್ರಕ್ಕೆ ವಿರೋಧವಾದ ಅವಳ ಒಳಗಿನ ಅನಿಸಿಕೆಗಳ ಮೂಲಕ ಶಶಿಕಲಾ ಮೂಡಿಸುವ ಭಾವನೆಯಲ್ಲಿ ವ್ಯಂಗ್ಯವಿಲ್ಲದಿರುವುದು ಒಂದು ಅಪೂರ್ವವಾದ ಧಾಟಿಯ ಸಾಧನೆ ಎಂದು ನಾನು ತಿಳಿದಿದ್ದೇನೆ. ಅನೇಕ ಲೇಖಕರಿಗೆ ವ್ಯಂಗ್ಯ ಮತ್ತು ಐರನಿಗಳು ತಮ್ಮ ಹೆಚ್ಚುಗಾರಿಕೆಯನ್ನು ಪ್ರಕಟಿಸುವ ಗತ್ತಾಗಿರುವಾಗ ಅಂಥ ಸುಲಭೋಪಾಯವನ್ನು ಬಿಟ್ಟು ಕೊಟ್ಟು ತಮ್ಮ ಅನುಭವವನ್ನು ಎದುರಿಸುತ್ತೇನೆಂಬ ಶಶಿಕಲಾರವರ ತೆರೆದ ಮನಸ್ಸಿನ ನಿಲುವು ನನಗೆ ಮೆಚ್ಚುಗೆಯಾದ್ದು. ಇಂಥ ಕವನಗಳಲ್ಲೆಲ್ಲಾ ನಾವು ಕಾಣುವುದು ಪ್ರೀತಿಸಬಲ್ಲ ನೋಯಬಲ್ಲ, ಮೃದುವಾದ ವ್ಯಕ್ತಿತ್ವ”[೨೫] ಎಂದಿದ್ದಾರೆ.

ಉಟ್ಟ ಸೀರೆಯ ಸೆರಗೆಂದರೆ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟ ಸನ್ನಿವೇಶ, ಸಮಾಜದೊಂದಿಗಿನ ಹೊಂದಾಣಿಕೆ, ಪ್ರತಿಕ್ರಿಯೆಗಳ ಎಚ್ಚರ ಮತ್ತು ಲೇಖಕಿಯ ಮನಸ್ಥಿತಿ ಎಲ್ಲವನ್ನೂ ಸಾಹಿತ್ಯಿಕವಾಗಿ ಕ್ರೋಢೀಕರಿಸಿ ನೋಡುವ ನೋಟವೆನ್ನಬಹುದು.

ಕವಯಿತ್ರಿಯೇ ಹೇಳುವಂತೆ "ಅಂತರಂಗದ ಸೂಕ್ಷ್ಮ ಸನ್ನಿವೇಶಗಳನ್ನು ಮುಚ್ಚಿಡುತ್ತಾನೆ ಮನುಷ್ಯ. ಅದನ್ನು ಬಿಚ್ಚಿಕೊಳ್ಳುವುದಕ್ಕೆ ತೃಪ್ತವೆನಿಸುವ ಮಾಧ್ಯಮಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಹೀಗೆ ತೊಡಗಿಸಿಕೊಂಡಿರುವಾಗಲೂ ಪರದಾಡುತ್ತಾನೆ. ಈ ಎಲ್ಲ ಅನಿವಾರ್ಯತೆಗಳು ಚಿಕ್ಕಂದಿನಿಂದಲೂ ನನ್ನನ್ನು ಆಳವಾಗಿ ಕಲಕುತ್ತಾ ಬಂದಿವೆ. ಬರವಣಿಗೆಯಲ್ಲಿ ಅನೇಕ ಸಲ ಉಕ್ಕುವಾಗಲೂ ಕೆಲವು ಮಿತಿಗಳಿಂದಾಗಿ ಮೂಕಿಯಾಗುಳಿಯಬೇಕಾದ ನೋವು ನನ್ನ ಪಾಲಿಗೆ ಬಂದಿದ್ದರೂ ಸಾಧ್ಯವಾದ ಮಟ್ಟಿಗೆ ವ್ಯಕ್ತಪಡಿಸಲು ಹೊರಟಿದ್ದೇನೆ" ಎಂಬ ವಾಕ್ಯಗಳಲ್ಲಿ ಕಾವ್ಯವನ್ನು ಸ್ವೀಕರಿಸುವವರ ಮನಸ್ಥಿತಿಯಲ್ಲಿರುವ ಗೊಂದಲಗಳು ಕಂಡುಬರುತ್ತವೆ.

“ಕಂಬನಿಗಳಿಂದ ತೊಯ್ದ
ಈ ಬಾಳ ಕವಿತೆಯ
ಸಾಲುಗಳ ಮಧ್ಯೆ

ಶಬ್ದಗಳ ಮಧ್ಯೆ
ಕಳೆದು ಹೋದ ನನ್ನನ್ನು
ಹುಡುಕುತ್ತಿದ್ದೇನೆ" [೨೬]

ಇದು ಕೇವಲ ಬರವಣಿಗೆಯಲ್ಲ. ಬದುಕಿನ ಬರವಣಿಗೆ, ಬಾಳೆಂಬ ಕವಿತೆ, ಕಂಬನಿಯ ನೀರಾದಾಗ ಕುಂದದ ಉತ್ಸಾಹ, ಜೀವನೋತ್ಸಾಹಕ್ಕೆ ನಾಂದಿಯಂತೆ ಕಂಡುಬರುತ್ತದೆ. ಸಾಮಾನ್ಯವಾಗಿ ಮಹಿಳಾ ಕಾವ್ಯವನ್ನು ಓದಲು ಕುಳಿತರೆ ಒಂದೊಂದು ಕವಿತೆಯೂ ಒಂದೊಂದು ವ್ಯಕ್ತಿತ್ವವನ್ನು ಅನಾವರಣಗೊಳಿಸುತ್ತದೆ. ಎಲ್ಲೋ ಒಂದು ಕಡೆ ಹಳೆಯದನ್ನು ಮೆಲುಕಾಗಿಸುವಂತೆ ಮಾಡುತ್ತಾ ಆಪ್ತವಾಗುತ್ತದೆ. ಇದುವೇ ಮಹಿಳಾ ಕಾವ್ಯದ ಗಟ್ಟಿತನ. ನಮ್ಮನ್ನು ನಾವು ಹುಡುಕುವುದೆಂದರೆ ವ್ಯಕ್ತಿತ್ವಕ್ಕೆ ನಿತ್ಯ ಸಾಣೆ ಹಿಡಿದಂತೆ. ಅದಕ್ಕೆ ತುಕ್ಕಾಗಲೀ, ಮುಕ್ಕಾಗಲೀ ಹಿಡಿಯಲು ಎಂದಿಗೂ ಮಹಿಳಾ ಕಾವ್ಯದ ನೋಟ ಬಿಡುವುದಿಲ್ಲ.

ಹೆಣ್ಣಿನ ಬದುಕೇ ನಿರಂತರವಾದ ಹೋರಾಟ. ಹೆಣ್ಣು ಹುಟ್ಟಿದ ತಕ್ಷಣವೇ ಅವಳ ಬಗ್ಗೆ ಹಿರಿಯರಲ್ಲಿ ಭವಿಷ್ಯದ ಮಾದರಿಗಳು ರೂಪಿತಗೊಳ್ಳುತ್ತವೆ. ಇದನ್ನೇ 'ಸಿಮನ್ ದ ಬೊವಾ' 'ಹೆಣ್ಣನ್ನು ರೂಪಿಸಲ್ಪಡುವ ಕ್ರಿಯೆ' ಎನ್ನುವುದು. ಈ ಕ್ರಿಯೆಯಲ್ಲಿ ಸ್ವತಃ ನನ್ನ ತಾಯಿಯೋ, ಅಜ್ಜಿಯೋ ಯಾರಾದರೊಬ್ಬರ ಪಾಲು ಇದ್ದೇ ಇರುತ್ತದೆ. ಏಕೆಂದರೆ ಅವರದೂ ರೂಪಿಸಲ್ಪಡುವ ಕ್ರಿಯೆಯೇ ಆಗಿರುತ್ತದೆ. ಇದನ್ನೇ ಪ್ರತಿಭಾ ನಂದಕುಮಾರ್ 'ನಾವು ಹುಡುಗಿಯರೇ ಹೀಗೆ' ಕವಿತೆಯಲ್ಲಿನ ಕೊನೆ ಸಾಲು ಅವಳದೂ ಅದೇ ಕತೆಯಲ್ಲವೇ ಎಂಬಂಶವನ್ನು ಜಾಗೃತಗೊಳಿಸಿದ್ದು. ಹೆಣ್ಣಿನ ಈ ಬದುಕಿನ ಸುಳಿಯಲ್ಲಿ ಸಿಲುಕುವ ಸಂದರ್ಭವನ್ನು ಶಶಿಕಲಾರವರು 'ಸುಳಿ' ಕವಿತೆಯಲ್ಲಿ ಚಿತ್ರಿಸಿದ್ದಾರೆ.

"ಸಿಕ್ಕು ಸಿಕ್ಕಾಗಿದ್ದ / ಬದುಕಿನ ಎಳೆಗಳನ್ನೆಲ್ಲ
ಬಿಡಿಸಲು ಹೆಣಗಿ / ದಕ್ಕಿದ್ದರಲ್ಲೆಲ್ಲ
ಇನ್ನೂ ಸಿಕ್ಕಾಗುತ್ತ / ಮುಕ್ತಳಾಗುವ ಹಂಬಲದಲ್ಲಿ
ನನಗರಿಯದೇ / ನನ್ನ ಸುತ್ತ ಬೆಳೆದ
ಈ ಮುಳ್ಳು ಜೀವಿಯ / ಒಳಗೆ ತಪಿಸುತ್ತಾ,
ಅದೇ ಮುಳ್ಳಿಗೆ ಬಳ್ಳಿ / ಹಬ್ಬಿಸುತ್ತಿರುವಾಗಲೇ
"ಕಲ್ಲೊಂಡರಿದ ಬಳ್ಳಿಗೆ / ಮುಗ್ಗರಿಸುತ್ತಾ
ಇನ್ನೂ ಸಿಕ್ಕಾಗುತ್ತಿರುವ / ಸುಳಿಗೆ ಬೆರಗಾಗುತ್ತೇನೆ" [೨೭]

ಜೇಡ ತನ್ನಸುತ್ತ ಬಲೆ ಹೆಣೆದು ತನ್ನ ಸಾವನ್ನು ತಾನೇ ಕಂಡುಕೊಳ್ಳುತ್ತದೆ. 'ಸುಳಿ' ಎಂಬ ಪದ ಸಹಜವಾಗಿಯೇ ಮೃತ್ಯು ಕೂಪ ಎಂಬ ಕಲ್ಪನೆ ಮೂಡಿಸುತ್ತದೆ. ಆದರೆ ಬದುಕಿನ ಸುಳಿಗೆ ಒಳಗಾದ ಹೆಣ್ಣು ಎಂದಿಗೂ ಬತ್ತಲಾರದ ಗಂಗೆಯಂತೆ. ಅದಮ್ಯ ಜೀವನೋತ್ಸಾಹ ಹೊಂದಿದವಳು. ಬದುಕೆಂಬ ಸುಳಿಗೆ ಒಳಗಾದ ಹೆಣ್ಣು ಬದುಕಿನ

ಮುಳ್ಳುಗಳ ಎಳೆಗಳನ್ನು ಬಿಡಿಸ ಹೊರಟವಳು, ಅಲ್ಲೇ ನೆಲೆ ಕಂಡವಳು, ಬದುಕಿನಿಂದ ಹೈರಾಣಾದರೂ, ಗೋಜಲಾದರೂ ಕೊನೆಗೆ ಅವಳ ಬದುಕು ನಿಲ್ಲುವುದು ಸೋಜಿಗದಲ್ಲೇ. ಅಂತ್ಯವಿಲ್ಲದ ಜೀವನ ಕಂಡು ಬೆರಗಾದರೂ ಸಂಸಾರ, ಬದುಕಿನ ನೌಕೆಯಲ್ಲಿನ ಪಯಣ ಅವಳನ್ನೆಂದಿಗೂ ಹಿಮ್ಮುಖವಾಗುವಂತೆ ಮಾಡುವುದಿಲ್ಲವೆಂಬುದನ್ನು ಕವಿತೆಯು ಕಟ್ಟಿಕೊಡುತ್ತದೆ.

ಅನಕ್ಷರಸ್ಥ, ಕುಡುಕ ಗಂಡನ ಜೊತೆ ಬಾಳುವ ಹೆಣ್ಣಿನ ಜೀವನ ಮತ್ತೊಂದು ಮಾದರಿಯದು. ಮಹಿಳಾ ವರ್ಷದ ಸಾಧನೆಗೆಂದು ಕೆಂಪಿಯ ಗಂಡನಿಗೆ ಕುಡಿತ ಬಿಡಿಸಿ ಬೀಗುತ್ತಿದ್ದ ಕವಯಿತ್ರಿಗೆ ಕೆಂಪಿಯ ಮಾತುಗಳಿಗೆ ಉತ್ತರಿಸಲಾರದ ಸ್ಥಿತಿ.

"ನಮ್ಮ ಹೀರ್‍ಯ ಕುಡುದು / ಬಂದ ಹೊಡದ ಮ್ಯಾಲ
ನನ್ನ ಬಾಳ ಮುದ್ದ / ಮಾಡಿ ಮಾಡಿ
ಕೇಳಿದ್ದೆಲ್ಲಾ ತರ್ತದ್ದನ್ರಿ / ಈಗ ಕುಡತ ಇಲ್ಲ
ಬಡತ ಇಲ್ಲ / ಮತ್ತ ಮ್ಯಾಲ ಮುದ್ದ ಇಲ್ಲ
ಇದಕೇನ ಮದ್ದ ಹೇಳ್ರಿ / ಬಾಳ ಬ್ಯಾಸರಾಗೈತ್ರಿ" [೨೮]

ಬಿಡುಗಡೆ, ಸ್ವಾತಂತ್ರ್ಯ ಎಂದು ಬಯಸುವ ಹೆಣ್ಣು ಒಂದು ಕಡೆಯಾದರೆ, ಬದುಕಿನ ಅವಶ್ಯಕತೆ ನೀಗಿಸಿಕೊಳ್ಳಲು ದೈಹಿಕವಾಗಿ ಮಾನಸಿಕವಾಗಿ ಹೆಣ್ಣು ಸಿದ್ಧಳಿರುತ್ತಾಳೆ ಎಂಬುದು ಕವಿತೆಯ ಆಶಯ. ಬೇಂದ್ರೆಯವರ "ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು" ಕವಿತೆಯು ಇಲ್ಲಿ ನೆನಪಿಗೆ ಬರುತ್ತದೆ. ಏಕೆಂದರೆ ಕುಡಿತ ಬಿಟ್ಟ ಗಂಡ ಮುದ್ದಿಸುವುದನ್ನೇ ಮರೆತಾಗ ಹೆಣ್ಣಿಗಾಗುವ ನೋವು ಕೆಂಪಿಯ ಮುಖಾಂತರ ಬೇರೆಯ ಆಯಾಮವನ್ನು ಪಡೆದುಕೊಳ್ಳುತ್ತದೆ. ಈ ಮಾದರಿಗಳು ದಿನನಿತ್ಯವೂ ನಮ್ಮ ಸುತ್ತಲಿನ ವಾತಾವರಣದಲ್ಲಿ ಕಂಡು ಬರುತ್ತಿರುತ್ತವೆ.

ರಾಮಾಯಣದಲ್ಲಿ ರಾವಣನ ಪಾತ್ರ ಬಹಳ ಪ್ರಮುಖವಾದುದು. ಕೈಹಿಡಿದ ರಾಮ, ಸೀತೆಯನ್ನು ಲೋಕೋಪವಾದಕ್ಕೆ ಅಂಜಿ ದೂರ ಮಾಡಿದ. ಮಾರುವೇಶದಲ್ಲಿ ಬಂದ ರಾವಣ ಸೀತೆಯನ್ನು ಸುರಕ್ಷಿತವಾಗಿಟ್ಟ. ಸೂಕ್ಷ್ಮವಾಗಿ ಇದನ್ನು ಗಮನಿಸಿದಾಗ ಸೀತೆಯ ತನ್ನನಿಸಿಕೆಗೆ ಸ್ವಾತಂತ್ರ್ಯವನ್ನು ಕೊಟ್ಟವನು ರಾವಣನೇ ಹೊರತು ರಾಮನಲ್ಲ ಎಂಬುದು ತಿಳಿಯುತ್ತದೆ. ರಾವಣನೂ ಒಂದು ಪ್ರತಿಮಾ ಮಾದರಿಯೆ. 'ಮಹಿಳಾ ವರ್ಷದಲ್ಲಿ ಅವ್ವನಿಗೊಂದು ಪತ್ರ' ಕವಿತೆಯಲ್ಲಿ ಕವಯಿತ್ರಿ ತಂದೆಯ ಮೂಲಕ ರಾವಣನನ್ನು ಕಂಡು ಕೊಳ್ಳುತ್ತಾರೆ. ಮನೆಯ ವಾತಾವರಣದಿಂದ ಬಿಡುಗಡೆಗೊಂಡು ಓದುವ ಸಂದರ್ಭದಲ್ಲಿ ನಗರಕ್ಕೆ ಬಂದವಳು, ಹೆಣ್ಣಿಗಿರುವ ಸ್ವಾತಂತ್ರ್ಯ ಮತ್ತು ಮುಕ್ತ ಪ್ರಪಂಚವನ್ನು ಕಂಡು ಬೆರಗಾಗುತ್ತಾಳೆ. ಅಡುಗೆ ಮನೆ ಎಂಬ ಹೆಣ್ಣಿನ ಪ್ರಪಂಚ ನಡು ಮನೆಗೆ ಬಂದರೆ ಹದ್ದು ಮೀರಿದ ಹೆಂಗಸೆಂದು ಕರೆವ ಸಂದರ್ಭದಲ್ಲಿ ಅವಳಿಗಾದ ನೋವು, ಹತಾಶೆಯನ್ನಿಲ್ಲಿ

ಕವಯಿತ್ರಿ ಕಟ್ಟಿಕೊಡುತ್ತಾರೆ. ಕವಿತೆಯನ್ನು ಓದುವ ಸಂದರ್ಭದಲ್ಲಿ ದಿನನಿತ್ಯವೂ ನಡೆಯುವ ಹೆಣ್ಣಿನ ಮೇಲಿನ ದೌರ್ಜನ್ಯದ ವಾಸ್ತವ ಪ್ರಪಂಚವನ್ನು ಅರಿವಿಗೆ ತರುತ್ತದೆ.

"ಗಂಡಗೊರಕೀ ಹೊಡೀತಾನಂತ / ಡೈವೋರ್ಸ್ ಮಾಡಿದವರ
ಸುದ್ದಿ ಕೇಳಿದ್ರ ನೀ ದಂಗಾಕ್ತಿ / ದಿನಕೊಬ್ಬಳ ತೋಳಿಗಿ
ಕರದ ತಂದ ಅಪ್ಪ / ನಿನ ಮುಂದನ್ನ ಸರಸ
ಆಡೂ ಮುಂದ ನೀ / ಹ್ಯಾಂಗ ಅವರ ಸೇವಾಮಾಡ್ತಿದ್ದಿ?
ಅಪ್ಪ ಕುಡುದು ಬಂದು / ಹೊಡೆದರೂ ತುಟಿಕಚ್ಚಿ
ಅಳೂ ನುಂಗಿ ನಗುಮುಖ / ಮಾಡೋ ನಿನ್ನ ಮೋಡಿ
ಯಾರಿಗಿ ಬಂದೀತು ಹೇಳು" [೯]

ಎಂಬ ಸಾಲುಗಳಲ್ಲಿ ಹೆಣ್ಣಿನ ಶೋಷಣೆಗಿಂತ ಒಬ್ಬ ತಾಯಿಯ ಸಂಯಮ ಎಲ್ಲವನ್ನೂ ಮರೆ ಮಾಚುತ್ತದೆ. ಅಸಹಾಯಕ ಹೆಣ್ಣು ಮಗಳಾಗಿ ಕವಿತೆಯ ನಾಯಕಿಯು ಕಂಡು ಬಂದರೂ ಬದುಕಿನಲ್ಲಿ ಹೆಣ್ಣಾದವಳು ಅನುಭವಿಸುವ ನೋವನ್ನು ತಾಯಿಯಲ್ಲಿ ಕಾಣುತ್ತಾಳೆ. ತನ್ನ ತಾಯಿ ತಂದೆಯಿಂದಲೇ ಸಾವನ್ನಪ್ಪಿದರೂ, ಅದೇ ಸಂದರ್ಭದಲ್ಲಿ ಮಹಿಳಾ ಸ್ವಾತಂತ್ರ್ಯಕ್ಕಾಗಿ ನಡೆಯುವ ಹೋರಾಟ ಕವಿತೆಯ ನಾಯಕಿಗೆ ತಾಯಿಯ ಸ್ಮಶಾನ ಯಾತ್ರೆಯಂತೆ ಕಂಡಿದೆ. ಅಂದರೆ ಇದು ವ್ಯಂಗ್ಯವಲ್ಲ, ಮಹಿಳಾ ಪರವಾದ ಕಾಳಜಿ. ಕೇವಲ ಕೂಗಾಗದೆ ವಾಸ್ತವವಾಗಿ ಜಾಗೃತವಾಗಬೇಕೆಂಬ ಎಚ್ಚರಿಕೆಯೂ ಕವಿತೆಯಲ್ಲಡಗಿದೆ.

ಶಶಿಕಲಾರವರ "ಗುಬ್ಬಿಮನಿ" ಕವಿತೆ ಪ್ರೀತಿ, ಯೌವ್ವನ, ಬಾಲ್ಯ ಮೂರನ್ನೂ ಮತ್ತೆ ಮರುಕಳಿಸುವಂತಹದ್ದು. ಹಸಿ ಮಣ್ಣಿನಲ್ಲಿ ಕಟ್ಟಿದ ಗುಬ್ಬಿಮನಿ, ಅದಕ್ಕೆ ಕಟ್ಟಿದ ಬೇಲಿ, ದಾಟಿದರೆ ಕಾಲು ಮುರಿಯುತ್ತೇನೆಂಬ ಎಚ್ಚರ, ಹೆಣ್ಣಿನ ಬದುಕಿನ ಅವಸ್ಥಾಂತರಗಳನ್ನು ನೆನಪಿಗೆ ತರುವಂತಹದ್ದು. ಗಂಡಿನ ಹಾದಿ ತಪ್ಪಿದ ನಡಿಗೆಗೆ ಕಡಿವಾಣ ಹಾಕುವ ಸಲುವಾಗಿ ಮತ್ತೆ ಅದೇ ಗುಬ್ಬಿಮನಿ ಕಟ್ಟುವ ಪ್ರತೀಕ ಇಲ್ಲಿದೆ.

"ಅಲ್ಲ ಮತ್ತೆ / ಈ ಮೈ ಕೊರೀ ಥಂಡ್ಯಾಗ
ನನಗೇನನಸೈತಿ / ಗೊತ್ತೇ ನಿನಗ?
ತಿರುಗಿ ನಾವಿಬ್ರೂ ಸಣ್ಣವ್ರಾಗಿ
ನಾ ಗುಬ್ಬಿಮನಿ ಕಟ್ಬೇಕು
ನೀ ಬೇಲಿಕಟ್ಬೇಕು" [೧೦]

ಬಾಲ್ಯ ಮತ್ತು ಗುಬ್ಬಿಮನಿ ಪ್ರತಿಮಾ ವಿಧಾನಗಳು ಬಾಲ್ಯದ ಮುಗ್ದತೆ ಗುಬ್ಬಿಯ ಸೂಕ್ಷ್ಮ ಸಂವೇದನೆಗಳು ಮನುಷ್ಯರ ಪ್ರೀತಿಯನ್ನು ಜಾಗೃತಗೊಳಿಸಬೇಕೆಂಬುದನ್ನು ಧ್ವನಿಸುತ್ತದೆ.

ಕನ್ನಡ ಸಾಹಿತ್ಯದಲ್ಲಿ ಕತೆಯಾಗಲೀ, ಕವಿತೆಯಾಗಲೀ ಅಕ್ಕನನ್ನು ನೆನಪಿಸದ ಸಂಗತಿಗಳೇ ಇಲ್ಲ. ಕವಯಿತ್ರಿಯರು ಅಕ್ಕನನ್ನು ಯಾವುದಾದರೊಂದು ಕವಿತೆಯಲ್ಲಿ ತಂದೇ ತರುತ್ತಾರೆ. ಅಕ್ಕ ಮಾನಸಿಕ ಗಂಡನನ್ನು ಕೂಡಿ ಕೊಂಡವಳು, ಮೈ ಮನಗಳನ್ನು ಬೆತ್ತಲೆಗೆ ಬಿಚ್ಚಿಟ್ಟ ದಿಟ್ಟೆ. ಆದರೂ ಕಾಲ ಎಷ್ಟೇ ಮುಂದುವರೆದರೂ ಅಜ್ಜಿ, ತಾಯಿ ಹಾಕಿದ ಮಾರ್ಗದಲ್ಲೇ ನಾವು ನಡೆಯುವಂತಹವರು. ಹೆಣ್ಣಿನ ಜೀವನ ಮೇಣದ ಬತ್ತಿಯಂತೆ ಎಂಬುದನ್ನು ಕವಯಿತ್ರಿ ಕವನದಲ್ಲಿ ನಿರೂಪಿಸಿದ್ದಾರೆ.

"ಅಕ್ಕಾ \ ನೀನು ಪುಣ್ಯವಂತೆ ಕಣೆ
ಸಾವಿಲ್ಲದ ಕೇಡಿಲ್ಲದ
ಗಂಡನ್ನ ಕೂಡಿಕೊಂಡು ಗಟ್ಟಿಯಾದೆ
ಮೈ ಮನಗಳನ್ನು ಬೆತ್ತಲೆಗೆ ಬಿಚ್ಚಿಟ್ಟು
ದಿಟ್ಟೆಯಾದೆ" ೩೧

ಈ ಕವಿತೆಯು ೧೨ನೇ ಶತಮಾನದ ಮಹಿಳಾ ಸ್ವಾತಂತ್ರ್ಯವನ್ನು ನೆನಪಿಸುತ್ತದೆ. ಅಕ್ಕನನ್ನು ಕವಯಿತ್ರಿ ಕೇವಲ ವಚನಕಾರ್ತಿಯಾಗಿ ಕಂಡಿಲ್ಲ. ಮೈ ಮನಸ್ಸುಗಳ ಆಸೆ ತೊರೆದ ದಿಟ್ಟ ಹೆಣ್ಣಾಗಿ ನೋಡಿದ್ದಾರೆ. ಅಕ್ಕನ ಲೌಕಿಕ, ಅಲೌಕಿಕ, ಆಧ್ಯಾತ್ಮಿಕ ನೋಟವನ್ನು ಕವಿತೆ ಧ್ವನಿಸುತ್ತದೆ. ೧೨ನೇ ಶತಮಾನದಲ್ಲಿ ಆದ ಸಾಮಾಜಿಕ ಕ್ರಾಂತಿ, ವೈಚಾರಿಕ ಮುಕ್ತತೆ ನಾವು ಆಧುನಿಕರು ಎಂದು ಹೇಳುವ ಈ ಕಾಲಮಾನದ ಸಂದರ್ಭದಲ್ಲಿ ಯಾಕಾಗುತ್ತಿಲ್ಲ? ಎಂಬ ಕೊರಗು ನಮ್ಮನ್ನು ಕಾಡದಿರಲಾರದು. ಕವಿತೆ ಮುಂದುವರೆದು,

"ನಾನೋಡು / ಅಜ್ಜಿ ಹೊಲಿದಿಟ್ಟ
ಕೌದಿಯ ಸುರಳಿಯಲ್ಲಿ / ಇವನ ಬಯಕೆಗಳ ತೊತ್ತಾಗಿ
ಇವನ ಬಿತ್ತನೆಗೆ ಮುತ್ತೊಡೆವ ಚಿಪ್ಪಾಗಿ.
ಇವನ ಅರಮನೆಗೆ / ಮೇಣದ ಬತ್ತಿಯಾಗಿ
ಸುಟ್ಟುಕೊಳ್ಳುತ್ತಾ / ಒಳಗೆ ಉರಿಯುತ್ತಾ
ಬಿಸಿಗೆ ಕರಗುತ್ತಾ / ಹೆಪ್ಪುಗಟ್ಟುತ್ತಿದ್ದೇನೆ" ೩೨

ಸಂಪ್ರದಾಯ, ತಲೆಮಾರುಗಳಿಗೆ ಕಟ್ಟುಬಿದ್ದ ಹೆಣ್ಣಿನ ಚಿತ್ರಣವನ್ನು ಈ ಸಾಲುಗಳು ಕಟ್ಟಿಕೊಡುತ್ತವೆ. ನಮ್ಮದು ಪ್ರಜಾ ಪ್ರಭುತ್ವ ಮಾದರಿ ಎಂದು ಕೂಗಿ ಹೇಳಿದರೂ ಅದೇ 'ಪ್ರಭುತ್ವ' ದಬ್ಬಾಳಿಕೆಗೆ ಒಳಗಾಗುವ ಅನಿವಾರ್ಯತೆಯೂ ಇಲ್ಲಿದೆ. "ಇತಿಹಾಸ ಎಂದಿಗೂ ಅವನ ಚರಿತ್ರೆಯೇ ಹೊರತು ಅವಳ ಚರಿತ್ರೆಯಲ್ಲ. ಕಾವ್ಯದ ಗುಣವೇ ಹಾಗೆ ನೂರಾರು ಪುಟಗಳ ಗಟ್ಟಿತನವನ್ನು ನಾಲ್ಕೇ ಸಾಲುಗಳಲ್ಲಿ ಕಟ್ಟಿ ಕೊಡುತ್ತದೆ. ಕೆಲವೊಂದು ವೇಳೆ ಪ್ರಶ್ನೆಯನ್ನೂ, ವ್ಯವಸ್ಥೆಯ ನೇರವಾದ ವಿರೋಧವನ್ನು ಮಾಡುವ ಗುಣ ಕಾವ್ಯಕ್ಕಿದೆ.

ಪ್ರಕೃತಿಯೊಂದಿಗೆ ಒಂದಾಗುವುದು, ಜಗಳವಾಡುವುದು, ಪ್ರಶ್ನಿಸುವುದು ಪಂಪನಿಂದ ಹಿಡಿದು ಇಂದಿನವರೆಗೂ ಕಾವ್ಯದಲ್ಲಿ ಪುನರಾವರ್ತನೆಯಾಗುತ್ತಿವೆ.

"ನಾನು ರಾತ್ರಿಗಳನ್ನು ಮಾತ್ರ ಪ್ರೀತಿಸುತ್ತೇನೆ.
ಹೌದು, ಗಪ್ಪುಗಾರಾದ ನೀರವದ ನಿಶೆಯಲಿ
ನೆಲ, ಮುಗಿಲುಗಳು ಪಿಸುಗುಡುವುದನ್ನು ಕೇಳುತ್ತಾ
ಚಿಕ್ಕೆಗಳು ನನ್ನ ಕಣ್ಣು ಮಿಟುಕಿಸುವಾಗ
ಸಾಗರವು ಉನ್ಮಾದದಲಿ ಉಕ್ಕಿ ನಲಿಯುತ್ತದೆ.
ನಾನಾಗ ಮಗುವಾಗುತ್ತೇನೆ, ಮುಗ್ಧ ನಗುವಾಗುತ್ತೇನೆ
ಅದಕ್ಕೆಂದೇ ನಾನು ರಾತ್ರಿಗಳನ್ನು ಮಾತ್ರ ಪ್ರೀತಿಸುತ್ತೇನೆ" [೩೩]

ಕವಿತೆಯಲ್ಲಿ ಪ್ರಶಾಂತತೆ ಇದೆ, ಮುಗ್ಧತೆ ಇದೆ, ಸ್ವಚ್ಛಂದತೆ ಇದೆ. ಪ್ರಕೃತಿಯೊಂದಿಗಿನ ಸಂಬಂಧ ಮನುಷ್ಯನ ಅಂತರಂಗದ ಭಾವನೆಗಳಿಗೆ ಪುಷ್ಟಿ ಕೊಡುವಂತಿದೆ. ಹಗಲಿನ ಜಂಜಾಟಗಳು ಮುಗಿದಾಗ ರಾತ್ರಿಯ ನೀರವ ಮೌನ ಸಂಗಾತಿಯೊಂದಿಗಿನ ಬದುಕು ಸಾರ್ಥಕತೆ ತಂದುಕೊಡುವ ರೀತಿಯನ್ನು ಕವಯಿತ್ರಿ ವರ್ಣಿಸುತ್ತಾರೆ. ಒಟ್ಟಾರೆಯಾಗಿ ಶಶಿಕಲಾರವರ ಬರವಣಿಗೆಯು ಮಾಗಿದ ಹೆಣ್ಣು ಮನಸ್ಸಿನ ಅಭಿವ್ಯಕ್ತಿ ಎನ್ನಬಹುದು.

೫.೪ ಹೆಣ್ಣಿನ ಅಸ್ಮಿತೆಯ ಹುಡುಕಾಟ, ಸ್ವಾತಂತ್ರ್ಯದ ಅಭಿಲಾಷೆ : ಪ್ರತಿಭಾ ನಂದಕುಮಾರ್ ರವರ ಕಾವ್ಯ

ಕಾವ್ಯ ಎನ್ನುವುದು ಹೆಣ್ಣಾದವಳು ತನ್ನ ಭಾಷೆಯೊಂದನ್ನು ಹಾಗೂ ತನ್ನ ತನವನ್ನು ಒರೆ ಹಚ್ಚಲು ಕಂಡುಕೊಂಡ ಸೃಜನಶೀಲ ಪ್ರಯತ್ನವೆನ್ನಬಹುದು. ಸಮಾಜದ ಕಟ್ಟುಪಾಡುಗಳನ್ನು ಶಿರಸಾವಹಿಸಿಕೊಂಡು ಬಂದ ಹೆಣ್ಣಿಗೆ ಅವಳ ಅಭಿವ್ಯಕ್ತಿಯೇ ಒಂದು ಸವಾಲಾಗಿ ಪರಿಣಮಿಸುತ್ತದೆ. ಗಂಡಿನ ಭಾಷೆ ಮತ್ತು ಹೆಣ್ಣುತನದ ಭಾಷೆ ಎಂಬುದು ಅಭಿವ್ಯಕ್ತಿಯಲ್ಲಿಯೇ ಕಾಣುವ ವ್ಯತ್ಯಾಸಗಳು. ಇಂತಹ ವಿಪರ್ಯಾಸವನ್ನು ಪ್ರಶ್ನಿಸುವ, ವಿಮರ್ಶಿಸುವ, ಪರಂಪರೆಯ ಮೌಲ್ಯಗಳನ್ನು ಭಂಜಿಸುವ ಹಾಗೂ ಪುರಾಣ ಪಾತ್ರಗಳನ್ನು ವರ್ತಮಾನಕ್ಕೆ ತಂದೊಡ್ಡಿ ಮೌಲ್ಯ ವಿಶ್ಲೇಷಣೆ ಮಾಡುತ್ತಾ ಕಾವ್ಯ ಲೋಕಕ್ಕೆ ಹೊಸ ಸತ್ವವನ್ನು ತಂದು ಕೊಟ್ಟವರು ಪ್ರತಿಭಾ ನಂದಕುಮಾರ್. ಪ್ರಸ್ತುತ ಪ್ರಸ್ತಾಪಿಸುವ ಮುಖ್ಯ ವಿಷಯವೆಂದರೆ ಆಧುನಿಕತೆಯನ್ನು ನಾವು ಗಣನೆಗೆ ತೆಗೆದುಕೊಂಡಾಗ ಸಮಾಜದ ದೃಷ್ಟಿಕೋನದಲ್ಲಿ ಸಾಹಿತ್ಯದಲ್ಲಾಗುವ ಬದಲಾವಣೆಗಳು ಮುಖ್ಯವಾಗುತ್ತವೆ. ಪ್ರತಿಯೊಂದು ಸಂದರ್ಭ, ಕಾಲಘಟ್ಟಗಳೂ ಪುನರಾವರ್ತನೆಯ ಹಾದಿ ಹಿಡಿದರೂ, ಹೇಗೆ ಅವೆಲ್ಲವೂ ಮಾದರಿಗಳಾಗಿ ರೂಪುಗೊಳ್ಳುತ್ತವೆ ಎಂಬುದು ಮುಖ್ಯ ಸಂಗತಿ.

"ನಿನಗೆ ಕಿವಿಯಲ್ಲ
ನನಗೆ ಭಾಷೆ ಇಲ್ಲ
ನಾವು ಮಾತನಾಡುವುದು ಹೇಗೆ?" [೩೪]

ಈ ಸಾಲುಗಳಲ್ಲಿ ಅಭಿವ್ಯಕ್ತಿಯ ಭಾಷೆ ಒಂದಾದರೆ, ಸಂವಹನದ ಭಾಷೆಗಿರುವ ಕೊರತೆ ಕಂಡು ಬರುತ್ತದೆ. ಇದು ಒಂದು ಮಾದರಿ ಹೌದಾದರೆ ಇದರ ಇನ್ನೊಂದು ತಿರುವು ಗಂಡು ಹೆಣ್ಣಿಗಿರುವ ಸಂಬಂಧ. ಕೇಳುವುದು, ಮಾತನಾಡುವುದರ ನಡುವಿನ ಅಂತರವಷ್ಟೇ ಅಲ್ಲ ಭಾವನಾತ್ಮಕ ಸಂಬಂಧದ ಸ್ವರೂಪ ಹೇಗೆ ಎಂಬುದನ್ನು ಕವಿತೆ ಕಟ್ಟಿಕೊಡುತ್ತದೆ. ಜೊತೆಗೆ ಇಬ್ಬರ ನಡುವಿನ ಆಲೋಚನಾ ಭಿನ್ನತೆಗಿಂತ ಮನಸ್ಥಿತಿಯ ಅಂಶದ ಭಿನ್ನತೆಯನ್ನು ಹೇಳಲು ತವಕಿಸುತ್ತಿರುವ ಕವಯಿತ್ರಿಯ ಮನಸ್ಥಿತಿಯೂ ಇಲ್ಲಿದೆ. ಈ ಭಿನ್ನತೆ ಸಹಜವಾದರೂ ಅದನ್ನು ಒಪ್ಪುವ ಅಧಿಕೃತ ಪ್ರಯತ್ನ ಸಮಾಜಕ್ಕಿಲ್ಲದಿರುವುದು ವಿಪರ್ಯಾಸ. ಅಂದರೆ ಹೆಣ್ಣಿನ ಭಾಷೆಯನ್ನು, ಸಂವೇದನೆಯನ್ನು ಅರ್ಥೈಸಬೇಕಾದ ವ್ಯವಧಾನ ಗಂಡಿಗಿಲ್ಲದಿರುವುದೂ ಒಂದು ಕೊರತೆ ಎಂಬುದನ್ನು ಕವಿತೆ ಧ್ವನಿಸುತ್ತದೆ.

ಒಂದೇ ವಸ್ತುವನ್ನು ಅಥವಾ ಪಾತ್ರವನ್ನು ಹೇಗೆ ಭಿನ್ನ ದೃಷ್ಟಿಕೋನಗಳ ಮಾದರಿಗಳನ್ನಾಗಿ ನೋಡುತ್ತಾರೆಂಬುದು ಬಹುಮುಖ್ಯ ಅಂಶ. ಅವರು ಬೆಳೆದು ಬಂದ ವಾತಾವರಣ, ಮನಸ್ಥಿತಿ, ಜೊತೆಗೆ ಕಾವ್ಯ ಕಟ್ಟುವ ದೃಷ್ಟಿಕೋನ ಮುಖ್ಯವಾಗುತ್ತದೆ. ಅವನ ಅಂದರೆ ಗಂಡಿನ ಸ್ಥಾಪಿತ ಕಲ್ಪನೆಗಳ ನೆಲೆಯಲ್ಲಿಯೇ ಕಾವ್ಯ ಭಾಷೆ ಅಡಗಿದಂತೆ ಕಂಡು ಬರುತ್ತದೆ. ಆ ಅರ್ಥದಲ್ಲಿಯೇ ಅವನು ಗ್ರಹಿಸುತ್ತಾನೆ. ಹೆಣ್ಣಾದವಳ ಭಾಷೆಯಿಂದ ಸೃಜಿಸುವ ಹೊಸ ಅರ್ಥಗಳಿಗೆ ಮಹತ್ವ ಇರುವುದಿಲ್ಲ.

ಪ್ರತಿಭಾರವರ ಕವಿತೆಗಳನ್ನು ಕುರಿತು 'ಡಾ. ಎಂ.ಎಸ್. ಆಶಾದೇವಿ' ಹೀಗೆ ಹೇಳುತ್ತಾರೆ.

"ಪ್ರತಿಭಾರವರ ಕವಿತೆಗಳಲ್ಲಿ ನಿರಂತರವಾಗಿ ಕಾಣಿಸುವ ಕೆಲವು ವಸ್ತು ವಿಶೇಷಗಳೆಂದರೆ ಹೆಣ್ಣಿನ ಬದುಕು ಮತ್ತು ವ್ಯಕ್ತಿತ್ವಗಳೆರಡನ್ನೂ ಆವರಿಸಿರುವ ಹಿಂಸೆ" [೩೫] ಎಂದಿದ್ದಾರೆ. ಅಂದರೆ ಕಾವ್ಯದ ಅಭಿವ್ಯಕ್ತಿಯ ಎರಡು ಮುಖ್ಯ ವಸ್ತುಗಳು ಇವರ ಕವಿತೆಗಳಲ್ಲಿ ವ್ಯಕ್ತವಾಗಿರುವುದು ಬಹು ಮುಖ್ಯ ಅಂಶವಾಗಿದೆ.

ಮುಕ್ತ ಮಾತುಕತೆ ಸಾಧ್ಯವಿಲ್ಲದಾಗ ಹೆಣ್ಣು ತನ್ನ ಸುತ್ತಲೇ ಬಂಧನದ ಕೋಟೆ ಕಟ್ಟಿಕೊಳ್ಳುವ ಪ್ರಯತ್ನವನ್ನು ನಡೆಸುತ್ತಾಳೆ. ಆದರೆ ಅದು ಸಾಧ್ಯವಾಗದಾಗ ತನ್ನೊಂದಿಗೆ ಬೇರೆಯವರನ್ನು ಹೋಲಿಸಿಕೊಂಡು ಸಮಾಧಾನದ ನಿಟ್ಟುಸಿರು ಬಿಡುವುದು ಸಹಜ. ಇದನ್ನು ಕವಿತೆಯ ಮೂಲಕ ಹೆಣ್ಣಿನ ಭಾವ ಪ್ರಪಂಚವನ್ನು ಕಾವ್ಯ ರೂಪದಲ್ಲಿ ಚಿತ್ರಿಸಿ "ನಾವು ಹುಡುಗಿಯರೇ ಹೀಗೆ" ಎಂಬ ಕವನ ಕಟ್ಟಿದರು.

"ಗಂಡನಲ್ಲಿ ಅವನನ್ನು ಹುಡುಕುತ್ತೇವೆ.
ಗಂಡನಿಗೆ ಮಾತ್ರ ಅದರ ಸುಳಿವೂ ಸಿಗದಂತೆ ನಟಿಸುತ್ತೇವೆ
ಅಷ್ಟರಲ್ಲಿ ಒತ್ತಿಟ್ಟ ಭಾವನೆಗಳೆಲ್ಲಾ ಹರಳಾಗಿ ಬಿಟ್ಟಿರುತ್ತವೆ
ಅರಳುವುದೇ ಇಲ್ಲ ಉಷಾ" [೩೭]

ಕವಿತೆಯ ಸಾಲುಗಳು ನಿತ್ಯ ಜೀವನದ ಜೀವಂತಿಕೆಯ ಸನ್ನಿವೇಶವಾಗಿದೆ. ಸಂಸಾರದ ಜಂಜಾಟದಲ್ಲಿ ಕಳೆದು ಹೋದ ಹೆಣ್ಣಿಗೆ ಭಾವನೆಗಳು ಜಾಗೃತವಾಗುವುದು ವಾಸ್ತವ ಪ್ರಪಂಚ ಎದುರು ಬಂದಾಗಲೇ.

ಪ್ರತಿಭಾರವರ ಕವನಗಳಲ್ಲಿ ಪುರಾಣ, ಮಹಿಳೆ, ಪುರುಷ, ಬದುಕು, ಪ್ರೀತಿ ಮತ್ತು ದಾಂಪತ್ಯದ ಅನೇಕ ವಿಚಾರಗಳು ಬಹಳ ವಿಶೇಷವಾಗಿ ಚಿತ್ರಿತವಾಗಿವೆ. ಆದ್ದರಿಂದ ಆಧುನಿಕ ಮಹಿಳಾ ಕಾವ್ಯ "ಹೆಣ್ಣಿನ ಪಾವಿತ್ರ್ಯ" ಎಂಬುದನ್ನು ವಿರೋಧಿಸುತ್ತದೆ. ಪಾತಿವ್ರತ್ಯ ಎಂದರೆ 'ಶೀಲ' ಎಂಬ ಸಂಕುಚಿತ ಅರ್ಥವಂತಿಕೆಯನ್ನು ಪುರುಷನ ಅಹಮಿಕೆಯನ್ನೂ ವಿರೋಧಿಸುತ್ತಲೆ ಒಪ್ಪಿತ ಲೈಂಗಿಕತೆಗೆ ಹೆಚ್ಚಿನ ಮನ್ನಣೆ ಇರುವುದು ಕಂಡು ಬರುತ್ತದೆ.

ಸಿಮನ್ ದ ಬೊವಾರ ಹೆಣ್ಣನ್ನು ರೂಪಿಸಲ್ಪಡುವಿಕೆ ಎಂಬ ಮಾತನ್ನು 'ಹಿಮದ ಹಾದಿ' ಕವಿತೆ ಧ್ವನಿಸುತ್ತದೆ.

"ಕಾಡಿನ ತುಂಬಾ ಬೇಕು ಬೇಕಾದಂತೆ!
ಅಂಡಲೆಯುತ್ತಿದ್ದ ಹೆಣ್ಣು ಹುಲಿ
ಈಗ ಅವನು ಹೇಳಿದ ಹಾಗೆ ಕೇಳುತ್ತದೆ!
ಇಲಿಯಂತೆ ಬಾಲ ಮುದುರಿಕೊಳ್ಳುತ್ತದೆ" [೩೮]

ಹಿಮವೆಂದರೆ ಜಡತ್ವದ ಸನ್ನಿವೇಶ. ಕತ್ತಲದಾರಿ ದೂರ ಎಂಬ ಮಾತಿನಂತೆ ಸಂಸಾರ ನೌಕೆಯ ರಿಂಗ್ ಮಾಸ್ಟರ್ ಇಲ್ಲಿ ಗಂಡಾಗಿ ಹೇಗೆ ವ್ಯವಸ್ಥೆಗೆ ಹೊಂದಿಕೊಳ್ಳುವಂತೆ ಹೆಣ್ಣನ್ನು ತಯಾರು ಮಾಡುತ್ತಾನೆ ಎಂಬುದು ಕವಿತೆಯಲ್ಲಿ ಕಂಡುಬರುತ್ತದೆ. ಅಂದರೆ ಸಿಮನ್ ದ ಬೊವಾ ಹೇಳಿದ್ದು ಹೆಣ್ಣು ರೂಪಿತಗೊಳ್ಳುವ ಕ್ರಿಯೆ, ಪ್ರತಿಮೆಯಿಂದ ಪ್ರತಿಕೃತಿಯಾಗಿಸುವಲ್ಲಿನ ಕೈಚಳಕ ಗಂಡಿನದು ಎಂಬುದು ಮುಖ್ಯವಾದ ಅಂಶ.

ಶಕ್ತಿ ದೇವತೆಯಂತೆ ಬಿಂಬಿತಳಾದ ಹೆಣ್ಣು ಶಾಂತ ಸ್ವರೂಪಿ ಇಲ್ಲದಿದ್ದರೇ ಭದ್ರಕಾಳಿ, ಎರಡೂ ಮಾದರಿಗಳೂ ಅತಿರೇಕವೇ. ಏಕೆಂದರೆ ಹೆಣ್ಣು ಕ್ಷಮಯಾ ಧರಿತ್ರಿಯಲ್ಲವೆ? ಎಂದು ಕೊನೆಗೆ ಓಂಕಾರ ಹಾಡುವುದು. ಇದನ್ನೇ ಪ್ರತಿಭಾರವರು

"ಲತೆಯಾದರೆ ದಬ್ಬೆ ಕಟ್ಟುತ್ತಾನೆ। ಚಪ್ಪರವಾಗಿ ಹರಿಯುತ್ತೇನೆ.
ಬಾಳೆಯಾದರೆ ಕತ್ತರಿಸಿದರೂ। ಪುಟಿ ಪುಟಿ ನೂರೆಂಟು ಕುಡಿಗಳು
ಮಾವು, ಹಲಸು, ತೇಗವಾದರೆ। ನೆಟ್ಟಗೆ ಆಕಾಶಕ್ಕೆ ಮುಖಮಾಡಿ

ಕುರ್ಚಿ ಮೇಜು, ಮಂಚವಾಗಿ ಪರಿವರ್ತನೆಗೊಂಡು। ನಾನು
ಬಿಸಿಲ ಹಾದಿಯಲ್ಲಿ ಬೆವರಿಳಿಯುವಾಗ। ಮರದನೆರಳ ಕನಸು
ಶಿಖರದ ತುದಿಯ ಜ್ವಾಲೆಯ।
ನಿರೀಕ್ಷೆಯಲ್ಲಿ ಬೆಚ್ಚಗಾಗಿದೆ। ಹಿಮದ ಹಾದಿ" [೩೮]

ಅವನ ದೃಷ್ಟಿಯಲ್ಲಿ ಹೆಣ್ಣು ಚಂಚಲೆ, ಚಲನೆಗೊಂಡರೆ ನನಗೆ ಉಳಿಗಾಲವಿಲ್ಲವೆಂಬ ಭಯ ಅವನಲ್ಲಿ ಕಾಡುವುದರಿಂದ ವಿವಿಧ ರೀತಿಯಲ್ಲಿ ಬಂಧಿಸಲು ಪ್ರಯತ್ನಿಸುತ್ತಾನೆ. ಆದರೆ ಅವಳ ಭಾವನೆಗಳ ಬಿಸಿಗೆ ಹಿಮವೂ ಕರಗಿ ಬೆಚ್ಚನೆಯ ಸಖ್ಯ ಒದಗಿಸುತ್ತದೆಂದರೆ ಅದು ಹೆಣ್ಣಿನ ಶಕ್ತಿಗೆ ಹಿಡಿದ ಕನ್ನಡಿ ಎನ್ನಬಹುದು.

ಕಾವ್ಯ ಕೇವಲ ಹೆಣ್ಣಿನ ಅಂತರಂಗದ ಭಾವನೆಗಳ ರೂಪವಲ್ಲ. ಅವಳ ಅಂತರಂಗದ ತುಡಿತಕ್ಕಿಂತ ಅಸ್ಮಿತೆಯ ಹುಡುಕಾಟವೂ ಹೌದು. ಇಂದಿಗೂ ಸೀತೆ, ಸಾವಿತ್ರಿ, ದ್ರೌಪದಿ, ಅಮೃತಮತಿಯರು ಜೀವಂತಿಕೆ ಪಡೆದಿರುವುದು ಪುರಾಣ ಪಾತ್ರಗಳ ಭಂಜಕತೆಯಿಂದ ಉಂಟಾಗುವ ವ್ಯಕ್ತಿತ್ವ ಮೌಲ್ಯಗಳ ಅನಾವರಣವೇ ಮುಖ್ಯ ಮತ್ತು ಪ್ರಸ್ತುತ ಎಂಬುದು ಕವಯಿತ್ರಿಯರ ಆಶಯ.

ಪುರಾಣದ ಘಟನೆಗಳಿಗೆ ಹೊಸ ವ್ಯಾಖ್ಯಾನಗಳನ್ನು ನೀಡುವುದು ಕನ್ನಡ ಕಾವ್ಯದಲ್ಲಿ ಹೊಸದೇನಲ್ಲ. ೧೨ನೇ ಶತಮಾನದ ಅಕ್ಕಮಹಾದೇವಿ ಅಂತಹ ಪುರಾಣಗಳನ್ನೇ ಧಿಕ್ಕರಿಸುವ ಮೂಲಕ ಹೊಸ ಆಲೋಚನೆಗಳಿಗೆ ನಾಂದಿ ಹಾಡಿದಳು.

"ವೇದಶಾಸ್ತ್ರ ಆಗಮ ಪುರಾಣಗಳೆಂಬುವ
ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಣಿಬೋ
ಅವ ಕುಟ್ಟಲೇಕೆ?
ಅತ್ತಲಿತ್ತ ಹರಿವ ಮನದ ಶಿರವನರಿಯ ಬಲ್ಲಡೆ
ಬಟಾ ಬರಿಯ ಬಯಲು ಚೆನ್ನಮಲ್ಲಿಕಾರ್ಜುನ" [೩೯]

'ಪತಿವ್ರತೆ ಅಲ್ಲ' ಕವಿತೆಯಲ್ಲಿ ಪುರುಷನ ನಯವಂಚನೆ ಗೌಣವಾಗಿ ಪಾತಿವ್ರತ್ಯವೇ ಮೌಲ್ಯವಾದಾಗ ಹೆಣ್ಣಿನ ಬದುಕು ಗೌಣವಾಗುತ್ತದೆ. ಹಳೆಯ ಮಾದರಿಯನ್ನು ಬೋಧಿಸುತ್ತಲೇ ಹೆಣ್ಣನ್ನು ತಿದ್ದುತ್ತಾ ರೂಪಿಸುವುದನ್ನು ಕವಯಿತ್ರಿ ವಿಡಂಬಿಸುತ್ತಾರೆ.

"ಹೆದರಿಸುತ್ತಾರೆ ಅವರು ಕತೆಗಳನ್ನು ಹೇಳಿ
ಬೆದರಿಸುತ್ತಾರೆ ನೂರೆಂಟು ಶಾಪಗಳ ಅಪಾಯತೋರಿ
ಕಲ್ಲಾಗುವ ಕಷ್ಟಗಳ ಬೆಟ್ಟದಡಿ ಹುಲ್ಲಾಗುವ
ಬೆಂಕಿಕೊಂಡ ಹಾಯುವ ಹುಳಹಿಡಿದು ಸಾಯುವ
ಎಷ್ಟೊಂದು ವಿಧದ ನರಕ ಪಾತಕಿಗೆ
ಪರ ಪುರುಷನ ಬಯಸಿದ್ದಕ್ಕೆ" [೪೦]

ಜಗತ್ತಿನ ವಿಸ್ಮಯಗಳನ್ನು ತಿಳಿಯುವ ದಿವ್ಯ ಜ್ಞಾನಿಗಳು ತನ್ನ ಹೆಂಡತಿಯನ್ನು ಸಂತೈಸದೆ ತಾವು ಕಲಿತ ವಿದ್ಯೆಯನ್ನು ಹೆಣ್ಣಿನ ಮೇಲೆ ಪ್ರಯೋಗಿಸುವ ಮಂತ್ರವಾದಿಗಳಂತೆ ಕಂಡುಬರುತ್ತಾರೆ. ಜಮದಗ್ನಿ ಮತ್ತು ಗೌತಮರಿಗೆ ವಿದ್ವತ್ತು ಮುಖ್ಯವೇ ಹೊರತು ತನ್ನ ಪತ್ನಿಯ ವ್ಯಕ್ತಿತ್ವವಲ್ಲ. ಎಲ್ಲವನ್ನೂ ತಿಳಿಯುವ ಜ್ಞಾನಿಗಳು ಒಂದು ಹೆಣ್ಣಿನ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಸೋಲುತ್ತಾರೆಂದು ಕವಯಿತ್ರಿ ಇಲ್ಲಿ ವಿಡಂಬಿಸಿದ್ದಾರೆ.

ಉದ್ಯೋಗಸ್ಥ ಮಹಿಳೆಯ ಮನಸ್ಥಿತಿಯನ್ನು ಒಂದು ಪ್ರತಿಮಾ ರೂಪದ ಮಾದರಿಯಲ್ಲಿ ಕಟ್ಟಿಕೊಡುತ್ತಾರೆ. ಇಂದಿನ ಜಾಹಿರಾತು ಯುಗದಲ್ಲಿ ಹೆಣ್ಣು ವ್ಯಾಪಾರ ಕೇಂದ್ರಿತ ಆಕರ್ಷಣೆಯ ವಸ್ತುವಾಗಿದ್ದಾಳೆ. ಸೋಪು, ಶಾಂಪು, ಟೀ, ಕಾಫಿ, ಸೌಂದರ್ಯ ವರ್ಧಕಗಳು ಹೀಗೆ ಎಲ್ಲ ಕಡೆ ಹೆಣ್ಣಿರಲೇಬೇಕು. ಸಿನಿಮಾ ಮತ್ತು ಧಾರಾವಾಹಿಗಳಲ್ಲಿ ಸಂಸಾರ ಮತ್ತು ಉದ್ಯೋಗ ಎರಡನ್ನೂ ಸರಿದೂಗಿಸುವ ಹೆಣ್ಣಿನ ತಾಕಲಾಟ ವಿಪರೀತವೆಂಬಂತೆ ತೋರಿಸುವ ಮಾಧ್ಯಮಗಳು ಇಂದು ಹೆಚ್ಚಾಗಿವೆ. ಮಹಿಳಾ ಸ್ವಾತಂತ್ರ್ಯ ಎಂಬ ನೆಪದಲ್ಲಿ ಹೆಣ್ಣನ್ನು ಮತ್ತದೇ ಮೌಢ್ಯತೆಯ ಮೃತ್ಯ ಕೂಪಕ್ಕೆ ದೂಡುವ ಅದೆಷ್ಟೋ ಸಿನಿಮಾ ಮತ್ತು ಧಾರಾವಾಹಿಗಳು ನಿರಂತರವಾಗಿವೆ. ಈ ಮೇಲಿನ ಸಾಲುಗಳಿಗೆ ಪೂರಕವಾಗಿ ಪ್ರತಿಭಾರವರು "ಕೇರ್ ಫ್ರೀ ಮಹಿಳೆಯರು" ಕವಿತೆಯಲ್ಲಿ

"ಫ್ರಿಜ್ಜಿನ ಸಾಲ ಮುಗಿದು
ಮುಂದಿನ ತಿಂಗಳಿಂದ ಸೈಟಿಗೆ, ಸಾಲಕ್ಕೆ
ಐನೂರು ಹೋದರೆ ಉಳಿಯುವುದರಲ್ಲಿ
ಮಗನ ಸ್ಕೂಲಿಗೆ ಮಗಳ ಡಬ್ಬಿಗೆ" ೮೧

ಸ್ವಂತಿಕೆಯನ್ನು ಕಳೆದುಕೊಂಡ ಹೆಣ್ಣಿನ ವ್ಯಥೆಯಿದು. ಭವಿಷ್ಯವನ್ನು ರೂಪಿಸುವ ಹೊಣೆ ಹೊತ್ತು ತನ್ನ ವರ್ತಮಾನದ ಸುಖವನ್ನೇ ಮರೆತವಳ ಇಂದಿನ ಉದ್ಯೋಗಸ್ಥ ಮಧ್ಯಮ ವರ್ಗದ ಮಹಿಳೆಯ ಮನಸ್ಥಿತಿ ಮತ್ತು ಬದುಕನ್ನು ಪ್ರತಿಭಾರವರು ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. ಧಾರ್ಮಿಕವಾಗಿಯೂ ಹೆಣ್ಣನ್ನು ರೂಪಿಸುವ ಕ್ರಿಯೆ ನಮ್ಮ ಭಾರತೀಯ ಸಮಾಜದಲ್ಲಿ ಹಿಂದಿನಿಂದಲೂ ನಡೆದುಬಂದಿದೆ. ಧರ್ಮದ ಹೆಸರಿನಲ್ಲಿ ನಡೆಯುವ ಕೃತ್ಯಗಳು ಬೆಳಕಿಗೆ ಬಾರದಿರುವುದು ಅದೆಷ್ಟೋ. ಆದರೆ ನಮ್ಮ ಪೂರ್ವಜರು ನಮಗೆ ಅವುಗಳ ಬಗ್ಗೆ ಹುಟ್ಟಿಸಿರುವ ನಂಬಿಕೆಯ ಮೌಲ್ಯಗಳನ್ನು ನಾವು ಇಂದಿಗೂ ಬುಡಮೇಲು ಮಾಡಲಾಗಿಲ್ಲ. ಏಕೆಂದರೆ ಮೌಢ್ಯತೆಯೇ ಭಯ, ಭಕ್ತಿಯ ಸಂಕೇತಗಳಾಗಿ ರೂಪಾಂತರಗೊಂಡಿದೆ. ಭ್ರಮಾ ಲೋಕದಲ್ಲೇ ನಮ್ಮೆಲ್ಲರ ಬದುಕು ನಿಂತಿರುವಂತಹದ್ದು. ಹೆಣ್ಣಿನ ಉಡುಗೆ ತೊಡುಗೆಯು ಮೌಲ್ಯ, ಧರ್ಮದ ವಿಧಿವತ್ತು ಎಂಬಂತೆ ಪರಂಪರೆಯ ಅನುಸರಣೀಯ ಮಾದರಿಗಳಾಗಿವೆ. ಈ ರೂಪಿಸಲ್ಪಡುವ ಕ್ರಿಯೆಯನ್ನು "ಸನಾತನಿಯ ಜೊತೆ ಸಂಭಾಷಣೆ" ಕವಿತೆಯಲ್ಲಿ ತಿಳಿಸುತ್ತಾರೆ.

"ಮುಸ್ಲಿಮಳಾದರೆ ಬುರ್ಖಾ
ಹಿಂದುವಾದರೆ ರಾಮನಾಮ
ಕ್ರಿಶ್ಚಿಯನ್ ಆದರೆ ಚರ್ಚು
ಅನ್ನಬೇಕು ತಾನೆ?" [೪೨]

ಎಂಬ ಸಾಲುಗಳು ಪರಂಪರೆಯ ಮೌಲ್ಯಗಳ ಪ್ರತಿಷ್ಠಾಪನೆಯ ಇನ್ನೊಂದು ಮುಖವೆನ್ನಬಹುದು. ಮಹಿಳಾ ಸಾಹಿತ್ಯ ಲೋಕದಲ್ಲಿ ಅಕ್ಕನಿಗೆ ಅಗ್ರಸ್ಥಾನ. ಅವಳ ಮೌಲ್ಯಗಳನ್ನು ತಿಳಿದುಕೊಳ್ಳುತ್ತಾ ನಾವುಗಳು ಸಾಹಿತ್ಯಿಕವಾಗಿ ಅವುಗಳನ್ನು ಅರಗಿಸಿಕೊಳ್ಳುತ್ತಿದ್ದೇವೆಯೇ ಹೊರತು, ಅವುಗಳನ್ನು ಅಳವಡಿಸಿಕೊಳ್ಳಲು ಆಗುವುದಿಲ್ಲವೆ? ಎಂಬ ಪ್ರಶ್ನೆ ಕಾಡುತ್ತದೆ. ಕಾಮವನ್ನು ಮೀರಿನಡೆದ ಅಕ್ಕನ ನಡಿಗೆ ಈ ಕಾಲದಲ್ಲಿ ಸಾಧ್ಯವಿಲ್ಲ. ಏಕೆಂದರೆ ನಿರಂತರವಾಗಿ ನಡೆಯುವ ಅತ್ಯಾಚಾರ, ದೌರ್ಜನ್ಯ ಕೊಲೆ ಎಲ್ಲವೂ ಮನುಷ್ಯನನ್ನು ಮನುಷ್ಯತ್ವದಿಂದಲೇ ವಿಮುಖಿನನ್ನಾಗಿಸಿವೆ.

ಅಕ್ಕಮಹಾದೇವಿ ಉಟ್ಟ ಬಟ್ಟೆ ಕಳಚಿ ಆಧ್ಯಾತ್ಮ ಅರಸಿದಂತೆ ಹದಿನಾರು ಮೊಳದ ಸೀರೆಯಿಂದ ಹೆಣ್ಣು ಬಿಡುಗಡೆಗೊಂಡು ಹಗುರಾಗುವ ಮನಸ್ಥಿತಿಯನ್ನು "ಪ್ಯಾಕ್ ಅಪ್" ಕವಿತೆಯಲ್ಲಿ ಚಿತ್ರಿಸಿದ್ದಾರೆ.

"ಅಗಲ ಕುಂಕುಮ ಕರಿಮಣಿ, ಬಳೆ
ಇಳಕಲ್ಲಿನ ಸೀರೆ ಕಳಚಿಟ್ಟು
ನನ್ನದೇ ಪ್ಯಾಂಟು ಷರಟು ತೊಟ್ಟು
ಹಗುರಾಗಿದ್ದೇನೆ?" [೪೩]

ಇಲ್ಲಿ ಆಧುನಿಕತೆಗೆ ಮಾರು ಹೋದ ಹೆಣ್ಣಿನ ಚಿತ್ರವಿಲ್ಲ. ಪರಂಪರೆಯ ಮೌಲ್ಯಗಳನ್ನು ವಿರೋಧಿಸಿದ ಹೆಣ್ಣಿನ ಚಿತ್ರಣವಿದೆ. "ನನ್ನದೇ" ಎಂಬ ಪದ ಸ್ವತಂತ್ರತೆಯ ಮೌಲ್ಯವಾಗಿದೆ. ನಾಗರೀಕತೆ, ಆಧುನಿಕತೆ ಎಂದು ಹೇಳುವ ಇಂದಿನ ಯುಗದಲ್ಲಿ ಮಾಧ್ಯಮಗಳು ಹೆಣ್ಣನ್ನು ಹೇಗೆ ಚಿತ್ರಿಸುತ್ತಿವೆ ಎಂಬ ಅಂಶ ಮುಖ್ಯವಾದುದು. 'ವಿನಾಶ ಕಾಲೇ ವಿಪರೀತ ಬುದ್ಧಿ' ಎಂಬಂತೆ ಸ್ವಲ್ಪ ವಿಪರೀತವೆಂಬಂತೆಯೇ ಇಂದು ಹೆಣ್ಣಿನ ಕಲ್ಪನೆಯು ಪಾತ್ರ ಬಿಂಬಿತವಾಗುತ್ತಿದೆ. ಸಂತ್ರಸ್ತ ಹೆಣ್ಣಿಗೆ ಸಾಂತ್ವನ ಮತ್ತು ಸಮಾಧಾನದ ಮಾತುಗಳಿಗಿಂತ ಅವಳಿಗೆ ನ್ಯಾಯ ಕೊಡಿಸುವುದು ಮುಖ್ಯ. ಆದರೆ ಎಲ್ಲಿಂದಲೇ ಶುರುವಾದರೂ ಅವಳ ಕತೆ ನಿಲ್ಲುವುದು ಕರುಣೆಯಲ್ಲಿ. ಅತ್ಯಾಚಾರ ಅಥವಾ ದೌರ್ಜನ್ಯಕೊಳಗಾದ ಹೆಣ್ಣನ್ನು ಜನ ನೋಡುವ ರೀತಿಯೇ ಬೇರೆ. ಒಂದು ವೇಳೆ ಅದೇನಾದರೂ ಪತ್ರಿಕೆಗಳಲ್ಲೋ ಅಥವಾ ಮಾಧ್ಯಮಗಳಲ್ಲೋ ಸುದ್ದಿಯಾದರೆ ಮುಗಿಯಿತು. ವಿಷಯಗಳಿಗಿರುವ ಬೇಡಿಕೆ, ಕುತೂಹಲ ಹೆಣ್ಣಿನ ಮನಸ್ಥಿತಿಗಿಲ್ಲ ಎಂಬುದು ಸತ್ಯಾಂಶ. ಇದಕ್ಕೆ ಪೂರಕವೆಂಬಂತೆ "ಕಳೆದದ್ದು ಸಿಕ್ಕಿದೆ" ಎಂಬ ಕವಿತೆಯಲ್ಲಿ ಪ್ರತಿಭಾರವರು ಕಟ್ಟಿಕೊಡುತ್ತಾರೆ.

"ಒಂದು ವೃತ್ತ ಪತ್ರಿಕೆಯ ನಂಬಿಕೆಗಿಂತ ಹಿರಿದಿಲ್ಲ ಬಿಡಿ
ಹೆಣ್ಣಿನ ಚಾರಿತ್ರ್ಯ, ಸುಮ್ಮನೆ ಪುಟಗಟ್ಟಲೆ ಬರೆದು ಸೋಲಬೇಡಿ
ಕಳೆದು ಹೋದರೂ ಸರಿ ಸಂತೆಯಲ್ಲಿ ಮಾನ
ಗಲ್ಲಿಯ ಕಿಡಿಗೇಡಿಗಳು ಇಂಚಿಂಚೇ ತಿಂದರೂ ಪ್ರಾಣ
ಪರವಾಗಿಲ್ಲ ಮರಳಿ ಪಡೆಯಬಹುದು" ೪೪

ಜೀವನೋತ್ಸಾಹವಿರುವ ಹೆಣ್ಣಿನ ಮನಸ್ಥಿತಿ ಗಟ್ಟಿತನದ್ದು ಎಂಬುದು ಈ ಸಾಲುಗಳಿಂದ ತಿಳಿಯುತ್ತದೆ. ಅಸಹಾಯಕಳಾದ ಹೆಣ್ಣು ಯಾವ ರೀತಿ ಬದುಕಬೇಕೆಂಬ ಛಲ ಹೊಂದಿದ್ದಾಳೆಂಬುದು ಮುಖ್ಯ ಸಂಗತಿ. ಪ್ರತಿಭಾ ನಂದಕುಮಾರ್‌ರವರ ಕಾವ್ಯದಲ್ಲಿ ಮುಖ್ಯವಾಗಿ ಗಮನಿಸುವಂತಹದ್ದು ಹೆಣ್ಣಿನ ಬದುಕು ಮತ್ತು ವ್ಯಕ್ತಿತ್ವಗಳ ನಡುವೆ ಆವರಿಸಿರುವ ಹಿಂಸೆ. ಆದರೂ ವ್ಯಕ್ತಿತ್ವದ ಹುಡುಕಾಟದಲ್ಲಿ ನಿರಂತರವಾಗಿ ಹೆಣಗಾಡುವ ಹೆಣ್ಣಿನ ಜೀವನ ಪ್ರೀತಿ ಎಂದೂ ಕರಗುವುದಿಲ್ಲ. ಈ ವಿಚಾರಗಳಲ್ಲಿ ನೇರವಾಗಿ ಕವಿತೆಗಳ ಮೂಲಕ ಸಂಚಲನ ಉಂಟಾಗುವಂತೆ ಮಾಡಿದವರು ಪ್ರತಿಭಾ ನಂದಕುಮಾರ್. ಒಂದೊಂದು ಸ್ಥರದಲ್ಲಿ ಒಂದೊಂದು ವ್ಯಕ್ತಿತ್ವಗಳ ರೂಪುಗೊಳಿಸುವಿಕೆ ಪ್ರತಿಭಾರವರ ಕಾವ್ಯ ಶೈಲಿಗಿದೆ.

ಒಟ್ಟಾರೆಯಾಗಿ ಹೇಳಬೇಕೆಂದರೆ ಪ್ರತಿಭಾರವರ ಕಾವ್ಯ ಕಟ್ಟುವಿಕೆಯ ಮೂಲ ಉದ್ದೇಶವೇ ಹೆಣ್ಣಿನ ಬದುಕಿನ ಹಲವು ಮಜಲುಗಳನ್ನು ಸೆರೆಹಿಡಿಯುವುದು. ಬದುಕಿನ ನಿತ್ಯದ ಜಂಜಡಗಳಿಗೆ ಕಾವ್ಯದ ಮೂಲಕ ಉತ್ತರಿಸುವ ಗುಣ ಪ್ರತಿಭಾರವರಿಗಿದೆ. ಆದ್ದರಿಂದಲೇ ಇವರ 'ಮುನ್ನುಡಿ ಬೆನ್ನುಡಿ' ಕೃತಿಯ "ಸಂಗಾತ" ಕವಿತೆಯಲ್ಲಿ

"ಎಲ್ಲ ಯಶಸ್ವಿ ಪುರುಷನ ಹಿಂದೆ
ಒಬ್ಬಳು ಮಹಿಳೆ
ಎಲ್ಲ ಯಶಸ್ವಿ ಮಹಿಳೆಯ ಹಿಂದೆ
ಒಬ್ಬ ಅತೃಪ್ತ ಪುರುಷ" ೪೫

ಎಂದು ನೇರವಾಗಿ ಹೇಳಿರುವುದು. ಇಲ್ಲಿನ ಅರ್ಥಗಳು ಹಲವಾರು. ಒಮ್ಮೆಲೇ ಗಟ್ಟಿಯಾಗಿ ತನ್ನ ತನದ ಮೌಲ್ಯಗಳನ್ನು ಬಿಚ್ಚಿಡುವ ಕ್ರಿಯೆ ಪ್ರತಿಭಾರವರಿಗಿದೆ.

೫.೫ ತಾಯ್ತನದ ಹುಡುಕಾಟ : ಲಲಿತಾ ಸಿದ್ದಬಸವಯ್ಯನವರ ಕಾವ್ಯ

ಕನ್ನಡ ಮಹಿಳಾ ಕಾವ್ಯದಲ್ಲಿ ಕಂಡು ಬರುವ ಬಹು ಮುಖ್ಯ ಅಂಶವೆಂದರೆ ಕುಟುಂಬ ಸಾಂಸಾರಿಕ ಹಿನ್ನೆಲೆಯಲ್ಲಿ ಹೆಣ್ಣು ತನ್ನ ಆಲೋಚನೆಗಳನ್ನು ಹಿಗ್ಗಿಸಿಕೊಂಡಂತೆಲ್ಲಾ ಪ್ರತಿಯೊಂದು ಸಂದರ್ಭವೂ ಆಕೆಗೆ ಸೂಕ್ಷ್ಮವಾಗುತ್ತಾ ಹೋಗುತ್ತದೆ. ಅಂತೆಯೆ ಅವಳ ಚಿಂತನೆಗಳು ಮನೆಯಿಂದಲೇ ಮೊದಲುಗೊಳ್ಳುತ್ತದೆ. ಕುಟುಂಬದ ಮಾತು ಬಂದಾಗ ಪ್ರತಿಯೊಬ್ಬ ಕವಯಿತ್ರಿಯೂ ಭಿನ್ನ ಆಲೋಚನೆಗಳ ಮೂಲಕ ಗತದ ಚೌಕಟ್ಟನ್ನು ಮುರಿಯುವ

ಪ್ರಯತ್ನ ಮಾಡಿರುವುದು ಸ್ವಾಗತಾರ್ಹ. ಕುಟುಂಬ ಎಂದರೆ ಮಹಿಳಾ ಕಾವ್ಯದಲ್ಲಿ ಚಿತ್ರಣ ಮೂಡುವುದು ಸಮಾಜವೆಂಬ ಮಾದರಿಯಲ್ಲಿ. ಬಂಧನ ಮತ್ತು ಬಾಂಧವ್ಯಗಳಾಚೆಗಿನ ಬದುಕನ್ನು ಸಾರವತ್ತಾಗಿ ಮಹಿಳಾ ಕಾವ್ಯ ಚಿತ್ರಿಸಿದೆ. ಈ ಮಾದರಿಯ ಸ್ವರೂಪವನ್ನು ಭಿನ್ನವಾಗಿ ತಮ್ಮ ಬರಹಗಳಲ್ಲಿ ಕಂಡವರು ಲಲಿತಾ ಸಿದ್ಧಬಸವಯ್ಯನವರು.

ಸಾಂಪ್ರದಾಯಿಕವಾಗಿ ಬರುವ ಹಬ್ಬಗಳೂ ಸಹ ಬಾಂಧವ್ಯದಾಚೆಗಿನ ಸೂಕ್ಷ್ಮತೆಯನ್ನು ಬಿಡಿಸಿಡುತ್ತವೆ ಎಂಬುದಕ್ಕೆ ಕವಯಿತ್ರಿಯ ಹಲವು ಕವಿತೆಗಳು ಸಾಕ್ಷಿಯಾಗಿವೆ. ಮನುಷ್ಯ ಸಂಬಂಧಗಳ ಆಚೆಗಿನ ವಾಸ್ತವವನ್ನು ಕಟ್ಟಿ ಕೊಡುತ್ತಲೇ ಬದುಕಿನ ಭಿನ್ನ ಆಲೋಚನೆಯ ಮಾದರಿಗೆ ಸಾಕ್ಷಿಯಾಗುತ್ತವೆ. 'ಯುಗಾದಿ' ಎಂಬ ಪದವೇ ಜೀವನೋತ್ಸಾಹದ ಸಂಕೇತವೆಂಬಂತೆ ಹೊಸ ತನವನ್ನು ಕಟ್ಟಿಕೊಡುವ ಮತ್ತು ಹಳೆಯ ಸಂಕಟಗಳನ್ನು ಮರೆಯುವ ಸಂಕೇತವೂ ಆಗುತ್ತದೆ.

"ನಾಳೆ
ಹಬ್ಬವೆನ್ನುವಾಗ
ಬಾಕಿಬಿದ್ದಿತ್ತು ಇನ್ನೊಂದೆ ಕೆಲಸ
ಹುಡುಕುಡುಕಿ ಹತಾರಕ್ಕೆ
ನಾನು ಕಬ್ಬಕ್ಕಿ
ತೋರಣಕ್ಕೆ
ಮಾವು ಬೇವು, ಕಟ್ಟಿದ ಹೂ
ಪೊಟ್ಟಣ ಹಿಡಿದು ಬಂದ ಇವರು ಕೇಳಿದರು
'ಏನಮ್ಮ, ಏನು ಬೇಕಾಗಿತ್ತು?" [೬]

'ಹಳೆಬೇರು ಹೊಸಚಿಗುರು, ಕೂಡಿರಲು ಮರ ಸೊಬಗು' ಎಂಬ ಡಿವಿಜಿಯವರ ನಾಣ್ಣುಡಿಯಂತೆ ಹೊಸ ಬದುಕಿನ ಹಾದಿಗೆ ಹಬ್ಬವೆನ್ನುವುದು ಒಂದು ಸಂಕೇತವಾದರು, ಅದನ್ನು ಸ್ವೀಕರಿಸುವ ಮನುಷ್ಯನ ವಿವಿಧ ಮನಸ್ಥಿತಿಗಳನ್ನು ಸಂಕೇತಿಸುತ್ತದೆ ಈ ಕವಿತೆ. ಪ್ರತಿದಿನವೂ ನಡೆವ ಸಂಸಾರದ ಏಳು ಬೀಳುಗಳಲ್ಲಿ ಹೆಣ್ಣು ಹೇಗೆ ಅದನ್ನು ನಿಭಾಯಿಸುತ್ತಾಳೆಂಬ ಸೂಕ್ಷ್ಮತೆಯೂ ಇದೆ. ಕವಿತೆ ಮುಂದುವರೆದು

'ಸೂಜಿ
ಒಂದು ಸೂಜಿ ಕಣ್ರೀ'
ಹಳೆ ಕ್ಯಾಲಂಡರಿಗೆ ಸಿಕ್ಕಿಸಿದ್ದನ್ನು
ಎಬ್ಬಿ ಕೈಗಿಟ್ಟು ಕೇಳಿದರು 'ಅಂಥಾ
ತುರ್ತಾಗಿ ಹೊಲೆಯುವಂಥದ್ದು ಏನಮ್ಮಾ'

'ಇದು' ಗೂಡಿಂದ ಕಳಚಿ ಹೃದಯ ಹೇಳಿದೆ
ಮುಂದಿಟ್ಟು ಇದು ಇದನ್ನು ಹೊಲೆಯಬೇಕಿತ್ತು ಕಣ್ರೀ
ಹರಿದದ್ದು ತೊಡಬಾರದಂತೆ
ವರ್ಷಕ್ಕೊಂದು ಹಬ್ಬದಲಿ
'ಅದೇ ಕೈಯಲ್ಲಿ ಇದಕ್ಕೂ ಎರಡು ಹೊಲಿಗೆ ಹಾಕಿಬಿಡು'
ಅವರೂ ಹುಷಾರಾಗಿ ಕಳಚಿ ಎದೆಗೂಡಿಂದ
ತೆಗೆದಿಟ್ಟರು ಹೃದಯ" ೪೭

ಸೂಜಿ ಮತ್ತು ಹೃದಯಗಳು ಸಂಕೇತದಂತೆ ಕಂಡರೂ, ಕೌಟುಂಬಿಕ ಬದುಕಿನ ಪ್ರೀತಿ ಮತ್ತು ಬಾಂಧವ್ಯಗಳನ್ನು ಇವು ಸೂಚಿಸುತ್ತವೆ. 'ಗಂಡು ಮತ್ತು ಹೆಣ್ಣಿನ ನಡುವಿನ ಬದುಕಿನಲ್ಲಿ ಹೊಂದಾಣಿಕೆ ಎಂಬುದು ಸಹಜವೆನ್ನುವುದನ್ನು' ಪ್ರತಿಧ್ವನಿಸುತ್ತದೆ. ಹೃದಯವನ್ನು ಹೊಲೆಯುವುದೆಂಬ ಮಾತು ಮಾನವೀಯತೆಯ ಎಳೆಯನ್ನು ಎತ್ತಿ ಹಿಡಿಯುತ್ತದೆ. ಪ್ರಸ್ತುತ ಸಮಾಜದಲ್ಲಿ ಗಂಡು ಹೆಣ್ಣಿಗೆ ಬೇಕಿರುವುದು ಇದೆ. ಇಲ್ಲಿ ಪರ ವಿರೋಧಕ್ಕಿಂತ ಸ್ನೇಹ ಪರ ಜೀವನದ ಸಾರ್ಥಕತೆಯನ್ನು ಕವಿತೆ ತನ್ನದಾಗಿಸಿಕೊಂಡಿದೆ. ಮುಕ್ತ ಮನಸ್ಸು ಎಲ್ಲವನ್ನೂ ಸ್ವೀಕರಿಸುವ ಗುಣ ಹೊಂದಿದೆ ಎಂಬ ಮಾತನ್ನು ಬಾಂಧವ್ಯದ ನೆಲೆಯಲ್ಲಿಯೇ ಕವಿತೆ ಗಟ್ಟಿಗೊಳಿಸಿದೆ. ಪುರಾಣ ಮತ್ತು ಚರಿತೆಯನ್ನು ಮಾದರಿಗಳನ್ನಾಗಿಸಿಕೊಂಡು ಕವಿತೆ ಕಟ್ಟಿದ ಕವಯಿತ್ರಿಯರನೇಕರು. ಪ್ರತಿಯೊಬ್ಬರಲ್ಲೂ ಭಿನ್ನ ಸ್ವರೂಪದ ಮಾದರಿಯೊಂದಿಗೆ ಪಾತ್ರಗಳು ಜೀವ ತಳೆದಿವೆ ಮತ್ತು ಹೊಸ ಆಲೋಚನೆಗೆ ದಾರಿ ಮಾಡಿಕೊಟ್ಟಿವೆ.

"ಬಟ್ಟೆ ಹರಿದರೂ ಉಳಿಯುವುದು ಗೇರುಕಲೆ, ಚಿಟ್ಟೆಕೂತೆ
ದ್ದರೂ ಹೂವೊಳಗೆ ದಾಖಲೆ, ಏಳೇಳು ಗುರುಪತ್ನಿಯರಿಗೆ ಕಿವಿ
ಯೋಲೆ ತಂದಿತ್ತರೂ ದಕ್ಕದು ಮನಸನೋದುವ ವಿದ್ಯೆ, ಮೋಸ
ಮಾಡಿದವನ ಹೆಸರ ಮಗನಿಗಿಟ್ಟರೂ ತಗ್ಗದು ಈರ್ಷ್ಯೆ, ಕಟ್ಟಿಡು
ಕಡ ತಂದ ಬುದ್ಧಿವಂತಿಕೆ.
ಮುಂದಿದ್ದ ಬೆಟ್ಟಕ್ಕೆ ಮೆಟ್ಟಿಲು ಕೆತ್ತಿದ್ದೂ ನಾನೆ, ಹತ್ತಿನಿಂತಿದ್ದು
ನಾನೆ, ಜೊತೆಗಿರಲಿಲ್ಲ ಭರ್ತೃಹರಿ ನೀತಿಶತಕ ಬಯಲಾಗಿದ್ದೇನೆ.
ಉಳಿದಿಲ್ಲ ನಡುವೆ ಪರದೆ, ಬಯಲ ಮುಂದೆಲ್ಲವೂ ಸಣ್ಣದೆ
ನೀನು ಗೋಗರೆಯುವ ಮೊದಲೇ ನಿನ್ನ ಕ್ಷಮಿಸಿದ್ದೇನೆ ಹೋಗು
ಹೋಗು, ಬದುಕಿಕೊ" ೪೮

ಸೂತ್ರಧಾರನಂತೆ ಹೆಣ್ಣನ್ನು ಹಿಡಿದು ಪಳಗಿಸಿಕೊಂಡು ಬಂದ ಗಂಡಿನ ಚಿತ್ರಣ ಇಲ್ಲಿ ಬೇರೆಯಾಗಿದೆ. ಮಾಡದ ತಪ್ಪಿಗೆ ಇಡೀ ಹೆಣ್ಣು ಕುಲವೇ ಶಿಕ್ಷೆ ಅನುಭವಿಸುವ ಮತ್ತು ಆದರ್ಶವನ್ನು ಅನುಸರಿಸಬೇಕೆಂಬ ಮಾರ್ಗದಲ್ಲೇ ಮುಂದುವರೆಯುವ ಹೆಣ್ಣಿನ ಚಿತ್ರಣ

ಇಲ್ಲಿದೆ. ಆದರೆ ಗಂಡಿನ ಬಗೆಗಿನ ಮತ್ತು ವ್ಯವಸ್ಥೆಯ ಬಗೆಗಿನ ತಿರಸ್ಕಾರವಿಲ್ಲ. ಮೌಢ್ಯ ಮತ್ತು ಕಂದಾಚಾರಗಳ ಬಗ್ಗೆ ತಿರಸ್ಕಾರವಿದೆ. ಹೆಣ್ಣನ್ನು ಬಲಿಪಶುವಂತೆ ನಡೆಸಿಕೊಂಡು ಬಂದ ವ್ಯವಸ್ಥೆಯ ಮೇಲೆ ಸಿಟ್ಟಿದೆ. ಆದರೂ ಹೆಣ್ಣನ್ನು ರೂಢಿಗತ ಹೆಣಿಗೆಯಲ್ಲೇ ಕಟ್ಟಿ ಹಾಕುತ್ತಿರುವ ಪುರುಷ ಸಮಾಜದ ಮೇಲೆ ಒಮ್ಮೆಲೇ ಆಕ್ರಮಿಸುವ ಮನಸ್ಸಿದೆ. ಆದರೂ ಎಲ್ಲವನ್ನೂ ಕ್ಷಮಿಸಿ ಬಿಡುವ ಮೃದು ಮನಸ್ಸೂ ಇದೆ. ಎಲ್ಲದಕ್ಕೂ ಮೂಲ ಆಶಯ ಒಂದೇ, ಸುಂದರಗೊಳಿಸಬೇಕಾದ ಬದುಕು. ಇದನ್ನು ಹಸನಾಗಿಸಬೇಕೆಂಬ ಜೀವನೋತ್ಸಾಹವಿದೆಯಲ್ಲಾ ಅದೇ ಹೆಣ್ಣಿನ ಸಹಜತೆ ಎಂಬ ಸೂಚನೆಯಿದೆ. ಕವಿತೆಯಲ್ಲಿ ಎಲ್ಲಿಯೂ ಆಕ್ರಮಣಕಾರಿ ತನವಿಲ್ಲದೆ ಬದುಕಿನ ಪ್ರೀತಿಗೆ ಒಡ್ಡಿಕೊಳ್ಳುವ ಹಂಬಲವಿದೆ. ಇದು ಹೆಣ್ಣಿನ ಸಹಜ ಗುಣವಾದ ಸಹನೆಯ ಸಂಕೇತವೂ ಹೌದೆಂಬಂತೆ ಕಾಣಿಸುತ್ತದೆ. ಪ್ರೀತಿ ಮತ್ತು ಬಾಂಧವ್ಯ ಬದುಕಿನ ಮುಖ್ಯವಾದ ಗುಣಗಳು ಎಂಬ ವಿಚಾರವಿದೆ.

ಮದುವೆ, ಮನೆ, ಸಂಸಾರ ಎಲ್ಲದರಲ್ಲೂ ಸಮಭಾಗಿತ್ವ ಹೆಣ್ಣಿನದು. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂಬ ಗಾದೆ ಮಾತಿದ್ದರೂ, ಗಂಡನ ಮನೆಗೆ ಹೋದ ಹೆಣ್ಣು ವೃಕ್ಷದ ಸಂಕೇತವಾಗಿ ಸಂಸಾರಕ್ಕೆ ಮಾದರಿಯಾಗಿ ನಿಲ್ಲುತ್ತಾಳೆ.

> "ಅಲ್ಲಿಂದ ಬಗೆದು
> ಬದುಕ ಬೇರುಗಳನ್ನಿಲ್ಲಿ ನೆಟ್ಟುಕೊಂಡೆ
> ಈಗ ನೀನೇ ಬೆಳೆದು
> ಕಾಂಡ, ಕೊಂಬೆ, ಹೂ, ಹಣ್ಣು
> ಹೊತ್ತುಕೊಂಡೆ
> ಜೊತೆಗೆ ಹತ್ತಾರು ಸಸಿಗೂ
> ಆತುಕೊಂಡೆ" ೪೯

ಹೆಣ್ಣಿನ ಜವಾಬ್ದಾರಿಯ ವಿವಿಧ ಮುಖಗಳನ್ನು ಈ ಸಾಲುಗಳು ಎತ್ತಿ ಹಿಡಿಯುತ್ತವೆ. ಗಂಡನ ಮನೆಯಲ್ಲಿಯೂ ಅವಳ ಛಾಪು ಯಾವುದರ ಸಂಕೇತವೆನ್ನುವುದು ತಿಳಿಯುತ್ತದೆ. ಒಂದೇ ನಾಣ್ಯದ ಎರಡು ಮುಖಗಳಂತೆ ಹೆಣ್ಣಿನ ಪಾತ್ರ ವೈವಿಧ್ಯತೆಯನ್ನು ಬದುಕಿನಲ್ಲಿ ಕಂಡುಕೊಳ್ಳುವ ಬಗೆ ಅನನ್ಯ ಎಂಬ ಆಶಯವೂ ಇದೆ. ಇಲ್ಲಿ ಹೆಣ್ಣಿನ ಗಟ್ಟಿತನ ಬದುಕಿನ ಒಪ್ಪಂದದಲ್ಲಿ ಸಾರ್ಥಕ್ಯ ಮೆರೆಯುವ ಬಗೆಯಲ್ಲಿದೆ. ಸಮಾಜದಲ್ಲಿ ಎಂತಹ ಬದಲಾವಣೆಗಳಾದರೂ, ಹೆಣ್ಣಿನ ಬದುಕಿನ ಬದಲಾವಣೆ ಅಷ್ಟು ಬೇಗ ಸಾಧ್ಯವಾಗುವುದಿಲ್ಲ ಅನಿಸುತ್ತದೆ.

ದಾಂಪತ್ಯವೆಂಬುದು ಗಂಡು ಹೆಣ್ಣಿನ ಜೀವನದಲ್ಲಿ ಮಹತ್ವದ ಘಟ್ಟ. ಇಂದು ಈ ದಾಂಪತ್ಯದ ಸ್ವರೂಪವೇ ಬದಲಾವಣೆಗೊಳಪಡುತ್ತಿದೆ. ತೋರಿಕೆಯ ದಾಂಪತ್ಯ, ಬಲವಂತದ

ಪ್ರೀತಿಗಳೇ ಸಮಾಜಮುಖಿ ಆದರ್ಶಗಳೆಂದು ಇಂದಿನ ಸಂದರ್ಭದಲ್ಲಿ ಬಿಂಬಿತವಾದರೆ ಸಮಾಜ ಮತ್ತು ಸಂಬಂಧಗಳು ಎಂತಹ ಹಂತ ತಲುಪುತ್ತವೆಂಬುದಕ್ಕೆ ನಿದರ್ಶನಗಳನ್ನು ಇಲ್ಲಿ ಗಮನಿಸಬಹುದು.

"ಒಂದು ದಿನ ಮಾತ್ರ
ನಾವು ಒಂಚೂರೂ / ಜಗಳವಾಡಲಿಲ್ಲ
ಅಂದು ಆದರ್ಶ ದಂಪತಿ
ಸ್ಪರ್ಧೆಗೆ ಹೋಗಿದ್ದೆವು;
ಮನೆಯಲ್ಲಿರಲಿಲ್ಲ" ೫೦

ಇವು ಸರಳ ಸಾಲುಗಳಂತೆ ಕಂಡರೂ ಪ್ರಸ್ತುತ ಬದುಕಿನ ವಿಶಿಷ್ಟತೆಗೆ ಹಿಡಿದ ಕನ್ನಡಿಯಂತಿದೆ. ಎಲ್ಲವೂ ಸ್ಪರ್ಧಾಮಯವಾಗಿರುವ ಈ ಕಾಲದಲ್ಲಿ ದಾಂಪತ್ಯ ಎಂಬುದು ಹೊಸ ಹೊಸ ಅರ್ಥಗಳನ್ನು ಪಡೆದುಕೊಳ್ಳುತ್ತಿದೆ. 'ಮನೆ' ಎಂಬ ಪದ ಬದುಕಿನ ಎಲ್ಲ ಆಗು-ಹೋಗುಗಳ ಸಂಕೇತ. ಮನೆಯಲ್ಲಿನ ಚಿತ್ರಣವೇ ಆದರ್ಶವಾದರೆ 'ಮನಸ್ಸಿನ' ಸಂಕೇತ ಸ್ಪರ್ಧೆಗಿಳಿದು ಬದುಕು ನೀರಸವಾಗುತ್ತದೆ ಎಂಬುದರ ಸೂಕ್ಷ್ಮತೆ ಇಲ್ಲಿದೆ.

ಊರ್ಮಿಳೆ ನಮಗೆ ಎಂದೂ ದೈವೀಕ ನೆಲೆಯಲ್ಲಿ ನಿಂತಿಲ್ಲ. ಗಂಡನಿಂದ ದೂರಾದ ಹೆಣ್ಣಿನ ನೋವಿನ ಪ್ರತಿರೂಪದಲ್ಲೋ ಅಥವಾ ಆದರ್ಶದಲ್ಲೇ ಜೀವ ಕಳೆದ ಅನುಸರಣೀಯ ಮಾರ್ಗದಲ್ಲೂ ಊರ್ಮಿಳೆ ನಿಂತಿಲ್ಲ. ಸಾಮಾನ್ಯ ಹೆಣ್ಣಿನ ಬದುಕಿನ ಕಲ್ಪನೆ ಇವಳಲ್ಲಡಗಿದೆ. ನಂಬಿಕೆ ಎಂಬ ಪದ ಗಟ್ಟಿಯಾದಾಗ ಆದರ್ಶ ಮರೆಯಾಗುತ್ತದೆ ಎನ್ನುವಲ್ಲಿ ಊರ್ಮಿಳೆಯ ಚಿತ್ರಣವಿದೆ.

"ಊರ್ಮಿಳೆ,
ನೀನೊಳ್ಳೆಯದನ್ನೇ ಮಾಡಿದೆ
ಆ ತಿಕ್ಕಲು ಸೀತೆಯ ಹಾಗೆ
ಹಠ ಹಿಡಿದಿದ್ದರೆ
ನಿನಗೂ ಹೆಗಲೇರುತ್ತಿತ್ತು
ಅಗ್ನಿ ಪರೀಕ್ಷೆ
ಜೊತೆಗೆ ಎರಡನೆ ಸುತ್ತಿನ
ವನವಾಸದ ಶಿಕ್ಷೆ" ೫೧

ರಾಮಾಯಣದ ತಿರುಳನ್ನು ಕೆಲವೇ ಸಾಲುಗಳಲ್ಲಿ ಹೆಣ್ಣಿನ ಪರವಾಗಿ ಕಟ್ಟಿಕೊಡುತ್ತದೆ. ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸುವ ಹೆಣ್ಣು ಅದು ಹೇಗೆ ಈ ಸಮಾಜದಲ್ಲಿ ಆದರ್ಶ ಪಾಲನೆಯ ಪ್ರತಿರೂಪವಾಗಿ ನಿಂತಳೋ ಎಂಬ ಆಶ್ಚರ್ಯವನ್ನೇ ಆಧುನಿಕ ಮಹಿಳಾ

ಕಾವ್ಯ ಮತ್ತೆ ಮತ್ತೆ ಪ್ರಶ್ನೆ ಎತ್ತಿದೆ. ಆ ಮೂಲಕ ಪುರುಷನ ಅನುಸರಣೆಯ ಮೂಲ ಬೇರನ್ನೇ ಬುಡಮೇಲು ಮಾಡುವಂತ ಚಿಂತನೆಗಳೂ ಹುಟ್ಟಿಕೊಂಡಿವೆ. ಆದ್ದರಿಂದ ಸೀತೆ ಮತ್ತು ಊರ್ಮಿಳೆಯ ಪಾತ್ರಗಳು ಭಿನ್ನ ದೃಷ್ಟಿಯ ನೆಲೆಯಲ್ಲಿ ಸ್ವೀಕಾರಗೊಂಡಿವೆ ಮತ್ತು ಮೌಲ್ಯಗಳೆಂದು ಕಟ್ಟಿಕೊಂಡು ಬಂದ ಸೌಧಗಳನ್ನೂ ಕೆಡವುವಂತೆಯೂ ಮಾಡಿವೆ.

ಇದೇ ಸೀತೆ ಗ್ರಾಮೀಣ ಪರಿಸರದಲ್ಲಿ ಬೇರೆಯದೇ ಆದ ನೆಲೆಯಲ್ಲಿ ಸಿಗುತ್ತಾಳೆ. ಪಕ್ಕದ ಮನೆಯ ಹುಡುಗಿಯ ಹಾಗೆ, ಕಷ್ಟಬಂದ ನೆರೆಯ ಹೆಣ್ಣಿನ ಹಾಗೆ. ಗಂಡಿನ ಆಟಕ್ಕೆ ಎಣೆಯಿಲ್ಲದಾದಾಗ ವಿಧಿಯಿಲ್ಲದೆ ಬಲಿಪಶುವಾದ ಹೆಣ್ಣುಗಳಿಗೆ ಸೀತೆಯೇ ಮಾದರಿ. ಆದರೂ ಇಂತಹ ಮಾದರಿಗಳನ್ನು ತಿರಸ್ಕರಿಸುವ ಮತ್ತು ವಾಸ್ತವವನ್ನು ವೈಭವೀಕರಿಸದೆ ನಿಜದ ಅನಾವರಣ ಮಾಡುವ ತಾಕತ್ತು ಮಹಿಳಾ ಕಾವ್ಯಕ್ಕಿದೆ. ಹೆಣ್ಣು ಸಹನಾಮಯಿ ಎಂಬ ಆದರ್ಶವನ್ನೇ ಅಲ್ಲಾಡಿಸುವ ಬರಹಗಳೂ ಇಲ್ಲಿವೆ.

"ಏನು ಬೇಕಾದರೂ ನುಂಗಿಕೊಂಡಾಳು ಹೆಂಡತಿಯೆಂಬುವಳು
ತೀರಾ ನಡೆಯಲ್ಲ ಎನ್ನುವಾಗ ಅತಿರಂಭೆಯಂಥ ಸವತಿಯನ್ನೂ
ಅಷ್ಟಲ್ಲದೆ ಹಾರಿಕೊಂಡಳೆ ಆ ಹುಡುಗಿ ಅಗ್ನಿಕೊಂಡಕ್ಕೆ
ಅಪ್ಪ ಕರೆಯಲಿಲ್ಲ ಅಮ್ಮ ಇಳುಹಲಿಲ್ಲವೆಂಬುದೆಲ್ಲ ಸುಮ್ಮನೆ
ಕೇರಿಯ ಬಾಯ್ತುರಿಕೆಗೆ; ದೇವರಹಸ್ಯ ಸೋಸಿದರಿಲ್ಲ
ಮೇಲೆನಿಸಿತ್ತೇನೊ ಮರ್ಯಾದಸ್ಥೆಗೆ ಗಂಡನೆಂಬ ಒಳಜ್ವರಕ್ಕಿಂತ
ಒಂದೇಟಿಗೆ ಬೂದಿಗುಟ್ಟಿಸುವ ಕೆಂಡ" ೩೨

ಸಮಾಜವನ್ನು ಮೆಚ್ಚಿಸುವ ಹಂಬಲ ರಾಮನದು. ಲೋಕಕಲ್ಯಾಣದ ಹಂಬಲ ಸಮಾಜದ ಜನರದ್ದು. ಮುಂಚೂಣಿಯಲ್ಲಿರುವವರನ್ನು ನಂಬಿ ಮುಂದುವರೆದರೆ ಆದರ್ಶವೆಂಬ ಮಾತು ಗಂಡಿನ ಅಂಕೆಯಲ್ಲಿರುವುದಿಲ್ಲವೆಂಬ ಹುನ್ನಾರ ದಟ್ಟವಾಗಿ ಕಾಣುತ್ತದೆ. ಮರ್ಯಾದೆ ಎಂಬ ಪದವೇ ಹೆಣ್ಣಿನ ಮನಸ್ಸನ್ನು ಮುರಿಯುತ್ತದೆಂಬುದಕ್ಕೆ ರಾಮಾಯಣಕ್ಕಿಂತ ಉತ್ತಮ ನಿದರ್ಶನವಿಲ್ಲ. ಎಲ್ಲವನ್ನೂ ಸಹಿಸುವ ಗುಣ ಸೀತೆಗಿದ್ದರೂ ಒಮ್ಮೆಗೇ ಉರಿದು ಬೂದಿಯಾಗುವ ತವಕ ಅವಳಲ್ಲಿ ಸದಾ ಜಾಗೃತವಾಗಿ ಹರಿಯುತ್ತಿತ್ತೆಂಬುದಕ್ಕೆ ಈ ಕವಿತೆ ಉತ್ತಮ ಉದಾಹರಣೆಯಂತಿದೆ.

ಲಲಿತಾ ಸಿದ್ದಬಸವಯ್ಯನವರ ಕವಿತೆಗಳಲ್ಲಿ ಪ್ರಬುದ್ಧವಾಗಿ ಆಲೋಚಿಸುವ ಮತ್ತು ಹೊಸತನಕ್ಕಾಗಿ ಚಿಂತನೆಗಳಿಗೆ ಸದಾ ಹಾತೊರೆಯುವ ಹೆಣ್ಣಿದ್ದಾಳೆ. ಅವಳು ಭೂಮಿಯಾದರೂ ಸರಿಯೆ, ಭೂಮಿಯಲ್ಲಿ ಹುದುಗಿಹೋದ ಸೀತೆಯಾದರೂ ಸರಿಯೆ. ಎಲ್ಲದರಲ್ಲೂ ಮೂಲ ಬೇರಿರುವುದು ಹೆಣ್ಣು ಧ್ವನಿಯೇ ಎಂಬುದನ್ನು ಇವರ ಕಾವ್ಯ ಗಟ್ಟಿಗೊಳಿಸಿದೆ. ಪ್ರತಿಯೊಂದು ಕವಿತೆಯನ್ನು ಓದಿದಂತೆಲ್ಲಾ ನಮಗೆ ಭಾಸವಾಗುವುದು ನಮ್ಮಗಳದೇ ಚಿತ್ರಣ. ಇಲ್ಲಿ

ಊಹೆಗಿಂತ ವಾಸ್ತವತೆ, ಕಲ್ಪನೆಗಿಂತ ಹೆಣ್ಣಿನ ಮನೋಭಾವದ ಭಿನ್ನ ನೋಟ ಇಲ್ಲಿದೆ. ಆದ್ದರಿಂದ ಎಂತಹ ಸಂದರ್ಭದಲ್ಲೂ ಹೆಣ್ಣಿನ ಬದುಕಿನ ಪರಿಧಿ ವ್ಯಾಪಕವಾದುದು ಎಂಬುದನ್ನು ಇವರ ಕವಿತೆಗಳು ಕಟ್ಟಿಕೊಡುತ್ತವೆ.

೫.೬ ಹೆಣ್ಣಿನ ಆತಂಕದ ನೆಲೆಗಳು : ಕೆ.ಷರೀಫಾರವರ ಕಾವ್ಯ

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮುಸ್ಲಿಂ ಬರಹಗಾರರ ಕೊಡುಗೆ ಅಪಾರವಾದದ್ದು. ನವ್ಯ ಸಾಹಿತ್ಯದ ನಂತರ ಮುಸ್ಲಿಂ ಲೇಖಕರ ಬರಹಗಳು ಬಂದದ್ದು. ದಲಿತ, ಬಂಡಾಯ ಕಾಲಘಟ್ಟಕ್ಕಾಗಲೇ ಧರ್ಮದ ಮತೀಯ ಸಂಘರ್ಷಗಳ ಮೇಲಿನ ಹೇರಿಕೆಯನ್ನು ವಿರೋಧಿಸುವ ಬರಹಗಳು ಬಂದದ್ದು ವಿಶೇಷ. ಪ್ರಸ್ತುತ ಸಂಶೋಧನೆಗೆ ಸಂಬಂಧಿಸಿದಂತೆ ಡಾ. ಕೆ. ಷರೀಫಾರವರ 'ನೂರೇನಳ ಅಂತರಂಗ' ಕವನ ಸಂಕಲನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

'ನೂರೇನಳ ಅಂತರಂಗ' ಕೃತಿಗೆ ಮಲ್ಲಿಕಾ ಘಂಟಿರವರು ಬೆನ್ನುಡಿ ಬರೆಯುತ್ತಾ ಹೀಗೆ ಹೇಳುತ್ತಾರೆ. 'ಮನೆಯ ಒಳಗಿದ್ದೂ, ಹೊರಗಿದ್ದೂ, ಜಗತ್ತನ್ನು ಕಾಣುವ ಮಹಿಳೆಯರ ದೃಷ್ಟಿಕೋನ ಪುರುಷ ಪರ, ಪುರುಷಾದೀನವಾಗಿರುವುದರ ಬಗ್ಗೆ ಗಂಭೀರವಾಗಿ ಆಲೋಚಿಸಬೇಕು. ಆದರೆ ಷರೀಫಾರಂತವರಿಗೆ ಎಲ್ಲಿದ್ದರೂ ಅನುಭವದ ಗ್ರಹಿಕೆ ಮತ್ತು ಅಭಿವ್ಯಕ್ತಿಯ ವಿಧಾನ ಒಂದು ಸೈದ್ಧಾಂತಿಕ ನೆಲೆಗೆ ಬದ್ಧವಾಗಿರುವುದರಿಂದ ಅವರ ಕವಿತೆಗಳೆಲ್ಲಾ ವಿಚಾರಕ್ಕಿಳಿಸುತ್ತವೆ'[೫೩] ಎಂದಿದ್ದಾರೆ. ದೇಶ ಇಂದು ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಹೆಣ್ಣು ತನ್ನ ಸ್ವಾತಂತ್ರ್ಯಕ್ಕಾಗಿ ಸಮಾಜದೊಂದಿಗೆ ಹೋರಾಡುತ್ತಲೇ ದೇಶಕ್ಕೆ ಸಿಕ್ಕ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಹೊಣೆಯನ್ನು ಹೊರಬೇಕಾಗಿದೆ. ಆ ಹೊಣೆಗಾರಿಕೆಯ ಅರಿವು ಕವಯಿತ್ರಿಯಲ್ಲಿ ಇರುವುದರಿಂದಲೇ ದೇಶವನ್ನು ಒತ್ತೆ ಇಡಲು ಹೊರಟಿರುವವರ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ.

"ನನ್ನವ್ವನ ಒಡಲ ಕಿಚ್ಚಿನಿಂದ
ಹೊರಬಿದ್ದ ಅವಳ ನಿಟ್ಟುಸಿರಿನಿಂದ
ನಿಮ್ಮ ಒಪ್ಪಂದಗಳು ಸದ್ದಿಲ್ಲದೆ
ಸುಟ್ಟು ಬೂದಿಯಾದಾವು" [೫೪]

ಎಂಬ ಎಚ್ಚರಿಕೆಯನ್ನು ಈ ದೇಶದ ಹುಸಿ ವಾರಸುದಾರಿಕೆಯನ್ನು ಹೊತ್ತವರಿಗೆ ನೀಡುತ್ತಾಳೆ. ನಾವು ಪ್ರತಿಯೊಬ್ಬರಿಗೂ ಜೋತು ಬಿದ್ದವರು. ಈ ಜೋತು ಬೀಳುವ ಕ್ರಿಯೆ ಧರ್ಮ, ಜಾತಿ, ಸಾಮಾಜಿಕ ಮೌಲ್ಯಗಳು, ಗಂಡ, ಮಕ್ಕಳು, ತಂದೆ, ತಾಯಿಗಳ ಸಂಬಂಧ ಎಲ್ಲದಕ್ಕೂ ಜೋತುಬಿದ್ದವರೆ. ಷರೀಪರವರ 'ಹಡೆದವ್ವನಿಗೆ ಕೇಳಿಸುವುದೇನೆ.'

ಕವಿತೆಯಲ್ಲಿ ಹೆಣ್ಣಿನ ಮೂಲಕವೇ ಸಮಾಜಕ್ಕೆ ಸವಾಲು ಹಾಕುತ್ತಾರೆ. ಇಡೀ ಕವಿತೆ ಸಮಾಜಕ್ಕೆ ನೇರ ಪ್ರಶ್ನೆ ಮಾಡುವಂತಿದೆ. ಕಾಲ ಎಷ್ಟೇ ಮುಂದುವರೆದರೂ ಮನಸ್ಥಿತಿಗಳು ಬದಲಾಗುವುದಿಲ್ಲ ಎಂಬುದಕ್ಕೆ ಉದಾಹರಣೆ ಈ ಕವಿತೆ.

"ನಾನವನ ಅರ್ಧಾಂಗಿ
ಅವನ ಯಾವ ಅಂಗದ ಮೇಲೆ
ನನಗೆ ಅಧಿಕಾರವಿದೆ ಹೇಳು
ನನ್ನ ನಗು, ಅಳುವಿನ
ಮೇಲಿಯೂ ಅವನದೇ ಅಧಿಕಾರ" [೫೫]

ಎಂಬ ಸಾಲುಗಳಲ್ಲಿ ಸ್ವಂತಿಕೆ ಇಲ್ಲದ ಹೆಣ್ಣು, ಪುರುಷನಿಂದ ನಿಯಂತ್ರಿಸಲ್ಪಟ್ಟ ಹೆಣ್ಣು ಅರ್ಧಾಂಗಿ ಎಂದು ಹೇಳಲು ಹೊರಟದ್ದಾರೆ. ಅರ್ಧನಾರೀಶ್ವರನಾದ ಶಿವ ಆದರೆ ವಾಸ್ತವದಲ್ಲಿ ಹೆಣ್ಣಿನ ಮೂಲಕ ಪುರುಷ ತನ್ನ ತನವನ್ನು ಕಟ್ಟಿಕೊಳ್ಳುತ್ತಾನೆ. ಅಂದರೆ ಅರ್ಧಾಂಗಿಯ ಕಲ್ಪನೆ ಹೆಣ್ಣಿನದೆ. ನಮ್ಮ ಹಿರಿಯರು ನಮ್ಮಲ್ಲಿ ತುಂಬಿದ ಮೌಢ್ಯತೆಯನ್ನು ಇಂದಿಗೂ ಯಥಾವತ್ತಾಗಿ ಪಾಲಿಸುತ್ತಿದ್ದೇವೆ. ಸ್ವಯಂಕೃತ ಅಪರಾಧಿಗಳಂತೆ ಬಾಳುತ್ತಿದ್ದೇವೆ. ಅರ್ಧಾಂಗಿಯ ಕಲ್ಪನೆಯೇ ಮೋಸದ್ದು. ಕವಿತೆ ಮುಂದುವರೆದು ತಾಯಿಯನ್ನು ಪ್ರಶ್ನಿಸುವಲ್ಲಿ ಕೊನೆಗೊಳ್ಳುತ್ತದೆ. ಏಕೆಂದರೆ ಇವಳೂ ಸಂಪ್ರದಾಯಗಳ ಕಟ್ಟಿಗೆ ಬಿದ್ದವಳೆ.

"ಕಲ್ಲಾದ ಹೃದಯಗೋರಿ
ಬತ್ತಿ ಹೋದ ಕಣ್ಣೀರಧಾರೆ
ಹೃದಯದಲ್ಲಿನ ಮೌನ
ರೋಧನದ ಶಬ್ದ
ಆ ನನ್ನ ಹಡೆದವ್ವನ
ಕಿವಿಗೆ ಕೇಳಿಸುವುದೇನೆ?" [೫೬]

ತಾಯಿಗೆ ಪ್ರಶ್ನೆ ಮಾಡುವ ಮೂಲಕ ತನ್ನ ಗೆಳತಿಯನ್ನೂ ಕೇಳುತ್ತಾಳೆ. ಇದು ಹೆಣ್ಣುಗಳ ನಡುವೆ ನಡೆವ ಸಂಭಾಷಣೆ. ಆದರೆ ಎಲ್ಲರೂ ಅಜ್ಞಾತ ಸ್ಥಿತಿ ಹೊಂದಿದವರೆ ಆದರೂ ನಾವು ನೇರವಾಗಿ ಪ್ರಶ್ನಿಸದೆ ಮತ್ತೊಂದು ಮಾದರಿಗೆ ಉದಾಹರಣೆಗಳಾಗುವುದು ವಿಪರ್ಯಾಸ. ಮಹಿಳಾ ಕಾವ್ಯ ಕೇವಲ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಲು ಮಾತ್ರವೇ ಹುಟ್ಟಿಕೊಂಡದ್ದಲ್ಲ ಅಥವಾ ಪುರುಷ ಸಮಾಜದ ಬಗ್ಗೆ ವಿರೋಧಿಸಲು ಸೃಷ್ಟಿಯಾದದ್ದಲ್ಲ. ಸಾಮಾಜಿಕ ಕಳಕಳಿ, ದೇಶ ಪ್ರೇಮದ ಬಗ್ಗೆ ಕಳಕಳಿ ಕವಯಿತ್ರಿಗಿದೆ. ಇದು ಪ್ರತಿಯೊಬ್ಬರ ಕವಿತೆಗಳಲ್ಲೂ ಮೂಡಿಬಂದಿದೆ. ಇದಕ್ಕೆ ಜಾತಿ ಧರ್ಮಗಳ ಯಾವುದೇ ಬೇಲಿಗಳಿರುವುದಿಲ್ಲ.

ಸ್ವಾತಂತ್ರ್ಯದ ಹೋರಾಟಕ್ಕೆ ಹೋರಾಡಿ ಮಡಿದವರು ಹಲವರು ಗುಂಡಿಗೆ ಬಲಿಯಾದ ಸೈನಿಕರು ಹಲವರು. ಅವರನ್ನು ನಂಬಿದ ಹೆಂಗಸರು ಮಾತ್ರ ವಿಧವೆಯರಾಗಿ ಉಳಿದಾಗ

ಅವರ ತಲ್ಲಣ, ಅವರ ಮೇಲಾಗುವ ಆಕ್ರಮಣ, ದೌರ್ಜನ್ಯ, ಹಸಿವು, ಬಡತನ, ಮುಂತಾದುವೂ ಇವರ ಕಾವ್ಯಗಳ ವಸ್ತುಗಳಾಗಿವೆ. 'ಆಶಾ ಕಿರಣ' ಕವಿತೆ ಸಮುದಾಯ ಮತ್ತು ಹೆಣ್ತನಕ್ಕೆ ಭರವಸೆಯ ಬೆಳಕಿನಂತಿದೆ. ದಮನಿತ ಮಹಿಳಾ ಸಮುದಾಯಕ್ಕೆ ಸ್ವತಂತ್ರರಾಗಬೇಕೆಂಬ ಆಶಯವನ್ನು ಮೂಡಿಸುವಂತಿದೆ.

"ನನ್ನವರೆ ಒಂದಾಗಿರಿ
ಹಿಂದಿನವರ ತ್ಯಾಗ
ಬಲಿದಾನಗಳ ನೆನೆದು
ಸಾಮ್ರಾಜ್ಯ ಶಾಹಿಗಳ ಸೊಕ್ಕಡಗಿಸಲು
ಪಟ್ಟಭದ್ರರ – ಕುಟಿಲ ತಂತ್ರಗಳನ್ನು
ಹುಸಿಗೊಳಿಸಲು ಒಂದಾಗಿರಿ
ದೇಶದ ಮೇಲೆ ಹರಡಿದ
ಕಪ್ಪುಕತ್ತಲೆಯ ಸರಿಸಲು
ಬೆಳಕಿನ ಆಶಾಕಿರಣವಾಗಿರಿ" [೫೭]

ಈ ಸಾಲುಗಳು ಶೋಷಣೆಗೊಳಗಾದ ಅಸಹಾಯಕ ಮಹಿಳಾ ಸಮೂಹವನ್ನು ಪ್ರತಿನಿಧಿಸುತ್ತದೆ. ಸ್ವಯಂ ಘೋಷಿತ ಅಪರಾಧಿಗಳಂತೆ ಬದುಕುವುದನ್ನು ಬಿಟ್ಟು ಸ್ವತಂತ್ರರಾಗ ಬೇಕೆಂಬ ಹಂಬಲ ಕವಯಿತ್ರಿಯದು. ಮಹಿಳಾ ಕಾವ್ಯದ ನಿಲುವೇ ಹಾಗೆ. ತನ್ಮೂಲಕ ಇಡೀ ಹೆಣ್ಣು ಕುಲವನ್ನೇ ಎಚ್ಚರಿಸುವ ಪ್ರಜ್ಞೆಯೊಂದಿಗೆ ದೇಶ ಪ್ರೇಮದ ಜಾಗೃತಿಯೂ ಇದರಲ್ಲಡಗಿದೆ.

'ನೂರೇನಳ ಅಂತರಂಗ' ಕವನ ಸಂಕಲನ 'ತಲಾಕ್' ಪಡೆದ ಹೆಣ್ಣು ಮಗಳೊಬ್ಬಳ ನೈಜ ಚಿತ್ರಣವನ್ನು ಬಿಚ್ಚಿಡುವಂತಹದ್ದು. ಈ ತಲಾಕ್ ಸಂಸ್ಕೃತಿಯ ಭೀಕರತೆ ಪ್ರಸ್ತುತ ಚರ್ಚೆಗೆ ಗ್ರಾಸವಾದ್ದರಿಂದ ಷರೀಪರ ಕವನಗಳು ಮತ್ತೆ ಮತ್ತೆ ಮುಖ್ಯವಾಗುತ್ತವೆ. ವರ್ತಮಾನದ ಹಲವು ಸಂಗತಿಗಳು ಕವಿತೆಗಳ ಮೂಲಕ ಮರುಹುಟ್ಟನ್ನು ಪಡೆದಿವೆ. ಪ್ರತೀಕ್ಷೆ ಮತ್ತು ನಿರೀಕ್ಷೆಗಳನ್ನು ಸಮಾನವಾಗಿ ಕಾಣಬೇಕೆಂದರೂ ಅವುಗಳ ಹೊಂದಾಣಿಕೆ ಅಸಾಧ್ಯ ಎಂಬುದನ್ನು 'ಪ್ರತೀಕ್ಷೆ ನಿರೀಕ್ಷೆ' ಕವನ ವಿಡಂಬಿಸುತ್ತದೆ.

"ಜನ ಜಂಗುಳಿಯಲ್ಲಿ ಕಳೆದಿರುವ
ಬದುಕಿನ ಜೊತೆಗಾರನಿಗೆ
ಮತ್ತೆ ಮತ್ತೆ ಹುಡುಕುತ್ತೇನೆ.
ಕೀವು ಸೋರುವ ಗಾಯಗಳಿಗೆ
ಮತ್ತೆ ಮತ್ತೆ ತೊಳೆಯುತ್ತೇನೆ.

ಮುಲಾಮು ಸವರುತ್ತೇನೆ
ಎಂದಿಗೂ ಒಂದಾಗದ
ರೈಲು ಹಳಿಗಳಂತೆ" [೫೮]

ಇಲ್ಲಿ ನಿರೀಕ್ಷೆಗಿಂತ ನಿರಾಸೆ ಹೆಚ್ಚಿನದು. ಇದರ ಜೊತೆಗೇ ಬದುಕಿನ ದೃಢತೆಯೂ ಸ್ವಲ್ಪವಾಗಿದೆ. ಆದರೂ ಸಮಾಜದ ಹೊಲಸನ್ನು ಸ್ವಚ್ಛ ಪಡಿಸಲೆತ್ನಿಸುವ, ಪರಿಹಾರ ಕಂಡು ಹಿಡಿಯುವ ಪ್ರಯತ್ನವಿದೆ. ಕೆಟ್ಟು ನಿಂತ ಯಂತ್ರವನ್ನು ಸರಿಪಡಿಸಿ ಕಾರ್ಯಶೀಲತೆಗೆ ಸಜ್ಜುಗೊಳಿಸುವ ಪ್ರಯತ್ನವಿದೆ. ಇವೆಲ್ಲವೂ ನಿರೀಕ್ಷೆಯೆ. ಸಂಗಾತಿಯ ಹಂಬಲವಿದ್ದರೂ ಬದುಕಿನ ವಾಸ್ತವದ ಅರಿವು ದೂರವಾಗುವುದರಲ್ಲೇ ಇದೆ ಎಂಬ ಸಮಾಧಾನವೂ ಕವಿತೆಯಲ್ಲಡಗಿದೆ. ವಾಸ್ತವವಾಗಿ ಇದು ಸತ್ಯವೂ ಹೌದು.

'ಬಂಧಿಗಳು ಮತ್ತು ನನ್ನವರು' ಕವಿತೆಯಲ್ಲಿ ಅಮಾಯಕರ ಬಲಿದಾನವಿದೆ. ಬಂಧನ ಮತ್ತು ಬಲಿದಾನದ ಘೋರತೆಯ ಕರಾಳ ದರ್ಶನ ಎರಡೂ ಕವಿತೆಯಲ್ಲಡಗಿದೆ. ಯುದ್ಧ ಮತ್ತು ಆಕ್ರಮಣದಿಂದ ಅಮಾಯಕರ ಬಲಿಯಾದಾಗ ಅವರಲ್ಲುಂಟಾದ ತಲ್ಲಣಗಳನ್ನು ಕವಿತೆ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದೆ.

"ನನ್ನವರು
ರಾಜರು ಘೋಷಿಸಿದ
ಯುದ್ಧಗಳಿಗೆ ಮರುಮಾತಿಲ್ಲದೆ
ಕತ್ತುಗಳ ಕತ್ತರಿಸಿ
ನೆತ್ತರ ಕಾಲುವೆ ಹರಿಸಿದ
ವೀರ ಸೈನಿಕರು ಇಲ್ಲವೆ
ಸಾವನ್ನು ಸ್ವಾಗತಿಸಿ
ಶಾಹಿದ್ ಎನಿಸಿ ಕೊಂಡವರು
ವಿದೇಶಿ ಸರಕುಗಳಿಗೆ / ಮಾರುಕಟ್ಟೆ ಒದಗಿಸಲು
ಬಲಿಯಾದ ನನ್ನವರು
ಅಸಹಾಯಕ ಬಂಧಿಗಳು" [೫೯]

ಈ ಸಾಲುಗಳಲ್ಲಿ ಗುಲಾಮ ಪದ್ದತಿಯ ಪಿಡುಗು ಅನಾವರಣಗೊಂಡಿದೆ. ಸ್ವಾಮಿ ನಿಷ್ಠೆಗೆ ಮತ್ತು ಪ್ರತಿಷ್ಠೆಗೆ ಬಲಿಯಾದ ಅಮಾಯಕರ ಗೋಳು ಎರಡೂ ಒಂದೆ. ಆದರೆ ಪರಿಸ್ಥಿತಿ ಬೇರೆಯವು. ಇತಿಹಾಸವನ್ನು ನಾವು ವೈಭವೀಕರಿಸುತ್ತಲೇ ಬಂದವರು. ಆದರೆ ಪ್ರತಿಷ್ಠೆಗೆ ಬಲಿಯಾದವರ ಚಿತ್ರಣ ಬೆಳಕಿಗೆ ಬಾರದಿರುವುದು ದುರಂತ.

ವಾಸ್ತವದಲ್ಲಿ ಬದುಕಿನ ಘೋರ ಒತ್ತಡಕ್ಕೆ ಸಿಲುಕಿದರೂ, ಭವಿಷ್ಯದ ನಿರೀಕ್ಷೆ ಪ್ರತಿಯೊಬ್ಬರಿಗೂ ಇದ್ದೇ ಇರುತ್ತದೆ. ಹೆಣ್ಣಿನ ಬದುಕಿನ ಅನಾವರಣವನ್ನು ಯಥಾವತ್ತಾಗಿ ಚಿತ್ರಿಸಿದವರು. ಕವಯಿತ್ರಿಯರು ವ್ಯವಸ್ಥೆಯ ಕ್ರೂರತೆಯನ್ನೂ ಅಷ್ಟೇ ಸಹಜವಾಗಿ ಚಿತ್ರಿಸಿದವರು. ಹೆಣ್ಣು ಕೇವಲ ಹರಿದ ಬಟ್ಟೆಗೆ ತೇಪೆ ಹಾಕಿದವಳೇ ವಿನಃ ಬದುಕಿಗೆ ತೇಪೆ ಹಾಕಿದವಳಲ್ಲ. ಅಂದರೆ ತೇಪೆಯನ್ನೇ ಚಿತ್ತಾರ ಮಾಡಿದ ಕೌದಿಯನ್ನಾಗಿಸಿ ಜೀವನ ಕಂಡವಳು. ಅಂದರೆ ಬದುಕಿನ ಅದಮ್ಯ ಆಸೆಯನ್ನು ಬದುಕಿನೊಂದಿಗೇ ಕಂಡುಂಡವಳು. ನಾಳೆಗಳ ನಿರೀಕ್ಷೆ ಪ್ರತಿಯೊಬ್ಬರಿಗಿದ್ದದ್ದೆ. ನಾಳೆ ಎಂಬುದು ಸುಂದರತೆಗೆ ಸಂಕೇತವೆಂಬ ನಿರೀಕ್ಷೆಯನ್ನು "ನಾಳೆಗಳು" ಕವನ ಚಿತ್ರಿಸಿದೆ.

"ನನ್ನ ನಗುವಿನ ಹಿಂದೆ
ಅಡಗಿದ ಸಾವಿರ ಸತ್ಯಗಳಿವೆ.
ಹರಿದ ಬಟ್ಟೆಗೆ ಹಚ್ಚಿದ
ಹಲವಾರು ತೇಪೆಗಳಿವೆ.
ಒತ್ತಾಯದ ನಗೆಯನ್ನು
ಮತ್ತೆ ಮತ್ತೆ
ಬರಿಸಬೇಕಿದೆ ಮುಖದಲಿ
ನೋವನ್ನು ಹಲ್ಲು ಕಚ್ಚಿ
ಕಣ್ಣುಮುಚ್ಚಿ ಸಹಿಸಬೇಕಿದೆ" ೬೦

ಶತಮಾನ ಕಳೆದರೂ ಜೀವಂತಿಕೆಯ ಸ್ಪರ್ಶ ಇದರಲ್ಲಿದೆ. ಪದಗಳು ಬೇರೆಯಾದರೂ ಆಂತರ್ಯದ ಕೂಗೊಂದೆ ಎಂಬುದು ಇಲ್ಲಿನ ಧ್ವನಿ. ಕವಿತೆ ಮುಂದುವರೆದು ನಿರೀಕ್ಷೆಯಲ್ಲೇ ಮುಗಿಯುತ್ತದೆ.

"ಲೋಕದಲಿ ದಿನದಿನವೂ
ಸಾಯುತ್ತ ನೋವನ್ನು
ಸಹಿಸುತ್ತ ಬದುಕಬೇಕಿದೆ.
ಸುಂದರ ನಾಳೆಯ ಕನಸುಗಳ ಕಾಣುತ್ತ
ಜೋಗುಳ ಹಾಡುತ್ತ ಕರುಳ ಕುಡಿಗಳ
ತಟ್ಟಿ ಮಲಗಿಸಬೇಕಿದೆ" ೬೧

ತಾಯಿಯ ಜವಾಬ್ದಾರಿಯ ಸೂಕ್ಷ್ಮತೆ ಇಲ್ಲಿದೆ. ಮುಂದಿನ ಪೀಳಿಗೆಗೆ ಭವಿಷ್ಯವನ್ನು ಕಟ್ಟಿಕೊಡುವ ಪ್ರಯತ್ನ ಹೆಣ್ಣಿಗಿದೆ. ಬದುಕು ಮತ್ತು ತಾಯ್ತನಗಳು ಭವಿಷ್ಯದ ನಿರೀಕ್ಷೆಯ ಹಂಬಲವನ್ನು ಕವಯಿತ್ರಿ ಕೇವಲ ಸಾಲುಗಳ ರೂಪದಲ್ಲಿ ಹಿಡಿದಿಟ್ಟಿಲ್ಲ. ಇಲ್ಲಿ ನೀರೆಲ್ಲವೂ ತೀರ್ಥ ಎಂಬ ಕವಿವಾಣಿಯಂತೆ ಕೆ. ಷರೀಫರವರ ಕವನಗಳು ಹೊಸ ಹೊಳಹಿಗೆ, ಲಾಲಿತ್ಯಕ್ಕೆ ಯೋಚನಾ ಲಹರಿಯ ಕಡೆಗೆ ನಮ್ಮ ದಿಕ್ಕನ್ನು ಬದಲಿಸುತ್ತವೆ ಎನ್ನಬಹುದು.

೫.೭ ಬಂಡಾಯ ಪ್ರಜ್ಞೆಯ ನೆಲೆಯಲ್ಲಿ ; ಹೆಚ್. ಎಲ್. ಪುಷ್ಪ ಅವರ ಕಾವ್ಯ

ಸಮಕಾಲೀನ ಸಾಹಿತ್ಯದಲ್ಲಿ ವಿಭಿನ್ನ ಧೋರಣೆಯೊಂದಿಗೆ ಕಾವ್ಯ ಕ್ಷೇತ್ರದಲ್ಲಿ ಗುರ್ತಿಸಿಕೊಂಡವರು ಹೆಚ್. ಎಲ್. ಪುಷ್ಪರವರು. ಪ್ರತಿಯೊಂದು ಕವಿತೆಯಲ್ಲೂ ರೂಪಕ, ಪ್ರತಿಮೆಗಳ ಮೂಲಕ ಕಾವ್ಯದಲ್ಲಿ ಕಟ್ಟಿಕೊಡುವ ಪ್ರತಿಭೆ ಇವರದು. 'ಅಮೃತಮತಿ ಸ್ವಗತ', 'ಗಾಜುಗೋಳ' ಮತ್ತು 'ಲೋಹದಕಣ್ಣು' ಇವರ ಕವನ ಸಂಕಲನಗಳಾಗಿವೆ.

ಜಿ.ಎಸ್. ಅಮೂರ್‌ರವರು 'ಲೋಹದಕಣ್ಣು' ಕೃತಿಗೆ ಬೆನ್ನುಡಿ ಬರೆಯುತ್ತಾ ಹೀಗೆ ಹೇಳುತ್ತಾರೆ.

"ಪುಷ್ಪ ಅವರ ಕಾವ್ಯ ಒಟ್ಟಾರೆ ಮಹಿಳಾ ಕಾವ್ಯದೊಡನೆ ಘನಿಷ್ಟ ಸಂಬಂಧ ಹೊಂದಿಯೂ ತನ್ನದೇ ಆದ ವಿಶಿಷ್ಟ ಸಂಬಂಧಗಳನ್ನು ಹೊಂದಿದೆ. ಅಭಿವ್ಯಕ್ತಿಯ ಆತಂಕಗಳು, ಅಸ್ಮಿತೆಯ ಶೋಧ, ನೋವಿನ ಅನುಭವ, ಬಂಧಗಳ ಸಂಬಂಧಗಳು, ಪರಿಸರಕ್ಕೆ ಪ್ರತಿಕ್ರಿಯೆ ಇಂತ ಆಶಯಗಳನ್ನು ಅವರ ಕಾವ್ಯಗಳಲ್ಲಿ ಗುರ್ತಿಸಬಹುದು. ಪುಷ್ಪ ಅವರ ಭಾಷೆ ಅಲ್ಲಮನ ಪ್ರಭಾವದಲ್ಲಿ ರೂಪುಗೊಂಡಿದೆ. ಅದು ಮುಖ್ಯವಾಗಿ ರೂಪಕದ ಭಾಷೆ ಅದಕ್ಕೆ ಅನುಭವದ ಸೂಕ್ಷ್ಮಾಣು ಸೂಕ್ಷ್ಮಗಳನ್ನು ಹಿಡಿಯುವ ಶಕ್ತಿ ಇದೆ. ವಿರುದ್ಧ ಪ್ರತಿಮೆಗಳ ಮೂಲಕ ತರ್ಕದಾಚೆಗೆ ಕೈ ಚಾಚುವ ಹಂಬಲವಿದೆ. ಸಹಜ ಆಧ್ಯಾತ್ಮಕ್ಕೆ ಅಭಿವ್ಯಕ್ತಿ ಕೊಡುವ ಸಾಮರ್ಥ್ಯವಿದೆ. ನಿಶ್ಯಬ್ದವನ್ನು ನಿಲುಕುವ ಮಹತ್ವಾಕಾಂಕ್ಷೆ ಇದೆ. ಈ ದಾರಿಯಲ್ಲಿ ಪುಷ್ಪ ಅವರು ಇನ್ನೂ ಮುಂದುವರೆಯಲಿ ಕನ್ನಡ ಕಾವ್ಯವನ್ನು ಶ್ರೀಮಂತಗೊಳಿಸಲಿ ಎಂದು ಮನಃಪೂರ್ವಕವಾಗಿ ಹಾರೈಸುತ್ತೇನೆ" [೨]

ಪುಷ್ಪರವರ ಕವಿತೆಗಳು ಅನುಭಾವದಲ್ಲಿ ಬೆರೆತು ವಾಸ್ತವ ಜೀವನವನ್ನು ದರ್ಶಿಸುವ ಕವನಗಳಾಗಿಯೂ ಓದುಗರಿಗೆ ಕಂಡು ಬರುತ್ತವೆ. ಗುರುವಾಗಿ ಅನೇಕರನ್ನು ಕವಯಿತ್ರಿ ಕವಿತೆಯೊಂದಿಗೆ ಸ್ವೀಕರಿಸಿದ್ದಾರೆ. 'ಲೋಹದಕಣ್ಣು' ಕವಿತೆಯಲ್ಲಿ ನಮಗೆ ಆಧ್ಯಾತ್ಮಿಕತೆಯ ಲೇಪ ಕಂಡು ಬಂದರೂ ಸ್ವಗತದೊಂದಿಗೆ ಬದುಕನ್ನು ಸ್ವೀಕರಿಸುವ ಗುಣ ಅವರ ಕವಿತೆಗಳಲ್ಲಿ ಮೇಳೈಸಿವೆ. ನಮಗೆ ಗೊತ್ತಿರುವ, ನಾವು ನಿತ್ಯ ಬಳಸುವ ಪದಗಳು ಹೊಸ ಆಶಯಗಳಾಗಿ ಕವಿತೆಗಳಲ್ಲಿ ಹೊರ ಹೊಮ್ಮಿರುವುದು ವಿಶೇಷ. ಇವು ಪ್ರತಿಮಾ ಮಾದರಿಗಳಾಗಿ ಹೊಸ ಸಂವೇದನೆಗಳಿಗೆ ದಾರಿ ಮಾಡಿಕೊಟ್ಟಿವೆ ಎನ್ನಬಹುದು. ಬುದ್ಧ, ಅಲ್ಲಮ, ಯಕ್ಷ, ನದಿ, ಸುನಾಮಿ, ಮಂಜು, ರಂಗಮಂಚ ಮುಂತಾದ ಪ್ರತೀಕಗಳು ಪುಷ್ಪರವರ ಕವಿತೆಗಳಲ್ಲಿ ಚಿತ್ರಿತಗೊಂಡಿವೆ. ಆದರೆ ಎಲ್ಲೂ ಇವು ಸರಳೀಕರಣಗೊಳ್ಳದೆ ಹೊಸ ಆಲೋಚನೆಗಳಿಗೊಳಪಡುವ ರೀತಿಯಲ್ಲಿ ಕವಯಿತ್ರಿ ಹಿಡಿತ ಸಾಧಿಸಿದ್ದಾರೆ.

'ಅಮೃತಮತಿ ಸ್ವಗತ' ಕವಿತೆಯಲ್ಲಿ ಪುರಾಣದ ಅಮೃತಮತಿಯನ್ನು ಮತ್ತೆ ಮತ್ತೆ ನೆನಪಿಗೆ ತರುತ್ತಾರೆ. ಯಶೋಧರ ಚರಿತೆಯಲ್ಲಿನ ಅಮೃತಮತಿಯೇ ಬೇರೆ, ಕವಯಿತ್ರಿ

ಕಂಡ ಅಮೃತಮತಿಯೇ ಬೇರೆ. ಪುರಾಣದ ಕಲ್ಪಿತ ಪಾತ್ರವನ್ನು ವಾಸ್ತವದ ಮುಖಾಂತರ ಗಮನಿಸಿ ಹೊಸ ಹೆಣ್ಣಿನ ಆಶಯವೊಂದನ್ನು ವ್ಯಕ್ತಪಡಿಸಿದ್ದಾರೆ

"ಸವಿ ಇದೆ ನೋಡು
ಒರಟು ಚಾಟಿಯ ಚುಂಬನದಲ್ಲಿ
ನವಿರಿದೆ ನೋಡು ನಾದವಿದೆ ನೋಡು
ಒರಟು ಬೆರಳುಗಳ ಕಂಪನದಲ್ಲಿ
ಏನಿದು ಮಿಡಿತ, ಮುಳ್ಳುಗಳ ಮುತ್ತಿನಲಿ
ಅದಕೆ ನೋಡು ದೊರೆ
ನಿನ್ನ ಚಂದನ ಗಂಧ ಸುವಾಸಿತ ತೆಕ್ಕೆ
ಬಿಟ್ಟು ಈ ಕಾಡ ಪೊದೆಯ ಕರೆಗೆ
ಹಾಡಾಗಿ ಹಾಡಿದ್ದು" ೬೩

ಸ್ತ್ರೀ ಸಂವೇದನೆಯ ಮನಸ್ಥಿತಿಯೇ ಹಾಗೆ. ಒರಟು ಜೀವನದಲ್ಲಿ ಹೊಳಪನ್ನು ಹುಡುಕುವ ಹಂಬಲ ಇಲ್ಲಿ ಅಮೃತಮತಿ ಹೆಣ್ಣಾಗಿದ್ದಾಳೆ. ಅಂದರೆ ನಿಜ ಜೀವನದ ಹಂಬಲ ಹೊಂದಿದ ಮುಗ್ಧ ಮನಸ್ಸಿನವಳು. ಧರ್ಮ ಮತ್ತು ರಾಜಕಾರಣಗಳು ಒಂದಾದಾಗ ವ್ಯವಸ್ಥೆ ಹೇಗೆ ಹೆಣ್ಣಿನ ಮೇಲೆ ಹಿಡಿತ ಸಾಧಿಸುತ್ತದೆ ಎಂಬುದು ಯಶೋಧರ ಚರಿತೆಯ ತಿರುಳು. ಎಲ್ಲೋ ಒಂದು ಕಡೆ ಅಹಿಂಸೆಯನ್ನು ಬೋಧಿಸುತ್ತಲೇ ಹಿಂಸೆಯ ಹಿಡಿತಕ್ಕೆ ಬಲಿಯಾದದ್ದೂ ಇದೆ. ಜನ್ಮಾಂತರ ಮತ್ತು ಅಸಹಾಯಕತೆಯ ಪ್ರತಿರೂಪವೆಂಬಂತೆ ಯಶೋಧರನ ಚಿತ್ರಣವಿದ್ದರೂ ರಾಜನಿಗಿರುವ ಮೌಲ್ಯಗಳಿರಲಿ, ಗಂಡಿಗಿರುವ ಮೌಲ್ಯಗಳೇ ಕಾವ್ಯದಲ್ಲಿ ಕಂಡು ಬರುವುದಿಲ್ಲ. ಅಮೃತಮತಿ ಮತ್ತು ಬದಗನಿಗಿರುವ ಗಾಢಪ್ರೇಮ ಇಲ್ಲಿದೆ. ಭವಾವಳಿ ಮತ್ತು ಜನ್ಮಾಂತರಗಳ ದೃಷ್ಟಿಕೋನವನ್ನು ಅಮೃತಮತಿಯಲ್ಲಿ ಕವಯಿತ್ರಿ ಕಂಡಿದ್ದಾರೆ.

"ನಾವು ಜನ್ಮವೆತ್ತುತ್ತಲೇ ಇದ್ದೇವೆ
ಅಮೃತಮತಿಯರಾಗಿ
ನಿನ್ನಂಥವನ ಗದ್ದುಗೆಯ ರಾಣಿಯರಾಗಿ
ಅವನು ಬದಗನಾಗಿ / ನಮಗುತ್ತರವಾಗಿ" ೬೪

ಕಲ್ಪನೆ ಬೇರೆಯಾದರೂ ಚಿತ್ರಣದ ಅನಾವರಣ ಒಂದೆ. ದಾಂಪತ್ಯ ಸುಖದಿಂದ ವಂಚಿತಳಾದ ಹೆಣ್ಣಿನ ಪರಿಸ್ಥಿತಿ ಅಮೃತಮತಿಯಲ್ಲಡಗಿದೆ. ಹೆಣ್ಣನ್ನು 'ಜಾರೆ' ಎಂದು ಕರೆದರೂ ಆ ಜಾರುವ ಕ್ರಿಯೆಯ ಪ್ರೀತಿಗೆ ಗಂಡೆ ಇಲ್ಲ. ಪರ ವಿರೋಧಕ್ಕಿಂತ ಬದುಕಿನ ಸೂಕ್ಷ್ಮತೆಯ ಅರಿವು ಇಲ್ಲಿದೆ.

"ನೆನಪುಗಳು ಮಧುರ ತಟ್ಟಿ ಮಲಗಿಸಬೇಕು ಕೆಲವನ್ನು
ಮುಟ್ಟಿ ಮಿಡಿಸಬೇಕು ಹಲವನ್ನು
ಸೋಲಿಲ್ಲ ಸಾವಿಲ್ಲ ಕನಸುಗಳಿಗೆ
ಇರುವುದೊಂದೇ ಬದುಕು
ಹಣತೆ ಬೆಳಕಲ್ಲ ನಿತ್ಯನೂತನ ನನ್ನಕನಸು" [೬೫]

ಬದುಕಿನ ಸಿಹಿ ಮತ್ತು ಕಹಿ ಭಾವನೆಗಳ ಸಾಕಾರವೆಂಬಂತೆ ಕವಿತೆ ಕಂಡಿದೆ. ಸೂರ್ಯನ ಬೆಳಕು ಎಷ್ಟೇ ಪ್ರಜ್ವಲಿಸಿದರು ಹಣತೆಯ ಬೆಳಕೇ ಬದುಕಿನ ಸಂಕೇತ. ಕವಿತೆಯಲ್ಲಿ ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳ ಕಲ್ಪನೆಯನ್ನು ಕವಯಿತ್ರಿ ಕನಸುಗಳ ಮೂಲಕ ಕಂಡಿದ್ದಾರೆ. ಇದು ಸ್ತ್ರೀವಾದಿ ದೃಷ್ಟಿಕೋನವೂ ಹೌದು.

'ಲೋಹದ ಕಣ್ಣು' ಕವನ ಸಂಕಲನದಲ್ಲಿ ವಾಸ್ತವ ಬದುಕಿನ ಆಧ್ಯಾತ್ಮಿಕ ತೆಳು ಲೇಪವಿದೆ. ಆಧ್ಯಾತ್ಮಿಕತೆ ಎಂದರೆ ವೈಚಾರಿಕ ಪ್ರಜ್ಞೆಯೊಂದಿಗೆ ಬದುಕಿನ ಚಿತ್ರಣವನ್ನು ಹೊರಗೆಡಹುವುದು.

"ದಾರಿ ಕಳೆದು ಕೊಂಡಿದೆ ಕವಿತೆ
ಕವಿತೆ ಹುಟ್ಟುವ ಮೊದಲು
ಏನಿತ್ತು ಇಲ್ಲಿ ಬರಿ ಬಯಲು
ಹೂ ತಳೆದ ಬೋಳುಮರ
ಇಬ್ಬನಿಗಳಿಲ್ಲದ ಬರಿ ಎಳೆಗರಿಕೆ" [೬೬]

ಹಲವು ಅರ್ಥಗಳೊಂದಿಗೆ ಓದು ಮತ್ತು ವಿಮರ್ಶಕರ ಯೋಚನಾ ಲಹರಿಯನ್ನು ವಿಸ್ತರಿಸುತ್ತದೆ. ಹೆಣ್ಣಿನ ಸುಪ್ತ ಮನಸ್ಥಿತಿಯು ಹೊರಬಂದ ರೀತಿ ಇಲ್ಲಿದೆ. ಸುಪ್ತ ಮನಸ್ಥಿತಿ ಅಭಿವ್ಯಕ್ತಗೊಂಡ ಬಗೆ ಮುಂದುವರೆದು ಕವಿತೆಯಲ್ಲಿ ನೋಡಬಹುದು.

"ದಾರಿ ಕಳೆದು ಕೊಂಡಿದೆ ಈ ನನ್ನ ಕವಿತೆ
ಹೊದಿಸಿದ್ದಾರೆ ಮುಸುಕು ಆ ಗವಾಕ್ಷಿಗೆ
ಕಳೆದು ಹೋದ ಕೀ ಸಿಗುವ ತನಕ
ತಳಮಳಿಸುತ್ತದೆ ಗಾಳಿ ಬೆಳಕಿಲ್ಲದೆ
ದಾರಿ ತಪ್ಪಿಸಿಕೊಂಡ ದಾರಿಹೋಕನಂತೆ" [೬೭]

ಮೌಢ್ಯತೆಯು ಮುಸುಕಾದಾಗ ಸ್ವಾತಂತ್ರ್ಯದ ಮಾತೆಲ್ಲಿ? ಎಂಬ ಅಂಶವಿದೆ. ಉಸಿರುಗಟ್ಟುವ ವಾತಾವರಣದಲ್ಲಿ ಬದುಕು ನಡೆಸುವುದು ವಿಷಾದನೀಯ. ಕವಿತೆಯ ಆಶಯವೇ ಭರವಸೆಯಿಂದ ಕೂಡಿರುವಂತಹದ್ದು. ಮುಕ್ತಿಯ ಹಂಬಲದ ದಾರಿಯನ್ನು ಹುಡುಕುವ ಮಾರ್ಗವೂ ಆಗಿರುವಂತೆ ತೋರುತ್ತದೆ.

ನವ್ಯ ಕಾಲ ಘಟ್ಟದ ಮಾದರಿಗಳನ್ನು ನೆನಪಿಸುವ ರೀತಿಯಲ್ಲಿ 'ಜಾತ್ರೆಯಲ್ಲಿ ಜೊತೆಯಾದವರು' ಕವಿತೆಯಲ್ಲಿ ಸೃಷ್ಟಿಕರ್ತ ಬ್ರಹ್ಮನಿಗಿಂತ ಶಿವನ ಆರಾಧನೆಗೇ ಹೆಚ್ಚಿನ ಮಹತ್ವವಿದೆ. ವೇದ, ಪುರಾಣ, ಚರಿತ್ರೆಗಳಲ್ಲಿ ಬೋಧಿಸಿರುವುದೂ ಇದನ್ನೇ. ಅಂತಹ ಶಿವನ ಆರಾಧನೆಯ ನೆಪದಲ್ಲಿ ಜೊತೆಯಾದವರು ನಡೆದುಕೊಳ್ಳುವ ರೀತಿ ಇಲ್ಲಿದೆ.

"ಮೇಲಿದ್ದಾನೆ ಅವನು ತಣ್ಣನೆಯ ಕೊಳದ
ಆ ಬೆಟ್ಟ ತುದಿಯಲ್ಲಿ ಅವನಿಚ್ಛೆಯಂತೆ
ನಮ್ಮ ನಡಿಗೆಯ ಹೆಜ್ಜೆ" ೬೮

ಲೌಕಿಕ ಮತ್ತು ಅಲೌಕಿಕತೆಯ ಸಮಷ್ಠಿ ದೃಷ್ಠಿ ಧರ್ಮದ ಸಂಘರ್ಷವಿಲ್ಲದ ಬದುಕಿನ ವಾಸ್ತವತೆ ಕವಿತೆಯಲ್ಲಡಗಿದೆ. ಕುಂಬಾರ ಮಾಡಿದ ಮಡಿಕೆ ನಾನಾ ರೂಪ ಪಡೆಯುತ್ತದೆ. ಮನುಷ್ಯ ಸಂಬಂಧಗಳಿಗೆ ಜೋತು ಬಿದ್ದವ. ಆದರೂ ಕೊನೆಗೆ ಅವನು ಬಯಸುವುದು ಮುಕ್ತಿಯನ್ನೇ. ಒಟ್ಟಾರೆಯಾಗಿ ಈ ಕವಿತೆ ಹುಟ್ಟು ಮತ್ತು ಸಾವುಗಳ ನಡುವಿನ ಜೀವನ ದರ್ಶನಕ್ಕೆ ಹೊರಟಂತೆ ಭಾಸವಾಗುತ್ತದೆ.

"ಯಕ್ಷನೊಬ್ಬನ ಸೈಕಲ್ ಜಾಥಾ" ಕವಿತೆಯಲ್ಲಿ ಇಂದಿನ ರಾಜಕಾರಣ ಮತ್ತು ಧರ್ಮದ ಹೆಸರಲ್ಲಿ ನಡೆಸುವ ಅನ್ಯಾಯದ ನೆಲೆಯನ್ನು ತಿಳಿಸುತ್ತದೆ. ಜಾತಿ, ಧರ್ಮ ಮತ್ತು ಮತಗಳು ರಾಜಕೀಯದ ದಾಳಗಳಾದಾಗ ಜನರ ಏಳ್ಗೆಗಾಗಿ ಹೋರಾಡಿದ ಮಹಾತ್ಮರೂ ಹೋರಾಟದ ಹಾದಿಯಲ್ಲಿ ಉಸಿರುಗಟ್ಟುತ್ತಾರೆ ಎಂಬ ಸೂಕ್ಷ್ಮತೆಯೂ ಇದೆ. ತನ್ನವರನ್ನು ರಕ್ಷಿಸಿಕೊಳ್ಳುವ ಕಲೆ ಪ್ರತಿಯೊಬ್ಬರಿಗಿದೆ. ಆದರೂ ಮನುಷ್ಯರಾದ ನಾವುಗಳು ಬೇರೆಯವರ ಮರ್ಜಿಗೆ ಜೋತು ಬೀಳುತ್ತೇವೆಂಬ ವಿಷಾದವೂ ಕವಿತೆಯಲ್ಲಡಗಿದೆ.

"ತೂರಿದ ಕಾಳೆಲ್ಲ ಬಿತ್ತಲಾಗುವುದಿಲ್ಲ
ಎಲ್ಲಕ್ಕೂ ದಕ್ಕುವುದಿಲ್ಲ ಉಸಿರು, ಮಣ ಒಡಲೊಳಗೆ
ಗೊತ್ತಿದೆ ಹೆಂಟೆ ಕೋಳಿಗೆ ಮರಿಗಳ ಅವು ಬಿಟ್ಟು ಕೊಳ್ಳುವ ಕಲೆ
ಬೆಕ್ಕಿಗೂ ಗೊತ್ತಿವೆ ಮರಿಗಳ ಕಚ್ಚಿ ಪಾರಾಗುವ ಕಲೆ
ಇದು ಲೋಕದ ಗತಿ, ಕಚ್ಚಿ ಕಾಪಾಡುವ ವಿಚಿತ್ರ ಲಯ" ೬೯

ಬದುಕಿನ ಗಟ್ಟಿತನದ ಬಗ್ಗೆ ಕವಯಿತ್ರಿ ಚಿತ್ರಿಸಿದ್ದಾರೆ. ನಿಸರ್ಗ ಸೃಷ್ಠಿಯ ಮುಂದೆ ಎಲ್ಲವೂ ಕ್ಷಣಿಕವೆಂಬುದು ಇದರಿಂದ ತಿಳಿಯುತ್ತದೆ. ಕೋಳಿ ಬೆಕ್ಕುಗಳಿಗಿರುವ ಆತ್ಮವಿಶ್ವಾಸ ಮನುಷ್ಯನಿಗಿಲ್ಲವೆಂಬ ವಿಷಾದತೆಯೂ ಕವಿತೆಯಲ್ಲಿದೆ. ಆದರೂ ನಾವು ನಮ್ಮ ಉದ್ಧಾರಕ್ಕೆ ಪರರನ್ನು ಬಳಸುವ ಸೋಮಾರಿಗಳು. ರಾಜಕಾರಣವನ್ನು ಸಾರಾಸಗಟಾಗಿ ಕವಯಿತ್ರಿ ವಿರೋಧಿಸುವುದಿಲ್ಲ. ಅದರಲ್ಲೂ ಬಡವರ ಏಳ್ಗೆಗಾಗಿ ಶ್ರಮಿಸುವವರಿದ್ದಾರೆ. ಅವರಿಗೆ ಜಾತಿ ಮತಗಳ ಅಂತರವಿಲ್ಲವೆಂಬುದನ್ನು ಕವಿತೆ ಧ್ವನಿಸುತ್ತದೆ. ರಾಜಕೀಯವು ದಿನಕ್ಕೊಂದು

ಬಣ್ಣ ಬದಲಿಸುತ್ತದೆ. ಯಾರು ಮಿತ್ರ, ಯಾರು ಶತೃಗಳೆಂಬುದನ್ನು ತಿಳಿಯಲು ಸಾಧ್ಯವಿಲ್ಲ. ಒಂದು ರೀತಿಯ ತ್ರಿಶಂಕು ಸ್ವರ್ಗವನ್ನೇ ನಿರ್ಮಿಸಿದ ಮಹನೀಯರೂ ಇಲ್ಲಿ ಗೌಣವಾಗುತ್ತಾರೆಂಬುದನ್ನು ಕವಿತೆಯ ಮುಂದಿನ ಸಾಲುಗಳು ಚಿತ್ರಿಸಿವೆ.

"ರಾಜಕಾರಣದ ಮಧ್ಯದ ಬಿಡುವಿನಲ್ಲಿ ಲೋಹಿಯ
ನಿಟ್ಟುಸಿರು ಬಿಟ್ಟರೆ, ಬಸವನ ಬೆನ್ನ ಮೇಲಿದೆ ಅವನೇ
ಕಳಚಿಕೊಂಡ ಜಾತಿಯ ಭೂತ.
ಬುಟ್ಟಿಯೊಳಗಿನ ಹಾವಾಗಿದೆ ಅವನು ಕಿತ್ತೆಸೆದ ಜನಿವಾರ
ಗಾಂಧಿ, ಅಂಬೇಡ್ಕರ್ ಆಗಾಗ ಹೊರಹೊರಡುವ
ಜಾತ್ರೆಯ ದೇವತೆಗಳಂತೆ ಕಂಗೊಳಿಸುತ್ತಾರೆ" [೨೦]

ಈ ಹೊತ್ತಿನ ಸಾರ್ವತ್ರಿಕ ಸತ್ಯವೊಂದನ್ನು ಈ ಸಾಲುಗಳು ಹೇಳುತ್ತಿವೆ. ಇಂದು ಜಾತಿ ಮತ್ತು ಧರ್ಮಕ್ಕಾಗಿ ನಡೆಯುವ ಹೋರಾಟಗಳು ಮಾನವೀಯತೆಯನ್ನೇ ಮರೆಸುವ ಮಟ್ಟಕ್ಕಿಳಿದಿವೆ. ಮನುಕುಲವನುದ್ಧಾರ ಮಾಡಲು ಬಂದ ಬಸವ, ಲೋಹಿಯಾ, ಅಂಬೇಡ್ಕರ್‌ರ ಚಿಂತನೆಗಳನ್ನು ಸಂಕುಚಿತಗೊಳಿಸುತ್ತಿದ್ದೇವೆ. ಅಂಬೇಡ್ಕರ್ ವಿಚಾರ ಧಾರೆಗಳಿಗಿಂತ ಇಂದು ಅವರನ್ನು ಒಂದು ಪೋಸ್ಟರ್ ರೂಪದಲ್ಲಿ ಬಳಸುತ್ತಿರುವುದು ವಿಷಾದಕರ. ರಾಜಕಾರಣದಲ್ಲಿಂದು ಪಕ್ಷಗಳ ವಿಚಾರ ಧಾರೆಯನ್ನು ಮುಂದಿನ ಪೀಳಿಗೆಗೆ ತಿಳಿಸುವಲ್ಲಿ ಎಡವುತ್ತಿದ್ದೇವೆ. ನಾವೆಲ್ಲರೂ ನವೆಂಬರ್ ನಾಯಕರುಗಳೆ. ಭಾವಚಿತ್ರಕ್ಕೆ, ಗ್ರಂಥಗಳಿಗೆ ದೈವತ್ವದ ಸ್ಥಾನ ಕಲ್ಪಿಸಿ ಅವನ್ನು ಮುಟ್ಟಬಾರದೆಂಬಂತೆ ಸೂಚನೆಯನ್ನೂ ಕೊಡುತ್ತೇವೆ. ಇಲ್ಲಿನ ಕವನಗಳನ್ನು ಓದುವಾಗ ಅವು ಸರಳವೆನಿಸಿದರೂ ಅದರ ಒಳ ಪದರ ಗಟ್ಟಿತನದ್ದು. ಹೊಸ ಹೊಳಹುಗಳಿಗೂ ಕಾರಣವಾಗುತ್ತದೆ. ನವಿಲುಗಳು ಒಂದು ಪ್ರತಿಮಾ ಮಾದರಿಯೆ. ಮಹಿಳಾ ಕಾವ್ಯದಲ್ಲಿ ಈ ಪ್ರತಿಮೆಯು ಹಲವು ಕವಯಿತ್ರಿಯರ ಕಾವ್ಯದಲ್ಲಿ ಮಿಳಿತಗೊಂಡಿದೆ. 'ಕುಣಿವ ನವಿಲುಗಳು' ಕವಿತೆ, ಹೆಣ್ಣು ತನ್ನ ಆತ್ಮ ನಿವೇದನೆಯನ್ನು ಬಹಳ ಮುಕ್ತತೆಯಿಂದ ಹಂಚಿ ಕೊಂಡಿರುವುದು ತಿಳಿಯುತ್ತದೆ. ನವಿಲಿನ ಪ್ರತಿಮೆ ಮನುಷ್ಯನ ಭಾವನೆಗಳ ತರಂಗಗಳ ಸಂಕೇತ. ಜೊತೆಗೆ ಗಂಡು ಮತ್ತು ಹೆಣ್ಣಿನ ನಿವೇದನಾ ರೂಪಕವೂ ಇದೆ. ಹೆಣ್ಣಿನಲ್ಲಿರುವ ಬಯಕೆಗಳನ್ನು ಅವು ಅಭಿವ್ಯಕ್ತವಾಗದೆ ಮಾತು ಸಹ ಮೌನದಲ್ಲಡಗಿರುವುದನ್ನು ಕವಿತೆ ಕುಣಿವ ನವಿಲಿನ ಮೂಲಕ ಚಿತ್ರಿಸಿದ್ದಾರೆ.

"ಎದೆಯೊಳಗೆ ಕುಣಿವ ಆ ನವಿಲನ್ನು
ಹಿಡಿದಿಡಲಾಗುವುದಿಲ್ಲ ಬಹಳ ಹೊತ್ತು
ನನ್ನದೆಯ ಗುಟುಕ ಬಯಸಿ
ಪ್ರಶ್ನಿಸುತ್ತದೆ ಆ ಹಕ್ಕಿ ಆದ್ರತೆಯಿಂದ
ಮತ್ತೇನು, ಏನಾದರೂ ಹೇಳು" [೨೧]

ಇಲ್ಲಿ ಹೆಣ್ಣಿನ ಅಂತರಂಗದ ಭಾವನೆಗಳು ಬಂಧಿಯಾದಾಗ ಮಾತುಗಳಿಗೆ ತಡಕಾಡುವ ಸ್ಥಿತಿ ಇಲ್ಲಿದೆ. 'ಏನಾದರೂ ಹೇಳು' ಎಂಬ ಒತ್ತಾಯ ಪೂರ್ವಕ ಮಾತುಗಳು ಬಂದರೂ 'ನನ್ನದೇನಿಲ್ಲ ನೀನೇ ಹೇಳು' ಎಂಬ ಮಾತಿನಲ್ಲಿ ವಿಶಾದತೆ, ಗಂಡಿನ ಭಾವನೆಗಳಿಗೆ ಅನುಸರಣಿಯಾಗಿ ನಡೆವ ಮರ್ಜಿ ಇದೆ. ಮುಕ್ತಿಗೆಂಬಂತೆ ದೇವರನ್ನು ಜಪಿಸುವ ಮೂಲಕ ಹೊಸ ಚಿಂತನೆಗೆ ದಾರಿ ಮಾಡಿ ಕೊಟ್ಟಿದೆ. ಕವಿತೆ ಮುಂದುವರೆದು.

"ಓ ದೇವರೇ ನೀನಿರುವುದಾದರೆ
ತರ್ಕ ಮೀರಿದ ಆ ಜಗತ್ತಿನೆಡೆಗೆ
ನನ್ನನ್ನು ತರಗೆಲೆಯಾಗಿ ಹಾರಿಸು
ಸುಳಿವ ಆತ್ಮಕ್ಕೆ ಹಸಿದ ಆತ್ಮವೊಂದನ್ನು
ಕಾಣಿಸು, ಮತ್ತೆ ಬೆಳಕ ಮೂಡಿಸು" ೨

ಬೆಳಕು, ಗೆಲುವಿನ ಸಂಕೇತ. ಗಂಡು ಹೆಣ್ಣಿನ ಸಂಗಾತಿತನದ ಜೀವನಕ್ಕೆ ಆಹ್ವಾನವೆಂಬಂತೆ ಕವಿತೆ ಇದೆ. ಸುಳಿವ ಆತ್ಮವೆಂದರೆ ಸುಪ್ತ ಮನಸ್ಥಿತಿಗೆ ಪ್ರೀತಿಯ ಹಸಿವನ್ನು ಸೇರಿಸಿದಾಗ ಉಂಟಾಗುವ ಅನಂತತೆಗೆ ಆಹ್ವಾನವನ್ನು ಬೆಳಕಿನ ರೂಪದಲ್ಲಿ ಬಯಸುವ ಸನ್ನಿವೇಶವಿದೆ. ಒಟ್ಟಾರೆಯಾಗಿ ಪುಷ್ಪರವರ 'ಲೋಹದಕಣ್ಣು' ಕವನ ಸಂಕಲನದ ಅಧ್ಯಯನ ತನ್ನ ವಿಸ್ತಾರತೆಯನ್ನು ಕಾಯ್ದುಕೊಂಡಿದೆ. ಓದುಗರ ಯೋಚನಾ ಲಹರಿಯನ್ನು ಹೊಸ ಹೊಸ ಎತ್ತರಗಳಿಗೆ ಕೊಂಡೊಯ್ಯುವ ಶಕ್ತಿ ಇರುವಂತಹದ್ದು.

೫.೮ ದಲಿತ ಮಹಿಳೆಯ ಪ್ರಶ್ನೆಗಳು : ದು.ಸರಸ್ವತಿಯವರ ಕಾವ್ಯ

ಅಕ್ಷರ ವಂಚಿತ ಸಮುದಾಯದವರ ನೋವಿಗೆ ದನಿಯಾದವರು ದು.ಸರಸ್ವತಿಯವರು. ಎಲ್ಲ ವರ್ಗದವರೂ ಸಮಾನರೆಂದು ಸಾರುತ್ತಾ ಹಲವು ಹೋರಾಟಗಳಲ್ಲಿ ಭಾಗಿಯಾದವರು. ವ್ಯಕ್ತಿಯ ಅಳಲನ್ನು ಸಮುದಾಯದ ಅಳಲಾಗಿ ಮಾರ್ಪಡಿಸಿಕೊಂಡು, ಆ ಮೂಲಕವೇ ತನ್ನ ತಿಳುವಳಿಕೆಯನ್ನೂ ಶುಭ್ರಗೊಳಿಸಿಕೊಂಡು ಕವನ ಕಟ್ಟುವ ರೀತಿ ಶ್ಲಾಘನೀಯ. ರಂಗಭೂಮಿ, ಮಹಿಳಾಪರ ಚಳುವಳಿ, ರೈತಪರ ಹೋರಾಟ, ಮುಂತಾದ ಸಾಮಾಜಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ, ನಿರಂತರವಾಗಿ ತೊಡಗಿಕೊಂಡವರು ದು.ಸರಸ್ವತಿಯವರು. ಬದುಕಿನೊಂದಿಗೆ ಉತ್ಕಟ ಪ್ರೀತಿ ಮತ್ತು ಕಾಳಜಿ ಹೊಂದಿದವರು. ಇವರ ಮೊದಲ ಕವನ ಸಂಕಲನ 'ಹೆಣೆದರೆ ಜೇಡನಂತೆ', ಎರಡನೆ ಕವನ ಸಂಕಲನ 'ಜೀವಸಂಪಿಗೆ'ಯಲ್ಲಿ ಪ್ರಗತಿಪರ ಚಿಂತನೆ ಮತ್ತು ಜೀವನ ಪ್ರೀತಿಯ ನಡೆ ಪ್ರತಿ ಪದದಲ್ಲಿಯೂ ಕಂಡು ಬರುತ್ತದೆ.

ದು.ಸರಸ್ವತಿಯವರ ಬಹುಪಾಲು ಕವನಗಳ ಆಶಯ ಮನಸ್ಸಿನ ತಲ್ಲಣ ಮತ್ತು ಒಲವುಗಳಲ್ಲಿನ ಸ್ವಂತಿಕೆಯನ್ನು ಗುರ್ತಿಸುವ ಪ್ರಯತ್ನ. ಹಾಗೆಂದ ಮಾತ್ರಕ್ಕೆ ಮಹಿಳೆಯನ್ನು

ಕುರಿತ ಪೂರ್ವ ನಿಯೋಜಿತ ಬೇಲಿಯ ಮನಸ್ಥಿತಿ ಇಲ್ಲಿಲ್ಲ. ಸಂಕೋಲೆಯಾಚೆಗಿನ ಯೋಚನಾಪದ ಸರಮಾಲೆ ಓದುಗರಿಗೆ ಆಪ್ತವೆನಿಸುತ್ತದೆ.

ಪರಕಾಯ ಪ್ರವೇಶಿಸದವನು ಕವಿಯಾಗಲಾರ. ಹೇಗೆಂದರೆ ಕಲ್ಪನಾ ಪ್ರಪಂಚದಲ್ಲಿಯೇ ವಾಸ್ತವತೆಯ ಅರಿವು ಕವಿಗಿದ್ದೇ ಇರುತ್ತದೆ. ಮಹಿಳಾ ಕಾವ್ಯವು ಕಟ್ಟಿ ಕೊಡುವುದು ಅಂತಹ ಪ್ರಪಂಚವನ್ನೇ. ದು.ಸರಸ್ವತಿಯವರ ಕಾವ್ಯದ ಮತ್ತೊಂದು ವಿಶಿಷ್ಟತೆಯೆಂದರೆ ಹೆಣ್ಣಿನ ಖಾಸಗೀ ಅನುಭವಗಳನ್ನು ಒಟ್ಟಾರೆಯಾಗಿ ಸಾವ್ರರ್ತಿಕಗೊಳಿಸುವ ತುಡಿತ. ಅಂದರೆ ಹೆಣ್ಣಿನ ಅಂತರ್ಮುಖಿ ಒಳ ಸೆಳೆತಗಳನ್ನು ಎಳೆ ಎಳೆಯಾಗಿ ಬಿಡಿಸುವ ಪ್ರಯತ್ನ ಮಾಡುತ್ತಾರೆ. ಸಹಬಾಳ್ವೆ ಬಯಸುವ ಸಮಾಜ ಯಾವಾಗಲೂ ಹೆಣ್ಣನ್ನು ಒಪ್ಪಿತ ಮೌಲ್ಯಗಳಿಗೆ ಒಳಪಡಿಸುತ್ತಾ ಹೆಣ್ಣಿನ ಹೆಣ್ತನವನ್ನು ಪುನರ್ ಸೃಷ್ಟೀಕರಣಗೊಳಿಸುತ್ತಿರುತ್ತದೆ. ಅಂತಹ ಒಪ್ಪಿತ ಮೌಲ್ಯಗಳನ್ನು ಕವಯಿತ್ರಿ ತಿರಸ್ಕರಿಸುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಸ್ವಾತಂತ್ರ್ಯ ಮತ್ತು ಪ್ರೀತಿಯ ನಡುವೆ ಕಂದಕ ಉಂಟಾದರೆ ಸಮಾನತೆಯೇ ಇರುವುದಿಲ್ಲ. ಕೆಲವೊಂದು ಸೂಕ್ಷ್ಮತೆಗಳನ್ನು ಸಾರ್ವತ್ರಿಕವಾಗಿ ಬರವಣಿಗೆಯ ಮೂಲಕವೇ ಸಮಾಜಕ್ಕೆ ಹೇಳುವ ಕಾರ್ಯವನ್ನು ಕವಯಿತ್ರಿ ಮಾಡುತ್ತಾರೆ. ಇದು ಸ್ವಾಗತಾರ್ಹವೂ ಹೌದು. ತಬ್ಬಲಿಗಳ ಜೋಗುಳ ಕವಿತೆಯಲ್ಲಿ ಹೆಣ್ಣು ಮತ್ತು ಗಂಡಿನ ಸಂಬಂಧದ ಏರಿಳಿತ ಮತ್ತು ಅಭಿವ್ಯಕ್ತಿಯ ಮುಕ್ತತೆಯಲ್ಲಿನ ಅಂತರ ಬಿಡಿ ಬಿಡಿ ಅನುಭವಗಳು ಗಂಡು ಹೆಣ್ಣಿನ ಏಕತಾನ ನಡೆಯ ನಡುವಿನ ಅಂತರ ಕಾಯ್ದುಕೊಂಡ ಗಂಡು ಮತ್ತು ಹೆಣ್ಣಿನ ನಡುವಿನ ಸಂಬಂಧವಾಗಿ ರೂಪಿತಗೊಂಡಿವೆ.

"ಅಂತ-ರಂಗ
ತರಂಗಾಂತರಂಗ
ಬಾಗಿಲಿಲ್ಲ ಕಿಟಕಿ ಇಲ್ಲ ಕಿಂಡಿ ಇಲ್ಲ.
ಒಳಗೆ
ಮುಳುಗಿ ಹೂತಿರುವುದೇನೋ?" [೨೩]

ಈ ಕವಿತೆ ಪದಗಳಲ್ಲಿನ ಅಂತರ, ಮನಸ್ಸಿನ ನಾನಾ ಮುಖಗಳನ್ನು ಸೂಚಿಸುತ್ತದೆ. ಇಲ್ಲಿ ಪ್ರತಿಯೊಬ್ಬರ ವಯಕ್ತಿಕತೆಯೂ ಸಾರ್ವತ್ರಿಕಗೊಳ್ಳುವ ಕ್ರಿಯೆ. ಅದು ಬದುಕಾಗಲೀ, ಪ್ರೀತಿಯಾಗಲೀ, ಮನಸ್ಸಿನ ಮುಖವಾಡಗಳನ್ನು ತೆಗೆದು ಬದುಕುವ ಹಂಬಲ ಕವಿತೆಯಲ್ಲಿದೆ. ಗಂಡು ನಿಸ್ಸಹಾಯಕನಾದಾಗ, ಹೆಣ್ಣು ಅವನನ್ನು ಅನುಸರಿಸುವುದಿಲ್ಲ. ಅವನಲ್ಲಿ ಅದಮ್ಯ ಜೀವನೋತ್ಸಾಹವನ್ನು ತುಂಬಿ ಮತ್ತೆ ಉತ್ಸಾಹ ಗರಿಗೆದರುವಂತೆ ಮಾಡುವುದು ಹೆಣ್ಣೆ. ಇಲ್ಲಿ ಗಂಡು ಮತ್ತು ಹೆಣ್ಣಿನ ಪ್ರತಿಮಾ ಮಾದರಿಗಳು ನವಿಲಾಗಿವೆ. ನವಿಲಿನ ಬಣ್ಣದ ಗರಿ, ಗೆರೆಗಳು ಮನುಷ್ಯನ ಅಂತರಂಗದ ತರಂಗಗಳು ಎಂಬುದನ್ನು ಕವಯಿತ್ರಿ ನಿರೂಪಿಸಿದ್ದಾರೆ. ಇಷ್ಟೆಲ್ಲಾ ಜೀವನ ಪ್ರೀತಿ ಇರುವವಳಿಗೆ ನೀನು ಯಾರೆಂದರೆ, ಆಕೆ ತನ್ನ ಅಸ್ತಿತ್ವಕ್ಕೆ ಒಂದು ದೃಢತೆ ತಂದುಕೊಡುವಲ್ಲಿ ಹೆಣಗುತ್ತಾಳೆ. ಸ್ವಂತಿಕೆ ಇಲ್ಲದವಳಾಗುತ್ತಾಳೆ.

"ನಾ ಗಂಡನ ಹೆಂಡತಿಯಲ್ಲ / ಪ್ರಿಯನ ಪ್ರೇಯಸಿಯಲ್ಲ
ಬಸಿರಿನ ತಾಯಲ್ಲ / ಜೀವಕ್ಕೆ ಜೀವ
ತಬ್ಬಲಿಗಳ ಜೋಗುಳ ತಾನೆಂದು / ಅವಳು
ಜುಳು ಜುಳು / ಹರಿದು ಹೋದಂ 'ತಾಗಿ'
ನವಿಲು ಗರಿಬಿಚ್ಚುತ್ತಿತ್ತು" ೭೪

ಹೆಣ್ಣು ತನ್ನ ಸ್ವಂತಿಕೆಗಾಗಿ ನಡೆಸುವ ಹುಡುಕಾಟ, ಹೋರಾಟ ನವಿಲಿನ ಪ್ರತಿಮೆಯಲ್ಲಿ ರೂಪಾಂತರಗೊಂಡಿವೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ತನ್ನ ತನದ ಗುರುತಿಗೆ ಪ್ರತಿಮಾ ಮಾದರಿಗಳ ಮೊರೆ ಹೋಗುವಂತಹದ್ದು. ಒಂದರ ಮೂಲಕ ಮತ್ತೊಂದನ್ನು ಹೇಳುವ ಪ್ರಯತ್ನ. ಅಂದರೆ ಸಾಮುದಾಯಕ ಹಿತಾಸಕ್ತಿ ಪ್ರತಿಯೊಬ್ಬರ ಬರವಣಿಗೆಯಲ್ಲೂ ಅಡಗಿರುವಂತದ್ದು. ನಾನು ಯಾರಾಗದಿದ್ದರೂ ನಿರಂತರ ಹರಿಯುವಿಕೆಯ ಪ್ರಯತ್ನ ಅಂತರಕ್ಕಿಂತ ಅಂತರಂಗದ ಸೂಕ್ಷ್ಮತೆಗಳನ್ನು ಕಟ್ಟಿಕೊಡುವ ಪ್ರಯತ್ನದಲ್ಲಿ ಈ ಕವಿತೆ ಇದೆ. "ತಬ್ಬಲಿ" ಎಂಬ ಪದ ಅನಾಥರನ್ನು ಪ್ರತಿನಿಧಿಸಿದರೂ ಸಹ ಒಂದಕ್ಕೊಂದರ ನಡುವಿರುವ ಅವಿನಾಭಾವ ಸಂಬಂಧ ಎಂತಹದ್ದು, ಅದು ಗಂಡಾಗಲೀ, ಹೆಣ್ಣಾಗಲೀ ಇವರ ನಡುವೆ ಇರಬೇಕಾದ ಮಧುರ ಸಂಬಂಧವನ್ನು ತಿಳಿಸುತ್ತದೆ.

"ಜೀವಸಂಪಿಗೆ" ಕವಿತೆಯಲ್ಲಿ ಕವಯಿತ್ರಿಯ ಆತ್ಮ ನಿವೇದನೆಯು ಇದೆ. ಕವಿತೆಯಲ್ಲಿ ಹೊಂದಾಣಿಕೆಯನ್ನು ಹೇಳುವ ಕೆಲವು ಸಾಲುಗಳಿವೆ. ಇವು ಬದುಕನ್ನು ಸ್ವೀಕರಿಸಿ ಹೊಂದಿಕೊಂಡು ಹೋಗುವ ಕ್ರಿಯೆಯನ್ನು ಸೂಚಿಸುತ್ತದೆ. ಕುವೆಂಪುರವರ "ನೀರೆಲ್ಲವೂ ತೀರ್ಥ" ಎಂಬ ಸಾಲು ನೆನಪಿಗೆ ತರುತ್ತದೆ. ಸಂಪಿಗೆ ಮರಕ್ಕೆ ಆಯಸ್ಸು ಜಾಸ್ತಿ, ಶತಮಾನವನ್ನು ಕಂಡ ಸಂಪಿಗೆಮರ ಸುಖ ದುಃಖವನ್ನು ಕಂಡಂತೆ ಮನುಷ್ಯನೂ ತಲೆಮಾರುಗಳ ಸಂಬಂಧ ಹೊಂದಿರುತ್ತಾನೆ. ಅಲ್ಲದೇ ಇಡೀ ಕವಿತೆಯಲ್ಲಿ ಬದುಕು, ಸಾವು, ನೋವು, ಹುಟ್ಟು, ಬಾಲ್ಯ ಜೊತೆಗೆ ಎಲ್ಲೋ ಒಂದು ಕಡೆ ಆಧ್ಯಾತ್ಮಿಕತೆಯ ತೆಳು ಲೇಪ ಹಚ್ಚಿದಂತೆ ಕಂಡುಬರುತ್ತದೆ. ಅಕ್ಕಮಹಾದೇವಿ ಲೌಕಿಕವನ್ನು ಬಿಟ್ಟು ಚೆನ್ನಮಲ್ಲಿಕಾರ್ಜುನನ್ನು ಹುಡುಕಿದಂತೆ. ಕವಿತೆಯಲ್ಲಿ ಲೌಕಿಕ ಬದುಕಿನ ದುಸ್ಥಿತಿಯನ್ನು ತನ್ನ ಜಡಮಾದನಿಗೆ ನಿವೇದಿಸುತ್ತಾರೆ. ಬದುಕಿನ ವಾಸ್ತವತೆಯ ಚಿತ್ರಣ ಕಟ್ಟಿಕೊಡುವ ರೀತಿ ತುಂಬಾ ಸರಳವೆನ್ನಬಹುದದರೂ ಸತ್ಯವಾದುದು.

'ಹೂ ಅರಳಿದ ಸದ್ದು' ಕವಿತೆಯಲ್ಲಿ ಮೌನದ ನೀರವತೆ ಕಾಡಿದಾಗ ಅವಳಿಗಾಗುವ ಅಭಾವತೆ ಧ್ವನಿಸುತ್ತದೆ.

"ಸೂಚನೆಗಳು ಸುಳಿವು ಬಿಟ್ಟು ಕೊಡವು
ತಿಳಿದಂತೆನಿಸಿದರೂ ತಿಳಿಯದು
ಯಾವ ಮಾತಿನ ಪದಗಳಲಿ
ಮೌನವ ತಟ್ಟಲಿ / ಮಾತಿನ / ಕಾಗುಣಿತ ವ್ಯಾಕರಣಗಳ
ಗಿಡಮರ, ಮಣ್ಣು ಮುಗಿಲು ಹೇಳಿಕೊಟ್ಟಾವೆ?" [೨೫]

ಮೌನವೂ ಒಂದು ಪ್ರತಿಮೆಯೆ. ಏಕೆ ನಾವು ಅಸ್ಮಿತೆಗಾಗಿ ತಡಕಾಡುತ್ತೇವೆ. ಬೇರೊಂದು ಮಾದರಿಯ ಮೂಲಕ ನಮ್ಮ ತನವನ್ನು ಕಟ್ಟಿ ಕೊಳ್ಳುತ್ತೇವೆಂದು ಅಪ್ಪ ಹಾಕಿದ ಆಲದ ಮರಕ್ಕೆ ಜೋತು ಬೀಳಬಾರದೆಂಬ ಗಾದೆ ತಲೆಮಾರುಗಳಿಂದ ಹೇಳಿಕೆಯೇ ಆಗಿದೆ. ಆದರೂ ನಾವು ಹಗ್ಗ ಹಿಡಿಯಲು ಜಗ್ಗಾಡುತ್ತೇವೆ. ಏನೆಂದರೆ ಅಕ್ಕಮಹಾದೇವಿ, ಅಹಲ್ಯೆ, ರೇಣುಕೆ, ಸೀತೆ, ಸಾವಿತ್ರಿ, ಊರ್ಮಿಳೆಯರನ್ನು ಪ್ರತಿಮೆಯನ್ನಾಗಿಸಿ ನಮ್ಮ ದೃಷಿಕೋನದಲ್ಲಿ ಅವರನ್ನು ಪುನರ್ ಸೃಷ್ಟಿಸುವ ಅಗತ್ಯವಿಲ್ಲ. ಇಲ್ಲಿ ಮೌನ ಮಾತಾಗಲು ಸೂಚನೆಗಳು ಅಡ್ಡಗಾಲಾಕುತ್ತಿವೆ. ಪ್ರತಿಯೊಬ್ಬರ ಬದುಕಿನ ವಾಸ್ತವ ಚಿತ್ರಣವನ್ನು ಕವಿತೆ ತೆರೆದಿಡುತ್ತದೆ. ಪ್ರಕೃತಿ ಮತ್ತು ಮನುಷ್ಯನ ಅವಿನಾಭಾವ ಸಂಬಂಧ ಸಂಚಲನವಿದ್ದಾಗ ಅರಿವಾಗದವನಿಗೆ ಕಲ್ಲಾಗಿ ಅರಳುವ ಸದ್ದು ಕೇಳಲು ಸಾಧ್ಯವೆ? ನಮ್ಮ ಸಂಸ್ಕೃತಿಯಲ್ಲಿ ಹೆಣ್ಣುದಾಸಿ, ಇಲ್ಲವೇ ಪ್ರೇಯಸಿ. ಅದಕ್ಕೂ ಮೀರಿದರೆ ದೇವತೆ. ಎಲ್ಲವೂ ಅತಿರೇಕವೇ.

ದು.ಸರಸ್ವತಿಯವರದು ಹೋರಾಟದ ಮನೋಭಾವ. ದಲಿತ ಚಳುವಳಿಗಳು, ಕಾರ್ಮಿಕ ಚಳುವಳಿ, ಮಹಿಳಾ ಪರ ಹೋರಾಟಗಳಲ್ಲಿ ಭಾಗಿಯಾದವರು ಇವರು. ಆದ್ದರಿಂದಲೇ ನೋವಿಗೆ ಸ್ಪಂದಿಸುವ ಸೆಲೆ ಇವರಲ್ಲಿ ಸದಾ ಜಾಗೃತವಾಗಿರುತ್ತದೆ. ಬಾಲ ಕಾರ್ಮಿಕರಿಗಾಗುವ ಅನ್ಯಾಯ, ಶಿಕ್ಷಣದಿಂದ ವಂಚಿತರಾದ ಮುಗ್ಧ ಮಕ್ಕಳ ಸ್ಥಿತಿಯನ್ನು ನೋಡಿ ಕವನದಲ್ಲಿ ಅವರ ಬದುಕಿನ ಧಾರುಣ ಸ್ಥಿತಿಯನ್ನು ಚಿತ್ರಿಸಿದ್ದಾರೆ.

"ಉರಿಬೆಂಕೀಲಿ ಕುದಿಗಾಜ / ಬಳೆಯಾಗಿಸಿ ಗರತೀರ
ಕೈ ಝುಣಗುಟ್ಟಿಸುವ / ಕುದಿನೀರೊಳಗಿನ
ಗುಂಡನೆತ್ತಿ ನುಣುಪಿನೆಳೆ ತೆಗೆದು
ಸುಮಂಗಲಿಯರ ಸೊಬಗ ಬೆಳಗಿಸುವ
ಮೇಲೆ ಗರಿ / ಸಿಡಿದು ಗಾಳೀಲಿ
ಬೆಳಕಿನ ಗೊಂಚಲ ಮಿಂಚಿಸಿ / ಜೋಡಿಕಂಗಳ ಹೊಳೆಸುವ
ಪಟಾಕಿ ಮಾಡುವ / ಚಿಣ್ಣರು / ಮಾಗದೆ ಹಣ್ಣಾದರು" [೨೬]

ಭಾರತ ಎಷ್ಟೇ ಮುಂದುವರೆದರೂ ಮೂಲಭೂತ ಸಮಸ್ಯೆಗಳು ಸಮಸ್ಯೆಗಳಾಗಿಯೇ ಮುಂದುವರೆಯುತ್ತವೆ. ಮೇಗಿ ಕಾರ್ಮಿಕರ ದಿನ ಎಂದು ಸರ್ಕಾರ ರಜೆ ಘೋಷಿಸಿದ್ದರೂ

ಅಂದೂ ಅವರ ದುಡಿಮೆ ತಪ್ಪಿದ್ದಲ್ಲ. ಕವಯಿತ್ರಿಯರ ಈ ಕವಿತೆಗೆ ಪೂರಕವಾಗಿ ಡಾ.ಸಿದ್ದಲಿಂಗಯ್ಯನವರ 'ನನ್ನ ಜನಗಳನ್ನು' ಉದಾಹರಿಸಬಹುದು. ದೇಶಕ್ಕೆ ಅನ್ನ ಕೊಡುವ ರೈತ ತುತ್ತಿನ ಊಟಕ್ಕೂ ಪರದಾಡುವ ಸ್ಥಿತಿ ಬಂದಿದೆ. ಆದರೆ ಪರಿಹಾರ ಮಾತ್ರ ಕನಸಿನದು. ದೀಪಾವಳಿಯ ಬೆಳಕು ಆಕಾಶದಲ್ಲಿ ನಕ್ಷತ್ರಗಳನ್ನು ನಾಚಿಸುವ ರೀತಿಯಲ್ಲಿ. ಪಟಾಕಿ ತಯಾರಿಸುವ ಬಾಲ ಕಾರ್ಮಿಕರಿಗೆ ಅಂದೂ ಸಹ ಉಪವಾಸವೇ. ಎಷ್ಟೋ ವೇಳೆ ಅನಾಹುತಗಳಿಗೂ ಬಲಿಯಾಗುತ್ತಾರೆ. ಆದರೂ ಈ ನಿರಂತರ ಶೋಷಣೆ ನಿಂತಿಲ್ಲದಿರುವುದು ದುರದೃಷ್ಟಕರ ಸಂಗತಿ.

ಪ್ರತಿಯೊಬ್ಬರಿಗೂ ಸ್ವತಂತ್ರ ಮನೋಭಾವ ಮತ್ತು ಸುಂದರ ಜೀವನದ ಬಯಕೆ ಇದ್ದೇ ಇರುತ್ತದೆ. ಅರಮನೆಯ ವೈಭೋಗವಿದ್ದರೂ ಬುದ್ದ ನಡೆದದ್ದು ಜಗತ್ತಿನ ವಾಸ್ತವ ಸತ್ಯ ತಿಳಿಯಲು. ಪಂಜರದ ಗಿಳಿಗೆ ಸ್ವಾತಂತ್ರ್ಯ ಕೊಟ್ಟರೆ ಅದು ಥಕ್ಕನೆ ಹಾರುವುದಿಲ್ಲ. ಏಕೆಂದರೆ ಅದು ಹಾರುವ ಕ್ರಿಯೆಯನ್ನು ಮರೆಯುವಂತೆ ಮಾಡುತ್ತಾನೆ ಮನುಷ್ಯ. ಈ ಮೇಲಿನ ಮಾತುಗಳು ಮನುಷ್ಯ ಸ್ವತಂತ್ರ್ಯ ಬಯಸಿ ಪ್ರಕೃತಿಯೊಂದಿಗೆ ಸಂವಾದಕ್ಕಿಳಿದಾಗ 'ಜೀವವಾಗೋ ಬಯಕೆಯಲ್ಲಿ' ಕವಿತೆ ಹೆಣ್ಣೊಬ್ಬಳ ತುಡಿತ, ಪ್ರಪಂಚದ ಅರಿವಿನ ಹಂಬಲ, ನಿಸರ್ಗ ಪ್ರೀತಿಯ ಮುಂದೆ ಅರಮನೆಯ ವೈಭವ ಕ್ಷಣಿಕವೆನಿಸುತ್ತದೆ. ಏಕೆಂದರೆ ಜೀವನ ಪ್ರೀತಿಗಿಂತ ಮನುಷ್ಯ ನಿರ್ಮಿಸಿಕೊಂಡ ಪ್ರೀತಿ ನಗಣ್ಯವೆಂಬುದನ್ನು ತೋರಿಸಿಕೊಡುತ್ತದೆ.

"ಆ ಕೋಟೆ ಎಂಬೋ
ಮುದುಡಿದ ಭೂ ಮಂಡಲದೊಳಗಿನ ಅರಮನೆ
ಸೆರಮನೆ ಎನಿಸಿದ / ನಾಳೆ ಎಂಬೋ ಹುಡುಗಿ
ಆಳುಕಾಳು ತೊರೆದು
ವನವೆಂಬ ಉದ್ಯಾನಕ್ಕಡಿಯಿಟ್ಟು ಹೊರಳಾಡಿ
ಕಾರಂಜಿಯಲಿ ಮಿಂದು
ಅಷ್ಟೆತ್ತರದಲ್ಲಿಷ್ಟಗಲ ಆಕಾಶ ಕಂಡು
ಕಡೆಗೂ ಬಿಡುಗಡೆಯಾಯ್ತೆಂದು
ನಿರಾಳ ದಾಳು ಅದ ಕಂಡು / ಮರುಳಿಂದು
ನಗೆಯಾಡಿತು ಗರುಕೆ ಹುಲ್ಲು" ೬೬

ಕವಿತೆ ಪ್ರತಿ ಬಾರಿ ಹೊಸ ಹೊಳಹುಗಳಿಗೆ ದಾರಿ ಮಾಡಿ ಕೊಡುತ್ತದೆ. ಸಿರಿವಂತಿಕೆಯ ಹುಡುಗಿ ಒಮ್ಮೆಲೇ ಎಲ್ಲವನ್ನೂ ಬಿಟ್ಟು ಪ್ರಕೃತಿಯೊಂದಿಗೆ ಲೀನವಾಗುವ ಸಂದರ್ಭ ಹಾಗೂ ಅಂತೂ ಬಿಡುಗಡೆ ಸಿಕ್ಕಿತೆನ್ನುವಾಗ ಇರುವ ಬಂಧನ ಎರಡೂ ಬೇರೆ ಬೇರೆ ಮಾದರಿಗಳೆ. ಆದರೂ ಹೆಣ್ಣಿನ ಅಂತರಂಗದ ಮನಸ್ಸು ಸುಪ್ತವಾಗಿದ್ದಾಗ ಅವಳ ಹೊಂದಾಣಿಕೆಯ ರೀತಿ ಬಿಡುಗಡೆಗಾಗಿ ನಡೆಸುವ ಹೋರಾಟವಿಲ್ಲದೆ. ಕ್ಷಣಿಕ ಎಂದು

ತಿಳಿವ ಹುಲ್ಲು ಗರಿಕೆಯೂ ಕೂಡ ಮಾರ್ಗದರ್ಶನ ನೀಡುತ್ತದೆ. ಪ್ರಕೃತಿ ಮತ್ತು ಮನುಷ್ಯ ಸಂಬಂಧಗಳನ್ನು ಹುಡುಗಿಯ ಪಾತ್ರದ ಮೂಲಕ ಸೂಕ್ಷ್ಮವಾಗಿ ಕವಯಿತ್ರಿ ಚಿತ್ರಿಸಿದ್ದಾರೆ. ಅದಮ್ಯ ಜೀವನೋತ್ಸಾಹ ತುಂಬಿದ ಹೆಣ್ಣು ಪ್ರಕೃತಿಯ ಮೋಹಕ್ಕೆ ಸಿಲುಕಿ ಮೌನಕ್ಕೆ ಜಾರುತ್ತಾಳೆ. ಇಲ್ಲಿಯೂ ಅವರ ಜೀವನೋತ್ಸಾಹ ಕುಂದುವುದಿಲ್ಲ. ಬದುಕಿನ ಕನಸು ಕಾಣ ಹೊರಟ ಹುಡುಗಿಯ ಹೋರಾಟ, ಸ್ವಾತಂತ್ರ್ಯವನ್ನು ಕಾಣಲೇಬೇಕೆಂಬ ಬಯಕೆ ಇಲ್ಲಿದೆ.

ಒಟ್ಟಾರೆಯಾಗಿ ಹೇಳುವುದಾದರೆ ದು.ಸರಸ್ವತಿಯವರ ಕವಿತೆಗಳು ಸಾಮುದಾಯಿಕ ಪ್ರಜ್ಞೆ ಮೂಡಿಸುವ ಬರಹಗಳೆನ್ನಬಹುದು. ಇವರ ಬರಹಗಳು ಸರಳವಾದರೂ ಅರ್ಥವಂತಿಕೆ ಗಟ್ಟಿತನದ್ದು. ತನ್ನ ತನವನ್ನು ವ್ಯಕ್ತಪಡಿಸುತ್ತಲೇ ಸಾಮಾಜಿಕ ಕಳಕಳಿಯು ಕವಯಿತ್ರಿಯಲ್ಲಿದೆ. ವ್ಯಕ್ತಿಗಿಂತ ವ್ಯಕ್ತಿತ್ವ ಮುಖ್ಯ ಎಂಬುದನ್ನು ಕವಿತೆ ಸ್ಪಷ್ಟ ಪಡಿಸುತ್ತದೆ. ಪುರಾಣ, ಚರಿತ್ರೆ, ಕನಸು, ವಾಸ್ತವ ಎಲ್ಲವನ್ನೂ ಇಲ್ಲಿ ಬಳಸಿದರೂ ಸಹ ಸಾಮೂಹಿಕ ಪ್ರಜ್ಞೆಯ ಎಚ್ಚರ ಪ್ರತಿ ಕವಿತೆಯಲ್ಲಿದೆ. ನಮ್ಮ ಸಂಸ್ಕೃತಿಯಲ್ಲಿ ಹೆಣ್ಣಿನ ಬಗೆಗಿರುವ ಅನಾದರವನ್ನು ಕವಯಿತ್ರಿ ವಿರೋಧಿಸುತ್ತಾರೆ. ಗಂಡು ಮತ್ತು ಹೆಣ್ಣಿನ ಸಂಬಂಧ ಲಿಂಗಾಧಾರಿತವಾಗಿದೆಯೇ ಹೊರತು ಅಂತರಂಗದಲ್ಲಿನ ಭಾವನೆಗಳಿಂದ ಅದನ್ನು ನಾವು ಗುರ್ತಿಸುವುದಿಲ್ಲ. ಸರಸ್ವತಿಯವರ ಕವಿತೆಗಳನ್ನು ನಾವು ಓದುತ್ತಾ ಕುಳಿತರೆ ಅವರ ಬರಹಗಳಲ್ಲಿ ಗಂಡು-ಹೆಣ್ಣಿನ ಮೇಲು ಕೀಳಿನ ಬಗ್ಗೆ ವಿಮರ್ಶೆ ಹೆಚ್ಚಿನದಾಗಿ ಕಂಡುಬರದೆ, ಹೆಣ್ಣಿನ ಅಂತರಂಗದ ಸೃಜನಶೀಲತೆಯ ಬಗ್ಗೆ ಹೆಚ್ಚು ಒತ್ತು ಕೊಟ್ಟಂತೆ ಕಂಡು ಬರುತ್ತದೆ. ಪ್ರಸ್ತುತತೆಗೆ ಅದರ ಅಗತ್ಯವೂ ಇದೆ. ಕವಿತೆಗಳ ರಚನೆಯ ಜೊತೆಗೆ ಕವಿತೆಗಳೂ ಭಾವನೆಗಳ ಸಂಕೇತಗಳೆಂಬಂತೆ ಕಂಡು ಬರುತ್ತದೆ ಸಮಾಜಕ್ಕೆ ಸಮಾಜದ ಗೊಂದಲಗಳಿಗೆ ಕಟ್ಟುಪಾಡುಗಳನ್ನು ನೇರವಾಗಿ ಪ್ರಶ್ನಿಸುವ ಗುಣ ಕವಯಿತ್ರಿಗಿದೆ. ಅದು ಕವಿತೆಯಲ್ಲಾಗಲೀ ಅಥವಾ ಹೋರಾಟದಲ್ಲಾಗಲೀ ನೇರವಾಗಿ ಪ್ರಶ್ನಿಸಿ ಸಂಚಲನವನ್ನುಂಟು ಮಾಡುವ ಗುಣ ಸರಸ್ವತಿಯವರದು. ಎಲ್ಲವನ್ನೂ ಪ್ರಶ್ನಿಸುವ ರೀತಿಯಲ್ಲಿಯೇ 'ಈಗೇನ್ ಮಾಡೀರಿ' ಎಂಬ ಕೃತಿ ಬರೆದದ್ದು. ಸಮಾಜದಲ್ಲಿ ತುಳಿತಕ್ಕೊಳಗಾದವರ ನೋವಿಗೆ ಸದಾ ಸ್ಪಂದಿಸುವ ಗುಣ ಹೊಂದಿರುವವರಾಗಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಕಾವ್ಯದ ಪಾತ್ರ ಬಹುಮುಖತೆಯದು. ಏಕೆಂದರೆ ಪ್ರತಿಯೊಬ್ಬ ಕವಯಿತ್ರಿಯ ಕವಿತೆಗಳು ಓದುಗರಿಗೆ ಒಂದಿಲ್ಲೊಂದು ರೀತಿಯಲ್ಲಿ ಆಪ್ತ ಹಾಗೂ ವಯಕ್ತಿಕವೆನಿಸುತ್ತವೆ. ಇದನ್ನೇ ಸ್ತ್ರೀವಾದಿ ಸಾಹಿತ್ಯ ಸಾಧಿಸಿದ್ದೂ ಸಹ. ಮಾತನಾಡಲೂ ಅವಕಾಶವಿಲ್ಲದ ಕಾಲದಲ್ಲಿ ಬರೆಯುವುದೆಂದರೆ ಸುಲಭದ ಮಾತೆ? ಕಾಲ ಬದಲಾದಂತೆ ಹೆಣ್ಣು ತನ್ನ ಸುತ್ತ ಇದ್ದ ಹೊಗೆಯನ್ನು ದೂರ ಸರಿಸಿ ಹೊಸ ವಾತಾವರಣಕ್ಕೆ ಬಂದ ದಿನವೇ ಅವಳಿಗೆ ಸ್ವಾತಂತ್ರ್ಯ ಎಂಬ ಮಾತನ್ನು ಮಹಿಳಾ ಸಾಹಿತ್ಯ ನಿಜವಾಗಿಸಿದೆ.

ಇಲ್ಲಿನ ಕವಿಯಿತ್ರಿಯರು ಆಯಾ ಕಾಲಘಟ್ಟದ ಸಂವೇದನೆಗಳಿಗೆ ನೇರವಾಗಿ ಸ್ಪಂದಿಸಿದವರು. ಸಮಾಜ ವ್ಯವಸ್ಥೆಯನ್ನು ವಿರೋಧಿಸದೇ ವ್ಯವಸ್ಥೆಯೊಳಗಿನ ಶೋಷಣೆಯನ್ನು ಜ್ಞಾನ ಮಾದರಿಯಲ್ಲಿ ತಿಳಿಸಿ ಸ್ಪಂದಿಸುತ್ತಾ ಬಂದವರು. ಪುರುಷರಲ್ಲಿಯೂ ಮಹಿಳಾಭಿವ್ಯಕ್ತಿ ಮೂಡಿಸುವ ಮೂಲಕ ಮಹಿಳೆಯ ಸಂಕೋಲೆಗಳನ್ನು ಕಳಚುತ್ತಾ ಬಂದಿರುವ ವಿವಿಧ ಮಾದರಿಯ ಕವಿತೆಗಳಿವೆ. ಈ ಕವಿತೆಗಳ ಅಧ್ಯಯನವೇ ಒಂದು ಸವಾಲು. ಹೊಸ ಅಧ್ಯಯನಕ್ಕೆ ದೊರಕುವ ಸಮಸ್ಯೆಯ ಗ್ರಹಿಕೆಯಾಗಿದೆ.

ಪರಂಪರೆಯ ಪುರುಷ ಕವಿಗಳನ್ನೂ, ಅವರ ಸಾಹಿತ್ಯವನ್ನು ಪ್ರಶ್ನಿಸುವ ರೀತಿಯಲ್ಲಿ ಕನ್ನಡ ಮಹಿಳಾ ಸಾಹಿತ್ಯ ಬೆಳೆದಿದೆ. ಇದು ಮಹಿಳೆಯರ ಹೆಚ್ಚುಗಾರಿಕೆ ಎಂದಲ್ಲ. ನನ್ನದು ಎಂಬ ಐಡೆಂಟಿಟಿಯ ಛಾಪನ್ನಷ್ಟೇ ದಾಖಲಿಸುವ ಪ್ರಯತ್ನ ಕವಯಿತ್ರಿಯರ ಕವಿತೆಗಳಲ್ಲಡಗಿದೆ. ಈ ಅಧ್ಯಾಯದಲ್ಲಿ ಈಗಾಗಲೇ ವಿಶ್ಲೇಷಿಸಲಾದ ಕಾವ್ಯ ಪುನರಾವರ್ತನೆಗೊಳ್ಳಬಹುದು. ಇಲ್ಲದೆಯೂ ಇರಬಹುದು. ಆದರೆ ಅಧ್ಯಯನದ ದೃಷ್ಟಿಕೋನ ಭಿನ್ನವಾಗಿರುತ್ತದೆ.

ಉಲ್ಲೇಖಗಳು

೧.	ಬೆಳಗೆರೆ ಜಾನಕಮ್ಮ	ಕಲ್ಯಾಣ(ಸ)	೨೦೧೧	ಪುಸಂ. ೮೧
೨.	ಬೆಳಗೆರೆ ಜಾನಕಮ್ಮ	ಕಲ್ಯಾಣ(ಸ)	೨೦೧೧	ಪುಸಂ. ೧೧೯
೩.	ಬೆಳಗೆರೆ ಜಾನಕಮ್ಮ	ಕಲ್ಯಾಣ(ಸ)	೨೦೧೧	ಪುಸಂ. ೨೦೫
೪.	ಬೆಳಗೆರೆ ಜಾನಕಮ್ಮ	ಕಲ್ಯಾಣ(ಸ)	೨೦೧೧	ಪುಸಂ. ೧೬೮
೫.	ಬೆಳಗೆರೆ ಜಾನಕಮ್ಮ	ಕಲ್ಯಾಣ(ಸ)	೨೦೧೧	ಪುಸಂ. ೨೦೪
೬	ಬೆಳಗೆರೆ ಜಾನಕಮ್ಮ	ಕಲ್ಯಾಣ(ಸ)	೨೦೧೧	ಪುಸಂ. ೨೦೨
೭	ಬೆಳಗೆರೆ ಜಾನಕಮ್ಮ	ಕಲ್ಯಾಣ(ಸ)	೨೦೧೧	ಪುಸಂ. ೪೩
೮.	ಬೆಳಗೆರೆ ಜಾನಕಮ್ಮ	ಕಲ್ಯಾಣ(ಸ)	೨೦೧೧	ಪುಸಂ. ೪೫
೯.	ಬೆಳಗೆರೆ ಜಾನಕಮ್ಮ	ಕಲ್ಯಾಣ(ಸ)	೨೦೧೧	ಪುಸಂ. ೪೭
೧೦.	ಬೆಳಗೆರೆ ಜಾನಕಮ್ಮ	ಕಲ್ಯಾಣ(ಸ)	೨೦೧೧	ಪುಸಂ. ೨೨
೧೧.	ಬಿ.ಟಿ.ಲಲಿತಾನಾಯಕ್.	ಬಿದಿರುಮೆಳೆಕಂಟಿಯಲಿ	೧೯೯೭	ಪುಸಂ. ೧೩
೧೨.	ಲಲಿತಾನಾಯಕ್.ಬಿ.ಟಿ.	ಬಿದಿರುಮೆಳೆಕಂಟಿಯಲಿ	೧೯೯೭	ಪುಸಂ. ೦೩
೧೩.	ಲಲಿತಾನಾಯಕ್.ಬಿ.ಟಿ.	ಬಿದಿರುಮೆಳೆಕಂಟಿಯಲಿ	೧೯೯೭	ಪುಸಂ. ೦೩
೧೪.	ಲಲಿತಾನಾಯಕ್.ಬಿ.ಟಿ.	ಬಿದಿರುಮೆಳೆಕಂಟಿಯಲಿ	೧೯೯೭	ಪುಸಂ. ೧೧
೧೫.	ಲಲಿತಾನಾಯಕ್.ಬಿ.ಟಿ.	ಬಿದಿರುಮೆಳೆಕಂಟಿಯಲಿ	೧೯೯೭	ಪುಸಂ. ೧೮
೧೬.	ಲಲಿತಾನಾಯಕ್.ಬಿ.ಟಿ	ಬಿದಿರುಮೆಳೆಕಂಟಿಯಲಿ	೧೯೯೭	ಪುಸಂ. ೧೨೬
೧೭.	ಲಲಿತಾನಾಯಕ್.ಬಿ.ಟಿ	ಬಿದಿರುಮೆಳೆಕಂಟಿಯಲಿ	೧೯೯೭	ಪುಸಂ. ೨೭
೧೮.	ಲಲಿತಾನಾಯಕ್.ಬಿ.ಟಿ.	ಬಿದಿರುಮೆಳೆಕಂಟಿಯಲಿ	೧೯೯೭	ಪುಸಂ. ೨೭
೧೯.	ಲಲಿತಾನಾಯಕ್.ಬಿ.ಟಿ.	ಬಿದಿರುಮೆಳೆಕಂಟಿಯಲಿ	೧೯೯೭	ಪುಸಂ. ೨೭
೨೦.	ಲಲಿತಾನಾಯಕ್.ಬಿ.ಟಿ.	ಬಿದಿರುಮೆಳೆಕಂಟಿಯಲಿ	೧೯೯೭	ಪುಸಂ. ೮೩
೨೧.	ಲಲಿತಾನಾಯಕ್.ಬಿ.ಟಿ.	ಬಿದಿರುಮೆಳೆಕಂಟಿಯಲಿ	೧೯೯೭	ಪುಸಂ. ೮೩
೨೨.	ಲಲಿತಾನಾಯಕ್.ಬಿ.ಟಿ.	ಬಿದಿರುಮೆಳೆಕಂಟಿಯಲಿ	೧೯೯೭	ಮುನ್ನುಡಿ.
೨೩.	ಶಶಿಕಲಾವೀರಯ್ಯ ಸ್ವಾಮಿ.	ಮಧ್ಯಂತರದ ಒಂದು ಗದ್ಯಗೀತೆ.	೨೦೦೪	ಬೆನ್ನುಡಿ
೨೪.	ಶಶಿಕಲಾವೀರಯ್ಯ ಸ್ವಾಮಿ.	ಗುಬ್ಬಿಮನಿ	೧೯೭೯	ಪುಸಂ. ೩೮
೨೫.	ಶಶಿಕಲಾವೀರಯ್ಯ ಸ್ವಾಮಿ.	ಗುಬ್ಬಿಮನಿ	೧೯೭೯	ಮುನ್ನುಡಿ
೨೬.	ಶಶಿಕಲಾವೀರಯ್ಯ ಸ್ವಾಮಿ.	ಗುಬ್ಬಿಮನಿ	೧೯೭೯	ಪುಸಂ. ೧೫
೨೭.	ಶಶಿಕಲಾವೀರಯ್ಯ ಸ್ವಾಮಿ.	ಗುಬ್ಬಿಮನಿ	೧೯೭೯	ಪುಸಂ. ೨೦
೨೮.	ಶಶಿಕಲಾವೀರಯ್ಯ ಸ್ವಾಮಿ.	ಗುಬ್ಬಿಮನಿ	೧೯೭೯	ಪುಸಂ. ೩೦
೨೯.	ಶಶಿಕಲಾವೀರಯ್ಯ ಸ್ವಾಮಿ.	ಗುಬ್ಬಿಮನಿ	೧೯೭೯	ಪುಸಂ. ೩೧
೩೦.	ಶಶಿಕಲಾವೀರಯ್ಯ ಸ್ವಾಮಿ.	ಗುಬ್ಬಿಮನಿ	೧೯೭೯	ಪುಸಂ. ೪೯
೩೧.	ಶಶಿಕಲಾವೀರಯ್ಯ ಸ್ವಾಮಿ.	ಗುಬ್ಬಿಮನಿ	೧೯೭೯	ಪುಸಂ. ೪೯
೩೨.	ಶಶಿಕಲಾವೀರಯ್ಯ ಸ್ವಾಮಿ.	ಹೆಂಗಹೇಳಲೇಗೆಳತಿ.	೧೯೮೯	ಪುಸಂ. ೦೧
೩೩.	ಶಶಿಕಲಾವೀರಯ್ಯ ಸ್ವಾಮಿ.	ಹೆಂಗಹೇಳಲೇಗೆಳತಿ.	೧೯೮೯	ಪುಸಂ. ೦೨

೩೪.	ಪ್ರತಿಭಾನಂದಕುಮಾರ್,	ಮುನ್ನುಡಿ ಬೆನ್ನುಡಿಗಳ ನಡುವೆ.	೨೦೦೬	ಪುಸಂ. ೧೮
೩೫.	ಆಶಾದೇವಿ.ಎಂ.ಎಸ್.	ನಡುವೆಸುಳಿವಾತ್ಮ.	೨೦೧೧	ಪುಸಂ. ೧೦೫
೩೬.	ಪ್ರತಿಭಾನಂದಕುಮಾರ್,	ನಾವು ಹುಡುಗಿಯರೇ ಹೀಗೆ	೧೯೮೩	ಪುಸಂ. ೧೮
೩೭.	ಪ್ರತಿಭಾನಂದಕುಮಾರ್,	ಆಹಾ! ಪುರುಷಾಕಾರಂ	೨೦೦೦	ಪುಸಂ. ೬೭
೩೮.	ಪ್ರತಿಭಾನಂದಕುಮಾರ್,	ಆಹಾ! ಪುರುಷಾಕಾರಂ	೨೦೦೦	ಪುಸಂ. ೬೮
೩೯.	ಮಲ್ಲೇಪುರಂ.ಜಿ.ವೆಂಕಟೇಶ್,	ಸಾಹಿತ್ಯ ಮತ್ತು ಪುರಾಣ	೨೦೧೧	ಪುಸಂ. ೧೭
೪೦.	ಪ್ರತಿಭಾನಂದಕುಮಾರ್	ಆಹಾ! ಪುರುಷಾಕಾರಂ	೨೦೦೦	ಪುಸಂ. ೮೪
೪೧.	ಕೆ.ವಿ.ಸುಬ್ಬಣ್ಣ: ಪ್ರತಿಭಾರವರ	ಆಯ್ದ ಕವಿತೆಗಳು	೨೦೦೭	ಪುಸಂ. ೪೧
೪೨.	ಕೆ.ವಿ.ಸುಬ್ಬಣ್ಣ: ಪ್ರತಿಭಾರವರ	ಆಯ್ದ ಕವಿತೆಗಳು	೨೦೦೭	ಪುಸಂ. ೭೬
೪೩.	ಕೆ.ವಿ.ಸುಬ್ಬಣ್ಣ: ಪ್ರತಿಭಾರವರ	ಆಯ್ದ ಕವಿತೆಗಳು	೨೦೦೭	ಪುಸಂ. ೭೭
೪೪.	ಪ್ರತಿಭಾನಂದಕುಮಾರ್	ಮುದುಕಿಯರಿಗಿದು ಕಾಲವಲ್ಲ	೨೦೧೨	ಪುಸಂ. ೩೭
೪೫.	ಪ್ರತಿಭಾನಂದಕುಮಾರ್	ಮುನ್ನುಡಿಬೆನ್ನುಡಿಗಳ ನಡುವೆ	೨೦೦೬	ಪುಸಂ. ೩೮
೪೬.	ಲಲಿತಾ ಸಿದ್ದಬಸವಯ್ಯ,	ದಾರಿನೆಂಟ	೨೦೦೯	ಪುಸಂ. ೦೩
೪೭.	ಲಲಿತಾ ಸಿದ್ದಬಸವಯ್ಯ,	ದಾರಿನೆಂಟ	೨೦೦೯	ಪುಸಂ. ೦೪
೪೮.	ಲಲಿತಾ ಸಿದ್ದಬಸವಯ್ಯ,	ದಾರಿನೆಂಟ	೨೦೦೯	ಪುಸಂ. ೦೯
೪೯.	ಲಲಿತಾ ಸಿದ್ದಬಸವಯ್ಯ,	ಬಿಡಿಹರಳು	೨೦೦೨	ಪುಸಂ. ೪೮
೫೦.	ಲಲಿತಾ ಸಿದ್ದಬಸವಯ್ಯ,	ಬಿಡಿಹರಳು	೨೦೦೨	ಪುಸಂ. ೪೯
೫೧.	ಲಲಿತಾ ಸಿದ್ದಬಸವಯ್ಯ,	ಬಿಡಿಹರಳು	೨೦೦೨	ಪುಸಂ. ೭೭
೫೨.	ಲಲಿತಾ ಸಿದ್ದಬಸವಯ್ಯ,	ದಾರಿನೆಂಟ	೨೦೦೯	ಪುಸಂ. ೫೩
೫೩.	ಷರೀಪಾ.ಕೆ, ನೊರೇನಳ	ಅಂತರಂಗ	೧೯೯೭	ಪುಸಂ. ೦೧
೫೪.	ಷರೀಪಾ.ಕೆ, ನೊರೇನಳ	ಅಂತರಂಗ	೧೯೯೭	ಪುಸಂ. ೦೬
೫೫.	ಷರೀಪಾ.ಕೆ, ನೊರೇನಳ	ಅಂತರಂಗ	೧೯೯೭	ಪುಸಂ. ೦೬
೫೬	ಷರೀಪಾ.ಕೆ, ನೊರೇನಳ	ಅಂತರಂಗ	೧೯೯೭	ಪುಸಂ. ೨೮
೫೭	ಷರೀಪಾ.ಕೆ, ನೊರೇನಳ	ಅಂತರಂಗ	೧೯೯೭	ಪುಸಂ. ೨೯
೫೮.	ಷರೀಪಾ.ಕೆ, ನೊರೇನಳ	ಅಂತರಂಗ	೧೯೯೭	ಪುಸಂ. ೩೦
೫೯.	ಷರೀಪಾ.ಕೆ, ನೊರೇನಳ	ಅಂತರಂಗ	೧೯೯೭	ಪುಸಂ. ೩೧
೬೦.	ಷರೀಪಾ.ಕೆ, ನೊರೇನಳ	ಅಂತರಂಗ	೧೯೯೭	ಪುಸಂ. ೩೮
೬೧.	ಷರೀಪಾ.ಕೆ, ನೊರೇನಳ	ಅಂತರಂಗ	೧೯೯೭	ಪುಸಂ. ೩೯
೬೨.	ಪುಷ್ಪಎಚ್.ಎಲ್	ಲೋಹದ ಕಣ್ಣು	೨೦೦೯	ಮುನ್ನುಡಿ
೬೩.	ಪುಷ್ಪಎಚ್.ಎಲ್	ಅಮೃತ ಮತಿಸ್ವಗತ	೧೯೯೨	ಪುಸಂ. ೨೩
೬೪.	ಪುಷ್ಪಎಚ್.ಎಲ್	ಅಮೃತ ಮತಿಸ್ವಗತ	೧೯೯೨	ಪುಸಂ. ೨೩
೬೫.	ಪುಷ್ಪಎಚ್.ಎಲ್	ಅಮೃತ ಮತಿಸ್ವಗತ	೧೯೯೨	ಪುಸಂ. ೧೩
೬೬	ಪುಷ್ಪಎಚ್.ಎಲ್	ಲೋಹದ ಕಣ್ಣು	೨೦೦೯	ಪುಸಂ. ೨೩
೬೭	ಪುಷ್ಪಎಚ್.ಎಲ್	ಲೋಹದ ಕಣ್ಣು	೨೦೦೯	ಪುಸಂ. ೨೩

೬೮.	ಪುಷ್ಪ.ಎಚ್.ಎಲ್	ಲೋಹದ ಕಣ್ಣು	೨೦೦೯	ಪುಸಂ. ೨೩
೬೯.	ಪುಷ್ಪ.ಎಚ್.ಎಲ್	ಲೋಹದ ಕಣ್ಣು	೨೦೦೯	ಪುಸಂ. ೪೦
೭೦.	ಎಚ್.ಎಲ್.ಪುಷ್ಪ	ಲೋಹದ ಕಣ್ಣು	೨೦೦೯	ಪುಸಂ. ೪೦
೭೧.	ಎಚ್.ಎಲ್.ಪುಷ್ಪ	ಲೋಹದ ಕಣ್ಣು	೨೦೦೯	ಪುಸಂ. ೫೫
೭೨.	ಎಚ್.ಎಲ್.ಪುಷ್ಪ	ಲೋಹದ ಕಣ್ಣು	೨೦೦೯	ಪುಸಂ. ೦೨
೭೩.	ದು.ಸರಸ್ವತಿ	ಜೀವಸಂಪಿಗೆ	೨೦೦೬	ಪುಸಂ. ೦೧
೭೪.	ದು.ಸರಸ್ವತಿ	ಜೀವಸಂಪಿಗೆ	೨೦೦೬	ಪುಸಂ. ೦೩
೭೫.	ದು.ಸರಸ್ವತಿ	ಜೀವಸಂಪಿಗೆ	೨೦೦೬	ಪುಸಂ. ೪೪
೭೬	ದು.ಸರಸ್ವತಿ	ಜೀವಸಂಪಿಗೆ	೨೦೦೬	ಮುನ್ನುಡಿ
೭೭	ದು.ಸರಸ್ವತಿ	ಜೀವಸಂಪಿಗೆ	೨೦೦೬	ಪುಸಂ. ೩೯

* * * * *

ಅಧ್ಯಾಯ - ೬

ಸಾಮಾಜಿಕ ಬದಲಾವಣೆ ಮತ್ತು ಮಹಿಳಾ ಅಭಿವ್ಯಕ್ತಿಯ ಸವಾಲುಗಳು

ಅಧ್ಯಾಯ - ೬

ಸಾಮಾಜಿಕ ಬದಲಾವಣೆ ಮತ್ತು ಮಹಿಳಾ ಅಭಿವ್ಯಕ್ತಿಯ ಸವಾಲುಗಳು

ಕಳೆದ ಐವತ್ತು ವರ್ಷಗಳಲ್ಲಿ ಭಾರತದಲ್ಲಿ ರಾಜಕೀಯ ಸಾಮಾಜಿಕ, ಸಾಂಸ್ಕೃತಿಕ ಮೊದಲಾದ ವಲಯಗಳಲ್ಲಿ ದೊಡ್ಡ ಪ್ರಮಾಣದ ಬದಲಾವಣೆಗಳುಂಟಾಗಿವೆ. ಪಾಶ್ಚಾತ್ಯ ರಾಷ್ಟ್ರಗಳ ಪ್ರಭಾವ, ಇದರಿಂದುಂಟಾದ ಶೈಕ್ಷಣಿಕ ಅಭಿವೃದ್ಧಿ, ವೈಚಾರಿಕತೆಯ ಮುನ್ನಡೆ, ಸಾಂಸ್ಕೃತಿಕವಾಗಿ ಆದ ಪ್ರಭಾವ ಇವೆಲ್ಲವೂ ಬದಲಾವಣೆಗೆ ಕಾರಣವಾಗಿದೆ. ಪುರುಷ ಪ್ರಧಾನತೆ ಮರೆಯಾಗುತ್ತಾ, ಮಹಿಳೆಯ ಸ್ವಾತಂತ್ರ್ಯ ಮತ್ತು ಸಮಾನತೆಗೆ ಅವಕಾಶಗಳು ಸಿಗುತ್ತಿವೆ. ಸಾಮಾಜಿಕ ಬದಲಾವಣೆಯ ಒಂದು ಮುಖ್ಯ ಚಾಲಕ ಶಕ್ತಿಯಾಗಿ ಮಹಿಳೆ ಭಾಗವಹಿಸುತ್ತಿದ್ದಾಳೆ ಎಂಬುದು ಗಮನಿಸಬೇಕಾದ ಅಂಶ.

ಪುರುಷನ ಪ್ರಾಬಲ್ಯವಿದ್ದ ಎಲ್ಲ ಕ್ಷೇತ್ರಗಳಲ್ಲೂ ಇಂದು ಮಹಿಳೆ ತನ್ನದೇ ಆದ ಅಸ್ತಿತ್ವವನ್ನು ಸ್ಥಾಪಿಸಿಕೊಂಡಿದ್ದಾಳೆ. ಒಟ್ಟಾರೆಯಾಗಿ ಸಾಮಾಜಿಕ ಬದಲಾವಣೆಗಳು ಆಧುನಿಕ ಕನ್ನಡ ಮಹಿಳಾ ಕಾವ್ಯದಲ್ಲಿ ಹೇಗೆ ಆಕಾರವನ್ನು ಪಡೆದುಕೊಂಡು ಅಭಿವ್ಯಕ್ತಿ ಮಾಧ್ಯಮದಲ್ಲಿ ನಿರೂಪಿತವಾಗಿವೆ ಎನ್ನುವುದನ್ನು ಈ ಅಧ್ಯಾಯದಲ್ಲಿ ದಾಖಲಿಸುವುದು, ಕವಯಿತ್ರಿಯರ ಕವಿತೆಗಳನ್ನು ಉದಾಹರಣೆಗಳಾಗಿ ಉಲ್ಲೇಖಿಸಿ ಅಲ್ಲಿನ ಪ್ರಮುಖ ಅಂಶಗಳನ್ನು ಗುರ್ತಿಸುವುದಾಗಿದೆ. ಅಂದರೆ ಸಮಾಜದಲ್ಲಿ ಪ್ರತಿಬಿಂಬಿತವಾಗಿರುವ ಹೆಣ್ಣಿಗೆ ಲೈಂಗಿಕತೆಯಾಚೆಗಿನ ಮುಕ್ತತೆ ಸಾಧ್ಯವಿಲ್ಲವೆ? ಎಂಬ ಪ್ರಶ್ನೆಯೊಂದಿಗೆ ಮಹಿಳಾ ದೃಷ್ಟಿಕೋನದಲ್ಲಿ ಕವಿತೆಗಳು ಹೊಸ ದೃಷ್ಟಿಕೋನವನ್ನು ಹೇಗೆ ಮರು ಸೃಷ್ಟಿಸಿವೆ ಎಂಬುದನ್ನು ಕಾಣುವ ಪ್ರಯತ್ನ ಇದರ ಜೊತೆಗೆ ಮತೀಯ ನೆಲೆಯಲ್ಲಿ ಕಾವ್ಯವನ್ನು ನೋಡುವ ಪ್ರಯತ್ನವಿಲ್ಲ. ಏಕೆಂದರೆ ಕವಯಿತ್ರಿಯರ ಧರ್ಮ, ಜಾತಿ, ಅಧ್ಯಯನಕ್ಕೆ ಮುಖ್ಯವಲ್ಲ. ಅವರ ಆಲೋಚನೆ ಬರವಣಿಗೆಗೆ ತೊಡಗಿದಾಗ ಉಂಟಾಗುವ ಸಂವೇದನೆ ಬಹು ಮುಖ್ಯ ಸಂಗತಿಯಾಗಿದೆ.

ಸಾಮಾಜಿಕ ಸವಾಲುಗಳನ್ನು ಏಕಮಾದರಿಯ ರೂಪದಲ್ಲಿ ನೋಡಲಾಗುವುದಿಲ್ಲವೆಂಬ ಅಂಶವನ್ನು ಆಧುನಿಕ ಮಹಿಳಾ ಕಾವ್ಯ ಹೇಗೆ ನಿದರ್ಶಿಸಿದೆ ಎಂಬುದನ್ನು ತಿಳಿಸುವ ಪ್ರಯತ್ನ ಮಾಡಲಾಗುತ್ತದೆ. ಮಹಿಳಾ ಸಂವೇದನೆಗಳನ್ನು ಗುರ್ತಿಸುವಾಗ ಕಂಡು ಬರುವ

ಕವಯಿತ್ರಿಯರ ಆಲೋಚನೆಗಳ ವಿಧಾನದಲ್ಲಿ ಉಂಟಾದ ಬದಲಾವಣೆಗಳನ್ನು ಕ್ರೋಢೀಕರಿಸುವುದು, ಹಿಂಸೆಯ ಪರಿಕಲ್ಪನೆ, ಮಹಿಳೆ ದೌರ್ಜನ್ಯದ ಪ್ರತಿರೂಪವಾಗಿ ಹೇಗೆ ಕಂಡಿದ್ದಾಳೆ? ಅವಮಾನ, ಮೌಢ್ಯ, ಮೂಢನಂಬಿಕೆ ಮೊದಲಾದ ಅಂಶಗಳಲ್ಲಿ ಸಾಮಾಜಿಕ, ಆರ್ಥಿಕ, ಉದ್ಯೋಗ, ದಾಂಪತ್ಯ ವಿಚಾರಗಳೂ ಕೆಲವು ವೇಳೆ ಪ್ರತಿಭಟನೆಗೊಳಪಡದೆ ಮೌನ ಅಥವಾ ತಣ್ಣನೆಯ ನೋಟದ ಪ್ರತಿಭಟನೆಯ ರೂಪಾಂತರಗಳು ಮಹಿಳಾ ಕಾವ್ಯದಲ್ಲಿ ಹೇಗೆ ಅಭಿವ್ಯಕ್ತಗೊಂಡಿವೆ ಎಂಬುದನ್ನು ಅಧ್ಯಯನದಲ್ಲಿ ಗುರ್ತಿಸುವುದು. ಪ್ರತಿಯೊಬ್ಬರ ಅಭಿಪ್ರಾಯಗಳಿಗೂ ಮಾನದಂಡಗಳಿದ್ದೇ ಇರುತ್ತದೆ. ಅದು ಪುರುಷನದೆಂದೋ, ಸ್ತ್ರೀದೆಂದೋ ಅಭಿಪ್ರಾಯಗಳಲ್ಲಿ ಭೇಧ ತೋರಲು ಬರುವುದಿಲ್ಲ. ಭಿನ್ನತೆ ಸಹಜವಾದರೂ, ವ್ಯಕ್ತಿಗತ ಮೌಲ್ಯಗಳು ಸ್ವಂತಿಕೆಯಿಂದ ಕೂಡಿರುವಂತವು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳಾ ಸಾಹಿತ್ಯ ಎಂಬುದನ್ನು ಪ್ರತ್ಯೇಕಿಸಿ ನೋಡುವುದಕ್ಕಿಂತ ಹೆಚ್ಚಾಗಿ ವ್ಯವಸ್ಥೆಯ ಚೌಕಟ್ಟಿನೊಳಗೇ ಹೆಣ್ಣನ್ನು ದೂರವಿಡುವ ಕ್ರಿಯೆ ಕಂಡುಬರುತ್ತದೆ. ಆದರೆ ಈ ದೂರವಿಡುವ ಪ್ರಕ್ರಿಯೆಯಿಂದ ಭಿನ್ನವಾಗಿ ಜಾಗೃತ ನೆಲೆಯಲ್ಲಿ ಹೊರಹೊಮ್ಮಿದ್ದೇ ಮಹಿಳಾ ಸಾಹಿತ್ಯ.

ಒಂದು ಕಡೆ ಸಾಹಿತ್ಯ ರಾಜಕಾರಣವೆಂಬುದು ಮಹಿಳೆಯನ್ನು ಸಾಹಿತ್ಯಲೋಕದಿಂದ ದೂರವಿಡುವುದಕ್ಕಿಂತ ಹೆಚ್ಚಾಗಿ ಅಲಕ್ಷಿಸುತ್ತಾ ಬಂದದ್ದು ಸರಿಯೆ? ಎಂಬ ಪ್ರಶ್ನೆ ಅಧ್ಯಯನಕ್ಕೆ ತೊಡಗಿದಂತೆಲ್ಲಾ ಸಹಜವಾಗಿ ಮೂಡುತ್ತದೆ. ಸಾಹಿತ್ಯದಲ್ಲಿ ಹೆಣ್ಣನ್ನು ಪರಂಪರೆಯ ಸ್ಫೂರ್ತಿ ಎಂದು ಬರಹಗಳಲ್ಲಿ ಮೂಡಿಸಿದ್ದ ಲೇಖಕರೇ ಮಹಿಳೆಯರು ಬರೆದ ಬರಹಗಳನ್ನು ಏಕೆ ಒಪ್ಪಿಕೊಳ್ಳುವಲ್ಲಿ ಹಿಂಜರಿದರು? ಸಾಹಿತ್ಯ ರಚನೆಗೆ ಮಾನದಂಡಗಳಿರಬೇಕೆಂದು ಹೇಳುವ ಮಂದಿ ಮಹಿಳಾ ಸಾಹಿತ್ಯದ ಮಾನದಂಡಗಳನ್ನು, ಅದರ ಶ್ರೇಷ್ಠತೆಯನ್ನು ಗುರ್ತಿಸುವಲ್ಲಿ ಎಡವಿದರೆ? ಅಥವಾ ಅದನ್ನು ಒಪ್ಪಿಕೊಳ್ಳುವ ಸಮಸ್ಥಿತಿ ಇರಲಿಲ್ಲವೆ? ಎಂಬೆಲ್ಲ ಮಾತುಗಳು ಪ್ರಶ್ನೆಗಳ ರೂಪದಲ್ಲಿ ನಮ್ಮನ್ನು ಕಾಡುತ್ತವೆ. ಅದರಲ್ಲೂ ಮಹಿಳಾ ಕಾವ್ಯದ ವಿಚಾರಕ್ಕೆ ಬಂದರೆ 'ಅಡುಗೆ ಮನೆ ಸಾಹಿತ್ಯ' ಎಂದು ಹಣೆಪಟ್ಟಿ ಕಟ್ಟಿಕೊಂಡ ಕಾಲ ಈಗ ದೂರವಾಗಿದೆ.

ಚರಿತ್ರೆಯ ಕಾಲಘಟ್ಟದಿಂದಲೂ ಮಹಿಳೆ ಪುರುಷನ ಸಮಾನವಾಗಿಯೇ ಕಂಡು ಬಂದಿದ್ದಾಳೆ. ಗಾರ್ಗಿ, ಮೈತ್ರೇಯಿಯಿಂದ ಹಿಡಿದು ಇಂದಿನವರೆಗೂ ಮಹಿಳಾ ಸಾಧನೆಯ ಲೋಕ ಹಲವು ವಿನ್ಯಾಸಗಳಲ್ಲಿ ತೆರೆದು ಕೊಳ್ಳುತ್ತದೆ. ಇಷ್ಟೆಲ್ಲಾ ಸಾಧನೆಯ ಕುರುಹುಗಳಿದ್ದರೂ ಮಹಿಳೆ ಹೇಗೆ ಅಲಕ್ಷಿತ ಸಮುದಾಯಕ್ಕೆ ಸೇರ್ಪಡೆಗೊಂಡಳೆಂಬುದೇ ನಮ್ಮೆಲ್ಲರ ಮುಂದಿರುವ ಪ್ರಶ್ನೆ. ಇಪ್ಪತ್ತನೇ ಶತಮಾನದ ಆರಂಭ ಘಟ್ಟದಲ್ಲಿ ಮಹಿಳೆಯರು ಶಿಕ್ಷಣ ಪಡೆಯಲು ಹೋರಾಡಿದ ರೀತಿ ವಿಶಿಷ್ಟವಾದುದು. ಪಡೆದುಕೊಂಡ ವಿದ್ಯೆಯಲ್ಲಿಯೇ ಬರವಣಿಗೆಯ ಸ್ವರೂಪವನ್ನು ಕರಗತ ಮಾಡಿಕೊಂಡವರು ಹಲವರು. ಅವರ ಅನುಭವಗಳೇ ವೈವಿಧ್ಯತೆ ಪಡೆದುಕೊಂಡು ಸಾಹಿತ್ಯವಾಯಿತು. ಅಕ್ಷರ ಜ್ಞಾನ ಮತ್ತು ಲೋಕ ಜ್ಞಾನಗಳು ದೊರೆತಾಗ

ಸಾಹಿತ್ಯ ರಚನೆಗೆ ತೊಡಕಾಗದು ಎಂಬುದನ್ನು ಆಧುನಿಕ ಪೂರ್ವ ಯುಗದ ಬರಹಗಾರ್ತಿಯರಾದ ಕಲ್ಯಾಣಮ್ಮ, ನಂಜನಗೂಡು ತಿರುಮಲಾಂಬ, ಬೆಳಗೆರೆ ಜಾನಕಮ್ಮ ಮುಂತಾದವರು ತೋರಿಸಿ ಕೊಟ್ಟಿದ್ದಾರೆ. ಇವರ ಅನುಭವದ ಪ್ರಾಮಾಣಿಕತೆಯೇ ಸಾಹಿತ್ಯವಾಗಿ ಹೊರ ಹೊಮ್ಮಿದುದರಲ್ಲಿ ಆಶ್ಚರ್ಯವಿಲ್ಲ. ಇವರೇ ಮಹಿಳಾ ಅಭಿವ್ಯಕ್ತಿಯ ಮೊದಲ ತಲೆಮಾರಿನವರಾಗಿ ಕಂಡು ಬರುತ್ತಾರೆ.

ಪಶ್ಚಿಮದ ದಾರ್ಶನಿಕ ಮತ್ತು ವಿಚಾರವಾದಿ ಲೇಖಕರಿಂದ ಮಹಿಳಾ ಸ್ವಾತಂತ್ರ್ಯ ಮತ್ತು ಮಹಿಳಾ ಪ್ರಜ್ಞಾವಂತಿಕೆ ಎಂಬ ಮಾತುಗಳು ಕೇಳಿಬಂದದ್ದು ೧೯ನೇ ಶತಮಾನದಲ್ಲಿ. ಇವರ ಪ್ರೇರಣೆ ತುಂಬಿದ ಮಾತು ಹಾಗೂ ವಿಚಾರಗಳು ಭಾರತೀಯ ಸಾಹಿತ್ಯಕ್ಕೆ ಪ್ರೇರಣೆಯಾಯಿತು. ಒಟ್ಟಾರೆಯಾಗಿ ಕನ್ನಡ ಸಾಹಿತ್ಯ ಸಂದರ್ಭಕ್ಕೆ ಸಾಹಿತ್ಯ ವಿಮರ್ಶೆ ಎಂಬುದು ಪ್ರಮುಖ ಪಾತ್ರ ವಹಿಸಿದೆ.

ಮಾರ್ಗರೆಟ್ ಪುಲ್ಲರ್‌ರವರು "ಮಹಿಳೆಗೆ ಬೇಕಾಗಿರುವುದು ಸ್ವೇಚ್ಛೆಯಲ್ಲ, ಆಳುವ ಅಧಿಕಾರವಲ್ಲ, ಆಕೆಗೆ ಅವಶ್ಯವಿರುವುದು ಸಹಜವಾಗಿ ಬೆಳೆಯುವ ಅವಕಾಶ; ಸ್ವಂತದ ಬುದ್ಧಿಯನ್ನು ಉಪಯೋಗಿಸುವ ಅವಕಾಶ; ಒತ್ತಡ ದಬ್ಬಾಳಿಕೆಗಳಿಂದ ಮುಕ್ತವಾದ ಬದುಕನ್ನು ಹೊಂದುವ ಅವಕಾಶ"[೧] ಎಂದು ಮಹಿಳಾ ಸ್ವಾತಂತ್ರ್ಯವನ್ನು ಕುರಿತು ವ್ಯಾಖ್ಯಾನಿಸಿದ್ದಾರೆ.

ಹತ್ತೊಂಭತ್ತನೆಯ ಶತಮಾನದಲ್ಲಿ ಆರಂಭವಾದ ಈ ಜಾಗೃತಿ ಪ್ರಜ್ಞೆ ಮೊದಲು ಮಹಿಳೆಯ ಸೀಮಿತ ಸ್ವಾತಂತ್ರ್ಯದ ಬಗ್ಗೆ ಮಾತ್ರ ಹೆಚ್ಚು ಒತ್ತು ಕೊಟ್ಟಿತು. ಅಂದರೆ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಕೌಟುಂಬಿಕ ನೆಲೆಗಟ್ಟಿನ ಬಿಗಿಹಿಡಿತದಿಂದ ಬಿಡಿಸುವ ಪ್ರಯತ್ನವನ್ನು ಮೊದಲು ಕಂಡುಕೊಳ್ಳುವ ಉದ್ದೇಶವಾಗಿತ್ತು. ನಂತರ ಆಲೋಚನಾ ಶಕ್ತಿ ಬೆಳೆದಂತೆಲ್ಲಾ ವಿಚಾರಗಳು ವಿಮರ್ಶೆಗೊಳಪಡುವ ಕಾಲಘಟ್ಟದಲ್ಲಿ ನಿಂತಿತು. ಇದರಿಂದ ಮಹಿಳಾ ಅಭಿವ್ಯಕ್ತಿಗಳು ಕೇವಲ ವಿಚಾರಗಳಾಗದೆ ಸಾಹಿತ್ಯದಲ್ಲಿರುವ ಮಡಿವಂತಿಕೆಯನ್ನು ಖಂಡಿಸುವ ಮೊದಲ ಪ್ರಯತ್ನ ನಡೆದದ್ದು ೨೦ನೇ ಶತಮಾನದಲ್ಲಿ. ಹೊಸ ಬಗೆಯ ಆಲೋಚನಾ ಕ್ರಮ, ಪಶ್ಚಿಮದ ಶಿಕ್ಷಣ, ಮಿಷನರಿಗಳ ಪ್ರಭಾವ, ಬರವಣಿಗೆಯಲ್ಲಿನ ಮಡಿವಂತಿಕೆಯ ವಿರೋಧ ಇವೆಲ್ಲವೂ ನಡೆಯಲು ಸಾಧ್ಯವಾದದ್ದು ಈ ಶತಮಾನದಲ್ಲಿಯೇ. ಏಕೆಂದರೆ ಮಹಿಳೆಯರ ಅಭಿವ್ಯಕ್ತಿಯು ಪುರುಷನ ಆಲೋಚನೆಗಿಂತ, ಮಹಿಳೆಯೇ ತನ್ನನ್ನು ತಾನು ಒರೆಗೆ ಹಚ್ಚಿಕೊಂಡದ್ದು ಮತ್ತು ಅಭಿವ್ಯಕ್ತಿ ಮಾರ್ಗವಾಗಿಸಿಕೊಂಡದ್ದು ಸಾಹಿತ್ಯದಲ್ಲಿಯೆ. ಯೂರೋಪ್ ಮತ್ತು ಅಮೇರಿಕಾದಲ್ಲಿ ನಡೆದ ಸಾಮಾಜಿಕ ಮತ್ತು ಮಹಿಳಾ ಸ್ವಾತಂತ್ರ್ಯ ಕ್ರಾಂತಿಗಳು 'ಮಹಿಳಾ ಅಧ್ಯಯನ'ವೆಂಬ ಪ್ರತ್ಯೇಕತೆಗೆ ನಾಂದಿಹಾಡಿದವು.

ಭಾರತೀಯ ಸಾಹಿತ್ಯವನ್ನು ಗಮನಿಸಿದರೆ, ಸಾಹಿತ್ಯದ ಮುಖೇನ ಮಹಿಳಾ ಸ್ವಾತಂತ್ರ್ಯದ ಬಗ್ಗೆ ಜಾಗೃತಿ ಮೂಡಿದ್ದು ಮೊದಲು ಆಂಗ್ಲಭಾಷೆಯಲ್ಲಿ. ಏಕೆಂದರೆ ಪಾಶ್ಚಾತ್ಯ ಸಾಹಿತ್ಯದ

ಪ್ರಭಾವವೂ ಕಾರಣವಿರಬಹುದು. ಆದರೆ ಕನ್ನಡ ಸಾಹಿತ್ಯದಲ್ಲಿ ಬಿ.ಎನ್. ಸುಮಿತ್ರಾಬಾಯಿ, ಹೆಚ್.ಎಸ್.ಶ್ರೀಮತಿ, ಎಂ.ಎಸ್.ಆಶಾದೇವಿ, ಬಿ.ಎನ್.ಗಾಯತ್ರಿ ಮುಂತಾದವರ ಸ್ತ್ರೀವಾದಿ ವಿಚಾರಧಾರೆಗಳನ್ನು ಕುರಿತ ಲೇಖನಗಳು, ವಿಮರ್ಶಾ ಗ್ರಂಥಗಳು ನಮಗೆ ಮಾರ್ಗ ಸೂಚಿಗಳಾಗುತ್ತವೆ. ಅಮೃತಾಪ್ರೀತಂ, ಕಮಲಾದಾಸ್, ಶಶೀದೇಶಪಾಂಡೆ ಮುಂತಾದವರು ಸ್ವಾತಂತ್ರ್ಯಾ ನಂತರದ ಕಾಲಘಟ್ಟದಲ್ಲಿ ಕಂಡುಬರುವ ಲೇಖಕಿಯರಾಗಿದ್ದಾರೆ. ಮಡಿವಂತಿಕೆಯ ಸಾಹಿತ್ಯ ಇವರ ಕೃತಿಗಳಲ್ಲಿ ಕಂಡುಬರುವುದಿಲ್ಲ. ಮಹಿಳಾ ಸಂವೇದನೆ ಸಾಹಿತ್ಯದಲ್ಲಿ ಸೃಜಿಸಬೇಕೆಂದರೆ ಪುರುಷ ನಿರ್ಮಿತ ಹೆಣ್ಣಿನ ಸಂಕೋಚ ನಿರ್ಮಿತ ಚೌಕಟ್ಟು ಛಿದ್ರಗೊಂಡಾಗ ಮಾತ್ರ ಸ್ಪಷ್ಟತೆ ಒದಗುತ್ತದೆ. ಇದನ್ನು ನಮ್ಮ ಇತ್ತೀಚಿನ ಮಹಿಳಾ ಕಾವ್ಯಗಳು ಬಯಲು ಮಾಡಿವೆ. ಒಳಗೊಳ್ಳುವ ಕ್ರಿಯೆಯೇ ಹೆಣ್ತನ, ಇದೇ ಅಭಿವ್ಯಕ್ತಿ ಎಂಬ ಸ್ಪಷ್ಟ ಚಿತ್ರಣವನ್ನೂ ಕಟ್ಟಿಕೊಡುತ್ತವೆ. ಕನ್ನಡದ ಮಟ್ಟಿಗೆ ಬಂದರೆ ಪ್ರತಿಭಟನೆಯ ಸ್ವರೂಪ ಮತ್ತು ಮುಕ್ತತೆ ಪರಿಪೂರ್ಣವಾಗಲ್ಲದಿದ್ದರೂ ಸಹ ತಡವಾಗಿ ಸ್ವಲ್ಪಮಟ್ಟಿಗೆ ಬಂದಿತೆನ್ನಬಹುದು.

ಜಿ.ಎಸ್ ಆಮೂರರವರು ಹೇಳುವಂತೆ

"ಜಗತ್ತಿನ ಎಲ್ಲೆಡೆ ಮಹಿಳಾ ಸಾಹಿತ್ಯವೆಂಬುದು ಮೂರು ಘಟ್ಟಗಳಲ್ಲಿ ವಿಂಗಡಿಸಿ ವಿವರಿಸಬಹುದಾದ ಬೆಳವಣಿಗೆಯಾಗಿದೆ. ಮೊದಲಿಗೆ ಮಹಿಳಾ ಸಾಹಿತಿಗಳು ಪುರುಷ ಪ್ರಧಾನ ಸಮಾಜದ ರೀತಿ ನೀತಿಗಳನ್ನು, ಸಂಪ್ರದಾಯಗಳನ್ನು ಧಿಕ್ಕರಿಸಿದರು. ತಮ್ಮ ಮೇಲಾಗುತ್ತಿರುವ ಅನ್ಯಾಯ ಅತ್ಯಾಚಾರಗಳನ್ನು ಪ್ರತಿಭಟಿಸಿದರು. ಇದು ಮೊದಲ ಹಂತ. ಪ್ರತಿಭಟನೆಯ ಮೊದಲ ಹಂತ ದಾಟಿದವರು 'ಸಂಘಟನೆ'ಯ ಪ್ರಯತ್ನ ಮಾಡಿದರು. ತಮ್ಮ ವಿಶಿಷ್ಟ ಸಂವೇದನೆಗಳನ್ನು ಪ್ರಾಮಾಣಿಕವಾಗಿ ಹಾಗೂ ಪ್ರಭಾವಶಾಲಿಯಾಗಿ ಅಭಿವ್ಯಕ್ತಿಸುವ ಕೃತಿ ರಚನೆ ಮಾಡಿದರು. ಇದು ಎರಡನೆಯ ಹಂತ. ಈ ಎರಡನೆಯ ಘಟ್ಟವನ್ನೂ ದಾಟಿದ ಹಲವು ಶ್ರೇಷ್ಠ ಲೇಖಕಿಯರು ತಾವು ಧಿಕ್ಕರಿಸಿದ ಮೌಲ್ಯಗಳಿಗೆ ಬದಲಾಗಿ ಹೊಸ ಮೌಲ್ಯಗಳನ್ನು ಸೃಷ್ಟಿಸುವ 'ನಿರ್ಮಾಣ ಕಾರ್ಯ' ಮಾಡುತ್ತಿದ್ದಾರೆ. ಕನ್ನಡದ ಮಹಿಳಾ ಸಾಹಿತ್ಯವನ್ನು ಈ ಹಿನ್ನಲೆಯಲ್ಲಿ ನೋಡಿದಾಗ ಅದಿನ್ನೂ ಘಟ್ಟದಲ್ಲೇ ಸುತ್ತು ಹೊಡೆಯುತ್ತಿರುವಂತೆ ಕಾಣುತ್ತದೆ. ಬೆರಳೆಣಿಕೆಯ ಅಪವಾದಗಳನ್ನು ಬಿಟ್ಟರೆ."[೨] ಎಂದಿದ್ದಾರೆ. ಈ ಮಾತು ಆಧುನಿಕ ಮಹಿಳಾ ಕಾವ್ಯದ ಬೆಳವಣಿಗೆಗೆ ಸ್ಪಷ್ಟತೆ ಒದಗಿಸುತ್ತದೆ.

ಪೂರ್ವದ ಮಹಿಳಾ ಸಾಹಿತ್ಯದ ಬರವಣಿಗೆಯಲ್ಲಿ ವ್ಯವಸ್ಥೆಯ ಬಗೆಗಿನ ಹೊಂದಾಣಿಕೆಯೇ ಕಂಡುಬರುತ್ತದೆ. ಪ್ರತಿಭಟನೆಯ ಅಂಶಗಳು ಅಲ್ಲೊಂದು ಇಲ್ಲೊಂದು ಎಂಬಂತೆ ಕಂಡುಬಂದರೂ ಲೇಖಕಿಗಿರುವ ಪೂರಕ ವಾತಾವರಣದ ಬಳಕೆಯ ಕೊರತೆಯೂ ಒಂದಂಶವಾಗಿರಬಹುದು ಅಥವಾ ಅವರ ಸೀಮಿತ ಚೌಕಟ್ಟಿನ ದೃಷ್ಟಿಕೋನ. ಇದರ ನಿರ್ಮಾಣ ವ್ಯವಸ್ಥೆಯೂ ಪುರುಷ ಸಮಾಜದ್ದು.

೬.೧ ಸಾಮಾಜಿಕ ಅಭಿವ್ಯಕ್ತಿಯಲ್ಲಿ ಮಹಿಳಾ ಕಾವ್ಯ

ನಮ್ಮಲ್ಲಿ ಮಹಿಳೆಯಾಗಿ ತನ್ನ ವ್ಯಕ್ತಿತ್ವದ ಭಿನ್ನತೆಯನ್ನು ವಿಶಿಷ್ಟವಾಗಿ ರೂಢಿಸಿಕೊಂಡವರು ಹಲವರಿದ್ದಾರೆ. ತನ್ನನ್ನು ತಾನು ಕಂಡುಕೊಂಡ ರೀತಿಯಿಂದಲೇ ಸಮಾಜದ ಕಾರ್ಯ ಚಟುವಟಿಕೆಯನ್ನು ಪ್ರಯತ್ನ ಮಾಡಿದವರು ಹಲವರು. ಕೌಟುಂಬಿಕ ಸನ್ನಿವೇಶದ ಹೆಣ್ಣನ್ನು ವಿಭಿನ್ನವಾಗಿ ನೋಡುವ ಪ್ರಯತ್ನ ಮಾಡಿದರೂ ಅದು ಸಾಧ್ಯವಾದುದು ಸಾಹಿತ್ಯದ ಮುಖೇನ. ಅಂದರೆ ಕಾವ್ಯದ ರೂಪದಲ್ಲಿ. ಸಂಚಿ ಹೊನ್ನಮ್ಮನಿಂದ ಹಿಡಿದು ಅಕ್ಕನವರೆಗೆ ಬಂದು ಹೋಗುವ ಹಲವು ಪಾತ್ರಗಳನ್ನು ಬರಹ ರೂಪಗೊಳಿಸಿದ್ದು ಕಾವ್ಯದಲ್ಲಿ. ಗಂಡಿನ ಸೋಗಲಾಡಿತನ, ಹೆಣ್ಣಿನ ಅಧೀನತೆ, ಕುಟುಂಬ ವ್ಯವಸ್ಥೆ ಮುಂತಾದವುಗಳಲ್ಲಿನ ನೈಜತೆಯನ್ನು ಬಿಚ್ಚಿಡುವ ಪ್ರಯತ್ನವನ್ನು ಮೊದಲ ತಲೆಮಾರಿನಿಂದ ಹಿಡಿದು ಇಂದಿನ ಆಧುನಿಕ ಕವಯಿತ್ರಿಯರೂ ತಮ್ಮ ಕವಿತೆಗಳಲ್ಲಿ ಕಟ್ಟಿದರು. ಆದರೂ ಎಲ್ಲರಿಗೂ 'ಹದಿಬದೆಯ ಧರ್ಮ' ಕೃತಿಯ ಹೆಣ್ಣಿನ ಶಿಸ್ತಿಗಿಂತ, ಅಕ್ಕನ ದಿಟ್ಟತನವೇ ಸ್ಫೂರ್ತಿಯಾಗಿ ನಿಂತದ್ದು ಬಹು ಮುಖ್ಯ ಅಂಶವಾಗಿದೆ. ವ್ಯವಸ್ಥೆಯ ಕುರುಡುತನದ ವಿರುದ್ಧ ಹೋರಾಡಿದ ಮಹಿಳಾ ಪರ ಚಿಂತಕಿ ಅಕ್ಕಮಹಾದೇವಿಯಾಗಿ ಕಂಡುಬರುತ್ತಾಳೆ.

ಸ್ವತಂತ್ರ್ಯಾ ಪೂರ್ವದಲ್ಲಿ ಸಂಸಾರ, ಗಂಡು ಹೆಣ್ಣಿನ ಸಂಬಂಧ, ಅರ್ಪಣಾ ಮನೋಭಾವ ನಿವೇದನೆಯ ಬಗೆಗೆ ಬರೆಯುತ್ತಿದ್ದ ಹೆಣ್ಣಿನ ಮನಸ್ಥಿತಿ ಬದಲಾಗತೊಡಗಿತು. ಸೇವಾ ಮನೋಭಾವದ ಚಿಂತೆಗೆ, ತನ್ನ ಸ್ವತಂತ್ರ ಪ್ರವೃತ್ತಿಯ ಕಡೆಗೆ ಗಮನ ಹರಿಯತೊಡಗಿತು. ಇದು ಹೆಚ್ಚು ಸಾಧ್ಯವಾದದ್ದು ಕಾವ್ಯಗಳಲ್ಲಿ. ಆಲೋಚನೆಗಳ ಬದಲಾವಣೆಯೇ ಮಹಿಳಾ ಕಾವ್ಯದ ಗಟ್ಟಿತನಕ್ಕೆ ಸಾಕ್ಷಿಯಾಯಿತು. ಇವೆಲ್ಲವನ್ನೂ ಹೊರತುಪಡಿಸಿ ಸಾಮಾಜಿಕ ಅಸಮಾನತೆ, ರಾಜಕೀಯ ತಾರತಮ್ಯ, ಭ್ರಷ್ಟಾಚಾರ, ಅತ್ಯಾಚಾರ, ಲೈಂಗಿಕ ಕಿರುಕುಳ, ಮಕ್ಕಳ ಮೇಲಿನ ದೌರ್ಜನ್ಯ ಮುಂತಾದ ವಿಷಯಗಳ ಬಗ್ಗೆಯೂ ಮಾತನಾಡುವಷ್ಟು ಮತ್ತು ವ್ಯವಸ್ಥೆಯ ವಿರುದ್ಧವೂ ದನಿ ಎತ್ತುವಷ್ಟು ಸಾಮರ್ಥ್ಯ ರೂಢಿಸಿಕೊಂಡಿದ್ದಾಳೆ. ಇವೆಲ್ಲದಕ್ಕೂ ಪೂರಕ ಅಂಶಗಳನ್ನು ಒದಗಿಸಿಕೊಟ್ಟಿದ್ದು ಸಾಹಿತ್ಯ ಕ್ಷೇತ್ರ

ಸ್ಥಾಪಿತ ಮೌಲ್ಯಗಳು ಹಾಗೂ ವ್ಯಕ್ತಿ ಕೇಂದ್ರಿತ ಮೌಲ್ಯಗಳನ್ನು ಒಡೆಯುವ ಪ್ರಯತ್ನದಲ್ಲಿ ಮಹಿಳಾ ಕಾವ್ಯ ಯಶಸ್ವಿಯಾಗಿದೆ. ಅಂದರೆ ಹಳೆಯ ಕಂದಾಚಾರಗಳ ಮೌಲ್ಯಗಳನ್ನು ಪುನರ್ ಪರಿಶೀಲಿಸುವ ಮತ್ತು ವ್ಯಾಖ್ಯಾನಿಸಿ ಹೊಸ ಅರ್ಥ ಕೊಡುವ ಪ್ರಯತ್ನ ಮಹಿಳಾ ಕಾವ್ಯದಲ್ಲಡಗಿದೆ. ಕಾಲಬದಲಾದಂತೆ ಹೆಣ್ಣಿನ ಮನಸ್ಥಿತಿಯೂ ಬದಲಾಗಿದೆ. ವ್ಯವಸ್ಥೆಯ ವಿರುದ್ಧ ಬಂಡೇಳುವ ಪ್ರಜ್ಞಾವಂತಿಕೆ ಹೆಣ್ಣಿಗಿದೆ. ಪುರುಷಾಧೀನ ಹೆಣ್ಣಿನ ಮನಸ್ಥಿತಿಯನ್ನು ಹಣೆಬರಹ, ವಿಧಿ, ಎಂದು ಹೇಳುವ ಚೌಕಟ್ಟುಗಳು ಇಂದು ಮರೆಯಾಗುತ್ತಿವೆ. ಸ್ವತಂತ್ರ್ಯ ಪೂರ್ವ ಕವಯಿತ್ರಿಯರಿಗೂ, ಆಧುನಿಕ ಕವಯಿತ್ರಿಯರಿಗೂ ಹಲವು ಭಿನ್ನತೆ ಇದೆ. ಸ್ತ್ರೀ ವಿಶಿಷ್ಟಲೋಕವೆಂದು ಕಾಣುವ ಅನುಭವ ತೀವ್ರತೆ ಪ್ರತಿ ಕಾಲಘಟ್ಟದಲ್ಲಿ ಕಂಡುಬಂದರೂ

ಬದಲಾವಣೆಗಳು ಸಹಜವಾದುವು. ಇವರ ಕಾವ್ಯದಲ್ಲಿ ಕಂಡುಬರುವ ಮುಖ್ಯ ಅಂಶವೆಂದರೆ, ತನ್ನೊಳಗಿನ ಗುಪ್ತ ಶಕ್ತಿ ಮತ್ತು ಆಲೋಚನೆಯನ್ನು ತಾನೇ ಒರೆ ಹಚ್ಚಿಕೊಳ್ಳುವ ಸಾಮರ್ಥ್ಯ ಇರುವಂತದ್ದು. ಇದನ್ನು ಪ್ರತಿ ಕಾವ್ಯವೂ ತನ್ನದಾಗಿಸಿಕೊಂಡಿದೆ, ಇದೇ ಕಾವ್ಯ ಶಕ್ತಿ. ಈ ಅಭಿವ್ಯಕ್ತಿಯನ್ನು ಸ್ತ್ರೀ ವಿಶಿಷ್ಟಲೋಕದ ಘಟ್ಟವೆನ್ನಬಹುದು.

ಕವಿ ಚಿತ್ರಿಸಿದ ಹೆಣ್ಣಿನ ಬದುಕಿನ ಚಿತ್ರಣದಲ್ಲಿ ಸ್ಪಷ್ಟವಾದ ವ್ಯಕ್ತಿ ಚಿತ್ರಣವಿದ್ದರೂ, ಕವಯಿತ್ರಿಯು ಚಿತ್ರಿಸಿದ ಹೆಣ್ಣಿನ ಬದುಕಿನ ಚಿತ್ರಣ ವಿಭಿನ್ನವಾದುದು. ಅಂದರೆ ಇಲ್ಲಿ ಸಂಘರ್ಷಕ್ಕಿಂತ ಸಾವಯವ ಸಂಬಂಧ ಬಹುಮುಖತೆಯದು. ಹೆಣ್ಣಾದವಳು ಹೆಣ್ಣಿನ ಚಿತ್ರಣವನ್ನೇನು ಬರಹಗಳಲ್ಲಿ ಚಿತ್ರಿಸಬಲ್ಲಳು? ಎಂಬ ಮಾತುಗಳು ಕೇಳಿಬಂದರೂ ವ್ಯಕ್ತಿತ್ವದ ಮೌಲ್ಯಗಳಿಗಿಂತ ಆಲೋಚನೆಯ ಮೌಲ್ಯಗಳನ್ನು ಬಂಧಿಸುವ ತಾಕತ್ತು ಮಹಿಳಾ ಕಾವ್ಯಕ್ಕಿದೆ. ಹಲವು ಕಾದಂಬರಿಗಳಲ್ಲಿ, ನಾಟಕಗಳಲ್ಲಿ, ಕಾವ್ಯದಲ್ಲಿ ಎಷ್ಟೋ ಕವಿಗಳು ಇಂತಹ ಕಾರ್ಯಕ್ಕೆ ಹತ್ತಿರ ಹೋಗಿದ್ದರೂ ಸಹ ಅದು ಪೂರ್ತಿಯಾಗಿಲ್ಲ. ಎಲ್ಲೋ ಒಂದು ಕಡೆ ಸಹಾನುಭೂತಿ ಪ್ರಕ್ರಿಯೆಯೇ ಹೆಚ್ಚಾಗಿ ತೋರಿರುವಂತಿದೆ. ಇವನ್ನು ಮಹಿಳಾ ಕಾವ್ಯ ಗೌಣವಾಗಿಸಿದೆ.

ಎಷ್ಟೇ ಅಧ್ಯಯನಗಳು ನಡೆದರು ಕಾಲಕ್ಕೆ ತಕ್ಕಂತೆ ಮನುಷ್ಯನ ಆಲೋಚನೆಗಳು ಭಿನ್ನವಾಗಿ ಕವಲೊಡೆಯುತ್ತವೆ. ಬಹಳ ಚರ್ಚಿತವಾಗುತ್ತಿರುವ ವಿಷಯವೆಂದರೆ ಲಿಂಗ ರಾಜಕಾರಣ. ಇದರಲ್ಲೂ ಹೆಣ್ಣು ತನ್ನದೇ ಆದ ಅಭಿವ್ಯಕ್ತಿಯನ್ನು ಸೃಜಿಸುವಲ್ಲಿ ಯಶಸ್ವಿಯಾಗಿದ್ದಾಳೆ. ಎಲ್ಲಾ ರಂಗದಲ್ಲೂ ಮುಂಚೂಣಿಯಲ್ಲಿರುವ ಹೆಣ್ಣು ತನ್ನ ಅಭಿವ್ಯಕ್ತಿಯಲ್ಲೂ ಸಹ ಭಿನ್ನ ನಿಲುವನ್ನು ಹೊಂದಿರುವಂತವಳು ಹಿಂದಿನಿಂದಲೂ ಹೆಣ್ಣನ್ನು ವಸ್ತು ಕೇಂದ್ರಿತ ನೆಲೆಯಲ್ಲಿಯೇ ನೋಡಲಾಗಿದೆ. ವ್ಯಕ್ತಿ ಕೇಂದ್ರಿತ ಮೌಲ್ಯಗಳಲ್ಲಿ ಅವಳನ್ನು ನೋಡುವ ಮಾತಿರಲಿ, ಗುರ್ತಿಸುವ ಸೌಜನ್ಯವೂ ಸಾಹಿತ್ಯಕ್ಕಿರಲಿಲ್ಲ. ಹೆಣ್ಣು ಕೇವಲ ದೇಹ ಭಾಷೆಯೇ ಹೊರತು, ಅಭಿವ್ಯಕ್ತಿಯ ಪ್ರತಿನಿಧಿಯಾಗಿ ಪುರಾಣಗಳಿಂದ ಹಿಡಿದು, ಪುರುಷ ಕೇಂದ್ರಿತ ನೆಲೆಯಲ್ಲಿಯೂ ಕಂಡು ಬರಲೇ ಇಲ್ಲ.

೬.೨ ಪುನರ್ ನಿರ್ಮಿತಿಯ ಅಭಿವ್ಯಕ್ತಿಯ ನೆಲೆಗಳು

ಪುರಾಣಗಳಲ್ಲಿ ಲಿಂಗ ರಾಜಕಾರಣದ ಕ್ರೂರತೆಯನ್ನು ಕೆಣಕುವ ರೀತಿಯಲ್ಲಿ ಹಲವು ಸ್ತ್ರೀ ಪಾತ್ರಗಳು ರಚಿತವಾಗಿವೆ. ಆದರೆ ಅವೆಲ್ಲವುಗಳೂ ಧರ್ಮದ ಸಂಕೋಲೆಯಲ್ಲಿಯೇ ಮಿಳಿತಗೊಳಿಸಿದ್ದು ವಿಪರ್ಯಾಸ. ಅಂತಹ ಪಾತ್ರಗಳ ವ್ಯಕ್ತಿಗತ ವಿಮರ್ಶೆಯನ್ನು ಯಶಸ್ವಿಗೊಳಿಸಿದ್ದು ಮಹಿಳಾ ಕಾವ್ಯ. ಇಂದು ಬರೆಯುತ್ತಿರುವ ಎಷ್ಟೋ ಕವಯಿತ್ರಿಯರು ಅಭಿವ್ಯಕ್ತಿ ಮಾಧ್ಯಮದಲ್ಲಿ ಯಶಸ್ವಿಯಾಗಿದ್ದಾರೆ. ಈ ಅಭಿವ್ಯಕ್ತಿ ಎನ್ನುವುದು ಸಹಜ ಹಾಗೂ ಸಮಾನ ಮನಸ್ಕತೆಯನ್ನು ತಂದುಕೊಡುವಂತದ್ದು. ಇದರಲ್ಲಿ ಗಂಡು ಹೆಣ್ಣೆಂಬ ಬೇಧವಿರುವುದಿಲ್ಲ, ಇದು ವ್ಯಕ್ತಿಯ ವ್ಯಕ್ತಿತ್ವದ ಮನಸ್ಥಿತಿಯನ್ನು ಪ್ರತಿನಿಧಿಸುತ್ತದೆ ಎಂಬ

ಮಾತು ಸತ್ಯವಾದರೂ ಹೆಣ್ಣನ್ನು ಸದಾ ಅಧೀನ ಸಂಸ್ಕೃತಿಯೊಳಗೆ ಬಂಧಿಸಲು ಗಂಡು ಬಯಸುತ್ತಾನೆ. ಸಾಹಿತ್ಯದಿಂದಿಡಿದು ಸಾಮಾಜಿಕವಾಗಿ ಸ್ಥಾಪಿತ ಮತ್ತು ನಿರ್ದೇಶಿತ ಮೌಲ್ಯಗಳಿಗೆ ಹೆಣ್ಣು ಬಂಧಿಸಲ್ಪಡುತ್ತಾಳೆ. ಇದು ಅವಳಿಗಾದ ತೊಡಕೇ ವಿನಃ ಅವಳ ವ್ಯಕ್ತಿತ್ವದ ನೈಜತೆಯಲ್ಲಿ ಕಾಲ ಬದಲಾವಣೆಯ ಜೊತೆಗೆ ಸಾಮಾಜಿಕವಾಗಿ ಆಲೋಚನೆಯನ್ನೂ ಬದಲಾಯಿಸುವ ಕೆಲಸವಾಗಬೇಕಿದೆ.

ಪುರುಷ ಪ್ರಧಾನ ನೆಲೆಯ ಸಡಿಲತೆ, ಉದಾರತೆಗಳು ಹೆಣ್ಣಿಗೆ ಸ್ವಾತಂತ್ರ್ಯವನ್ನು ಕೊಟ್ಟಿಲ್ಲ. ಬದಲಿಗೆ ಅವಳಿಗಿರುವ 'ಸ್ವ ಪ್ರಜ್ಞೆ' ಎಂಬ ನಿಧಾನಗತಿಯ 'ಜಾಗೃತ ಪ್ರಜ್ಞೆ'ಯೆ ಇಂದು ಅವಳಿಗೆ ಅಸ್ಮಿತೆಯನ್ನು ತಂದುಕೊಟ್ಟಿರುವುದು. ಇದನ್ನು ಹಲವು ಆಧುನಿಕ ಮಹಿಳಾ ಕಾವ್ಯ ತೋರಿಸಿಕೊಟ್ಟಿದೆ. ಇಂಥ ಬದಲಾವಣೆ ಸಾಮಾಜಿಕವಾಗಿ ಸಾಹಿತ್ಯ ರೂಪದಲ್ಲಿ ಗಟ್ಟಿ ನಿಲುವನ್ನು ಪಡೆದಿವೆ. ಏಕೆಂದರೆ ಮಾನಸಿಕವಾಗಿ ಸಿದ್ಧವಿಲ್ಲದ ನಾವುಗಳು ಬರವಣಿಗೆ ಸ್ವಾತಂತ್ರ್ಯವನ್ನು ಹೆಣ್ಣಿಗೆ ಕೊಡುವುದೆಂದರೆ ಸುಲಭದ ಮಾತಲ್ಲ, ಅಲ್ಲಿಯೂ ಸಹ ಗಂಡಿನ ಕುರುಹಿರಬೇಕೆಂಬ ಎಚ್ಚರದ ಜಾಗೃತ ಪ್ರಜ್ಞೆ ಸಮಾಜದ್ದು.

ಉದಾ:– ಸೀತೆ, ಅಹಲ್ಯೆ, ದ್ರೌಪದಿ ಪಾತ್ರಗಳ ಚಿತ್ರಣ. ಒಂದು ಕಡೆ ಪ್ರತಿಭಟನೆ ಎಂಬುದು ಮನೋವೇದನೆಯಾದರೆ, ತನ್ನ ಕಾರ್ಯ ಸಾಧಿಸಲು ಸಹಾಯಕ್ಕೆ ಗಂಡಿರಬೇಕೆಂಬ ಬಯಕೆ, ಮುಕ್ತಿಗೂ ಗಂಡೇ ಬರಬೇಕೆಂಬ ನಿಲುವು ಮತ್ತೊಂದು ಬಗೆಯದು. ಪುರುಷನಿಗೆ ವಸ್ತು ಮಾತ್ರವಾಗಿ ಕಂಡುಬರುವ ಹೆಣ್ಣು ಅಭಿವ್ಯಕ್ತಿಯ ಮಾಧ್ಯಮವಾಗಿ ಹೇಗೆ ಕಾಣಲು ಸಾಧ್ಯ? ಬರವಣಿಗೆಗೆ ತೊಡಗಿದಾಗ ಬರಹಗಾರ್ತಿಯರಿಗೆ ಇದು ಕಂಡಿರಬಹುದು, ಆದ್ದರಿಂದಲೇ ಮೌಲ್ಯಗಳನ್ನು ಒಡೆಯುವ ಕೆಲಸವನ್ನು ಪ್ರತಿಯೊಬ್ಬ ಕವಯಿತ್ರಿಯೂ ಸಾಹಿತ್ಯದಲ್ಲಿ ಮಾಡಿದ್ದು. ಇದರ ಪರಿಪೂರ್ಣ ಯತ್ನ ಸಾಧ್ಯವಾದದ್ದು ಮಹಿಳಾ ಕಾವ್ಯದಲ್ಲಿ ಎಂದರೆ ತಪ್ಪಿಲ್ಲ. ಮೇಲಿನ ಮಾತುಗಳಿಗೆ ಪೂರಕವಾಗಿ ಬೆಳಗೆರೆ ಜಾನಕಮ್ಮನವರ ಕವಿತೆ ಅಭಿವ್ಯಕ್ತಿ ಮಾಧ್ಯಮಕ್ಕೆ ಪೂರಕವಾದುದು.

೬.೩ ಎಚ್ಚೆತ್ತ ಸ್ತ್ರೀಪ್ರಜ್ಞೆಯ ನಿಲುವುಗಳು

"ಹೆಣ್ಣು ಗಂಡೆಂಬೆರಡು
ಗೊಂಬೆಗಳ ಆಟದೊಳು
ಎನ್ನೊಡಲು ಕುದಿಯುತಿದೆ
ಹೆಣ್ಣಾಟವ ಕಂಡು
ಹೆಣ್ಣಾಗಿ ಪರಿಣಮಿಸಿ
ಕಣ್ಣು ತೆರೆಯದೆ ಬಂದು
ಗೂಡ ಸೇರುವುದು" [೩]

ಮದುವೆ ಎಂಬುದು ಗೊಂಬೆಗಳ ಆಟವಿದ್ದಂತೆ. ಏಕೆಂದರೆ ಅರಿಯದ ವಯಸ್ಸಿನಲ್ಲಿ ಮದುವೆಯಾಗಿ ಗಂಡನ ಮನೆ ಸೇರುವ ಹೆಣ್ಣಿನ ಘೋರತನ ಕವಿತೆಯಲ್ಲಡಗಿದೆ. ಇದು ಕೇವಲ ಹೆಣ್ಣಿನ ಗೋಳನ್ನು ಮಾತ್ರ ಚಿತ್ರಿಸುವುದಿಲ್ಲ. ಇದು ಎಚ್ಚೆತ್ತ ಸ್ತ್ರೀ ಪ್ರಜ್ಞೆಯ ಪ್ರತೀಕವೂ ಹೌದು. ಸಾರವಿಲ್ಲದ ಸಂಸಾರ ಹೆಣ್ಣಿಗೆ ಅಕಾಲ ವೃದ್ಧಾಪ್ಯವೇ ಸರಿ ಎಂಬುದನ್ನು ಕಟ್ಟಿಕೊಡುತ್ತದೆ. ಕವಿತೆ ಮುಂದುವರೆದು ಬದುಕಿನ ನಿಸ್ಸಾರತೆಯನ್ನು ಪ್ರದರ್ಶಿಸುತ್ತದೆ.

"ಗಂಡಿನೊಳಗೇನಿಹುದು
ಕಾಡ ಹಾಗಲಕಾಯಿ
ತಿರುಳಿಲ್ಲ, ಸಿಹಿಯಿಲ್ಲ
ಸವಿ ಗಂಧವಿಲ್ಲ" ೪

ಹೆಣ್ಣಿನ ಸ್ವಂತಿಕೆಗೆ ಆಸ್ಪದವಿಲ್ಲದ ಚಿತ್ರಣವಿದೆ. ಪುರುಷ ಪ್ರಧಾನ ಸಮಾಜದ ಸ್ಥಿತಿಗತಿಗೆ ಹಿಡಿದ ಕನ್ನಡಿಯಂತಿದೆ. ಆ ಕಾಲದಲ್ಲೇ ಜಾನಕಮ್ಮನವರ ಆಲೋಚನಾ ಶಕ್ತಿ ಜಾಗೃತವಾಗಿತ್ತೆಂದರೆ ಇದು ಅಭಿವ್ಯಕ್ತಿ ಮಾಧ್ಯಮದ ಮೊದಲ ಘಟ್ಟವೆನ್ನಬಹುದು.

ಹೆಣ್ಣಾದವಳು ಹಡೆಯಲು ಮಾತ್ರವಲ್ಲ ಈ ಸಮಾಜ ಅವಳನ್ನು ಯಂತ್ರವಾಗಿ ನೋಡುವ ಮನಸ್ಥಿತಿಯನ್ನು ಮುರಿಯುತ್ತಾರೆ. ಇವರ ಆಲೋಚನೆಗಳು ಕವಿತೆಯಾಗಿ ಮೂಡಿವೆ.

ಚಂಡ ಶಾಸನ ಕವಿತೆಯಲ್ಲಿ ದೇವರನ್ನೇ ಪ್ರಶ್ನಿಸುತ್ತಾ, ಧಿಕ್ಕರಿಸುವ ಕ್ರಮವಿದೆ ಏಕೆಂದರೆ ಗಂಡಿಗೊಂದು ನೀತಿ, ಹೆಣ್ಣಿಗೊಂದು ನೀತಿ ಬರೆದವನು ನೀನೇ ಅಲ್ಲವೆ! ನೀನೂ ಸಹ ಪುರುಷನಾದ್ದರಿಂದ ಇಂಥ ಸ್ವಾಭಾವಿಕ ಗುಣ ನಿನ್ನಲ್ಲೂ ಮನೆ ಮಾಡಿದೆ ಎಂದು ಬರೆಯುತ್ತಾರೆ.

"ಕಸಕ್ಕಿಂತ ಕಡೆಯಾಯ್ತೆ
ಹೆಣ್ಣು ಜನ್ಮವು ನಿನಗೆ
ಈ ಭಾರ ಹೊರಿಸುವುದಕೆ
ಲಂಚಕೋರನು ನೀನು
ವಂಚನೆಯ ಮಾಡಿರುವೆ
ಮೃದುತನದ ಸ್ತ್ರೀ ವರ್ಗಕೆ
ಗಿಡವೆಂದು ಬಗೆದೆಯೋ
ಹೆಣ್ಣು ಜನ್ಮದ ಒಡಲ
ಫಲಗಳು ಸೃಜಿಸುವುದಕೆ
ಕವಣೆ ಕಲ್ಲೊ ನಿನ್ನ
ಮಾನಸವು ಎಲೆದೇವ
ಈ ಕ್ರಮಕೆ ಸ್ತ್ರೀವರ್ಗಕೆ" ೫

ಜೈವಿಕ ವರ್ಗದ ಬದಲಾವಣೆಯನ್ನು, ಪುರುಷ ವರ್ಗ ಹೇರಿದ ಬಲವಂತದ ಮಿಥ್ ಅನ್ನು ಒಡೆಯುವ ಪ್ರಯತ್ನವಿದೆ. ತಾಯ್ತನ ಹೆಣ್ಣಿನ ಸಹಜ ಕ್ರಿಯೆ. ಇದನ್ನೇ ಸಮಾಜ ಅವಳ ಆಯ್ಕೆಗೂ ಕಡಿವಾಣ ಹಾಕುವ ಕ್ರಿಯೆ ಇದೆಯಲ್ಲಾ, ಇದು ಖಂಡನೀಯ ಎಂಬುದನ್ನು ಕವಿತೆಯ ಮುಖಾಂತರ ಧ್ವನಿಸುತ್ತಾರೆ. ಆ ಕಾಲದಲ್ಲೇ ಇಂತಹ ಆಲೋಚನೆ ಕವಯಿತ್ರಿಗೆ ಮೂಡಿದೆ ಎಂದರೆ, ಹೆಣ್ಣಿನ ಜೈವಿಕತೆಯ ಮೇಲಾಗುವ ದೌರ್ಜನ್ಯ, ತಾಯ್ತನ ರೂಪದ ಕ್ರೌರ್ಯತೆಯ ಕರಾಳ ಮುಖವನ್ನು ಬಿಚ್ಚಿಡುತ್ತದೆ. ಸಾಮಾಜಿಕ ಆಯಾಮ ಪಡೆದ ತಾಯ್ತನವೂ ಹೆಣ್ಣಿನ ಸ್ವತಂತ್ರ ಆಯ್ಕೆಗೆ ಸಂಬಂಧಿಸಿದ್ದೆಂಬುದನ್ನು ತಿಳಿಸುತ್ತದೆ. ಹೆಣ್ಣಿನ ಅಭಿವ್ಯಕ್ತಿ ಮಾಧ್ಯಮ ತಾಯ್ತನದ ಆಯ್ಕೆಯ ಬಗ್ಗೆ ಸ್ಪಷ್ಟರೂಪವನ್ನು ಕವಿತೆ ಕಟ್ಟಿಕೊಡುತ್ತದೆ. ಇಷ್ಟಕ್ಕೇ ನಿಲ್ಲದೆ ಕವಿತೆಯಲ್ಲಿ ಬಲವಂತದ ಹೇರಿಕೆಗಿಂತ ಸಹಜ ತಾಯ್ತನದ ಬಯಕೆ ಸಾರ್ಥಕ ಪಡೆದುಕೊಳ್ಳುವುದನ್ನೂ ಚಿತ್ರಿಸುತ್ತದೆ.

"ಕಾಯಗಳ ಬಿಟ್ಟೊಡನೆ
ಸಗ್ಗ ದೊರೆಯುವುದೆಂಬ
ಕಥೆಯೊಳುಂಟೆ ಮುಕ್ತಿಯು?
ಹೆಣ್ತನದಿ ತುಂಬಿರುವ
ಮುಕ್ತಿ ಪಥವೇ ಸಾಕು
ಮತ್ತೊಂದ ಬಯಸಲೇಕೆ" ೬

ಪುರುಷ ಪ್ರಧಾನ ಸಮಾಜ ಬಯಸುವ 'ಗಂಡು ಸಂತಾನ'ದ ಬಯಕೆಗೆ ತಿರುಗೇಟು ನೀಡಿದ್ದಾರೆ. ಈ ಕವಿತೆ 'ಹೆಣ್ತನವೇ ಸಾರ್ಥಕ'ವೆಂಬ ಘೋಷ ವಾಕ್ಯದಂತಿದೆ. ಹೆಣ್ಣಿನ ಮಿತಿ ಎಂದು ಹೇಳುವ ಜೈವಿಕ ತಾಯ್ತನವನ್ನೇ ಇದೇ ಅಂತಿಮ ಸತ್ಯ ! ಎಂದು ಹೇಳುವ ವಿಚಾರ ಇಡೀ ಹೆಣ್ತನದ ಅಭಿವ್ಯಕ್ತಿ ಮಾಧ್ಯಮಕ್ಕೆ ಹಿಡಿದ ಕನ್ನಡಿ ಎನ್ನಬಹುದು.

ಹೆಣ್ಣು ಕೇವಲ ಅಡುಗೆ ಮನೆ ವಸ್ತುವಲ್ಲ, ಸಮಾಜದ ಬಗೆಗೂ ಅವಳಿಗೆ ಕಾಳಜಿ ಇದೆ ಎಂಬ ಅಂಶಗಳು ಜಾನಕಮ್ಮನವರ ಸಾಹಿತ್ಯದಲ್ಲಡಗಿವೆ. ಸ್ವಾತಂತ್ರ್ಯ ಚಳುವಳಿಯ ಕಾಲಘಟ್ಟದಲ್ಲಿ ಪ್ರತಿ ಮಂದಿಗೂ ಸ್ವಾತಂತ್ರ್ಯದ ಕಿಚ್ಚು ಹೇಗೆ ಆತ್ಮಾಭಿಮಾನವಾಗಿತ್ತೆಂಬುದು ಕವಿತೆಯಲ್ಲಿದೆ.

"ನಮ್ಮೀ ದೇಶವು ದಾಸ್ಯದ ಹೊರೆಯನು
ಇಳುಹಿದ ಶುಭ ದಿನವು
ಭಾರತ ಧ್ವಜವನು ಧೀರ ಮಹಾತ್ಮನು
ಎತ್ತಿದ ಈ ದಿನವು
ಮೀರಿದ ಸಾಹಸದಿಂದಲಿ ಫಲಿಸಿದ
ಸ್ವಾತಂತ್ರ್ಯದ ದಿನವು" ೭

ಆಗಸ್ಟ್ ೧೫,೧೯೪೭ರ ಸ್ವಾತಂತ್ರ್ಯ ಕುರಿತ ಸಡಗರವಿದೆ. ಮನೆ, ಸಂಸಾರ, ಮಕ್ಕಳಿಗೆ ಸೀಮಿತವಾದ ಬದುಕಿನಲ್ಲೂ, ಅವರಿವರಿಂದ ಕೇಳಿದ ಸ್ವಾತಂತ್ರ್ಯದ ಕಿಚ್ಚಿನ ಮಹತ್ವವನ್ನು ಬರಹ ರೂಪಗೊಳಿಸಿದರು. ಹೆಣ್ಣಿನ ಮನಸ್ಥಿತಿ ಕೇವಲ ಸಂಸಾರಕ್ಕೆ ಮಾತ್ರ ಸೀಮಿತವಲ್ಲ, ದೇಶದ ಒಳತಿಗೂ ಎಂಬುದನ್ನು ಕವಯಿತ್ರಿ ನಿರೂಪಿಸಿದ್ದಾರೆ. ಈ ಕವಿತೆಯಲ್ಲಿ ಹೆಚ್ಚು ಭಾವುಕತೆ ಅಡಗಿದೆ ಅಂದರೆ ಬಂಧನದಿಂದ ಬಿಡಿಸಿಕೊಂಡಾಗ ಉಂಟಾಗುವ ಸಂತಸ ಈ ಕವಿತೆಯಲ್ಲಡಗಿದೆ ಓದು ಬರಹದ ಪರಿಪೂರ್ಣತೆಯ ಅರಿವಿಲ್ಲದಿದ್ದರೂ, ಬರವಣಿಗೆಯನ್ನು ಸೃಜಿಸಿಕೊಂಡು ಸರಳತೆಯಲ್ಲಿಯೇ ಕವಿತೆ ಕಟ್ಟುವ ಪರಿಣಿತಿ ಪಡೆದವರು ಜಾನಕಮ್ಮ. ಇವರ 'ಕಲ್ಯಾಣ' ಎಂಬ ಸಮಗ್ರ ಕವನ ಸಂಕಲನದಲ್ಲಿ ಕಂಡುಬರುವ ಅಂಶಗಳನ್ನು ಈ ರೀತಿ ಕ್ರೂಢೀಕರಿಸಬಹುದು. ಭಕ್ತಿ, ನಾಡು ನುಡಿಯ ಚಿಂತನೆ, ವ್ಯಕ್ತಿಚಿತ್ರ, ಸ್ತ್ರೀ ಪ್ರಜ್ಞೆ, ದೇಶಾಭಿಮಾನ, ಪ್ರಕೃತಿ ಮುಂತಾದ ಅಂಶಗಳನ್ನೊಳಗೊಂಡಿವೆ. ಒಟ್ಟಾರೆಯಾಗಿ ಸರಳತೆಯಲ್ಲಿಯೇ ಕಾವ್ಯದ ಗಟ್ಟಿ ಜಾಡನ್ನು ಹಿಡಿದ ಮೊದಲ ತಲೆಮಾರಿನ ಕವಯಿತ್ರಿಯಾಗಿ ಜಾನಕಮ್ಮನವರನ್ನು ನೋಡಬಹುದು.

ದುಡಿಮೆ ಎಂಬುದು ಇಂದು ಹೆಣ್ಣಿಗೆ ಮಾನದಂಡವಾಗಿ ಪರಿಣಮಿಸುತ್ತಿದೆ. ಸಂಸಾರ ನೌಕೆಯ ಹಿಡಿತ ಗಂಡಿನದೆನ್ನುವ ಕಾಲ ದೂರವಾಗಿ ದುಡಿವ ಹೆಣ್ಣಿಗೆ ಹೆಚ್ಚಿನ ಆದ್ಯತೆ ಸಿಗುತ್ತಿದೆ. ಇವು ಮಹಿಳಾ ಪರ ಕಾಳಜಿಯ ಮಾತುಗಳಲ್ಲ. ಬದಲಿಗೆ ಪುರುಷನ ಅಭದ್ರತೆಯ ಸಂಸಾರಕ್ಕೆ ಇದು ಠೇವಣಿ ರೂಪವಷ್ಟೆ. ಇದೆಲ್ಲವೂ ಬದಲಾಗಬೇಕೆಂದರೆ ಕಲಿತು, ದುಡಿವ ಮಹಿಳೆ ತನ್ನ ಅರಿವಿನ ಮಟ್ಟವನ್ನು ವಿಸ್ತರಿಸಿಕೊಂಡು ಕೌಟುಂಬಿಕ ವ್ಯವಸ್ಥೆಯ ಸಂಪ್ರದಾಯ ಮನಸ್ಥಿತಿಗಳನ್ನು ಮುರಿದು ಎಚ್ಚರದ ಸಾಮುದಾಯಕ ಪ್ರಜ್ಞೆಯನ್ನು ರೂಢಿಸುವಂತಾಗಬೇಕು. ತನ್ನ ದುಡಿಮೆಯೇ ಅವಳಿಗೆ ಶೋಷಣೆಯ ಸಾಧನವಾಗಬಾರದು. ಇಂದು ಮಹಿಳೆ ಜಾಗೃತಳಾಗಿದ್ದರೂ ಸಮಾಜದ ಸವಲತ್ತನ್ನು ಪಡೆಯುವಲ್ಲಿ ವಿಫಲಳಾಗುತ್ತಿದ್ದಾಳೆ. ಏಕೆಂದರೆ ಪುರುಷ ಪ್ರಜ್ಞೆಯ ನೆಲೆಯಲ್ಲಿಯೇ ಬದುಕನ್ನು ಕಟ್ಟಿಕೊಳ್ಳುವ ಗುಣ ಶೇಕಡಾ ೭೦%ರಷ್ಟು ಮಹಿಳೆಯಾಗಿರುವ ಕಾರಣ ಎಲ್ಲವನ್ನೂ ವಿಧಿಬರಹ ಎಂದು ನಂಬುವುದೇ ಜಾಸ್ತಿ.

೬.೪ ಮಹಿಳಾ ಕಾವ್ಯ: ಸಾಮಾಜಿಕ ನೆಲೆಯ ಚಿಂತನೆಗಳು

ಮಹಿಳೆ ಮತ್ತು ಸಾಹಿತ್ಯವನ್ನು ಕುರಿತಂತೆ ಆಡ್ರಿನ್ ಮ್ಯೂನಿಕ್ ಹೇಳುವಂತೆ

"ಒಂದು ಸಾಹಿತ್ಯ ಪಠ್ಯವನ್ನು ರಚಿಸಿದ್ದು ಸ್ತ್ರೀಯಾಗಿರಲಿ, ಪುರುಷನಾಗಿರಲಿ, ಆ ಸಾಹಿತ್ಯದ ಪರಂಪರೆಯಲ್ಲಿ ಪುರುಷನೇ ಕ್ರಿಯಾ ನಾಯಕ ಮತ್ತು ಮಹಿಳೆ ಅವನಿಗೆ ವಸ್ತುವಾಗಿರುವ ಉದಾಹರಣೆ ಎಲ್ಲಾ ಕಡೆ ಸಮಾನವಾಗಿ ಕಂಡುಬರುವುದಿಲ್ಲ. ಬದಲಾಗಿ ಆ ಪರಂಪರೆಯಲ್ಲಿ ಎರಡು ಲಿಂಗಗಳ, ಲಿಂಗತ್ವಗಳ ಹಾಗೂ ಸಾಮಾನ್ಯ ಮಾನವ ಕುಲದ ನಡುವಿನ ಘರ್ಷಣೆ, ತಾಕಲಾಟಗಳ ಮೌಲಿಕ ದಾಖಲೆಗಳಾಗಿರುತ್ತದೆ. ಈ

ಪಠ್ಯಗಳು ಸಂಸ್ಕೃತಿ ಕುರಿತ ಕ್ರಿಯಾ ನಿರತ ಮಿಥ್‌ಗಳನ್ನು ತಲುಪಿಸುತ್ತಿರುತ್ತವೆ. ಅವುಗಳನ್ನು ಬರೀ ಪುರಾಣಗಳೆಂದು ಓದದೇ ಅವುಗಳೇ ನೀತಿ ಕತೆಗಳೆಂಬಂತೆ ಓದುವುದಾದರೆ ಅದು ನಮ್ಮದೇ ತಪ್ಪು"[೮] ಎಂದಿದ್ದಾರೆ.

ಈ ಮಾತುಗಳು ಮಹಿಳೆಯು ಸಾಹಿತ್ಯದಿಂದ ಹೊರತಲ್ಲ, ಅವನದೇ ಚರಿತ್ರೆ ಎಂಬಂತೆ ಕಂಡುಬಂದರೂ, ಚರಿತ್ರೆಯಲ್ಲಿ ಹೆಣ್ಣನ್ನು ದೂರವಿರಿಸುವ ಕ್ರಿಯೆ ನಡೆಯಿತೆ ವಿನಃ ಅದೃಷ್ಯಗೊಳಿಸಲು ಸಾಧ್ಯವಾಗಲೇ ಇಲ್ಲ. ಪುರುಷ ನಿರ್ಮಾಣವೇ ಚರಿತ್ರೆ, ಮಹಿಳೆಯದ್ದಲ್ಲ ಎಂಬುದು ಅಹಮಿಕೆಯ ಅತಿರೇಖ. ಪುರುಷರು ಹೆಣ್ಣಿನ ಅಸ್ತಿತ್ವಕ್ಕೆ ಒಂದು ಮಾದರಿ ಕೊಡುತ್ತಾ ಬಂದಿರುವುದು ಸ್ವ ಹಿತಾಸಕ್ತಿಯ ಮಾರ್ಗವಾಗಿಯೆ.

ಹೆಣ್ಣಿಗೆ ಅಕ್ಷರ ಜ್ಞಾನವಿಲ್ಲದಾಗಲೂ ಭಾಷೆಯ ಮೂಲಕ ಅನುಭವವನ್ನು ಹಂಚಿಕೊಳ್ಳುವ ಕಾಲವೊಂದಿತ್ತು. ದಿನನಿತ್ಯದ ದುಡಿಮೆಯಲ್ಲಿಯೂ ಪದಗಳನ್ನು ಕಟ್ಟುವ ಕ್ರಿಯೆಯನ್ನು ರೂಢಿಸಿಕೊಂಡಿದ್ದಳು. ಕಾಲ ಬದಲಾದಂತೆ ದುಡಿವ ಹೆಣ್ಣಿನ ಮನಸ್ಥಿತಿಯೂ ಬದಲಾಯಿತು. ಇಪ್ಪತ್ತನೆಯ ಶತಮಾನದ ಕೊನೆ ಎರಡು ದಶಕಗಳಲ್ಲಿ ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕವಾದ ಕ್ರಾಂತಿಗಳಾಗಲು ಕಾರಣವಾಯಿತು. ಮಹಿಳಾ ಚಳುವಳಿ ಮತ್ತು ಸ್ತ್ರೀವಾದಿ ತಾತ್ವಿಕ ದೃಷ್ಟಿಕೋನಗಳು 'ಮಹಿಳಾ ಸಾಹಿತ್ಯ' ಎಂಬ ಪ್ರತ್ಯೇಕತೆಗೆ ಒಳಗು ಮಾಡಿತು. ಇದರಿಂದ ಕಾವ್ಯ ಮಾಧ್ಯಮ ಹೊಸ ಮಾರ್ಗವನ್ನು ಅನುಸರಿಸಿತು. ಮನುಸ್ಮೃತಿಯಲ್ಲಿ ಬರುವ

"ಪಿತಾರಕ್ಷತಿ ಕೌಮಾರ್ಯೇ ಭತ್ಯಾರಕ್ಷತಿ ಯೌವ್ವನೇ
ರಕ್ಷಂತಿ ಸ್ಥಾವರೇ ಪುತ್ರಾಃ ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ"[೯]

ಎಂಬ ಮಾತು ಹೆಣ್ಣಿನ ಮೇಲಿನ ನಿರಂತರ ಶೋಷಣೆಯ ಪ್ರತೀಕ. ಹೆಣ್ಣಿನ ಮೇಲಿನ ಅಧಿಕಾರದ ಯಜಮಾನಿಕೆ ಅವನದೇ ಆಗಿರುತ್ತದೆ. ಲಿಂಗ ಬೇಧ ನೀತಿಯ ಬಗ್ಗೆ ಜನಪದ ಸಾಹಿತ್ಯದಲ್ಲಿ ಹಲವು ಪದಗಳು ರಚಿತವಾಗಿವೆ. ಹೆಣ್ಣಿನ ಜನ್ಮ ಇಡೀ ಕುಲಕ್ಕೇ ಬೇಸರವೆಂಬಂತೆ ಕಂಡುಬಂದಿದೆ. ಹೆಣ್ಣಿನ ಗೋಳಿಗೆ ಕೊನೆಯಿಲ್ಲ, ಹೆಣ್ಣಾಗಿ ಬಾಳ ಹೊರಬೇಡ, ನಾ ಹುಟ್ಟಿದ ಮನೆಗೆ ಎರವಾದೆ, ಹೆಣ್ಣು ಹುಟ್ಟಿದ ಮನೆ ಹೆಗ್ಗಣ್ಣಹತ್ತಿದಾಂಗ ಎಂಬ ಮಾತುಗಳು ಇಡೀ ಸಮುದಾಯದ ನೋವನ್ನು ಪ್ರತಿನಿಧಿಸುವಂತವು.

ಮಹಿಳಾ ಸಾಹಿತ್ಯ ಕುರಿತಂತೆ ತನ್ನ ಅಭಿವ್ಯಕ್ತಿಯನ್ನು ವ್ಯಕ್ತಗೊಳಿಸಿದವರಲ್ಲಿ ನಂಜನಗೂಡು ತಿರುಮಲಾಂಬ ಪ್ರಮುಖರು.

"ಸ್ತ್ರೀ ಸ್ವಭಾವ, ಗುಣಾವಗುಣ, ಹಿತಾಸಕ್ತಿಗಳನ್ನು ಪುರುಷರೇ ತೀರ್ಮಾನಿಸುತ್ತಾ ಬಂದಿದ್ದಾರೆ. ಇದರಿಂದ ಸ್ತ್ರೀಯರ ಬುದ್ಧಿ ಅಂತಃಕರಣಗಳು, ಸಾವಿರಾರು ವರ್ಷಗಳ ಸಂಸ್ಕಾರದಿಂದ ಹೇಗೆ ರಚಿತವಾಗಿವೆ ಎಂಬ ಬಗ್ಗೆ ಪುರುಷರ ತಿಳುವಳಿಕೆ ಅಪೂರ್ಣ ವಾದದ್ದಾಗಿದೆ. ಸ್ತ್ರೀಯರ ಬದುಕಿನ ಸಹಜ ಗುರಿ ಏನು, ಅವರಿಗೆ ಎಂತಹ ಶಿಕ್ಷಣ

ಬೇಕು, ಅವರ ಪ್ರಗತಿಗೆ ಇರುವ ಅಡ್ಡಿಗಳನ್ನು ಹೇಗೆ ನಿವಾರಿಸಬೇಕು ಎಂಬುದನ್ನು ಸ್ತ್ರೀಯರು ಚರ್ಚಿಸಬಲ್ಲರು" [೧೦] ಎಂದಿದ್ದಾರೆ.

ಈ ಮಾತುಗಳು ಹೆಣ್ಣಿನ ಅಭಿವ್ಯಕ್ತಿ ನೆಲೆಯ ಸತ್ವವನ್ನು ಎತ್ತಿ ತೋರಿಸುವಂತದ್ದು. ಅವನ ಇತಿಹಾಸದಿಂದ ದೂರ ಸರಿದು, ಅವಳ ಇತಿಹಾಸವನ್ನು ಸೃಷ್ಠಿಸುವ ತಾಕತ್ತು ಹೆಣ್ಣಿಗಿದೆ ಎಂಬುದನ್ನು ಕವಯಿತ್ರಿ ಒತ್ತಿ ಹೇಳಿದ್ದಾರೆ. ಪಿ.ಚಂದ್ರಿಕಾರವರ 'ನಿಮ್ಮ ಚರಿತ್ರೆಯಲ್ಲಿ ನಮಗೆ ಜಾಗವಿಲ್ಲ' ಎಂಬ ಮಾತುಗಳು ಪುರುಷ ನಿರ್ಮಿತ ಮೌಲ್ಯಗಳ ಒಡೆಯುವಿಕೆಯ ಆಯುಧವಿದ್ದಂತೆ. ದುಡಿವ ಮಹಿಳೆಯಲ್ಲಿಂದು ಬದಲಾವಣೆಯ ಅಗತ್ಯವಿದೆ. ಬದಲಾವಣೆ ಎಂದರೆ ಆರ್ಥಿಕ ಸ್ವಾತಂತ್ರ್ಯವಲ್ಲ, ಆಲೋಚನೆಯ ಸ್ವಾತಂತ್ರ್ಯವೂ ಅಗತ್ಯವಾಗಿರಲೇಬೇಕು. ಪುರುಷ ಸ್ಥಾಪಿತ ಮೌಲ್ಯಗಳಿಂದ ನೀಡಿದ ಶಿಕ್ಷಣಕ್ಕೆ ಒಳಗಾದ ಹೆಣ್ಣು ವ್ಯವಸ್ಥೆಯ ರೂಪಕ್ಕೆ ಪ್ರತಿರೂಪವಾಗುತ್ತಾಳೆ. ಸಾಮಾಜಿಕ ಹಸಿವು ಜಾಗೃತವಾದಾಗ ಮಾತ್ರ ತನ್ನ ತನದ ವಾಸ್ತವತೆಯನ್ನು ಅವಳು ಕಂಡುಕೊಳ್ಳಲು ಸಾಧ್ಯ.

ದುಡಿವ ಮಹಿಳೆಯರಲ್ಲಿಂದು ಜರೂರಾಗಿ ಆಗಬೇಕಾದದ್ದು ವೈಚಾರಿಕ ಜಾಗೃತಿ ಮತ್ತು ವೈಜ್ಞಾನಿಕ ಪ್ರಜ್ಞೆಯ ಸಾಕಾರ, ಇದು ಪ್ರತಿಯೊಬ್ಬರ ಅರಿವಿನಿಂದ ಬರುವಂತದ್ದು. ಈ ಅರಿವನ್ನು ಮಹಿಳೆ ತನ್ನದೆಂದು ಸ್ವೀಕರಿಸಿ ಅಭಿವ್ಯಕ್ತಿಸುವ ನೆಲೆ ಇಲ್ಲವಾದಾಗ ಮಾತ್ರ ತನ್ನ ತನದ ಹುಟ್ಟು ಜಾಗೃತಗೊಳ್ಳುತ್ತದೆ. ಅಂದರೆ ಪಶ್ಚಿಮದಲ್ಲಿ ಪ್ರಾರಂಭವಾದ ಮಹಿಳಾ ಜಾಗೃತಿ ಆಂದೋಲನದ ಸ್ಪಷ್ಟತೆಯ ಅರಿವು ನಮಗಿರಬೇಕು. ನಮ್ಮ ಶೈಕ್ಷಣಿಕ ಧೋರಣೆ ಮಹಿಳಾ ಸಮಾನತೆಯ ಜೊತೆಗೆ ಆಮೂಲಾಗ್ರ ಬದಲಾವಣೆಯಿಂದಾಗುವ ಸಮಾನತೆಯನ್ನು ಕಂಡುಕೊಳ್ಳುವ ತುರ್ತು ನಮಗೆ ಅತ್ಯಗತ್ಯವಾದುದು.ಹೆಣ್ಣನ್ನು ನಾವು ಗ್ರಹಿಸುವಾಗ ಒಂದು ಸಂಸ್ಕೃತಿಯ ನೆಲೆಗಟ್ಟಿನಲ್ಲಿ ನೋಡಬೇಕು. ವಯಕ್ತಿಕ ನೆಲೆಯಲ್ಲಿ ನೋಡಿದಾಗ ಅಲ್ಲಿ ಅವಳ ಸ್ವಾರ್ಥವೇ ಮೇಲುಗೈ ಸಾಧಿಸುತ್ತದೆ. ಇಲ್ಲಿ ಸ್ತ್ರೀ ಪುರುಷನ ನಡುವಿನ ರಿಯಾಯಿತಿಗಿಂತ ಸಮಾನತೆಯ ಹಾದಿ ಕಂಡುಕೊಳ್ಳುವುದು ಬಹುಮುಖ್ಯ ಅಂಶ. "ಮಹಿಳೆಯನ್ನು ಕೇವಲ ಸಂತಾನೋತ್ಪತ್ತಿಯ ಜೈವಿಕ ಯಂತ್ರಗಳೆಂಬ ಘೋರತ್ವದಿಂದ ಮುಕ್ತರನ್ನಾಗಿಸುವುದು ಮತ್ತು ಮಗುವನ್ನು ಹೊತ್ತು, ಹೆತ್ತು, ಸಾಕುವ ಕೆಲಸವನ್ನು ಗಂಡು ಹೆಣ್ಣುಗಳಿಬ್ಬರೂ ಸೇರಿದಂತೆ ಇಡೀ ಸಮಾಜವು ಭರಿಸುವಂತೆ ಮಾಡುವುದು" [೧೧] ಎಂಬ ವಿಷಯ ಸಾರ್ವತ್ರಿಕವಾಗಿ ಮನಗಂಡಾಗ ಮಾತ್ರ ಸಮಾನತೆ ಎಂಬ ಪದಕ್ಕೆ ಮತ್ತೆ ಮತ್ತೆ ಅರ್ಥಕೊಡುವ ಅಗತ್ಯವಿರುವುದಿಲ್ಲ.

ಪುರುಷ ಪ್ರಧಾನ ವ್ಯವಸ್ಥೆಗೂ, ಸಾಹಿತ್ಯ ಪರಂಪರೆಗೂ ಇರುವ ವಯಕ್ತಿಕ ಹಿತಾಸಕ್ತಿಯ ವ್ಯಕ್ತಿಗತ ಸಂಬಂಧವನ್ನು 'ಸ್ತ್ರೀವಾದಿ ಸಾಹಿತ್ಯ' ವಿರೋಧಿಸುತ್ತದೆ. ಇದರ ಪ್ರತಿಫಲವೇ ಮಹಿಳಾ ಕಾವ್ಯವೆನ್ನಬಹುದು. ಇಷ್ಟೆಲ್ಲಾ ವ್ಯಾಖ್ಯಾನಗಳನ್ನು ಕೊಟ್ಟರೂ ಮಹಿಳಾ ಸಾಹಿತ್ಯವೆಂಬ ಪ್ರತ್ಯೇಕ ಅಧ್ಯಯನ ಬೇಕೆ? ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಹೌದು ಏಕೆಂದರೆ,

ಹಿಂದಿನಿಂದಲೂ ದಮನಿತಳಾಗಿ, ಸಾಹಿತ್ಯದಲ್ಲಿ ಮೂಡಿಬಂದ, ಸಾಮಾಜಿಕವಾಗಿ ಅನಾವರಣಗೊಂಡ ಸ್ಥಾಪಿತ ಸ್ತ್ರೀ ಚಿತ್ರಣವನ್ನು ಒಡೆದು ಹೊಸದನ್ನು ಕಟ್ಟುವ ಕೆಲಸ ಆಗಬೇಕಿದೆ. ಈ ನಿಟ್ಟಿನಲ್ಲಿ ಮಹಿಳಾ ಸಾಹಿತ್ಯ ಹೊಸದೊಂದು ಬಗೆಯ ಆಲೋಚನೆಗೆ ಒಳಗು ಮಾಡುವುದರಿಂದ ಹೆಣ್ಣೇ ಹೆಣ್ಣಿನ ಅಭಿವ್ಯಕ್ತಿಯನ್ನು ಪುನರ್ ಸ್ಥಾಪಿಸುವ ಕೆಲಸ ಆಗಬೇಕಿದೆ. ಇದನ್ನು ಇಂದಿನ ಮಹಿಳಾ ಸಾಹಿತ್ಯ ಮೈಗೂಡಿಸಿಕೊಂಡಿದೆ.

ಚರಿತ್ರೆಯಲ್ಲಿ ಮರೆತು ಹೋದ ಎಷ್ಟೋ ಪಾತ್ರಗಳನ್ನು ಪರಿಶೀಲಿಸಿ ಸಾಂಸ್ಕೃತಿಕ ಮಹತ್ವವನ್ನು ಒದಗಿಸಿಕೊಟ್ಟ ಕೀರ್ತಿ ಮಹಿಳಾ ಕಾವ್ಯಕ್ಕಿದೆ. ರಾಮಾಯಣ, ಮಹಾಭಾರತಗಳಲ್ಲಿ ಬರುವ ಮುಖ್ಯ ಸ್ತ್ರೀ ಪಾತ್ರಗಳನ್ನು ಪುರಾಣಗಳ ಗೋಜಲಿನಿಂದ ಹೊರಕ್ಕೆಳೆದು ವಾಸ್ತವದ ಸಾಮಾಜಿಕ ಅರಿವಿನ ಕಡೆಗೆ ಸೆಳೆಯುವ ಕ್ರಿಯೆಯನ್ನು ಮಹಿಳಾ ಕಾವ್ಯ ಮಾಡಿದೆ. ಇಲ್ಲಿ ಪಾತ್ರಗಳ ವೈಭವೀಕರಣಕ್ಕಿಂತ ಹೆಣ್ಣಿನ ಸಹಜಾಭಿವ್ಯಕ್ತಿಯ ಮೂಲ ನೆಲೆಯನ್ನು ಕಂಡುಕೊಳ್ಳುವುದು ಬಹುಮುಖ್ಯ ಸಂಗತಿ. ಇದೇ ಮುರಿದು ಕಟ್ಟುವ ಕೆಲಸ. ಅಂದರೆ ಹಳೆಯ ತಲೆಮಾರಿನ ಲೇಖಕಿಯರ ಬರಹಗಳನ್ನು ಪುನರ್ ವ್ಯಾಖ್ಯಾನಿಸುವ, ವಿಮರ್ಶಿಸಿ ದಾಖಲಿಸುವ ಪ್ರಯತ್ನ ಮಹಿಳಾ ಸಾಹಿತ್ಯ ಮಾಡಿದೆ. ಇದಕ್ಕೆ ಮುಖ್ಯ ಕಾರಣ ಪುರುಷ ನಿರ್ಮಿತ ಸ್ತ್ರೀಯ ದಮನಾತ್ಮಕ ಮೌಲ್ಯಗಳನ್ನು ಮುರಿದು, ಮಹಿಳಾ ದೃಷ್ಟಿಕೋನದಲ್ಲಿ ಹೊಸತನ ತರುವ ಕಾರ್ಯವನ್ನು ಮಹಿಳಾ ಕಾವ್ಯ ಮಾಡಿದೆ.

ಉದಾ: ಪ್ರತಿಭಾ ನಂದಕುಮಾರ್, ಲಲಿತಾ ಸಿದ್ದಬಸವಯ್ಯ, ಬಿ.ಟಿ.ಲಲಿತಾನಾಯಕ, ಹೆಚ್.ಎಲ್.ಪುಷ್ಪ, ದು.ಸರಸ್ವತಿ ಮುಂತಾದವರ ಕವಿತೆಗಳಲ್ಲಿ ಈ ಬದಲಾವಣೆಯ ತುಡಿತಗಳನ್ನು ಕಾಣಬಹುದು.

ಸರಸ್ವತಿ ಬಾಯಿ ರಾಜವಾಡೆಯವರು ಹೇಳುವಂತೆ,

"ಸಾಹಿತ್ಯವು ಗಗನವಾಣಿಯಾಗಬಾರದು ಅದು ಜನ ಜೀವನದ ಪ್ರತಿಬಿಂಬ, ಅದು ಜನರ ಪ್ರಗತಿಗೆ ನೆರವಾಗಬೇಕು, ಹಾಗಿರಬೇಕಾದರೆ, ಅವರ ಸ್ವತಂತ್ರಾಭಿಲಾಷೆ, ಕೃಷಿಕೋದ್ಧಾರ ಮೊದಲಾದ ಬಾಳುವೆಯ ಕೂಗುಗಳೇ ಅಲ್ಲಿ ಧ್ವನಿಸುತ್ತಿರಬೇಕು".[೨] ಹೀಗೆ ದೇಸೀ ನೆಲೆಯ ನೈಜ ಸಾಹಿತ್ಯದ ಬಯಕೆ ಮತ್ತು ಮಹತ್ವವನ್ನು ಸರಸ್ವತಿಬಾಯಿರಾಜವಾಡೆಯವರು ಅಭಿವ್ಯಕ್ತ ಪಡಿಸಿದ್ದಾರೆ.

ಶಿಷ್ಟ ಮತ್ತು ಜಾನಪದೀಯ ಅಂಶಗಳು ಮಹಿಳಾ ಕಾವ್ಯದ ಆಕರಗಳು. ಇವುಗಳ ಹಿನ್ನಲೆಯಲ್ಲಿಯೇ ಪುರಾಣ, ಜಾನಪದ ಮತ್ತು ಚರಿತ್ರೆಯಲ್ಲಿನ ಪಾತ್ರಗಳು ಇಂದು ಹೆಚ್ಚು ಪುನರ್ ವಿಮರ್ಶೆಗೊಳಪಡುತ್ತಿರುವುದು ಕಾವ್ಯದ ರೂಪದಲ್ಲಿಯೇ. ಇದು ಕೇವಲ ಒಂದು ತಲೆಮಾರಿನ ಜಾಗೃತ ಪ್ರಜ್ಞೆಯಲ್ಲ, ಸಮಷ್ಟೀ ಪ್ರಜ್ಞೆಯ ಪ್ರತೀಕವೂ ಹೌದು. ಮಹಿಳಾ ಕಾವ್ಯದ ಅಭಿವ್ಯಕ್ತಿಯಲ್ಲಿ ವಾಚ್ಯತೆ ಮುಖ್ಯವಾಗಿ ಕಂಡುಬರುತ್ತದೆ. ಅಭಿವ್ಯಕ್ತಿ

ಮಾರ್ಗ ಯಾವುದಾದರೂ ಸಂವೇದನೆ ಒಂದೇ. ಶ್ರಮ ಸಂಸ್ಕೃತಿಯ ನಿಜ ಸ್ಪರ್ಷವನ್ನು ಬಿ.ಟಿ.ಲಲಿತಾನಾಯಕ್‌ರವರ ಕವಿತೆಗಳಲ್ಲಿ ನೋಡಬಹುದು.

"ತಿನ್ನಲು ಬದನೆ ಹೇಳಲು ಪುರಾಣ
ಎಂದಿದ್ದಲ್ಲವೆ ಶಾಸ್ತ್ರ?
ಸ್ನಾನ ಪೂಜೆ, ಕಾಣಿಕೆ, ವಸೂಲಿ
ಇದ ಹೊರತು, ಮುಟ್ಟಲಿಲ್ಲ ಹಾರೆಗುದ್ದಲಿ
ಉತ್ತಲಿಲ್ಲ, ಬಿತ್ತಲಿಲ್ಲ, ಹನಿಬೆವರು ಹರಿಸಲಿಲ್ಲ
ಜೀತಗೇಯಲಿಲ್ಲ, ನೇಗಿಲು ಹಿಡಿಯಲಿಲ್ಲ
ಕೇರಲಿಲ್ಲ, ತೂರಲಿಲ್ಲ, ಮಣ್ಣು ಹೊತ್ತು ಶ್ರಮಿಸಲಿಲ್ಲ" ೧೩

ಶ್ರಮ ಸಂಸ್ಕೃತಿಯ ಶೋಷಣೆ ನಿರಂತರವಾಗಿರುವುದನ್ನು ಕವಿತೆ ಪ್ರತಿನಿಧಿಸುತ್ತದೆ. ವ್ಯಕ್ತಿಮೂಲ ಸಂವೇದನೆಗಿಂತ, ಜಾತಿ ಮೂಲ ಶೋಷಣೆಗಳು ಜಾಸ್ತಿಯಾದರೆ ಶ್ರಮಕ್ಕಿರುವ ಬೆಲೆ ಹುಸಿ ಪೊಳ್ಳಿನದು. ಪ್ರತಿ ವರ್ಷ ನಿಸರ್ಗದಲ್ಲಿ ಹೊಸ ತನವನ್ನು ಕಂಡುಕೊಳ್ಳುವ ಸಂಸ್ಕೃತಿ, ತಲೆಮಾರಿನಿಂದ ಬಂದ ಸಂಪತ್ತಂತೆ ಕಾಣುವ ಶಾಸ್ತ್ರ, ಶ್ರಮದ ಮುಂದೆ ಗಟ್ಟಿತನ ಪಡೆಯುತ್ತದೆ. ನಾವು ನಂಬಿಕೊಂಡು ಬಂದಿರುವುದು ಇದನ್ನೇ ಎಂಬುದು ಇಲ್ಲಿನ ಅಂಶ. ಇದು ಸಮಾಜದ ವಾಸ್ತವ ಸತ್ಯವನ್ನು ಬಿಚ್ಚಿಡುವ ಸರಳ ಕಾವ್ಯ. ಆದರೆ ವ್ಯವಸ್ಥೆಯ ಕರಾಳತೆಯನ್ನು ನೇರವಾಗಿ ಖಂಡಿಸುವಂತಿದೆ.ಹೆಣ್ಣನ್ನು ಕುರಿತಾದ ಕಲ್ಪನೆ ಮಹಿಳಾ ಕಾವ್ಯದಲ್ಲಿ ಬಹುಮುಖ ಆಯಾಮಗಳನ್ನು ಪಡೆದುಕೊಂಡಿದೆ. ಒಳಗೊಳ್ಳುವಿಕೆಗಿಂತ ತನ್ನ ತನದ ದಾಖಲಾಗಿಯೂ ಕೆಲವು ಕವಿತೆಗಳಿವೆ.

"ಮೈತುಂಬಿ ಮನದುಂಬಿ ಸುತ್ತೆಲ್ಲ ನಲಿವ ಬಿತ್ತುವ
ಚಿತ್ತ ಮೋಹಿನಿಯಾಗು
ಬೇಡ ದೇವಿಯ ಪಟ್ಟನಿನಗೆ
ಬೇಡ ದಾಸಿಯ ಪಟ್ಟ
ಸಾಕು, ಮನುಜರೊಂದಿಗೆ ಬಾಳು ಗೆಳತಿ
ಕೇವಲ ಮನುಷ್ಯಳಾಗಿ" ೧೪

ಸ್ತ್ರೀವಾದದ ಪ್ರಮುಖ ಆಶಯ ಇಲ್ಲಿದೆ. ಹೆಣ್ಣು ರೂಢಿಸಿದ ಗಂಡಿನ ಬಯಕೆಯನ್ನು ನೇರವಾಗಿ ತಿರಸ್ಕರಿಸುವಂತಿದೆ. ಮಾನವೀಯತೆಯನ್ನು ಮರೆ ಮಾಚುವ ದೈವಿಕ ಪಟ್ಟ ಬೇಡ ನಿನಗೆ, ಗಂಡು ಹೆಣ್ಣು ಸಮಾನ ಸ್ಥಿತಿಗಳು ಎಂಬುದನ್ನು ಕವಿತೆ ಹೇಳುತ್ತದೆ. 'ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು' ಎಂಬ ಘೋಷ ವಾಕ್ಯವನ್ನು ಗಂಡು ಹೆಣ್ಣಿನ ಸಮಾನತೆಯ ಹಿನ್ನೆಲೆಯಲ್ಲಿ ಕಂಡುಕೊಳ್ಳುವ ಪ್ರಯತ್ನವೂ ಇಲ್ಲಿದೆ.

ಸಂದರ್ಭದ ಒತ್ತಡಕ್ಕೆ ಸಿಲುಕಿದ ಶ್ರೀರಾಮ ದೈವಾಂಶ ಸಂಭೂತನಾಗಿ ಅಹಲ್ಯೆಗೆ ಶಾಪ ವಿಮೋಚನೆಗೊಳಿಸುತ್ತಾನೆ. ಅದೇ ರಾಮ ಸೀತೆಯನ್ನು ಕಾಡಿಗಟ್ಟುವಾಗ ಅವನಲ್ಲಿ ದೈವಾಂಶ ಗೌಣವಾಗಿ ಗಂಡೇ ಆಗುತ್ತಾನೆ. ಇದಕ್ಕೆ ಶಶಿಕಲಾರವರ ಕವಿತೆ ಉತ್ತಮ ಉದಾಹರಣೆ.

"ಅದೊಂದು ದಿನ ಗೆಳತಿ ಅಂದಳು
ಕಲ್ಲಾದ ಅಹಲ್ಯೆಯ ಮೈಯ ನೇವರಿಸಿ
ಜೀವಸೆಲೆಯೊಡೆಸಿ ಬದುಕನುದ್ಧರಿಸಿದನು
ಶ್ರೀರಾಮ, ಕರುಣಾಸಾಗರ, ಸದ್ಗುಣದಾಗರ,
ಉಘೇ ಉಘೇ ಎಂದಿತು ಜನಸಾಗರ
ಜಗಕ್ಕೆಲ್ಲಾ ಹೆಮ್ಮೆಯೋ ಹೆಮ್ಮೆ,
ಆದರಿನ್ನೊಮ್ಮೆ
ಇದೇ ಮಹಾತುಮ ಉಕ್ಕುವ ಜೀವಗಳನ್ನು ಹೊತ್ತ
ಗರ್ಭಸ್ಥೆ, ಮಂದಸ್ಮಿತೆ
ಜೀವನೋತ್ಸಾಹದಲ್ಲಿ ವಿಜೃಂಭಿಸುವ ಸತಿ ಸೀತೆ
ಯನ್ನು ಕಾಡುಪಾಲಾಗಿಸಿ ಕೈತೊಳೆದನೀ ಸೀತಾರಾಮ
ಕರುಣಾಳು ರಾಘವನಲಿ ತಪ್ಪಿಲ್ಲ
ಎಂದತ್ತಳು ಮಾತೆ ಸೀತೆ ಅಲ್ಲವೇನೆ? "[೧]

ಇಡೀ ರಾಮಾಯಣದ ಕತೆಯನ್ನು ಕವಿತೆ ಕಟ್ಟಿಕೊಡುತ್ತದೆ. ಮೋಕ್ಷ ಕೊಟ್ಟ ರಾಮನಿಗೆ ಗೊತ್ತು ಅಹಲ್ಯೆಯ ತಪ್ಪಿಲ್ಲವೆಂದು, ಆದರೆ ಸದಾ ಕಾಲವೂ ಜೊತೆಗಿದ್ದ ಹೆಂಡತಿಯನ್ನು ದೂರ ಮಾಡಿದ ರಾಮನ ಅವತಾರ ದೈವಿಕ ನೆಲೆ ಪಡೆಯುವುದಿಲ್ಲ, ಅದು ಸಾಮಾನ್ಯ ಪುರುಷವತಾರದಲ್ಲೇ ಕೊನೆಗೊಳ್ಳುತ್ತದೆ. ಕ್ರೌರ್ಯದಲ್ಲೂ ಕರುಣೆಯನ್ನೇ ಹುಡುಕುವ ಹೆಣ್ಣುಗುಣವಿದೆಯಲ್ಲಾ ಇದೇ ಗಂಡನ್ನು ಸಾಕಾರಮೂರ್ತಿಯನ್ನಾಗಿಸುವ ಕ್ರಿಯೆ. ಇಂತಹ ಮೌಲ್ಯಗಳ ಒಡೆಯುವಿಕೆಯನ್ನು ಮಹಿಳಾ ಕಾವ್ಯ ಮಾಡಿದೆ, ಇದು ಪ್ರಸ್ತುತಕ್ಕೆ ಅಗತ್ಯವೂ ಹೌದು.

ಸೃಷ್ಟಿಕರ್ತ ಬ್ರಹ್ಮನನ್ನೇ ಬಯಲಿಗೆಳೆದ ಕವಿತೆಗಳು ನಮ್ಮಲ್ಲಿ ಹಲವಿವೆ. ಪ್ರಶ್ನಿಸುವ, ಪ್ರತಿಭಟಿಸುವ ಒಪ್ಪಿಕೊಳ್ಳುವ, ಅಪ್ಪಿಕೊಳ್ಳುವ ಪ್ರವೃತ್ತಿ ಮಹಿಳಾ ಕಾವ್ಯದ್ದು. ಅದು ಸಂದರ್ಭದ ಒತ್ತಡಕ್ಕೋ, ಬದುಕಿನ ಹೊಂದಾಣಿಕೆಗೋ, ಪತಿಯೇ ಪರ ದೈವವೆಂಬ ಹೆಣ್ಣಿನ ಸ್ಥಿತಿಗೋ ಗೊತ್ತಿಲ್ಲ. ದೇವರು ಮತ್ತು ಹೆಣ್ಣು ಅವಿನಾಭಾವ ಸಂಬಂಧ ಬೆಸೆಯುವ ಕೊಂಡಿಗಳಂತೆ. ಏಕೆಂದರೆ ಅಲ್ಲೂ ಇರುವುದು ಗಂಡೆ.

ಹೆಣ್ಣಾಗಿ ಹುಟ್ಟಿದ್ದಕ್ಕೆ ಕೃತಜ್ಞತಾ ಪೂರಕವಾದ ಕವಿತೆಗಳೂ ನಮ್ಮಲ್ಲಿವೆ. ಲಲಿತಾ ಸಿದ್ದಬಸವಯ್ಯನವರ ಧನ್ಯವಾದ ಕವಿತೆಯಲ್ಲಿ

> "ದೇವರೇ ನಮಗೇ ಗೊತ್ತಿಲ್ಲ ಇದರ ಲಿಪಿ
> ನಮ್ಮ ಅಂಗೈಗಳ ನೇವರಿಕೆಯಲ್ಲಿ
> ನಮ್ಮ ತೋಳುಗಳ ಬಿಗಿ ಮಡಿಕೆಯಲ್ಲಿ
> ನಮ್ಮ ತೊಡೆಗಳು ರಚಿಸುವ ತೊಟ್ಟಿಲತಗ್ಗಿನಲ್ಲಿ
> ನಮ್ಮ ಹಾಲುದುಂಬಿದ ಮೊಲೆಗಳಲ್ಲಿ
> ಅದಕ್ಕೂ ಮೊದಲು ಮಾಂಸ, ಮಟ್ಟಿ ಗರ್ಭಚೀಲದಲ್ಲಿ
> ನಾವುನಿನ್ನನ್ನು ಅನುವಾದಿಸುತ್ತಿರುತ್ತೇವೆ
> ಮೂಲಕ್ಕೆ ಸದಾ ಸನಿಹವಾಗಿ
> ನಿನ್ನ ಆಶಯಗಳಿಗೆ ಸದಾ ಬದ್ಧರಾಗಿ" [೧೬]

ಎಂಬಲ್ಲಿ ಹೆಣ್ಣು ಕೇವಲ ಕಾಮದ ವಸ್ತುವಲ್ಲ. ಅವಳ ದೈಹಿಕ ರಚನೆಯ ಬದಲಾವಣೆಯೇ ಅವಳ ಶಕ್ತಿ. ಸರ್ವಗುಣ ಸಂಪನ್ನೆಯಾದ ಹೆಣ್ಣು, ಗಂಡಿಗೆ ಅವನ ಜೀವನದಲ್ಲಿ ಅವಸ್ಥಾಂತರಗಳ ಬದಲಾವಣೆಯ ಸ್ವಭಾವದವಳಾಗಿದ್ದಾಳೆ. ಇಂತಹ ಹೆಣ್ಣನ್ನು ಸೃಷ್ಟಿಸಿದ ಸೃಷ್ಟಿಕರ್ತನಿಗೆ ಧನ್ಯತೆ ಅರ್ಪಿಸುವ ಭಾವ ಕವಯಿತ್ರಿಯದು. ಕವಿತೆ ಮುಂದುವರೆದು

> "ದೇವರೇ ಧನ್ಯವಾದಗಳು
> ನಮ್ಮನ್ನು ಮಾತ್ರ ನಿನ್ನ ಅನುವಾದಕರಾಗಿ
> ಆಯ್ದು ಕೊಂಡದ್ದಕ್ಕೆ." [೧೬]

ಭೂಮಿಯ ಫಲವತ್ತತೆ ಹೆಣ್ಣಿಗಿದೆ. ಹೆಣ್ಣು ಗಂಡಿಗಿರುವ ಸಾವಯವ ಸಂಬಂಧ ಬದುಕನ್ನು ಹಸನು ಮಾಡುವಂತದ್ದು. ಹೆಣ್ಣು ಕೀಳೆಂದು ನೋಡುವ ಸಮಾಜಕ್ಕೆ ತನ್ನ ಲಿಂಗಾಧಾರಿತ ಬದಲಾವಣೆಯೇ ಶ್ರೇಷ್ಠ ಎಂದು ಹೇಳುವುದಿದೆಯಲ್ಲ ಇದು ಹೆಣ್ಣಿನ ನೈತಿಕ ಸಹಜಾಭಿವ್ಯಕ್ತಿಯನ್ನು ಬಿಂಬಿಸುವ ಕ್ರಮವಾಗಿದೆ. ಕವಿತೆಗಳ ಆಳವಾದ ಅಧ್ಯಯನಕ್ಕಿಳಿದಂತೆಲ್ಲಾ ಪ್ರತಿ ಓದಿಗೂ ಒಂದೇ ಕವಿತೆ ಹಲವು ಆಯಾಮಗಳನ್ನು ಕಟ್ಟಿಕೊಡುತ್ತದೆ. ಹೆಣ್ಣನ್ನು ದ್ವಿತೀಯದರ್ಜೆಯವಳೆಂದು ಕಡೆಗಣಿಸಿದ ಸಮಾಜಕ್ಕೆ ಹೆಣ್ಣೇ ಪ್ರಶ್ನಾತೀತಳಾಗಿ ನಿಲ್ಲುವ ಶಕ್ತಿ ತಂದುಕೊಟ್ಟದ್ದು ಮಹಿಳಾ ಸಾಹಿತ್ಯ. ಇದು ಹೆಚ್ಚು ಸಾಧ್ಯವಾದುದು ಮಹಿಳಾ ಕಾವ್ಯದಲ್ಲಿ.

ಹೆಣ್ಣೊಬ್ಬಳು ಕವಿಯಾದಾಗ ಅವಳ ಬರಹಗಳನ್ನು ಒಪ್ಪಿಕೊಳ್ಳುವ ವ್ಯವಧಾನ ಪುರುಷ ನೆಲೆಯ ಸಾಹಿತ್ಯಕ್ಕಿರಬೇಕಲ್ಲವೆ? ಇದನ್ನೇ ಶಶಿಕಲಾರವರು 'ಹೆಂಗ ಹೇಳಲೇ ಗೆಳತಿ' ಕವನ ಸಂಕಲನದ ಮುನ್ನುಡಿಯಲ್ಲಿ ಚಿತ್ರಿಸಿದ್ದಾರೆ.

ಕವಿತೆಗಳ ಕಂತೆಯನೊಯ್ದು
ವಿಮರ್ಶಕರೇಣ್ಯರಿಗೆ ಕೈಮುಗಿದು ಬೇಡಿದೆ
"ಮಾನ್ಯರೇ ನನ್ನ ಮುಂದಿನ ಸಂಕಲನಕ್ಕೆ
ಮುನ್ನಡಿ ನಿಮ್ಮದೇ ಬೇಕು ದಯಮಾಡಿ ನೀಡಿ"
ಒಹೋ! ಬನ್ನಿ ಬನ್ನಿ ಬಾsssಳ ಸಂತೋಷ
ನಿಮ್ಮ ಪದ್ಯಗಳು ತುಂಬ ಹೃದ್ಯ, ಅಷ್ಟೇ ಸುಲಭವೇದ್ಯ.
ಇತ್ಯಾದಿ ಇತ್ಯಾದಿ ಅವರು ಒತ್ತೊತ್ತಿ ಹೇಳುತ್ತಿರುವಾಗ
ನಾನು ಉಬ್ಬೀ ಉಬ್ಬೀ ಇನ್ನು ಒಡೆಯುವುದೊಂದೇ ಬಾಕಿ
ಅಷ್ಟರಲ್ಲೇ ಪಟಾರೆಂದು ಸಿಡಿಯಿತು, ತುಪಾಕಿ.
"ಆದರೆ ಒಂದೇ ಒಂದು ಕರಾರು"
ಕರಜೋಡಿಸಿ ವರೇಣ್ಯರು ಒರೆದರಿಂತು
"ಇನ್ನು ಮೇಲೆ ನೀವು ಕವಿತೆ ಬರೆದೂ ಬರೆದೂ
ನಮ್ಮ ತಲೆ ಕೊರೆದೂ ಕೊರೆದೂ
ತೂತುಮಾಡದಿದ್ದರೆ ಮಾತ್ರ
ಮುನ್ನುಡಿಯ ಮಾತು "ಏನಂತೀರಿ?"
ನಾನೇನು ಅನ್ನಲಿಲ್ಲ. [೧೮]

ಬರವಣಿಗೆಯಲ್ಲಿ ತೊಡಗಿದ ಹೆಣ್ಣೊಬ್ಬಳ ಸಂಕಷ್ಟದ ಪ್ರತಿರೂಪವಿಲ್ಲಿದೆ. ಕವಿತೆಗಳೆಂದರೆ ಸರಳೀಕರಿಸಿ ನೋಡುವ ಕವಿ, ವಿಮರ್ಶಕ ಮನಸ್ಥಿತಿಯ ಅನಾವರಣವೂ ಆಗಿದೆ. ಮಹಿಳಾ ಸಾಹಿತ್ಯಕ್ಕೆ ಪುರುಷ ವರ್ಗದ ಕವಿ,ವಿಮರ್ಶಕ,ಮುನ್ನುಡಿ,ಬೆನ್ನುಡಿ ಮೆಚ್ಚುಗೆಯ ಮಾತುಗಳ ಅವಶ್ಯಕತೆ ಇದೆಯೆ? ಇಲ್ಲಿ ಪ್ರೋತ್ಸಾಹಕ್ಕಿಂತ ಅಧೀನ ಸಂಸ್ಕೃತಿಯಲ್ಲಿಯೇ ಹೆಣ್ಣನ್ನು ನೋಡುವ ಗಂಡಿನ ಕರಾಳ ಚಿತ್ರಣ ಕವಿತೆಯಲ್ಲಡಗಿದೆ. ಇದರ ನಡುವೆ ಮೌನವಹಿಸುತ್ತಲೇ ನಡೆಸುವ ಪ್ರತಿಭಟನೆಯೂ ಇದೆ.

ಮಹಿಳಾ ಕಾವ್ಯದಲ್ಲಿ ಪುರಾಣ, ಚರಿತ್ರೆಯ ಪಾತ್ರಗಳು ಹಾಸ್ಯ ಮಿಶ್ರಿತ ಬರಹ ರೂಪ ಪಡೆದರೂ ಅಷ್ಟೇ ಗಂಭೀರ ಆಲೋಚನೆಗೆ ಒಳಗು ಮಾಡುತ್ತವೆ ಹಾಗೂ ಚಿಂತನೆಯ ಹೊಸ ದಾರಿಗೆ ನಮ್ಮನ್ನು ಒಡ್ಡುತ್ತವೆ. ರಾಮ ಮರ್ಯಾದಾ ಪುರುಷ, ಆದರ್ಶ ವ್ಯಕ್ತಿ ಎಂದೆಲ್ಲಾ ಕರೆಸಿಕೊಳ್ಳುವುದರ ಹಿಂದೆ ಹೆಣ್ಣಿನ ಮೌನ ಮತ್ತು ತಾಳ್ಮೆ ಅಡಗಿದೆ ಎಂಬುದನ್ನು ಲಲಿತಾರವರ ಕಾವ್ಯದಲ್ಲಿ ನೋಡಬಹುದು.

"ಒಳ ಸುಂಟಿಗಳನ್ನೆಲ್ಲಾ / ತುಟಿ ಎರಡು ಮಾಡದೆ
ನುಂಗಿಕೊಳ್ಳುವ ಸೀತಮ್ಮನಿದ್ದರೆ / ಏಕ ಪತ್ನಿವ್ರತ ಬಿರುದಾಂಕಿತ
ಶ್ರೀರಾಮ ದೇವರು / ಸದಾಭದ್ರ" [೧೯]

ಸೀತೆಯ ನೆಲೆಗಟ್ಟಿನ ಚಿತ್ರಣ ಕವಿತೆಯಲ್ಲಿದೆ. ಹನಿಗವನದ ರೂಪದಲ್ಲಿದ್ದರೂ ಇಡೀ ರಾಮಾಯಣದ ಚಿತ್ರಣವನ್ನು ಪುನರ್ ವಿಮರ್ಶೆ ಮಾಡುತ್ತದೆ. ಪುರುಷ ನಿರ್ಮಿತ ಸ್ತ್ರೀ ಧರ್ಮವನ್ನು ಪಾಲಿಸುವ ಇಂದಿನ ಸ್ತ್ರೀಯರದೂ ಇದೇ ಗತಿ ಎಂಬುದು ಕವಿತೆಯಲ್ಲಿ ಧ್ವನಿಸುವಂತದ್ದು. ಸೀತೆಯ ಚಿತ್ರಣ ಹಲವು ಹೆಸರುಗಳಿಂದ ಮತ್ತೊಂದು ಭಿನ್ನ ನೆಲೆಯನ್ನು ಕಟ್ಟಿಕೊಡುತ್ತದೆ.

"ವೈದೇಹಿಯ / ದೇಹವನು ಒಂದೆರಡುಗಳಿಗೆ
ಬೆಂಕಿಯೊಳು ಹೊಗಿಸಿ / ಪರಿಶುದ್ಧಗೊಳಿಸಿದನೆಂದು
ಆ ಎಳೆ ಚಿತ್ತಕ್ಕೆರಗಿದ / ಅವಮಾನ
ಕಳೆಯುವುದೇನು / ನಿಮ್ಮಪ್ಪನ ಹೊಣೆಯೇ?"[೨೦]

ಇಡೀ ರಾಮಾಯಣದಲ್ಲಿ ಪ್ರತಿ ಸಲವೂ ಕಾಡುವ ಪ್ರಶ್ನೆಯ ಪ್ರತಿರೂಪ ಈ ಸಾಲುಗಳು. ಸಮಾಜದಲ್ಲಿ ಹೆಸರು ಪಡೆಯಲು ಹೋರಾಡಿದ ರಾಮನಿಗೆ ಮನಸ್ಥಿತಿಯ ಅರಿವು ಏಕಾಗಲಿಲ್ಲ? ಆದರ್ಶ ಪುರುಷ, ಮರ್ಯಾದಾ ರಾಮನೆಂದು ಪಟ್ಟ ಕಟ್ಟಿಸಿಕೊಂಡ ರಾಮ ವನವಾಸಕ್ಕೊರಟರೂ ಅವನ ಮನಸ್ಥಿತಿಗಳು ಬದಲಾಗಲೇ ಇಲ್ಲ. ಹೆಣ್ಣು ಕೋಮಲ ಮನಸ್ಸಿನವಳು, ಮೃದುಲೆ ಎನ್ನುವ ಗಂಡಿನ ಹೃದಯ ಕಾಠಿಣ್ಯದಲ್ಲಿ ಎಲ್ಲವನ್ನೂ ಹುದುಗಿಸಿಕೊಳ್ಳುತ್ತದೆ. ಇದು ರಾಮನ ವಿಚಾರದಲ್ಲೂ ಸತ್ಯವಿರಬಹುದು.

ಹೆಣ್ಣಾಗಿ, ಹೆಂಡತಿಯಾಗಿ, ತಾಯಾಗಿ, ಪಟ್ಟದ ರಾಣಿಯಾಗಿ ಕಾಣುವ ಸೀತೆ ಸಾಹಿತ್ಯದಲ್ಲಿ ಮೌನದ ಮಾನದಂಡವಾಗುತ್ತಾಳೆ.

"ಮಣ್ಣಲೇ ಹುಟ್ಟಿ / ಮಣ್ಣಿಗೇ ಮರಳಿದ
ಮಣ್ಣಿನ ಮಗಳು / ಮಹಾರಾಣಿಯಾಗಲೇ ಇಲ್ಲ
ಅಯೋಧ್ಯೆಯಲಿ / ಬೇಡ,
ಹೃದಯ ಸಿಂಹಾಸನದಲ್ಲಿ?" [೨೧]

ಪ್ರಸ್ತುತತೆಗೆ ಹಿಡಿದ ಕನ್ನಡಿ. ರಾಮಾಯಣ ನಡೆದದ್ದು ತ್ರೇತಾಯುಗದಲ್ಲಿ ಈಗ ರಾಮನ ಮಾತೇಕೆ? ಎಂಬ ಪ್ರಶ್ನೆಗಳನ್ನು ಮಹಿಳಾ ಸಾಹಿತ್ಯಲೋಕ ಎದುರಿಸಿದೆ. ಆದರ್ಶ ಪಾಲನೆಗೆ ರಾಮ ಬೇಕು. ಆದರೆ ಚರ್ಚೆಗೆ ರಾಮ ಬೇಡವೆ? ಎಂಬ ಚಿಂತನೆಗೆ ಅವಕಾಶ ಕೊಟ್ಟಿದ್ದು ಮಹಿಳಾ ಸಾಹಿತ್ಯ ಚರಿತ್ರೆ, ಹೆಚ್ಚು ಚರ್ಚೆಗೆ ಗ್ರಾಸವಾದದ್ದು ಮಹಿಳಾ ಕಾವ್ಯದಲ್ಲಿ. ಅಧೀನ ಸಂಸ್ಕೃತಿಯ ಪ್ರತಿನಿಧಿಯಾಗಿ ಕಂಡ ಸೀತೆಯ ಪಾತ್ರವನ್ನು ರಾಮನ ಎದುರು ನಿಲ್ಲುವ ಪ್ರತಿನಿಧಿಯಾಗಿ ಕವಿತೆ ಇದೆ.

ರಾಮಾಯಣದ ಆದಿಯಿಂದ ಅಂತ್ಯದವರೆಗೂ ಸೀತೆ ಸಾಮಾನ್ಯ ಹೆಣ್ಣಾಗಿಯೇ ಬದುಕನ್ನು ಕಂಡುಕೊಳ್ಳುತ್ತಾಳೆ. ಮಹಾಭಾರತದಲ್ಲಿ ಬರುವ ದ್ರೌಪದಿ ಗಟ್ಟಿಗಿತ್ತಿ ಹೆಣ್ಣಾದರೆ,

ರಾಮಾಯಣದ ಸೀತೆ ಒಪ್ಪಿತ ಸಮಾಜದ ಅನುಸರಣೀಯ ಮಾರ್ಗದ ಪ್ರತಿರೂಪ. ಈ ಎರಡು ಪ್ರತಿಮೆಗಳು ಮಹಿಳಾ ಕಾವ್ಯದ ಮೂಲಕ ನೋಡ ಹೊರಟಾಗ ನಮ್ಮದೇ ಹೆಣ್ಣುಗಳ ಚಿತ್ರಣ ಕಣ್ಮುಂದೆ ಬರುತ್ತದೆ. ಆದ್ದರಿಂದಲೇ ಪುರಾಣದ ಪಾತ್ರಗಳು ಅಭಿವ್ಯಕ್ತಿಯ ರೂಪ ಪಡೆಯುವಲ್ಲಿ ಯಶಸ್ವಿಯಾಗಿವೆ.

ಪುರಾಣದಲ್ಲಿ ವಿರಾಜಮಾನರಾಗಿ ವಿಹರಿಸುವ ಆರಾಧಿಸುವ ಗಂಡು ಪಾತ್ರಗಳು ಕಾವ್ಯದಲ್ಲಿ ವಿಡಂಬನಾತ್ಮಕ ನೆಲೆಯಲ್ಲಿಯೂ ನಿಲ್ಲುತ್ತವೆ.

"ಮದುವೆಯಿಲ್ಲ / ಮಕ್ಕಳಿಲ್ಲ
ಆಜನ್ಮ ಬ್ರಹ್ಮಚಾರಿ ಹನುಮಂತನ / ಹೆಗಲೇರಿತು
ಕಂಡವರ ಹೆಂಡಿರನ್ನು / ಹುಡುಕಾಡುವ
ಕರ್ಮ!" ೨೨

ಪದಗಳು ಸರಳವಾದರೂ ಅರ್ಥದ ಸಾಂದ್ರತೆ ಹೆಚ್ಚು. ರಾಮನ ಆಜ್ಞಾ ಪಾಲನೆಯಲ್ಲಿಯೇ ಜೀವನ ಕಳೆಯುವ ಹನುಮಂತ ಸೇವಕನ ಪಾತ್ರಧಾರಿ ಇಂದಿಗೂ ಇಂತಹ ಪಾತ್ರಗಳ ಮರುಕಳಿಕೆ ಇದೆ ಎಂಬ ಸೂಕ್ಷ್ಮತೆಯೂ ಕವಿತೆಯಲ್ಲಡಗಿದೆ. ಹನುಮಂತನ ಭಕ್ತಿಯ ಮುಂದೆ ಸೀತೆಯ ಪ್ರೀತಿ, ಆದರ್ಶ ಅನುಸರಣೆ ಎಲ್ಲವೂ ಮರೆಯಾಯಿತು. ಏಕೆಂದರೆ ವ್ಯವಸ್ಥೆಯ ಪ್ರತಿರೂಪ ರಾಮ ಎಂಬುದನ್ನು ರಾಮಾಯಣ ಕಟ್ಟಿಕೊಡುತ್ತದೆ.

"ಇದ್ದರೆ ಇರಬೇಕು / ನಿನ್ನಂಥ ಮಗ
ನಿನ್ನಂಥ ಅಣ್ಣ / ನಿನ್ನಂಥ ಗೆಳೆಯ
ನಿನ್ನಂಥ ಪ್ರೇಮಿ / ಇರುವುದೇ ಬೇಡ
ಈ ಭೂಮಿಯ ಮೇಲೆ / ನಿನ್ನಂಥ ಗಂಡ" ೨೩

ಕೃಷ್ಣನ ಪ್ರೇಮವನ್ನು ಉದಾರತೆಯಲ್ಲಿ ಕಂಡುಕೊಂಡ ಸಮಾಜಕ್ಕೆ ಅವನು ಅವತಾರ ಪುರುಷನಿರಬಹುದು, ಜಗದೋದ್ಧಾರಕನಿರಬಹುದು, ಆದರೆ ಹೆಣ್ಣು ಬಯಸುವುದು ಗಂಡಿನ ರೂಪವನ್ನು. ಅದು ಕೃಷ್ಣನಲ್ಲಿ ಗೌಣವಾಗಿದೆ ಎಂಬುದನ್ನು ಕವಿತೆ ತಿಳಿಸುತ್ತದೆ. ಸರ್ವಾಂತರ್ಯಾಮಿಯಾದ ಕೃಷ್ಣ ಮಹಾಭಾರತದಲ್ಲಿ ಎಲ್ಲಿಯೂ ಗಂಡನ ಸ್ಥಾನಕ್ಕೆ ನ್ಯಾಯ ಒದಗಿಸಿಲ್ಲದ ಕಾರಣ ಗಂಡನ ನಿರಾಕರಣೆಯ ಭಾಗದಲ್ಲಿ ನಿಲ್ಲುತ್ತಾನೆ.

"ನಿಲ್ಲಿಸ್ವಾಮಿ
ನಿಲ್ಲಿ ಅಲ್ಲೇ ಬಾಗಿಲಲ್ಲಿ
ಆ ಕೊಳಲನು ಒರೆಸಿಡಿ
ಯಾರ್‍ಯಾರಿಗೋ ನುಡಸಿಬಂದ
ಹಾಡುಗಳ ಬಸಿದಿಡಿ

ಅಲ್ಲಿಂದಲೇ ನಡೆಯಿರಿ ಬಚ್ಚಲಿಗೆ
ಅತಿಬುದ್ಧಿಯ ಸುಳ್ಳುಗಳನ್ನೆಲ್ಲಾ ತೊಳೆದು
ಬನ್ನಿ ರುಕ್ಮಿಣಿಯ ತಾಯ್ತೋಳಿಗೆ" [೨೪]

ರುಕ್ಮಿಣಿ ಹೆಂಡತಿಯ ಪಾತ್ರದಲ್ಲಿ ಮಾತ್ರ ನಿಲ್ಲುವುದಿಲ್ಲ. ಕ್ಷಮಯಾ ಧರಿತ್ರಿ, ಹೆಣ್ಣಿನ ಸಹಜಾಭಿವ್ಯಕ್ತಿಯನ್ನು ಮರೆತು ಗಂಡನ್ನು ಕ್ಷಮಿಸಿ, ಅವನಿಗೆ ತಾಯ್ತನ ಕೊಡುವುದಿದೆಯಲ್ಲ ಇದೇ ನೆಲಮೂಲ ಸಂಸ್ಕೃತಿಯ ಹೆಣ್ಣಿನ ಅಭಿವ್ಯಕ್ತಿ ಎಂಬುದನ್ನು ಕವಿತೆ ಪ್ರತಿನಿಧಿಸುತ್ತದೆ. ವಸ್ತು ಕೇಂದ್ರಿತ ನೆಲೆಯಲ್ಲಿ ನೋಡುವ ಗಂಡಿಗೆ ಹೆಣ್ಣಿನ ವ್ಯಕ್ತಿತ್ವ ಗೌಣವಾಗುತ್ತದೆ. ಅಧಿಕಾರ ರಚನೆಯ ಚೌಕಟ್ಟಿಗೆ ಸಿಲುಕಿದ ಹೆಣ್ಣು ಗಂಡಿನ ನಿರೀಕ್ಷಿತ, ಸೀಮಿತ ದೃಷ್ಟಿಕೋನದಲ್ಲಿ ಬಂಧಿಯಾದವಳು. ಅವಳ ಸಹಜತೆಯು ನೈಜತೆಯಲ್ಲಿ ಮರೆಯಾಗುವ ಕ್ರಿಯೆ ಸದಾ ಮುಂದುವರೆಯುತ್ತಲೇ ಇರುತ್ತದೆ. ಇದು ಎಲ್ಲ ಕಾಲಕ್ಕೂ ಅನ್ವಯಿಸುವಂತದ್ದು. ಆದರೆ ಮೊದಲ ತಲೆಮಾರಿನ ಮಹಿಳಾ ಕಾವ್ಯಕ್ಕಿಂತ ಭಿನ್ನವಾಗಿ ನಿಲ್ಲುವಂತದ್ದು. ಇತ್ತೀಚಿನ ಮಹಿಳಾ ಕಾವ್ಯ ಸಾಮಾಜಿಕ ಬದಲಾವಣೆಯನ್ನು ನೇರವಾಗಿ ಬಯಸುವಂತದು. ಪ್ರತಿಭಾ ನಂದಕುಮಾರ್‌ರವರ ಕವಿತೆಗಳನ್ನು ಗಮನಿಸಿದರೆ 'ಮಹಿಳಾ ಸ್ವಾತಂತ್ರ್ಯ' ಎಂಬ ಪದಕ್ಕೆ ಬೇರೊಂದು ಚೌಕಟ್ಟಿನ ಆಯಾಮ ಒದಗುತ್ತದೆ. ಹೆಣ್ಣಿನ ಭಾವನೆಗಳನ್ನು ಹತ್ತಿಕ್ಕಿದೆ. ರೂಪ ಮತ್ತು ಪ್ರತಿಮೆಗಳ ಮುಲಾಜಿಲ್ಲದೆ ಕವಿತೆ ಸಾಗುತ್ತದೆ. ಇದು ಒಂದು ನೋಟವೂ ಹೌದು.

ಸಾಮಾಜಿಕ ಬದಲಾವಣೆಯ ಬಗ್ಗೆ ಪುಟಗಟ್ಟಲೆ ಲೇಖನ ಬರೆದು ಗಂಟೆಗಟ್ಟಲೆ ಭಾಷಣ ಮಾಡುವ ಸೋಗಲಾಡಿತನದವರಿಗೆ ಬರವಣಿಗೆಯಲ್ಲೂ ಮಡಿ, ಮೈಲಿಗೆ ಆಚರಿಸುವ ಚಿಂತನೆಗಳಿಗೆ ಪ್ರತಿಭಾರವರ ಕವಿತೆಗಳು ಎಚ್ಚರಿಕೆಯ ಸಾಕ್ಷಿ ಪ್ರಜ್ಞೆಯಾಗಿ ಗಮನಿಸಬಹುದು.

"ಸದಾ ತೆರವಾಗಿದ್ದ ಮಾರ್ಗದಲ್ಲಿ ಅಡೆತಡೆ
ಈಗ ಮಾರ್ಗವು ಕಾರ್ಯ ನಿರತವಾಗಿದೆ.
ದಯವಿಟ್ಟು ಸ್ವಲ್ಪ ಸಮಯದ ನಂತರ ಪ್ರಯತ್ನಿಸಿ
ಸ್ವಲ್ಪ ಸಮಯದ ನಂತರ ಪ್ರಯತ್ನಿಸಿದರೆ
ಮಾರ್ಗವು ಸದ್ಯಕ್ಕೆ ಸೇವೆಯಲ್ಲಿರುತ್ತಿರಲಿಲ್ಲ.
ಹಾಗೆ ಸದಾಸೇವೆಯಲ್ಲಿರುವ ಬಗ್ಗೆ
ನಮ್ಮ ನಡುವೆ ಕರಾರೇನೂ ಆಗಿರಲಿಲ್ಲ" [೨೪]

ಯಾಂತ್ರಿಕ ಯುಗದಲ್ಲಿ ನಿರತನಾದ ಮನುಷ್ಯನ ವರ್ತನೆ ಯಾಂತ್ರಿಕವೇ ಆಗುತ್ತದೆ. ಇಲ್ಲಿ ಭಾವನೆಗಳ ಗೌಪ್ಯತೆ ಇರುವುದಿಲ್ಲ. ಸಂಬಂಧಗಳ ಹುಟ್ಟು ಸಾವು ಸಹಜವೆಂಬಂತೆ ಕವಿತೆ ಕಂಡರೂ, ಅಗಲಿಕೆಯ ನೋವಿನ ತೀವ್ರತೆಯ ಸ್ಪರ್ಷ ನಮಗಾಗದಿರದು. ಇಂದು ಹೆಚ್ಚು ಪ್ರಚಲಿತದಲ್ಲಿರುವ 'ಲಿವಿಂಗ್ ಟುಗೆದರ್' ಸಂಸ್ಕೃತಿಯನ್ನು ನೆನಪಿಸುವಂತಿದೆ

ಕವಿತೆ. ಕರಾರುಗಳಿಲ್ಲದೇ ಹೋದರೂ ಬದುಕಿನ ವಿಸ್ಮಯದ ಬದಲಾವಣೆಯ ಘಟ್ಟವನ್ನು ಕವಯಿತ್ರಿ ಚಿತ್ರಿಸಿದ್ದಾರೆ. ಸಹಜವಾದರೂ ಅನುಭವದ ಸಾಂದ್ರತೆ ಮತ್ತು ಅದರ ನೋವಿನ ಅರಿವು ಕವಿತೆಯಲ್ಲಡಗಿದೆ.

ಸಾಮಾಜಿಕ ಬದಲಾವಣೆಯ ಸ್ವರೂಪದಲ್ಲಿ ಲೈಂಗಿಕತೆಯ ಬಗೆಗೆ ನಡೆಯುತ್ತಿರುವ ಚರ್ಚೆಗಳು ಬಹು ಮುಖ್ಯವಾದವು. ಲೈಂಗಿಕತೆಯ ಬಗ್ಗೆ ಇರುವ ದೃಷ್ಟಿಕೋನ ಮತ್ತು ಆಗುತ್ತಿರುವ ಬದಲಾವಣೆಯೂ ಸಹ ಬೇರೊಂದು ಅಂಶವನ್ನು ಕಟ್ಟಿಕೊಡುವಂತದ್ದು. ಒತ್ತಡದ ಬದುಕಿಗೆ ಸಿಲುಕಿದ ಗಂಡು ಹೆಣ್ಣಿನ ತಲ್ಲಣವನ್ನು ಪ್ರತಿಭಾರವರು ಕವಿತೆಯಾಗಿಸಿದ್ದಾರೆ. ಮಡಿವಂತಿಕೆಯ ನೆಪದಲ್ಲಿ ಭಾವನೆಗಳ ಪ್ರೇರಕ ಶಕ್ತಿಯಾದ ಬರವಣಿಗೆಯಲ್ಲಿ ಪ್ರತಿಭಾರವರು ಎಂದೂ ರಾಜಿಯಾಗುವುದಿಲ್ಲ. ಇದು ಅವರ ಕವಿತಾ ಶಕ್ತಿಯನ್ನು ಪ್ರತಿನಿಧಿಸುತ್ತದೆ.

“ಅದಕ್ಕೇ ನೋಡಿ, ಸಂಭೋಗದ ಸುಖಕ್ಕಿಂತ
ಮೂಡಿಲ್ಲದಾಗ ಸುಮ್ಮನಿರುವ ಸುಖ ಮೇಲೆಂದಿದ್ದಕ್ಕೆ
ಮೂರುದಿನ ಮಾತುಬಿಟ್ಟು ಊಟಬಿಟ್ಟು
ಕೊನೆಗೆ ತನಗೇ ಬೇಜಾರಾಗಿ ರಾಜಿಯಾದಾಗ” [೨]

ಇಂದಿನ ಒತ್ತಡದ ಬದುಕಿನ ಶೈಲಿಗೆ ಸಲುಕಿದ ಮನುಷ್ಯ ಹೊಂದಾಣಿಕೆಯನ್ನು ಮರೆತಿದ್ದಾನೆ ಎನ್ನುವುದಕ್ಕೆ ಪ್ರಸ್ತುತ ಉದಾಹರಣೆಗಳು ಹಲವಿವೆ. ಮನು ಸ್ಮೃತಿಯನ್ನು ದೈವೀಕತೆಯಲ್ಲಿ ನೋಡುವ ನಾವುಗಳು ಮಹಿಳೆಯೇ ಬರೆದ ಚಿತ್ರವನ್ನೋ, ತುಂಡುಬಟ್ಟೆ ಹಾಕಿದವರನ್ನೋ ಅಥವಾ ದಾಂಪತ್ಯದ ಬಗ್ಗೆ ನೇರವಾಗಿ ಬರೆದ ಕವಿತೆಗಳನ್ನು ಸಹಜವಾಗಿ ಮೆಚ್ಚುವುದಿಲ್ಲ. ಮಾನ–ಮರ್ಯಾದೆಗಳೆಂಬ ಅಳತೆಗೋಲನ್ನಿಟ್ಟು ಸುಮ್ಮನಾಗಿಸುತ್ತೇವೆ. ಇಂತಹ ವಿಚಾರಗಳನ್ನು ಯಾವುದೇ ಎಗ್ಗಿಲ್ಲದೆ ಸರಳವಾಗಿ ನಿರೂಪಿಸಿದವರು. ಸರಳತೆಯೇ ಅವರ ಕಾವ್ಯಶಕ್ತಿ.

ಹೆಣ್ಣಿನ ವಿವಿಧ ಅವಸ್ಥಾಂತರಗಳನ್ನು ಚಿತ್ರಿಸುವ ಕವನ ಹಿಮದ ಹಾದಿ. ಸಂಸಾರಿಯಾದ ಹೆಣ್ಣು, ಸಂಸಾರ ತೊರೆದು ಸನ್ಯಾಸಿಯಾದ ಹೆಣ್ಣುಗಳ ನಡುವಿನ ಪ್ರೀತಿಯ ತಾಕಲಾಟ ಇಡೀ ಕವಿತೆಯಲ್ಲಿ ಕಣ್ಮುಂದೆ ಬರುತ್ತದೆ.

“ಪ್ರತಿದಿನ ಶೇವ್ ಮಾಡಲು ಬೇಸತ್ತ ಗಂಡಸರಿಗೆ
ದಾಡಿ ಪರಿಹಾರ
ಪ್ರತಿತಿಂಗಳ ರಾಡಿಗೆ ಬೇಸರಿಸುವ ಹೆಣ್ಣು
ಏನು ಮಾಡಬೇಕು?
ಹೆಂಗಸರು ಜಾತ್ಯಾತೀತರು ಎಂದವನು

ಮರುಕ್ಷಣ ಮನೆಯಲ್ಲೇ ಬಿಟ್ಟು ಹೋಗುತ್ತಾನೆ.
ಅವನ ಆತಂಕ ಅವನಿಗೆ" ೨೭

ಎಂಬಲ್ಲಿ ಗಂಡಿನ ನಿಜ ವರ್ತನೆ ಕಾಣುತ್ತದೆ. ಬಟ್ಟೆ ಬದಲಾದರು ಆಲೋಚನೆ ಬದಲಾಗದು. ಕವಿತೆಯ ಶೀರ್ಷಿಕೆಯಲ್ಲಿಯೇ ಹಿಮದ ಜಡತ್ವವಿರುವುದರಿಂದ ಗಂಡು ಹೆಣ್ಣಿನ ಸ್ವತಂತ್ರ್ಯ ಆಲೋಚನೆಯಲ್ಲಿ ಸಮಾಜದ ಹಿಡಿತ ಸೂಕ್ಷ್ಮವಾಗಿ ಧ್ವನಿಸಿದ ರೀತಿಯನ್ನು ಕವಿತೆ ಕಟ್ಟಿಕೊಡುತ್ತದೆ.

ಜಾತಿಯ ಬಿಗಿ ಹಿಡಿತ ಹಿಂದಿನಿಂದಲೂ ನಮ್ಮನ್ನು ಬಂಧಿಸಿಕೊಂಡೇ ಬಂದಿದೆ. ಪ್ರೀತಿಯ ಆಕರ್ಷಣೆ ಜಾತಿಯಸುಳಿಗೆ ಸಿಲುಕಿದಾಗ ಸಮಾಜದಲ್ಲಿ ಎದುರಾಗುವ ಸಮಸ್ಯೆಗಳು ಸವಾಲಿನಂತೆ ಕಂಡುಬರುತ್ತದೆ. ಆಧುನಿಕ ಯುಗದಲ್ಲೂ ನಿತ್ಯ ದಾಖಲಾಗುತ್ತಿರುವ 'ಮರ್ಯಾದಾ ಹತ್ಯೆ' ಎಂಬ ಹೀನ ಕೃತ್ಯಗಳೂ ಜಾತಿಯ ಅಂಕುಶಗಳ ಪ್ರತಿರೂಪವೇ ಆಗಿದೆ.

"ನಾನು ಚಾಂಡಾಲ ಕನ್ಯೆ
ನೀನು ಮಹಾ ಬ್ರಾಹ್ಮಣ
ಪರಮನಿಷ್ಠೆಯ ವಟು
ಮಾತೆಷ್ಟು ಕಟು
ವ್ಯರ್ಥವಾಗದಿರಲಿ ನಿನ್ನ ತಪಸ್ಸು
ಹೂತು ಬಿಡೋಣ ನಮ್ಮ ಮನಸ್ಸು
ಸಿಗದಂತೆ ಯಾರಿಗೂ ಕೇಳುದಂತೆ
ಮುಟ್ಟಿಬಿಡಲಿ ಎದೆಯ ಪದ ಎಲ್ಲರಿಗೂ
ನಾನು ನಿನ್ನವಳು
ನೀನು ನನ್ನವನಲ್ಲ" ೨೮

ಎಂಬ ಸಾಲುಗಳಲ್ಲಿ ಹೆಣ್ಣಿನ ನೋವಿದೆ. ಜಾತಿ ಸಂಕರದ ವಿನ್ಯಾಸದ ಬಗ್ಗೆ ಸಿಟ್ಟಿದೆ. ಬದುಕಿನ ಬಗೆಗಿನ ಅಗಾಧವಾದ ಪ್ರೀತಿಯಿದೆ. ಆದರೆ ಸೇರಿ ಜೀವನ ನಡೆಸಲು ಆಗದ ವಿಶಾದವೂ ಜೊತೆಗೆ ಇದ್ದೇ ಇದೆ. ಜಾತಿಯಲ್ಲಿ ಶ್ರೇಷ್ಠರೆಂದು ಕರೆಸಿಕೊಂಡವರೆಲ್ಲಾ ಪ್ರೀತಿಯಲ್ಲೂ ಶ್ರೇಷ್ಠರಲ್ಲ ಎಂಬುದು ಕವಿತೆಯ ತಿರುಳು. ಮೈಲಿಗೆ ದೇಹಕ್ಕಾದರೆ ಚಿಂತೆಯಿಲ್ಲ, ಮನಸ್ಸಿನ ಕಲ್ಮಷ ತೊಡೆಯಲಾರದವನು ಏನನ್ನು ಕೊಡಲು ಸಾಧ್ಯ? ಎಂಬ ನಿರ್ಲಿಪ್ತತೆಯ ಮನೋಭಾವವೂ ಅವಳಲ್ಲಿದೆ. 'ಮಹಾ ಬ್ರಾಹ್ಮಣ' ಎಂಬ ಪದ ನಮ್ಮಲ್ಲಿನ ವರ್ಣ ಮತ್ತು ವರ್ಗ ಸಂಕರಗಳ ಕರಾಳತೆಗೆ ಹಿಡಿದ ಕನ್ನಡಿಯಂತೆ ಸೂಕ್ಷ್ಮವಾಗಿವೆ.

ದೇಹ ಮತ್ತು ಮನಸ್ಸಿನ ಅಂತರದ ಪ್ರತಿರೂಪದಂತೆ ಕವಿತೆಯ ಕೊನೆ ಸಾಲು ಹೆಣ್ಣು ತನ್ನ ತನವನ್ನು ಒಪ್ಪಿಕೊಳ್ಳುವ ಮತ್ತು ಬೇರೆಯದನ್ನು ನಿರಾಕರಿಸುವ ಪ್ರತಿನಿಧಿಯಂತೆ ಕಂಡುಬರುತ್ತದೆ.

'ನಾನು ನಿನ್ನವಳು ನೀನು ನನ್ನವನಲ್ಲ' ಎಂಬ ಸಾಲುಗಳು ಪ್ರೀತಿ ಮತ್ತು ಬಯಕೆಯ ಪ್ರತಿರೂಪದಂತಿದೆ. ಪತಿವ್ರತೆ ಎಂದರೆ ಕೆಲವು ಮಾನದಂಡಗಳಿರಬೇಕೆಂಬ ಗಂಡಿನ ದೃಷ್ಟಿಕೋನದಲ್ಲಿ ರೂಢಿಯಲ್ಲಿರುವ ನಿಯಮಗಳಿವೆ. ಹೆಣ್ಣು ರೂಢಿ ಸಂಪ್ರದಾಯಗಳನ್ನು ಪಾಲಿಸುವವಳಾಗಿರಬೇಕು. ಈ ಎಲ್ಲ ನಿಯಮಗಳನ್ನೂ ಮೀರಿದರೆ ಅವಳು 'ಕುಲಟೆ' ಎಂಬ ಪ್ರತಿಮಾ ಮಾದರಿಯ ರೂಢಿ ನಂಬಿಕೆಗಳನ್ನು ಪ್ರತಿಭಾರವರು ಒಡೆಯುತ್ತಾರೆ. ಪುರಾಣದಲ್ಲಿ ಚಿತ್ರಿತಗೊಂಡು, ಮುಂದಿನ ತಲೆಮಾರಿನವರು ನಾಮ ಜಪಿಸುತ್ತಾ ಬಂದಿರುವ ಶ್ರೇಷ್ಠ ಹೆಣ್ಣುಗಳೆಂದು ಆದರ್ಶ ರೂಪದಲ್ಲಿರುವವರ ಚಿತ್ರಣ ನಮಗೆ ಪ್ರತಿಭಾರವರ ಕವಿತೆಗಳಲ್ಲಿ ಭಿನ್ನ ಸ್ವರೂಪ ಪಡೆಯುತ್ತದೆ. ಪತಿವ್ರತಾ ಪಾಲನೆಯಲ್ಲಿ ನಿರತಳಾದ ಪುರಾಣದ ಸ್ತ್ರೀ ಕೂಡ ಹೆಣ್ಣಿನ ಅಭಿವ್ಯಕ್ತಿ ಕ್ರಮದಲ್ಲೇ ನಿಲ್ಲುತ್ತಾಳೆ. ಇದು ಸಾಧ್ಯವಾದುದು ಮಹಿಳಾ ಕಾವ್ಯದ ಮುಖಾಂತರವೆ.

"ವರ್ಣಿಸುತ್ತಾರೆ ಅವಳ ಗುಣಗಾನ ಮಾಡುತ್ತಾ
ಮೆಚ್ಚುತ್ತಾರೆ ಮಾತಲ್ಲೆ ಸಾವನ್ನು ಗೆದ್ದವಳ
ತೊನ್ನ ಬಂದವನನ್ನು ಬುಟ್ಟಿಯಲ್ಲಿ ಹೊತ್ತೆಯ್ದವಳ
ಬಯಸಿ ಬಂದವರ ಮಕ್ಕಳಾಗಿಸಿ ತೊಟ್ಟಿಲು ತೂಗಿದವಳ
ಅಂತಹುದೇ ನೂರೆಂಟು ಪ್ರಸಂಗ ಪಠಿಸುತ್ತಾ ಹಗಲಿರುಳು
ತುರುಕುತ್ತಾರೆ ತಲೆಯೊಳಗೆ
ಪತಿವ್ರತೆಗೇ ಸದಾ ಕಾಮುಕರ ಕಾಟ" [೨೯]

ಎನ್ನುವಲ್ಲಿ ಹೆಣ್ಣನ್ನು ಪತಿವ್ರತೆಯನ್ನಾಗಿಸುವಲ್ಲಿ ಹೆಣಗುವ ಗಂಡಿನ ಹೆಣಗಾಟವಿದೆ. ಸಹಜ ದೈಹಿಕ ರಚನೆಯ ಆಕರ್ಷಣೆ ಗಂಡಿಗೆ ಲೈಂಗಿಕ ತೃಷೆಯಾಗಿ ಕಂಡಾಗ ಹೆಣ್ಣಿನ ತಪ್ಪೇನು? ಕವಿತೆ ಇಡಿಯಾಗಿ ಪುರಾಣದಲ್ಲಿ ನಡೆದ ಘಟನೆಗಳನ್ನು ಚರಿತ್ರೆಯ ರೂಪದಲ್ಲಿ ದಾಖಲಿಸುತ್ತದೆ. ಜೊತೆಗೆ ಮೌಢ್ಯತೆಯ ಮಂತ್ರಕೂಪವಾದ ಗಂಡಿನ ಮನಸ್ಥಿತಿಯನ್ನು ತರಾಟೆಗೆ ತೆಗೆದುಕೊಳ್ಳುವಂತಿದೆ. ಕವಿತೆ ಮುಂದುವರೆದು,

"ಕೇಳಿ ಕೇಳಿ ಮೈ ಮನಗಳೆಲ್ಲಾ ಕೊಳೆಯಾಗಿ
ತಿಕ್ಕಿ ತೊಳೆಯಲು ಬಂದೆ
ಪಂಚಭೂತಗಳ ಸನ್ನಿಧಿಯಲ್ಲಿ
ಪಂಚೇಂದ್ರಿಯಗಳಿಗೆ ಸೊಪ್ಪುಹಚ್ಚುತ್ತಾ
ಕರೆದೆ ಕಾಮುಕರನ್ನು
ಬನ್ನಿರೋ ಬನ್ನಿರಿ ಬೆನ್ನುಜ್ಜಿ
ತೀರಿಸಿಕೊಳ್ಳಿ ತೀಟೆ" [೩೦]

ತಲೆಮಾರಿನ ಬದಲಾವಣೆಯ ಅಂತರ ಕವಿತೆಯಲ್ಲಡಗಿದೆ. ಹೆಣ್ಣಿನ ಸ್ವತಂತ್ರ್ಯ ಪ್ರವೃತ್ತಿ ಅಭಿವ್ಯಕ್ತಿಗಳಲ್ಲೊಂದು. ಮುಕ್ತ ಆಲೋಚನೆಗೆ ಅವಕಾಶವಿದ್ದಾಗ ತನ್ನ ಮೇಲಾಗುವ ದೌರ್ಜನ್ಯವನ್ನು ಹೆಣ್ಣು ಪ್ರತಿಭಟಿಸಬಲ್ಲಳು ಎಂಬುದಕ್ಕೆ ಕವಿತೆ ಉತ್ತಮ ಉದಾಹರಣೆ. ಶಾಪವಿತ್ತರೆ ಕಲ್ಲಾಗುವ ಹೆಣ್ಣು ಮುಕ್ತತೆಯಿಂದ ದೂರವೇ ಉಳಿಯುತ್ತಾಳೆ. ಮಹಿಳಾ ಕಾವ್ಯದಲ್ಲಿ ಪುರಾಣಪಾತ್ರಗಳು ಮತ್ತೆ ಮತ್ತೆ ಪ್ರಶ್ನಿಸಲ್ಪಡುತ್ತದೆ. ಭಿನ್ನ ದೃಷ್ಟಿಕೋನ ಮತ್ತು ಮುಕ್ತ ಆಲೋಚನೆಗೆ ಒಳಗು ಮಾಡಿದ್ದು ಮಹಿಳಾ ಕಾವ್ಯ. ಪ್ರತಿಭಾರವರ ಕಾವ್ಯ ವಸ್ತು ಒಂದೇ ಆದರೂ ಅದನ್ನು ಚಿತ್ರಿಸುವ ರೀತಿ ಭಿನ್ನತೆಯಿಂದ ಕೂಡಿದೆ. ಇವರ ಕಾವ್ಯಗಳಲ್ಲಿ ಅರ್ಪಣೆ, ಆರಾಧನಾ ಮನೋಭಾವ, ಹೆಣ್ಣಿನ ಕಳೆದು ಹೋದ ಮನಸ್ಥಿತಿಯ ಹುಡುಕಾಟ ಇದಾವುದೂ ನಮಗೆ ಕಾಣುವುದಿಲ್ಲ. ಬದಲಿಗೆ ಗಟ್ಟಿ ನೆಲೆಗಟ್ಟಿನ ಹರಿತವಾದ ಬರವಣಿಗೆಯ ನೇರ ಪ್ರಕ್ರಿಯೆ ಕಾಣುತ್ತದೆ. ಹೀಗಿದೆ ಬದುಕು ಹೀಗೆ ಸ್ವೀಕರಿಸಬೇಕು ಎಂಬ ಧೃಡತ್ವ ಇವರ ಬರಹಗಳಲ್ಲಿವೆ. ಈ ಧೃಡತ್ವವನ್ನು ಬರವಣಿಗೆಯೊಳಗೆ ಇಳಿಸುವ ತಾಕತ್ತಿದೆಯಲ್ಲಾ ಅದೇ ನೈಜ ಅಭಿವ್ಯಕ್ತಿ ಕ್ರಮ. ಇದನ್ನು ಪ್ರತಿಭಾರವರ ಬರಹಗಳು ಕ್ರೂಢೀಕರಿಸಿಕೊಂಡು ಬಂದಿವೆ.

ಹತಾಷೆಯ ಪದ ಅಥವಾ ವಾಕ್ಯಗಳೇ ಪ್ರತಿಭಾರವರ ಕಾವ್ಯ ವಸ್ತುಗಳು. ಸಮಾಜದ ನಿಗದಿತ ಗಡಿ ರೇಖೆಗಳನ್ನು ದಾಟುವ ರೀತಿಯಲ್ಲಿ ಇವರ ಕವಿತೆಗಳಿರುತ್ತವೆ. ಸೀಮಿತ ಮನಸ್ಥಿತಿಯ ಒತ್ತಡವನ್ನು ಒಮ್ಮೆಗೇ ಪ್ರತಿಭಟಿಸಿ ಚಿಮ್ಮುವ ಪ್ರಕ್ರಿಯೆಗಳಲ್ಲಿ ಇವರ ಕವಿತೆಗಳು ಸಾಕ್ಷಿಯಾಗುತ್ತವೆ. ಇದು ವ್ಯವಸ್ಥೆಯ ಒತ್ತಡದ ಜಗಿತವಲ್ಲ, ಒಪ್ಪಿತ ಸಮಾಜದ ಮೂಲ ನೆಲೆಯನ್ನೇ ಅಲ್ಲಾಡಿಸುವಂತದ್ದು. ಇದು ಇವರ ಕಾವ್ಯದಲ್ಲಿ ಸದಾ ಜಾಗೃತ ನೆಲೆಯಲ್ಲಿ ಇರುವಂತದ್ದಾಗಿದೆ. ಪ್ರತಿ ಕವಿತೆಗಳಲ್ಲೂ ಹೆಣ್ಣಿನ ಆತ್ಮ ಶಕ್ತಿಯ ಪ್ರತಿರೂಪದಂತೆ, ವಾಸ್ತವಿಕ ನೆಲೆಯಲ್ಲಿ ನೋಡುವಂತಿವೆ. ಅಂದರೆ ಹೋರಾಟ ಬದುಕಿನ ಜಾಗೃತ ಪ್ರಜ್ಞೆ ಪ್ರತಿ ಕವಿತೆಯಲ್ಲೂ ಅಡಕಗೊಂಡಿರುತ್ತವೆ.

“ಅರಳಿನಿಂತ ಗುಲಾಬಿಗೆ
ಮನಸೋತರೂ ಚುಚ್ಚುವ ಮುಳ್ಳಿಗೆ
ಹೆದರಿ ದೂರವೇ ನಿಂತು ಹಲುಬುವ
ಯಾರನ್ನೇ ನೋಡಿದರೂ ನನಗೆ
ನನ್ನ ಪ್ರಿಯತಮನ ನೆನಪಾಗುತ್ತದೆ” [೩೧]

ನಾವು ಹುಡುಗಿಯರೇ ಹೀಗೆ ಕವಿತೆಯಲ್ಲಿ ಕಾಣುವ ಪ್ರೌಢತೆ, ಒಪ್ಪಿತ ಮನೋಭಾವ, ಕುತೂಹಲಭರಿತ ಹೆಣ್ಣು, ವಯೋ ಸಹಜ ತಾರುಣ್ಯದ ತುಡಿತ ಇವೆಲ್ಲವೂ ಒಮ್ಮೆಗೇ ಜಿಗಿಯುವ ಕ್ರಿಯೆ ಕವಿತೆಯಲ್ಲಿದೆ. ಸಹಜ ಮಾತುಗಳೆಂಬಂತೆ ಇವು ಕಂಡು ಬಂದರೂ, ಗಂಡಿನ ಗುಣದ ಒರಟು ಸ್ವಭಾವದ ಸೂಕ್ಷ್ಮ ದರ್ಶನವಾಗುತ್ತದೆ. ಹೆಣ್ಣನ್ನು ಮಾಯೆಗೆ

ಹೋಲಿಸುವ ಗಂಡಿನ ಕ್ರೌರ್ಯದ ಅನಾವರಣ ಮಾಡುತ್ತದೆ. ಗುಲಾಬಿ ಮತ್ತು ಮುಳ್ಳಿನ ಪ್ರತಿಮೆಗಳು ವ್ಯವಸ್ಥೆಗೆ ಹಿಡಿದ ಕನ್ನಡಿ. ಹೆಣ್ಣಿನ ಚಿತ್ರಣ ನಮಗೆ ಕಟ್ಟಿಕೊಡುವಂತೆ ಮಾಡುವುದು ಕೇವಲ ಸೀಮಿತ ವಲಯದಲ್ಲೇ ಎಂಬುದಕ್ಕೆ ಈ ಕವಿತೆ ಕನ್ನಡಿಯಂತಿದೆ.

ಹೆಣ್ಣು ಮಾಯೆ, ಗಂಡಿನ ಅಧಃಪತನಕ್ಕೆ ಕಾರಣೀಕರ್ತಳು ಎಂದು ಹೇಳುವ ಗಂಡೇ ಮಾಯೆಗೆ ಸಿಲುಕುವ ಪ್ರಸಂಗ ವಿಪರೀತದ್ದು. ಹೆಣ್ಣಿನ ಹೃದಯವೊಂದು ಸ್ಮಶಾನವಿದ್ದಂತೆ, ಗೋರಿ ಕಟ್ಟುವವರು ಹಲವರು. ಈ ಅಂತಸ್ಥರವೇ ಕವಿತೆಯಾಗಿ ಹೊರಹೊಮ್ಮುತ್ತದೆ.

"ಅವಳ ಕುರುಳುಗಳು ಹಠಾತ್ತನೆ ಸರ್ಪಗಳಾಗಿ
ಗೋರಿಯೊಳ ಹೊರಗೆ ಹರಿದಾಡುತ್ತವೆ.
ಚಿತೆಯ ಅಗ್ನಿ ಅವಳ ಪಾದ ಸುಡುವುದಿಲ್ಲ.
ನಿಶಾಚಾರಿ ಅವಳ ತೆಳ್ಳನೆಯ ಉಡುಗೆಯ
ಮರೆಯಿಂದ ಬಾಳೆದಿಂಡಿನ ತೊಡೆಗಳು
ಕಾಲಗೆಜ್ಜೆ ಸದ್ದು ಥೇಟು ಸಿನಿಮಾಗಳ ಮೋಹಿನಿಯರ ಹಾಗೆ
ಅವಳು ಕಾಣಿಸುವುದು ಬೇಕಾದವರಿಗೆ ಮಾತ್ರ".[೨]

ಅತೃಪ್ತ ಮನಸ್ಥಿತಿಯ ಹೆಣ್ಣಿನ ಲೋಕದ ಅನಾವರಣದ ಪ್ರತಿಬಿಂಬದಂತಿದೆ. ದೇಹ ಅಂತ್ಯವಾಗಿ ಮನಸ್ಸು ಹೊಯ್ದಾಡುವಾಗ ಕಂಡುಬರುವ ಹೆಣ್ಣಿನ ಚಿತ್ರಣ ಇಲ್ಲಿದೆ. ಹೆಣ್ಣು ತನ್ನ ಹುಟ್ಟಿನಿಂದ ಹಿಡಿದು ಸಾಯುವವರೆಗೂ ಗಂಡಿನ ಮರ್ಜಿಯಲ್ಲೇ ಬದುಕು ನಡೆಸುತ್ತಾಳೆ. ಇದು ಆದರ್ಶ ಜೀವನದ ನೆಪವೇ ಹೊರತು ಸ್ವಂತಿಕೆಯದ್ದಲ್ಲ. ಜಾತಿಕಟ್ಟಳೆ – ನೀತಿಕಟ್ಟಳೆಗಳ ನಡುವೆ ಸಿಲುಕಿದ ಹೆಣ್ಣು, ಗಂಡು ಪ್ರಪಂಚವನ್ನು ಅವನ ಅಂತ:ಸತ್ವವನ್ನು ಇಷ್ಟೇ! ಎಂದು ನಿರ್ಧಾರದ ಧ್ವನಿಯಲ್ಲಿ ಕಂಡುಕೊಳ್ಳುವ ಬಗೆ ಕವಿತೆಯಲ್ಲಡಗಿದೆ. ಕವಿತೆಯಲ್ಲಿ ಹೆಣ್ಣಿನ ಅಹಂ, ಸೌಂದರ್ಯ, ಕೆಚ್ಚು ಎಲ್ಲವೂ ಸ್ವಾಭಿಮಾನದ ಪ್ರತೀಕದಂತಿದೆ. ಇದರ ಜೊತೆಗೆ ಗಂಡಾದವನು ವಾಸ್ತವ ನೆಲೆಯಲ್ಲಿ ಚಿಂತಿಸದೆ ಭೂತ ಮತ್ತು ಭವಿಷ್ಯತ್ತಿನ ಬಂಧಿಯಾದಾಗ ಆಗುವ ಅವಾಂತರಗಳ ನೈಜತೆ ಕವಿತೆಯಲ್ಲಡಗಿದೆ.

ಪ್ರತಿಭಾರವರ ಕವಿತೆಗಳು ಸರಳವಾಗಿ ಓದಿಸಿ ಕೊಂಡರು, ವ್ಯವಸ್ಥೆಯ ಕರಾಳತೆಯನ್ನು ಒಮ್ಮೆಗೇ ಕೆದಕಿ ನಮ್ಮ ಮನಸ್ಸಿನಲ್ಲಿ ಪ್ರಶ್ನೆಗಳೇಳುವಂತೆ ಮಾಡುತ್ತವೆ. ಅಧ್ಯಯನಕ್ಕೆ ತೊಡಗಿದಂತೆಲ್ಲಾ ಮತ್ತೆಮತ್ತೆ ಕಂಡುಕೊಳ್ಳುವ ಉತ್ತರವೆಂದರೆ ವಾಸ್ತವತೆ ಮತ್ತು ಕ್ರಿಯಾಶೀಲತೆಯ ಬದುಕನ್ನು ಪ್ರತಿ ಬಾರಿಯೂ ಅವರ ಕವಿತೆಗಳು ನಿಜವಾಗಿಸಿವೆ.

"ಯಾರು ಸುಳ್ಳು ಹೇಳುವುದಿಲ್ಲ
ಹೇಳುತ್ತಿರುವುದು ಸುಳ್ಳಾಗಿರುವುದೂ / ಒಂದು ಸತ್ಯ
ಅವರವರ ಅನಿವಾರ್ಯಕ್ಕೆ ಅದೂ ಅಗತ್ಯ

ನನ್ನ ನಾಲಗೆಯೂ ಹೊರತಲ್ಲ
ಎದೆಯೊಳಗಿನದೆಲ್ಲ ಹೊರಬರುವಾಗ
ಎದುರು ಕೂತವರ ಎದೆಯಲ್ಲಿ ಕಂಪನವಾದರೆ
ನನ್ನ ಮಾತು ಕಾರಣವಲ್ಲ
ಅವರವರ ಭಾವ ಅಭಾವದ ಕಂತೆ".೩೩

ಅಭಿವ್ಯಕ್ತಿ ಸ್ವಾತಂತ್ರ್ಯದ ಮರೆಮಾಚುವಿಕೆಯಿಂದ ಗಂಡು ಹೆಣ್ಣಿನ ಸಂಬಂಧಗಳಲ್ಲಾಗುವ ಅಂತರ ಇಲ್ಲಿದೆ. ವ್ಯಕ್ತಿ ಸ್ವಾತಂತ್ರ್ಯ ಮರೆಯಾಗಿ ಅಭಿವ್ಯಕ್ತಿ ಸ್ವಾತಂತ್ರ್ಯದ ದೃಷ್ಟಿ ಇಲ್ಲಿದೆ. ವಾಸ್ತವತೆಯ ತೆಳು ಪರದೆ ಸರಿದಾಗ ಸತ್ಯದ ಅರಿವಾಗುತ್ತದೆ. ಆದರೆ ಈ ಸತ್ಯವನ್ನು ಒಪ್ಪಿಕೊಳ್ಳುವ ಗುಣ ಎಲ್ಲರಲ್ಲೂ ಇರುವುದಿಲ್ಲ ಮನುಷ್ಯನ ಆಲೋಚನೆಗೂ ಮಾತಿಗೂ ಇರುವ ಅಂತರವನ್ನು ನಾಲಿಗೆ ಮತ್ತು ಎದೆಯ ಪ್ರತಿಮೆಗಳನ್ನು ಕವಿತೆ ಸೂಚಿಸುತ್ತದೆ. ಇವರೆಡಕ್ಕೂ ಕೊಂಡಿ ಎಂಬಂತೆ ಮಾತು. ಬದುಕಿನ ಅವಶ್ಯಕತೆಯನ್ನು ನಾವು ಅನಿವಾರ್ಯತೆಯೆಂದು ಸ್ವೀಕರಿಸಿರುವುದೇ ಜೀವನ ಎಂಬಷ್ಟರ ಮಟ್ಟಿಗೆ ಬಂದು ನಿಂತಿದ್ದೇವೆ ಇಲ್ಲೂ ಗಂಡು ತನ್ನ ಪ್ರಾಬಲ್ಯವನ್ನು ಬಿಂಬಿಸುತ್ತಿರುವುದು ವಿಪರ್ಯಾಸ. ಗಂಡಿನ ಸಮಷ್ಠಿ ದೃಷ್ಠಿಕೋನದ ಉದಾಹರಣೆಯನ್ನು ಕವಿತೆ ಕೆಣಕುತ್ತದೆ. ಕವಿತೆ ಮುಂದುವರೆದು ಕಟು ಸತ್ಯವನ್ನು ಕನ್ನಡೀಕರಿಸುತ್ತದೆ.

ಜಡಗಟ್ಟಿದ ಸಮಾಜದ ಮನಸ್ಥಿತಿಯ ಮುಖ ದರ್ಶನವಿದೆ. ಹೆಣ್ಣು ಎಲ್ಲವನ್ನು ಮೆಟ್ಟಿ ನಿಲ್ಲಬೇಕೆಂಬ ಮಾತಿದೆ ಮೆಟ್ಟಿ ನಿಲ್ಲುವ ಪ್ರಕ್ರಿಯೆ ಮುಂದುವರೆದಾಗ ಮಾತ್ರ ದಾಟುವ ಪ್ರಜ್ಞೆ ಜಾಗೃತವಾಗುತ್ತದೆ. ಇದನ್ನೂ ನಮ್ಮ ಸಮಾಜದ ಸಂಪ್ರದಾಯ ಮೌಲ್ಯಗಳು ರೂಢಿಸಲೇ ಇಲ್ಲ. ಹೆಣ್ಣಿನ ಮುಟ್ಟು ಸಹಜ ಪ್ರಕ್ರಿಯೆ. ಇದನ್ನೇ ಮೈಲಿಗೆ ಎಂದು ಬಿಂಬಿಸುವ ಗಂಡು ವರ್ತನೆಗೆ ಇದೇ ಸಂತಾನದ ಮೂಲ ಎಂಬುದು ಏಕೆ ತಿಳಿಯುವುದಿಲ್ಲ? ಎಂಬ ಪ್ರಶ್ನೆ ನಮ್ಮನ್ನು ಕಾಡದಿರದು. ಇದೆಲ್ಲವನ್ನೂ ನೇರವಾದ ಟೀಕೆಯೊಂದಿಗೆ, ಪ್ರತಿಭಾರವರ ಕವಿತೆಗಳಿವೆ. ಗೌಪ್ಯತೆ ದೂರವಾಗಿ ಸಹಜ ಸ್ವೀಕಾರದ ಗುಣ ಬೆಳೆಸಿಕೊಳ್ಳಬೇಕೆಂಬುದನ್ನು ತಿಳಿಸುತ್ತದೆ.

ಕವಯಿತ್ರಿಯರು ಎದುರಿಸುವ ಸಮಸ್ಯೆ ಮತ್ತು ಸವಾಲುಗಳು ಮಾತ್ರವಲ್ಲ, ಅವರು ಬರೆದ ಕವನಗಳೂ ಸಹ ಟೀಕಾ ಪ್ರಹಾರಕ್ಕೆ ಗುರಿಯಾಗುವುದನ್ನು ಇವರ ಕವಿತೆಗಳು ವ್ಯಕ್ತಪಡಿಸುತ್ತವೆ. ಬರವಣಿಗೆ ಹಂಬಲಿಸುವ ನೈಜತೆಗಿಂತ, ಸಾಮಾಜಿಕ ಹಸಿವಿನ ದಾಹತೀರಿಸುವಲ್ಲಿ ಕವಿ ಹೆಣಗುವ ಕ್ರಿಯೆ ಎಂತದ್ದು ಎಂಬುದು ಗಮನಿಸಬೇಕಾದ ಸಂಗತಿ. ಕವನದಲ್ಲೂ ವಿವಸ್ತ್ರತನದ ಬಗೆಗೆ ಹುಡುಕಾಟ ನಡೆಸುವ ವರ್ಗಕ್ಕೆ ಕೆಣಕುವಂತಿದೆ ಈ ಕವಿತೆ.

"ಕೆಲವು ಕವನಗಳು
ಆಗತಾನೇ ಇಸ್ತ್ರಿ ಮಾಡಿದಂತೆ
ನೀಟಾಗಿರುತ್ತವೆ.
ಒಂದೆರಡು ಸಲ ಓದಿದ ಮೇಲೆ
ಸುಕ್ಕಾಗುತ್ತವೆ.
ಮತ್ತೆ ಇಸ್ತ್ರಿ ಮಾಡಿದಲ್ಲಿ
ಪರವಾಗಿಲ್ಲ ಓದಬಹುದು
ಕೆಲವಕ್ಕೆ ಆಗಾಗ ಗಂಜಿ
ಸಹ ಹಾಕಬೇಕಾಗುತ್ತದೆ" [೨೪]

ಎಂಬ ಸಾಲುಗಳಲ್ಲಿ ಅಭಿರುಚಿಯನ್ನು ಸಂಭಾಳಿಸಬಹುದು, ಅತಿ ದಾಹವನ್ನಲ್ಲ ಎಂಬ ಸ್ಪಷ್ಟತೆಯನ್ನು ತರುತ್ತದೆ. ಸ್ವತಂತ್ರ್ಯ ಆಲೋಚನೆಯಲ್ಲಿ ರಚಿತಗೊಂಡ ಬರಹ ಸಾರ್ವಜನಿಕವಾದಾಗ ಅಭಿಪ್ರಾಯ ಭಿನ್ನತೆಯನ್ನು ಇದು ಪ್ರತಿನಿಧಿಸುತ್ತದೆ. ಇದು ಕೇವಲ ಕವನಗಳ ಭಿನ್ನತೆಯಲ್ಲ ಕವಯಿತ್ರಿಯ ಬರವಣಿಗೆಯನ್ನು ಒಪ್ಪಿಕೊಳ್ಳುವ ದ್ವಂದ್ವದ ಭಿನ್ನತೆಯ ದೃಷ್ಟಿ ಇಲ್ಲಿದೆ. ಮುಂದುವರೆದು,

"ಇತ್ತೀಚೆಗೆ ಕೆಲವರಲ್ಲಿ
ಕ್ಯಾಬರೆ ಖಯಾಲಿ ಹೆಚ್ಚಾಗಿ
ಬಿಕಿನಿ ತೊಟ್ಟ ಕವನಗಳು
ಮಂಚದ ಮೇಲೆ ಮಲಗುತ್ತವೆ
ಪಾರಾಗಲು ಹಾತೊರೆಯುತ್ತವೆ
ಭಯದಿಂದ ಆಸೆಯಿಂದ". [೨೫]

ಕಲ್ಪನೆ ಮತ್ತು ವಾಸ್ತವಗಳ ಮಿಳಿತ ಈ ಕವಿತೆಯದು. ಮೇಲ್ನೋಟಕ್ಕೆ ಇದು ವಿಮರ್ಶೆ ಎಂದು ಕಂಡರು ಕವನದಲ್ಲಿ ಕಂಡ ಹೆಣ್ಣಿನ ಸೌಂದರ್ಯವನ್ನು ಬಯಲು ಮಾಡುವುದಿದೆಯಲ್ಲ ಅದು ಅತಿರೇಕದ್ದು. ಒಪ್ಪಿತ ಸಮಾಜಿಕ ಮನಸ್ಥಿತಿ ಓರೆ ಕೋರೆಗಳನ್ನು ನೇರವಾಗಿ ಖಂಡಿಸುವ ಕ್ರಮ ಪ್ರತಿಭಾರದ್ದು. ಇದು ಸಾಧ್ಯವಾದದ್ದು ಅವರ ಕವಿತೆಗಳಲ್ಲೇ, ಏಕೆಂದರೆ ಅಧೀನ ಸಂಸ್ಕೃತಿ ಎಂದು ಹೇಳುತ್ತಾ ಹೆಣ್ಣನ್ನು ಶೋಷಣೆಯ ಪ್ರತಿರೂಪವಾಗಿಸಿ ಕೊಂಡು, ಬಂದ ಸಮಾಜಕ್ಕೆ ಇವರ ಕವನಗಳು ಸದಾ ಪ್ರಶ್ನೆಗಳೊಂದಿಗೆ ಸ್ವಾಗತಿಸುತ್ತವೆ. ಸಮಾಜ ಬದಲಾಗಿದೆ, ಹೆಣ್ಣು ಬದಲಾಗಿದ್ದಾಳೆ, ಆರ್ಥಿಕ, ಉದ್ಯೋಗ ಸ್ವಾತಂತ್ರ್ಯ ಅವಳಲ್ಲಿದೆ ಎಂದು ಉದ್ದುದ್ದ ಭಾಷಣ ಮಾಡುವವರು ಅವಳ ಶೋಷಣೆಯ ಮತ್ತೊಂದು ಮುಖವನ್ನು ಮರೆ ಮಾಚುತ್ತಾರೆ.

ಷರೀಫರ ಕವನಗಳಲ್ಲಿ ಸಾಮಾಜಿಕ ಹಂಬಲದ ಹಸಿವಿದೆ. ಅದು ಹೆಣ್ಣಿನ ಮುಖಾಂತರ ಕಂಡಾಗ ಅದು ಅನಾವರಣವಾಗುವ ನಾನಾ ಬಗೆಯನ್ನು ಅವರ ಕವಿತೆಗಳು ಕಟ್ಟಿಕೊಡುತ್ತವೆ. ಬದಲಾವಣೆ ಬಯಸುವ ಹೆಣ್ಣಿಗೆ ಧರ್ಮಗಳ ಕಟ್ಟುಪಾಡುಗಳಿರುವುದಿಲ್ಲ. ಆದರೆ ಹೆಣ್ಣನ್ನು ಧರ್ಮಗಳಲ್ಲಿ, ನೀತಿನಿಯಮಗಳಲ್ಲಿ, ಕಟ್ಟು ಕಟ್ಟಳೆಗಳ ನೆಪವೊಡ್ಡಿ ಅವಳನ್ನು ಸದಾ ಬಂಧಿಯಾಗಿಸಲು ಹವಣಿಸುವ ಈ ಸಮಾಜಕ್ಕೆ ಷರೀಫರ ಕವನಗಳೇ ಪ್ರಶ್ನೆಯಾಗಿ, ಉತ್ತರವಾಗಿ ಮತ್ತು ಎಚ್ಚರದ ಪ್ರತಿಮೆಗಳಾಗಿಯೂ ನಿಲ್ಲುತ್ತವೆ.

“ಜನ ಜಂಗುಳಿಯಲ್ಲಿ ಕಳೆದಿರುವ
ಬದುಕಿನ ಜೊತೆಗಾರನಿಗೆ
ಮತ್ತೆ ಮತ್ತೆ ತೊಳೆಯುತ್ತೇನೆ
ಮುಲಾಮು ಸವರುತೇನೆ
ಎಂದಿಗೂ ಒಂದಾಗದ ರೈಲು ಹಳಿಗಳಂತೆ” [೩೬]

ಹೆಣ್ಣಿನ ಅಂತರಂಗ ಗಂಡಿನ ಮನಸ್ಸಿನ ಪ್ರತಿರೂಪ ಎಂಬ ಹೇಳಿಕೆಯನ್ನು ಹುಸಿಯಾಗಿಸುತ್ತದೆ. ತನ್ನ ತನ ಮತ್ತು ಸ್ವಂತಿಕೆಯ ಆಯಾಮಗಳ ನಡುವೆಯೇ ಬದುಕಿನ ಘಟ್ಟವನ್ನು ಧ್ವನಿಸುತ್ತದೆ. ನಂಬಿಕೆ ರೂಢಿಗತವಾದರೆ ಆಲೋಚನೆ ವ್ಯಕ್ತಿಗತ ನಿಲುವಿನ ಸ್ವಂತದ್ದು. ಈ ಸ್ವಂತಿಕೆಯನ್ನು ಕಳೆದುಕೊಂಡ ಗಂಡು ಹೆಣ್ಣಿನ ಮನಸ್ಸುಗಳ ಹೊಯ್ದಾಟವಿದೆ.

ಅಮೇರಿಕಾದ ಚಿತ್ರನಟಿ ಮರ್ಲಿನ್ ಮನ್ರೋ ಹೇಳುವಂತೆ

“ಮಹಿಳೆಗೆ ಸರಿಯಾದ
ಶೂಗಳನ್ನು ತೊಡಿಸಿ ನೋಡಿ
ಆಕೆ ಜಗತ್ತನ್ನೇ ನಡೆದು
ಕ್ರಮಿಸ ಬಲ್ಲಳು” [೩೭]

ಎಂಬ ಸಾಲುಗಳು ಹೆಣ್ಣಿನ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಿರುವ ಕಡಿವಾಣವನ್ನು ನೇರವಾಗಿ ಟೀಕಿಸುತ್ತವೆ. ಸಮಾಜ ಬದಲಾಗಿದೆ, ಎಂದು ಹೇಳುವ ಎಷ್ಟೋ ಮಂದಿಯ ಆಲೋಚನೆಗಳು ಮಗ್ಗಲು ಪಾಡಾಗಿರುತ್ತವೆ. ‘ಬದಲಾವಣೆ ಜಗದ ನಿಯಮ’ ಎಂಬ ವೇದಾಂತದ ಮಾತುಗಳಿಗೆ ಒಡ್ಡಿ ಕೊಳ್ಳುವ ಮನಸ್ಸು ಮಾಡದ ಎಷ್ಟೋ ಜನ ಈ ನಿರೀಕ್ಷೆ ಮತ್ತು ಪ್ರತೀಕ್ಷೆಗಳ ನಡುವೆ ಇರುವ ಅಂತರವನ್ನು ಗುರ್ತಿಸಲು ಮರ್ಲಿನ್‌ರ ಮಾತು ಪ್ರತಿನಿಧೀಕರಣದ ಸಂಕೇತವಾಗಿದೆ. ನಾಳಿನ ಬದುಕನ್ನು ಕಟ್ಟುವಲ್ಲಿ, ಹೊಸ ತನವನ್ನು ಧ್ವನಿಸುವಲ್ಲಿ ನಿರೀಕ್ಷೆ ಪ್ರಯೋಜನಕಾರಿ. ಆದರೆ ನಿರೀಕ್ಷೆಗಳೇ ರೈಲು ಹಳಿಗಳಾದರೆ ಹೊಂದಾಣಿಕೆಯ ಮಾತು ಗಾಳಿ ಗೋಪುರವೇ ಸರಿ. ಕವಿತೆ ಸಾರ್ವತ್ರಿಕ ಆಶಯಗಳ ಪ್ರತಿರೂಪವೂ ಹೌದು. ಹಲವು ವೇಳೆ ಮಹಿಳೆಯು ತನ್ನ ಅಂತರಂಗದ ಆಳದಿಂದ

ತನಗರಿವಿಲ್ಲದೇ ಚಿಮ್ಮುವ ಅಭಿವ್ಯಕ್ತಿಗಳು ತಮ್ಮದೇ ಆದ ಹೊಸಭಾಷೆ ಮತ್ತು ಅರ್ಥವಂತಿಕೆಯನ್ನು ಸೂಚಿಸುತ್ತವೆ. ಇದು ವ್ಯಕ್ತಿಗತ ನೆಲೆಯ ಮತ್ತೊಂದು ಮಾದರಿಯೂ ಹೌದು. ಇದೂ ಸಹ ಬದಲಾವಣೆಯ ಹೊಸದಾರಿಯಾಗಿದೆ.

೬.೫ ಮಹಿಳಾ ಅಸ್ತಿತ್ವದ ಸಾಮಾಜಿಕ ಗ್ರಹಿಕೆಗಳು

ಆಧುನಿಕ ಮಹಿಳಾ ಕಾವ್ಯದ ಅಧ್ಯಯನದಿಂದ ತಿಳಿದು ಬರುವ ಪ್ರಮುಖ ಅಂಶ, ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸಿಲುಕಿದ ಮಹಿಳೆಯ ಅಸ್ತಿತ್ವ ಯಾವ ಬಗೆಯದು? ಎಂಬ ಪ್ರಶ್ನೆಯನ್ನು ಕವಯಿತ್ರಿಯರು ಹೇಗೆ ಕಂಡಿದ್ದಾರೆಂಬುದು. ಅಂದರೆ ವ್ಯವಸ್ಥೆಯನ್ನು ನಿಯಂತ್ರಿಸುವ ಶಕ್ತಿ ಹೇಗೆ ಗಂಡಿನ ಪರವಾಯಿತು? ಎಂದು ನಮ್ಮೆಲ್ಲರನ್ನು ಸಹಜವಾಗಿ ಕಾಡುವ ಪ್ರಶ್ನೆ. ಗಂಡಿನ ಜೀವನದ ಅರ್ಧ ಭಾಗವಾಗಿದ್ದ ಮಹಿಳೆಯನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಲು ಕಾರಣವೇನು? ಎಂಬ ಪ್ರಶ್ನೆಗೆ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ಸ್ತಿತ್ಯಂತರಗಳು ನಮ್ಮ ಮುಂದಿವೆ. ಹಾಗಾಗಿ ಸಾಮಾಜಿಕ ಸ್ಥಿತ್ಯಂತರ ವ್ಯವಸ್ಥೆ ಹೆಣ್ಣನ್ನು ಗೃಹೀತ ನೆಲೆಯಲ್ಲಿಯೇ ಕಾಣಲು ಬಯಸಿತು. ಇವೆಲ್ಲ ಕಾರಣಗಳಿಂದ ಮಹಿಳೆ ಹೊಸ ರೀತಿಯಲ್ಲಿ ತನ್ನ ಬದುಕನ್ನು ಕಟ್ಟಿಕೊಳ್ಳಲು ಹಂಬಲಿಸಿದ್ದರಲ್ಲಿ ತಪ್ಪಿಲ್ಲ. ಇಷ್ಟೆಲ್ಲ ಬದಲಾವಣೆಗಳನ್ನು ಬಯಸುವ ಮಹಿಳೆ, ಪುರುಷ ವಿರೋಧಿ ನೀತಿಯಲ್ಲಿ ತನ್ನ ಆಲೋಚನೆಯನ್ನು ಬಳಸಲಿಲ್ಲ. ಬದಲಾಗಿ ಪುರುಷ ವಿರೋಧಿ ನೆಲೆಯನ್ನು ತೊರೆದು ಪುರುಷ ಸ್ಥಾಪಿತ ಮೌಲ್ಯಗಳ ತಪ್ಪುಗಳನ್ನು ಗುರ್ತಿಸಿದ್ದು. ಇದರ ಜೊತೆಗೆ ಸಾಮಾಜಿಕವಾಗಿ ಮುಂಚೂಣಿಯಲ್ಲಿದ್ದ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ನಲುಗಿದ ಹೆಣ್ಣಿನ ಸಂವೇದನೆಯನ್ನು ಜಾಗೃತಗೊಳಿಸುವುದು. ಗಂಡಿನ ಆಲೋಚನೆ ಮತ್ತು ಸಾಮಾಜಿಕ ಆಯಾಮದಲ್ಲಿನ ಭಿನ್ನ ನೋಟಗಳನ್ನು ಇಂದು ಮಹಿಳೆ ಶೀರ್ಘವಾಗಿ ಗುರ್ತಿಸುವ ಮತ್ತು ಖಂಡಿಸುವ ಮಟ್ಟಕ್ಕೆ ಬಂದಿರುವುದು ಖುಷಿ ವಿಚಾರ. ಹೆಣ್ಣಿನ ಅಂಗಾಂಗಗಳು ಗಂಡನ್ನು ಸಂತೃಪ್ತಿಗೊಳಿಸಲು ಮಾತ್ರ ಇವೆ ಎಂಬ ತಪ್ಪು ಗ್ರಹಿಕೆಯನ್ನು ಇಂದು ಮಹಿಳಾ ಕಾವ್ಯಗಳ ಓದು ಸುಳ್ಳಾಗಿಸಿವೆ. ಏಕೆಂದರೆ ಕನ್ಯಾಪೊರೆ, ಮಾತೃತ್ವ, ಸಂಭೋಗ ಮುಂತಾದುವುಗಳು ಹೆಣ್ಣಿನ ಪ್ರಥಮ ಅಂಶಗಳು ಎಂಬ ಮಾತು ಇಂದು ಪದಶಃ ಅರ್ಥ ಕಳೆದುಕೊಳ್ಳುವ ಹಂತ ತಲುಪಿವೆ. ಏಕೆಂದರೆ, ವೈಜ್ಞಾನಿಕ ಕಾರಣದಿಂದ ಹೆಣ್ಣಿನ ದೇಹದಲ್ಲಾಗುವ ಬದಲಾವಣೆಗಳು ಆಕೆಯ ಪೂರ್ವ ಜನ್ಮದ ಪಾಪ ಕರ್ಮವಲ್ಲ ಎಂಬ ಮಾತು ಇಂದು ಅಕ್ಷರ ಸಹ ನಿಜ. ರಾತ್ರಿ ಪಾಳಿಯಲ್ಲಿ ಕೆಲಸ ನಿರ್ವಹಿಸುವ ಮಹಿಳೆಯ ತಾಕಲಾಟ, ನೋವು, ಸಂಕಟ, ಸಂತೋಷ ಅವಳನ್ನು ಹೊಸ ಆಲೋಚನೆಯ ದಿಕ್ಕಿನೆಡೆಗೆ ಅಣಿಗೊಳಿಸುತ್ತಿವೆ. ಮಹಿಳಾ ಅಧ್ಯಯನವೆಂದರೆ ಪುರುಷ ವಿರೋಧಿ ನೆಲೆ ಎಂಬ ತಪ್ಪು ಗ್ರಹಿಕೆ ಇಂದು ಇಲ್ಲವಾಗಿದೆ. ಸಮಾಜವನ್ನು ಸೃಷ್ಠಿ ಮಾಡಿದವನು ಪುರುಷನಾದರೆ ಅದರ ಸಾಧಕ ಬಾಧಕಗಳಿಗೂ ಅವನೇ ನೇರ ಹೊಣೆಗಾರ. ಆದ್ದರಿಂದಲೇ ಸ್ತ್ರೀವಾದಿ

ನೆಲೆಯ ಆಲೋಚನೆಗಳು ಪುರುಷ ವ್ಯವಸ್ಥೆಯನ್ನು ಪ್ರಶ್ನಿಸುವುದು ಹೆಣ್ಣಿನ ಆಲೋಚನೆ ಸಮಾಜ ಮತ್ತು ಕುಟುಂಬ ಪರವಾದರೆ ಗಂಡಿನ ಆಲೋಚನೆ ಈ ಎರಡನ್ನೂ ಬಿಗಿ ಹಿಡಿತದಲ್ಲಿಟ್ಟುಕೊಳ್ಳುವ ಪ್ರಯತ್ನ ಮಾಡುವುದು. ಇದರಿಂದ ಅವನ ಏಕಮುಖವಾದ ಆಲೋಚನೆಗೆಯಲ್ಲಿ ಹೆಣ್ಣಿನ ಆಸೆ ಆಕಾಂಕ್ಷೆಗಳೂ ಗೌಣವಾಗುತ್ತದೆಂಬುದನ್ನು ಮಹಿಳಾ ಕಾವ್ಯಗಳು ಪ್ರಶ್ನಿಸಲ್ಪಟ್ಟಿವೆ.

ಹೆಣ್ಣು ಸೌಮ್ಯವಂತಳಾಗಿರಬೇಕು, ಲಜ್ಜೆ ಅವಳ ಮೌಲ್ಯವಾಗಬೇಕೆಂಬ ಗಂಡಿನ ಮಾನದಂಡಗಳು ಇಂದು ಅವಳನ್ನು ಹೊಸ ಆಲೋಚನೆಗೆ ಒಳಗು ಮಾಡಿವೆ. ಪಿತೃ ಪ್ರಧಾನ ಸಮಾಜದಲ್ಲಿ ಹೆಣ್ಣು ಅಪ್ರಧಾನ್ಯಳು. ಆದರೆ ಸಮಾಜ ಶಾಸ್ತ್ರದ ಅಧ್ಯಯನ ನಮಗೆ ತಿಳಿಸುವುದು ಮಾತೃ ಪ್ರಧಾನ ವ್ಯವಸ್ಥೆಯಲ್ಲಿ ಗಂಡಿಗಿದ್ದ ಗೌರವವನ್ನು ಅಂದರೆ ತಿರಸ್ಕರಿಸುವ ಗುಣ ಹೆಣ್ಣಿಗಿಲ್ಲದಿರುವುದು. ಈ ಅಂಶಗಳನ್ನು ಪ್ರತಿಯೊಬ್ಬ ಆಧುನಿಕ ಕವಯಿತ್ರಿಯರೂ ತಮ್ಮದೇ ಬರಹಗಳಲ್ಲಿ ಚಿತ್ರಿಸಿದ್ದಾರೆ. ಅವರ ಬರವಣಿಗೆಯಲ್ಲಿ ಮೂಡಿದ ದ್ರೌಪದಿ, ಸೀತೆ, ಸಾವಿತ್ರಿಯರ ಚಿತ್ರಣ ನಮಗೆ ಆಧುನಿಕ ಪ್ರತಿಮೆಗಳ ಪ್ರಗತಿಪರ ಮಹಿಳೆಯ ಮುಖಭಾವ ನಮ್ಮ ಕಣ್ಮುಂದೆ ನಿಲ್ಲುವಂತೆ ಮಾಡುತ್ತವೆ. ಜಾಗತೀಕರಣದ ಪ್ರಭಾವದಿಂದಾಗಿ ಮಹಿಳೆ ಎಲ್ಲವನ್ನೂ ಸವಾಲಾಗಿಯೇ ತೆಗೆದುಕೊಂಡಿದ್ದಾಳೆ. ನಿರಂತರ ಕ್ರಿಯಾಶೀಲಳೂ ಆಗಿ ಎಲ್ಲವನ್ನೂ ನಿಭಾಯಿಸುವ ಹಂತಕ್ಕೆ ಬಂದು ನಿಂತಿದ್ದಾಳೆ. ವಿದ್ಯಾವಂತ, ಉದ್ಯೋಗಸ್ಥೆ ಮಹಿಳೆಯ ಬದುಕು ಒಂದು ಮಾದರಿಯಾದರೆ ಗ್ರಾಮೀಣ, ದಲಿತ, ಅನಕ್ಷರಸ್ಥ, ಅನುಕೂಲವಿದ್ದೂ ಅಕ್ಷರ ಕಲಿಯದ ಮಹಿಳೆಯರ ಬದುಕಿನ ಅನಾವರಣವನ್ನೂ ಮಹಿಳಾ ಕಾವ್ಯ ಮಾಡಿದೆ.

"ಪುರುಷ ಪ್ರಧಾನತೆ ಇತಿಹಾಸದುದ್ದಕ್ಕೂ, ಎಲ್ಲಾ ಸಂಸ್ಕೃತಿಗಳಲ್ಲೂ ಲೈಂಗಿಕ ಹಿಂಸೆಯ ಮೇಲೆ ಆಧಾರಿತವಾಗಿದ್ದು, ಪಿತೃ ಪ್ರಧಾನತೆ ಎಲ್ಲ ಸಮಾಜದ ಎಲ್ಲ ರಂಗಗಳನ್ನೂ, ಸಂಸ್ಥೆಗಳನ್ನೂ ಆಳಿಕೊಂಡು ಬಂದಿದೆ. ಈ ಪುರುಷಾಧಿಕಾರ ಸಂಸ್ಕೃತಿಗೆ ಸವಾಲೆಸೆಯಲು ಮಹಿಳೆಯರು ಜೊತೆಯಾಗಿ ದುಡಿಯಬೇಕು, ಪುರುಷ ಮಿಥ್ಯಗಳನ್ನು ತಿರುಗು ಮುರುಗಾಗಿಸಲು ದುಡಿಯಬೇಕು. ಪುರುಷ ಭಾಷೆಯನ್ನು, ನಂಬಿಕೆಯನ್ನು ತೊಡೆಯಬೇಕು."[೩೮]

ಈ ಮಾತುಗಳು ಮಹಿಳಾ ಸ್ವಾವಲಂಬನೆಯ ಬಗೆಗೆ ಕಾಳಜಿ ತುಂಬಿದ ಮಾತುಗಳೆನ್ನಬಹುದು. ಮಹಿಳೆಯನ್ನು ನಾವು ಸಾಮಾಜಿಕವಾಗಿ ನೋಡುವುದಕ್ಕಿಂತ ಹೆಚ್ಚಾಗಿ ಸಾಂಸ್ಕೃತಿಕವಾಗಿ ನೋಡುತ್ತಿದ್ದೇವೆ. ಈ ಸಾಂಸ್ಕೃತಿಕತನ ಹೆಣ್ಣಿನ ವಯಕ್ತಿಕ ನೆಲೆಯನ್ನು ಗೌಣವಾಗಿಸುತ್ತದೆ. ಏಕೆಂದರೆ ತಾಯಿ, ಮಡದಿ, ಮಗಳು ಮುಂತಾದ ರೂಪಾಂತರಗಳಾಗುತ್ತಾಳೆಯೆ ವಿನಃ ವಯಕ್ತಿಕ ನೆಲೆಗೆ ತನ್ನನ್ನು ತಂದುಕೊಳ್ಳುವುದೇ ಇಲ್ಲ ಇದನ್ನೇ ನಮ್ಮ ಸ್ತ್ರೀವಾದಿಗಳು ಪ್ರಶ್ನಿಸಿದ್ದು.

ಪ್ರಸ್ತುತ ಮಹಿಳೆ ತನ್ನ ವ್ಯಕ್ತಿತ್ವವನ್ನು ಪ್ರತ್ಯೇಕವಾಗಿ ರೂಪಿಸಿಕೊಳ್ಳುವ ಅಗತ್ಯ ಅನಿವಾರ್ಯತೆ. ತಾನು ಗ್ರಹಿಸಿಕೊಂಡದ್ದನ್ನೂ ತನ್ನದನ್ನಾಗಿಸುವಲ್ಲಿ ಅವಳಿಗೆ ಹಲವು ಸವಾಲುಗಳು ಇಂದು ಎದುರಾಗಿವೆ. ಪುರುಷನಿಗೆ ವಯಕ್ತಿಕವಾದ ವಿಚಾರಗಳು ಮಹಿಳೆಗೆ ಸಾಮಾಜಿಕವಾಗಿ ಪರಿಣಮಿಸಿವೆ. ಇಂಥ ಸಂದರ್ಭದಲ್ಲಿ ಸಮಾಜ ಹೇರಿದ ನೀತಿ ನಿಯಮಗಳ ಬಿಕ್ಕಟ್ಟನ್ನು ಕಳಚುವುದು ಅಗತ್ಯವಾದುದು. ಏಕೆಂದರೆ ಸ್ತ್ರೀ ಪುರುಷರ ಆಲೋಚನೆ ಹೊಸ ಮಾರ್ಗದತ್ತ ಹರಿದಿದೆ. ಮಹಿಳೆ ಇಂದು ತನ್ನನ್ನು ತಾನು ಗುರ್ತಿಸಿಕೊಳ್ಳುವ ಅನಿವಾರ್ಯ ಹಂತಕ್ಕೆ ಬಂದು ನಿಂತಿದ್ದಾಳೆ. ಕೇವಲ ಏಕವ್ಯಕ್ತಿ ನೆಲೆಯ ಕಲ್ಪನೆ ಅವಳಲ್ಲಿಲ್ಲ, ಒಟ್ಟಾರೆ ಇತರ ಸಮುದಾಯಗಳ ಪ್ರತಿನಿಧಿಯೂ ಆಕೆ. ಆದ್ದರಿಂದ ಸಾಮುದಾಯಿಕ ನೆಲೆಯ ಬೆಂಬಲ ಇಂದು ಪ್ರಗತಿಪರ ಮಹಿಳೆಗೆ ಅಗತ್ಯವಾದುದಾಗಿದೆ. ಈ ನಿಟ್ಟಿನಲ್ಲಿ ನಮ್ಮ ಮಹಿಳಾ ಸಾಹಿತ್ಯ ಹಲವು ಸವಾಲುಗಳೊಂದಿಗೆ ಹೊಸ ತನವನ್ನು ರೂಢಿಸಿಕೊಂಡಿದೆ ಎನ್ನಬಹುದು. ಬಹಳ ಮುಖ್ಯವಾಗಿ ಆಧುನಿಕ ಮಹಿಳಾ ಕಾವ್ಯ ಸಾಮಾಜಿಕ ಬದಲಾವಣೆಯನ್ನು ತರುವಲ್ಲಿ ಬಹಳ ಪ್ರಮುಖವಾದವುಗಳಾಗಿದೆ ಎನ್ನಬಹುದು. ಇಲ್ಲಿ ಕೇವಲ ಕವಯಿತ್ರಿಯರ ಸೀಮಿತ ಆಲೋಚನೆ ಮಾತ್ರವಾಗಿರದೆ, ಸಮಾಜದ ಮಹಿಳಾಪರ ಪ್ರತಿನಿಧೀಕರಣವೂ ಹೌದು. ಅಂದರೆ ಮಹಿಳಾ ಕಾವ್ಯದ ಆಶಯ ಪುರುಷ ವಿರೋಧೀಕರಣದ ನೆಲೆಯಲ್ಲಿ ನೋಡುವಂತದ್ದಲ್ಲ, ಆ ಮೂಲಕ ಮಹಿಳೆಯರಿಗೆ ಜಾಗೃತಿ ಮೂಡಿಸುವಂತ ನಿಟ್ಟಿನಲ್ಲಿ ಕೆಲಸ ಮಾಡುವಂತದ್ದಲ್ಲ. ಪ್ರಸ್ತುತ ಸಮಾಜಕ್ಕೆ ಸಾಮಾಜಿಕ ಬದ್ಧತೆಯ ಅನಿವಾರ್ಯತೆ ಏಕೆ ಅಗತ್ಯವಾದುದು. ಜೊತೆಗೆ ಮಹಿಳಾ ಜಗತ್ತಿಗೆ ಜಾಗೃತಿ ಮೂಡಿಸುತ್ತಾ, ಅವರ ಸುಧಾರಣೆಗೆ ಶೋಷಣೆಯ ಅರಿವನ್ನು ಮೂಡಿಸುವುದಷ್ಟೇ ಅಲ್ಲ, ಅದನ್ನು ಎದುರಿಸುವ ಮನೋಬಲವನ್ನು ತುಂಬುವ ಪ್ರಯತ್ನವೂ ಹೌದು. ಸಾಮಾಜಿಕವಾಗಿ ರೂಪಿತಗೊಂಡ ಮೌಲ್ಯಗಳನ್ನು ಒಡೆದು ಜೀವನಮುಖಿಯಾದ ಮನೋಬಲಗಳನ್ನು ತುಂಬುವ ಕೆಲಸವನ್ನು ಮಹಿಳಾ ಬರವಣಿಗೆ ಮಾಡುತ್ತಿವೆ.

ಸಾಮಾಜಿಕ ಕ್ರೌರ್ಯಗಳಿಗೆ ಬಲಿಯಾಗುವ ಮಹಿಳೆಗೆ ನ್ಯಾಯ ದೊರಕಿಸುವುದರ ಜೊತೆಗೆ ಇಂತಹ ಕೃತ್ಯ ಮತ್ತೊಂದು ಹೆಣ್ಣಿಗೆ ಎದುರಾಗದಂತೆ ತಡೆಯುವ ಕೆಲಸವಾಗಬೇಕು. ನಮ್ಮಲ್ಲಿ ವರದಕ್ಷಿಣೆ ಪಿಡುಗುಗಿಂತ ಅತ್ಯಂತ ಕರಾಳ ಪಿಡುಗುಗಳಿವೆ. ಮಾನಸಿಕ ಹಿಂಸಾಚಾರ, ಇತ್ತೀಚೆಗೆ ಚರ್ಚೆಗೆ ಗ್ರಾಸವಾಗುತ್ತಿರುವ ಮೀಟೂ ಪ್ರಕರಣ, ಲೈಂಗಿಕ ದೌರ್ಜನ್ಯ, ವೃದ್ದೆ ಮತ್ತು ಮಕ್ಕಳ ಮೇಲಿನ ಅತ್ಯಾಚಾರ ಮುಂತಾದುವುಗಳನ್ನು ಸಾಧ್ಯವಾದಷ್ಟು ತಡೆದು, ಕಠಿಣ ಕ್ರಮಗಳನ್ನು ಕೈಗೊಂಡರೆ ಅಭಿವೃದ್ಧಿ ಪಥದತ್ತ ಹೆಜ್ಜೆ ಇಟ್ಟ ಮಹಿಳೆಗೆ ಮಾನಸಿಕ ಧೈರ್ಯ ಬರಲು ಸಾಧ್ಯ. ಆದ್ದರಿಂದ ಮಹಿಳಾ ಅಭಿವೃದ್ಧಿ ವಿನೂತನ ಮಾರ್ಗದಲ್ಲಿ ಕಂಗೊಳಿಸುತ್ತದೆ. ಸಾಮಾಜಿಕ ಪ್ರಗತಿಗಾಗಿ ಹೋರಾಡುವ ಮಹಿಳೆಯನ್ನು ಇಂದು ಸಾರ್ವಜನಿಕ ರಂಗದಲ್ಲಿ ಗುರ್ತಿಸುವ ಪರಿಧಿ ಬಹಳ ಕಡಿಮೆ. ಮಹಿಳೆಯನ್ನು ಜಾಗೃತ ಪ್ರಜ್ಞೆಯ ಪ್ರತೀಕವಾಗಿ ಗುರ್ತಿಸುವ ಅವಶ್ಯಕತೆ ಇಂದಿದೆ.

ಸಮಾಜದ ಗ್ರಹಿಕೆಗೆ ತನ್ನ ಚಿಂತನಗಳನ್ನು ಅತ್ಯಂತ ಸುಲಭವಾಗಿ ತಲುಪಿಸುವ ಮಾರ್ಗ ಸೃಷ್ಟಿಯಾಗಿದೆ. ಇತ್ತೀಚಿನ ಮಹಿಳಾ ಅಭಿವ್ಯಕ್ತಿಗಳು ಎಲ್ಲಾ ಕ್ಷೇತ್ರದಲ್ಲೂ ಹೊಸ ಹೆಜ್ಜೆ ಸೃಷ್ಟಿಸಿವೆ. ಪುರುಷ ವಿರೋಧಿ ನಿಲುವುಗಳಿಗಿಂತ ಪುರುಷ ಪ್ರಧಾನ ಆಯ್ಕೆಗಳನ್ನು ಪ್ರಶ್ನಿಸುವ ಕೌಶಲ ಹೆಣ್ಣಿಗೆ ಶಿಕ್ಷಣದ ಮೂಲಕ ದೊರಕುತ್ತಿದೆ. ಶಿಕ್ಷಣದ ಆಯ್ಕೆ ಕಲಿಕೆಗೆ ಮಾತ್ರ. ಸಮಾಜದ ಬದಲಾವಣೆಗೆ ಸ್ಪಂದಿಸದು, ಅಳವಡಿಕೆಯು ನೆಲೆಗಳನ್ನು ಕಂಡುಕೊಳ್ಳಬೇಕಾಗಿದೆ. ಬೆಳಗೆರೆ ಜಾನಕಮ್ಮ, ತಿರುಮಲೆ ರಾಜಮ್ಮನ ಕವಿತೆಗಳು ಈ ಅಭಿವ್ಯಕ್ತಿಯ ಚಿಂತನೆಯನ್ನು ಮೊದಲ 'ಸ್ತ್ರೀ ಚಿಂತನೆ'ಯಾಗಿ ಗುರ್ತಿಸಬಹುದು.

೬.೬ ಬದಲಾವಣೆಯ ನೆಲೆಯಲ್ಲಿ ಮಹಿಳಾ ಕಾವ್ಯದ ಚಿಂತನೆ.

ಸಾಮಾಜಿಕ ಬದಲಾವಣೆಯ ಸಂದರ್ಭದಲ್ಲಿ ಮಹಿಳೆ ಬದಲಾದರೆ, ಬರಹಗಾರ್ತಿಯ ಬದುಕು ಮತ್ತು ಆಲೋಚನೆಯ ವಿನ್ಯಾಸಗಳೂ ಹೊಸ ನೆಲೆಯನ್ನು ಕಟ್ಟಿಕೊಡುತ್ತದೆ. ಅಂದರೆ ಬದಲಾವಣೆ ಎಂಬುದು ಕೇವಲ ವ್ಯಕ್ತಿಗತ ನೆಲೆಯಲ್ಲಿ ಮಾತ್ರವಲ್ಲ ಸಮಾಜದ ಒತ್ತಡದ ಪ್ರಭಾವವೂ ಬಹಳ ಮುಖ್ಯವಾದದು. ಅದು ಆಕ್ರೋಶದ ನೆಲೆ, ಪ್ರಭಾವಗಳ ನೆಲೆ ಅಥವಾ ಒತ್ತಡದ ನೆಲೆಯ ರೂಪದಲ್ಲಿ ಬಂದರೂ ಅಂತಿಮವಾಗಿ ಅದು ಪರಿಣಾಮಗಳ ರೂಪವನ್ನೇ ಪಡೆಯುತ್ತದೆ. ಏಕೆಂದರೆ ಮಹಿಳಾ ಕಾವ್ಯಗಳ ಅಧ್ಯಯನಕ್ಕೆ ತೊಡಗಿದಂತೆಲ್ಲಾ ಇದರ ಸ್ಪಷ್ಟ ಚಿತ್ರಣ ನಮಗಾಗುತ್ತದೆ. ಆಯ್ಕೆ ಎಂಬ ಪದವೇ ಸ್ವಾತಂತ್ರ್ಯದ ಸಂಕೇತ ಈ ಆಯ್ಕೆಯ ಮಾದರಿ ಹೆಣ್ಣಿಗಿರುವುದು ಒಪ್ಪಿತ ಸಮಾಜದ ಮೂಲಕವೇ. ಅಂದರೆ ಲಿಂಗ ಮಾದರಿಯಾಗಿ ಹೆಣ್ಣನ್ನು ನೋಡುವಾಗ ಆಯ್ಕೆಯ ಸ್ವಾತಂತ್ರ್ಯ ಗೌಣವಾಗುತ್ತದೆ. ೨೧ನೇ ಶತಮಾನದಲ್ಲೂ ಹಳೆಯ ಮಾದರಿಯ ವಿಚಾರಗಳನ್ನೇ ನಾವು ಕೆದಕುತ್ತಾ ಹೋಗುತ್ತೇವೆಂದರೆ ಸಾಮಾಜಿಕ ಸ್ಥಾನೀಕರಣದ ವರ್ತುಲ ವ್ಯವಸ್ಥೆಗೆ ಮಹಿಳೆ ಸಿಕ್ಕಿಕೊಂಡಿರುವ ನೈಜತೆಯ ಅರಿವು ನಮಗಾಗುತ್ತದೆ. ಏಕೆಂದರೆ ಹೆಣ್ಣಾದವಳು ಸಾಮಾಜಿಕವಾಗಿ ನೊಂದಿರುವ, ಮತ್ತೊಬ್ಬ ಹೆಣ್ಣಿನ ನೋವನ್ನು ತನ್ನ ಬರಹದ ಆಳಕ್ಕಿಳಿಸುವುದು ಇಂದು ಹೆಚ್ಚು ಅವಶ್ಯಕ ಇಂತಹ ಕೆಲಸವನ್ನು ಆಧುನಿಕ ಮಹಿಳಾ ಕಾವ್ಯ ಬಹಳ ಸಮರ್ಪಕವಾಗಿ ಮಾಡುತ್ತಿದೆ ಎಂದರೆ ತಪ್ಪಿಲ್ಲ.

ಆಧುನಿಕ ಮಹಿಳಾ ಕಾವ್ಯವನ್ನು ನಾವು ಅಧ್ಯಯಿನಿಸುತ್ತಾ ಬಂದರೆ ನಮಗೆ ಬಹಳ ಮುಖ್ಯವಾಗಿ ಕಂಡು ಬರುವುದು ಭಾಷಿಕ ಅಭಿವ್ಯಕ್ತಿ ಕ್ರಮ. ಅಭಿವ್ಯಕ್ತಿ ಎಂಬ ಪದ ಬಹು ವಿಸ್ತಾರ ಅರ್ಥ ಪಡೆದಿರುವಂತದ್ದು. 'ದೀರ್ಘ ಆಲೋಚನೆಯ ಫಲವೇ ಅಭಿವ್ಯಕ್ತಿ' ಏಕೆಂದರೆ ಮಹಿಳಾ ಕಾವ್ಯ ಸುಧೀರ್ಘ ಅಭಿವ್ಯಕ್ತಿ ಕ್ರಮಕ್ಕೆ ಮಾದರಿಯಾಗಿದೆ. ಕಾಲದಿಂದ ಕಾಲಕ್ಕೆ ಮಹಿಳಾ ಕಾವ್ಯದಲ್ಲಿ ಕಂಡುಬರುವ ಬದಲಾವಣೆಯ ಅಂಶಗಳೂ ಇದಕ್ಕೆ ಪೂರಕವಾದಂತಹ ಅಂಶಗಳಾಗಿವೆ.

ಮಹಿಳಾ ಕಾವ್ಯದಲ್ಲಿ ಭಾಷಿಕ ಗಟ್ಟಿತನ ಪ್ರಮುಖವಾದ ಅಂಶ. ಭಾಷೆ ಎಂಬುದು ಸಾಮಾಜಿಕವಾಗಿ ಒಂದೆಯಾದರೂ ವ್ಯವಸ್ಥೆ ರೂಪಿಸಿದ ಲಿಂಗ ತಾರತಮ್ಯದ ಭಾಷೆಯೇ ಇಂದು ಹೆಣ್ಣನ್ನು ಬರವಣಿಗೆಯ ಮೂಲಕ ಗಟ್ಟಿಯಾಗಿ ನೆಲೆ ನಿಲ್ಲುವಂತೆ ಮಾಡಿದೆ. ಹೆಣ್ಣು ಭಾಷೆ, ಗಂಡು ಭಾಷೆ ಎಂಬ ಸ್ಥಾನೀಕರಣದ ಮಾತನ್ನು ಪ್ರಶ್ನಿಸುತ್ತಲೇ ಮಹಿಳಾ ಕಾವ್ಯದ ಹೊಸ ಹೊಳಹಿನ ದಾರಿ ಕಂಡುಕೊಂಡಿವೆ. ಇದು ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಲಿಂಗ ತಾರತಮ್ಯ ಸ್ವರೂಪದ ಕರಾಳತೆಯನ್ನು ಅನಾವರಣಗೊಳಿಸುತ್ತಿವೆ. ಇಲ್ಲಿ ಹೆಣ್ಣು ಗಂಡೆಂಬ ಮೇಲು ಕೀಳಿನ ಆರೋಪ ಪ್ರತ್ಯಾರೋಪಗಳಿಲ್ಲ, ಸಾಮಾಜಿಕ ಜವಾಬ್ದಾರಿಯ ಅರಿವನ್ನು ಮೂಡಿಸುವ ನಿಟ್ಟಿನಲ್ಲಿ ಮಹಿಳಾ ಕಾವ್ಯವಿದೆ.

ಕ್ಸೇವಿಯರ್ ಗಾಥಿಯರ್ ಹೇಳುವಂತೆ.

'ಎಲ್ಲಿಯವರೆಗೆ ಮಹಿಳೆಯರು ಮೌನವಾಗಿರುತ್ತಾರೋ ಅಲ್ಲಿಯವರೆಗೆ ಅವರು ಚಾರಿತ್ರಿಕ ಪ್ರಕ್ರಿಯೆಗಳ ಹೊರಗೆ ಉಳಿಯುತ್ತಾರೆ. ಆದರೆ ಗಂಡಸರ ಹಾಗೆ ಬರೆಯಲು ಮಾತನಾಡಲು ತೊಡಗಿದರೆ ಆಗ ಅವರು ಚರಿತ್ರೆಯನ್ನು ಅನಾಥರ ಹಾಗೆ, ಅಂಜು ಮೋರೆ ಹಾಕಿಕೊಂಡು ಪ್ರವೇಶಿಸಬೇಕಾಗುತ್ತದೆ. ತರ್ಕಬದ್ಧವಾಗಿ ನೋಡಿದರೆ ಅದು ಅವರು ತಮ್ಮ ಮಾತಿನ ಮೂಲಕವೇ ಕಲ್ಲೋಲಗೊಳಿಸಬೇಕಾದ ಚರಿತ್ರೆ'.[೩೯] ಮಹಿಳಾ ಅಭಿವ್ಯಕ್ತಿ ಎಂಬುದು ಕಲಿಕೆಯಿಂದ ಬರುವಂತದ್ದಲ್ಲ. ರೂಢಿಗತ ಎಚ್ಚರದ ಪ್ರಜ್ಞೆಯಾದರೆ ಬರವಣಿಗೆಯೂ ಸಹ ಸಾಮಾಜಿಕ ಆಲೋಚನೆಗೆ ದಾರಿ ಮಾಡಿಕೊಡುತ್ತದೆ. ಇತಿಹಾಸವೆಂದರೆ ದಾಖಲು. ಈ ದಾಖಲಾತಿ ಹೆಣ್ಣಿನಿಂದಾದರೆ ಹೊಸ ಆಲೋಚನೆಯ ಸಿದ್ದಿಗೆ ಮುನ್ನುಡಿ ಎಂಬ ಮಾತನ್ನು ಈ ವಾಕ್ಯ ಪ್ರತಿನಿಧಿಸುತ್ತದೆ.

ಹೆಣ್ಣೆಂದರೆ ವಸ್ತುವಿನ ರೂಪದಲ್ಲಿ ಪರಿಭಾವಿಸುವ ಮಂದಿಯೇ ಹೆಚ್ಚು ಆದರೆ ಮನೆಯ ವಸ್ತುಗಳನ್ನೇ ಅಭಿವ್ಯಕ್ತಿಯ ಮಾದರಿಯನ್ನಾಗಿಸಿಕೊಂಡು ಸಮಾಜವನ್ನು ಕೆಣಕುವ, ಪ್ರಶ್ನಿಸುವ ಮಹಿಳಾ ಕಾವ್ಯಗಳು ಹಲವಿವೆ. ಕಾರ್ಯೇಷು ದಾಸಿ, ಕರುಣೇಷು ಮಂತ್ರಿ, ಕ್ಷಮಯಾ ಧರಿತ್ರಿ ಎಂದು ಹೇಳುವ ಗಂಡಿನ ಮಾತುಗಳಿಗೆ ಪ್ರತ್ಯುತ್ತರವನ್ನು ಮಹಿಳಾ ಸಾಹಿತ್ಯ ಬರವಣಿಗೆಯ ರೂಪದಲ್ಲೇ ಕೊಟ್ಟಿದೆ. ಹೆಣ್ಣು ಆಕಾರ ಸ್ವರೂಪಿಣಿ ಎಂಬ ಮಾತನ್ನು ಕೆ.ಷರೀಪಾರವರ ಜಡವಸ್ತುವೇ ಎಂಬ ಕವಿತೆ ಕೆಣಕುತ್ತದೆ.

"ನಾನು ಮನೆಯ / ಕಸವೆಲ್ಲ ಗುಡಿಸಿ
ಮೂಲೆಗೆ ಕೂಡುವ / ಕಸಪರಿಕೆಯೆ?
ಕತ್ತಲೆ ಹಿನ್ನಲೆಯಾಗಿ / ಸೃಷ್ಟಿಯಲಿ ಸಮಭಾಗಿ
ಜಗತ್ತಿಗೇ ಬೆಳಕು ಕೊಟ್ಟು / ಕತ್ತಲೆಯಲಿ ಬದುಕುವೆ.
ಒತ್ತು ಗುಂಡಿಯಂತೆ ನಾನು / ಬದುಕೆಲ್ಲ ಒಡೆಯನ
ಮರ್ಜಿ ಕಾಯುವ / ಜೀವವಿಲ್ಲದ ಜಡವಸ್ತುವೆ?" [೪೦]

ಸರಳ ವಾಕ್ಯ ಪರಕಲ್ಪನೆಯಂತೆ ಕಂಡು ಬಂದರೂ ಸಾಮಾಜಿಕ ಸ್ತರಗಳ ನೆಲೆಯಲ್ಲಿ ಕಂಡುಬಂದ ಹೆಣ್ಣಿನ ಪ್ರತಿನಿಧೀಕರಣದಂತೆ ಇದೆ. ಇಲ್ಲಿ ಹೆಣ್ಣನ್ನು ಗಂಡು ಕೀಳಾಗಿ ಕಾಣುವ ಪ್ರಸಂಗದಂತೆ ಕವಿತೆ ಇಲ್ಲ. ಸಾಮಾಜಿಕ ಹಂಬಲ ಹೆಣ್ಣನ್ನು ಕಂಡ ರೀತಿಗೆ ಬೇಸತ್ತು ಪ್ರಶ್ನಿಸುವಂತಿದೆ. 'ಜಗನ್ಮಾತೆ' ಎಂಬ ಪದ ಕೇವಲ ಪೂಜನೀಯ ಪ್ರತಿಬಿಂಬವಾಗಿ ಮಾತ್ರ ಉಳಿದಿದೆ ಎಂಬುದನ್ನು ನೇರವಾಗಿ ಈ ಕವಿತೆ ಪ್ರತಿನಿಧಿಸುತ್ತದೆ.

"ಬರವಣಿಗೆಯು ನನ್ನೊಳಗೆ ವಾಸಿಸುವ ಆ ಇನ್ನೊಂದು ವ್ಯಕ್ತಿತ್ವವು (ಗಳು) ಒಳಬರುವ ಹೊರಗೆ ನಿರ್ಗಮಿಸುವ ಸ್ಥಾನ. ಅವು ನಾನು ಹೌದು ಮತ್ತು ಅವು ನಾನು ಅಲ್ಲ. ನಾನು ಆ ಪಾತ್ರಗಳೊಳಗೆ ವಿಲೀನವಾಗುವುದು ಹೇಗೆಂದು ನನಗೆ ಗೊತ್ತಿಲ್ಲ. ಆದರೆ ಅವು ನನ್ನೊಳಗೆ ಚಲಿಸುವುದು, ನನ್ನನ್ನು ಜೀವಂತವಾಗಿಸುವುದು ಇವೆಲ್ಲವನ್ನೂ ನಾನು ಅನುಭವಿಸುತ್ತಿದ್ದೇನೆ. ಇವರೆಲ್ಲ ಯಾರು? ಹೆಂಗಸೋ? ಗಂಡಸೋ? ಒಬ್ಬರೋ ಹಲವರೋ? ಅವರಲ್ಲಿ ಕೆಲವರು ನನಗೂ ಪರಿಚಿತರು ಅಂತರಂಗದ ಆ ಜನನಿಬಿಡತೆಯು ನನಗೆ ಬಿಡುವನ್ನೂ ಕೊಡುವುದಿಲ್ಲ ಭದ್ರತೆಯನ್ನೂ ಕೊಡುವುದಿಲ್ಲ. ಹೀಗೆ ಎಲ್ಲವನ್ನೂ ಒಳಗೆ ತೆಗೆದುಕೊಳ್ಳುವ, ಯಾವುದನ್ನೂ ಹೊರಗೆ ಇಡಲಾಗದ ತೆರೆದ ಸ್ಥಿತಿಯು ಗಂಡಸರಿಗೆ ಭಯ ಹುಟ್ಟಿಸುವ ಸಂಗತಿ ಅವರು ಅದನ್ನು ಸಹಿಸಲಾರರು."[೪೧] ಎಂಬ ಮಾತುಗಳು ಸಾಮಾಜಿಕವಾಗಿ ಗುರ್ತಿಸಿಕೊಳ್ಳುವ ಹಂಬಲ ಹೊಂದಿ ತೊಯ್ದಾಡುವ ವ್ಯಕ್ತಿಯ ನೈಜತೆಯನ್ನು ಅನಾವರಣ ಮಾಡುತ್ತದೆ.

ಮೇಲಿನ ಮಾತುಗಳಿಗೆ **ಎಚ್.ಎಸ್.ರಾಘವೇಂದ್ರ ರಾವ್** ಸ್ಪಷ್ಟತೆ ಕೊಡುತ್ತಾ,

"ಮೇಲೆ ಹೇಳಿರುವ ಗಂಡಸು ಟಿಪಿಕಲ್ ಗಂಡಸು. ಆದರೆ ಇದು ಮಹಾನ್ ಲೇಖಕರಿಗೆ ಅನ್ವಯಿಸುವುದಿಲ್ಲ. ಹೆಣ್ತನದ ನಸುಲೇಪ ಇಲ್ಲದವನು ಸಾಹಿತಿಯಾಗಲು ಸಾಧ್ಯವೇ ಇಲ್ಲ. ಹಾಗೆಯೇ ಇದು ಎಲ್ಲ ಹೆಂಗಸರಿಗೂ ಸಾಧ್ಯವಾಗದೇ ಇರಬಹುದು. ಹೆಂಗಸರು ರೂಪಿಸುವ ತಾತ್ವಿಕತೆಯಲ್ಲಿ ಬೇರೆ ಯಾರದೇ ದನಿಯನ್ನು ಮೂಕವಾಗಿಸುವ ಪ್ರಯತ್ನ ಇರುವುದಿಲ್ಲ ಗಂಡು ಮತ್ತು ಹೆಣ್ಣುಗಳನ್ನು ಪರಸ್ಪರ ಸೇಡು ತೀರಿಸಿಕೊಳ್ಳಲು ಸದಾ ಸನ್ನದ್ಧರಾಗಿರುವ ಶತೃಗಳೆಂದು ತಿಳಿಯುವುದು ಅಗತ್ಯವಲ್ಲ ಅಂತಹ ಅಜೆಂಡಾವನ್ನು ಹೊಂದಿರುವ ಬರವಣಿಗೆಯು ಬರವಣಿಗೆಯೇ ಅಲ್ಲ"[೪೨] ಎಂದು ಹೇಳುತ್ತಾರೆ.

ಈ ವಾಕ್ಯ ಕೇವಲ ಲಿಂಗಾಧಾರಿತ ಕಲ್ಪನೆಯಿಂದ ಮೂಡುವ ಅಭಿವ್ಯಕ್ತಿಗೆ ಸ್ಪಷ್ಟನೆ ಕೊಡುವಂತದ್ದಲ್ಲ. ಗಂಡು ಹೆಣ್ಣಿನ ನಡುವೆ ಇರುವ ತಾರತಮ್ಯವನ್ನು ಬಯಲಿಗೆಳೆಯುತ್ತಾ ಹೋದರೆ ಅದು ಸಾಹಿತ್ಯದ ಸ್ಪಷ್ಟ ರೂಪವಲ್ಲ ಎಂಬರ್ಥದಲ್ಲಿ ಉತ್ತರಿಸುತ್ತಾರೆ. ಅಂದರೆ ಬರವಣಿಗೆ ಎಂಬುದು ಅಭಿವ್ಯಕ್ತಿಯನ್ನು ವ್ಯಕ್ತ ಪಡಿಸುವಂತಿರಬೇಕು ಅದು ಸವಾಲಾದಾಗ ಪರಿಪೂರ್ಣತೆ ಹೊಂದುವುದಿಲ್ಲ ಎಂಬ ಅಂಶವನ್ನು ಕಂಡುಕೊಂಡಿದ್ದು ಮಹಿಳಾ ಸಾಹಿತ್ಯ. ಸಾಮಾಜಿಕವಾಗಿ ಬದಲಾವಣೆ ಬಯಸುವುದಾದರೆ ಸಾಹಿತ್ಯಿಕವಾಗಿಯೂ ಹಲವು ಮಾರ್ಪಾಡುಗಳಾಗುವುದು ಅಗತ್ಯವಾದುದು. ಏಕೆಂದರೆ ಹೆಣ್ಣು ಬರವಣಿಗೆಯಲ್ಲಿ ತನ್ನ

ಬದುಕಿನ ಚಿತ್ರಣವನ್ನು ಮಾತ್ರ ಕಟ್ಟಿಕೊಡುವುದಿಲ್ಲ. ಸಾಮುದಾಯಿಕ ಪ್ರಜ್ಞೆಯ ಅರಿವು ಅವಳ ಬರಹದಲ್ಲಿರುತ್ತದೆ, ಅದು ಎಚ್ಚರದ ಪ್ರತಿಭಟನೆಯ ಸಂಕೇತವೂ ಹೌದು.

ನವೋದಯ, ನವ್ಯ, ಪ್ರಗತಿಶೀಲ, ಸಾಹಿತ್ಯದಲ್ಲಿ ಕಂಡುಬರುವ ಹೆಣ್ಣಿನ ಚಿತ್ರಣಕ್ಕೂ, ದಲಿತ ಬಂಡಾಯ ಮತ್ತು ಇತ್ತೀಚಿನ ಕಾಲಘಟ್ಟದಲ್ಲಿ ಕಂಡುಬರುವ ಹೆಣ್ಣಿನ ಚಿತ್ರಣಕ್ಕೂ ವ್ಯತ್ಯಾಸವಿದೆ. ಆದರೆ ಕವಿ ರಚಿಸಿದ ಪಾತ್ರ ಅಥವಾ ಕವಯಿತ್ರಿ ರಚಿಸಿದ ಪಾತ್ರ ಎಂಬುದು ಮುಖ್ಯವಲ್ಲ ಸಂವೇದನೆ ಮುಖ್ಯ. ಈ ಕಾಲಘಟ್ಟಗಳಲ್ಲಿ ರಚಿತವಾದ ಹೆಣ್ಣಿನ ಪಾತ್ರ ಚಿತ್ರಣಗಳ ಅಭಿವ್ಯಕ್ತಿಯು ಯಾವ ಬಗೆಯದು ಎಂಬುದರ ಅರಿವಾಗುತ್ತದೆ. ಆದರೆ ಜನಪದ ಸಾಹಿತ್ಯದಲ್ಲಿ ಕಂಡುಬರುವ ಹೆಣ್ಣಿನ ದಿಟ್ಟತನ, ೧೨ನೇ ಶತಮಾನದ ಅಕ್ಕನಲ್ಲಿ ಕಂಡುಬರುವ ಸ್ವತಂತ್ರ್ಯ ಮನೋಭಾವನೆಗಳ ಅರಿವು ನಮಗೆ ಕಂಡುಬರುವುದು ಕಡಿಮೆಯೆ. ಆದರೆ ಆಧುನಿಕ ಮಹಿಳಾ ಕಾವ್ಯದಲ್ಲಿ ಗಂಡಿನ ಆದರ್ಶ ಮೌಲ್ಯಗಳೆಂಬಂತೆ ಕಂಡುಬರುವ ಅಂಶಗಳೂ ಪ್ರಶ್ನಿಸಲ್ಪಡುತ್ತದೆ. ಗಂಡು-ಹೆಣ್ಣಿನ ನಡುವಿನ ಸಂಬಂಧಗಳೂ ಪ್ರಶ್ನೆಗೊಳಪಡುತ್ತವೆ. ಆದರೆ ಅದು ವ್ಯಕ್ತಿಗತ ನೆಲೆಯಲ್ಲಿ ಮಾತ್ರವಲ್ಲ ಹೆಣ್ಣಿನ ಪ್ರತಿನಿಧೀಕರಣದ ನೆಲೆಯಲ್ಲಿಯೂ ಸಹ.

"ಪ್ರಿಯಾ, / ಲಂಬಿಸದ ಈ ಗಾದಿ
ಎಂದಿಗೂ ಗಿಡ್ಡು / ಇನ್ನೆಷ್ಟು ಮುದುಡಿ ಮಲಗೋಣ?
ಮಂಡಿ ನೋಯುತಿದೆ / ಕೀಲು ಬಿಗಿಯುತಿದೆ
ಸಹಿಸಲಾಗದು ಬೇನೆ! / ಹಾಯಾಗಿ ಕಾಲು ಚಾಚಿ
ಬಿಡೋಣ / ನೆಲವನ್ನೇ ಗಾದಿ ಮಾಡಿ
ಕೊಂಡವರುಂಟು / ಇಲ್ಲಿ ಬಹಳ!" [೬೩]

ಕವಿತೆ ಸರಳತೆಯಿಂದ ಕೂಡಿದರೂ ಸೂಕ್ಷ್ಮವಾದುದು. ಸಾಂಸಾರಿಕ ಹೊಂದಾಣಿಕೆ ಮಾತ್ರ ಇಲ್ಲಿ ಕಂಡು ಬರುವಂತದ್ದಲ್ಲ. ತಲೆಮಾರಿನಿಂದಲೂ ಹೆಣ್ಣು ಕಂಡುಕೊಂಡ ಜೀವನ ದೃಷ್ಟಿಕೋನ ಗಂಡಿನ ಮೂಲಕವೆ. ಬದುಕಿನ ಹಂಬಲ ಜೀವನದ ತೀವ್ರತೆಯ ತುಡಿತ ಇಲ್ಲಿ ಎದ್ದು ಕಾಣುತ್ತದೆ. ಇದು ವಾಸ್ತವ ಬದುಕಿನ ಹಂದರವೂ ಹೌದು. ಕವಿತೆ ಮುಂದುವರೆದು ಹೊಸ ದಿಕ್ಕಿನೆಡೆಗಿನ ಪಯಣದ ಪ್ರತಿನಿಧಿಯಂತೆ ಕಂಡುಬರುತ್ತದೆ. ಹೊಂದಾಣಿಕೆ ಸಾಧ್ಯವಾಗದೆ ಹೋದಾಗ ಗಂಡಿನ ನಿಜ ಮುಖವನ್ನು ಬಯಲು ಮಾಡುವ ಪ್ರಯತ್ನದಂತೆಯೂ ಕಂಡುಬಂದಿದೆ.

"ನಾ ಕಟ್ಟಿರುವ / ಬೇಲಿಯನು ಮುರಿದು
ಚಂದ ಕಂಡ ಸೀರೆ ಬ್ಲೌಜು ಬ್ರಾ / ಗಳಲಿ ಹೊಕ್ಕು ಕಾವೇರಿ
ಉಬ್ಬು ತಗ್ಗುಗಳ ನೆಕ್ಕಿ ಕಣ್ಣಿಂದ / ಮಕರಂದ ಹೀರಿ ಸುಖಿಸಿ
ಹಸನ್ಮುಖಿಸುವ ನಿನ್ನ ಡೊಂಕು ಬಾಲದ

ಲೋಲತೆಗೆ ನಾನೂ / ಉತ್ತರಿಸಬೇಕಾದೀತು.........
ನೀಕಟ್ಟಿರುವ ಬೇಲಿಯನು / ಮುರಿದೊಗೆದು" ೪೪

ಕವಿತೆಯಲ್ಲಿ ಎರಡು ರೀತಿಯ ಅಭಿವ್ಯಕ್ತಿ ಮನೋಧರ್ಮಗಳಿವೆ. ಹೆಣ್ಣು ಕಟ್ಟಿ ಕೊಂಡಿರುವ ಜೀವನದ ಬೇಲಿ ಒಂದು ಕಡೆಯಾದರೆ, ಗಂಡಿನ ಬೇಲಿಯಲ್ಲಿ ಬದುಕುವ ಹೆಣ್ಣುಗಳ ಜೀವನ ಕ್ರಮ ಎರಡನ್ನೂ ಕವಿತೆ ಧ್ವನಿಸುತ್ತದೆ. ಆದರ್ಶ ಜೀವನದ ಹಂಬಲ ಹೊಂದಿರುವ ಹೆಣ್ಣು ಗಂಡನನ್ನು ಸರಿ ದಾರಿಗೆ ತರುವ ಪ್ರಯತ್ನದ ಪ್ರತಿಬಿಂಬದಂತಿದೆ. ತನ್ನ ಹಕ್ಕನ್ನು ಪ್ರತಿನಿಧಿಸುವ ಹೆಣ್ಣಿನ ಪ್ರತಿನಿಧಿತನ ಈ ಕವಿತೆಯಲ್ಲಡಗಿದೆ. ವಾಸ್ತವ ಜೀವನದಲ್ಲಿ ದಿನನಿತ್ಯವೂ ಒಂದೊಂದು ಬಗೆಯ ಸಮಸ್ಯೆ ಎದುರಿಸುವ, ಮಹಿಳೆ ಗಂಡನನ್ನು ಸರಿ ದಾರಿಗೆ ತರುವ ಹೆಣಗಾಟ ತನ್ನ ಬೇಲಿಯನ್ನು ಮುರಿದೊಗೆಯುವ ಪ್ರಯತ್ನ ಸರ್ವೇ ಸಾಮಾನ್ಯ. ಇಲ್ಲಿ ಆದರ್ಶಕ್ಕಿಂತ ಆತ್ಮ ತೃಪ್ತಿಯ ದಾಂಪತ್ಯ ಬಯಕೆ ಬಹಳ ಮುಖ್ಯವಾದುದು. ಜನಪದ ಸಾಹಿತ್ಯದಲ್ಲಿ ಕಂಡುಬರುವ ದಿಟ್ಟ ಮಹಿಳೆಯ ಪಾತ್ರ ಕಂಡುಬರುತ್ತದೆ.

ಅಧ್ಯಯನಕ್ಕೆ ತೊಡಗಿದಂತೆಲ್ಲಾ ಮಹಿಳಾ ಕಾವ್ಯದ ಒಳನೋಟ ವಿಸ್ತಾರವಾಗುತ್ತಾ ಹೋಗುತ್ತದೆ. ಸಮಾಜದಲ್ಲಿ ವ್ಯಕ್ತಿಗಳ ಆಲೋಚನೆಯಲ್ಲಿ ಭಿನ್ನತೆ ಸಹಜವಾದುದು. ಅಂತೆಯೆ ಮಹಿಳಾ ಕಾವ್ಯದ ವಿಚಾರಕ್ಕೆ ಬಂದರೆ ಒಂದೇ ವಸ್ತು ಅಥವಾ ವಿಷಯ, ಘಟನೆಗಳು ಮತ್ತು ಪಾತ್ರ ಪ್ರತಿಯೊಬ್ಬ ಲೇಖಕಿಯರಲ್ಲೂ ಭಿನ್ನತೆಯಿಂದ ಕೂಡಿದ್ದು ಹೊಸ ಹೊಳಹಿಗೆ ಕಾರಣವಾಗುತ್ತದೆ. ಏಕೆಂದರೆ ಮಹಿಳೆ ಸಾಹಿತ್ಯದ ಮುಖೇನ ಹೆಣ್ಣಿನ ಚಿತ್ರಣ ಮಾಡ ಹೊರಟಳೆಂದರೆ ಆಕೆಗೆ ಸಾಮುದಾಯಿಕ ಪ್ರಜ್ಞೆಯ ಜಾಗೃತತೆ ಅವಶ್ಯಕವಾದುದು. ಇದನ್ನು ಬಹಳ ಸಮರ್ಪಕವಾಗಿ ಮಹಿಳಾ ಸಾಹಿತ್ಯ ಬಳಸಿಕೊಂಡಿದೆ ಎಂದರೆ ತಪ್ಪಿಲ್ಲ. ಸಮಾಜ ಬದಲಾಗಿದೆ ಎಂದರೆ ಒಪ್ಪಿಕೊಳ್ಳುವ ನಾವುಗಳು ಮಹಿಳೆ ಬದಲಾಗಿದ್ದಾಳೆ ಎಂದರೆ ನಾವು ತತ್‌ಕ್ಷಣ ಒಪ್ಪಿಕೊಳ್ಳಲು ಸಿದ್ದರಿದೇವೆಯೆ? ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಇಲ್ಲಿ ಗಂಡು ಹೆಣ್ಣಿನ ನಡುವೆ ಸವಾಲೆಸೆಯುವ ಕೆಲಸವಲ್ಲ ಬದಲಾವಣೆ ಎಂದರೆ ಏನು? ಎಂಬ ಮೂಲ ಪ್ರಶ್ನೆಗೆ ಈ ಮಾತುಗಳು ಪೂರಕವಾಗಿವೆ.

ಮಹಿಳಾ ಕಾವ್ಯ ಅಥವಾ ಸಾಹಿತ್ಯದ ಆರಂಭ ಘಟ್ಟವನ್ನು ಅವಲೋಕಿಸ ಹೊರಟರೆ ಮಹಿಳೆಯರ ಬರವಣಿಗೆ ಎಂದರೆ ವಿರಾಮದ ವೇಳೆಯಲ್ಲಿ ಬರೆವ ಒಂದಷ್ಟು ಬರಹ ಎಂಬ ಮಾತು ಇಂದು ಗೌಣವಾಗಿದೆ. ಮಹಿಳಾ ಸಂವೇದನೆ ಎಂದರೆ ಹೆಣ್ಣಿಗೆ ಮಾತ್ರವೆ? ಗಂಡಿಗಿಲ್ಲವೆ! ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಕುವೆಂಪುರವರ ಮಲೆಗಳಲ್ಲಿ ಮದುಮಗಳು, ಕಾರಂತರ ಚೋಮನದುಡಿ ಕಾದಂಬರಿಗಳಲ್ಲಿ ಬರುವ ಮಹಿಳಾ ಪಾತ್ರಗಳು ನಮಗೆ ಕಾಡುವುದಿಲ್ಲವೆ? ಹಾಗಾದರೆ ಅದು ಸಂವೇದನೆಯಲ್ಲದೆ ಮತ್ತೇನು? ಎಂಬ ಪ್ರಶ್ನೆಗಳು ಸಾಹಿತ್ಯವಲಯದಲ್ಲಿ ಹುಟ್ಟಿದ್ದು ಸಹಜ ವಿಚಾರವೆ. ಆದರೆ ಇಲ್ಲಿ ಗಂಡು ಹೆಣ್ಣಿನ ತಾರತಮ್ಯದಲ್ಲಿ ಸಂವೇದನೆಯನ್ನು ಹುಡುಕುವುದಿಲ್ಲ. ಮಹಿಳೆ ತನ್ನ ಬರಹಗಳಲ್ಲಿ

ಸೂಕ್ಷ್ಮ ವಿಚಾರಗಳನ್ನು, ಗೌಪ್ಯ ವಿಚಾರಗಳನ್ನು ಬರವಣಿಗೆಯಲ್ಲಿ ಚರ್ಚಿಸಿ ಹೊರಟಿದ್ದಾಳೆಂದರೆ ಅದು ತನ್ನ ವಯಕ್ತಿಕ ವಿಚಾರ ಮಾತ್ರವಾಗಿರದೆ, ಸಾಮುದಾಯಿಕ ನೆಲೆಯಲ್ಲಿ ಚರ್ಚಿತವಾಗುವ ವಿಷಯವೂ ಹೌದು. ಇದನ್ನು ಪರಿಪೂರ್ಣವಾಗಿ ಬಳಸಿಕೊಂಡಿದ್ದು ಮಹಿಳಾ ಕಾವ್ಯ.

ಮಹಿಳಾ ಬರವಣಿಗೆ ಇಂದು ಜಾಗೃತ ಪ್ರಜ್ಞೆಯ ದಿಕ್ಕಿನೆಡೆಗೆ ಪ್ರವಹಿಸಿದೆ. ತನ್ನನ್ನು ತಾನು ಸಶಕ್ತವಾಗಿ ಮತ್ತು ಆಳವಾಗಿ ಕಂಡುಕೊಳ್ಳುವ ನಿಟ್ಟಿನಲ್ಲಿ ಇವರ ಬರವಣಿಗೆ ಸಾಗಿದೆ. ಏಕೆಂದರೆ ಸಾಮುದಾಯಿಕ ಜಾಗೃತ ಪ್ರಜ್ಞೆ ಮಹಿಳಾ ಬರವಣಿಗೆಯ ಒಟ್ಟಾರೆ ಅಂಶವೆನ್ನಬಹುದು. ಕಾಲ, ಚರಿತ್ರೆ ಮತ್ತು ವಾಸ್ತವದ ಸಂಗತಿಗಳನ್ನು ಕೆದಕಿ ನೋಡುವ ಸಮಷ್ಟೀ ದೃಷ್ಟಿ ಮಹಿಳಾ ಸಾಹಿತ್ಯದಲ್ಲಿದೆ. ಇದನ್ನು ಪೂರಕವಾಗಿಸಿಕೊಂಡಿದ್ದು ಮಹಿಳಾ ಕಾವ್ಯ. ಆಧುನಿಕ ಮಹಿಳಾ ಕಾವ್ಯದ ಹಲವಾರು ಸೂಕ್ಷ್ಮ ವಿಚಾರಗಳು, ತಲೆಮಾರಿನ ಹೆಣ್ಣಿನ ತಲ್ಲಣ, ಕ್ರೋಧ ಮತ್ತು ಆಕ್ರೋಶ ಒಮ್ಮೆಲೇ ಸ್ಫೋಟಗೊಂಡದ್ದು ಮುಖ್ಯವಾದ ಅಂಶ. ಪುರಾಣ ಕಲ್ಪಿತ ಪಾತ್ರಗಳು ಆದರ್ಶ ಮತ್ತು ವ್ರತ ಪರಿಪಾಲನೆಯ ಅಂಶಗಳು ಮಾತ್ರವಾಗಿರದೆ, ಅವನ್ನು ತರಾಟೆಗೆ ತೆಗೆದುಕೊಂಡದ್ದು ಇದೆ. ಏಕೆಂದರೆ ಸಾಮಾಜಿಕ ಬದಲಾವಣೆಯ ನಿಟ್ಟಿನಲ್ಲಿ ಮಹಿಳಾ ಅಭಿವ್ಯಕ್ತಿಯೂ ಸಹ ಹೊಸ ಮಾರ್ಗವನ್ನನುಸರಿಸುತ್ತದೆ. ಬರವಣಿಗೆ ಎಂಬುದು ಮಹಿಳೆಗೆ ಸಾಹಿತ್ಯ ಲೋಕದಲ್ಲಿ ಗುರ್ತಿಸಿಕೊಳ್ಳಬೇಕೆಂಬ ಹಂಬಲ ಮಾತ್ರವಲ್ಲ, ಹೆಣ್ಣಿನ ಬದುಕಿನ ಒಟ್ಟಾರೆ ಪ್ರತಿನಿಧೀಕರಣದ ದಾಖಲೂ ಹೌದು.

ಈ ಮಾತಿಗೆ ಪೂರಕವಾಗಿ **ಕೇಶವ ಶರ್ಮರು** ಹೇಳುವಂತೆ

“ಪುರುಷರಂತೆ ಸ್ತ್ರೀಯರು ಒಂದೆಡೆ ಕುಳಿತು ಓತ ಪ್ರೋತವಾಗಿ ಬರೆಯಲು ಸಾಧ್ಯವಾಗುವುದಿಲ್ಲ. ಗಂಡ, ಮನೆ, ಮಕ್ಕಳು ಅದಕ್ಕೆ ಸಂಬಂಧಿಸಿದ ಜವಾಬ್ದಾರಿಗಳ ನಡುವೆ ಬರಹಗಾರ್ತಿಯರಿದ್ದಾರೆ. ಬರಹಗಾರ್ತಿಯರ ಬರವಣಿಗೆಯು ಇದರಿಂದ ಹುಟ್ಟಿಕೊಳ್ಳುತ್ತದೆ. ಮಗುವಿನ ಲಾಲನೆ, ಪಾಲನೆ, ಮಗುವಿನ ಬಗೆಗಿನ ಪ್ರೀತಿಯಂತೆ ಬರಹಗಾರ್ತಿಯರಿಗೆ ಸಾಹಿತ್ಯ ಕೃತಿಯು ಕೂಡಾ ಬರವಣಿಗೆ ಎನ್ನುವುದು ಈ ಕಾರಣದಿಂದ ಮಹಿಳೆಯರಿಗೆ ಐಷಾರಾಮದ ವೈಭೋಗದ ಪ್ರಕ್ರಿಯೆಯಲ್ಲ. ಬರವಣಿಗೆಯ ಸಂದರ್ಭದಲ್ಲಿ ಮಹಿಳೆಯರು ತಮ್ಮ ಲಿಂಗವೈದೃಶ್ಯದ ಅಂಶವನ್ನು ಸೃಜನಶೀಲತೆಯ ಸಂಕಟವನ್ನು ಅನುಭವಿಸುತ್ತಾರೆ ಎಂಬುದಿದೆ. ಹೀಗಾಗಿ ಬರೆಯುವಾಗ ಸ್ತ್ರೀಯರು ತಮ್ಮ ಅನನ್ಯತೆಯ ಸಮಸ್ಯೆಯನ್ನು ಹುಡುಕುತ್ತಿರುತ್ತಾರೆ.”[೪೫] ಎಂದಿದ್ದಾರೆ. ಈ ಹೇಳಿಕೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮಹಿಳೆ ಸಾಮಾಜಿಕವಾಗಿ ಅದೃಶ್ಯಳಾಗುವ ಮಾತೇ ಇಲ್ಲವೆಂಬುದು ಬಹುಮುಖ್ಯ ಸಂಗತಿ. ೨೧ನೇ ಶತಮಾನ ಪ್ರಜಾಪ್ರಭುತ್ವದ ಬೇರೊಂದು ಮಗ್ಗುಲಿಗೆ ವಾಲಿದೆ. ಅಂದರೆ ಜಾತಿ, ಧರ್ಮದ ಸೂಕ್ಷ್ಮತೆ ಇಂದು ಪಾರದರ್ಶಕ ನೆಲೆ ಕಂಡಿವೆ. ಲಿಂಗಾಧಾರಿತ ಸಮಸೆಯಲ್ಲಿದ್ದ ಮಹಿಳೆ ಇಂದು ಜಾಗತೀಕರಣದ ಪ್ರಭಾವದಿಂದ ಜಾಗೃತಳಾಗಿದ್ದಾಳೆ. ಇದು ಹೆಚ್ಚು ಸ್ಪಷ್ಟವಾಗಿ ಕಂಡುಬರುವುದು ಮಹಿಳಾ ಕಾವ್ಯದಲ್ಲಿ.

ಮಹಿಳಾ ಕಾವ್ಯದಲ್ಲಿ ನಮಗೆ ಹೆಚ್ಚು ಕಂಡುಬರುವ ಸ್ಪಷ್ಟ ಅಂಶವೆಂದರೆ ಅಭಿವ್ಯಕ್ತಿ ಕ್ರಮ. ಅದು ಕಾಲದಿಂದ ಕಾಲಕ್ಕೆ ಕವಯಿತ್ರಿಯರ ಮನೋಧರ್ಮ ಮೂಲಕ ಬರವಣಿಗೆಯಲ್ಲಿ ಬದಲಾದರೂ ವ್ಯಕ್ತಿಗತ ನೆಲೆಯಲ್ಲಿ ಪ್ರತಿನಿಧಿಸುವ ಕ್ರಮ ಒಂದೇ ಆಗಿರುತ್ತದೆ. ಮಹಿಳಾ ಕಾವ್ಯದಲ್ಲಿ ಕಂಡುಬರುವ ಪ್ರಮುಖ ಅಂಶ ಹೆಣ್ಣಿನ ಕಲ್ಪನೆಯ ಬದುಕು ಮತ್ತು ನಿರ್ಭಾವ ಜೀವನದ ಅಂತರವನ್ನು ವಾಸ್ತವ ನೆಲೆಗೆ ತರುವ ಪ್ರಯತ್ನ ಮಾಡುತ್ತದೆ. ಯಾವುದೇ ಭಾವನೆಗಳ ರಾಜಿಗೆ ಹೋಗದೆ ಮುಖಬೆಲೆಯ ವಿನ್ಯಾಸಕ್ಕೆ ಮಾರು ಹೋಗದೆ ಪರ್ಯಾಯ ಬದುಕಿನ ಹಂದರವನ್ನು ಕಟ್ಟಿಕೊಡುವ ಕೆಲಸ ಮಹಿಳಾ ಕಾವ್ಯದ್ದು.

ಕೇವಲ ಭಾವನೆಗಳಿಂದಲೇ ಬದುಕನ್ನು ಕಂಡುಕೊಳ್ಳುವ ಗೋಜಿಗೆ ಮಹಿಳಾ ಕಾವ್ಯ ಹೋಗುವುದಿಲ್ಲ ಎಂಬಂಶವನ್ನು ಹಲವು ಕವಯಿತ್ರಿಯರ ಕವಿತೆಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಆಧುನಿಕ ಮಹಿಳಾ ಕಾವ್ಯದಲ್ಲಿ ಎಚ್ಚೆತ್ತ ಮಹಿಳೆಯ ಜಾಗೃತ ಪ್ರಜ್ಞೆ ಬರವಣಿಗೆಯ ರೂಪದಲ್ಲಿ ದಾಖಲಾಗಿದೆ. ಏಕೆಂದರೆ ಕವಯಿತ್ರಿಯರು ಬಂದಿರುವ ಸಾಮಾಜಿಕ ಬದುಕಿನ ಸ್ಥರ ವಿನ್ಯಾಸ ಮತ್ತು ಬದುಕಿನ ಬಗೆಗೆ ಸಾಮಾಜದಲ್ಲಿ ಕಂಡುಕೊಂಡ ರೀತಿ ನೀತಿಗಳು ಬಹಳ ಮುಖ್ಯ ಸಂಗತಿ. ಇದು ಪ್ರತಿಯೊಬ್ಬ ಕವಯಿತ್ರಿಯರ ಕಾವ್ಯದಲ್ಲೂ ಕಾಣಸಿಗುತ್ತದೆ. ಏಕೆಂದರೆ ಈ ಎಚ್ಚರದ ಪ್ರಜ್ಞೆಯೊಂದಿಗೆ ಬಹುಮುಖ್ಯವಾಗಿ ಮಾಡಬೇಕಾದ ಕೆಲಸ ಎಂದರೆ ಲಿಂಗಾಧಾರಿತ ಸಮಸ್ಯೆಯನ್ನು ಪ್ರಶ್ನಿಸಿ ಅದರ ಕೊರತೆಗಳನ್ನು ಎತ್ತಿ ಹಿಡಿಯುತ್ತ ಲಿಂಗ ಸಮಾನತೆಯ ಬಗ್ಗೆ ಹೋರಾಡುವ ಪ್ರಯತ್ನ. ಇದು ನಮ್ಮ ಎಲ್ಲ ಕವಯಿತ್ರಿಯರ ಕವಿತೆಗಳಲ್ಲೂ ದಟ್ಟವಾಗಿ ಹರಡಿದೆ.

ಸ್ತ್ರೀವಾದಿ ದೃಷ್ಟಿಕೋನದ ಮತ್ತೊಂದು ಪ್ರಯತ್ನವೆಂದರೆ ಪ್ರಾದೇಶಿಕವಾಗಿ ಮತ್ತು ಸಾಮುದಾಯಿಕವಾಗಿ ಮಹಿಳೆ ಅನುಭವಿಸುವ ಶೋಷಣೆಯನ್ನು ಹತ್ತಿಕ್ಕುವ ಪ್ರಯತ್ನ ಮಾಡುವುದು. ಪಾಶ್ಚಾತ್ಯ ಪ್ರೇರಣೆಯಿಂದ ಮಹಿಳಾಪರ ಹೋರಾಟಗಳು ಶುರುವಾದರೂ, ಅದು ಜಾಗೃತಗೊಂಡಿದ್ದು ಮಾತ್ರ ಸ್ಥಳೀಯವಾಗಿಯೆ. ಈ ಹೋರಾಟದ ದಿಕ್ಕು ಮಾತ್ರ ಹಲವು ಕವಲುಗಳಾಗಿ ಮಾರ್ಪಾಡಾಗಿದೆ. ಇದನ್ನು ಪ್ರತಿಯೊಬ್ಬ ಲೇಖಕಿಯೂ ಕಂಡುಕೊಂಡ ಬಗೆ ಮಾತ್ರ ವಿಶಿಷ್ಟವಾದುದು. ಬದಲಾವಣೆಯ ಹೊಸ ಗಾಳಿ ಬೀಸಿದಂತೆ ಕವಯಿತ್ರಿಯರ ಆಲೋಚನೆಗಳಲ್ಲೂ ಹೊಸ ಮಾರ್ಪಾಡುಗಳು ಸರ್ವೇ ಸಾಮಾನ್ಯ. ಸಾಮಾಜಿಕ ಬದಲಾವಣೆಯ ಸೂಕ್ಷ್ಮತೆಯನ್ನು ಗಮನಿಸುತ್ತಲೇ ಪ್ರಸ್ತುತ ಸಮಸ್ಯೆಗಳನ್ನು ಕವಿತೆಗಳ ಮೂಲಕ ದಾಖಲಿಸುತ್ತಾ ಅದಕ್ಕೆ ಪರಿಹಾರೋಪಾಯಗಳನ್ನು ಹೊಸ ಬಗೆಯಲ್ಲಿ ನೋಡುವಂತೆ ಮಾಡಿದ ಹಲವು ಕವಯಿತ್ರಿಯರಲ್ಲಿ ಪ್ರಮುಖವಾಗಿ ಕಂಡುಬರುವುದು ಪ್ರತಿಭಾ ನಂದಕುಮಾರ್. ಇವರ ಸಮಗ್ರ ಕವನಗಳನ್ನು ಅಧ್ಯಯಿಸ ಹೊರಟಂತೆಲ್ಲಾ ನಮಗೆ ಕಂಡುಬರುವ ಮುಖ್ಯ ಸಂಗತಿ ಬದುಕಿನ ಪ್ರತಿಯೊಂದು ಕ್ಷಣಗಳನ್ನು ಸಹಜವಾಗಿ

ಸ್ವೀಕರಿಸುವ ಗುಣ. ಅದು ಬರವಣಿಗೆಯಾಗಲೀ, ಸಂಸಾರವಾಗಲೀ, ಉದ್ಯೋಗವಾಗಲೀ, ಸಾಮಾಜಿಕ ಬದುಕಿನ ವಿವಿಧ ಸ್ಥರವಾಗಲೀ ನೇರವಾದ ಮನೋಧರ್ಮ ಇವರ ಬರಹಗಳ ಮೂಲಕ ತಲುಪುತ್ತದೆ. ಅವರ ಕವಿತೆಗಳಲ್ಲಿ ಅಳುಮುಂಜಿ ಹೆಣ್ಣು ಮಗಳಿಂದ ಹಿಡಿದು ದಿಟ್ಟ ಮಹಿಳೆಯವರೆಗಿನ ವಿವಿಧ ಮುಖಗಳು ನಮಗೆ ಕಾಣುತ್ತವೆ. ಕವಯಿತ್ರಿಯೇ ಹೇಳುವಂತೆ ಮೊದಲ ಬರವಣಿಗೆ ಅವರ ಕೈಗೇ ಸಿಕ್ಕಾಗ ಉಂಟಾಗುವ ಸಂವೇದನೆಯನ್ನು ವ್ಯಕ್ತಪಡಿಸುವ ರೀತಿ ಮನೋಜ್ಞವಾದುದು.

"ಹೀಗೇ ಒಂದು ದಿನ
ಹಳೇ ದಿನಪತ್ರಿಕೆಯ ಕವನವೊಂದು
ಕಣ್ಣಿಗೆ ಬಿತ್ತು / ಹೆಸರು ಪರಿಚಿತವಾಗಿತ್ತು
ಕವನದ ವಸ್ತು ಶೈಲಿ ಧಾಟಿಯೆಲ್ಲ
ಆತ್ಮೀಯನೆನಪು ಹುಟ್ಟಿಸಿತು.
ಆದರೆ ಬರೆದವರು ಯಾರೆಂದು ನೆನಪಾಗಲಿಲ್ಲ
ಇಷ್ಟೊಂದು ಲವಲವಿಕೆ ತಾಜಾತನದ
ಹುಡುಗಿ ಯಾರಿವಳು ಎಂದು ತಲೆಕೆರೆದೆ
ಇಲ್ಲ ನೆನಪಾಗಲಿಲ್ಲ".[೪೭]

ಕಾಲ ಬದಲಾದಂತೆ ಬರವಣಿಗೆಯ ಶೈಲಿಯೂ ಬದಲಾಗುತ್ತದೆ ಎಂಬ ಮಾತಿಗೆ ಉದಾಹರಣೆ ಈ ಕವಿತೆ. ಕವಯಿತ್ರಿಯು ಆರಂಭ ಕವನಕ್ಕೂ ಈಗಿನ ಬದಲಾವಣೆಗೂ ಹೋಲಿಕೆ ಕೊಡುತ್ತಾರೆ, ಆದರೆ ಸಮಯ ಸರಿದಂತೆ ಆಲೋಚನಾ ಶಕ್ತಿಯ ಮಾರ್ಪಾಡೂ ಈ ಕವಿತೆಯಲ್ಲಡಗಿದೆ. ಕವಿತೆ ಮುಂದುವರೆದು ಜೀವನದ ಹಾದಿ ಬದಲಾವಣೆಯಾದಾಗ ಕವಯಿತ್ರಿ ಅದನ್ನು ಸ್ವೀಕರಿಸುವ ಯಥಾಸ್ಥಿತಿಯನ್ನೂ ಪ್ರತಿನಿಧಿಸುತ್ತದೆ.

"ಒಳಬಂದು ಮಗ ನೋಡಿ ಹೇಳಿದ
'ಅಮ್ಮ ನಿನ್ನ ಹಳೇ ಪದ್ಯಗಳ ಫೈಲಿನಿಂದ
ಒಂದು ಕವನ ಬಿದ್ದು ಹೋಗಿತ್ತು ಎತ್ತಿಟ್ಟೆ' ಅಂತ
ಕವನವನ್ನೊಮ್ಮೆ ಮಗನನ್ನೊಮ್ಮೆ ದಿಟ್ಟಿಸಿದೆ
ಜೀವನದ ಹಾದಿಯಲ್ಲಿ ಬಹುದೂರ
ನಡೆದು ಬಂದಂತೆನಿಸಿತು" [೪೭]

ಬರವಣಿಗೆಯಲ್ಲಿ ಬದಲಾದ ಪ್ರಸಂಗ ಮಾತ್ರ ಕವಿತೆಯಲ್ಲಿಲ್ಲ. ಅಭಿವ್ಯಕ್ತಿ ಕ್ರಮದಲ್ಲಾದ ಬದಲಾವಣೆಯೂ ಇದೆ ಎಂಬುದನ್ನು ಕವಿತೆ ಕಟ್ಟಿಕೊಟ್ಟುತ್ತದೆ. ಕವಯಿತ್ರಿಯೇ ಬರೆದ

ಕವಿತೆಯಲ್ಲಿನ ಮೊದಲ ಆಲೋಚನೆಗಳು ಪ್ರಸ್ತುತಕ್ಕೆ ಅದು ಯಾವ ರೀತಿ ಕಾಣಬಹುದೆಂಬುದನ್ನು ಪ್ರತಿಭಾರವರು ಹೇಳುತ್ತಾರೆ. 'ಜೀವನದ ಹಾದಿ ಬಹುದೂರ ಸಾಗಿದೆ' ಎಂಬ ಮಾತು ಕೇವಲ ಕವಯಿತ್ರಿಯ ಮಾತಲ್ಲ. ಅಲ್ಲಿ ಎಷ್ಟೋ ಹೆಣ್ಣುಗಳ ಮನಸ್ಥಿತಿಯ ಪ್ರತಿಬಿಂಬವೂ ಹೌದೆಂಬಂತೆ ಕಂಡುಬಂದಿದೆ.

ಇಂದು ಹೆಣ್ಣು ಕೇವಲ ಕೌಟುಂಬಿಕ ನೆಲೆಯನ್ನು ಮಾತ್ರ ದರ್ಶಿಸಿಲ್ಲ. ಏಕೆಂದರೆ ಮಹಿಳೆಯನ್ನು ಸಾರ್ವಕಾಲಿಕ ಚಲನೆಯ ಪ್ರತೀಕವಾಗಿ, ಅವಳ ಪ್ರತಿನಿಧೀಕರಣವಿದೆ. ಜಡ್ಡುಗಟ್ಟಿದ ಸಮಾಜಕ್ಕೆ ಪರಿಹಾರ ರೂಪವಾಗಿ ಮಹಿಳಾ ಕಾವ್ಯವಿದೆ. ಸಮಾಜವನ್ನು ಕೆಣಕುವ ರೀತಿಯಲ್ಲಿ ಇವು ಚಲನಶೀಲವಾಗಿವೆ ಎನ್ನಬಹುದು. ವ್ಯಕ್ತಿಗಳ ಅರಿವಿಲ್ಲದೆಯೆ ನಡೆಯುವ ಅಪಾಯಗಳು ಸೀಮಿತತೆ ಇಲ್ಲದೆ ಸಮಾಜಕ್ಕೆ ಕೆಡುಕುಂಟು ಮಾಡುವುದು ಹೆಚ್ಚು. ಆದರೆ ಇದು ಅತ್ಯಂತ ಹೆಚ್ಚು ಅಪಾಯಕಾರಿಯಾದ ಅಂಶ. ಇಂತಹ ಸೂಕ್ಷ್ಮ ವಿಚಾರಗಳೇ ಕವನದ ಅಂಶಗಳಾಗಿ ಕವಯಿತ್ರಿಯರ ಬರವಣಿಗೆಗಳಲ್ಲಿ ಬೆಳಕು ಕಂಡಿವೆ ಹಾಗೂ ಹಲವಾರು ಬದಲಾವಣೆಗಳೂ ಆಗಿವೆ ಎಂಬುದು ಸಂತಸದ ವಿಚಾರ. ಕಾಲದ ಒತ್ತಡಕ್ಕೆ ಸಿಲುಕಿದ ಮಹಿಳೆ ತನ್ನ ವ್ಯಕ್ತಿತ್ವವನ್ನು ಒಡ್ಡಿಕೊಳ್ಳಲು ಸಾಧ್ಯವಾಗದಿದ್ದಾಗ, ಅನಿವಾರ್ಯವಾಗಿ ಸಮಾಜ ಹೇರಿದ ರೀತಿ ನೀತಿಗಳಿಗೆ ಒಗ್ಗಿಕೊಳ್ಳುತ್ತಾಳೆ. ಆಗ ತನ್ನ ಖಾಸಗೀ ಜೀವನವೂ ಸಹ ಅವಳಿಗೆ ವಯಕ್ತಿಕ ಆಯಾಮವನ್ನು ತಂದುಕೊಡುವುದಿಲ್ಲ. ಸಹಜವಾಗಿ ಆಕೆಯ ಆಲೋಚನೆ ಸಾಮಾಜಿಕ ನೆಲೆಯನ್ನು ಪ್ರಶ್ನಿಸುತ್ತದೆ ಎಂಬುದಕ್ಕೆ ಹಲವು ಕವಿತೆಗಳು ಸಾಕ್ಷಿ. ಆದ್ದರಿಂದಲೇ ಇಂದು ಸಾಮಾಜಿಕ ಬದಲಾವಣೆಯ ಅಂಶಗಳು ಮಹಿಳೆಗೆ ಅಭಿವ್ಯಕ್ತಿಯ ಸವಾಲುಗಳಾಗಿಯೂ ಪರಿಣಮಿಸಿರುವುದು.

ಸಮಾನ ನೆಲೆಯಲ್ಲಿ ಜೀವಿಸಬೇಕಾದ ಸ್ತ್ರೀ ಮತ್ತು ಪುರುಷ ಇಂದು ಆಲೋಚನೆ ಗಳಲ್ಲಿಯೂ ಭಿನ್ನತೆ ಕಂಡಿದ್ದಾರೆ. ಸ್ತ್ರೀಯ ಕೆಟ್ಟಗುಣಗಳು, ಪುರುಷ ವಿಧೇಯಕವಲ್ಲದವು ಎಂದು ಕಂಡುಬಂದ ಅಂಶಗಳನ್ನು ಮಹಿಳೆ ತನ್ನ ಹಕ್ಕನ್ನಾಗಿ ನೋಡುವ ಕಾಲ ಇದಾಗಿದೆ ಅಂದರೆ ಮಕ್ಕಳನ್ನು ಹೆರುವ, ಗಂಡಿನ ಕಾಮವನ್ನು ತೀರಿಸುವ, ತಾನು ಬಯಸಿದಾಗ ಮದುವೆಯಾಗುವ, ಮತ್ತು ಮದುವೆಯಾಗದೆ ಗಂಡಿನೊಂದಿಗೆ ಸಹಜೀವನ ನಡೆಸುವುದು ಈಗ ಸಾಮಾನ್ಯ ಸಂಗತಿಯಾಗಿದೆ. ಇದು ತತ್‌ಕ್ಷಣದ ಫಲವಲ್ಲ. ಕಾಲ ಬದಲಾದಂತೆ ಮಹಿಳೆ ತನ್ನ ಬೇಲಿಯನ್ನು ತಾನೇ ಸರಿಸಿ ಕಂಡುಕೊಂಡ ಉತ್ತರವೆನ್ನಬಹುದು.

ಒಟ್ಟಾರೆಯಾಗಿ ಸಾಮಾಜಿಕ ಬದಲಾವಣೆಯ ಅಂಶಗಳು ಆಧುನಿಕ ಮಹಿಳಾ ಕಾವ್ಯದಲ್ಲಿ ಅಭಿವ್ಯಕ್ತಿಯ ಸವಾಲಿನ ರೂಪವಾಗಿ ಹೇಗೆ ಬಿಂಬಿತವಾಗಿವೆ ಎಂಬುದನ್ನು ಗುರ್ತಿಸುವುದು ಬಹಳ ಮುಖ್ಯ ಅಂಶ. ಏಕೆಂದರೆ ಕವಯಿತ್ರಿಯ ಸಾಮಾಜಿಕ ನೆಲೆ, ಆಲೋಚನೆಯ ಭಿನ್ನತೆ, ಪ್ರಸ್ತುತ ಸಮಸ್ಯೆಗಳಿಗೆ ಸ್ಪಂದಿಸುವ ರೀತಿ, ಎಲ್ಲಕ್ಕಿಂತ ಹೆಚ್ಚಾಗಿ ಸಾಮಾಜಿಕ ಸಮಸ್ಯೆಗಳನ್ನು ಕವಯಿತ್ರಿಯರು ಬರವಣಿಗೆಯಲ್ಲಿ ಪ್ರಸ್ತುತಪಡಿಸುವ ಕ್ರಮ ಯಾವುದೆನ್ನುವುದು

ಪ್ರಮುಖವಾದುದು. ಪ್ರತಿಯೊಬ್ಬ ಕವಯಿತ್ರಿಯರಲ್ಲೂ ಇದು ವೈವಿಧ್ಯತೆಯನ್ನು ಕಂಡಿದೆ ಎಂಬುದರಲ್ಲಿ ಸಂಶಯವಿಲ್ಲ. ಅಂದರೆ ಪುರಾಣ, ಇತಿಹಾಸ, ರಾಜಕೀಯ, ದಾಂಪತ್ಯ, ಜೀವನ, ಬದುಕಿನ ವಿಭಿನ್ನ ಸ್ಥರಗಳು ಒಂದೆಡೆಯಾದರೂ ಅದನ್ನು ಕವಯಿತ್ರಿಯರು ಕವನದ ಮೂಲಕ ಕಟ್ಟಿದ ಬಗೆ ಇದೆಯಲ್ಲ ಅದು ಸಾಮಾಜಿಕ ಬದ್ಧತೆ, ಮಹಿಳೆಯ ಸ್ಥಾನಮಾನ ಇವೆಲ್ಲವನ್ನು ಪ್ರತಿಯೊಬ್ಬ ಲೇಖಕಿಯರೂ ಪ್ರಸ್ತುತತೆಗೆ ಸಮೀಕರಿಸಿ ಅಭಿವ್ಯಕ್ತಿಸಿದ್ದಾರೆನ್ನಬಹುದು. ಅಭಿವ್ಯಕ್ತಿ ಎಂಬುದು ಕೇವಲ ವಯಕ್ತಿಕ ನೆಲೆಯಲ್ಲಿ ನಿಲ್ಲದೆ ಸಾಮಾಜಿಕ ಆಯಾಮವನ್ನು ಪಡೆದುಕೊಂಡು ಸವಾಲಾಗಿ ಪ್ರತಿಯೊಬ್ಬರೂ ಸ್ವೀಕರಿಸಿದರೆನ್ನಬಹುದು. ಸಾಮುದಾಯಿಕ ಬೆಳವಣಿಗೆಯ ಪ್ರಜ್ಞೆ ಮಹಿಳಾ ಕಾವ್ಯದಲ್ಲಡಗಿದೆ ಎನ್ನಬಹುದು.

ಉಲ್ಲೇಖಗಳು

೧. ನರಹಳ್ಳಿಬಾಲಸುಬ್ರಮಣ್ಯಂ ವೀಣಾಶಾಂತೇಶ್ವರ.(ಸಂ)	ಹೊಸಹೆಜ್ಜೆ.	೧೯೯೦	ಮುನ್ನುಡಿ
೨. ನರಹಳ್ಳಿಬಾಲಸುಬ್ರಮಣ್ಯಂ ವೀಣಾಶಾಂತೇಶ್ವರ.(ಸಂ)	ಹೊಸಹೆಜ್ಜೆ.	೧೯೯೦	ಮುನ್ನುಡಿ
೩. ಬೆಳಗೆರೆಜಾನಕಮ್ಮ, ಕಲ್ಯಾಣ	(ಸಮಗ್ರ ಕವನ ಸಂಕಲನ)	೨೦೧೧	ಪು.ಸಂ.೧೩
೪. ಬೆಳಗೆರೆಜಾನಕಮ್ಮ, ಕಲ್ಯಾಣ	(ಸಮಗ್ರ ಕವನ ಸಂಕಲನ)	೨೦೧೧	ಪು.ಸಂ.೧೩
೫. ಬೆಳಗೆರೆಜಾನಕಮ್ಮ, ಕಲ್ಯಾಣ	(ಸಮಗ್ರ ಕವನ ಸಂಕಲನ)	೨೦೧೧	ಪು.ಸಂ.೭೮
೬. ಬೆಳಗೆರೆಜಾನಕಮ್ಮ, ಕಲ್ಯಾಣ	(ಸಮಗ್ರ ಕವನ ಸಂಕಲನ)	೨೦೧೧	ಪು.ಸಂ.೭೮
೭. ಬೆಳಗೆರೆಜಾನಕಮ್ಮ, ಕಲ್ಯಾಣ	(ಸಮಗ್ರ ಕವನ ಸಂಕಲನ)	೨೦೧೧	ಪು.ಸಂ.೧೪೭/೧೪೮
೮. ರಾ.ಗೌ.(ಸಂ)	ಮಹಿಳಾ ಅಧ್ಯಯನದ ಆಯಾಮಗಳು	೨೦೦೮	ಪು.ಸಂ.೧೩೭
೯ ರಾ.ಗೌ.(ಸಂ)	ಮಹಿಳಾ ಅಧ್ಯಯನದ ಆಯಾಮಗಳು	೨೦೦೮	ಪು.ಸಂ.೪೫೯
೧೦ ರಾ.ಗೌ.(ಸಂ)	ಮಹಿಳಾ ಅಧ್ಯಯನದ ಆಯಾಮಗಳು	೨೦೦೮	ಪು.ಸಂ.೧೪೨
೧೧. ರಾ.ಗೌ.(ಸಂ)	ಮಹಿಳಾ ಅಧ್ಯಯನದ ಆಯಾಮಗಳು	೨೦೦೮	ಪು.ಸಂ.೪೭೩
೧೩. ಲಲಿತಾನಾಯಕ್ ಬಿ.ಟಿ,	ಬಿದಿರುಮಳೆಕಂಟಿಯಲಿ,	೧೯೯೭	ಪು.ಸಂ.೮
೧೪. ಲಲಿತಾನಾಯಕ್ ಬಿ.ಟಿ,	ಬಿದಿರುಮಳೆಕಂಟಿಯಲಿ,	೧೯೯೭	ಪು.ಸಂ.೯
೧೫. ಶಶಿಕಲಾವೀರಯ್ಯಸ್ವಾಮಿ;	ಹೆಂಗ ಹೇಳಲೇ ಗೆಳತಿ.	೧೯೮೯	ಪು.ಸಂ. ೭
೧೬. ಲಲಿತಾಸಿದ್ಧಬಸವಯ್ಯ;	ದಾರಿನೆಂಟ,	೨೦೦೯,	ಪು.ಸಂ.೮
೧೭. ಲಲಿತಾಸಿದ್ಧಬಸವಯ್ಯ;	ದಾರಿನೆಂಟ,	೨೦೦೯,	ಪು.ಸಂ.೯
೧೮. ಶಶಿಕಲಾವೀರಯ್ಯಸ್ವಾಮಿ;	ಹೆಂಗ ಹೇಳಲೇ ಗೆಳತಿ.	೧೯೮೯,	ಮುನ್ನುಡಿ
೧೯. ಲಲಿತಾಸಿದ್ಧಬಸವಯ್ಯ;	ಬಿಡಿಹರಳುಗಳು,	೨೦೦೨,	ಪು.ಸಂ.೭೪
೨೦. ಲಲಿತಾಸಿದ್ಧಬಸವಯ್ಯ;	ಬಿಡಿಹರಳುಗಳು,	೨೦೦೨,	ಪು.ಸಂ.೭೪
೨೧. ಲಲಿತಾಸಿದ್ಧಬಸವಯ್ಯ;	ಬಿಡಿಹರಳುಗಳು,	೨೦೦೨,	ಪು.ಸಂ.೭೫
೨೨. ಲಲಿತಾಸಿದ್ಧಬಸವಯ್ಯ;	ಬಿಡಿಹರಳುಗಳು,	೨೦೦೨,	ಪು.ಸಂ.೭೬
೨೩. ಲಲಿತಾಸಿದ್ಧಬಸವಯ್ಯ;	ಬಿಡಿಹರಳುಗಳು,	೨೦೦೨,	ಪು.ಸಂ.೮೫
೨೪. ಲಲಿತಾಸಿದ್ಧಬಸವಯ್ಯ;	ಬಿಡಿಹರಳುಗಳು,	೨೦೦೨,	ಪು.ಸಂ.೮೫
೨೫. ಪ್ರತಿಭಾನಂದಕುಮಾರ್;	ಮುನ್ನುಡಿ ಬೆನ್ನುಡಿಗಳ ನಡುವೆ.	೨೦೦೬	ಪು.ಸಂ.೪೩೬
೨೬. ಪ್ರತಿಭಾನಂದಕುಮಾರ್;	ಮುನ್ನುಡಿ ಬೆನ್ನುಡಿಗಳ ನಡುವೆ.	೨೦೦೬	ಪು.ಸಂ.೩೮೩
೨೭. ಸುಬ್ಬಣ್ಣ ಕೆ.ವಿ.,	ಪ್ರತಿಭಾರವರ ಆಯ್ದಕವಿತೆಗಳು,	೨೦೦೭,	ಪು.ಸಂ. ೭೦-೭೧
೨೮. ಸುಬ್ಬಣ್ಣ ಕೆ.ವಿ.,	ಪ್ರತಿಭಾರವರ ಆಯ್ದಕವಿತೆಗಳು,	೨೦೦೭,	ಪು.ಸಂ. ೭೩
೨೯. ಸುಬ್ಬಣ್ಣ ಕೆ.ವಿ.,	ಪ್ರತಿಭಾರವರ ಆಯ್ದಕವಿತೆಗಳು,	೨೦೦೭,	ಪು.ಸಂ. ೮೪-೮೫
೩೦. ಸುಬ್ಬಣ್ಣ ಕೆ.ವಿ.,	ಪ್ರತಿಭಾರವರ ಆಯ್ದಕವಿತೆಗಳು,	೨೦೦೭,	ಪು.ಸಂ. ೮೪-೮೫

೩೧. ಸುಬ್ಬಣ್ಣ ಕೆ.ವಿ,	ಪ್ರತಿಭಾರವರ ಆಯ್ದಕವಿತೆಗಳು,	೨೦೦೭,	ಪು.ಸಂ. ೧೦
೩೨. ಸುಬ್ಬಣ್ಣ ಕೆ.ವಿ,	ಪ್ರತಿಭಾರವರ ಆಯ್ದಕವಿತೆಗಳು,	೨೦೦೭,	ಪು.ಸಂ. ೭
೩೩. ಸುಬ್ಬಣ್ಣ ಕೆ.ವಿ,	ಪ್ರತಿಭಾರವರ ಆಯ್ದಕವಿತೆಗಳು,	೨೦೦೭,	ಪು.ಸಂ. ೬೯
೩೪. ಸುಬ್ಬಣ್ಣ ಕೆ.ವಿ,	ಪ್ರತಿಭಾರವರ ಆಯ್ದಕವಿತೆಗಳು,	೨೦೦೭,	ಪು.ಸಂ. ೨೪
೩೫. ಸುಬ್ಬಣ್ಣ ಕೆ.ವಿ,	ಪ್ರತಿಭಾರವರ ಆಯ್ದಕವಿತೆಗಳು,	೨೦೦೭,	ಪು.ಸಂ. ೨೪
೩೬. ಷರೀಫಾ.ಕೆ.	ನೂರೇನಳನ ಅಂತರಂಗ,	೧೯೯೭	ಪು.ಸಂ. ೨೯
೩೭. ಪ್ರಜಾವಾಣಿ ದಿನಪತ್ರಿಕೆ.		೨೯-೦೯-೨೦೧೮	
೩೮. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ.		೨೦೦೬	ಪು.ಸಂ.೨೬
೩೯. ರಾಘವೇಂದ್ರರಾವ್ ಹೆಚ್.ಎಸ್,	ಕಣ್ಣಹನಿಗಳ ಕಾಣಿಕೆ.	೨೦೧೨	ಪು.ಸಂ.೪
೪೦. ಷರೀಫಾ.ಕೆ.	ನೂರೇನಳನ ಅಂತರಂಗ,	೧೯೯೭	ಪು.ಸಂ. ೨೪
೪೧. ರಾಘವೇಂದ್ರರಾವ್ ಹೆಚ್.ಎಸ್,	ಕಣ್ಣಹನಿಗಳ ಕಾಣಿಕೆ.	೨೦೧೨	ಬೆನ್ನುಡಿ
೪೨. ರಾಘವೇಂದ್ರರಾವ್ ಹೆಚ್.ಎಸ್,	ಕಣ್ಣಹನಿಗಳ ಕಾಣಿಕೆ.	೨೦೧೨	ಬೆನ್ನುಡಿ
೪೩. ಲಲಿತಾನಾಯಕ್ ಬಿ.ಟಿ, ಪು.ಸಂ.೧೫೦	ಬಿದಿರುಮಳೆಕಂಟಿಯಲಿ,	೧೯೯೭	
೪೪. ಲಲಿತಾನಾಯಕ್ ಬಿ.ಟಿ,	ಬಿದಿರುಮೆಳೆಕಂಟಿಯಲಿ,	೧೯೯೭	ಪು.ಸಂ.೧೫೦
೪೫. ರಾ.ಗೌ.(ಸಂ)	ಮಹಿಳಾ ಅಧ್ಯಯನದ ಆಯಾಮಗಳು	೨೦೦೮	ಪು.ಸಂ.೪೭೪
೪೬. ಸುಬ್ಬಣ್ಣ ಕೆ.ವಿ,	ಪ್ರತಿಭಾರವರ ಆಯ್ದಕವಿತೆಗಳು,	೨೦೦೭,	ಪು.ಸಂ. ೩೩
೪೭. ಸುಬ್ಬಣ್ಣ ಕೆ.ವಿ,	ಪ್ರತಿಭಾರವರ ಆಯ್ದಕವಿತೆಗಳು,	೨೦೦೭,	ಪು.ಸಂ. ೩೩

* * * * *

ಅಧ್ಯಾಯ - ೭

ಸಾಮಾಜಿಕ ಬದಲಾವಣೆ :
ಸಮಕಾಲೀನ ಕವಯಿತ್ರಿಯರ ಕಾವ್ಯದಲ್ಲಿ.

೭.೧ ಕೌಟುಂಬಿಕ ಹಿನ್ನಲೆಯಲ್ಲಿ: ದಾಂಪತ್ಯ, ಪ್ರೀತಿ, ಪ್ರಣಯ

೭.೨ ಚರಿತ್ರೆ ಮತ್ತು ಪುರಾಣ ಪಾತ್ರಗಳ ಮುಖಾಮುಖಿ:
ಪುನರ್ ವ್ಯಾಖ್ಯಾನಕ್ಕೊಳಪಡಿಸುವ ಕ್ರಮ

೭.೩ ಅಸ್ಮಿತೆ : ತನ್ನತನದ ಹುಡುಕಾಟ, ಪ್ರತಿಭಟನಾತ್ಮಕ ನೆಲೆ

೭.೪ ಪ್ರತಿಮಾ ಮಾದರಿ: ನಿರೀಕ್ಷೆ, ಹತಾಷೆಗಳಲ್ಲಿ

ಅಧ್ಯಾಯ - ೭

ಸಾಮಾಜಿಕ ಬದಲಾವಣೆ : ಸಮಕಾಲೀನ ಕವಯಿತ್ರಿಯರು.

ಬದಲಾವಣೆ ಎಂಬುದು ನಿರಂತರವಾದದ್ದು. ಸಮಾಜದ ಎಲ್ಲ ಸ್ತರಗಳಲ್ಲೂ ಬದಲಾವಣೆ ಇದ್ದೇ ಇರುತ್ತದೆ. ಬದಲಾವಣೆ ಇಲ್ಲದೆ ಹೊಸ ಹುಟ್ಟು ಸಾಧ್ಯವಿಲ್ಲ. ಆದ್ದರಿಂದ ಸಾಮಾಜಿಕವಾಗಿ ಬದಲಾವಣೆಗಳಾದರೆ ಸಮಾಜ ಆರೋಗ್ಯದಿಂದಿದೆ ಎಂದರ್ಥ. ಆ ಮೂಲಕ ಜನ ಎಚ್ಚೆತ್ತ ಪ್ರಜ್ಞೆಯಲ್ಲಿದ್ದಾರೆ ಎಂಬುದರ ಅರಿವಾಗುತ್ತದೆ ಹಾಗೂ ಸಾಹಿತ್ಯಿಕವಾಗಿಯೂ ಬದಲಾವಣೆ ಅತ್ಯವಶ್ಯಕ. ಈ ಬದಲಾವಣೆಯನ್ನು ನಾವು ಮುಖ್ಯವಾಗಿ ಮಹಿಳಾ ಸಾಹಿತ್ಯದಲ್ಲಿ ಕಾಣಬಹುದು. ಮಹಿಳಾ ಸಾಹಿತ್ಯದ ಪ್ರಧಾನ ಆಶಯವೇ ಬದಲಾವಣೆ. ಅಂದರೆ ಸ್ತ್ರೀಯರ ಶೋಷಣೆಗೆ ಕಾರಣವಾದ ಸಾಮಾಜಿಕ ಮತ್ತು ಧಾರ್ಮಿಕ ಮೌಲ್ಯಗಳನ್ನು ಪ್ರಶ್ನಿಸುವ ಮತ್ತು ಮರು ಪರಿಶೀಲಿಸುವ ಪ್ರಯತ್ನವನ್ನು ಮಹಿಳಾ ಸಾಹಿತ್ಯ ಮಾಡಿತು. ಆ ಮೂಲಕ ಹೊಸದೊಂದು ನೋಟದಲ್ಲಿ ಹೆಣ್ಣನ್ನು ನೋಡುವ ಪ್ರಕ್ರಿಯೆಗೆ ಒಳಗು ಮಾಡಿದ್ದೇ ಮಹಿಳಾ ಸಾಹಿತ್ಯ.

ಈ ಶತಮಾನದ ಮಹಿಳಾ ಸಾಹಿತ್ಯವನ್ನು ಸ್ವತಂತ್ರ್ಯಪೂರ್ವ,ಸ್ವಾತಂತ್ರ್ಯೋತ್ತರ ಮತ್ತು ೧೯೭೫ ರ ನಂತರ ಬಂದ ಆಧುನಿಕ ಮಹಿಳಾ ಸಾಹಿತ್ಯ ಎಂದು ನಾವು ಗುರ್ತಿಸುತ್ತೇವೆ. ಆದರೂ ಈ ಮೂರು ಕಾಲಘಟ್ಟದಲ್ಲಿ ಚರ್ಚೆಗೊಳಪಟ್ಟಿದ್ದು ಹೆಣ್ಣಿನ ಅಸ್ಮಿತೆಯೇ. ಆದರೆ ಮೂರು ಕಾಲಘಟ್ಟಗಳಲ್ಲೂ ಅದನ್ನು ವ್ಯಕ್ತಪಡಿಸಿದ ರೀತಿ ಮಾತ್ರ ಭಿನ್ನವಾದುದು. ಸ್ತ್ರೀ ಸ್ವಾತಂತ್ರ್ಯ, ವರದಕ್ಷಿಣೆ, ಬಾಲ್ಯವಿವಾಹ, ಶಿಕ್ಷಣ ಮುಂತಾದ ಅಂಶಗಳು ಮೊದಲೆರಡು ಕಾಲಘಟ್ಟಗಳ ಪ್ರಧಾನ ಆಶಯವಾದರೆ ಆಧುನಿಕ ತಲೆಮಾರಿನವರ ತಲ್ಲಣಗಳು, ಬದುಕಿನ ಒತ್ತಡಗಳು, ಹುಸಿಯಾದ ನಿರೀಕ್ಷೆಗಳು ಹೆಚ್ಚು ಚರ್ಚೆಗೊಳಪಟ್ಟದ್ದು ೧೯೭೫ರ ನಂತರದ ಮಹಿಳಾ ಸಾಹಿತ್ಯದಲ್ಲಿ. ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಆದ ಬದಲಾವಣೆಗಳು, ಪತ್ರಿಕೆಗಳ ಪ್ರಭಾವ, ಸ್ತ್ರೀಯರಿಗೆ ದೊರೆತ ಉನ್ನತ ಶಿಕ್ಷಣ ಬರವಣಿಗೆಯ ಸ್ವಾತಂತ್ರ್ಯ, ವಿದೇಶಿ ಸಾಹಿತ್ಯದ ಓದು ಮುಂತಾದುವುಗಳು ಹೆಣ್ಣಿನ ಆಲೋಚನಾ ಮನಸ್ಸನ್ನು ವಿಶಿಷ್ಟರೀತಿಯಲ್ಲಿ ಕೊಂಡೊಯ್ದದ್ದು ಇಲ್ಲಿಯೇ.

ಇದರ ಜೊತೆಗೆ ಪಾಶ್ಚಾತ್ಯ ದೇಶದಲ್ಲಿ ಹುಟ್ಟಿ ಪ್ರಪಂಚದಾದ್ಯಂತ ಹಬ್ಬಿದ ಸ್ತ್ರೀವಾದಿ ಸಾಹಿತ್ಯ ಮಹಿಳೆಗೆ ಮತ್ತೊಂದು ಪ್ರೇರಕ ಶಕ್ತಿಯಾಯಿತೆಂದರೆ ತಪ್ಪಿಲ್ಲ. ಈ ಕಾಲಘಟ್ಟದಲ್ಲಿ ಸ್ತ್ರೀವಾದವನ್ನು ಒಂದು ಪ್ರಧಾನ ಸೈಧ್ಧಾಂತಿಕ ನೆಲೆಗಟ್ಟಿನಲ್ಲಿ ಸ್ವೀಕರಿಸಿತು. ಆ ಮೂಲಕ ಸಾಹಿತ್ಯದ ಹೊಸ ದಿಗಂತಕ್ಕೆ ನಾಂದಿ ಹಾಡಿತು. ಜೈವಿಕ ನೆಲೆಯಲ್ಲಿ ಬದಲಾವಣೆಗಳಿರುವ ಹೆಣ್ಣು ಮತ್ತು ಗಂಡಿನ ಆಲೋಚನೆಯಲ್ಲಿಯೂ ಭಿನ್ನತೆ ಇರುತ್ತವೆ ಎಂಬುದನ್ನು ಮಹಿಳಾ ಸಾಹಿತಿಗಳು ಸಾಹಿತ್ಯದ ಮೂಲಕ ದಾಖಲಿಸಲು ಹೊರಟರು. ಇದುವರೆಗೂ ಇದ್ದ ಹೆಣ್ಣಿನ ಬಗೆಗಿನ ಆಲೋಚನೆ ಮತ್ತು ತಿಳುವಳಿಕೆಯ ಮಾರ್ಗಗಳು ಹೊಸ ನೋಟದಲ್ಲಿ ಮರು ದಾಖಲಾದವು ಮತ್ತು ವಿಶಿಷ್ಟ ಅಭಿರುಚಿ ಬೆಳೆಸಿಕೊಂಡ ಮಾರ್ಗವಾಗಿ ಮಹಿಳಾ ಸಾಹಿತ್ಯ ರೂಪುಗೊಂಡಿತು.

ಇಂತಹ ಬದಲಾವಣೆಯನ್ನು ಹೆಚ್ಚು ಪ್ರಭಾವ ಮತ್ತು ಪ್ರಧಾನವಾಗಿ ನಾವು ಮಹಿಳಾ ಕಾವ್ಯದಲ್ಲಿ ಕಾಣಬಹುದು. 'ಗಂಡಿಗಿಲ್ಲದ ವಿಶಿಷ್ಟತೆ ಹೆಣ್ಣಿಗಿದೆ, ಅದು ಜೈವಿಕ ಬದಲಾವಣೆಯಲ್ಲಲ್ಲ, ಆಲೋಚನಾ ಕ್ರಮದಲ್ಲಿ' ಎಂಬುದನ್ನು ಮಹಿಳಾ ಕಾವ್ಯವು ದಾಖಲಿಸಿತು. ಬರವಣಿಗೆಗೆ ತೊಡಗಿದ ಪ್ರತಿಯೊಬ್ಬ ಕವಯಿತ್ರಿಯರಲ್ಲಿ ಸಾಮಾಜಿಕವಾಗಿ ಬದಲಾವಣೆಗೆ ಹಾತೊರೆಯುವ ಹೆಣ್ಣಿರುತ್ತಾಳೆ. ಅಂದರೆ ಸಾಹಿತ್ಯದಲ್ಲಿ ತನ್ನನ್ನು ತಾನು ದಾಖಲು ಮಾಡುವ ಉದ್ದೇಶ ಮಾತ್ರ ಕವಯಿತ್ರಿಗಿರುವುದಿಲ್ಲ. ಸ್ವಾತಂತ್ರ್ಯದ ಬಯಕೆ ಇರುವುದು ಸಾರ್ವತ್ರಿಕ ಹೆಣ್ಣಿನ ಕಲ್ಪನೆಯಲ್ಲಿ ಎಂಬುದನ್ನು ಮಹಿಳಾ ಕಾವ್ಯ ತೋರಿಸಿಕೊಟ್ಟಿತು. ಆ ಮೂಲಕ ಹೊಸ ನೆಲೆಗಟ್ಟಿನಲ್ಲಿ ಹೆಣ್ಣನ್ನು ನೋಡಲು ಸಾಧ್ಯ ಎಂಬುದನ್ನು ಮಹಿಳಾ ಕಾವ್ಯ ಮನಗಾಣಿಸಿತು.

ಸಾಮಾಜಿಕವಾಗಿ ಎಚ್ಚೆತ್ತ ಮಹಿಳೆಯ ಆಲೋಚನೆ ಭಿನ್ನತೆಯಿಂದ ಕೂಡಿರುತ್ತದೆ. ಏಕೆಂದರೆ ದಶಕಗಳಲ್ಲಿ ರಚಿತವಾದ ಲೇಖಕಿಯ ಚಿಂತನೆಗಳು ಮರು ಪರಿಶೀಲನೆಗೊಳಪಡುವ ಸಂದರ್ಭ, ಮಹಿಳಾ ಕಾವ್ಯದಲ್ಲಿ ಪುನರ್ ವ್ಯಾಖ್ಯಾನಗೊಡ ಚಿತ್ರಣ ಮರು ದಾಖಲೆನ್ನಬಹುದು. ಪುರುಷ ಪ್ರಧಾನ ನೆಲೆಯಲ್ಲಿ ರಚಿತಗೊಂಡ ಮಹಿಳೆಯ ಚಿತ್ರಣವನ್ನು ಸೃಜನಶೀಲ ಸಾಹಿತ್ಯದೊಂದಿಗೆ ಹೊಸ ತನದಲ್ಲಿ ನೋಡುವ ಪ್ರಯತ್ನ ಈ ಕಾಲಘಟ್ಟದಲ್ಲಾದದ್ದು ಬಹು ಮುಖ್ಯಸಂಗತಿ. ಅಂದರೆ ಲೇಖಕಿಯ ಬರವಣಿಗೆಯಲ್ಲಿ ಮೂಡಿಬಂದ ಜಾಗೃತ ಹೆಣ್ಣಿನ ಪಾತ್ರ ಕೇವಲ ಚಿತ್ರಣವಾಗಿರದೆ, ಸಮಾಜದ ಪ್ರತಿನಿಧಿಯೂ ಎಂಬಂತೆ ಕಂಡುಕೊಳ್ಳುವುದು. ಆ ಮೂಲಕ ಸಾಮುದಾಯಿಕ ಎಂಬರ್ಥದ ಪಜ್ಞೆಯನ್ನು ಹುಟ್ಟು ಹಾಕುವುದು ಈ ಕಾಲಘಟ್ಟದ ಪ್ರಮುಖ ಆಶಯವೂ ಹೌದು. ಅಂದರೆ ಬಹುಮುಖತೆಯಲ್ಲಿ ಹೆಣ್ಣನ್ನು ಕಟ್ಟಿಕೊಡುವ ಪ್ರಯತ್ನ, ಆ ಮೂಲಕ ತನ್ನೊಳಗಿನ ಹೆಣ್ತನದ ಎಚ್ಚೆತ್ತ ಪ್ರಜ್ಞೆಯ ಅನಾವರಣವನ್ನು ಮಾಡುವುದು ಮಹಿಳಾ ಕಾವ್ಯದ ಪ್ರಧಾನ ಆಶಯವಾಗಿತ್ತೆಂದರೆ ತಪ್ಪಿಲ್ಲ. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯು ಪರಿಪೂರ್ಣತೆಯನ್ನು ಪಡೆದುಕೊಂಡಿದ್ದು

ಎಪ್ಪತ್ತರ ದಶಕದ ನಂತರವೇ. ಇದಕ್ಕೂ ಮುಂಚೆ ಪ್ರಾಚೀನ, ಮಧ್ಯಕಾಲೀನ ಸಾಹಿತ್ಯವನ್ನು ಗಮನಿಸಿದರೆ, ಸಾಹಿತ್ಯದಲ್ಲಿ ಮಹಿಳಾ ಪರವಾದ ಧ್ವನಿಗಳನ್ನು ಗುರ್ತಿಸುವುದು ವಿರಳ. ಕೇವಲ ದಾಖಲೆ ಎಂಬಂತೆ ಮಾತ್ರ ಅದು ಧ್ವನಿತವಾಗಿದೆ. ಇದೆಲ್ಲದರ ಪರಿಣಾಮಗಳಿಂದ ಸಾಹಿತ್ಯದ ನಾಲ್ಕನೇ ಘಟ್ಟವಾದ ದಲಿತ ಬಂಡಾಯ ಸಾಹಿತ್ಯದ ಉದಯದಿಂದ ಸ್ತ್ರೀ ಸಂವೇದನೆ ಹೊಸ ರೂಪು ಪಡೆದುಕೊಂಡಿತು. ತಾರತಮ್ಯಕ್ಕೆ ಒಳಗಾದ ಜಾತಿಸಮಸ್ಯೆ, ನಿಕೃಷ್ಟತೆಗೆ ಗುರಿಯಾದ ಹೆಣ್ಣು, ಪುರುಷನ ಸಹಚಾರಿಣಿಯಾದರೂ ಕೀಳು ಎಂಬ ಪ್ರತಿಮಾ ಮಾದರಿಗೆ ಉದಾಹರಣೆಯಾದಳು. ಇವೆಲ್ಲವನ್ನೂ ಪ್ರಶ್ನಿಸುವಂತೆ ಮಾಡಿದ್ದು ಮತ್ತು ಆ ಮೂಲಕ ಜಾಗೃತಿ ಉಂಟುಮಾಡಿದ್ದು ಅಕ್ಷರ ಕ್ರಾಂತಿ. ಅನ್ನ ಮತ್ತು ಅಕ್ಷರ ಕ್ರಾಂತಿಗೆ ಸಮಾನ ರೂಪ ಕೊಟ್ಟಿದ್ದು ದಲಿತ ಬಂಡಾಯ ಸಾಹಿತ್ಯ ಕಾಲಘಟ್ಟವೆಂದರೆ ತಪ್ಪಿಲ್ಲ.

ಕಥಾ ಸಾಹಿತ್ಯದಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದ ಮಹಿಳಾ ಸಾಹಿತಿಗಳು ಕಾವ್ಯದ ಕಡೆಗೆ ಮುಖಮಾಡಿದ್ದು ಎಪ್ಪತ್ತರ ದಶಕದಲ್ಲಿಯೆ. ಏಕೆಂದರೆ ತಮ್ಮ ಭಾವನೆಗಳನ್ನು ಶೋಷಣೆಯ ವಿವಿಧ ಮುಖಗಳನ್ನು ಅನಾವರಣ ಮಾಡಲು ಅಪ್ಪಿಕೊಂಡದ್ದು ಕಾವ್ಯ ಮಾರ್ಗವನ್ನು. ಎಪ್ಪತ್ತರ ದಶಕದಲ್ಲಿ ಬಂದ ಬಹುತೇಕ ಕವಯಿತ್ರಿಯರು ಸಾಹಿತ್ಯ ಪ್ರವೇಶವನ್ನು ಕಾವ್ಯ ಮಾರ್ಗದಿಂದಲೇ ಕಂಡುಕೊಂಡರು. ಎಲ್ಲರ ಆಶಯದ ಮಾರ್ಗವು ಒಂದೇ ಆಗಿದ್ದರೂ, ಅದನ್ನ ವ್ಯಕ್ತಪಡಿಸುವ ರೀತಿ ಮಾತ್ರ ವಿಭಿನ್ನವಾದುದಾಗಿದೆ. ಈ ನಿಟ್ಟಿನಲ್ಲಿ ನಾವು ಹಲವು ಕವಯಿತ್ರಿಯರನ್ನು ಉದಾಹರಿಸಬಹುದು.

ಬೆಳಗೆರೆ ಜಾನಕಮ್ಮ, ಪ್ರತಿಭಾ ನಂದಕುಮಾರ್, ಹೆಚ್.ಎಲ್.ಪುಷ್ಪ, ದು.ಸರಸ್ವತಿ, ಶಶಿಕಲಾ ವೀರಯ್ಯಸ್ವಾಮಿ, ಲಲಿತಾ ಸಿದ್ದಬಸವಯ್ಯ, ಬಿ.ಟಿ.ಲಲಿತಾನಾಯಕ್, ಗೀತಾ ನಾಗಭೂಷಣ, ಸವಿತಾ ನಾಗಭೂಷಣ,ಚೇತನಾ ತೀರ್ಥಹಳ್ಳಿ, ಕೆ.ಷರೀಫಾ, ಸಬಿಹಾ ಭೂಮಿಗೌಡ, ಡಿ.ಬಿ.ರಜಿಯಾ, ಕೆ.ಆರ್.ಸಂಧ್ಯಾರೆಡ್ಡಿ ಮುಂತಾದ ಎಲ್ಲಾ ಕವಯಿತ್ರಿಯರ ಸ್ಥಾಯಿ ಭಾವ ಒಂದೇ ಹೆಣ್ಣಿನ ಶೋಷಣೆ ವಿರುದ್ದ ಹೋರಾಡುವುದು, ಮಹಿಳಾಪರ ಕಾಳಜಿ, ಚಿಂತನೆ ಹಾಗೂ ಜಾಗೃತಿ ಮೂಡಿಸುವುದು. ಬಹುತೇಕ ಕವಯಿತ್ರಿಯರ ಕವಿತೆಗಳಲ್ಲಿ ತನ್ನ ಕಾಲಘಟ್ಟದ ಬಗೆಗಿನ ಚಿಂತನೆ ಮಾತ್ರವಲ್ಲದೆ ಗತಕಾಲದ ಹೆಣ್ಣಿನ ಚಿತ್ರಣವನ್ನೂ ಸಹ ಹೊಸ ನಿಟ್ಟಿನಲ್ಲಿ ಕಟ್ಟಿಕೊಡುವ ಪ್ರಯತ್ನವಿರುವುದು ಗಮನಾರ್ಹ ಸಂಗತಿಯಾಗಿದೆ.

ಎಪ್ಪತ್ತರ ದಶಕದ ನಂತರ ಬಂದ ಹೊಸ ತಲೆಮಾರಿನ ಲೇಖಕಿಯರಲ್ಲಿ ಪ್ರತಿಭಟನೆಯ ಗುಣ ಅಗಾಧವಾಗಿ ಕಂಡುಬಂದಿದ್ದು ಕಾವ್ಯಗಳ ಮುಖಾಂತರವೆ. ಲಿಂಗತಾರತಮ್ಯ, ದೌರ್ಜನ್ಯ, ಭ್ರೂಣಹತ್ಯೆ ಮತ್ತು ಮಹಿಳಾ ಸ್ವಾತಂತ್ರ್ಯವನ್ನು ಏಕಮುಖವಾಗಿ ನೋಡದೆ ಪ್ರಗತಿಪರ ಸಾಮುದಾಯಿಕ ಕಲ್ಪನೆಯಲ್ಲಿ ಕಟ್ಟಿದ್ದು ವಿಶೇಷ. ಶೋಷಣೆಯ ವಿವಿಧ ಮುಖಗಳನ್ನು ಚರಿತ್ರೆಯಿಂದಲೂ ಗಂಡು ಕಟ್ಟಿದ ಹೆಣ್ಣಿನ ಕಲ್ಪನೆಯ ಚಿತ್ರಣವನ್ನು

ಪ್ರಶ್ನಿಸುವ ಮಟ್ಟಕ್ಕೆ ಮಹಿಳಾ ಕಾವ್ಯ ನಿಂತಿತು. ನೀರಸ ಅಥವಾ ಸೌಮ್ಯ ಪ್ರತಿಕ್ರಿಯೆಗಳು ಪ್ರತಿಭಟನೆಯ ಕಾವನ್ನು ಪಡೆದುಕೊಂಡದ್ದು ಸ್ತ್ರೀಪರ ಕಾಳಜಿ ಮತ್ತೊಂದು ಮಜಲೆನ್ನಬಹುದು. ಕಾವ್ಯ ಸಮಾಜದ ರಾಜಕೀಯ ಮತ್ತು ಸಾಮಾಜಿಕ ಅಂಶಗಳ ಒಟ್ಟಾರೆ ಪ್ರತಿಫಲವೆನ್ನಬಹುದು. ಇದರ ಜೊತೆಗೆ ಒಂದು ಕಾವ್ಯ ಹುಟ್ಟಲು ಆ ಕಾಲದ ಸಾಂಸ್ಕೃತಿಕ ಒತ್ತಡಗಳು ಸಹ ಕಾರಣವಾಗುತ್ತವೆ. ಅವು ಕೇವಲ ಕಲ್ಪನೆಯ ನೆಲೆಯಲ್ಲಿ ಹುಟ್ಟಿದವಲ್ಲ. ಒಂದು ವೇಳೆ ಕಲ್ಪನೆಯ ನೆಲೆಯಲ್ಲಿದ್ದರೂ ಅದು ಸಾಮುದಾಯಿಕ ಪ್ರಜ್ಞೆಯ ಪ್ರತೀಕವೂ ಹೌದು. ಬರೆಯಬೇಕೆಂಬ ಒತ್ತಡದ ತೀವ್ರತೆಯು ಅನುಭವಾತೀತವಾದುದು ಮತ್ತು ಕವಯಿತ್ರಿಯರ ಪ್ರಾದೇಶಿಕವಾದ ನೆಲೆಯಲ್ಲಿನ ತೀವ್ರತೆಯ ಸ್ವರೂಪವೂ ಇರಬಹುದು. ಸಾಮಾಜಿಕ ಬದಲಾವಣೆ ಅಂಶಗಳು ಪ್ರತಿಯೊಬ್ಬ ಕವಯಿತ್ರಿಯ ಕವನಗಳಲ್ಲೂ ಹಾಸು ಹೊಕ್ಕಾಗಿವೆ. ಏಕೆಂದರೆ ಪ್ರತಿಯೊಬ್ಬ ಕವಯಿತ್ರಿಯೂ ಮೊದಲು ತನ್ನ ನೆಲೆಯನ್ನು ಕಂಡುಕೊಳ್ಳುವುದು ಸಾಮಾಜಿಕ ನೆಲೆಯಿಂದಲೇ. ಆ ಮೂಲಕ ಸಮಾಜದ ಇನ್ನಿತರ ಅಂಶಗಳತ್ತ ಗಮನ ಹರಿಸುವುದನ್ನು ನೋಡಬಹುದು. ಏಕೆಂದರೆ ಹೆಣ್ಣಾದವಳ ಆಲೋಚನೆ ಸಾಮಾಜಿಕವಾಗಿ ಹೇಗೆ ಜಾಗೃತ ಪ್ರಜ್ಞೆಯಲ್ಲಿ ಒಡ ಮೂಡತ್ತದೆಂಬುದು ಪ್ರಮುಖವಾದ ಅಂಶ. ಇದರ ಜೊತೆಗೆ ರಾಜಕೀಯ ಸ್ವರೂಪ ಯಾಕೆ ಬೇಕು? ಅದು ಹೇಗೆ ತಳೆಯುತ್ತದೆ ಎಂಬ ಅಂಶಗಳನ್ನು ಕಾವ್ಯದಲ್ಲಿ ನೋಡಬಹುದು ಹಾಗೂ ಹೆಣ್ಣಿಗೆ ಸಾಮಾಜಿಕವಾಗಿ ಹೇರಿದ ಒತ್ತಡಗಳಿಂದ ಬಿಡುಗಡೆ ಹೊಂದುವ ಹಂಬಲ, ಇದಕ್ಕೆ ಪೂರಕವಾಗಿ ದಕ್ಕಿಸಿಕೊಂಡ ಅಕ್ಷರ ಜ್ಞಾನ, ಜಾಗತಿಕ ನೆಲೆಯಲ್ಲಾದ ಬದಲಾವಣೆ ಮತ್ತು ಆ ಮೂಲಕ ಮಹಿಳೆ ಪಡೆದುಕೊಂಡ ಸ್ವಾತಂತ್ರ್ಯ ಇವೆಲ್ಲವೂ ಪ್ರಮುಖವಾದ ಅಂಶಗಳಾಗಿವೆ.

ಪುರಾಣಗಳ ಮೂಲಕ ಹೆಣ್ಣನ್ನು ಕಟ್ಟಿಕೊಟ್ಟ ಗಂಡಿನ ಆಲೋಚನೆಯನ್ನು ಪುನರ್ ವಿಮರ್ಶೆಗೊಳಪಡಿಸಿ ಹೊಸ ನೋಟದೊಂದಿಗೆ ಚಿಂತನೆಗೆ ಒಳಗು ಮಾಡಿದ್ದು ಆಧುನಿಕ ಮಹಿಳಾ ಕಾವ್ಯ. ನೀತಿಯ ಅನುಸರಣೀಯ ಮಾರ್ಗವಾದ ಪುರಾಣಗಳ ಮೂಲಕ ಹೆಣ್ಣನ್ನು ಸಾತ್ವಿಕ ಕ್ರೌರ್ಯಗಳಲ್ಲಿ ಹೇಗೆ ಇಂಜೆಕ್ಟ್ ಮಾಡಲಾಗಿತ್ತು ಎಂಬುದನ್ನು ಹೊಸ ವಿಮರ್ಶೆಗೊಳಪಡಿಸಿದ್ದು ಆಧುನಿಕ ಮಹಿಳಾ ಕಾವ್ಯ. ಕಾಲಘಟ್ಟದ ನೆಲೆಯಲ್ಲಿ ಹೊಸ ದಾಖಲೆಯೊಂದಿಗೆ ಪುನರ್ ವ್ಯಾಖ್ಯಾನಿಸುವ ಕ್ರಮ ಬಂದದ್ದೂ ಸಹ ಕಾವ್ಯದಿಂದಲೇ. ಹೆಣ್ಣು ತನ್ನ ಲೈಂಗಿಕ ಪ್ರತಿಮೆಗಳನ್ನು ಬಿಡಿಸಿಕೊಳ್ಳುವಂತೆ ಮಾಡಿದ್ದು ಅಕ್ಷರ ಕ್ರಾಂತಿ. ಶತಮಾನಗಳಿಂದ ಮುಚ್ಚಿಟ್ಟ ಭಾವನೆಗಳಿಗೆ ಹೊಸ ಭಾಷ್ಯ ಬರೆದದ್ದು ಕೂಡ ಇದೆ. ಪುರುಷ ಪ್ರಧಾನ ಸಮಾಜದ ಹುಸಿ ಮೌಲ್ಯಗಳ ನಿರಾಕರಣೆಯನ್ನೂ ಸಾರಾಸಗಟಾಗಿ ಮಹಿಳಾ ಕಾವ್ಯ ತಿರಸ್ಕರಿಸಿತು. ಆ ಮೂಲಕ ಗಂಡು ನೋಟದ ಹೆಣ್ಣಿನ ಚಿತ್ರಣದ ಬದಲಾವಣೆಗೆ ನಾಂದಿಯಾಯಿತು.

ಸ್ತ್ರೀವಾದ ಪ್ರಭಾವದಿಂದ ಮಹಿಳಾ ಕಾವ್ಯ ಹೊಸ ಆಯಾಮವನ್ನು ಕಂಡುಕೊಂಡಿತು. ಅಂದರೆ ಕವಯಿತ್ರಿಯರು ವಸ್ತು ಕೇಂದ್ರಿತ ನೆಲೆ, ವ್ಯಕ್ತಿ ಕೇಂದ್ರಿತ ನೆಲೆ, ಸಮಾಜ ಮತ್ತು

ಸಾಮುದಾಯಿಕ ನೆಲೆಯಲ್ಲಿ ಬರೆಯುವಾಗಲೂ ಅಲ್ಲಿ ಮುಖ್ಯವಾಗಿ ಕಂಡುಬರುವುದು ಹೆಣ್ಣೇ. ಇದನ್ನೇ ನಮ್ಮ ಹಲವು ಕವಯಿತ್ರಿಯರು ವಿವಿಧ ರೀತಿಯ ಹೊಸ ಆಯಾಮಗಳನ್ನು ಕಟ್ಟಿಕೊಟ್ಟದ್ದು ಬಹು ವಿಶೇಷವಾದ ಅಂಶ. ಅಧ್ಯಯನದ ಸೀಮಿತತೆಯ ದೃಷ್ಟಿಯಿಂದ ಸಂಶೋಧನೆಗೆ ಆಯ್ಕೆ ಮಾಡಿಕೊಂಡಿರುವ ಎಂಟು ಕವಯಿತ್ರಿಯರ ಜೊತೆಗೆ ಸಮಕಾಲೀನ ಕವಯಿತ್ರಿಯರ ಕವನ ಸಂಕಲನಗಳಲ್ಲಿ ಅಧ್ಯಯನಕ್ಕೆ ಅಗತ್ಯವಾದ ಕವನಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕವಯಿತ್ರಿಯರ ಕವನಗಳು ಯಾವ ಅಂಶದ ಆಧಾರದ ಮೇಲೆ ಸಾಮಾಜಿಕ ಬದಲಾವಣೆಯ ಅಂಶವನ್ನು ಕೇಂದ್ರೀಕರಿಸಿವೆ ಎಂಬುದನ್ನು ದಾಖಲಿಸುವ ಪ್ರಯತ್ನವಾಗಿದೆ. ಸಮಕಾಲೀನ ಮಹಿಳಾ ಕಾವ್ಯವನ್ನು ಗಮನಿಸಿದರೆ ಸಮಾಜಮುಖಿ ಆಶಯಗಳೇ ದಟ್ಟವಾಗಿವೆ. ನಗರ ಪ್ರಜ್ಞೆಯ ಹೆಣ್ಣಿಗಿರುವ ತಾಕಲಾಟ, ಗ್ರಾಮೀಣ ಪ್ರದೇಶದ ಮಹಿಳೆಯ ಮನಸ್ಥಿತಿ, ಉದ್ಯೋಗಸ್ಥ ಮಹಿಳೆಯ ಬಯಕೆ ಮತ್ತು ತಲ್ಲಣ, ಸಾಮಾನ್ಯ ಹೆಣ್ಣಿನ ಮನಸ್ಥಿತಿಗಳ ನಡುವೆ ನಡೆಯುವ ಹೊಯ್ದಾಟಗಳು ಪ್ರತಿಯೊಬ್ಬ ಕವಯಿತ್ರಿಯ ನೋಟದಲ್ಲೂ ಹೊಸತನವನ್ನು ಪಡೆದುಕೊಳ್ಳುತ್ತವೆ. ಆರಂಭದ ಕವಿತೆಗಳು ಮಹಿಳೆಗೆ ಒತ್ತಡಗಳನ್ನು ಹೊರ ಹಾಕುವ ಮಾರ್ಗವಾಗಿ ಕಂಡುಬಂದರೆ, ಇಂದಿನ ದೃಷ್ಟಿ ಕೋನವನ್ನೇ ಬದಲಿಸುವಂತೆ ಮಹಿಳಾ ಕಾವ್ಯ ರಚಿತಗೊಳ್ಳುತ್ತಿರುವುದು ಸ್ವಾಗತಾರ್ಹ ಸಂಗತಿ. ಆಧುನಿಕ ಮಹಿಳಾ ಕಾವ್ಯದಲ್ಲಿ ಪರೋಕ್ಷವಾದ ಹೆಣ್ಣಿನ ನಿವೇದನೆ ಇಂದಿಲ್ಲ. ಏಕೆಂದರೆ ಗಂಡಿನ ನಿಜ ವರ್ತನೆಯುನ್ನು ಬಯಲು ಮಾಡುವ ಹಂಬಲವೇ ವಿನಃ ಗಂಡನ್ನು ವಿರೋಧಿಸುವುದೆಂದಲ್ಲ ಎಂಬಂಶವನ್ನು ಮಹಿಳಾ ಕಾವ್ಯ ರುಜುವಾತು ಪಡಿಸಿದೆ. ಈ ಎಲ್ಲಾ ಕಾರಣಗಳಿಂದ ಸಾಮಾಜಿಕ ಬದಲಾವಣೆಯ ಪ್ರಮುಖ ಅಂಶಗಳನ್ನು ಈ ನಿಟ್ಟಿನಲ್ಲಿ ಗುರ್ತಿಸಬಹುದು.

೭.೧ ಕೌಟುಂಬಿಕ ಹಿನ್ನಲೆಯಲ್ಲಿ: ದಾಂಪತ್ಯ, ಪ್ರೀತಿ, ಪ್ರಣಯ

೭.೨ ಚರಿತ್ರೆ ಮತ್ತು ಪುರಾಣ ಪಾತ್ರಗಳ ಮುಖಾಮುಖಿ: ಪುನರ್ ವ್ಯಾಖ್ಯಾನಕ್ಕೊಳಪಡಿಸುವ ಕ್ರಮ

೭.೩ ಅಸ್ಮಿತೆ: ತನ್ನ ತನದ ಹುಡುಕಾಟ, ಪ್ರತಿಭಟನಾತ್ಮಕ ನೆಲೆ

೭.೪ ಪ್ರತಿಮಾ ಮಾದರಿ: ನಿರೀಕ್ಷೆ, ಹತಾಷೆ ಗಳಲ್ಲಿ

ಸಾಮಾಜಿಕ ಬದಲಾವಣೆ ಎಂಬುದು ನಿರಂತರ ಕ್ರಿಯೆ. ವ್ಯಕ್ತಿ ಆಲೋಚನಾ ಪರಿಧಿಯನ್ನು ಒಂದು ವ್ಯವಸ್ಥಿತ ಚೌಕಟ್ಟಿಗೆ ತಂದು ಆ ಮೂಲಕ ಸಮಾಜದಲ್ಲಿ ಚಲನಶೀಲ ಅಬಿವೃದ್ಧಿಯಾದಾಗ ಸಾಮಾಜಿಕ ಬದಲಾವಣೆಯ ಕ್ರಿಯೆ ಮೂರ್ತ ರೂಪ ಪಡೆಯುತ್ತದೆ. ಪ್ರತಿಯೊಂದು ಸಂದರ್ಭದಲ್ಲೂ ಕ್ರಿಯಾಶೀಲವಾಗಿರಬೇಕು ಇಲ್ಲದಿದ್ದರೆ ಸಮಾಜ ಅನಾರೋಗ್ಯದ ಗೂಡಾಗುತ್ತದೆ. ಈ ಸಂದರ್ಭದಲ್ಲಿ ನಮ್ಮ ಸಾಹಿತ್ಯಲೋಕ ಆರೋಗ್ಯಕರ ಸಮಾಜವನ್ನು ಕಟ್ಟುವಲ್ಲಿ ಸಕ್ರಿಯವಾಗಿದೆ. ಆಧುನಿಕ ಮಹಿಳಾ ಕಾವ್ಯ ಸಮಾಜಮುಖಿ

ಧೋರಣೆಯ ಹಿನ್ನಲೆಯಲ್ಲಿ ರಚಿತಗೊಂಡಂತವು. ಏಕೆಂದರೆ ಮಹಿಳಾ ಕಾವ್ಯವೆಂದರೆ ಕೇವಲ ಹೆಣ್ಣಿನ ಅಂತರಂಗದ ನೋವುಗಳನ್ನು ಮಾತ್ರ ವ್ಯಕ್ತಪಡಿಸುವ ಬರಹಗಳಲ್ಲ. ಧನ್ಯತೆ, ಅರ್ಪಣಾ ಮನೋಭಾವ ಮತ್ತು ಕುಟುಂಬದ ಸೀಮಿತ ನೆಲೆಯಲ್ಲಿ ತೃಪ್ತಿಹೊಂದಿ ಬರೆದ ಬರಹಗಳೂ ಅಲ್ಲ ಅಥವಾ ಬರೆಯುಬೇಕೆಂಬ ಹಂಬಲದಿಂದಲೋ, ಒತ್ತಡದಿಂದಲೋ ರಚಿತಗೊಂಡವಲ್ಲ. ಹೆಣ್ಣನ್ನು ಈ ಸಮಾಜ ಯಾವ ಪರಿಧಿಯಲ್ಲಿ ಸ್ವೀಕರಿಸಿದೆ ಎಂಬ ಅರಿವನ್ನು ಮನಗಾಣಿಸುತ್ತಲೇ ತನ್ನ ತನದ ಶೋಧವನ್ನು ಮತ್ತು ಅಸ್ತಿತ್ವವನ್ನು ಕಂಡುಕೊಳ್ಳುವ ನಿಟ್ಟಿನಿಂದ ರಚಿತಗೊಂಡವು. ಅಂದರೆ ವ್ಯವಸ್ಥಿತ ಚೌಕಟ್ಟಿಗೆ ಸಿಲುಕಿಸಿದ ಗಂಡಿನ ಅಹಮಿಕೆ ಸೋಗಲಾಡಿತನವನ್ನು ಬಯಲಿಗೆಳೆದು ಹೊಸ ಭಾಷ್ಯ ಬರೆದ ಬಹುಮುಖತೆಯ ವಿಶಿಷ್ಟತೆ ಮಹಿಳಾ ಕಾವ್ಯದಲ್ಲಡಗಿದೆ. ಈ ಎಲ್ಲಾ ಕಾರಣಗಳಿಂದ ಆಧುನಿಕ ಮಹಿಳಾ ಕಾವ್ಯದಲ್ಲಿ ಸಾಮಾಜಿಕ ಬದಲಾವಣೆಯ ಅಂಶಗಳು ಪ್ರತಿಯೊಬ್ಬ ಕವಯಿತ್ರಿಯರಲ್ಲು ಮೂಡಿದ ಬಗೆ ಹೇಗೆ ಮತ್ತು ದೃಷ್ಟಿಕೋನದಲ್ಲಿ ಬದಲಾವಣೆಯ ವ್ಯಾಪ್ತಿ ಹೇಗೆ, ಬಹುಮುಖತೆಯನ್ನು ಪಡೆದು ಪ್ರಸ್ತುತ ವಿಚಾರಗಳಿಗೆ ಸ್ಪಂದಿಸುತ್ತದೆ ಎಂಬುದನ್ನು ಹುಡುಕುವ ಪ್ರಯತ್ನವಾಗಿದೆ. ಸಂಶೋಧನಾ ಪ್ರಬಂಧ ರಚಿಸಲು ಆಯ್ಕೆ ಮಾಡಿಕೊಂಡ ಎಂಟು ಕವಯಿತ್ರಿಯರನ್ನು ಹೊರತುಪಡಿಸಿ ಲಭ್ಯವಿರುವ ಇತರೆ ಕವಯಿತ್ರಿಯರ ಕವನಗಳಲ್ಲಿ ಸಾಮಾಜಿಕ ಬದಲಾವಣೆಯ ಅಂಶಗಳನ್ನು ಗುರ್ತಿಸುವುದು ಮತ್ತು ಪ್ರತಿಯೊಬ್ಬ ಕವಯಿತ್ರಿ ಇದನ್ನು ಕಂಡುಕೊಂಡ ಬಗೆ ಹೇಗೆ ಎಂಬುದನ್ನು ಅಧ್ಯಯಿಸುವುದು ಪ್ರಮುಖ ಅಂಶವಾಗಿದೆ. ಅಂದರೆ ಕುಟುಂಬವನ್ನು ಅದರ ಚೌಕಟ್ಟನ್ನು ಪ್ರತಿಯೊಬ್ಬ ಕವಯಿತ್ರಿಯು ನಿರೂಪಿಸುವ ರೀತಿ ಅದು ಸ್ವಗತದ ಮಾದರಿಯೋ, ನಿರೀಕ್ಷೆ ಅಥವಾ ಪ್ರತೀಕ್ಷೆಯ ಮಾದರಿಯೋ ಅದು ಹೇಗೆ ರಚಿತಗೊಂಡಿದೆ ಎಂಬುದು ಪ್ರಮುಖ ವಿಚಾರ. ಪೌರಾಣಿಕ ಪಾತ್ರಗಳು ಪ್ರತಿಯೊಬ್ಬರ ದೃಷ್ಟಿಕೋನದಲ್ಲೂ ಹೇಗೆ ಭಿನ್ನತೆ ಅಥವಾ ವಿಶಿಷ್ಟತೆ ಪಡೆದುಕೊಂಡಿವೆ, ಆದರ್ಶ ರೂಪವೆಂದರೆ ಅನುಸರಣೀಯ ಮಾರ್ಗವೇ? ಎಂಬ ಪ್ರಶ್ನೆಯೊಂದಿಗೆ ಕವಯಿತ್ರಿಯರ ಕವನಗಳ ಮೂಲಕ ನಿರೂಪಿಸುವುದಾಗಿದೆ. ಹೆಣ್ಣಾದವಳು ಏಕೆ ಪ್ರತಿಮೆಯಾಗುತ್ತಾಳೆ? ಎಂಬ ಪ್ರಶ್ನೆ ಕವನಗಳನ್ನು ಅಭ್ಯಸಿಸಿದಂತೆಲ್ಲಾ ಮೂಡುವುದು ಸಹಜ. ಈ ಪ್ರಶ್ನೆ ಕೇವಲ ಸೀಮಿತ ಪರಿಧಿಯಲ್ಲಿ ನಿಲ್ಲದೆ, ಆ ಪ್ರತಿಮಾ ಮಾದರಿಯನ್ನು ಭಂಜಿಸುವ ಹೊಸ ನೋಟದಲ್ಲಿ ಕಟ್ಟಿಕೊಡುವ ಕವನಗಳು ನಮ್ಮಲ್ಲಿವೆ. ಅಂದರೆ ರಾಮ, ಸೀತೆ, ಅಹಲ್ಯೆ, ದ್ರೌಪದಿ, ಊರ್ಮಿಳೆ, ಶಬರಿ, ಅಕ್ಕ ಮತ್ತೆಮತ್ತೆ ಕಾವ್ಯದ ವಸ್ತುಗಳಾಗುತ್ತಾರೆ. ಆದರೆ ಅದು ಚೌಕಟ್ಟಿನಲ್ಲಿ ಮಾತ್ರ ನಿಲ್ಲದೆ ಹೇಗೆ ವಾಸ್ತವದೊಂದಿಗೆ ವಿಲೀನ ಪರಿಕರಗಳಾಗಿದ್ದಾರೆ ಎಂಬುದನ್ನು ಮಹಿಳಾ ಕಾವ್ಯ ತೋರಿಸಿಕೊಟ್ಟಿದೆ. ಇಂತಹ ಅಂಶಗಳನ್ನು ಕ್ರೂಢೀಕರಿಸಿ ಹೊಸದೊಂದು ನೋಟದಲ್ಲಿ ಕಂಡುಕೊಳ್ಳುವ ಪ್ರಯತ್ನವಾಗಿದೆ. ಹೇಮಾ ಪಟ್ಟಣಶೆಟ್ಟಿಯವರ 'ಕಣ್ಣುಗಳಲಿ ಕನಸತುಂಬಿ', ಸವಿತಾ ನಾಗಭೂಷಣರವರ 'ದರುಶನ' 'ಕಾಡುಲಿಲ್ಲಿ ಹೂಗಳು' ಸುಕನ್ಯಾ ಮಾರುತಿರವರ 'ನಾನೆಂಬ ಮಾಯೆ'

ಎಸ್.ಮಾಲತಿಯವರ 'ಹೇಳಬೇಕೆನಿಸಿದ್ದು' ಮಾಲತಿ ಪಟ್ಟಣಶೆಟ್ಟಿಯವರ 'ಮಂದಾರ', 'ಮೌನ ಕರಗುವ ಹೊತ್ತು', ಹೊಸತು ಪತ್ರಿಕೆಯಲ್ಲಿ ಪ್ರಕಟಗೊಂಡ 'ಪರಿಮಳದ ಸುಗ್ಗಿ' ಸಂಪಾದನೆಯ ಕವನಗಳು, ಡಿ.ಬಿ.ರಜಿಯಾರವರ ಕವಿತೆಗಳು, ಚೇತನಾ ತೀರ್ಥಹಳ್ಳಿಯವರ 'ಶಬರಿಯ ಅವಸರ', ಅಕ್ಷತಾ ಹುಂಚದಕಟ್ಟೆಯವರ 'ನೀರಮೇಲಣ ಚಿತ್ರಣ' ಮಂಜುಳಾ ಹುಲಿಕುಂಟೆಯವರ 'ದೀಪದುಳುವಿನ ಕಾತರ', ಉಷಾ.ಪಿ.ರೈರವರ 'ಹಕ್ಕಿ ಮತ್ತು ಗಿಡುಗ', 'ಹಕ್ಕಿ ಹರಿವ ನೀರು' ಅನುಸೂಯ ಕಾಂಬಳೆಯವರ 'ಮತ್ಸ್ಯಗಂಧಿಯ ಹಾಡು' ಮುಂತಾದ ಕವನ ಸಂಕಲನಗಳಲ್ಲಿ ಅಡಗಿರುವ ಅಂಶಗಳನ್ನು ಸಾಮಾಜಿಕ ಹಿನ್ನಲೆಯಲ್ಲಿ ಕಂಡುಕೊಳ್ಳುವ ಪ್ರಯತ್ನವಾಗಿದೆ.

೭.೧ ಕೌಟುಂಬಿಕ ಹಿನ್ನಲೆಯಲ್ಲಿ: ದಾಂಪತ್ಯ, ಪ್ರೀತಿ, ಪ್ರಣಯ

ಕುಟುಂಬವಿಲ್ಲದೆ ಸಾಮಾಜಿಕ ಬದುಕು ಅಸಾಧ್ಯ. ಕುಟುಂಬ ಎಂಬ ಪದ ಸೀಮಿತ ಚೌಕಟ್ಟಿನಿಂದ ಬಂದದ್ದಲ್ಲ. ಮಾನವ ಸಂಘಜೀವಿ ಎಂಬ ಸಮಾಜ ವಿಜ್ಞಾನದ ಮಾತು ಅಕ್ಷರ ಸಹ ಸತ್ಯ. ಕುಟುಂಬದಿಂದಲೇ ಸಾಮಾಜಿಕ ಬದುಕು ರೂಪುಗೊಳ್ಳುವುದು. ಹಾಗಾಗಿ ಕುಟುಂಬಕ್ಕೆ ಒಂದು ವ್ಯವಸ್ಥಿತ ಚೌಕಟ್ಟಿದೆ, ರೂಪು ರೇಷೆಯಿದೆ. ಕುಟುಂಬದ ಚಿತ್ರಣ ಸ್ವಾತಂತ್ರ್ಯ ಪೂರ್ವದಿಂದ ಹಿಡಿದು ಇಂದಿನ ಆಧುನಿಕ ಜೀವನದವರೆಗೂ ಹಲವು ರೀತಿಯಲ್ಲಿ ಬದಲಾವಣೆಯಾಗಿದೆ. ಬದಲಾವಣೆ ಇಂದು ಅತಿವೇಗವಾಗಿ ಪ್ರವಹಿಸುವ ನದಿಯಂತೆ. ನಿರಂತರ ಬದಲಾವಣೆ ಎಂಬುದು ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯ ಮೂಲವೆನ್ನಬಹುದು. ಇಂದು ಅವಿಭಕ್ತ ಕುಟುಂಬಗಳ ಕಲ್ಪನೆಯೂ ಒಂದು ಚಿತ್ರಣವೆಂಬಂತೆ ಭಾಸವಾಗುತ್ತಿದೆ. ವಿಭಕ್ತ ಕುಟುಂಬದ ತಲ್ಲಣ ತಾಕಲಾಟಗಳು ಹಲವಿವೆ. ಈ ಎಲ್ಲಾ ಕಾರಣಗಳಿಂದ ಕೌಟುಂಬಿಕ ಹೊಂದಾಣಿಕೆ ಇಂದು ಹಲವು ರೀತಿಯಲ್ಲಿ ಚರ್ಚೆಗೆ ಗ್ರಾಸವಾಗಿದೆ. ಹಾಗಾಗಿ ದಿನ ನಿತ್ಯದ ಜಂಜಾಟದ ನಡುವೆಯೂ ಬದುಕಿನ ಬಗ್ಗೆ ಇರುವ ಅದಮ್ಯ ಉತ್ಸಾಹವೇನೂ ಕಡಿಮೆಯಾಗಿಲ್ಲ. ಒತ್ತಡದ ಬದುಕನ್ನು ಸ್ವೀಕರಿಸುವ ನಾವುಗಳು, ಬದಲಾವಣೆಗೆ ಒಗ್ಗಿಕೊಳ್ಳುವಲ್ಲಿ ಸನ್ನದ್ಧರಾಗಿದ್ದೇವೆ. ಜಾಗತೀಕರಣ, ಉದಾರೀಕರಣ, ಮತ್ತು ಖಾಸಗೀಕರಣದ ಬಗ್ಗೆ ಮಾತನಾಡುವ ನಾವುಗಳು ಕುಟುಂಬದ ವಿಚಾರಕ್ಕೆ ಬಂದಾಗ ನಮ್ಮ ಆಲೋಚನಾ ವ್ಯಾಪ್ತಿ ಸೀಮಿತ ಪರಿಧಿಯಲ್ಲೇ ನೆಲೆ ನಿಲ್ಲುತ್ತದೆ. ಆದರೆ ಮಹಿಳೆಗೆ ಕುಟುಂಬದ ಕಲ್ಪನೆ ಅವಳು ಎಷ್ಟೇ ಆಧುನಿಕಳಾದರೂ ಅವಳ ಮೂಲ ನೆಲೆ ಮತ್ತು ಸೆಲೆ ಕುಟುಂಬವೇ. ಸಂಪ್ರದಾಯವನ್ನು ವಿರೋಧಿಸಿದರೂ ಸಾಂಸ್ಕೃತಿಕ ಚೌಕಟ್ಟನ್ನು ಅವಳು ಕಟ್ಟಿಕೊಳ್ಳುವುದು ಕುಟುಂಬದೊಂದಿಗೆ. ಅದರ ರೀತಿಯಲ್ಲಿ ಬದಲಾವಣೆಗಳಾಗುವುದು ಸಹಜ. ಅಂದರೆ ಗ್ರಾಮೀಣ ಪ್ರದೇಶದ ಹೆಣ್ಣು ಮಗಳ ಆಲೋಚನೆ, ನಗರ ಕೇಂದ್ರಿತ ಪ್ರಜ್ಞೆಯ ಹೆಣ್ಣಿನ ಆಲೋಚನೆಗಳ ಮೂಲ ನೆಲೆ ಕುಟುಂಬವೇ ಆಗಿರುತ್ತದೆ. ಕುಟುಂಬ ಎಂದರೆ ನಮಗೆ ಮೊದಲು ಕಂಡುಬರುವುದು ಹೆಣ್ಣು. ಅಂದರೆ

ತಾಯಿ. ಹೆಣ್ಣಿನ ಅವಸ್ಥಾಂತರಗಳು ಚಿಗುರೊಡೆಯುವುದು ಈ ಕುಟುಂಬದಿಂದಲೇ. ಈ ಮೇಲಿನ ಅಂಶಗಳಿಂದ ಕವಯಿತ್ರಿಯರ ಕವನಗಳಲ್ಲಿ ಮೂಡಿಬರುವ ಕುಟುಂಬ ಕಲ್ಪನೆ ಹೇಗೆ ಸಾಮಾಜಿಕ ಆಯಾಮವನ್ನು ಕಟ್ಟಿಕೊಡುತ್ತವೆ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನವಾಗಿದೆ.

ತನ್ನ ಬರವಣಿಗೆಯಲ್ಲಿ ವಿಭಿನ್ನತೆಯನ್ನು ರೂಪಿಸಿಕೊಂಡವರು ಹೇಮಾ ಪಟ್ಟಣಶೆಟ್ಟಿಯವರು. ಪಂಚಭೂತಗಳಲ್ಲೂ ಹೆಣ್ಣಿನ ಕುರುಹನ್ನು ಮುದ್ರೆಯಾಗಿಸುವ ಬರವಣಿಗೆ ಕವಯಿತ್ರಿಯದು. ಏಕೆಂದರೆ ಗಂಡು ಹೆಣ್ಣಿನ ಸಂಬಂಧ ಸಾಂಗತ್ಯವೇ ಹೊರತು ಸಂಘರ್ಷವಲ್ಲ ಎಂಬುದನ್ನು ಇವರ ಹಲವು ಕವಿತೆಗಳು ಚಿತ್ರಿಸಿವೆ. ಭೂ ಮಂಡಲದ ಕೇಂದ್ರೀಕರಣವೇ ಹೆಣ್ಣು ಎಂಬ ವಾಸ್ತವತೆಯನ್ನು ಬಿಚ್ಚಿಡುವುದು ಹೇಮಾ ಪಟ್ಟಣಶೆಟ್ಟಿಯವರ ಈ ಕವಿತೆ.

"ಹೆಣ್ಣು । ನಿಜದ ಅರ್ಥದಲಿ
ಈ ಪ್ರಪಂಚದ ಏಕಮಾತ್ರ ಪುರುಷ ಸತ್ಯ
ಆದ್ದರಿಂದಲೇ ಪುರುಷ । ಮಿಥ್ಯಸತ್ಯಗಳ ನಡುವೆ
ಇವಳನ್ನು । ಸಿಲುಕಿಸಿದ ಬಗೆಯನ್ನು
ಇವಳು ಎತ್ತಿ ಹಿಡಿದಿದ್ದಾಳೆ । ಜೋಕಾಲಿ ಮಾಡಿದ್ದಾಳೆ
ತೊಟ್ಟಿಲಾಗಿಸಿದ್ದಾಳೆ ಗಂಡನನ್ನು ತನ್ನ
ಗಂಡುಮಗುವಿನ ಹಾಗೆ । ಕಂಡಿದ್ದಾಳೆ ಕಾಪಾಡಿದ್ದಾಳೆ
ಹಾಡಿದ್ದಾಳೆ ಹಾಡು" ೧

ಈ ಸಾಲುಗಳು ಹೆಣ್ಣೇ ಆದಿ ಅಂತ್ಯ ಎಂಬ ಸೂಚಕತೆಯನ್ನು ಪ್ರತಿನಿಧಿಸುತ್ತವೆ. ಗಂಡು ಹೆಣ್ಣನ್ನು ಯಾವ ಬಂಧನದಲ್ಲಿಟ್ಟರೂ ಅಲ್ಲಿಂದಲೇ ಗಂಡಿನ ಬದುಕನ್ನು ಉನ್ನತೀಕರಿಸುವ ಕಲೆ ಹೆಣ್ಣಿಗಿದೆ ಎಂಬುದನ್ನು ಈ ಕವಿತೆ ಧ್ವನಿಸುತ್ತದೆ. ಮಿಥ್ಯ ಸತ್ಯಗಳಲ್ಲಿ ಮಿಂದೆದ್ದ ಹೆಣ್ಣು ಕೊನೆಗೆ ಗಂಡಿನ ಮೂರ್ತ ರೂಪಕ್ಕೆ ಅಮೃತಕಲ್ಪ ಕೊಡುವ ಸಹನಾಮಯಿ, ಸಹಚಾರಿಣಿ ಎಂಬ ಮಾತನ್ನು ಈ ಸಾಲುಗಳು ಸತ್ಯವಾಗಿಸಿವೆ. ಕುಟುಂಬವನ್ನು ತನ್ನ ಸಾರಥ್ಯದಲ್ಲಿ ಕೊಂಡೊಯ್ಯುವ ಹೆಣ್ಣಿನ ಗಟ್ಟಿತನದ ಪ್ರತಿರೂಪ ಈ ಕವಿತೆಯಲ್ಲಡಗಿದೆ. ಕವಿತೆ ಮುಂದುವರೆದು ಅನನ್ಯ ಬದುಕಿನ ಸಾದೃಶ್ಯ ರೂಪವನ್ನು ಒತ್ತಿ ಹೇಳುತ್ತದೆ.

"ತಾನಾಗಿ ಬದುಕಿನ ಕಾಡುಗಳ ಮಧ್ಯೆ
ಜೀವನದ ನಾಡಿ ನಿಲಿಸಿದ್ದಾಳೆ
ಗತಿ-ವಿಧಿಗಳ ಕ್ಯಾನವಾಸಿನ ಮೇಲೆ
ರಂಗು ರಂಗಿನ ಅಂದ ಚಿತ್ರವಾಗಿದ್ದಾಳೆ
ಅಲ್ಲಿ ಮೂಡಿವೆ ಮೋಡ ಸಾಗರಗಳು

ಸೂರ್ಯ ಹಿಮಗರ್ಭಗಳು
ನಗೆಯುಲಿವ ಬೀಜಗಳು
ಈ ಚಿತ್ರ । ಬಲು ವಿಚಿತ್ರ"[೨]

ಈ ಕವಿತೆ ಓದುವಾಗ ಪ್ರತಿಮಾ ಮಾದರಿಯ ಕಲ್ಪನೆಯಂತಿದ್ದರೂ ಕೌಟುಂಬಿಕ ಹಿನ್ನಲೆಯ ಸೂಕ್ಷ್ಮಗತಿ ಇಲ್ಲಡಗಿದೆ. ಹೆಣ್ಣು ಗಂಡಿನ ಸಂಬಂಧ, ಪ್ರೀತಿ, ಪ್ರೇಮ, ಪ್ರಣಯ, ಬದುಕಿನ ಅದಮ್ಯ ಉತ್ಸಾಹ, ಪರಿಸರದ ನಂಟು ಇವೆಲ್ಲವೂ ಪ್ರತಿಮೆಗಳ ಸಂಕೇತ ಮಾತ್ರವಲ್ಲ. ಹೆಣ್ಣಾದವಳು ಕುಟುಂಬ ಸೀಮಿತತೆಯ ಪರಿಧಿಯಲ್ಲಿ ಬಂದರೂ ಅವಳ ಬದುಕಿನ ಹಂಬಲ ಸಚೇತನವಾದುದು ಎಂಬ ಸಾದೃಶ್ಯತೆಯನ್ನು ಕವಿತೆ ಕಟ್ಟಿಕೊಡುತ್ತದೆ. ಕುಟುಂಬದೊಂದಿಗೆ ಬಂಧನ ಬೆಸೆದುಕೊಂಡ ಹೆಣ್ಣು, ಪ್ರಕೃತಿಯನ್ನೂ ತನ್ನ ತೋಳ್ತೆಕ್ಕೆಯಲ್ಲಿ ಲೀನವಾಗಿಸಿಕೊಳ್ಳುವ ಕಲೆ ಅವಳಿಗಿರುವ ವೈವಿಧ್ಯತೆಯನ್ನು ಕವಿತೆಯಲ್ಲಿ ಕಾಣಬಹುದು.

ಕುಟುಂಬವೆಂದರೆ ಕೇವಲ ಸಂಬಂಧಗಳು ಕರುಳ ಬಳ್ಳಿಗಳ ಚೌಕಟ್ಟಿನ ಕೇಂದ್ರೀಕರಣವಲ್ಲ. ಅಥವಾ ಅವರೊಂದಿಗೆ ಹೆಣಗಾಡಿ ಸಾರ್ಥಕ್ಯ ಪಡೆಯುವುದು ಮಾತ್ರವಲ್ಲ ಎಂಬ ಮಾತನ್ನು ಕವಿತೆಗಳ ಮೂಲಕ ಕಟ್ಟಿಕೊಡುವುದು ವಿಶಿಷ್ಟ ಕ್ರಿಯೆ. ಬೆಳಕು ಮತ್ತು ಆಕಾಶಗಳನ್ನೂ ಕುಟುಂಬದ ಚೌಕಟ್ಟಿಗೆ ತರುವ ಕ್ರಿಯೆಯನ್ನು ಹೇಮರವರ ಬರಹಗಳಲ್ಲಿ ಕಾಣಬಹುದು.

"ಇದನ್ನು ಜೀವನ / ಎನ್ನುತ್ತಾರೆ ಕೆಲವರು
ವಿಶ್ವ ಎನ್ನುತ್ತಾರೆ ಜಗತ್ತು ಭೂಗೋಳ
ಸಂಸಾರ ತಾಪತ್ರಯ
ಪಂಚಾಂಗ ಕುಂಡಲಿ ಸಂತೆ ಪೇಟೆ
ಹೊಲಮನೆ ಶಾಲೆ ಕೆಲಸ
ಮಳೆ ಚಳಿ ಬಿಸಿಲು । ಏನೇನೋ ಮಾತಡುತ್ತಾರೆ
ಆನರ ಈ ಎಲ್ಲಾ ಶಬ್ದಗಳ । ನಡುವೆ
ನನ್ನ ಮಕ್ಕಳ ಮಾತು ಮಾತ್ರಕೇಳುತ್ತವೆ"[೩]

ಎಂಬ ಸಾಲುಗಳಲ್ಲಿ ಆಧ್ಯಾತ್ಮದ ತೆಳು ರೇಖೆ ಮಿಂಚುತ್ತದೆ. ಸಂಸಾರ ಬಂಧನದೊಳಗಿದ್ದರೂ ಎಲ್ಲವನ್ನೂ ನಿರಾಕಾರಗೊಳಿಸಿಕೊಳ್ಳುವ ಕ್ರಿಯೆ ಬಹುಮುಖತೆಯದು. ಅಂತರಂಗದ ಮಾತು ಕುಟುಂಬದಾಚೆಗಿನ ಬದುಕನ್ನು ಸಾರ್ಥಕ್ಯಗೊಳಿಸುವ ರೀತಿಯಲ್ಲಿ ಕವಿತೆ ಪ್ರತಿಧ್ವನಿಸುತ್ತದೆ. ಮನಸ್ಸಿನ ಸ್ಥಿಮಿತತೆ ಮತ್ತು ಬದುಕಿನ ಅದಮ್ಯಗಳ ನಡುವಿನ ತಾಕಲಾಟದ ಸ್ಥಗಿತ ಮನೋಭಾವದ ತೆಳು ಲೇಪ ಇದರಲ್ಲಡಗಿದೆ. ಕವಿತೆ ಮುಂದುವರೆದು

"ಈ ಎರಡರೊಂದಿಗೆ ಸುಖ
ನಲಿವುಗಳನ್ನು ಹೊಂದಿರುವ
ನಾವು

ಈ ಮಕ್ಕಳ ಘನೀಭೂತ
ಏಕತತ್ವ
ಇದು ಕುಟುಂಬ ಧರ್ಮ
ಸಮರಸ ಜೀವನದ ಮರ್ಮ".[೪]

ಇಡೀ ಕವಿತೆ ಭಾವನೆಗಳ ಏಕತಾನತೆಯಿಂದ ಜಗಿಯುವ ಕ್ರಿಯೆಯಲ್ಲಿ ಲೀನವಾಗಿದೆ. ಇಲ್ಲಿ ಮುಕ್ತಿ ಎಂದರೆ ಎಲ್ಲದರಿಂದ ದೂರ ಎಂಬರ್ಥದಲ್ಲಿ ರಚಿತಗೊಂಡಿಲ್ಲ. ಎಲ್ಲವನ್ನೂ ಕ್ರೋಢೀಕರಿಸಿಕೊಂಡ ತಾಯಿಯ ಕಲ್ಪನೆ ಇದರಲ್ಲಡಗಿದೆ. ಮಕ್ಕಳಲ್ಲೇ ವಿಶ್ವವನ್ನು ಕಾಣುವ ಮೂಲಕ ತನ್ನ ಸುತ್ತ ಮುತ್ತಲ ಜಗತ್ತನ್ನು ಕಟ್ಟಿಕೊಳ್ಳುವ ಕಲ್ಪನಾ ಮನೋಭಿಲಾಷೆ ಮತ್ತು ಸ್ವೀಕೃತ ಮನಸ್ಸು ಮುಕ್ತ ಮನಸ್ಸಿನ ಹೆಣ್ಣಿನ ಚಿತ್ರಣವನ್ನು ಸಾದರ ರೂಪವಾಗಿ ಕಟ್ಟಿಕೊಡುತ್ತದೆ. ಇದು ಅತಿಶಯೋಕ್ತಿಯ ನೆಲೆಯಲ್ಲಿ ರಚಿತಗೊಳ್ಳದೆ ಪಾರದರ್ಶಕ ಸ್ತ್ರೀಯ ನೈಜತೆಯ ಪ್ರತಿಬಿಂಬದಂತೆ ಕವಿತೆ ಇದೆ. ಇಲ್ಲಿ ಮಕ್ಕಳೆಂದರೆ ಕೇವಲ ಸೀಮಿತ ದೃಷ್ಟಿಯಲ್ಲಿಲ್ಲ. ಇಡೀ ಭೂ ಮಂಡಲದ ಪ್ರತಿರೂಪವಾದ ಆಕಾಶ ಮತ್ತು ಬೆಳಕು ಬದುಕುವ ಹಂಬಲ ಹೊಂದಿದವರ ಅದಮ್ಯ ಚೇತನದ ಪ್ರತಿರೂಪವೂ ಹೌದು. ಆದರ್ಶ ಎಂದಿಗೂ ಕವಿತೆಯಲ್ಲಿ ವೈಭವೋಪೇತವಾಗಿಲ್ಲ. ನಿಜ ಬದುಕಿನಲ್ಲಿನ ಸಂಘರ್ಷಗಳನ್ನು ಸ್ವೀಕೃತ ಭಾವನೆಯ ಹೆಣ್ಣು ಹೇಗೆ ಹೊಸ ರೀತಿಯಲ್ಲಿ ಕಟ್ಟಬಲ್ಲಳು ಎಂಬ ಧ್ವನಿತವು ಇದೆ. ಕುಟುಂಬದ ಬಾಂಧವ್ಯವು ಕವಿತೆಯ ಮುಖ್ಯ ರೂಪಕ್ಕೆ ದಾರಿ ಮಾಡಿಕೊಟ್ಟಿದೆ.

ಕನ್ನಡ ಕಾವ್ಯ ಲೋಕದಲ್ಲಿ ವ್ಯಕ್ತಿತ್ವವನ್ನು ಪುನರಚಿಸುವ ಮೂಲಕ ಬದುಕನ್ನು ಹೊಸ ಅರ್ಥದೊಂದಿಗೆ ಪಲ್ಲವಿಸಬಹುದೆಂದು ಕವಿತೆಗಳ ಮೂಲಕ ಹೇಳ ಹೊರಟವರು ಸುಕನ್ಯಾ ಮಾರುತಿಯವರು. ಕುಟುಂಬ ಎಂಬ ಕಲ್ಪನೆಯಲ್ಲಿ ಗಂಡು ಹೆಣ್ಣಿನ ರಾಜಿ ಸಂಧಾನಕ್ಕಿಂತ ಹೊಂದಾಣಿಕೆಯೇ ಮೇಲುಗೈ ಸಾಧಿಸುತ್ತದೆಂಬುದನ್ನು ಇವರ ಕವಿತೆಗಳು ಸೂಕ್ಷ್ಮ ರೀತಿಯಲ್ಲಿ ಕಟ್ಟಿಕೊಡುತ್ತವೆ. ಇವರ 'ನನ್ನ-ನಿನ್ನ ನಡುವೆ' ಕವನ ಗಂಡಿನ ಪರಿವೆಯನ್ನು ಕೇವಲ ನೆರಳಿನ ಹಾಗೆ ಬಿಂಬಿಸ ಬಯಸುವುದಿಲ್ಲ. ಅದರ ಜಾಡನ್ನು ಗಟ್ಟಿತನದಲ್ಲಿ ಹಿಡಿದ ಹೆಣ್ಣಿನ ಸೂಕ್ಷ್ಮ ಮನಸ್ಸಿನ ಕೈಗನ್ನಡಿಯಂತೆ ಈ ಕವಿತೆ ಇದೆ.

"ನಮ್ಮಿಬ್ಬರಿಗೂ ಗೊತ್ತು,
ನಮ್ಮ ಜೀವನಕ್ಕೊಂದು
ಹಿನ್ನಲೆಸಂಗೀತ ಬೇಕು.
ಆದರೆ
ಮೃದಂಗ ಹದಗೊಂಡಿಲ್ಲ,
ವೀಣೆ ತಂಬೂರಿಗಳು
ಶೃತಿಗೂಡುತ್ತಿಲ್ಲ"[೫]

ಗಂಡು ಹೆಣ್ಣಿನ ಗಾಢ ಸಂಬಂಧ ಕವಿತೆಯಲ್ಲಡಗಿದೆ. ಕೌಟುಂಬಿಕ ನೆಲೆಯಲ್ಲಿನ ಅಡ್ಡಿ ಆತಂಕಗಳು ಸಂಬಂಧಗಳ ನೆಲೆಯಲ್ಲಿ ತರಬಹುದಾದ ಅಂತರವನ್ನು ಕವಯಿತ್ರಿ ಧ್ವನಿಸಿದ್ದಾರೆ. ಮಾಡದ ತಪ್ಪಿಗೆ ಹೆಣ್ಣು ಅನ್ಯಾಯಕ್ಕೊಳಗಾದಾಗ ಅವಳಲ್ಲಿ ಪ್ರತಿಭಟನೆಯ ಮನೋಭಾವವೇ ಕುಗ್ಗುವ ಕ್ರಿಯೆ ಇಲ್ಲಿದೆ. ಪರಸ್ಪರ ಮುಕ್ತ ಮನಸ್ಸುಗಳ ಸಂವಾದಕ್ಕೆ ಅವಕಾಶವಿಲ್ಲದಾಗ ಉಂಟಾಗುವ ಗೊಂದಲಗಳು ಕವಿತೆಯ ಪ್ರತೀಕವಾಗಿದೆ. ಕವಿತೆ ಮುಂದುವರೆದು 'ದಾಂಪತ್ಯ' ಎಂಬ ಪದಕ್ಕೆ ಮೂರ್ತರೂಪ ಕೊಡುತ್ತದೆ.

"ಆಗ,
ಸದ್ದಿಲ್ಲದೇ ಮೃದಂಗ ತದಿ ಕಿಟಿಸುತ್ತದೆ
ವೀಣೆ ತಂಬೂರಿಗಳು
ತಂತಾನೆ ಶೃತಿಗೂಡುತ್ತವೆ.
ಗೆಜ್ಜೆಯ ಝೇಂಕಾರಕ್ಕೆ
ಎದೆ ಎದ್ದೆದ್ದು ಕುಣಿಯುತ್ತದೆ.
ಮಾತು ಮೂಕವಾಗಿ ಮೌನರಾಜ್ಯವಾಳಿ
ಚಂದಿರ ಬೆಳದಿಂಗಳ ಚೆಲ್ಲುತ್ತಾನೆ".[೬]

ಅನುಮಾನದ ಹೊಗೆ ದೂರವಾದಾಗ ಬದುಕು ಹಸನಾಗುವ ಕ್ರಿಯೆ ಇಲ್ಲಿದೆ. ಇದು ವಾಸ್ತವದ ಬದುಕಿನ ಹೂರಣವೂ ಹೌದು. ದಾಂಪತ್ಯ, ವಿರಹ, ಸಂದೇಹ, ಒಪ್ಪಂದ ಇವೆಲ್ಲವೂ ಜಾಗೃತ ಪ್ರಜ್ಞೆಯಲ್ಲೇ ಚಾಲನೆಯಲ್ಲಿವೆ. ತಣ್ಣನೆಯ ಪ್ರತಿಭಟನೆಯೂ ಕವನದ ಆಶಯದಂತೆ ಕಂಡುಬಂದರೂ ವಾಸ್ತವ ಪ್ರಜ್ಞೆಗೆ ಗಂಡನ್ನು ಕರೆತರುವ ಹೆಣ್ಣಿನ ಗುಣ ಜೀವನದ ಅರ್ಥಕ್ಕೆ ಹೊಸ ವ್ಯಾಖ್ಯೆಯನ್ನೊದಗಿಸಿದೆ.

ಬದುಕಿನ ಅನಿವಾರ್ಯಗಳು ಸಹಜ ಕ್ರಿಯೆಗಳು. ಅದು ಯಾವುದೋ ಸಂದರ್ಭದಲ್ಲಿ ಹೆಣ್ಣನ್ನು ಸಂಕಷ್ಟಕ್ಕೀಡುಮಾಡುವ ಪ್ರಸಂಗ ಸಾಮುದಾಯಿಕ ನೆಲೆಯ ಪ್ರತಿರೂಪವೂ ಹೌದು. ಅಕ್ಕನ ನಿರಾಕರಿಸುವ ಕ್ರಿಯೆ ನಮಗೆ ಆದರ್ಶದಂತೆ ಕಂಡರೂ ಹಲವು ವೇಳೆ ಆ ಬಂಧನಗಳಿಂದ ಹೊರ ಬರಲಾರದ ರೀತಿಯಲ್ಲಿ ನಾವು ನಲುಗುವುದೇ ಹೆಚ್ಚು. ಇಂತಹ ಕೌಟುಂಬಿಕ ಬಂಧನಗಳನ್ನು ಬಿಡಿಸಿಕೊಳ್ಳುವ ಹಂಬಲವಿರುವ ಹೆಣ್ಣು ತನ್ನ ಬಯಕೆಗಳನ್ನೇ ಉರುಳಾಗಿಸುವ ಕ್ರಿಯೆ ಪ್ರಾತಿನಿಧಿಕವಾದುದು. ಅದು ಬದುಕಿನ ಅನಿವಾರ್ಯವೂ ಇರಬಹುದು.

"ಅತಿಯಾಗಿ ಅಂಟಿಕೊಂಡು । ಮತ್ತೆ ಮತ್ತೆ
ತಲೆನೋವು ತರುವ । ಕರುಳ ಸಂಬಂಧಗಳನ್ನು
ಒಮ್ಮೆ ಕಾರಿಕೊಂಡು । ನಿರಾಳವಾಗಬೇಕೆನಿಸುತ್ತದೆ.
ರೋಗಗ್ರಸ್ಥ । ರಾಗ-ಭಾವಗಳಿಗೆ । ಮದ್ದು ಅರೆದು
ಶುದ್ಧವಾಗಬೇಕೆನಿಸುತ್ತೆ"[೭]

ಜೀವನ ಪ್ರೀತಿ ಹೊಂದಿದ ಹೆಣ್ಣಿನ ಬದುಕುವ ಹಂಬಲವನ್ನು ಇಲ್ಲಿ ನೋಡಬಹುದು. ಕುಟುಂಬದ, ಸಂಬಂಧಗಳ ಚೌಕಟ್ಟಿಗೆ ಒಳಗಾಗದ ಸಹಜ ಸ್ತ್ರೀಯ ಬದುಕಿನ ಅನಾವರಣ ಇಲ್ಲಿದೆ. ಜಗತ್ತು ಎಷ್ಟೇ ಮುಂದುವರೆದರೂ ಮನುಷ್ಯ ಹೆಣ್ಣಿನ ಬಗೆಗೆ ತಳೆದಿರುವ ಭಾವನೆ ಸಂಕುಚಿತವಾಗುತ್ತಿದೆ. ಮುಕ್ತತೆ ಬಯಸುವ ಹೆಣ್ಣನ್ನೂ ಮುಗ್ಧತೆಯ ಪ್ರತಿ ರೂಪವಾಗೋ ಅಥವಾ ವ್ಯವಸ್ಥೆಯ ಬೆನ್ನಿಗೆ ಸಿಲುಕಿ ನರಳುವ ಮೂಕಳಾಗೋ ನೋಡುವ ಹಂಬಲ ಗಂಡಿನದು. ಅದು ಕುಟುಂಬ ನೆಲೆಯಾದರೂ ಸರಿ, ಸಮಾಜಮುಖಿ ನೆಲೆಯಲ್ಲಾದರೂ ಸರಿ ಅವಳ ಬದುಕೇ ಅನಿವಾರ್ಯ ಎಂಬ ರೀತಿಯಲ್ಲಿ ನೋಡುವುದನ್ನು ಹೆಣ್ಣು ತಣ್ಣಗೆ ಪ್ರತಿಭಟಿಸುವ ಕ್ರಮ ಇಲ್ಲಿದೆ. ಇಡೀ ಕವಿತೆ ಅನಿವಾರ್ಯ ಬದುಕಿನ ಸಮಗ್ರ ಚಿತ್ರಣವನ್ನು ನೀರವತೆಯಿಂದ ಕಟ್ಟಿಕೊಡುತ್ತಾ ತಣ್ಣನೆಯ ಪ್ರತಿರೋಧದ ನೆಲೆಯಂತೆ ಭಾಸವಾಗುತ್ತದೆ.

ಸಾಮಾಜಿಕ ಅನ್ಯಾಯಕ್ಕೊಳಗಾದ ಹೆಣ್ಣಿನ ತಾಕಲಾಟಗಳನ್ನು ಬಹು ವಿಶಿಷ್ಟ ರೀತಿಯಲ್ಲಿ ಕಟ್ಟಿದವರು ಮಾಲತಿ ಪಟ್ಟಣಶೆಟ್ಟಿಯವರು. ಸ್ತ್ರೀ ಸಮಾಜದ ಮೂಕ ವೇದನೆಯನ್ನು ಆಕ್ರೋಶ, ನಿಸ್ಸಂಕೋಚದ ನೆಲೆಯಲ್ಲಿ ಅಕ್ಷರಕ್ಕಿಳಿಸಿದ ಕವಯಿತ್ರಿ. ಕೆ.ಎಸ್.ನಿಸಾರ್ ಅಹಮದ್‌ರವರು ಹೇಳುವಂತೆ,

"ಸ್ವಂತದ ನೋವು, ಅಪಮಾನ, ಅಸ್ಥಿರತೆಯನ್ನು ಹಳಹಳಿಕೆಯ ಮಟ್ಟದ ಗೋಣಗಾಟದ ರಗಳೆಯಾಗಿಸದೆ, ಅವುಗಳನ್ನು ಸ್ತ್ರೀ ಸಮಸ್ಯೆಯ ಸಾರ್ವತ್ರಿಕ ಪರಿಪ್ರೇಕ್ಷಕ್ಕೆ ಮುಖಾಮುಖಿ ಯಾಗಿಸಿ ತಾತ್ವಿಕ ಸಾಂತ್ವನವನ್ನು ಪಡೆಯಲು ಹವಣಿಸುತ್ತಾರೆ. ಅಹಿತಕರ ಘಟನೆಗಳ ಹತಾಷೆ, ಕವಿಸುವ ಹಳವಂಡದ ಮಡುಗಳಲ್ಲೇ ಮನಸ್ಸನ್ನು ಸುಳಿ ಸುತ್ತಿಸದೆ, ಮುಂಬಾಳಿನ ಕೃತ ಕೃತ್ಯ ಮೂಳ್ಕೆಗಳ ವಿಶಾಲ ತೆರವುಗಳಲ್ಲಿ ಅದು ಪ್ರವಹಿಸುವ ಕ್ರಿಯೋತ್ಸಾಹವನ್ನು ವ್ಯಕ್ತಪಡಿಸುತ್ತಾರೆ. ಹೀಗಾಗಿ ಸೀಮಿತ ಖಾಸಗಿ ಬಾಳಿನ ಕಹಿ ಒಗರುಗಳನ್ನು ಭಾವ ವಿಚಾರಗಳ ಅಡಿಯಲ್ಲಿ ನೀಗಿಸಿ ಅವುಗಳಿಗೆ ಸಾರ್ವತ್ರಿಕ ಪ್ರಯೋಜನದ ಕಲಾತ್ಮಕ ಸವಿ ಸುವಾಸನೆಗಳ ಆಯಾಮ ಲಭ್ಯವಾಗುವಂತೆ ಮಾತುಗಳಲ್ಲಿ ಪಡಿ ಮೂಡಿಸುತ್ತಾರೆ. ಈ ದೃಷ್ಟಿಯಿಂದ ಮಾಲತಿಯವರದು ಬೆಂಕಿಯಿಂದ ಅರಳಿದ ಬೆಳಕಿನ ಕಾವ್ಯ"[೨೮] ಎಂದಿದ್ದಾರೆ.

'ಒಂದು ಬೊಗಸೆ ಬದುಕು' ಕವನ ಭವಿಷ್ಯದ ಬಗೆಗೆ ಕನಸು ಹೊತ್ತ ಹೆಣ್ಣಿನ ಚಿತ್ರಣವನ್ನು ಕಟ್ಟಿಕೊಡುತ್ತದೆ. ನಿಸ್ವಾರ್ಥ ಭಾವನೆ ಜೀವನವಾದರೆ ಬದುಕು ಎಷ್ಟು ಸುಂದರ ಎಂಬ ಕಲ್ಪನೆಯ ಪ್ರತೀಕದಂತಿದೆ ಕವಿತೆ.

"ದಿನವೂ ಸಂಜೆ ಮುಳುಗುವ
ಸೂರ್ಯನ ನಾಲ್ಕು ಕಿರಣ
ಕಿತ್ತು ಸಿವುಡು ಕಟ್ಟಿ
ಒಳಗೆ ಡಬ್ಬಗಳಲ್ಲಿ ಮುಚ್ಚಿ

ಕಂತದಂತೆ ಬಚ್ಚಿಡುತ್ತೇನೆ ಬೆಳಗುಗಳ
ನಾಳಿನ ಮಕ್ಕಳಿಗೆ"[೯]

ಬದುಕಿನ ಉತ್ಸಾಹ ಸಚೇತನಗಳ ಮೂರ್ತ ರೂಪದಂತಿದೆ ಕವಿತೆ. ಮಾನವನ ಸಹಜ ಕಲ್ಪನೆಯನ್ನೂ ಮೀರಿ ಉತ್ಕಟ ಆನಂದಾನುಭವ ಪಡೆದಂತೆ ಭಾಸವಾಗುತ್ತದೆ. ಕವಿತೆ ಮುಂದುವರೆದು ಬದುಕಿನ ಹಂಬಲ ಹೊಂದಿದ ಹೆಣ್ಣಿನ ಜಾಗೃತ ಪ್ರಜ್ಞೆಯನ್ನು ಒತ್ತಿ ಹೇಳುತ್ತದೆ.

"ಕ್ಷಣಕ್ಷಣಕ್ಕೂ ಕ್ಷೀಣಸುವ ಭೂಮಿ
ಒಡಲಿಂದ ನಾಲ್ಕು ಹಿಡಿ ಮಣ್ಣು
ಒಟ್ಟಿ ಕಣಜಗಳಲ್ಲಿ
ಬಂಜರಾಗದಂತೆ ಈ ಗೂಡು
ಬಚ್ಚಿಡುತ್ತೇನೆ ಬದುಕು
ನಾಳಿನ ಜೀವಿಗಳಿಗೆ"[೧೦]

ವಿಶ್ವವೇ ಒಂದು ಕುಟುಂಬವೆನ್ನುವ ಕಲ್ಪನೆಯನ್ನು ಕಟ್ಟಿಕೊಡುತ್ತದೆ. ಬೊಗಸೆಯ ಆಕಾರ ಚಿಕ್ಕದಾದರೂ ಬದುಕಿನ ಬಗ್ಗೆ ಇರುವ ಅಗಾಧ ಪ್ರೀತಿಯನ್ನು ವಿಶ್ವ ವ್ಯಾಪ್ತಿಯ ಕಲ್ಪನೆಯಲ್ಲಿ ಕವಿತೆ ಚಿತ್ರಿತಗೊಂಡಿದೆ. ಇಲ್ಲಿ ಗಂಡು ಹೆಣ್ಣಿನ ಜೈವಿಕ ಅಂತರಗಳು ಕಾಣುವುದೇ ಇಲ್ಲ. ಏಕೆಂದರೆ ಬರವಣಿಗೆ ಕ್ರಮ ಬಹು ವ್ಯಾಪಕ ಮತ್ತು ಗಟ್ಟಿತನದಿಂದ ಕೂಡಿದೆ. ಆಧುನಿಕ ಮಹಿಳಾ ಕಾವ್ಯದಲ್ಲಿ ಅಡಗಿರುವ ವಿಶಿಷ್ಟ ಆಲೋಚನೆ ಕುಟುಂಬದ ಕಲ್ಪನೆಗೆ ಮಾತ್ರ ಸೀಮಿತವಲ್ಲ. ಹೆಣ್ಣಿನ ಆಲೋಚನೆ ವಿಶ್ವವನ್ನೂ ಕುಟುಂಬ ನೆಲೆಯಲ್ಲಿಯೇ ಕಾಣುತ್ತದೆಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ.

ಸಮಾನತೆ ಎಂಬುದು ಮೊದಲು ಕೌಟುಂಬಿಕ ನೆಲೆಯಲ್ಲಿ ಮೂರ್ತ ರೂಪ ಪಡೆಯಬೇಕು. ಆ ಮೂಲಕ ಅದನ್ನು ಸಮಾಜಮುಖಿ ಚಿಂತನೆಗೆ ಒಳಪಡಿಸಬಹುದೆಂಬುದನ್ನು ತಮ್ಮ ಬರಹಗಳ ಮೂಲಕ ತೋರಿಸಿಕೊಟ್ಟವರು ಸವಿತಾ ನಾಗಭೂಷಣರವರು. ಬಹುಮುಖೀ ವ್ಯಕ್ತಿತ್ವದ ಚಿಂತನೆಗಳನ್ನು ತಮ್ಮ ಕಾವ್ಯ ವಸ್ತುಗಳನ್ನಾಗಿ ಬಳಸಿಕೊಂಡ ಕವಯಿತ್ರಿ. ಮನುಷ್ಯ ಸಹಜ ಆಸೆ ಆಕಾಂಕ್ಷೆಗಳನ್ನು ಯಾವ ಬಿಗುಮಾನವಿಲ್ಲದೆ ನಿಸ್ಸಂಕೋಚವಾಗಿ ತಮ್ಮ ಬರಹಗಳಲ್ಲಿ ಕಟ್ಟಿದವರು. ಹೆಣ್ಣಿಗಿರುವ ಸಾಮಾನ್ಯ ಗುಣಗಳಿವು ಎಂಬ ಗಂಡು ನೋಟದ ಕಲ್ಪನೆಯ ದಿಕ್ಕಿನ ಹೊಸ ನೋಟದ ಹೊಳಹಿಗೆ ಕಾರಣವಾದದ್ದು ಇವರ ಕಾವ್ಯ. ಪ್ರತಿಯೊಬ್ಬರಲ್ಲೂ ಕೌಟುಂಬಿಕ ಜಗತ್ತು ತನ್ನದೇ ಆದ ನೆಲೆಯಿಂದ ಕೂಡಿರುತ್ತದೆ. ಆದರೆ ಕವಯಿತ್ರಿಯರು ಕಟ್ಟಿಕೊಡುವ ಕೌಟುಂಬಿಕ ಜಗತ್ತು ವಯಕ್ತಿಕ ನೆಲೆಯಲ್ಲಿಯೇ ಜಡ್ಡು ಹಿಡಿಯುವುದಿಲ್ಲ. ಅವುಗಳ ತುಡಿತ ಸಾಮುದಾಯಿಕ ಕಲ್ಪನೆ ಎಂಬ ಪ್ರಜ್ಞೆಯನ್ನು ಸವಿತಾರವರ ಕವಿತೆಗಳು ಬಿಚ್ಚಿಡುತ್ತವೆ. 'ದಿನಚರಿ' ಎಂಬ ಕವಿತೆ

ಹೆಣ್ಣಿನ ಬದುಕಿನ ವಿವಿಧ ವಿನ್ಯಾಸಗಳ ಅನಾವರಣ ಮಾಡುತ್ತದೆ. ಕುಟುಂಬವೆಂದರೆ ಗಂಡ, ಹೆಂಡತಿ, ಮಕ್ಕಳು, ಸಂಸಾರದ ಅರ್ಥದಲ್ಲೇ ಸೀಮಿತವಾಗಿರದೆ, ಹೆಣ್ಣಿನ ಬದುಕಿನ ಜೈವಿಕ ಅವಸ್ಥಾಂತರಗಳಲ್ಲೇ ಒಂದು ಕುಟುಂಬವಿದೆ ಎಂಬುದನ್ನು ಕವಿತೆ ಕಟ್ಟಿಕೊಡುತ್ತದೆ. ಬಾಲ್ಯ, ಯೌವ್ವನ, ಮುಪ್ಪು ಈ ಮೂರರ ನಡುವಿನ ಬದುಕು ಒಂದರೆಕ್ಷಣವಾದರೂ ಬೇಕು ಕಲ್ಪನೆಯ ಹೊದಿಕೆ ಎಂಬುದನ್ನು ಒತ್ತಿ ಹೇಳುತ್ತದೆ. ಈ ಕುಟುಂಬ ಕಲ್ಪನೆಯಲ್ಲಿ ಗಂಡಿನ ಪಾರಮ್ಯಕ್ಕಿಂತ, ಜಾಗೃತತೆ ಬದುಕಿನ ಹದಕ್ಕೆ ತಕ್ಕಂತೆ ಶೇಖರಿಸಲಾಗಿದೆ.

"ನನಗೋ.......... ನನ್ನ ಗೆಳತಿಯರ
ದಿನಚರಿಯೆ ಚೆನ್ನಾಗಿದೆ ಅನ್ನಿಸತೊಡಗಿತ್ತು
ನನ್ನ ಬಳಿ ಇಲ್ಲದ್ದು ಅವಳ ಬಳಿ
ಇದೆ ಎಂದೆನಿಸುತ್ತಿತ್ತು.
ಅವರ ಬಳಿ ಇದ್ದದ್ದೆಲ್ಲವೂ ನನಗೂ
ಬೇಕೆನಿಸಿತು" ೧೧

ಕವಿತೆ ಆಸೆ ನಿರಾಸೆಗಳಲ್ಲೇ ಅಂತ್ಯಗೊಳ್ಳುವುದಿಲ್ಲ. ನಿರೀಕ್ಷೆಯನ್ನು ಹುಟ್ಟಿಸುತ್ತದೆ. ವಯೋ ಸಹಜ, ಜೈವಿಕ ಸಹಜ ಆಸೆಗಳು ಸಂಪ್ರದಾಯದ ನೆರಳಲ್ಲಿ ಹೇಗೆ ಮಾಗುತ್ತವೆ ಎಂಬುದನ್ನು ಕವಿತೆ ಕಟ್ಟಿಕೊಡುತ್ತದೆ. ಬದುಕಿನ ಜೊತೆಗಿನ ಸಂಗಾತಿಗಳಾದ ಹರ್ಷ, ಒಲುಮೆ, ವಿಷಾದ, ಆಸೆ ಆಕಾಂಕ್ಷೆಗಳು ಮನುಷ್ಯನ ಜೀವನದ ಪರಿಮಿತಿಗಳಾದಾಗ ಉಂಟಾಗುವ ವಿಸ್ಮಯಗಳು ಕವಿತೆಯಲ್ಲಡಗಿವೆ. ಹೆಣ್ಣು ಕೌಟುಂಬಿಕ ನೆಲೆಯಲ್ಲಿ ಹೇಗೆ ಪ್ರತಿ ಹಂತದಲ್ಲೂ ಮಾರ್ಪಾಡಾಗು ತ್ತಾಳೆ ಎಂಬುದನ್ನು ಇಡೀ ಕವಿತೆ ಕಟ್ಟಿಕೊಡುತ್ತದೆ. ಆದರೆ ಎಂದಿಗೂ ತನ್ನ ಜೀವನೋತ್ಸಾಹವನ್ನು ಬಲಿಕೊಡುವುದಿಲ್ಲ ಎಂಬ ಎಚ್ಚರಿಕೆಯ ಸಂದೇಶವೂ ಇದರಲ್ಲಿದೆ.

ಎಂ.ಎಸ್.ಆಶಾದೇವಿಯವರು ಹೇಳುವಂತೆ

"ಸವಿತಾರ ಕಾವ್ಯ ಶೈಲಿಯಲ್ಲಿಯೂ ಈ ಹೊಸ ಲಯದ ಹುಡುಕಾಟವಿದೆ. ಅಭಿವ್ಯಕ್ತಿಯ ನಾಟಕೀಯ ಮಾದರಿಗಿಂತ ಸಾವಧಾನದ, ಸಂಯಮದ, ಕೆಲವೊಮ್ಮೆ ಸ್ವಗತದ ಲಯದಲ್ಲಿಯೂ ಕವಯಿತ್ರಿಗೆ ನಂಬಿಕೆ ಇದ್ದಂತೆ ತೋರುತ್ತದೆ. ಕರುಳು ಕತ್ತರಿಸುವ ಅನುಭವದ ಘಳಿಗೆಗಳನ್ನಾಗಲಿ, ಬದುಕನ್ನು ಅರಳಿಸುವ ರೋಮಾಂಚನದ ಘಳಿಗೆಗಳ ನ್ನಾಗಲೀ, ಸವಿತಾ ಹಿಡಿಯುವುದು ಸಾವಧಾನದ ಸಂವಿಧಾನದಲ್ಲಿಯೇ"[೨] ಎಂಬ ಸಾಲುಗಳು ಕವಿತಾರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿ. ಇವರ ಪ್ರತಿಯೊಂದು ಕವಿತೆಗಳೂ ಚಲನಶೀಲ ಮತ್ತು ವೈವಿಧ್ಯತೆಯಿಂದ ಕೂಡಿದವುಗಳಾಗಿವೆ.

ಕುಟುಂಬದ ಕಣ್ಣು ತಾಯಿ, ಅಂದರೆ ಹೆಣ್ಣು. ಕುಟುಂಬ ಎಂದರೆ ನಮಗೆ ಮೂರ್ತರೂಪ ಹೆಣ್ಣಿನ ಕ್ರಿಯೆಯಿಂದಲೇ ಎಂಬಷ್ಟರ ಮಟ್ಟಿಗೆ ಆತುಕೊಂಡವಳು ತಾಯಿ. ಇಲ್ಲಿ ತಾಯಿಯ ಕಲ್ಪನೆ ಏಕರೂಪವಾದುದಲ್ಲ ಎಂಬುದನ್ನು ಕವಿತೆಯ ಸಾಲುಗಳು ಕಟ್ಟಿಕೊಡುತ್ತವೆ.

‘ಕಲ್ಲಿನಂತೆ ಪೆಡಸು
ಹುಲ್ಲಿನಂತೆ ಬೆಳೆಸು’

ಎಂಬ ಸಾಲುಗಳಿಂದ ಆರಂಭವಾಗುವ ಕವಿತೆ ಸರಳತೆಯಾದರು ಸಮಷ್ಠೀ ಪ್ರಜ್ಞೆಯ ಒಟ್ಟಂದದಲ್ಲಿ ಜಾಗರೂಕವಾಗಿರುವುದಕ್ಕೆ ಉತ್ತಮ ಉದಾಹರಣೆ ತಾಯಿ ಕವಿತೆ. ಮುಂದುವರೆದು,

“ಈ ಹೊತ್ತಿಗೂ
ಬಸಿರಗೊಳದೊಳು
ಕಳ್ಳು ಬಳ್ಳಿ ಗಾತು
ಜೀವಜಲದಲಿ ಹೂತು
ಬಲಿದು ಮಿಸುಕಾಡಿ ಒದ್ದು
ಸುಖನಿದ್ದೆಗೈವ ಮುಗುಳು
ನಾನವಳ ಕಣ
ಮಣ ಭಾರ ಋಣ” [೧೩]

ಸಂಬಂಧಗಳ ಅಗಾಧತೆ ಕವಿತೆಯಲ್ಲಡಗಿದೆ. ಜೀವಮೂಲ ಪ್ರಜ್ಞೆಯ ಪ್ರತಿಮೆ ಕೌಟುಂಬಿಕ ನೆಲೆಯ ಮುಖೇನ ವಾಸ್ತವದೊಂದಿಗೆ ತಾದಾತ್ಮ ಹೊಂದಿದೆ. ಜೀವನೋತ್ಸಾಹ ತುಂಬಿದ ಬದುಕು ಸಾರ್ಥಕ್ಯ ಪಡೆಯುವುದು ಕರುಳು ಬಳ್ಳಿಯ ಸಂಬಂಧದಲ್ಲಿಯೇ. ಬಸಿರಿನ ಸಂಕೇತ ಭೂ ಮಂಡಲವನ್ನೂ ಕೌಟುಂಬಿಕ ನೆಲೆಯಲ್ಲಿಯೇ ಕೇಂದ್ರೀಕರಿಸುವ ಪ್ರತಿನಿಧಿಯಂತಿದೆ. ಅಡುಗೆ ಮನೆಗೆ ಸೀಮಿತವಾದ ಹೆಣ್ಣಿನ ಕಲ್ಪನಾ ಪ್ರಪಂಚ ಹೊಸ ತನಕ್ಕೂ ಒಗ್ಗಿಕೊಳ್ಳುತ್ತದೆ ಎಂಬುದನ್ನು ಮಹಿಳಾ ಕಾವ್ಯ ತೋರಿಸಿಕೊಟ್ಟಿದೆ. ಇದು ಸಹ ಸಾಮಾಜಿಕ ಬದಲಾವಣೆಯ ಹೊಸ ಮಾರ್ಗಕ್ಕೆ ದಾರಿ ಎನ್ನಬಹುದು.

ಭಿನ್ನವಾದ ಕಾವ್ಯದ ನೆಲೆಗಳಿಂದ ಬದುಕನ್ನು ನೋಡುವ ಮತ್ತು ಆ ಮೂಲಕ ಸಮಕಾಲೀನ ಸಂದರ್ಭಕ್ಕೆ ಹೊಸ ರೀತಿಯ ಜೀವಂತಿಕೆಯನ್ನು ಬರಹಗಳಲ್ಲಿ ತುಂಬುವ ಕಾರ್ಯದಲ್ಲಿ ನಿರತರಾದವರು ವಿನಯಾರವರು. ಬದುಕಿನ ಅನೇಕ ಮಗ್ಗುಲುಗಳನ್ನು ಪ್ರೀತಿ ಮತ್ತು ಸಂವೇದನೆಯಲ್ಲಿ ನೋಡುತ್ತಲೇ ತಮ್ಮ ಕವನಗಳ ಮೂಲಕ ಹೊಸ ಜಗತ್ತನ್ನು ಕಟ್ಟಿಕೊಡುತ್ತಾರೆ.

‘ಮುಲುಗುಡುವ ತಾಯ ಬಸಿರು’ ಕವಿತೆ ಸಂಬಂಧಗಳ ಅಸ್ಮಿತೆಯನ್ನು ತೆರೆದಿಡುತ್ತದೆ. ಹೆಣ್ಣು ಕೇವಲ ಸರಳ ರೇಖೆಯಲ್ಲೇ ಬದುಕು ನಡೆಸಲು ಬಯಸುವುದಿಲ್ಲ. ದಿನ ನಿತ್ಯದ ವರ್ತುಲ ರೇಖೆಯಲ್ಲೇ ಸುತ್ತಿ ಸಾಯುವ ಮನುಷ್ಯನ ವಿವಿಧ ಮುಖವಾಡಗಳನ್ನು ಕಳಚುವ ಅಂಶಗಳು ಇವೆ.

“ಮೆತ್ತಗಿನ ಹತ್ತಿಯಂತ ಮಗು
ಒಡಲನ್ನು ಒದ್ದು ಮುಲುಕುತ್ತಿದೆ
ನೀರವ ನಿಶ್ಯಬ್ದದ ಬಿಕ್ಕುಗಳ ಮಧ್ಯ
ಉಸಿರು ಅಮುಕುತ್ತದೆ
ಪ್ರಶ್ನೆಗಳೊಳಗೊಳ್ಳದ ಬದುಕಿನಲ್ಲಿ
ಮಗು ಬರಿದೆ ನಗುತ್ತದೆ
ಮಿಡಿಯುತ್ತದೆ ನರಗಳ ತಂತಿಯ ಹಾಗೆ
ಇದರ ಎಳಸಿಗೆ,ಮೆತ್ತಗಿಗೆ,ಮುಗ್ಧತೆಗೆ
ತಾಯೆದೆ ಕಂಪಿಸುವುದಕ್ಕೊಂದು ಹೆಸರು ಕೊಡಬೇಕಿದೆ” [೧೪]

ತಾಯಿ-ಮಗುವಿನ ಹಂದರದ ಎಲ್ಲೆ ತೆಳು ಸ್ಪರ್ಶದ ರೂಪದಲ್ಲಿದ್ದರೂ ಎಲ್ಲೋ ಒಂದು ಕಡೆ ಅನಾಥ ಪ್ರಜ್ಞೆ ಕಾಡುವಂತಿದೆ. ಕುಟುಂಬದ ಒಳಗಿದ್ದೂ ಸಂಬಂಧಗಳ ಆಚೆಗಿನ ಬದುಕನ್ನು ಬಯಸುವ ಕ್ರಿಯೆ ಇದರಲ್ಲಡಗಿದೆ. ತಾನು ಕಂಡು ಕೊಳ್ಳಲಾರದ ಬದುಕಿನ ಜೀವ ಸೆಲೆಯನ್ನು ಮಗುವಿನ ಮೂಲಕ ಕಂಡುಕೊಳ್ಳುವ ಪ್ರಯತ್ನ ತಾಯಿಯಲ್ಲಡಗುವುದು ಸಾಮಾನ್ಯವಾದರೂ ಅದನ್ನು ಒಳಗೊಳ್ಳುವ ಬಯಕೆ ವ್ಯಾಪಕವಾದುದು. ಕವಿತೆ ಕೇವಲ ತಾಯಿ ಮಗುವಿನ ಕೌಟುಂಬಿಕ ಕರುಳ ಸಂಬಂಧಗಳ ಸುಳಿಯಲ್ಲಿ ಸಿಲುಕದೆ ವಿಶ್ವ ಪ್ರೇಮದ ಹಂತವನ್ನು ಪ್ರತಿನಿಧಿಸುತ್ತದೆ. ಆ ಮೂಲಕ ಸಾಮಾಜಿಕವಾದ ಬದಲಾವಣೆಯನ್ನು ತರಬಯಸುತ್ತದೆ.

ಬದಲಾವಣೆಯ ಬಗ್ಗೆ ಮಾತನಾಡುವ ನಾವುಗಳು ಎಷ್ಟು ಬದಲಾಗಿದ್ದೇವೆ? ಎಂಬಲ್ಲಿ ಉತ್ತರದ ಹುಡುಕಾಟ ನಡೆಸುತ್ತೇವೆ. ಏಕೆಂದರೆ ಹೆಣ್ಣಿನ ಸಮಾನತೆಯ ಪ್ರಶ್ನೆ ವಿಶ್ವ ವ್ಯಾಪಕ ಚರ್ಚೆಯಾದರೂ, ಎಷ್ಟರ ಪ್ರಮಾಣದಲ್ಲಿ ಅದನ್ನು ನಾವು ಅರಗಿಸಿಕೊಳ್ಳುತ್ತಿದ್ದೇವೆ ಎಂಬ ಮಾತು ಸಹ ಸತ್ಯ. ಮನೆ ಕೆಲಸ ಸ್ವಚ್ಚ ಮಾಡುತ್ತಾ ತನ್ನ ಯೌವ್ವನವನ್ನೇ ಕಳೆದುಕೊಳ್ಳುತ್ತಿರುವ ಮಹಿಳೆಯರೆಷ್ಟೋ. ಕುಟುಂಬ ಎಂಬ ಪದ ಇಡಿಗಂಟಾದರೆ ಅದರಲ್ಲೇ ಬದುಕು ಸವೆಸುವ ಹೆಣ್ಣಿನದು ಬಿಡಿಸಲಾರದ ಗಂಟಿನ ರೂಪದಲ್ಲಿದೆ ಎಂಬುದನ್ನು ಕವಯಿತ್ರಿ ಕವನದ ಮೂಲಕ ಹೇಳುತ್ತಾರೆ.

“ಅಡಿಗೆ ಮನೆಯಲ್ಲಿ ಹೆಣ್ಣು
ಸುಟ್ಟ ಅಂಗೈಗೆ ತಣ್ಣೀರತಟ್ಟುತ್ತಿದ್ದಾಳೆ.
ಕಣ್ಣಕೊನೆಯ ಹನಿಯೊಂದು ಕೈಜಾರಿ
ನೆಲಸೇರಿಹೆಜ್ಜೆಯಾಯಿತೇ?
ಬಚ್ಚಲದಲಿ ಹೆಣ್ಣು
ಮುಟ್ಟಿನ ಬಟ್ಟೆ ತಿಕ್ಕಿ ತಿಕ್ಕಿ ತೇಕುತ್ತಿದ್ದಾಳೆ

ಬೆನ್ನ ಮೇಲಿನ ಬೆವರ ಹುಂಡೊಂದು ಗಾಳಿ ನುಂಗಿ
ಗಾಳಿಯಂಥ ಗಾಳಿ ಕೂಡ ಕಮಟಾಯಿತೇ?"[೧೫]

ಕುಟುಂಬದ ಕಲ್ಪನೆ ಅಡಿಗೆ ಮನೆಯಿಂದ ಪ್ರಾರಂಭವಾದರೂ ಸಾಮಾಜಿಕ ಸ್ತರದಲ್ಲಿ ರೂಪುಗೊಂಡು ಹೆಣ್ಣಿನ ಪ್ರಾತಿನಿಧಿಕ ಸ್ವರೂಪವನ್ನು ಕವಿತೆ ಧ್ವನಿಸಿದೆ. ಸಂವೇದನೆಯ ಹಾದಿ ತಿಳಿಯದ ಮುಗ್ಧ ಮನಸ್ಸಿನ ತಲ್ಲಣಗಳು ಇಲ್ಲಿವೆ. ನಿಸರ್ಗದತ್ತವಾದ ಮುಟ್ಟು ಕೂಡ ಕಮಟು ವಾಸನೆ ತರಿಸಿದೆ ಎಂದರೆ ಅಡಿಗೆ ಮನೆಯಲ್ಲೇ ಹೆಣ್ಣು ಮಗಳ ಬದುಕಿನ ಚಿತ್ರಣ ಧಾರುಣವಾದುದು. ಕವಿತೆಯ ಶೀರ್ಷಿಕೆಯಲ್ಲಿ ನವಿಲ ನಡಿಗೆ ಹೆಣ್ಣಿಗಿದೆ ಎಂದಾದರೆ ಅದರ ವೈವಿಧ್ಯತೆ ಅವಳ ಬದುಕಿನಲ್ಲಿ ಗೌಣವಾಗಿದೆ. ಚಲನಶೀಲವಿಲ್ಲದ ಬದುಕು ನಿರರ್ಥಕ ಎಂದರೂ ಹೆಣ್ಣಿಗಿರುವ ಅದಮ್ಯ ಉತ್ಸಾಹ ಅವಳನ್ನು ಹೊಸ ಬದುಕಿಗೆ ಹಾತೊರೆಯುವಂತೆ ಮಾಡುತ್ತದೆ. ಕವಿತೆ ಮುಂದುವರೆದು,

"ಮರೆಯುತ್ತ-ಮಧ್ಯರಾತ್ರಿಯಲಿ ಚಿಕ್ಕಿ ಬಿಕ್ಕಿದ್ದನ್ನು
ಗಾಳಿ ಉಕ್ಕಿದ್ದನ್ನು ಹೆಜ್ಜೆ ಕನಸನ್ನ
ನಿತ್ಯ ತಿಕ್ಕುತ್ತ ತೀಡುತ್ತ,
ಬೆಳಗುತ್ತ ಬೆಳೆಸುತ್ತ
ಹೊಳೆವ ಥಳ ಥಳ ಮನೆಯಲ್ಲಿ
ಮುತ್ತೈದೆ ಮುದುಕಿಯಾಗುತ್ತಾಳೆ"[೧೬]

ಹೆಣ್ಣಿನ ಜಾಣ್ಮೆ, ನಯ, ನಾಜೂಕು, ಬದುಕಿನ ಹಳವಂಡದಲ್ಲೇ ಮರೆಯಾಗುವ ಬೇಸರವಿದೆ. ಎಲ್ಲವನ್ನೂ ಒಮ್ಮೆಗೆ ಬಿಸುಟು, ಚಿಮ್ಮಿ ನಡೆಯಬೇಕೆಂಬ ಉತ್ಕಟತೆ ಕವಿತೆಯಲ್ಲಿ ಸದಾ ಜಾಗೃತ ರೂಪ ಪಡೆದಿದೆ. ಗಾಳಿಯ ಸೂಕ್ಷ್ಮತೆ, ಏರಿಳಿತಗಳನ್ನು ಬದುಕಿನ ತಾಕಲಾಟಗಳೊಂದಿಗೆ ಹೋಲಿಸಿ ಅದನ್ನು ಘನೀಕರಿಸದೆ ಬಿಟ್ಟಕ್ರಮ ಸೂಕ್ಷ್ಮವಾದುದು. ಕವಿತೆಯಲ್ಲಿ ಗೊಂದಲಕ್ಕೆ ಅವಕಾಶವಿಲ್ಲದೆ ಕೌಟುಂಬಿಕ ನೆಲೆಯಲ್ಲಿಯೂ ಹೊಸ ಬದುಕಿನ ಹಂಬಲದ ಪ್ರತಿಬಿಂಬಿತವಾಗಿದೆ.

ಸಮಕಾಲೀನ ಬದುಕಿಗೆ ಸವಾಲೆಸೆಯುವಂತಹ ಬರಹ ರೂಢಿಸಿಕೊಂಡವರು ಎಸ್.ಮಾಲತಿಯವರು. ಸಮಾನತೆಯ ಬಗ್ಗೆ ಸದಾ ಚರ್ಚಿತವಾಗುತ್ತಿರುವ ಇಂದಿನ ಕಾಲದಲ್ಲಿ ಸಾಮಾಜಿಕ ಹಸಿವಿನ ತೃಪ್ತಿ ಕಾಣದ ಬದುಕಿನ ಬಗ್ಗೆ ಒಟ್ಟು ಅಸಮಾನತೆಯ ಬಗ್ಗೆ ಹಿಡಿತ ಸಾಧಿಸಿ ಅದರ ವಿರುದ್ಧ ದನಿ ಎತ್ತಿದವರು ಎಸ್.ಮಾಲತಿರವರು. ಗುಪ್ತ ವಿಷಯಗಳನ್ನು ವೈಭವೀಕರಿಸುವ ಗೋಜಿಗೆ ಹೋಗದೆ ವಾಸ್ತವ ಪ್ರಪಂಚದ ಅರಿವನ್ನು ಸೂಕ್ಷ್ಮವಾಗಿ ತಮ್ಮ ಬರಹಗಳಲ್ಲಿ ಚಿತ್ರಿಸುವ ಶಕ್ತಿ ಇವರಿಗಿದೆ.

ಕೆ.ವಿ.ಸುಬ್ಬಣ್ಣ ನವರು ಹೇಳುವಂತೆ,

“ಈ ಪದ್ಯಗಳ ನಾಯಿಕೆಯು ಆಕಾಶದಿಂದ ಅಕಸ್ಮಾತ್ ಹರಿದು ಬಿದ್ದವಳಲ್ಲ; ಈ ಸಮುದಾಯಿಕ ಸುಪ್ತ–ಗುಪ್ತ ಆಶಯ ಅಭೀಪ್ಸೆಗಳಿಗೆ ಮೈಯಾಗಿ ಉದ್ಭವಗೊಂಡವಳು ಮತ್ತು ಆ ಕಾರಣದಿಂದ ಸಮುದಾಯಕ್ಕೆ ಹೆಚ್ಚು ಪ್ರಸ್ತುತವಾಗಬೇಕಾದವಳು. ಹಿಂದೆ ಅಲಂಕಾರಿಕರು ಹೇಳುತ್ತಿಂದ್ದತೆಯೇ ಈ ಕಾಲಕ್ಕೆ ನಮ್ಮಲ್ಲಿ ಗುರುತಿಸುವುದಾದರೆ, ನಮ್ಮ ನಾಯಿಕೆಯರಲ್ಲಿ ಒಂದು ರೀತಿ ಅತಿ ಮುಖ್ಯ ಮಾದರಿ ಈ ನಾಯಿಕೆ. ‘ಸಮಾನತೆ’ಯ ಹಾಗೆ ‘ಭಿನ್ನತೆ’ಯೂ ಜೈವಿಕತೆಯ ಅಥವಾ ಜಗತ್ ಸಮಸ್ತದ ಪ್ರಾಥಮಿಕ ತತ್ವಗಳಲ್ಲೊಂದು. ಸಮಾನತೆ–ಭಿನ್ನತೆ ದ್ವಂದ್ವಗಳ ತಾತ್ವಿಕ ಸಮಸ್ಯೆಯು ಅತ್ಯಂತ ಸಂಕೀರ್ಣವಾದದ್ದು. ಅಂತಿಮವಾಗಿ ಈ ದ್ವಂದ್ವದ ಸಮತ್ವವನ್ನು ನಾವು ಸಾಧಿಸಿಕೊಳ್ಳಬೇಕು. ಈ ತಾತ್ವಿಕ ಸಮಸ್ಯೆಯ ಜಡಕುಗಳನ್ನು ಬಿಡಿಸಿಕೊಳ್ಳುತ್ತ ಹೋಗುವುದರಲ್ಲೇ ನಾವು ನಮ್ಮ ಚಿಂತನೆಗಳನ್ನು ತಿಳಿಗೊಳಿಸಿಕೊಳ್ಳಬೇಕು. ಅದರ ಹಾಗೆ, ಜತೆ ಜತೆಯಲ್ಲಿ ನಿತ್ಯದ ತತ್ ಕ್ಷಣದಲ್ಲಿ ನಮ್ಮ ಜೈವಿಕ ಸ್ಫೂರ್ತಿಯಿಂದ ನಾವು ಈ ಸಮಸ್ಯೆಯನ್ನು ಎದುರಿಸಿ ಕ್ರಿಯಾಶೀಲರಾಗಲೂ ಬೇಕು. ಈ ಹಿನ್ನಲೆಯಲ್ಲಿ ಮಾಲತಿಯವರ ಮಾತುಗಳು, ಎಂದರೆ ಪ್ರಸ್ತುತದ ಮುಖ್ಯ ನಾಯಿಕಾ ಮಾದರಿಯೊಂದರ ಆಳವಾದ ನೋವಿನ ದನಿಗಳು ನನ್ನ ಜಡತೆಯನ್ನು ಕೊಡವಿ ಎಚ್ಚರಿಸುತ್ತಿವೆ, ನನ್ನನ್ನು ಕಲಕಿ ಕಡೆಯುತ್ತಿವೆ” [೧೨] ಈ ಮಾತು ಸಾಮಾಜಿಕ ಬದಲಾವಣೆಗೆ ಹೆಣ್ಣಿನ ಪ್ರಾತಿನಿಧ್ಯದ ಅಗತ್ಯತೆಗೆ ಹೆಚ್ಚು ಒತ್ತು ನೀಡುತ್ತದೆ.

ಸಾಮಾಜಿಕ ಬದಲಾವಣೆಯ ಮಾರ್ಗಗಳು ಹಲವು. ಆದರೆ ಪರಿಣಾಮಕಾರಿಯಾದ ರೀತಿಯಲ್ಲಿ ಕಾವ್ಯ ಸರಳ ಹೇಳಿಕೆಯ ರೂಪದಲ್ಲಿದ್ದರೂ ಅವುಗಳ ಅರ್ಥ ಗಾಢತೆ ಮಹತ್ವದ್ದು. ತುಟಿ ತೆರೆಯುವ ಮೊದಲು ಪುಟ ತಿರುವಿ ನೋಡಿದರೆ ಹೊಸ ಆಲೋಚನೆಯ ಮಾರ್ಗ ತೆರೆದುಕೊಳ್ಳುತ್ತದೆ. ಅಂತೆಯೇ ಮಾಲತಿಯವರ ಕಾವ್ಯ. ವ್ಯವಸ್ಥೆಯ ಸುಳಿಗೆ ಸಿಲುಕಿದ ಹೆಣ್ಣು ಯಾವ ರೀತಿ ಪ್ರಶ್ನಿಸಲ್ಪಡುವಂತೆ ರೂಪಿತಳಾಗುತ್ತಾಳೆ ಎಂಬುದು ವಾಸ್ತವದ ರೂಪವೂ ಹೌದು. ಪ್ರತಿಯೊಬ್ಬ ಕವಿಯಲ್ಲೂ ಕುಟುಂಬವನ್ನು ಮೀರಿನಿಂತ ಸಾಮಾಜಿಕ ನ್ಯಾಯ ಜಾಗೃತವಾಗುತ್ತವೆ ಎನ್ನುವುದನ್ನು ಇವರ ಕವಿತೆಗಳು ನಮ್ಮ ಮುಂದಿಡುತ್ತವೆ. ಆಹಾ! ಇದೆಂಥ ವ್ಯವಸ್ಥೆ ಎಂಬ ಕವಿತೆ ವಾಸ್ತವದ ತಣ್ಣನೆಯ ಪ್ರತಿಭಟನೆಯ ರೂಪವೂ ಹೌದು.

“ಸತ್ಯ – ದುಡಿಮೆ
ಅಪ್ಪ ಹೇಳಿದ ಪಾಠ
ಶಿಸ್ತು – ವಿನಿಮಯ
ಅಮ್ಮ ಹೇಳೀದ ಪಾಠ
ಅಭ್ಯಾಸ – ಏಕಾಗ್ರತೆ

ಗುರುಗಳ ಮಂತ್ರ
ಹೇಳಿದ್ದನ್ನೆಲ್ಲ ಕೇಳಿ
ಒಳಗೇ ಧ್ಯಾನಿಸಿ
ಕಡೆದ ಶಿಲೆಯಂತೆ
ರೂಪುಗೊಂಡ ಮನಸ್ಸು" [೧೮]

ಹೆಣ್ಣಿನ ಬದುಕಿನ ಅವಸ್ಥಾಂತರಗಳ ಕನ್ನಡಿ ರೂಪ ಕವಿತೆ. ಕಾಲ ಬದಲಾಗಿದೆ, ಹೆಣ್ಣಿಗೆ ಇಂಥ ಸ್ಥಿತಿ ಈಗಿನ ಕಾಲದಲ್ಲಿಯೇ? ಎಂಬ ಪ್ರಶ್ನೆ ಮಾಡಿದರೆ ಶೋಷಣೆಯ ರೂಪ ಬೇರೆಯಾದರೂ ಪರಿಸ್ಥಿತಿಯ ಕೈಗೊಂಬೆ ಹೆಣ್ಣು ಎನ್ನುವ ವಾಸ್ತವ ಸತ್ಯ ಮರೆವ ಹಾಗಿಲ್ಲ. ಸಮಾಜದಲ್ಲಿ ಸಾಧಕಿಯರು ಸಾಲು-ಸಾಲು ಸ್ಫೂರ್ತಿಯ ಸೆಲೆಯಾದರೂ ಹೆಣ್ಣಿನ ಬದುಕಿನ ರೀತಿ-ನೀತಿಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾದವುಗಳು. ಈ ಎಲ್ಲ ಅಂಶಗಳನ್ನು ಮುಖ್ಯವಾಗಿರಿಸಿಕೊಂಡರೂ ವ್ಯವಸ್ಥೆಯನ್ನೇ ಪ್ರಶ್ನಿಸುವ ತಾಕತ್ತು ಇಂದು ಹೆಣ್ಣಿಗಿದೆ ಎಂಬ ವಾಸ್ತವದ ಎಚ್ಚರಿಕೆಯನ್ನು ಬಿಚ್ಚಿಡುತ್ತದೆ. ಕವಿತೆ ಮುಂದುವರೆದು

"ಕಣ್ಣ ನೋಟಗಳಲ್ಲೇ
ಮುಳ್ಳು ಬಲಿಯ ಕಟ್ಟಿ
ಹೂನಗೆಯ ಬೇಡುವರು
ಕನಸು ಕಂಡ ಕಣ್ಣಿನಲಿ
ಮೂಡುವುದು ಗಲಿಬಿಲಿ
ಸುತ್ತಣ ಗಾಳಿಯಲ್ಲೇ
ಉಕ್ಕುತ್ತಿದ್ದ ನಗೆಯನ್ನು
ತಡೆವಂಥ ಬೆದರಿಕೆ
ಅಳುವ ಕಾರಣ ಗೊತ್ತಿಲ್ಲದೇ
ಕಚ್ಚಿದ ತುಟಿಯಲಿ
ಹೆಪ್ಪುಗಟ್ಟಿದ ರಕ್ತ" [೧೯]

ಹೆಣ್ಣಿಗಂಟಿರುವ ಬಂಧನಗಳ ವಿವಿಧ ಮುಖಗಳ ಅನಾವರಣವನ್ನು ಈ ಕವಿತೆ ಮೂಡುತ್ತದೆ. ಸಾಮಾಜಿಕವಾಗಿ ಗಂಡಿನ ಅಹಮಿಕೆಯ ಸೂಕ್ಷ್ಮತೆಯ ತೆಳು ಪೊರೆ ಇಲ್ಲಿದೆ. ಹೆಣ್ಣು ಮಾರ್ಪಡುತ್ತಾಳೆ ಎಂಬ ಕ್ರಿಯೆ ಈ ಕವಿತೆಯಲ್ಲಿ ಸತ್ಯವೆನಿಸುತ್ತದೆ. ಕೌಟುಂಬಿಕವಾಗಿ ಹೆಣ್ಣನ್ನು ಬಂಧಿಸುವ ಆ ಮೂಲಕ ತಮ್ಮ ಈರ್ಷೆಗಳನ್ನು ಪೂರೈಸುವ ನಿಟ್ಟಿನಲ್ಲಿ ಗಂಡು ಹೇಗೆ ಜಾಗೃತನಾಗುತ್ತಾನೆ ಎಂಬ ಸೂಕ್ಷ್ಮತೆಯನ್ನು ತಣ್ಣನೆಯ ಪ್ರತಿಭಟನೆಯೊಂದಿಗೆ ಅಭಿವ್ಯಕ್ತಿಸಿದ್ದಾರೆ. ಕುಟುಂಬವೇ ಒಂದು ಬಂಧನವಾದರೆ 'ಕುಟುಂಬ ಯೋಜನೆ'ಯಲ್ಲೂ ಹೆಣ್ಣನ್ನು ಮೋಸಗೊಳಿಸುವ ಗಂಡಿನ ನಯವಂಚಕತನವನ್ನು

ಅನಾವರಣ ಮಾಡುತ್ತದೆ. ಕುಟುಂಬದಲ್ಲೇ ಅಡಗಿರುವ ಹೆಣ್ಣಿನ ಮೇಲಿನ ದೌರ್ಜನ್ಯದ ವಿವಿಧಮುಖಗಳು ಪ್ರತಿಯೊಬ್ಬ ಕವಿಯಲ್ಲೂ ಭಿನ್ನ ದೃಷ್ಟಿ ಕೋನಗಳಿಂದ ರಚಿತವಾಗಿರುವುದು ವಿಶೇಷ.

'ನನಗೆ ಬೇಕು ಒಂದು ಮಗು
ನನ್ನ ನಿನ್ನ ಪುಟ್ಟ ಮಗು'
ಹಂಬಲಿಸಿ ಹಂಬಲಿಸಿ
ಕೆಂಪಗಾಗಿ ಕಾದಳು [೨೦]

ಗಂಡು ಹೆಣ್ಣಿನ ಸಂಬಂಧ ಕೇವಲ ದೈಹಿಕ ಆಕರ್ಷಣೆಯ ಕೇಂದ್ರ ಬಿಂದು ಆಗಬಾರದೆಂಬುದು ಹೆಣ್ಣಿನ ಬಯಕೆ. ಮದುವೆಯಾಚೆಗಿನ ಸಂಬಂಧವನ್ನೂ ಸಮಾಜದೆದುರಿಗೆ ನಿರ್ಭಿಡವಾಗಿ ಯಾವುದೇ ಹುಂಬತನವಿಲ್ಲದೆ ಸ್ವೀಕರಿಸುವ ಗುಣ ಹೆಣ್ಣಿಗಿದೆ ಎಂಬುದನ್ನು ಕವಿತೆ ಧ್ವನಿಸುತ್ತದೆ. ಗಂಡಿನ ಮೋಸದ ಜಾಲ ಕರಿನೆರಳಂತೆ ಹೆಣ್ಣಿನ ಮೇಲೆ ಯಾವ ರೀತಿ ವ್ಯಾಪಿಸುತ್ತದೆಂಬುದಕ್ಕೆ ನಿದರ್ಶನವಾಗಿದೆ. ಕುಟುಂಬ ಯೋಜನೆಯ ಫಲಾನುಭವಿಯಾದ ಗಂಡು, ಮಕ್ಕಳಿದ್ದೂ ಮತ್ತೊಬ್ಬಳನ್ನು ಮೋಹಿಸುವುದು ದೈಹಿಕವಾಗಿ ಮಾತ್ರ. ಇದರ ಅರಿವೇ ಇರದ ಹೆಣ್ಣಿಗೆ ಮಾತೃತ್ವದ ಉತ್ಕಟ ಆನಂದ ಸಹಜವಾದುದು. ನಿಜದ ಅರಿವಾದಾಗ ಉಟ್ಟ ಬಟ್ಟೆಯನ್ನು ಬಿಸಾಕಿ ಓಡುವ ಹೆಣ್ಣಿನ ಮನೋವ್ಯಥೆಯನ್ನು ಕವಿತೆ ವಾಸ್ತವದ ನೆಲೆಗಟ್ಟಿನಲ್ಲಿ ಚಿತ್ರಿಸಿದೆ.

ಗೃಹಬಂಧನದಲ್ಲೇ ಮುಕ್ತಿ ಹೊಂದುವ ಹೆಣ್ಣು ಜಾಗರೂಕಳಾದರೆ ಸಮಾಜ ಯಾವ ರೀತಿ ಬದಲಾವಣೆಗೊಳಪಡುತ್ತದೆ ಎಂಬುದನ್ನು ನಾವು ಹಲವು ಉದಾಹರಣೆಗಳಲ್ಲಿ ಕಂಡಿದ್ದೇವೆ. ಎಷ್ಟೋ ಹೆಣ್ಣುಗಳಿಗೆ ಮೊದಲ ಹಿಂಸೆ ಪ್ರಾರಂಭವಾಗುವುದು ಕುಟುಂಬದಿಂದಲೇ. ಅದು ತವರಿನಲ್ಲಾಗಲಿ, ಗಂಡನ ಮನೆಯಲ್ಲಾಗಲಿ, ಶೋಷಣೆಯ ಮೊದಲ ಬಲಿ ಹೆಣ್ಣೇ. ಆದರೂ ಇವೆಲ್ಲವುಗಳನ್ನು ಮೆಟ್ಟಿ ನಿಂತು ತನ್ನದೇ ಆದ ಬದುಕನ್ನು ಕಟ್ಟಿಕೊಳ್ಳಬೇಕೆಂಬ ಹಂಬಲ ಪ್ರತಿಯೊಬ್ಬರಲ್ಲೂ ಇದ್ದೇ ಇರುತ್ತದೆ. ಆ ಮೂಲಕ ಸಾಮಾಜಿಕವಾದ ಜಾಗೃತಿಯನ್ನು ಪಡೆಯಲು ಸಾಧ್ಯ ಎಂಬ ಅರಿವೂ ಅವಳಿಗಿರುತ್ತದೆ. ಇಂತಹ ಸಾಮಾಜಿಕ ಬದಲಾವಣೆಯ ಕನ್ನಡಿಯಲ್ಲಿ ಹಲವರಿದ್ದಾರೆ. ಕವನಗಳ ಮೂಲಕ ಹೆಣ್ಣಿನ ಬದುಕಿನ ಅನಾವರಣ, ನೋವು ಎಲ್ಲವೂ ನಮ್ಮ ನಮ್ಮ ಆಸುಪಾಸಿನದೇ ಎಂದು ಭಾಸವಾಗುವುದು ಸಹಜ. ಅರಮನೆಯಿಂದ ಅಡವಿಗೆ ಹೊರಟ ಅಕ್ಕನ ನಡಿಗೆ ನಮಗೆ ಮಾದರಿಯೂ ಹೌದು.

'ಗೂಡಿನಿಂದ ಬಯಲಿಗೆ' ಕವಿತೆ ಅಮಾಯಕ ಹೆಣ್ಣು ಮೌಢ್ಯಕ್ಕೆ ಕಟ್ಟು ಬೀಳದೆ ಎಲ್ಲವನ್ನೂ ನಿರಾಕರಿಸುವ ಮಾದರಿ ಬದುಕಿನ ಉತ್ಸಾಹಕ್ಕೆ ಹಿಡಿದ ಕನ್ನಡಿ.

"ನನ್ನ ಗಂಡನ ಹೊಡೆತಕ್ಕೆ
ಎಷ್ಟೊಂದು ಶಕ್ತಿಯಿತ್ತು !
ಕಣ್ಣು ತೆರೆದ ನಾನು
ಜಗದ ಹಿಂಸೆಗೆ
ನನ್ನ ಕಪಾಳಕ್ಕೆ ಬಿದ್ದ ಏಟು
ನನ್ನ ಬಾಯಿಂದ ಹೊರಟ ಉದ್ಗಾರ
ಮತ್ತೆ ಅಲೆಅಲೆಯಾಗಿ
ಪ್ರತಿಧ್ವನಿಸಿ
ನರಳುವ ಅಮಾಯಕರ
ನೋವಿನೊಂದು ಮೇಳವಾಗಿ
ನನ್ನ ಕಣ್ಣೀರ ಬತ್ತಿಸಿತ್ತು" ೨೧

ಗಂಡಿನ ದೌರ್ಜನ್ಯಕ್ಕೊಳಗಾದ ಅಮಾಯಕ ಹೆಣ್ಣಿನ ಪ್ರಾತಿನಿಧಿಕ ಚಿತ್ರಣದಂತಿದೆ ಕವಿತೆ. ಹೆಣ್ಣು ಸಹನಾಶೀಲೆ, ಕರುಣಾಮಯಿ ಎಂಬ ಮಾತಿನ ಮಂಕು ಬೂದಿ ಎರಚಿದ ಪುರುಷ ಸಮಾಜ ಅವಳನ್ನು ಹಂತ ಹಂತವಾಗಿ ಬಂಧಿಸುತ್ತಲೇ ಬಂದಿತು. ಇದು ಕೇವಲ ಅವಳ ಕತೆಯಲ್ಲ. ಸಮಾಜದಲ್ಲಿ ಶೋಷಣೆಗೊಳಗಾದ ಪ್ರತಿ ಹೆಣ್ಣಿನ ವ್ಯಥೆ. ತನ್ನ ಬದುಕನ್ನು ಕಟ್ಟಿಕೊಳ್ಳುವ ಸಾಮರ್ಥ್ಯ ನನಗಿದೆ ಎಂಬುದನ್ನು ಕವಿತೆಯ ಸಾಲುಗಳು ಮತ್ತೆ ಮತ್ತೆ ಧ್ವನಿಸುತ್ತವೆ. ದೌರ್ಜನ್ಯಕ್ಕೊಳಗಾದ ಹೆಣ್ಣು ಕನಿಕರ ಬಯಸಿದರೆ ಅವಳ ಬದುಕು ಅಂತಿಮವಾಗಿ ಕೊನೆಯಾಗುವುದು ಸಾವಿನಲ್ಲೇ. ಆದರೆ ಅದಮ್ಯ ಜೀವನೋತ್ಸಾಹ ಹೊಂದಿದ ಹೆಣ್ಣು ಕೌಟುಂಬಿಕ ತಾಕಲಾಟಗಳನ್ನು ಸವಾಲಾಗಿ ಸ್ವೀಕರಿಸಿ ಸಮಾಜವನ್ನೇ 'ಒಂದು ಕುಟುಂಬ' ಎಂಬ ನೆಲೆಗಟ್ಟಿಗೆ ತಂದು ನಿಲ್ಲಿಸುವ ಪರಿ ಸಹಜವಾದುದಲ್ಲ. ಇದು ಸಾಧ್ಯ! ಎಂಬುದನ್ನು ತೋರಿಸಿಕೊಟ್ಟ ಹೆಣ್ಣುಗಳ ಪಟ್ಟಿ ದೊಡ್ಡದಿದೆ. ಅಂತೆಯೇ ಕವಿತೆ ಮುಂದುವರೆದು ಬದುಕಿನ ಒಟ್ಟಂದಕ್ಕೆ ಆಹ್ವಾನ ಕೊಡುತ್ತದೆ.

"ಇಂದು.............
ನನ್ನೆದೆಯ ತುಂಬಾ ಸಿಟ್ಟು
ಕೆಲಸಕ್ಕಿಳವ ಕೆಚ್ಚು
ಅಳಬೇಡಿ, ಬನ್ನಿ ನನ್ನೊಂದಿಗೆ ಸಾಗೋಣ ಬೆಳಕಿನೆಡೆಗೆ"೨೨

ಸ್ವಾಭಿಮಾನ ಎಚ್ಚೆತ್ತುಕೊಂಡಾಗ ಹೆಣ್ಣಿನ ಆತ್ಮಸಾಕ್ಷಿ ಜಾಗೃತವಾಗುವ ಬಗೆಯನ್ನು ಕವಿತೆ ಕಟ್ಟಿಕೊಡುತ್ತದೆ. 'ಬನ್ನಿ ನನ್ನೊಂದಿಗೆ' ಎಂದು ಕರೆಯುವುದು ಹೊಸ ಬದುಕಿನ ಕನಸು ಕಂಡವರಿಗೆ, ಹಂಬಲಿಸುವ ಮನಸ್ಸುಗಳಿಗೆ ವೇದಿಕೆಯನ್ನು ಕೊಟ್ಟಂತಿದೆ. ತನ್ನಂತೆ ಇತರರೂ ಎಂಬ ಕಲ್ಪನೆ ಇದೆಯಲ್ಲ ಅದು ಮೊದಲು ಹುಟ್ಟುವುದು ಹೆಣ್ಣಿನೊಂದಿಗೆ.

ಇದು ಎಲ್ಲೋ ಒಂದು ಕಡೆ ನೆಲೆ ನಿಲ್ಲದೆ ಸಾಮಾಜಿಕವಾಗಿ ಮಹಿಳಾ ಸಮುದಾಯ ಪ್ರಗತಿ ಪಥದತ್ತ ಸಾಗಬೇಕೆಂಬ ಘೋಷವಾಕ್ಯದಂತಿದೆ.

ಸಾಮಾಜಿಕ ಬದಲಾವಣೆ ಎಂಬುದು ಕೇವಲ ಮಾತಿಗೆ ಸೀಮಿತವಾಗುವಂತದ್ದಲ್ಲ. ಮಹಿಳಾ ಕಾವ್ಯದಲ್ಲೂ ಕಾಲಘಟ್ಟಕ್ಕೆ ತಕ್ಕಂತೆ ಸಾಮಾಜಿಕವಾದ ಆಲೋಚನೆಗಳು, ಮಾರ್ಪಾಡುಗಳು ನಿರಂತರವಾಗಿ ಆಗುತ್ತಿವೆ. ಇಂದು ಭಿನ್ನ ದೃಷ್ಟಿಕೋನದ ನೆಲೆಯನ್ನು ಮಹಿಳಾ ಕಾವ್ಯ ಒಳಗೊಂಡಿದೆ. ಲೇಖನಿಯಿಂದ ಮಾತ್ರವೇ ಇಂದು ಬದಲಾವಣೆಗಳಾಗುತ್ತಿಲ್ಲ. ಇದರ ಜೊತೆಗೆ ಸಾಮಾಜಿಕ ಜಾಲತಾಣಗಳು ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ಕೊಡಬಲ್ಲವು ಎಂಬಷ್ಟರ ಮಟ್ಟಿಗೆ ಕಾರ್ಯನಿರತವಾಗಿವೆ. ಬರವಣಿಗೆಯೂ ಸಹ ಹೊಸ ಹಾದಿ ಹಿಡಿದಿದೆ. ಶೀರ್ಷಿಕೆಯೇ ಇಲ್ಲದೆ, ಸಂಜ್ಞೆಗಳ, ಚಿತ್ರಗಳ ಮೂಲಕವೇ ಬದುಕಿನ ವಿವಿಧ ಮುಖಗಳ ಅನಾವರಣ ಮಾಡುವಷ್ಟರ ಮಟ್ಟಿಗೆ ಕನ್ನಡ ಮಹಿಳಾ ಕಾವ್ಯ ಬೆಳೆದಿದೆ. ಗುಪ್ತ ವಿಚಾರಗಳೆಂದು ಮುಚ್ಚಿಡುತ್ತಾ ಬಂದ ಲೈಂಗಿಕ ವಿಚಾರಗಳೂ ಕೂಡ ಚರ್ಚೆಯಾಗುವ ಹಂತಕ್ಕೆ ತಲುಪಿದ್ದೇವೆಂದರೆ ಇದು ಸಾಮಾಜಿಕ ಬದಲಾವಣೆಯ ಮೆಟ್ಟಿಲೆನ್ನಬಹುದು. ಈ ಎಲ್ಲ ಮಾತುಗಳಿಗೆ ಪೂರಕವಾಗಿ ಕನ್ನಡ ಮಹಿಳಾ ಲೋಕದಲ್ಲಿ ವಿಶಿಷ್ಟವಾದ ಸಾಹಿತ್ಯ ಅಭಿರುಚಿ ಬೆಳೆಸಿಕೊಂಡವರು ಚೇತನಾ ತೀರ್ಥಹಳ್ಳಿ.

ಹಳ್ಳಿಗಾಡಿನ ಬದುಕು, ನಗರ ಪ್ರಜ್ಞೆಯ ಚಿಂತನೆಗಳು ಇವರ ಬರಹಗಳಲ್ಲಿ ಅಚ್ಚುಕಟ್ಟಾಗಿ ಮೂಡಿಬಂದಿವೆ. ಚರ್ಚಿಸುವ ವಿಷಯಗಳನ್ನು ತಮ್ಮದೇ ಆದ ನಿರ್ಧಾರಗಳೆಂದು ಬಿಂಬಿಸದೆ ತಮ್ಮ ಆಲೋಚನೆಯನ್ನೂ ವೈಚಾರಿಕ ಮನಸ್ಸುಗಳಿಗೆ ಚರ್ಚಿಸ ಬಿಡುವುದು ಇವರ ವೈಶಿಷ್ಟ್ಯತೆ. ಚಿಂತನೆಗೆ ಅರ್ಹವಾದ ವಿಚಾರಗಳನ್ನು ಸಾಮಾಜಿಕ ಜಾಲತಾಣದ ಮುಖಾಂತರ ಬಳಸಿಕೊಳ್ಳುವ ಗುಣ ಇವರಲ್ಲಿದೆ.

ಇವರ ಸಾಹಿತ್ಯ ಕೃಷಿಯನ್ನು ಕಂಡು **ಟಿ.ಎನ್. ಸೀತಾರಾಂ ರವರು** ಹೇಳುವಂತೆ

"ನನ್ನಲ್ಲಿ ಸದಾ ಅಚ್ಚರಿ, ಮೆಚ್ಚುಗೆ ಮತ್ತು ಹೊಟ್ಟೆಕಿಚ್ಚುಗಳನ್ನು ಹುಟ್ಟಿಸುವ ವ್ಯಕ್ತಿಗಳಲ್ಲಿ ಚೇತನಾ ತೀರ್ಥಹಳ್ಳಿ ಪ್ರಮುಖರು. ಫೇಸ್‌ಬುಕ್‌ನಂತಹ ಸಾಮಾಜಿಕ ಜಾಲತಾಣಗಳ ಬಗ್ಗೆ ಅಷ್ಟೇನೂ ಗೌರವವಿರದಿದ್ದ ನನಗೆ ಅವುಗಳ ಬಗ್ಗೆ ಮೊಟ್ಟ ಮೊದಲಿಗೆ ಗಂಭೀರವಾಗಿ ಯೋಚಿಸುವಂತೆ ಮಾಡಿದ್ದು ಚೇತನಾರವರು. ತಮ್ಮ ಮುಖವಾಣಿಗಳಲ್ಲಿ [Status] ಹಾಕುತ್ತಿದ್ದ ಪದ್ಯ ಮತ್ತು ಚಿಂತನೆಗಳು ಫೇಸ್‌ಬುಕ್‌ನ ಸ್ಟೇಟಸ್‌ಗಳು ದಿನಪತ್ರಿಕೆಯಂತೆ ಇವತ್ತಿದ್ದು, ನಾಳೆಯೊಳಗೆ ತನ್ನ ಮಹತ್ವ ಕಳೆದುಕೊಂಡು ರದ್ದಿಯಂತೆ ಭಾಸವಾಗುವುದು ಸಾಮಾನ್ಯ. ಆದರೆ ಇವೂ ಕೂಡ ಸಂಗ್ರಹ ಯೋಗ್ಯವಾಗಬಲ್ಲುದು ಎಂದು ನನಗೆ ಅನಿಸಿದ್ದು ಇವರು ಸ್ಟೇಟಸ್‌ನಲ್ಲಿ ಹಾಕಿದ ಪದ್ಯಗಳನ್ನು ನೋಡಿದಾಗ. ನನಗೆ ಅನ್ನಿಸುವಂತೆ ಇವತ್ತಿನ ವೇಗದ ಶೈಲಿಯ ಬದುಕಿಗೆ ತಕ್ಕಂತೆ ಬದಲಾಗಿರುವ ಇವತ್ತಿನ ಪದ್ಯ, ರೋಚಕ ಮತ್ತು ಬುದ್ಧಿ ಪ್ರಧಾನ ಜಗತ್ತಿಗೆ ಪ್ರಿಯವಾಗಬಲ್ಲ ಜಾಣ ಮಾತುಗಳನ್ನೂ, ಪದ ಮತ್ತು ಭಾವದ

ಚಮತ್ಕಾರವನ್ನೂ ಹೊತ್ತು ನಿಂತಿದೆ. ಆದರೆ, ಜಾಣ ಮಾತುಗಳಾಗಲಿ, ಭಾವ ಚಮತ್ಕಾರಗಳಾಗಲಿ, ಹಸಿ ಆಕ್ರೋಶಗಳಾಗಲಿ ನನ್ನ ಇಷ್ಟದ ಕಾವ್ಯವಾಗಲು ಸಾಧ್ಯವಿಲ್ಲ. ಒಳಗಿನ ಇರುವನ್ನು ತಟ್ಟಿ ಅರಿವನ್ನು ಅಲ್ಲಾಡಿಸಬಲ್ಲದ್ದು ಮಾತ್ರ ಆತ್ಮದ ನುಡಿಗಳಂತೆ ನನಗೆ ಕೇಳುತ್ತಿವೆ. ಫೇಸ್‌ಬುಕ್‌ನಿಂದ ಆಚೆ ಇಟ್ಟರೂ ಕೂಡ ತಮ್ಮ ಘನತೆಯನ್ನು ಪ್ರತಿ ಓದಿನ ಮೂಲಕ ನಿರಂತರವಾಗಿ ಹೆಚ್ಚಿಸಿಕೊಳ್ಳುತ್ತ ಹೋಗುವ ಶಕ್ತಿ ಇವರ ಪದ್ಯಗಳಿಗೆ ಇದೆ" [೨೩] ಎಂದಿದ್ದಾರೆ.

ಈ ಮಾತುಗಳು ಸಾಮಾಜಿಕ ಜಾಲತಾಣಗಳೂ ಸಾಹಿತ್ಯ ವಲಯದಲ್ಲಿ ಉಂಟುಮಾಡುವ ಸಂಚಲನ ಕ್ರಿಯಾಶೀಲವಾದುದು ಎಂಬುದನ್ನು ಧ್ವನಿಸುತ್ತವೆ. ಕುಟುಂಬ ವ್ಯವಸ್ಥೆಯಲ್ಲಿ ಯಜಮಾನಿಕೆಯ ದರ್ಪದ ಪ್ರತಿರೂಪ ಅಪ್ಪ. ಇಲ್ಲಿ ಗಂಡಿನ ಕ್ರೂರ ವರ್ತನೆಯ ಮುಖವಾಡವನ್ನು ಹೊತ್ತಿರುವ ಎಷ್ಟೋ ಅಪ್ಪಂದಿರು ಸಮಾಜದಲ್ಲಿ ದಿನನಿತ್ಯ ಕಾಣುತ್ತಾರೆ. ಹೆಣ್ಣು ತನ್ನ ಅವಸ್ಥಾಂತರಗಳ ವಿವಿಧ ಹಂತಗಳಲ್ಲಿ ಗಂಡನ್ನು ಕಂಡ ಬಗೆ ಬಹುಮುಖತೆಯದು. ಕುಟುಂಬದ ನೆಲೆಯಲ್ಲಿ ಮೂಡುವ ಅಪ್ಪನ ಚಿತ್ರಣ ಅಲ್ಲೇ ನಿಲ್ಲುವುದಿಲ್ಲ. ಅದು ನಿರಂತರವಾಗಿ ಸಾಮಾಜೀಕರಣಗೊಂಡು ಸಂದರ್ಭಕ್ಕೆ ತಕ್ಕಂತೆ ಮುಖವಾಡದ ಅನಾವರಣ ಮಾಡುತ್ತದೆ.

"ಅಪ್ಪನ್ನ ನಾನು ಬಾಯ್ತುಂಬ ಕರೆದಿದ್ದು
ಕೋಗಿಲೆ ಕಾಗೆಯನ್ನು 'ಅಮ್ಮ' ಅಂದಷ್ಟೆ ಕಡಿಮೆ.
ಅವನ ಗೂಡಲ್ಲಿದ್ದಷ್ಟೂ ದಿನ ಒಕ್ಕಾಲು ಹೊರಗೆ
ಪರ ಪುಟ್ಟನಂತೆ
ಅಪ್ಪಯಾವತ್ತೂ ನಮ್ಮ ಪಾಲಿಗೆ ಅಮ್ಮನ ಯಜಮಾನ.
ಅವಳು ಸೆಖೆಗೆಂದು ತೆಗೆದಿಡುತ್ತಿದ್ದ ಕರಿಮಣಿ ಸರ.
ಅವಳಿಗಾದರೋ ಅವ ಕೌರವನ ಗೌರವ,
ಕಾನೂನು ಮಾಡುವ ಪಾಳೇಗಾರ" [೨೪]

ಇಡೀ ಪದ್ಯ ಗಂಡಿನ ದೂರ್ತ ವರ್ತನೆಯ ಮುಖವಾಡವನ್ನು ಕಳಚುವಂತೆ ನಿರೂಪಿತಗೊಂಡಿಲ್ಲ. ಆದರ್ಶದ ಹೆಸರಿನಲ್ಲಿ ಬಿಗುಮಾನದಿಂದ ವರ್ತಿಸುವ ಗಂಡಿನ ನಡಿಗೆ ಸಾಮಾನ್ಯತೆಯಲ್ಲೂ ಹೇಗೆ ಭಿನ್ನವಾಗುತ್ತದೆಂಬುದಕ್ಕೆ ಉತ್ತಮ ಉದಾಹರಣೆ ಕವಿತೆ. ಸರ್ವೇ ಸಾಮಾನ್ಯವಾಗಿ ಕವಿತೆ ಓದುವ ಹಲವು ಮಂದಿಗೆ ತನ್ನ ಅಪ್ಪನ ಪ್ರತಿಮೆ ಕಣ್ಮುಂದೆ ಬರುವುದು ಸಹಜ. ಕವಿತೆ ಇಷ್ಟಕ್ಕೇ ನಿಲ್ಲುವುದಿಲ್ಲ. ಕುಟುಂಬದೊಂದಿಗೆ ಬಿಗುಮಾನದಿಂದ ವರ್ತಿಸುವ ಅಪ್ಪ ಒಂದು ಕುಟುಂಬವನ್ನು ಹೇಗೆ ಗಟ್ಟಿತನದಿಂದ ಹಿಡಿದಿಟ್ಟಿರುತ್ತಾರೆ ಎಂಬುದು ಕವಿತೆಯ ಕೊನೆಯ ಸಾಲುಗಳು ತಿಳಿಸುತ್ತವೆ. ಇಂತಹ ಒಂದು ಸಾಮಾಜಿಕ ನೆಲೆಗಟ್ಟಿನ ಆಶಯಗಳೇ ಮಹಿಳಾ ಕಾವ್ಯದ ಪ್ರಧಾನ ಅಂಶವೆನ್ನಬಹುದು. ಮುಂದುವರೆದು,

"ಈಗ,
'ಅಪ್ಪ' ನಾನು ಮಿಸ್ ಮಾಡಿಕೊಳ್ತಿರುವ
ಒಡಲಾಳದ ಕೂಗು,
ಇವತ್ತಿನ ನನ್ನಿರುವಿಗೆ ಅವತ್ತಿನ ಮೊದಲ ಹೆಜ್ಜೆ
ಹಠಮಾರಿ ವಾನಪ್ರಸ್ಥಿ, ಒಬ್ಬಂಟಿ ಮಹಾಮೌನಿ ಅಪ್ಪ,
ಸೊನ್ನೆಯಿಂದ ಅಂಕಿ ಕಟ್ಟಿದ ಸ್ವಾಭಿಮಾನಿ,
ಹಣ್ಣಾದರೂ ಹುಲ್ಲು ತಿನ್ನದ ಹುಲಿ
ಅಪ್ಪ ನನ್ನೊಳಗಿನ ಗಂಡಸುತನ
ಮತ್ತು ಅಪ್ಪ
ಎದೆಯಿಂದ ಜಾರಿ ಬಿದ್ದ ಗರ್ವ
ಯಾವತ್ತೂ ಹಡೆಯಲಾಗದ ಹೊಕ್ಕುಳ ಸಂಕಟ" [೨೫]

ಹೆಣ್ಣು ಎಲ್ಲವನ್ನೂ ಸ್ವೀಕರಿಸುವ ಗುಣ ಹೊಂದಿದವಳು. ಏಕೆಂದರೆ 'ಅಪ್ಪ' ಕವಿತೆ ಮನುಷ್ಯ ಜೀವನದ ಗಂಡು-ಹೆಣ್ಣಿನ ನಡುವಿನ ಎಲ್ಲವಲಯಗಳನ್ನು ಯಾವುದೇ ಪ್ರತಿಭಟನೆಯ ಕಾವಿಲ್ಲದೆ ತಣ್ಣನೆ ನಿರೂಪಿಸುವ ಕ್ರಮ ಮತ್ತು ಅದಕ್ಕೆ ಕಲಾತ್ಮಕತೆಯ ಸ್ಪಷ್ಟನೆ ಕೊಟ್ಟು ಕುಟುಂಬದಾಚೆಗಿನ ಗಂಡಿನ ವ್ಯಕ್ತಿತ್ವವನ್ನು ಗಟ್ಟಿಯಾಗಿ ನಿರೂಪಿಸುವ ಕ್ರಮವಿದೆ. 'ಹೊಕ್ಕುಳ ಸಂಕಟ' ಆತ್ಮೀಯತೆ, ಪ್ರೀತಿ, ಅಭಿಮಾನದಿಂದ ಬಂದದ್ದು. ಸಾಮಾನ್ಯ ಬದುಕಿನ ಅಸಮಾನ್ಯ ಜೀವನ ಪ್ರೀತಿಯ ಪ್ರತಿರೂಪದಲ್ಲಿ ಅಪ್ಪನನ್ನು ಕಾಣುವ ಕಲ್ಪನೆ ಅದು ಹೆಣ್ಣಿಗೆ ಮಾತ್ರವೆ. ಕವಿತೆ ನಿಜ ಬದುಕಿನ ನಿಲುವುಗನ್ನಡಿಯಂತೆ ಆಲೋಚನೆಯ ಮಟ್ಟವನ್ನು ಅಷ್ಟಕ್ಕೇ ತೋರಿಸುವಂತೆ ಕವಿ ಮನಸ್ಸಿನ ಅಗಾಧ ಕಲ್ಪನೆಗೆ ಸಾಕ್ಷಿಯಂತಿದೆ. ಒಟ್ಟಾರೆಯಾಗಿ ಸಾಮಾಜಿಕ ಬದಲಾವಣೆ ಎಂಬುದು ಸಾಹಿತ್ಯದ ಅಂಶವಾಗಿ ಮಾರ್ಪಟ್ಟಿದೆ. ಆರೋಗ್ಯಕರ ಕ್ರಾಂತಿ ಹೇಗಾಗುತ್ತದೆಂಬುದಕ್ಕೆ ಈ ಅಂಶಗಳು ಕಾರಣವಾಗುತ್ತವೆ. ಒಬ್ಬೊಬ್ಬ ಕವಿಯಲ್ಲೂ ಸಾಮಾಜಿಕ ಬದಲಾವಣೆಯ ಅಂಶಗಳು ಹೇಗೆ ಸ್ಫುರಿಸುತ್ತವೆ. ಅವು ಬದಲಾವಣೆಯ ಮಾರ್ಗಕ್ಕೆ ಹೇಗೆ ತೆರೆದುಕೊಳ್ಳುತ್ತವೆ ಎಂಬುದಕ್ಕೆ ಆಧುನಿಕ ಮಹಿಳಾ ಕಾವ್ಯ ಉತ್ತಮ ಉದಾಹರಣೆ. ಈ ನಿಟ್ಟಿನಿಂದ ಸಾಮಾಜಿಕ ಬದಲಾವಣೆಯ ಮೂಲ ಆಶಯ ಆರೋಗ್ಯಕರ ಸಮಾಜ. ಗಂಡು ಹೆಣ್ಣಿನ ನಡುವೆ ಇರುವ ಅಂತರವನ್ನು ಸಮಾನಾಂತರ ನೆಲೆಯಲ್ಲಿ ತಂದು ನಿಲ್ಲಿಸುವುದಾಗಿದೆ. ಈ ಎಲ್ಲಾ ದೃಷ್ಟಿಕೋನಗಳಿಂದ ಹಲವು ಕವಿಯತ್ರಿಯರ ಕವಿತೆಗಳಲ್ಲಿ ಬರುವ ಸಾಮಾಜಿಕ ಬದಲಾವಣೆಯ ಅಂಶಗಳ ತಾತ್ವಿಕ ನೆಲೆಯನ್ನು ಗುರ್ತಿಸುವುದಾಗಿದೆ.

೭.೨ ಸಾಮಾಜಿಕ ಬದಲಾವಣೆ : ಚರಿತ್ರೆ ಮತ್ತು ಪುರಾಣ ಪಾತ್ರಗಳ ಮುಖಾಮುಖಿ,

ಅ) ಆಧುನಿಕ ಕನ್ನಡ ಮಹಿಳಾ ಕಾವ್ಯದಲ್ಲಿ ಪುರಾಣದ ನೆಲೆ

ಚರಿತ್ರೆ ಇಲ್ಲದೆ ಇತಿಹಾಸವಿಲ್ಲ. ಪುರಾಣವಿಲ್ಲದೆ ಮಹಾಕಾವ್ಯಕ್ಕಿಲ್ಲ. ಏಕೆಂದರೆ ಎರಡರಲ್ಲೂ ಹಾಸುಹೊಕ್ಕಾಗಿರುವವಳು ಹೆಣ್ಣು. ತಾಯಿಯಾಗೋ, ಅನುಸರಣೀಯಳಾಗೋ, ಗಂಡಿನ ಶಕ್ತಿಯಾಗೋ, ಎಲ್ಲಕ್ಕಿಂತ ಹೆಚ್ಚಾಗಿ ಗಂಡಿನ ಆಸೆ–ಆಕಾಂಕ್ಷೆಗಳನ್ನು ಪೂರೈಸುತ್ತಾ ಮುಕ್ತಿಯ ಮಾರ್ಗವಾಗೋ ಅವಳ ಛಾಯೆ ಇದ್ದೇ ಇದೆ. ಎರಡರಲ್ಲೂ ಹೆಣ್ಣನ್ನು ಹೊರತುಪಡಿಸಿದ ಜಗತ್ತಿನ ಸೃಷ್ಟಿ ಸಾಧ್ಯವಿಲ್ಲ. ಊಖಣ೦ಡಿಥಿ ಅಥವಾ ಇತಿಹಾಸ ಎಂಬ ಪದವೇ ಮೂಲಾರ್ಥದಲ್ಲಿ ಅವನ ಚರಿತ್ರೆಯನ್ನೇ ಹೇಳುತ್ತದೆ. ಅಂದರೆ His-story ಎಂದು. ಚರಿತ್ರೆ ಎಂದೂ ಅವನದೇ ಹೊರತು ಅವಳದ್ದಲ್ಲ ಎಂಬ ತತ್ವವನ್ನು ಆಧುನಿಕ ಮಹಿಳಾ ಕಾವ್ಯ ನಿರಾಕರಿಸುತ್ತೆ. ಇದನ್ನೇ ನೇರವಾಗಿ ಪಿ.ಚಂದ್ರಿಕಾ ಹೇಳುವಂತೆ 'ನಿಮ್ಮ ಚರಿತ್ರೆಯಲ್ಲಿ ನಮಗೆ ಜಾಗವಿಲ್ಲ' ಎಂಬ ಮಾತು ಹೆಣ್ಣಿನ ಆತ್ಮ ಶಕ್ತಿಯನ್ನು ಕೆರಳಿಸುತ್ತದೆ ಮತ್ತು ಆ ಮೂಲಕ ಹೊಸದೊಂದು ಇತಿಹಾಸ ಸೃಷ್ಟಿಸುವತ್ತ ಗಮನಹರಿಸುತ್ತದೆ. ಈ ಎಲ್ಲ ಮಾತುಗಳಿಗೆ ಪೂರಕವಾಗಿ ಆಧುನಿಕ ಮಹಿಳಾ ಕಾವ್ಯದಲ್ಲಿ ವ್ಯಾಪಕವಾಗಿ ಚರ್ಚೆಯಾಗುವುದು ಚರಿತ್ರೆ ಮತ್ತು ಪುರಾಣಗಳ ಚೌಕಟ್ಟು. ಏಕೆ ಅಷ್ಟು ಚರ್ಚೆಯ ಅಗತ್ಯವಿದೆಯೆ? ಸೀತೆ, ಸಾವಿತ್ರಿ, ಮುಮ್ತಾಜ್, ಮಥುರಾ, ಬೇಗಂರ ಪಾತ್ರಗಳು ನಮಗೆ ಅಷ್ಟೊಂದು ಪ್ರಸ್ತುತವೆ? ಎಂಬ ಪ್ರಶ್ನೆಗಳು ಹುಟ್ಟಿದರೂ ಗತಕಾಲದಿಂದಲೂ ಆ ಪಾತ್ರಗಳ ಬಗ್ಗೆ ನಮ್ಮನ್ನು ಕಾಡುತ್ತಾ ಬಂದಿವೆ. ಇಂತಹ ಕುರುಡು ನಂಬಿಕೆಗಳನ್ನು ಪ್ರಶ್ನಿಸಬೇಕೆಂಬ ಈರ್ಷೆ ಹುಟ್ಟುವಂತೆ ಮಾಡಿದ್ದೇ ನಮ್ಮ ಆಧುನಿಕ ಮಹಿಳಾ ಕಾವ್ಯ. ಪಂಚ ಪತಿವ್ರತೆಯರು ಎಂಬ ಆದರ್ಶದ ಕುರುಡು ನಂಬಿಕೆಯನ್ನು ಇಂದು ಹಲವು ಮಗ್ಗುಲುಗಳಲ್ಲಿ ಪ್ರಶ್ನಿಸುತ್ತಾ ಬಂದಿವೆ. ಶಿಲಾಶಾಸನದಂತಿರುವ ಪಾತ್ರಗಳನ್ನೂ ವಿಭಿನ್ನ ದೃಷ್ಟಿಕೋನದೊಂದಿಗೆ ಮತ್ತೆ ಮತ್ತೆ ಕಥಿಸುತ್ತಾ ಬಂದು ಪಾತ್ರಗಳಿಗೆ ಎದುರಾಗುವ ವಾಂಛೆ ಬೆಳೆಸಿಕೊಂಡದ್ದು ಮಹಿಳಾ ಕಾವ್ಯ. ಆ ಮೂಲಕ ಪುರಾಣದ ಅಥವಾ ಚರಿತ್ರೆಯ ಕುರುಡು ನಂಬಿಕೆಗಳನ್ನು ಹೊಸದೊಂದು ಮಾರ್ಗದತ್ತ ಕೊಂಡೊಯ್ಯುವಂತೆ ಮಾಡಿದ್ದೂ ಸಹ ಇವೆ. ಚರಿತ್ರೆ ಅಥವಾ ಪುರಾಣ ಪಾತ್ರಗಳನ್ನು ಸಂಕಥಿಸುವ ಮೂಲ ಉದ್ದೇಶವೇ ಲೋಕವನ್ನು ಹೊಸ ಬಗೆಯಲ್ಲಿ ಗ್ರಹಿಸುವ ಹಂಬಲದಿಂದ. ಆ ಮೂಲಕ ಗಂಡು ಕಲ್ಪನೆಯ ನೋಟದಿಂದ ಜಿಗಿದು, ಮತ್ತೊಂದು ಹೊಸ ರೀತಿಯ ಆಲೋಚನಾ ಮನಸ್ಸುಗಳನ್ನು ತೆರೆದಿಡುವಂತೆ ಮಾಡುವುದಾಗಿದೆ.

ರಾಮಲಿಂಗಪ್ಪ.ಟಿ.ಬೇಗೂರು ಹೇಳುವಂತೆ, "ಚರಿತ್ರೆ ಮತ್ತು ಪುರಾಣಗಳು ಹೆಣ್ಣಿಗೆ ತನ್ನ ಅಂತರಂಗದ ಘಾಟು, ನೋವು ಸಿಟ್ಟುಗಳನ್ನು ಹೊರ ಹಾಕುವ ಮಾಧ್ಯಮಗಳು. ಹಾಗೆಯೆ ಇವು ಗಂಡಿನ ಜನ್ಮ ಜಾಲಾಡಿಸಲು ಸದಾ ಒದಗುವ ಗಣೆಗಳು. ಆಧುನಿಕ

ಸಮಾಜದ ಸ್ಥಗಿತತೆಯನ್ನು ಕಥಿಸಲು ಒದಗುವ ಪ್ರತೀಕಗಳು. ಆ ಮೂಲಕ ವರ್ತಮಾನವನ್ನೇ ಕಥಿಸುವ ಪುರಾತನ ಪ್ರತೀಕಗಳು. ಕೆಲವೇ ಅನುಕರಣೀಯ ಮತ್ತು ನಿರಾಕರಣೀಯ ಮಾದರಿಗಳ ಕಣಜಗಳು ಆಧುನಿಕತೆಯ ಸಂಕಥನವನ್ನು ಧರಿಸಬಹುದಾದ ಕಳೇಬರಗಳು, ಹೆಣ್ಣಿಗೆ ತನ್ನ ಆತ್ಮ ಪ್ರತ್ಯಯ, ಪ್ರತಿರೋಧ, ಅಸಹನೆಗಳನ್ನು ಕಾರಿಕೊಳ್ಳಲು ಇರುವ ಮಾಧ್ಯಮಗಳು. ಸಂಕೇತ ರೂಪಕಾದಿ ಕಾವ್ಯ ಪರಿಕರಗಳ ಆಕಾರಗಳು, ಪ್ರಜ್ಞೆಯ ಆಳದಲ್ಲಿ ಕರಗಿ ಹೋಗಿ ಯಾವು ಯಾವುದೋ ವೇಷಾಂತರಗಳಲ್ಲಿ ಪ್ರಕಟಗೊಳ್ಳುವ ಹುದುಲುಗಳು ದಾಂಪತ್ಯ, ಹೆಣ್ತನ, ಪ್ರೇಮ, ಸಾವು, ಕುಟುಂಬ, ಆಧ್ಯಾತ್ಮ ಇತ್ಯಾದಿಗಳನ್ನು ನಿರ್ವಚಿಸುವ, ಮರು ನಿರ್ವಚಿಸುವ, ನಿರಚಿಸುವ ಭೂಮಿಕೆಗಳು ಹೀಗೆ ಈ ಚರಿತ್ರೆ ಪುರಾಣಗಳು ಅಸುಖ್ಯ ನೆಲೆಗಳಲ್ಲಿ ಅನುಸಂಧಾನಕ್ಕೆ ಗುರಿಯಾಗಿವೆ"[೨] ಎಂದಿದ್ದಾರೆ.

ಆಧುನಿಕ ಕನ್ನಡ ಮಹಿಳಾ ಕಾವ್ಯ ಚರಿತ್ರೆ ಮತ್ತು ಪುರಾಣದೊಂದಿಗೆ ಮುಖಾಮುಖಿ ಯಾಗುತ್ತಲೇ ಇದೆ. ಇದು ಸಂಘರ್ಷದ ನೆಲೆಯಲ್ಲಿ ಮಾತ್ರವಾಗಿದೆ, ಪ್ರತೀಕಗಳು ಉಂಟುಮಾಡುವ ವಿರುದ್ಧಗಳನ್ನು ಹೊಸ ನೆಲೆಗಟ್ಟಿಗೆ ತಂದು ನಿಲ್ಲಿಸುವ ಪ್ರಯತ್ನ ಇಲ್ಲಿದೆ. ಪ್ರತಿಯೊಬ್ಬ ಕವಯಿತ್ರಿಯೂ ತಮ್ಮ ಕಾವ್ಯದಲ್ಲಿ ಭಿನ್ನ ಸಂವೇದನೆಗಳು ಮತ್ತು ಭಿನ್ನ ಪ್ರತೀಕಗಳನ್ನು ಎಳೆ ಎಳೆಯಾಗಿ ಚಿತ್ರಿಸುವ ಪ್ರಯತ್ನ ಮಾಡುತ್ತಾರೆ. ಇದರ ಜೊತೆಗೆ ಇಂದು ಚರಿತ್ರೆಯಲ್ಲಿ ದಾಖಲಾದ, ಪುರಾಣಗಳಲ್ಲಿ ಸ್ಥಾಪಿತವಾದ ಪ್ರಸಿದ್ಧ ಹೆಣ್ಣುಗಳೇ ಚಿಂತನೆಯ ಭಾಗವೇ? ಅವರಾಚೆ ಬೇರಾವ ಹೆಣ್ಣಿನ ಚಿತ್ರಣವಿಲ್ಲವೇ? ಶ್ರಮ ಸಂಸ್ಕೃತಿಯ ಆಧಾರಿತವಾದ ಹೆಣ್ಣು ಚರಿತ್ರೆಯಲ್ಲಿ ತನ್ನ ಛಾಪನ್ನು ಏಕೆ ಹೊಂದಿಲ್ಲ? ಎಂಬ ಪ್ರಶ್ನೆಗಳೊಂದಿಗೆ ವಾಸ್ತವಕ್ಕೆ ಹತ್ತಿರವಾದ ಬೇರೊಂದು ಮುಖದ ಅನಾವರಣವನ್ನೂ ಮಾಡುತ್ತಿವೆ. ಲಿಂಗ ತಾರತಮ್ಯದ ಅರಿವೇ ಇಲ್ಲದ ನಾವುಗಳು ಜಗತ್ತು ನಮ್ಮನ್ನು ನಂಬುವಂತೆ ಮಾಡಿದ ನಂಬಿಕೆಗಳಲ್ಲಿಯೇ ಗಂಡು ಹೆಣ್ಣಿನ ಚಿತ್ರಣವನ್ನು ಕಾಣುತ್ತಾ ಬಂದಿರುವುದು ವಿಪರ್ಯಾಸ. ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಮಾತನ್ನು ಒತ್ತಿ ಹೇಳುತ್ತಾ ಅಂತರವನ್ನು ಕಾಯ್ದುಕೊಂಡು ಬಂದ ಜಾಗರೂಕ ಪ್ರಜ್ಞೆ ಗಂಡಿನದು. ಜನಪದ ಸಾಹಿತ್ಯದಲ್ಲಿ ಶ್ರಮ ಸಂಸ್ಕೃತಿಯ ಮೂಲ ಹೆಣ್ಣೇ ಆದರೂ ಅಲ್ಲೂ ಗಂಡಿನ ಛಾಪು ಪ್ರಧಾನವಾಗಿದೆ. ಜನಪದ ಸಾಹಿತ್ಯದಲ್ಲಿ ಬರುವ ಭಾಗೀರಥಿ ಮತ್ತು ಪುಣ್ಯಕೋಟಿಯ ಕಥೆಯನ್ನು ಬೇರೊಂದು ಮಗ್ಗುಲಿನಿಂದ ನೋಡುವಂತೆ ಮಾಡಿದ್ದು ನಮ್ಮ ಆಧುನಿಕ ಮಹಿಳಾ ಕಾವ್ಯ.

ಹೆಣ್ಣಿನ ಮೌನ ಪುರಾಣ ಮತ್ತು ಚರಿತ್ರೆಯಲ್ಲಿ ಹೇಗೆ ದಾಖಲಾಗಿದೆ? ತಾನು ಮಾಡದ ತಪ್ಪಿಗೆ ಅನಿವಾರ್ಯವಾಗಿ ಮೌನಕ್ಕೆ ಶರಣಾಗುವ ಹೆಣ್ಣಿನ ತಾಕಲಾಟ ಎಂತದ್ದು ಎಂಬುದನ್ನು ಹಲವಾರು ಕವಯಿತ್ರಿಯರು ವಿಭಿನ್ನವಾಗಿ ಕವಿತೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಪಾತ್ರಗಳೊಂದಿಗೆ ಮಾತಿಗಿಳಿದು ಹೊಸ ಚಿಂತನೆಗೆ ಮತ್ತು ಮರು ವ್ಯಾಖ್ಯಾನಕ್ಕೊಳಗಾಗುವಂತೆ ಮಾಡಿದ ಕೀರ್ತಿ ಮಹಿಳಾ ಕಾವ್ಯದ್ದಾಗಿದೆ. ಇಡೀ ಪುರಾಣವನ್ನೇ ಒಂದೇ ಕಾವ್ಯದಲ್ಲಿ

ಕಟ್ಟಿಕೊಡುವ ಕ್ರಮವೂ ಹಲವು ಕವಯಿತ್ರಿಯರ ಬರವಣಿಗೆಯಲ್ಲಿವೆ. ಈ ಅಂಶಗಳನ್ನು ಮಾಲತಿ ಪಟ್ಟಣಶೆಟ್ಟಿಯವರ ಬರಹಗಳಲ್ಲಿ ಪ್ರಮುಖವಾಗಿ ಗುರ್ತಿಸಬಹುದು.

"ನಾನು ಎಂದೋ ಕೂಗಿಕೊಂಡೆ
ದುಕ್ಕ ಮಿಕ್ಕಿ ಹಾಡಿಕೊಂಡೆ
ಯುಗದ ಕಲ್ಲು ಬಂಡೆ ಕುಕ್ಕಿ
ನನ್ನ ಪಾಡು ತೋಡಿಕೊಂಡೆ!
ಕರಗಲಿಲ್ಲ ಅನಾದಿ ಕಲ್ಲು
ಹರಗಲಿಲ್ಲ ಒಂದೂ ಸೊಲ್ಲು
ಹುದುಗಿ ಕೊಂಡೆ ಮೌನ ಮರಣದಲ್ಲಿ
ಅಹಲ್ಯೆ–ರಾಮ ಕಾರಣದಲಿ" [೨೭]

ಮಾಡದ ತಪ್ಪಿಗೆ ಶಿಕ್ಷೆಗೆ ಗುರಿಯಾದ ಅಹಲ್ಯೆಯ ಬದುಕು ಸಹ ಕಲ್ಲೇ. ಹೆಣ್ಣಿನ ಮನಸ್ಥಿತಿಯನ್ನು, ಅವಳ ಪ್ರೀತಿಯನ್ನು ಅರಿಯದ ಗೌತಮ ಮಹರ್ಷಿಯಾದರೂ, ಮನಸ್ಥಿತಿಯಲ್ಲಿ ಕಲ್ಲೇ. ಮುಕ್ತಿಗೆ ಬೇರೊಬ್ಬ ಗಂಡಸನ್ನು ಬರುವಂತೆ ಮಾಡಿದ ತನ್ನ ಗಂಡನಾದರೂ ಅವನ ಬಗ್ಗೆ ತಿರಸ್ಕರಸುವ ಪಾತ್ರವಾಗಿ ಅಹಲ್ಯೆ ಇದ್ದಾಳೆ. ಕವಿತೆ ಮುಂದುವರೆದು ಅಹಲ್ಯೆಯ ಮೂಲಕ ಇಡೀ ಪುರಾಣವನ್ನೇ ಬಿಚ್ಚಿಡುವ ಕನ್ನಡಿಯಂತಿದೆ.

"ಬೆನ್ನ ತೋರಿ ಹೋದನೊಬ್ಬ
ನನ್ನನ್ನೆ ಮಾರಿ ನಿಂತನೊಬ್ಬ
ಅಡವಿಗಟ್ಟಿ ಎದ್ದ ನೊಬ್ಬ
ತಲೆಯ ಕಡಿದು ಗೆದ್ದನೊಬ್ಬ
ಒಬ್ಬರಿಬ್ಬರ ಕತಿ ಇದಲ್ಲ
ಮನೆ ಮನೆ ಗತಿಯೆ ಇದೆಲ್ಲ,
ನುಗ್ಗಾದೆ ಮುಗ್ಗಾದೆ
ಬಗ್ಗಿ ಬಗ್ಗಿ ಅಗ್ಗವಾದೆ
ಬಾಯಿಲ್ಲದೆ ಕುಗ್ಗಿಹೋದೆ
ಸ್ಫೋಟಗೊಳ್ಳಲೆಂದ ಹೊತ್ತು
ಗಪ್ಪು ಇರಬೇಕೇನ ಈ ಹೊತ್ತು?" [೨೮]

ಎಂಬ ಸಾಲುಗಳಲ್ಲಿ ಪಾತ್ರಗಳ ಮೂಲಕ ಮಹಿಳಾ ಜಾಗೃತಿಯನ್ನು ಮೂಡಿಸುವ ಪ್ರಯತ್ನವಾಗಿದೆ. ತಲೆಮಾರಿನ ಹೆಣ್ಣಿನ ತಳಮಳ ತಾಕಲಾಟ ಒಮ್ಮೆಗೇ ಸ್ಫೋಟಗೊಳ್ಳುವ ಕ್ರಿಯೆ ಅಹಲ್ಯೆಯ ಮೂಲಕ ಅಡಕಗೊಂಡಿದೆ. ಸಮಯ, ಸಂದರ್ಭಕ್ಕೆ ತಕ್ಕಂತೆ ಹೆಣ್ಣನ್ನು ಮಾರಾಟದ ವಸ್ತುವಿನಂತೆಯೂ ಗಂಡು ಬಳಸಿಕೊಳ್ಳುತ್ತಾನೆ ಎಂಬುದಕ್ಕೆ ನಮ್ಮ ಚರಿತ್ರೆಯಲ್ಲಿ

ಹಲವು ಉದಾಹರಣೆಗಳಿವೆ. ಸೃಷ್ಟಿಯ ಮೂರ್ತಿರೂಪ ಹೆಣ್ಣು, ಆದಿಶಕ್ತಿ ಹೆಣ್ಣು ಎಂಬ ಶಿರೋನಾಮೆಗಳಿಲ್ಲದಿದ್ದರೂ ಹೆಣ್ಣಾಗಿ ರೂಪಿಸಲ್ಪಡುವ ಕ್ರಿಯೆಯಿಂದಲೇ ಮುಕ್ತಿ ಹೊಂದುವ ಕ್ರಿಯೆ ವಿಪರ್ಯಾಸದಿಂದ ಕೂಡಿದೆ. ಧರ್ಮಗಳೂ, ಚರಿತ್ರೆಯ ಮತ್ತು ಪುರಾಣಗಳ ಸೃಷ್ಟಿಯಲ್ಲಿ ಹಿಡಿತ ಸಾಧಿಸಿವೆ. ಈ ಹಿಡಿತದಲ್ಲಿ ನಲುಗಿದವಳು ಮಾತ್ರ ಹೆಣ್ಣು. ಬದುಕಿನ ಪುಟಗಳ ಅನಾವರಣ ಮನುಷ್ಯ ಬದುಕಿನ ವಿವಿಧ ಚಿತ್ರಣಗಳ ಮುಖವಾಡ ಇಂದಿಗೂ ಮರುಕಳಿಸುತ್ತಲೇ ಇದೆ. ಹೆಣ್ಣನ್ನು ಭೋಗದ, ಬಯಕೆಯ ವಸ್ತುವಾಗಿ ಮಾರ್ಪಡಿಸಿಕೊಳ್ಳುವ ಗಂಡಿನ ಮುಖವಾಡವನ್ನು ಬಯಲಿಗೆಳೆಯುವ ಕವಿತೆಗಳು ಹಲವಿವೆ.

"ಸತ್ತಿಲ್ಲ ಇಂದಿಗೂ ಕೌರವ
ರಕ್ತ ಬೀಜಾಸುರರು ಈ
ದೇಶದ ನೆತ್ತಿಯಲ್ಲಿ
ಬಿತ್ತುತ್ತಲೇ ಇದ್ದಾರೆ
ದಾಯಾದಿ ತನದ ದುರ್ಬೀಜ!" [೨೯]

ಈ ಕವಿತೆ ಪೌರಾಣಿಕ ಪಾತ್ರಗಳ ವಿಡಂಬನೆ ಮಾತ್ರವಲ್ಲದೆ, ಉತ್ತಮ ಸಮಾಜದ ಮೇಲೆ ಉಂಟಾಗುತ್ತಿರುವ ಅನಾಹುತಗಳನ್ನೂ ಬಿಚ್ಚಿಡುತ್ತದೆ. ನಾಗರೀಕ ಸಮಾಜದಲ್ಲಿ ಇಂದು ಅತ್ಯಾಚಾರ, ಅಕ್ರಮ, ಭ್ರಷ್ಟಾಚಾರ ತಾಂಡವವಾಡುತ್ತಿವೆ. ಇದನ್ನು ಗತಕಾಲದ ಪಾತ್ರಗಳಿಗೆ ಸಮೀಕರಿಸಿ ಹೇಳುವ ಕ್ರಮ ಕವಿತೆಯಲ್ಲಿ ಮುಂದುವರೆದು.

"ಈ ನತದೃಷ್ಟ ರಾಷ್ಟ್ರದ
ಹಣೆಬರಹದಲ್ಲಿ ಕೆತ್ತಲಾಗಿದೆ
ಮುಗಿಯದ ಕುರುಕ್ಷೇತ್ರ
ಯಾವ ಶಾಂತಿ ಸಂಧಾನಕ್ಕೂ
ಕರಗದ
ಯಾವ ಕ್ರೂರ ಬಲಿದಾನಕ್ಕೂ
ಮರುಗದ
ಮಾನವೀಯತೆಯ ಸೆರಗೆಳೆದು
ನಗ್ನ ಗೊಳಿಸಬೇಕೆಂಬ ಅಟ್ಟಹಾಸದ
ಪಟ್ಟವೇರಿದ ದುಶ್ಯಾಸನರ
ಪಿತ್ತ ಈಗ ನೆತ್ತಿಗೇರಿರಬೇಕು" [೩೦]

ಎಂಬ ಸಾಲುಗಳು ವಾಸ್ತವ ಕರಾಳ ಸನ್ನಿವೇಶಕ್ಕೆ ಹಿಡಿದ ಕನ್ನಡಿ. ಕೌರವರ ಕ್ರೂರ ವರ್ತನೆ ಪ್ರಸ್ತುತವಾಗಿದೆ ಎಂದರೆ ಅವರು ಮನುಷ್ಯರಾದ್ದರಿಂದಲೇ ತಾನೆ! ಎಂಬ ಉತ್ತರವೂ ಇದೆ. ಚರಿತ್ರೆ ಮತ್ತು ಪುರಾಣಗಳನ್ನು ಮತ್ತೆ ವಿಮರ್ಶಿಸುವುದೆಂದರೆ ಅಲ್ಲಿ ಬರುವ

ಗಂಡು ಪಾತ್ರಗಳನ್ನು ಹೀಯಾಳಿಸುವುದು, ಜರೆಯುವುದು ಅಥವಾ ಜಗಳಕ್ಕಿಳಿಯುವುದು ಮಹಿಳಾ ಕಾವ್ಯದ ಉದ್ದೇಶವಲ್ಲ. ಬದಲಿಗೆ ಗಂಡಿನ ದೃಷ್ಟಿಕೋನದಲ್ಲಿ ಮಾಗಿದ ಹೆಣ್ಣಿನ ಚಿತ್ರಣವನ್ನು ಹೊಸ ಬಗೆಯಲ್ಲಿ ಕಂಡುಕೊಳ್ಳುವ ಪ್ರಯತ್ನವೂ ಆಗಿದೆ. ಆ ಮೂಲಕ ಸಾಮಾಜಿಕ, ರಾಜಕೀಯ, ಮತ್ತು ಸಮಾನತೆಯ ಬಗೆಗೆ ಜಾಗೃತಿ ಮೂಡಿಸತ್ತಾ, ಉತ್ತಮ ನಾಗರೀಕ ಸಮಾಜವನ್ನು ಪಾರದರ್ಶಕ ಚಿಂತನೆಯೆಡೆಗೆ ಸೆಳೆದೊಯ್ಯುವ ಪ್ರಯತ್ನ ಮಹಿಳಾ ಕಾವ್ಯದಲ್ಲಡಗಿವೆ.

ಕನ್ನಡ ಸಾಹಿತ್ಯದಲ್ಲಿ ಗಟ್ಟಿತನದ ಹೆಣ್ಣು ಎಂದು ಉದಾಹರಿಸಬೇಕಾದರೆ ದ್ರೌಪದಿ ಎಂದು ಉತ್ತರಿಸಬಹುದು. ಸೀತೆ, ಶಕುಂತಳೆ, ಊರ್ಮಿಳೆ, ಭಾಗೀರಥಿಯರು ತ್ಯಾಗ, ಕಾಯುವಿಕೆ, ತಾಳ್ಮೆಗೆ ಮಾದರಿಗಳಾದರೆ ತನಗನಿಸಿದ್ದನ್ನು ಯಾವ ಮುಲಾಜಿಲ್ಲದೆ ಸಭೆಗೇ ಸವಾಲು ಹಾಕಿದವಳು ದ್ರೌಪದಿ. ಇವಳ ಬದುಕಿನ ಉದಾತ್ತತೆಯನ್ನು ಮಹಿಳಾ ಕಾವ್ಯ ಭಿನ್ನ ನೋಟದಿಂದ ಕಂಡಿದೆ. ಈ ನಿಟ್ಟಿನಲ್ಲಿ ಸವಿತಾ ನಾಗಭೂಷಣರ ಕಾವ್ಯ ಪುರಾಣ ಪಾತ್ರಗಳ ಮರು ವ್ಯಾಖ್ಯಾನಕ್ಕೆ ಉತ್ತಮ ಉದಾಹರಣೆ ಎನ್ನಬಹುದು.

“ಸೀರೆ ಸುತ್ತಿಕೊಳ್ಳುವಾಗ ದ್ರೌಪದಿ
ಉಂಗುರ ಎತ್ತಿಕೊಳ್ಳುವಾಗ ಶಕುಂತಲೆ
ಒಲೆ ಹೊತ್ತಿಕೊಳ್ಳುವಾಗ ಸೀತೆ
ಯಾಕೆ, ಯಾಕೆ ನೆನಪಾಗಬೇಕು?” [೩೧]

ಅಡುಗೆ ಮನೆಗೆ ಸೀಮಿತವಾದ ಹೆಣ್ಣಿನ ಪ್ರಶ್ನೆ ಮಾತ್ರ ಇಲ್ಲಿಲ್ಲ. ಪ್ರತಿದಿನವೂ ಹೊರಗೆ ದುಡಿವ, ಒಳಗೆ ದಣಿವ ಪ್ರತಿಯೊಬ್ಬ ಹೆಣ್ಣಿನ ನೋವು ಸಂಕಟದ ಅನಾವರಣ ಕವಿತೆ.

ಒಂದು ರೀತಿಯ ಹೆಣ್ಣಿನ ಆತ್ಮ ವಿಮರ್ಶೆಯೂ ಕವಿತೆಯಲ್ಲಿದೆ. ಪ್ರಸ್ತುತ ನಡೆಯುತ್ತಿರುವ ದೌರ್ಜನ್ಯಗಳಿಗೆ ಬಲಿಯಾಗುತ್ತಿರುವ ಹೆಣ್ಣು ಆತ್ಮಸ್ಥೈರ್ಯದ ಒಳ ವಿಮರ್ಶೆಗೆ ಒಳಗಾಗುವಂತ ತೆಳು ಪೊರೆಯಿದೆ. ಶಕುಂತಲೆ ಕಾಳಿದಾಸನ ಕಲ್ಪನೆಯ ಕೂಸು. ಉಂಗುರ ತೊಡಿಸಿದವನು ಉಂಗುರವನ್ನು ನೋಡಿಯೆ ಹೆಣ್ಣನ್ನು ಜ್ಞಾಪಿಸಿಕೊಳ್ಳುವ ಸಂದರ್ಭವಿದೆಯಲ್ಲಾ ಅದಕ್ಕಿಂತ ನಾಚಿಕೆಗೇಡಿನತನ ಮತ್ತೊಂದಿಲ್ಲ. ಶಕುಂತಲೆಯ ಮೌನವನ್ನೂ ಕೆದಕುವ ಪ್ರಯತ್ನ ಮಹಿಳಾಕಾವ್ಯದ್ದು.

“ಉಂಗುರ ತೊಡಿಸಿದನಲ್ಲ
ಎಂಥಾ ತಳಮಳ!
ಏನಂದ? ಏನಂದ?
ನೋಡಿಲ್ಲ!
ಗುರುತಿಲ್ಲ....... ಕಲೆತಿಲ್ಲ.......
ಅಂದನಲ್ಲ..... ಇಲ್ಲ
ಅವ....ನಲ್ಲ ಅಲ್ಲವೇ ಅಲ್ಲ!” [೩೨]

ಈ ಸಾಲುಗಳಲ್ಲಿ ಮೋಸ ಹೋದ ಹೆಣ್ಣಿನ ಹತಾಷೆಗಿಂತ ಮಾನಸಿಕ ಸ್ಥೈರ್ಯ ತುಂಬಿಕೊಂಡ ಹೆಣ್ಣಿನ ಪ್ರತಿನಿಧಿಯಾಗಿ ಶಕುಂತಲೆ ನಿಲ್ಲುತ್ತಾಳೆ. ಕಾಳಿದಾಸನ ಶಾಕುಂತಲ ನಾಟಕದಲ್ಲಿ ಬರುವ ಶಕುಂತಲೆಯ ಪಾತ್ರ ಗಂಡಿನ ಪೂರ್ವ ನಿರ್ಧಾರಿತ ರೂಪ. ಆದರೆ ಮಹಿಳಾ ಕಾವ್ಯ ಅದನ್ನು ವಿರೋಧಿಸದೆ ತಣ್ಣನೆಯ ಪ್ರತಿಭಟನೆಯ ಮೂಲಕ ಹೊಸ ನೋಟದಲ್ಲಿ ಕಂಡ ಪ್ರಯತ್ನ ಇಲ್ಲಿದೆ. ಮೌನವಾದ ಶಕುಂತಲೆಯನ್ನೂ ಮಾತನಾಡಿಸುವ ಛಲ ಮಹಿಳಾ ಕಾವ್ಯದಲ್ಲಡಗಿದೆ. ಜನರ ಊಹಾಪೋಹಕ್ಕೆ ಉತ್ತರ ಕೊಡುವಂತಿದೆ ಕವಿತೆಯ ಮುಂದಿನ ಸಾಲುಗಳು.

"ಉಂಗುರ
ನೀರು ಪಾಲಾಯಿತೋ
ಮೀನುಪಾಲಯಿತೋ
ತಾನೇ ಕಳಚಿಕೊಂಡಿತೋ
ನಾನೇ ಕಳೆದುಕೊಂಡೆನೋ.....
ಹೇಳೋಲ್ಲ!" ೩೩

ಶಕುಂತಲೆಯ ಮಾತು ಮೊಂಡುತನದ ಸೂಚಕವಲ್ಲ. ಸ್ವಾಭಿಮಾನ ತುಂಬಿದ ಹೆಣ್ಣೊಬ್ಬಳ ಮನಸ್ಥಿತಿಯ ಪ್ರತಿರೂಪ. ಸಮಾಜದ ಒತ್ತಾಯಕ್ಕೆ ಮಣಿದು ತನ್ನ ಯೌವ್ವನವನ್ನೇ ಸವೆಸುವ ಶಕುಂತಲೆ ಇಲ್ಲಿ ಭಿನ್ನವಾಗಿ ಕಾಣಸಿಗುತ್ತಾಳೆ. ಇಂತಹ ಜೀವಂತಿಕೆ ಹೆಚ್ಚು ಪ್ರಸ್ತುತ ಎಂಬ ಮಾತುಗಳು ಇದರಲ್ಲಡಗಿವೆ.

ಆಧುನಿಕ ಕನ್ನಡ ಮಹಿಳಾ ಕಾವ್ಯವನ್ನು ಕುರಿತು **ಸಬಿತಾ ಬನ್ನಾಡಿ** ಹೇಳುವಂತೆ

"ಕವಿತೆ, ಹೆಣ್ಣಿನ ಭಾಷೆ, ಒಡಲ ಹಾಡು ಮತ್ತು ಮಡಿಲ ಮಗ ಬೇರೆ ಬೇರೆಯೇನಲ್ಲ. ತನ್ನ ಬದುಕನ್ನು ತಾನೇ ಕಟ್ಟಿಕೊಳ್ಳಲು ಅವಕಾಶ ನಿರಾಕರಿಸಲಾದ ಕಾಲದಿಂದಲೂ ಹೆಣ್ಣು ತನ್ನ ಕನಸುಗಳನ್ನು ತನ್ನ ಹಾಡುಗಳ ಮರೆಯಲ್ಲಿ ಕಾಪಿಟ್ಟು ಕೊಂಡಿದ್ದಾಳೆ. ಅದು ಹೆಸರಿಲ್ಲದೆ 'ಅಜ್ಜಿ ಕೂದಲಿ'ನಂತೆ ಗಾಳಿಯಲ್ಲಿ ತೇಲಿಕೊಂಡು ಎಲ್ಲೆಲ್ಲೋ ತನ್ನ ಕುಡಿಯ ಬೀಜವನ್ನು ಪಸರಿಸಿದೆ. ಹಾಗೆ ಹೆಣ್ಣು ಲೋಕದ ಸಂಗಾತಿಯಾದ ಹಾಡು ಅಕ್ಷರ ಲೋಕದ ಕಾವ್ಯವಾಗಿ ಅರಳಲು ಎಲ್ಲಾ ಸಾಧ್ಯತೆಗಳಿದ್ದರೂ, ಅದು ಅವಳಿಗೆ ದಕ್ಕಲಾರದು ಎಂದು ಭಾವಿಸಿದ ಸಾರ್ವಜನಿಕ ಅಧಿಕಾರದ ಲೋಕವೊಂದು ಅದು ಅವಳ ಅವಶ್ಯಕತೆಯೂ ಅಲ್ಲ ಎಂದು ತೀರ್ಮಾನಿಸಿತ್ತು. ಹೀಗಾಗಿ ಪಂಡಿತರ ನಡುವಿನ ಸಭೆಯಲ್ಲಿ ಸಭಿಕಳಾಗಿಯೂ ಇರಲು ಅವಕಾಶ ಅವಳಿಗೆ ದಕ್ಕಲಿಲ್ಲ. ಹೀಗಿರುವಲ್ಲಿ 'ಅವಳ'ನ್ನು ವಿವರಿಸುವ ಕೆಲಸವನ್ನು 'ಅವನೇ' ಮಾಡಿದ. ಅವಳ ದೇಹಾಕಾರದಿಂದ ಹಿಡಿದು, ಅವಳ ಆಸೆ, ಆಕಾಂಕ್ಷೆಗಳ ತನಕ ಎಲ್ಲವನ್ನೂ ಅವನೇ ನಿಶ್ಚಯಿಸಿದ. ಹೆಣ್ಣು ಲೋಕವು ಈ ವಿವರಣೆಗಳನ್ನು ಒಪ್ಪಿಕೊಂಡಿತೋ ಬಿಟ್ಟಿತೋ ಎಂಬ ಕನಿಷ್ಠ ಕುತೂಹಲವೂ ಗಂಡು ಲೋಕಕ್ಕೆ ಇರಲಿಲ್ಲ.

ಇಷ್ಟಿದ್ದೂ ಹೆಂಗಸರು ಮಾತಾಡದೇ ಕೂರಲಿಲ್ಲ. ಎಲ್ಲೋ ಜಾನಪದದ ಗುನುಗುವಿಕೆಯಲ್ಲಾದರೂ ತನ್ನ ಸಂಕಟವನ್ನೋ, ನಿಲುವನ್ನೋ, ಸಂಭ್ರಮವನ್ನೋ ತನಗೆ ಕಂಡ ರೀತಿಯಲ್ಲಿ ಅಭಿವ್ಯಕ್ತಿ ಮಾಡುವುದನ್ನು ಅವಳು ನಡೆಸಿಕೊಂಡೇ ಬಂದಿದ್ದಾಳೆ. ಅಕ್ಷರ ಲೋಕಕ್ಕೆ ಬಂದ ಮೇಲು ಅವಳು ಇದನ್ನು ತನ್ನ ಕೈ ವಶವಾದಷ್ಟರ ಮಟ್ಟಿಗೆ ಮಾಡಿಕೊಂಡೇ ಬಂದಿದ್ದಾಳೆ"[೨೪] ಎನ್ನುತ್ತಾರೆ. ಮಹಿಳಾ ಕಾವ್ಯದ ವಿಶೇಷತೆ ಎಂದರೆ ಪಾತ್ರಗಳಲ್ಲೇ ತನ್ಮಯವಾಗುವುದಿಲ್ಲ. ಪಾರದರ್ಶಕ ಅಂಶಗಳನ್ನು ಗುರ್ತಿಸುವುದಾಗಿದೆ.ಈ ಮಾತುಗಳು ಹೆಣ್ಣಿನ ಕ್ರಿಯಾಶಕ್ತಿಯ ಮೆಟ್ಟಲುಗಳೆನ್ನಬಹುದು.

ಊರ್ಮಿಳೆಯ ಪಾತ್ರ ಮತ್ತೆ ಮತ್ತೆ ಕಾಡುತ್ತದೆ. ಅವಳು ಪ್ರಶ್ನಿಸದೇ ಹೋದರೂ ಪ್ರಶ್ನೆಯಾಗಿ ಪ್ರಸ್ತುತಳಾಗುತ್ತಲೇ ಇದ್ದಾಳೆ.

"ಯಾರೋ ಕೂಗಿ ಕರೆದಂತಾಗಿ
ಕಳವಳಿಸಿ ಧಿಗ್ಗನೆದ್ದರೆ
ನಾರಡೆಯುಟ್ಟು ನಿಸೂರಾಗಿ
ನಡೆದು ಬಿಟ್ಟವನ ನೆರಳು
ಕಿಟಕಿಯ ಸರಳುಗಳಿಗೆ
ಪೋಣಿಸದಿ ಕಂಬನಿಯಲ್ಲಿ
ಫಕ್ಕನೆ ಮಿಂಚಿದ್ದು
ಕೇದಗೆಯ ಹೊಡೆ ಬಿರಿದಂಥ
ಮಿಥಿಲೆಯ ಮಣ್ಣ ನೆನಪು" [೨೫]

ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ? ಎಂಬ ಜಿ.ಎಸ್.ಎಸ್ ರವರ ಮಾತಿನಂತೆ ಇಡೀ ರಾಮಾಯಾಣದಲ್ಲಿ ಊರ್ಮಿಳೆಯ ಪಾತ್ರ ಗೌಣದಂತಿದೆ. ಆದರೆ ಲಕ್ಷ್ಮಣನ ಜೊತೆ ಹದಿನಾಲ್ಕು ವರ್ಷಗಳಿಲ್ಲದೆಯೂ ತನ್ನ ಪತಿವ್ರತಾ ಧರ್ಮವನ್ನು ಪಾಲಿಸಿದ ಇವಳ ಮನೋ ನಿಗ್ರಹ ಶ್ಲಾಘನೀಯ. ಬದುಕಿನ ತೀವ್ರತರವಾದ ಹಂಬಲ ಹೊಂದಿದ ಛಲಗಾತಿಯಾದರೂ ಹೆಣ್ತನದ ಅಭೀಪ್ಸೆ ಅವಳಲ್ಲಿ ಸ್ಫುರಿಸಿದ ನೋವನ್ನು ಕವಿತೆ ಹಿಡಿದಿಟ್ಟಿದೆ. ನೇರವಾಗಿ ಲಕ್ಷ್ಮಣನನ್ನೇ ತರಾಟೆಗೆ ತೆಗೆದುಕೊಳ್ಳುವಂತಿವೆ ಮುಂದಿನ ಸಾಲುಗಳು

"ನೀ ನನ್ನ ಮನಕ್ಕೆ ಬೆನ್ನತಿರುಗಿಸಿ
ನಡೆವ ಮುಂಚೊಮ್ಮೆ
ನಿನ್ನ ಕಣ್ಣ ಕೊಳದಲ್ಲಿ
ಕಳವಳದ ಹನಿಯೊಂದು ಕಂಡಿದ್ದರೆ,

ಕಾಂತಾರದಲಿ ಕರೆವ ಕಾರ್ಗಪ್ಪಿನಲಿ
ನಡೆವ ನಿನ್ನಡಿಗೆ ನನ್ನ ಕಣ್ಣ ಕೊಡುತ್ತಿದ್ದೆ
ನನ್ನ ಮನಹಿಂಡಿ
ತಪ ತಪನೆ ಸುರಿವ ನೆತ್ತರಿನಲ್ಲಿ
ಭ್ರಾತೃ ಧರ್ಮದ ನಕ್ಷೆ ಕೊರೆದ ಆರ್ಯ
ಹೆಣ್ಣ ಮೂಗು ಮೊಲೆ ಕೊಯ್ದು ನೆತ್ತರಿನಲ್ಲಿ
ನನ್ನ ಕಣ್ಣೊಮ್ಮೆಯೂ ಕಾಣಲಿಲ್ಲವೆ ನಿನಗೆ?"[೩೩]

ಹೆಣ್ತನದ ನಿಜವಾದ ಸವಾಲೆನಿಸುವಂತಿವೆ ಈ ಸಾಲುಗಳು. ಸಹೋದರನ ಪ್ರೇಮದಲ್ಲೇ ಮುಳುಗಿದ ಗಂಡನಿಗೆ, ರಾಕ್ಷಸಿಯಾದರೂ ಹೆಣ್ಣಿನ ದೇಹಕ್ಕೆ ಕೈಹಾಕುವಾಗ ತನ್ನ ಹೆಂಡತಿ ನೆನಪಿಗೆ ಬಾರದ ಲಕ್ಷ್ಮಣನಲ್ಲಿ ಹೆಂಗರುಳೇ ಮಾಯವಾದದ್ದು ವಿಪರ್ಯಾಸ. ಇದನ್ನೇ ಊರ್ಮಿಳೆಯ ಪ್ರತಿಮೆ ಸವಾಲಿನಂತೆ ಕೆಣಕುತ್ತಾ ಪುರಾಣಗಳು ಸಹ ಕ್ರೌರ್ಯದ ಮಹಾನಿಧಿಗಳೇ ಎಂಬ ಮಾತನ್ನು ಉರ್ಮಿಳೆಯೇ ಒತ್ತಿ ಹೇಳಿದಂತಿದೆ. ಹೆಂಡತಿಗೆ ಗಂಡನಾಗದವನು, ದಂಡಿಗೆ ಹೋಗುವ ಗಂಡಾದರೇನು ಪ್ರಯೋಜನ? ಎಂಬ ಗಾದೆ ಮಾತನ್ನು ಈ ಸಾಲುಗಳು ನೆನಪಿಗೆ ತರುತ್ತವೆ.

ವಯಕ್ತಿಕ ನಡೆಯನ್ನು ಗಂಡು ಹೆಣ್ಣಿನ ಲೈಂಗಿಕ ವಿಚಾರಗಳನ್ನು ಯಾವುದೇ ಮುಚ್ಚು ಮರೆ ಇಲ್ಲದೆ ಬರಹಗಳಲ್ಲಿ ನೇರವಾಗಿ ಹೇಳಿದವರು ಸುಕನ್ಯಾ ಮಾರುತಿರವರು. ಲೈಂಗಿಕ ವಿಚಾರಗಳನ್ನು ಹೇಳುವಾಗ ಅವುಗಳ ವೈಭವೀಕರಣವಿಲ್ಲದೆ ಸಹಜ ತೃಪ್ತಿಯ ಉತ್ಕಟ ಭಾವಗಳ ಒಳ ಮಿಡಿತಗಳನ್ನು ಯಾವುದೇ ಅತಿರೇಖವಿಲ್ಲದೆ ಕಾವ್ಯದ ಮುಖಾಂತರ ತಂದರು. ಇವರ ಕಾವ್ಯ ಜಗತ್ತಿನ ಉತ್ಸುಕತೆಯನ್ನು ಕುರಿತಂತೆ **ಬರಗೂರು ರಾಮಚಂದ್ರಪ್ಪ** ಈ ರೀತಿ ಹೇಳುತ್ತಾರೆ.

"ಸುಕನ್ಯಾ ಮಾರುತಿಯವರ ಕಾವ್ಯದುದ್ದಕ್ಕೂ ಕಾಣುವುದು ವಯಕ್ತಿಕ ಒಳತೋಟಿ, ವಿರುದ್ಧ ಭಾವಗಳ ಪೈಪೋಟಿ ಆತ್ಮ ನಿವೇದನೆ, ಆತ್ಮವಿಶ್ವಾಸಗಳನ್ನು ಒಗ್ಗೂಡಿಸಿಕೊಂಡು ಹುಟ್ಟುವ ಇವರ ಕಾವ್ಯದಲ್ಲಿ ವಿಷಾದದ ಛಾಯೆ ಮತ್ತು ವೈಚಿತ್ರ್ಯಗಳ ಮಾಯೆ ಆವರಿಸಿಕೊಂಡಿದೆ. ಯಾವುದೇ ವಿಷಯವಾಗಲಿ, ಗೊಂದಲಕ್ಕೆ ಅವಕಾಶವಾಗದ ದಿಟ್ಟದನಿಯಾಗಿ ಕೇಳಿಸುತ್ತದೆ. ಸಂವಹನೆಯನ್ನು ಸುಲಭ ಸಾಧ್ಯವಾಗಿಸುವ ಸ್ವಾಭಾವೋಕ್ತ ವಿಧಾನದ ಜೊತೆಗೆ ಸಂಕೇತ ಮತ್ತು ಪ್ರತಿಮಾ ವಿಧಾನವನ್ನೂ ಬಳಸಿಕೊಳ್ಳುತ್ತದೆ. ಸುಕನ್ಯಾ ಅವರದು ಕಟ್ಟುಬೀಳದ ಕಾವ್ಯ, ಕದ್ದೊಡೆಯುವ ಕಾವ್ಯ. ಜೊತೆಗೆ 'ಕಟ್ಟುವ ಕಾವ್ಯ' ಕೊಡುವತ್ತ ಅವರು ಗಮನಹರಿಸಬೇಕು. ಕಾವ್ಯವನ್ನು ಕಟ್ಟುತ್ತಲೇ ಸಾಮಾಜಿಕ ಬದುಕನ್ನು ಕಟ್ಟುವ ವಿನಮ್ರ ಹೊಣೆಗಾರಿಕೆ ಮತ್ತಷ್ಟು ಹೆಚ್ಚಾದಂತೆ, ಮತ್ತಷ್ಟು ಮಹತ್ವದ ಕಾವ್ಯ ಹುಟ್ಟುತ್ತದೆ. ಸುಕನ್ಯಾ ಅವರಿಂದ ಅದು ಸಾಧ್ಯವಾಗಲಿ ಎಂದು ಹಾರೈಸುತ್ತೇನೆ"[೩೭]. ಈ ಮಾತು ಸಾಮಾಜಿಕ

ಬದಲಾವಣೆಗೆ ಮಹಿಳಾ ಕಾವ್ಯದ ಪ್ರಸ್ತುತತೆಯನ್ನು ಎತ್ತಿ ಹಿಡಿಯುವಂತಿದೆ. ಸುಕನ್ಯಾರವರ ಕವಿತೆಗಳಲ್ಲಿ, ಪುರಾಣದ ಪಾತ್ರಗಳು ಯಾವುದೇ ಎಗ್ಗಿಲ್ಲದೆ ಹೆಣ್ಣಿನ ಮನಸ್ಥಿತಿಯ ಅರಿವನ್ನು ನೇರವಾಗಿ ಮುಟ್ಟುವಂತೆ ಚಿತ್ರಿಸಿದ್ದಾರೆ.

"ಐವರು ನಾಥರಿದ್ದೂ ಅನಾಥೆ!
ಎಲ್ಲರ ಕಣ್ಣಿಗೆ ನಾನೇ
ಐವರ ನಾಥೆ" [೩೮]

ಮನಸ್ಸಿಗೆ ಹತ್ತಿರವಾಗದವರಿದ್ದಾಗ ಯಾರಿದ್ದರೂ ಒಂಟಿತನ, ಅನಾಥ ಭಾವನೆ ಮೂಡುವುದು ಸಹಜ. ಮಹಾಭಾರತದ ದ್ರೌಪದಿ ದಿಟ್ಟತನಕ್ಕೆ ಉತ್ತಮ ಉದಾಹರಣೆ. ಸಮಯದ ಸಂಚಿಗೆ ಬಲಿಯಾದ ಪಂಚ ಪಾಂಡವರು ದ್ರೌಪದಿಯ ಮನವನ್ನು ಅರಿಯುವಲ್ಲಿ ಎಲ್ಲರೂ ಎಡವಿದವರೆ? ಯಾರಿಲ್ಲದೆಯು ನನ್ನನ್ನು ನಾನು ರಕ್ಷಿಸಿಕೊಳ್ಳಬಲ್ಲೆ ಎಂಬ ದಿಟ್ಟತನ ಅವಳಲ್ಲಡಗಿದೆ. ಕರ್ಣನ ಬಗ್ಗೆ ಅಪಾರ ಮೆಚ್ಚುಗೆ ಇದ್ದ ದ್ರೌಪದಿ ಎಲ್ಲೋ ಒಂದು ಕಡೆ ಕರ್ಣನ ಸೆಳೆತಕ್ಕೆ ಒಳಗಾಗಿದ್ದಳು. ಕವಿತೆ ಮುಂದುವರೆದು

"ಈ ಐವರು 'ಅಪೂರ್ಣರ' ಮಧ್ಯೆ
ಕರ್ಣನೊಬ್ಬನೇ 'ಪೂರ್ಣ'
ಅಂದರೇನು?
ತುಡಿವ ಎದೆಮಿಡಿವ ಮನಗಳ
ಕಾಲಡಿಗೆ ಹಾಕಿ ತುಳಿದು
'ಪ್ರಮಾಣಿಕ ಪಟ್ಟದರಸಿ'ಯಾಗಿ
ಮೆರೆವವಳು,
ಒಳಗೊಳಗೇ ನರಳಿಸುತ್ತವಳು ನಾನು,
ಐವರು ನಾಥರಿದ್ದೂ ಅನಾಥೆ" [೩೯]

ದ್ರೌಪದಿ ಪರ ಪುರುಷನನ್ನು ಮೋಹಿಸಿದ್ದಳೆಂಬ ಅರ್ಥ ಇಲ್ಲಿಲ್ಲ. ತನ್ನಂತೆ ಛಲದಿಂದಿರುವ ವ್ಯಕ್ತಿ, ಉದಾತ್ತ, ಧೀರೋದ್ದಾತ, ಸ್ವಾಮಿ ನಿಷ್ಟೆಯ ವ್ಯಕ್ತಿತ್ವದ ಕರ್ಣನಿಗೆ ಮಾರು ಹೋದವಳು ದ್ರೌಪದಿ. ಆದರೆ ಐವರು ಗಂಡಂದಿರಿದ್ದೂ ತನ್ನ ಮನದ ಕಾಮನೆಗಳನ್ನು ಪ್ರಾಮಾಣಿಕವಾಗಿ ವ್ಯಕ್ತಪಡಿಸಲಾಗಲಿಲ್ಲವೆಂಬ ನೋವು ಅವಳಿಗೆ ಅತಿಯಾಗಿ ಕಾಡಿತ್ತು. ಸೇಡು, ಹತಾಷೆಗಳಲ್ಲೇ ಬದುಕನ್ನು ಸವೆಸುವ ಹೆಣ್ಣಿಗೆ ಅಗತ್ಯವಾಗಿ ಏನು ಬೇಕೆಂಬುದನ್ನು ಅರಿಯದ ಐವರು ಗಂಡಂದಿರಿದ್ದು ಅವಳು ಅನಾಥೆಯಂತೆಯೇ ಜೀವಿಸಿದವಳು. ಬಯಕೆಗಳು ಈಡೇರದ ಹೆಣ್ಣಿನ ಪ್ರತಿನಿಧಿಯ ಪಾತ್ರವಾಗಿ ದ್ರೌಪದಿ ಚಿತ್ರಿತಗೊಂಡಿದ್ದಾಳೆ. ಬದುಕಿನ ಅಧೀರತೆ ಹೆಣ್ಣಿಗಾದಾಗ ಅವಳ ಮಾನಸಿಕ ತಲ್ಲಣಗಳ ಒಳನೋಟಗಳನ್ನು ದ್ರೌಪದಿಯ ಪಾತ್ರ ಬಿಚ್ಚಿಡುತ್ತದೆ.

ಮನಸ್ಥಿತಿಯ ಅರಿವು ಮನುಷ್ಯ ಸಹಜವಾದುದು. ಆದರೆ ಗಂಡು ಮನಸ್ಥಿತಿ ಸಮಾಜಮುಖಿಯಾದರೆ ಹೆಣ್ಣು ಮನಸ್ಥಿತಿ ಸಂವೇದನಾ ಮುಖಿ. ಅಂದರೆ ಸೂಕ್ಷ್ಮತೆಯಿಂದ ಕೂಡಿರುವಂತದ್ದು ಎಂಬುದನ್ನು ಪುರಾಣಗಳಲ್ಲಿ ಚಿತ್ರಿತಗೊಂಡ ಅಹಲ್ಯೆಯೊಂದಿಗೆ ಈ ಮಾತನ್ನು ಸಮೀಕರಿಸಿ ಹೇಳಬಹುದು. ಅಹಲ್ಯೆಯ ಪಾತ್ರ ಹೆಣ್ಣಿನ ಮನಸ್ಥಿತಿಯ ಕನ್ನಡಿ ಇದ್ದಂತೆ. ಮೂಕ ವೇದನೆಗೆ ಸಂವೇದನೆಯ ಮನಸ್ಸು ತೆರೆಯುವಂತೆ ಮಾಡಿದ್ದು ಆಧುನಿಕ ಮಹಿಳಾ ಕಾವ್ಯ.

"ನನ್ನ ಕೊಲೆಯಾಗುವ ಮುನ್ನ
ನಾನೇ ಶಿಲೆಯಾಗಿ ಬಿಡಬೇಕು
ಗೌತಮನ ಶಾಪದಿಂದ ಅಲ್ಲ" [೪೦]

ಹೆಣ್ಣಿನ ಸೂಕ್ಷ್ಮ ಮನಸ್ಥಿತಿಯು ಘಾಸಿಗೊಂಡಾಗ ಅವಳಲ್ಲಾಗುವ ಮನಸ್ಥಿತಿಯ ಜಡತ್ವದ ಪ್ರತೀಕ ಕವಿತೆ. ಮಾಡದ ತಪ್ಪಿಗೆ ಆಡುವ ಕೈಗೊಂಬೆಯಾದವಳು ಅಹಲ್ಯೆ. ಪರಿಸ್ಥಿತಿಗೆ ಸಿಲುಕಿದಾಗ ಉಂಟಾಗುವ ತಲ್ಲಣಗಳು ನೇರವಾಗಿ ಹೆಣ್ಣಿನ ಮನಸ್ಥಿತಿಯನ್ನೇ ಆಹುತಿ ತೆಗೆದುಕೊಂಡಾಗ ಅವಳಲ್ಲಾಗುವ ಬದಲಾವಣೆಯ ಪ್ರತೀಕವೇ ಅಹಲ್ಯೆ. ಇಂದಿಗೂ ಇಂತಹ ಅಹಲ್ಯೆಯರು ಎಷ್ಟೋ ಜನ ನಮ್ಮ ಕಣ್ಮುಂದಿದ್ದಾರೆ. ಅವರ ಹಿಂಬಾಲಕರಾದ ಗೌತಮರಿಗೇನು ಕಡಿಮೆ ಇಲ್ಲದಂತಿದೆ. ಕವಿತೆ ಮುಂದುವರೆದು,

"ಕಣ್ಣಿಗೆ ಕಣ್ಣಾದ ನಾನು ಕ್ಷಣಮಾತ್ರ ಸುಖಿಸಿದ್ದೆ ಅಷ್ಟೆ,
ಗೌತಮನ ಶೀತಲಗಾಳಿಗೆ
ಇಬ್ಬರು ತತ್ತರಿಸಿ,
ನಾನು ಮಂಜುಗಡ್ಡೆಯಾದೆ
ಇಂದ್ರ ಮೈತುಂಬ ಕಣ್ಣಾದ
ನಾನು ಕರಗಲಿಕ್ಕೆ, ಪಾಪ ಹುಡುಗ
ರಾಮನ ಕಾವೇ ಸಿಗಲಿ ಎಂಬುದು
ಗೌತಮನ ಇಚ್ಛೆ,
ನನಗೋ ಬರೀ ಮಾನವಳಾಗುವ ಬಯಕೆ" [೪೧]

ಹೆಣ್ಣಿನ ಹೆಣ್ತನದ ನಿಜವಾದ ಬಯಕೆ ಕವಿತೆಯ ಮೂಲಕ ವ್ಯಕ್ತಗೊಂಡಿದೆ. ಅಹಲ್ಯೆ ಪುರಾಣ ಪ್ರತೀಕ ಸ್ತ್ರೀಯಾಗಿ ಮಾತ್ರ ನಿಲ್ಲುವುದಿಲ್ಲ. ಹೆಣ್ಣಿನ ಪ್ರಾತಿನಿಧಿಕ ಬಯಕೆಯ ಪ್ರತಿಮೆಯಾಗಿಯೂ ಕಂಡುಬರುತ್ತಾಳೆ. ಮರ್ಯಾದಾರಾಮನ ಕಾವು ಅಥವಾ ಪಾದ ಸ್ಪರ್ಶದಿಂದಲೇ ಪುನೀತಳಾಗಬೇಕೆಂಬ ಬಯಕೆ ಗೌತಮನಿಗೆ. ಏಕೆಂದರೆ ಜನರ ಬಾಯಿ ಮಾತಿನ ಭಯ. ಇಂತಹ ಪರಿಸ್ಥಿತಿ ಇಂದೂ ಸಹ ಜಾರಿಯಲ್ಲಿರುವುದು ನಮಗೆ ತಿಳಿದ ಸತ್ಯವೇ. ದಾಂಪತ್ಯದ ನಡುವಿನ ಒಮ್ಮತ ಪ್ರೀತಿಗಿಂತ ಸಮಾಜವನ್ನು ಮೆಚ್ಚಿಸಲು ಹೆಣಗುವ

ಗೌತಮನ ಪರಿಪಾಟಲನ್ನು ಅಹಲ್ಯೆ ಒಮ್ಮೆಗೇ ತಿರಸ್ಕರಿಸುವ ರೀತಿ ಅವಳ ದಿಟ್ಟತನ ಮೆಚ್ಚುವಂತದ್ದಾಗಿದೆ.

ಮನುಷ್ಯನ ಮಾನಸಿಕ ತುಮುಲಗಳನ್ನು ಬಯಕೆಗಳಾಚೆ ತಂದು ನಿಲ್ಲಿಸುವಂತಹ ಬರವಣಿಗೆ ರೂಢಿಸಿಕೊಂಡವರು ಚೇತನಾ ತೀರ್ಥಹಳ್ಳಿ. ಹೊಸ ತಲೆಮಾರಿನವರಿಗೆ ಹೊಸ ಹೊಸ ಆಲೋಚನೆಗೆ ಒಳಗು ಮಾಡುತ್ತಾ ಬರವಣಿಗೆಯನ್ನು ಹೊಸತನದೊಂದಿಗೆ ಕಟ್ಟುತ್ತಾ ಓದುಗ ಸಮೂಹವನ್ನು ಭಿನ್ನ ದೃಷ್ಟಿಕೋನದೆಡೆಗೆ ಸೆಳೆದವರು. ಮಹಿಳೆಯ ಆಲೋಚನೆ ಸೀಮಿತವಲ್ಲ. ಗುಪ್ತ ಸನ್ನಿವೇಶಗಳ ಸುಪ್ತ ಮನಸ್ಥಿತಿಯನ್ನು ಸಾರ್ವತ್ರಿಕಗೊಳಿಸುವಂತೆ ಇವರ ಬರಹಗಳಿವೆ. ಪುರಾಣಗಳನ್ನು ಜೊತೆ ಜೊತೆಯೇ ಸಾಗಿಸಿಕೊಂಡು ಆ ಪಾತ್ರಗಳಿಗೆ ಒಂದು ಹೊಸ ಮುಖವನ್ನು ಕೊಡುವ ಹಂತದಲ್ಲಿವೆ ಇವರ ಕವಿತೆಗಳು.

"ಕೊಡ ತುಂಬಿರಲಿಲ್ಲ,
ನೀನು ಬರಿದಾಗಿದ್ದೆ.......
ಅಂವ ಕಳ್ಳಬಾವಿಗಿಳಿದಿದ್ದು
ಯಾರತಪ್ಪು!?
ಪತಿವ್ರತೆಯರ ಗಂಡಂದಿರು
ಹೀಗಿರುವುದು ಲೋಕರೂಢಿ;
ಅಕ್ಕರೆದೋರುವ ಸಕ್ಕರೆ ಗೊಂಬೆ
ಯಾವತ್ತೂ ಮಹಾಬೋರು!" [೪೨]

ಪುರಾಣದ ಚೌಕಟ್ಟಿಗೆ ಹೊಸದೊಂದು ಮಾರ್ಗವನ್ನು ಕವಿತೆ ಕಟ್ಟಿಕೊಡುತ್ತದೆ. ಗಂಡಿಗಿರುವ ಹೊಂಚು ಹಾಕುವ ಗುಣ ಗತಕಾಲದಿಂದ ಜಾರಿಯಲ್ಲಿದ್ದದ್ದು ಎಂಬುದನ್ನು ಪುರಾಣಗಳ ಅಧ್ಯಯನ ತಿಳಿಸುತ್ತದೆ. ಅಂತೆಯೇ ಪತಿವ್ರತೆ ಎಂದಾಗ ಬೇಕಾದರೆ ಅವಳಲ್ಲಿ ಇಂತಿಷ್ಟು ಗುಣಗಳಿರಲೇಬೇಕೆಂಬ ಒತ್ತಡವಿದೆ. ಪತಿವ್ರತೆಯ ಗಂಡಂದಿರಿಗೆ? ಎಂಬ ಪ್ರಶ್ನೆ ಬಂದಾಗ ನಮ್ಮ ಆಲೋಚನಾ ಪರಿಧಿ ಬೇರೊಂದು ಮಗ್ಗುಲನ್ನೇ ಪಡೆಯುತ್ತದೆ. ಪುರಾಣಗಳ ಉದಾಹರಣೆ ಹೇಳಿ ಭಕ್ತಿಯ ಪಾರಾಯಣ ಮಾಡುತ್ತ ನಮ್ಮ ತಾಯಂದಿರನ್ನು ನಂಬಿಸಿದ ಸಿದ್ಧಾಂತಗಳನ್ನು ಮಹಿಳಾ ಕಾವ್ಯ ಪ್ರಶ್ನಿಸುವಷ್ಟರ ಮಟ್ಟಿಗೆ ಗಟ್ಟಿಗೊಂಡಿದೆ ಎಂದರೆ ಮಹಿಳಾ ಸಬಲೀಕರಣದ ಮಹತ್ವತೆ ತಿಳಿಯುತ್ತದೆ. ಇಡೀ ಮಹಾಕಾವ್ಯ ಅಥವಾ ಪುರಾಣಗಳ ಪೊಳ್ಳು ನಂಬಿಕೆಯನ್ನು ಕೆಲವೇ ಸಾಲುಗಳಲ್ಲಿ ವಿಡಂಬಿಸುವ ಗುಣ ಮಹಿಳಾ ಕಾವ್ಯಕ್ಕಿದೆ. ಆದರ್ಶ ನೆಲೆಯಲ್ಲಿ ಹೆಣ್ಣನ್ನು ಸಿಲುಕಿಸಿದ ಗಂಡನ್ನೂ ಪ್ರಶ್ನಿಸುವ ಹಂತದಂತಿದೆ.

ಕಾಳಿದಾಸ ಪ್ರೇಮಕವಿ, ಕಟ್ಟುಕತೆಯನ್ನು ವರ್ಣರಂಜಿತವಾಗಿ ವಿವರಿಸುವ ಕಲೆ ಅವನಲ್ಲಿತ್ತು. ಸಂದರ್ಭಕ್ಕೆ ತಕ್ಕಂತೆ ಹೆಣ್ಣನ್ನು ಕೈಗೊಂಬೆಯನ್ನಾಗಿಸುವ ಕಲೆ ಗಂಡಿಗಿದೆ ಎಂಬುದನ್ನು ಮಹಿಳಾ ಕಾವ್ಯ ಭಿನ್ನ ನೆಲೆಯಲ್ಲಿ ರಚಿಸಿದೆ.

"ಶಾಪದ ಭಯ / ಕಾಳಿದಾಸನ ಮೀನೂ
ಉಪ್ಪುಖಾರದಲಿ ಬೆಂದು / ರುಚಿಯಾಗಿದೆ.
ನನ್ನದೇ ಎದೆಬಗೆದು / ಪ್ರೇಮದುಂಗುರ ತೋರಲೇ
ವಿಮೋಚನೆಗೆ?" [೪೩]

ಇಡೀ ಕವಿತೆ ಕಾಳಿದಾಸನ ಶಾಕುಂತಲಾ ನಾಟಕದ ಮೋಸವನ್ನು, ಹೆಣ್ಣಿಗಾದ ಅನ್ಯಾಯವನ್ನು ನೆನಪಿಗೆ ತರುತ್ತದೆ. ಮಹಿಳಾ ಸಾಹಿತ್ಯ ಕಾಳಿದಾಸನ ಶಕುಂತಲಾ ನಾಟಕವನ್ನು ಮಹಿಳಾ ವಿರೋಧಿಯ ನೆಲೆಯಲ್ಲಿ ನೋಡುತ್ತದೆ. ಏಕೆಂದರೆ ವಾಸ್ತವವಾಗಿ ಮರೆವೆಂಬುದು ಕಾಯಿಲೆಯೇ ಹೊರೆತು, ಮಂತ್ರದಿಂದ ಮರೆ ಮಾಚುವಂತದ್ದಲ್ಲ. ದುಶ್ಯಂತ ಮತ್ತು ಶಕುಂತಲೆ ಕಲ್ಪಿತ ಪಾತ್ರಗಳೇ ಹೊರೆತು ನಿಜವಲ್ಲ ಎಂಬ ವಾದವಿದೆ. ಕಲ್ಪನೆಯ ಮಾತುಗಳಿಗೆ ಮಹಿಳಾ ಕಾವ್ಯ ಹೊಸ ರೂಪಕೊಡುತ್ತಾ ಬೇರೊಂದು ಮಗ್ಗುಲಿನ ಭಿನ್ನ ನೋಟದಲ್ಲಿ ನೋಡುವತ್ತ ಯಶಸ್ಸು ಗಳಿಸಿದೆ. ಉಂಗುರ, ಮೀನು ಪ್ರತಿಮಾ ರೂಪದಲ್ಲಿ ಬಳಕೆಯಾದರೂ ನೋವಿನ ಸನ್ನಿವೇಶಕ್ಕೆ ಒಳಗಾದವಳು ಹೆಣ್ಣೇ. ಆದ್ದರಿಂದ ನನ್ನ ವಿಮೋಚನೆ ಪ್ರೀತಿಯಲ್ಲಿ ಎಂಬ ಸಂದೇಶವನ್ನು ಕವಿತೆ ಸಾರುತ್ತದೆ. ಪುರಾಣವಾದರೂ ಪ್ರೀತಿಗೆ ಕರಗುವುದು ಹೆಣ್ಣಿನ ಅಂತಃಕರಣವೇ ಎಂಬ ಮಾತನ್ನು ಕವಿತೆ ಪ್ರತಿಧ್ವನಿಸುತ್ತದೆ.

ಪುರಾಣವಿಲ್ಲದೆ, ಇತಿಹಾಸವಿಲ್ಲ; ಇತಿಹಾಸವಿಲ್ಲದೆ ಸನ್ನಿವೇಶಗಳಿಲ್ಲ ಎಂಬ ಮಾತು ಸರ್ವ ವಿಧಿತ. ಜನಪದದಿಂದ ಹಿಡಿದು ಜಾಣರವರೆಗೆ ಪುರಾಣದ ರಾಮ, ಸೀತೆ ಪಾತ್ರಗಳು ಒಂದಲ್ಲ ಒಂದು ರೀತಿ ಪುನರ್ ವ್ಯಾಖ್ಯಾನಕ್ಕೆ ಒಳಪಡುತ್ತಲೇ ಇದ್ದಾರೆ. ಇದು ಮಹಿಳಾ ಕಾವ್ಯದಿಂದಲೂ ಹೊರತಲ್ಲ. ಒಬ್ಬೊಬ್ಬರ ಆಲೋಚನೆಯಲ್ಲಿ ಒಂದೊಂದು ರೀತಿಯಾಗಿವೆ.

"ಕಾಲಕಾಲಕ್ಕೂ ಹುಟ್ಟುವ ರಾಮಂದಿರು ಮತ್ತು
ಸೀತೆಯರು ನಮ್ಮ ಸಂಸ್ಕೃತಿಯ ಒಂದು
ರೂಪಕವಾಗಿ ಉಳಿದಿದ್ದಾರೆ ಎಲ್ಲಿಯವರೆಗೆ
ಹೆಣ್ಣು ಮತ್ತು ಹಿಂದುಳಿಸಲ್ಪಟ್ಟವರ ಕಣ್ಣೀರಿಗೆ
ರಕ್ತಕ್ಕೆ ನನ್ನ ನೆಲೆ ಬಾಯಾರಿರುತ್ತದೆಯೋ
ಅಲ್ಲಿಯವರೆಗೆ ನನ್ನ ನೆಲದಲ್ಲಿ ಶಾಂತಿ
ನೆಮ್ಮದಿಯ ಬೆಳೆ ಬೆಳೆಯುವುದಿಲ್ಲ ಅನ್ನಿಸುತ್ತೆ / ನನಗೆ" [೪೪]

ವಾಸ್ತವ ಬದುಕಿನ ಸಮೀಕರಣ ಕವಿತೆಯೊಂದಿಗಿದೆ. ಆದರ್ಶದ ನೆಪದಲ್ಲಿ ಸಮಾಜದಲ್ಲಿ ಹೆಣ್ಣಿಗೆ ಶಾಂತಿ ಇಲ್ಲದಾದಾಗ ಅವಳಲ್ಲಾಗುವ ಪರಿವರ್ತನೆಯ ಅಂಶ ಇಲ್ಲಡಗಿದೆ. ಇಂದಿಗೂ ಶಾಂತಿ, ಸಮಾಧಾನದ ಪ್ರತಿರೂಪ ಹೆಣ್ಣು ಎಂಬ ಮಾತನ್ನು ಹೇಳುತ್ತಲೇ ಹೆಣ್ಣಿನ ಧ್ವನಿಯನ್ನು ಕಟ್ಟಿಹಾಕುತ್ತಲೇ ಇದ್ದಾರೆ. ಅವಳ ಸ್ವಂತಿಕೆಯ ಅರಿವು, ಜೀವಂತಿಕೆಯ

ಸೆಲೆಯನ್ನು ಅಡಗಿಸುತ್ತಲೇ ಬಂದಿದೆ ಈ ಸಮಾಜ. ಆದ್ದರಿಂದ ಎಲ್ಲಿಯವರೆಗೆ ರಾಮ ನಾಮ ಪಾಲನೆ ಜಾರಿಯಲ್ಲಿರುತ್ತದೋ ಅಲ್ಲಿಯವರೆಗೆ ಸೀತೆಯರೂ ಸೃಷ್ಟಿಯಾಗುತ್ತಾರೆ. ನೋವಿಗೆ ಬಲಿಯಾಗುತ್ತಾರೆ. ಆದರೆ ವಿಧಾನ ಮಾತ್ರ ಬೇರೆ. ಇಲ್ಲಿ ಕವಿ ಹೇಳುವಂತೆ ಅವರ ಅನಿಸಿಕೆ ಸ್ವಗತವಾದರೂ ವಾಸ್ತವದಲ್ಲಿ ಅದು ನಿಜ.

ಸಂಶಯ ಪಿಶಾಚಿ ಹುಟ್ಟಿರುವುದು ಪುರಾಣಗಳಿಂದಲೇ ಇರಬಹುದು. ಎಲ್ಲರನ್ನೂ ಕಾಪಾಡುವ ರಾಮ ತನ್ನ ಜೊತೆಯಲ್ಲಿದ್ದ ಸೀತೆಯನ್ನೇ ಜನರ ಭಯಕ್ಕೆದರಿ ಆದರ್ಶಪಾಲನೆಗೆ ಕಾಡಿಗಟ್ಟಿದ. ಇಲ್ಲಿ ಅವನಿಗೆ ಮಾನಸಿಕವಾಗಿ ನೋವಿರಬಹುದು ಆದರೆ ಅದು ವ್ಯಕ್ತಿಗತವಾದುದೇ ಹೊರತು, ಪ್ರೀತಿಯಲ್ಲಿ ಅವನು ಗೆಲ್ಲಲಾಗಲಿಲ್ಲ. ಮರ್ಯಾದಾ ಪುರುಷನನ್ನೂ ಸಂಶಯ ಪಿಶಾಚಿ ಬಿಡಲಿಲ್ಲ. ಏಕೆಂದರೆ ಅವನಲ್ಲೂ ಮಾನವ ಸಹಜ ಗುಣಗಳು ಜಾಗೃತವಾಗಿದ್ದವು ಎಂದು ಪುರಾಣಗಳ ಪಾತ್ರಗಳ ಮೂಲಕ ಕೆಣಕುತ್ತದೆ ಮಹಿಳಾ ಕಾವ್ಯ.

"ನಕ್ಕರೆ, ನೋಡಿದರೆ, ಬೆವರಿದರು,
ಸೀನಿದರೂ ಮಕ್ಕಳಾಗ್ತವೆ ಪುರಾಣಗಳಲ್ಲಿ.
ರಾಮ ನಡೆದಲ್ಲೆಲ್ಲ ರೋಮ ಉದುರಿಸಿದ್ದನೇನೋ!
ನಮ್ಮ ಬಹಳಷ್ಟು ಗಂಡಸರಿಗೆ ಸಂಶಯವಂಶವಾಹಿನಿ!!
ಬೆಂಕಿಗೆ ಸೀತೆಯನ್ನು ಸುಡಲಾಗಲಿಲ್ಲ
ರಾಮನ ಸಂಶಯವನ್ನೂ ...." ೪೫

ಇದೇ ರಾಮಾಯಣ ಮತ್ತು ಮಹಾಭಾರತಗಳನ್ನು ಕಾವ್ಯದಲ್ಲಿಯೇ ಕಟ್ಟಿಡುವ ಪ್ರಯತ್ನವಿದೆ. ಪುರಾಣಗಳೆಂದರೆ ಕಟ್ಟು ಪಾಡುಗಳಿಂದ ಕೂಡಿದ ಕಟ್ಟುಕತೆಗಳು. ಸಂಶಯ ಬಂದರೆ ಸಂಬಂಧ ಸಂಸಾರಗಳಲ್ಲಾಗುವ ದುರಂತಗಳು ಹಲವು ಆದರ್ಶ ಪಾಲನೆಯಲ್ಲಿ ಹೆಣಗಾಟ ನಡೆಸಿದ ರಾಮನಿಗೂ ಸಂಶಯ ಪಿಶಾಚಿ ಅಂಟಿಕೊಂಡು ಸೀತೆಯನ್ನು ದೂರವಿರಿಸಿದ, ಪವಿತ್ರಗೊಳಿಸಲು ಚಿತೆಯೇರಿಸಿದ. ಆದರೆ ಬೆಂಕಿಗೂ ಭಯ ಹೆಣ್ಣಿನ ದೇಹ ಮಾತ್ರವಲ್ಲ, ಹೆಣ್ತನವನ್ನೂ ಸುಡಲು. ರಾಮ ಎಲ್ಲಿಯವರೆಗೆ ಆರಾಧನೆಗೊಳ ಪಡುತ್ತಾನೊ ಸಂಶಯ ಪೂರಿತ ಗಂಡಸರೂ ಇದ್ದೇ ಇರುತ್ತಾರೆ. ಕವಿತೆ ಮುಂದುವರೆದು

"ಹಳಬನಾಗೋದಿಲ್ಲ ರಾಮ, ಅವನ ಕಥೆಯೂ.....
ಇಲ್ಲಿ ಹೆಣ್ಣುಗಳು ಇನ್ನೂ ತಿರಸ್ಕರಿಸಲ್ಪಡುತ್ತಲೇ ಇದ್ದಾರೆ
ಅನುಮಾನದಲ್ಲಿ" ೪೬

ರಾಮ ಓಡಾಡಿದ ಜಾಗವಲ್ಲವೇ? ರಾಮನ ನಡೆ ಅನುಸರಿಸುವ ರಾಮ ಪಾಲಕರಿರುವವರೆಗೂ, ರಾಮನವಮಿಗಳು, ಶ್ರೀರಾಮರ ಜನನ ಇದ್ದದ್ದೇ. ಅನುಮಾನದ ಬೆಂಕಿಯಲ್ಲಿ ನಿತ್ಯವೂ ಬೇಯುವವರು ಆಧುನಿಕ ಸ್ತ್ರೀಯರು. ದಿನನಿತ್ಯದ ಬದುಕಿನಲ್ಲಿ

ಇಂತಹ ಸೀತೆಯರು ರಾಮಾಯಣದ ಸೃಷ್ಟಿಗೆ ಕಾರಣರಾಗುತ್ತಾರೆ. ಆದರೆ ಬರೆಯುವ ಅಧಿಕಾರ ಪಡೆದಿರುವುದು ಮಾತ್ರ ಗಂಡು. ಅನುಮಾನ ಎಂಬ ಪಿಶಾಚಿ ಮೆಟ್ಟಿದ ಗಂಡು ಅಮಾಯಕ ಹೆಣ್ಣನ್ನು ಹೇಗೆ ಬಲಿಯಾಗಿಸುತ್ತಾನೆ ಎಂಬುದೇ ವಾಸ್ತವದ ದುರಂತ ಸಂಗತಿಗೆ ಹಿಡಿದ ಕನ್ನಡಿ.

ರಾಮ ರಾವಣರ ಕಾಳಗದಲ್ಲಿ ಬಲಿಯಾದದ್ದು ಮಾತ್ರ ಸೀತೆ, ಮಂಡೋದರಿ. ಇಬ್ಬರೂ ಗಂಡನ ಜೊತೆಯಲ್ಲಿದ್ದು ನಲುಗಿದವರೇ. ಆದರೆ ಇಬ್ಬರ ಕಥೆಯೂ ಬೇರೆಯೆ. ಪರರ ಮಾತಿಗೆ ಹೆದರಿ ರಾಮ ಸೀತೆಯನ್ನು ನೋಯಿಸಿದ. ಪರ ಸ್ತ್ರೀಯನ್ನ ಮೋಹಿಸಿದ ರಾವಣ ಅವಳ ವರ್ಣನೆ ಮಾಡುತ್ತಲೇ ಮಂಡೋದರಿಯನ್ನು ಹಿಂಸಿಸಿದ. ಆದರು ಇಬ್ಬರೂ ಪತಿವ್ರತಾ ಪಾಲನೆಯಲ್ಲಿ ನಿರತರಾದ ಹೆಣ್ಣುಗಳೇ.

> "ಸೀತೆಯಾದಷ್ಟು ಸುಲಭವಲ್ಲ ಕಣೇ
> ಮಂಡೋದರಿಯಾಗುವುದು.
> ಪತಿವ್ರತೆ,
> ಸುಮಂಗಲೀ ವ್ರತಗೈಯುತ್ತಲೆ
> ಗಂಡನ ಸಾವಿಗೆ ಕಾಯಬೇಕು
> ಶಾಪಗಳ ಪಾಲುಣ್ಣಬೇಕು
> ದುಷ್ಟತನ ದೂರದೆ ಪಾದ ಪೂಜಿಸಬೇಕು" [೪೭]

ಕಾನೂನು ರೂಪಿಸುವ ಗಂಡು, ಕಟ್ಟಳೆಯನ್ನೂ ಹೆಣ್ಣಿಗೆ ಆಜ್ಞೆಯನ್ನಾಗಿ ಸ್ವೀಕರಿಸುವಂತೆ ಮಾಡುತ್ತಾನೆ. ಇದು ಪುರಾಣದಿಂದಲೂ ಪಾಲಿಸಿಕೊಂಡು ಬಂದ ನಿಯಮದಂತೆ, ಇಂದಿಗೂ ಇದರ ಕರಾಳ ಛಾಯೆ ಇದ್ದೇ ಇದೆ. ಸುಂದರ ಹೆಂಡತಿ ಇದ್ದೂ ಕುರುಡುತನದಿಂದ ವರ್ತಿಸಿದ ರಾವಣ, ಶಾಪದ ನೆಪದಿಂದ ಹೆಣ್ಣಿನ ಮೋಹಕ್ಕೆ ಬಿದ್ದು ಸೇಡಿನಿಂದಲೇ ನಾಶ ಹೊಂದಿದ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಹೆಣ್ಣನ್ನು ಸಹನಾಮಯಿ, ತಾಳ್ಮೆಯ ಪ್ರತಿರೂಪ, ಗಂಡಿನ ಎಲ್ಲ ಪಾಪ ಕರ್ಮಗಳನ್ನು ಕ್ಷಮಿಸುವ ಕ್ಷಮಯಾ ಧರಿತ್ರಿ ಎಂಬ ಪಟ್ಟವನ್ನು ಅಲಂಕರಿಸಲೆಂದೇ ರೂಪಿಸಿದರೆ? ಎಂಬ ಅನುಮಾನವೂ ಬರುತ್ತದೆ. ಇಲ್ಲಿ ಚರ್ಚಿಸಬೇಕಾದ ಅಂಶವೆಂದರೆ ಪುರಾಣ ಪಾತ್ರಗಳಲ್ಲಿರುವ ಗಂಡು–ಹೆಣ್ಣಿನ ತಾರತಮ್ಯವನ್ನು ಗುರ್ತಿಸುವುದು ಮುಖ್ಯ ಅಂಶವಲ್ಲ. ಗತಕಾಲದ ಗಂಡು ಮನಸ್ಥಿತಿಯು ಹೆಣ್ಣನ್ನು ಯಾವ ರೀತಿ ರೂಪಿಸಲ್ಪಟ್ಟಿತು ಎಂಬುದನ್ನು ಗುರ್ತಿಸುವುದು ಪ್ರಮುಖ ಅಂಶವಾಗಿದೆ. ಇಂದಿನ ಆಧುನಿಕ ಯುಗದಲ್ಲೂ ಮಂಡೋದರಿ, ಸೀತೆಯಂತವರೂ ಹೇರಳವಾಗಿ ನಮ್ಮ ಮುಂದಿದ್ದಾರೆ.

ಸಾಮಾಜಿಕ ಬದಲಾವಣೆ ಎಂದಾಕ್ಷಣ ಸ್ತ್ರೀ ಸ್ವಾತಂತ್ರ್ಯ ಎಂಬ ಅರ್ಥ ಸಹಜವಾದುದು. 'ರವಿ ಕಾಣದ್ದನ್ನು ಕವಿ ಕಂಡ' ಎಂಬ ಮಾತು ಅಕ್ಷರ ಸಹ ನಿಜ. ಕವಿಗೆ ಹೊಸ

ಹೊಸದನ್ನು ಕಟ್ಟುವ, ಹೊಸ ತನವನ್ನು ಸಹಜತೆಯೊಂದಿಗೆ ರೂಪಿಸುವ ಜವಾಬ್ದಾರಿ ಅವನಿಗಿರುತ್ತದೆ. ಅಂತೆಯೇ ಮಹಿಳಾ ಕಾವ್ಯವೂ ಸಹ ಬದುಕನ್ನು ಸಾಮಾಜಿಕ ಹಂತದಲ್ಲಿ ಕಂಡುಕೊಂಡ ಬಗೆ ಉತ್ತಮವಾದುದು. ಹೋರಾಟಗಳಿಗಿಂತ ಬರವಣಿಗೆಯ ಕ್ರಾಂತಿ ಹೆಚ್ಚು ಪರಿಣಾಮಕಾರಿಯಾದುದು ಎಂಬ ಅಂಶವನ್ನು ಸಾರವತ್ತವಾಗಿ ಬಳಸಿಕೊಂಡದ್ದು ಮಹಿಳಾ ಸಾಹಿತ್ಯ. ಏಕೆಂದರೆ ಅಡುಗೆ ಮನೆ ಸಾಹಿತ್ಯ ಎಂದು ಉಡಾಫೆಯ ಮಾತುಗಳಾಡುವವರಿಗೆ ತಿರುಗಿ ನೋಡುವಂತೆ ಮಾಡಿದ್ದು ಮಹಿಳಾ ಸಾಹಿತ್ಯವೆ. ಮರ್ಯಾದಾ ಪುರುಷ ರಾಮ, ಹೆಣ್ಣಿನಿಂದಲೇ ರಾಮಾಯಣ, ಮಹಾಭಾರತ ಎಂಬ ಕೊಂಕು ನುಡಿಗಳನ್ನು ಬರಹಕ್ಕಿಳಿಸಿ ಹೊಸ ನೋಟದೊಂದಿಗೆ ಕಟ್ಟಿಕೊಡುವ ಪ್ರಯತ್ನವನ್ನು ಸಹಜವಾಗಿ ನಿರೂಪಿಸಿದ್ದು ಮಹಿಳಾ ಸಾಹಿತ್ಯವೇ. ಅದರಲ್ಲೂ ಇದರ ಹೆಚ್ಚು ಪಾಲು ಆಧುನಿಕ ಮಹಿಳಾ ಕಾವ್ಯದ್ದು ಎನ್ನಬಹುದು. ಪುರಾಣಗಳ ಪ್ರತಿ ಪಾತ್ರವನ್ನೂ ತೆಗಳದೆ, ವಿಡಂಬಿಸದೆ ಅಥವಾ ವೈಭವೀಕರಿಸದೆ ಹೊಸ ವ್ಯಾಖ್ಯಾನಕ್ಕೆ ದಾರಿ ಮಾಡಿಕೊಟ್ಟಿದ್ದು ಮಹಿಳಾ ಕಾವ್ಯ. ಒಟ್ಟಾರೆಯಾಗಿ ಪುರಾಣಗಳಲ್ಲಿ ಅಡಗಿದ ಹೆಣ್ಣಿನ ಮನಸ್ಥಿತಿಯನ್ನು ಕಾಲಘಟ್ಟದಲ್ಲಿ ಹೊಸ ನೋಟದೊಂದಿಗೆ ನೋಡುತ್ತಾ ಹೊಸ ಅರ್ಥವನ್ನು ತಂದುಕೊಟ್ಟವು. ಮಾತನಾಡದೆ, ಮರೆಯಾಗಿದ್ದ ಎಷ್ಟೋ ಪಾತ್ರಗಳು ಜೀವಂತ ಒಡನಾಡಿಗಳಂತೆ ಜೀವ ತಳೆದದ್ದು ಆಧುನಿಕ ಮಹಿಳಾ ಕಾವ್ಯದಲ್ಲಿಯೇ. ರಾಮನೆಂದರೆ, ಕೇವಲ ಗಂಡು ದೃಷ್ಟಿಕೋನದಿಂದ ನೋಡುವುದಲ್ಲ, ಹೆಣ್ಣು ದೃಷ್ಟಿಕೋನದಿಂದಲೂ ನೋಡಬಹುದೆಂಬುದನ್ನು ಪುರಾಣಗಳ ಮೂಲಕ ಆಧುನಿಕ ಕನ್ನಡ ಮಹಿಳಾ ಕಾವ್ಯ ಕಾಣಿಸಿದ್ದು ವಿಶೇಷ.

ಚರಿತ್ರೆ ಮತ್ತು ಪುರಾಣ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಮುಂದಿನ ಪೀಳಿಗೆಗೆ ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಎಲ್ಲ ರೀತಿಯಲ್ಲೂ ಮಾಹಿತಿಯನ್ನು ಒದಗಿಸುವ ಕಣಜಗಳಂತೆ ಚರಿತ್ರೆ ಮತ್ತು ಪುರಾಣಗಳು ಪೂರಕವಾಗಿ ನೆರವಾಗುತ್ತವೆ. ಚರಿತ್ರೆ ಮತ್ತು ಪುರಾಣಗಳಲ್ಲಿ ಎರಡರಲ್ಲೂ ಪ್ರಾತಿನಿಧಿಕವಾಗಿ, ಮಹತ್ವ ಪೂರ್ಣವಾಗಿ ಕಂಡುಬರುವವಳು ಹೆಣ್ಣೇ ಆಗಿರುತ್ತಾಳೆ. ಮನುಷ್ಯನ ಆಲೋಚನಾ ಕ್ರಮ, ನಡೆ, ನುಡಿ, ಬದುಕಿನ ರೀತಿ ನೀತಿ ಎಲ್ಲದರಲ್ಲೂ ಪುರಾಣ ಮತ್ತು ಚರಿತ್ರೆಯ ಅಂಶಗಳೇ ಅಡಗಿವೆ. ದಾಯಾದಿ ಮತ್ಸರಕ್ಕೆ ಕುರುಕ್ಷೇತ್ರವೆಂತಲೂ, ಅಣ್ಣ ತಮ್ಮಂದಿರಿಗೆ ರಾಮಾಯಣವೆಂತಲೂ, ಸತ್ಯಕ್ಕೆ, ನಿಷ್ಠೆಗೆ ಹರಿಶ್ಚಂದ್ರನೆಂತಲೂ, ದಾನಕ್ಕೆ ಕರ್ಣನೆಂತಲೂ ಕೊನೆಗೆ ಈ ಎಲ್ಲದಕ್ಕೂ ಕಾರಣಗಳು ಹೆಣ್ಣೇ ಎಂತಲೂ ಅಭಿವ್ಯಕ್ತಿಸುವುದುಂಟು.

ರಾಮಲಿಂಗಪ್ಪ.ಟಿ.ಬೇಗೂರು ಹೇಳುವಂತೆ.

"ಚರಿತ್ರೆ ಮತ್ತು ಪುರಾಣಗಳು ಹೆಣ್ಣಿಗೆ ತನ್ನ ಅಂತರಂಗದ ಘಾಟು, ನೋವು ಸಿಟ್ಟುಗಳನ್ನು ಹೊರ ಹಾಕುವ ಮಾಧ್ಯಮಗಳು. ಹಾಗೆಯೇ ಇವು ಗಂಡಿನ ಜನ್ಮ ಜಾಲಾಡಿಸಲು ಸದಾ ಒದಗುವ ಗಣಿಗಳು. ಆಧುನಿಕ ಸಮಾಜದ ಸ್ಥಗಿತತೆಯನ್ನು ಕಥಿಸಲು ಒದಗುವ

ಪ್ರತೀಕಗಳು ಆ ಮೂಲಕ ವರ್ತಮಾನವನ್ನೇ ಕಥಿಸುವ ಪುರಾತನ ಪ್ರತೀಕಗಳು ಕೆಲವೇ ಅನುಕರಣೀಯ ಮತ್ತು ಅನೇಕ ನಿರಾಕರಣೀಯ ಮಾದರಿಗಳ ಕಣಜಗಳು. ಆಧುನಿಕತೆಯ ಸಂಕಥನವನ್ನು ಧರಿಸಬಹುದಾದ ಕಳೇಬರಗಳು, ಹೆಣ್ಣಿಗೆ ತನ್ನ ಪ್ರತ್ಯಯ, ಪ್ರತಿರೋಧ, ಅಸಹನೆಗಳನ್ನು ಕಾರಿಕೊಳ್ಳಲು ಇರುವ ಮಾಧ್ಯಮಗಳು, ಸಂಕೇತ, ರೂಪಕಾದಿ ಕಾವ್ಯ ಪರಿಕರಗಳ ಆಕರಗಳು, ಪ್ರಜ್ಞೆಯ ಆಳದಲ್ಲಿ ಕರಗಿ ಹೋಗಿ, ಯಾವು ಯಾವುದೋ ವೇಷಾಂತರಗಳಲ್ಲಿ ಪ್ರಕಟಗೊಳ್ಳುವ ಹುದುಲುಗಳು. ದಾಂಪತ್ಯ ಹೆಣ್ತನ, ಪ್ರೇಮ, ಸಾವು, ಕುಟುಂಬ, ಆಧ್ಯಾತ್ಮ, ಇತ್ಯಾದಿಗಳನ್ನು ನಿರ್ವಚಿಸುವ, ಮರು ನಿರ್ವಚಿಸುವ ಭೂಮಿಕೆಗಳು ಹೀಗೆ ಈ ಚರಿತೆ ಪುರಾಣಗಳು ಅಸಂಖ್ಯ ನೆಲೆಗಳಲ್ಲಿ ಅನುಸಂಧಾನಕ್ಕೆ ಗುರಿಯಾಗಿವೆ" ೪೮ ಎಂದಿದ್ದಾರೆ.

ಈ ಮಾತು ಚರಿತ್ರೆ ಮತ್ತು ಪುರಾಣಗಳು ಮಹಿಳಾ ಕಾವ್ಯದಲ್ಲಿ ಅಡಗಿರುವ ಪಾತ್ರಗಳ ಐಡೆಂಟಿಯಂತೆ ಕಾಣುತ್ತವೆ. 'ಪೂರ್ವದ ಹಿನ್ನೆಲೆ ಪ್ರಸ್ತುತಕ್ಕೆ ದಾರಿ' ಎಂಬ ಮಾತಿನಂತೆ ಪುರಾಣದಲ್ಲಿ ಅಡಗಿರುವ ಹೆಣ್ತನದ ಒಡಲ ಕಿಚ್ಚನ್ನು ಪ್ರಶ್ನಿಸುವ, ಆ ಮೂಲಕ ಹೆಣ್ಣಿನ ಅನುಕಂಪದ ಜಿಡ್ಡುತನವನ್ನು ಹೋಗಲಾಡಿಸುವಂತೆ ನಮ್ಮ ಆಧುನಿಕ ಮಹಿಳಾ ಕಾವ್ಯವಿದೆ. ಏಕೆಂದರೆ ಪುರುಷನನ್ನು ವಿರೋಧಿಸುವುದಾಗಲೀ ಅಥವಾ ಹಳೆಯ ವ್ಯವಸ್ಥೆಗಳನ್ನು ಸಮೀಕರಿಸಿ ಪುರುಷನೇ ಇದಕ್ಕೆಲ್ಲಾ ಕಾರಣ ಎಂಬ ಹಪಹಪಿಕೆ ಮಹಿಳಾ ಕಾವ್ಯದ್ದಲ್ಲ. ಹಳೆಯ ಮಿಥ್‌ಗಳನ್ನು ಒಡೆದು ಹೊಸ ರೀತಿಯ ಪರಿಚಯಾತ್ಮಕ ಮತ್ತು ಗಟ್ಟಿತನದ ದೃಷ್ಟಿಕೋನದಲ್ಲಿ ತನ್ನನ್ನು ತಾನು ಕಂಡುಕೊಳ್ಳುವ ಮತ್ತು ಆ ಮೂಲಕ ಸಾಮಾಜಿಕ ಹಿನ್ನಲೆಯಲ್ಲಿನ ಮನಸ್ಸುಗಳಿಗೆ ಹೆಣ್ಣಿನ ಬಗ್ಗೆ ಬೇರು ಬಿಟ್ಟಿದ್ದ ಮೌಢ್ಯಗಳನ್ನು ಬದಲಾಯಿಸುವ ಪ್ರಯತ್ನವೂ ಇದೆ. ಪುರಾಣದ ಪಾತ್ರಗಳ ರಚನಾತ್ಮಕ ದೃಷ್ಟಿಕೋನವನ್ನು ಹೊಸ ರೀತಿಯಲ್ಲಿ ನೋಡುವಂತೆ ಮಾಡುವುದು ಮಹಿಳಾ ಕಾವ್ಯದ ಆಶಯವೆನ್ನಬಹುದು.

ಅ) ಆಧುನಿಕ ಕನ್ನಡ ಮಹಿಳಾ ಕಾವ್ಯದಲ್ಲಿ : ಚಾರಿತ್ರಿಕ ದೃಷ್ಟಿ ಕೋನ.

ಕನ್ನಡ ಸಾಹಿತ್ಯ ಲೋಕದಲ್ಲಿ ಚರಿತ್ರೆಗೆ ಹೊಸ ಇತಿಹಾಸವಿದೆ ವಿಶಿಷ್ಟತೆಯೂ ಇದೆ. ಏಕೆಂದರೆ ಚರಿತ್ರೆ ಇಂದಿನ ವರ್ತಮಾನದ ಅನುಸರಣೀಯ ಮಾರ್ಗದ ಪ್ರತೀಕವೂ ಹೌದು. ಅದು ಆದರ್ಶಕ್ಕೋ ಆತ್ಮಾಹುತಿಗೂ ಅಥವಾ ಆತ್ಮ ಸಂಗಾತಕ್ಕೋ, ಮೋಕ್ಷಕ್ಕೋ ಯಾವುದಕ್ಕಾದರೂ ಮಾದರಿ ರೂಪದಲ್ಲಿ ಇದ್ದೇ ಇರುತ್ತದೆ. ಇಂತಹ ಚರಿತ್ರೆಯನ್ನೂ ಆಧುನಿಕ ಮಹಿಳಾ ಕಾವ್ಯ ಹೊಸ ವಿಡಂಬನೆಯೊಂದಿಗೆ ಆದರ್ಶೀಕರಿಸದೆ, ವಾಸ್ತವ ನೆಲೆಗಟ್ಟಿನಲ್ಲಿ ತಂದು ನಿಲ್ಲಿಸಿದೆ. ಪುರಾಣದಲ್ಲಿ ರಾಮ ಹೆಚ್ಚು ಪ್ರಸ್ತುತನಾದಂತೆ ಚರಿತ್ರೆಯಲ್ಲೂ ಬುದ್ಧನು ಚರ್ಚಿತನಾದವನು. ಇಂತಹ ಬುದ್ಧನನ್ನೂ ಸ್ತ್ರೀವಾದಿ ದೃಷ್ಟಿಕೋನದಲ್ಲಿ ಮಹಿಳಾ ಕಾವ್ಯ ಪ್ರಶ್ನಿಸಲ್ಪಟ್ಟಿದೆ. ಸ್ತ್ರೀವಾದದ ಹಿನ್ನಲೆಯಲ್ಲಿ ಅಕ್ಕ ಸ್ತ್ರೀ ಸ್ವಾತಂತ್ರ್ಯದ ಪ್ರತೀಕವೆಂಬಂತೆ ಬಿಂಬಿತಳಾಗಿದ್ದಾಳೆ. ಅಂತಹ ಅಕ್ಕನನ್ನೂ ಮರು ವಿಮರ್ಶೆಗೊಳಿಸುವ, ಹೊಸ ಭಾಷ್ಯದೊಂದಿಗೆ ನೋಡುವ ಪ್ರಯತ್ನವನ್ನು ಮಹಿಳಾ ಕಾವ್ಯ ಮಾಡಿದೆ.

ಅಕ್ಕ ಕೇವಲ ಸ್ವಗತ ಮಾದರಿಯಲ್ಲಿ ಮುಂದಿನ ಪೀಳಿಗೆಯ ಅನುಕರಣೀಯ ಮಾದರಿ ಎಂಬಂತೆ ಮಹಿಳಾ ಕಾವ್ಯ ಕಂಡಿದೆ. ಏಕೆಂದರೆ ಸ್ತ್ರೀ ಸ್ವಾತಂತ್ರ್ಯದ ಸಾರ್ಥಕತೆ ಕಂಡದ್ದು ಅಕ್ಕನಲ್ಲಿಯೆ. ಬುದ್ಧ ದೇಹ ಮತ್ತು ಆತ್ಮದೊಂದಿಗೆ ಸಂಕಥನ ನಡೆಸಿದರೆ ಅಕ್ಕ ಆತ್ಮ ಮತ್ತು ಪುರುಷ ಸಮಾಜದೊಂದಿಗೆ ನೇರ ಹೋರಾಟ ನಡೆಸಿದವಳು. ಆತ್ಮ ಸಂಗಾತದ ಪ್ರತೀಕ ಚನ್ನಮಲ್ಲಿಕಾರ್ಜುನನಾದರೂ ಸಾಮಾಜಿಕವಾಗಿ ಕಟ್ಟುಪಾಡುಗಳನ್ನು ಹಾಕಿದ ಪುರುಷ ಸಮಾಜವನ್ನು ಧಿಕ್ಕರಿಸಿದವಳು ಅಕ್ಕ. ಆದರೆ ಇಂದು ಅಕ್ಕನ ದಿಟ್ಟತೆ, ನೇರ ನಡೆಯನ್ನು ಹಂಬಲದಂತೆ ಕಂಡಿರುವುದು ವಿಪರ್ಯಾಸದ ಸಂಗತಿ. ಗಂಡನ್ನು ಧಿಕ್ಕರಿಸಿದ ಅಕ್ಕ, ಮೀರಾಬಾಯಿ ಎಲ್ಲರೂ ಕೊನೆಗೆ ಮುಕ್ತಿಗೋಸ್ಕರ ಹಂಬಲಿಸುವುದು ಪುರುಷ ದೈವವನ್ನೇ. ನಿರಾಕಾರಿಯೂ ಕೂಡ ಪುರುಷನಲ್ಲವೇ ಎಂಬ ಪ್ರಶ್ನೆ ಸಹಜವಾಗಿ ಕಾಡುತ್ತದೆ. ಅಂದರೆ ಇಲ್ಲಿ ಮೋಕ್ಷ ಪ್ರತಿರೂಪ ಗಂಡಲ್ಲ, ಗಂಡಿನ ಇರುವಿಕೆ ಮಾತ್ರ ಇಲ್ಲಿಯೂ ಬದುಕಿನ ಹಂಬಲ ತೀವ್ರವಾಗಿರುವ ಸಹಜ ಹೆಣ್ಣಿನಂತೆ ಅಕ್ಕ ಮತ್ತು ಮೀರಾ ಕಂಡುಬರುತ್ತಾರೆ. ಕಾಣದ ಚನ್ನಮಲ್ಲಿಕಾರ್ಜುನ, ಬಾರದ ಶ್ರೀಕೃಷ್ಣ ಎರಡು ಪ್ರತಿಮೆಗಳ ಮೂಲಕ ಸಾಮಾಜಿಕವಾಗಿ ಗಂಡಿನ ದೃಷ್ಟಿಕೋನಗಳನ್ನು ಒಡೆಯುವ ಪ್ರಯತ್ನವನ್ನು ಆಧುನಿಕ ಕನ್ನಡ ಮಹಿಳಾ ಕಾವ್ಯ ಮಾಡಿದೆ.

ಅಕ್ಕನನ್ನು ಬುದ್ಧನಿಗೋಲಿಸುವ ಮಹಿಳಾ ಕಾವ್ಯ ಪ್ರಮುಖ ಆಶಯ ಹೆಣ್ಣಿಗೂ ಸಂಸಾರವನ್ನು ಮೀರುವ ಹಂಬಲವಿದೆ, ಸಾಧಿಸುವ ಮನಸ್ಸಿದೆ ಎಂಬುದನ್ನು ತೋರಿಸಿಕೊಟ್ಟಿವೆ. ಹಾಗಾಗಿಯೇ ಅಕ್ಕ ಹೆಚ್ಚು ಹೆಚ್ಚು ಪ್ರಸ್ತುತಳಾಗುತ್ತಲೇ ಚರಿತ್ರೆಯಲ್ಲಿ ಹೊಸ ಭಾಷ್ಯಕ್ಕೆ ಮಾದರಿಯೂ ಆಗಿದ್ದಾಳೆ. ಆಧುನಿಕ ಕನ್ನಡ ಮಹಿಳಾ ಕಾವ್ಯ ಅಕ್ಕನನ್ನೂ ಬೇರೆಬೇರೆ ಮಗ್ಗುಲುಗಳಲ್ಲಿ ಕಂಡುಕೊಂಡ ಬಗೆ ವಿಶಿಷ್ಟವಾದುದು. ಆದರೂ ಮಹಿಳಾ ಕಾವ್ಯ ಎತ್ತುವ ಮೊದಲ ಪ್ರಶ್ನೆ ಎಂದರೆ ಪುರಾಣದಲ್ಲಾಗಲೀ ಮತ್ತು ಚರಿತ್ರೆಯಲ್ಲಾಗಲೀ ಗಂಡಿನ ಪ್ರಾತಿನಿಧ್ಯವೇ ಮೇಲೆಂದು ಬಿಂಬಿಸಿದ ಪರಿಕಲ್ಪನೆಯನ್ನು. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುತ್ತಾರೆ. ಅವನ ಚರಿತ್ರೆ, ಅವನ ಇತಿಹಾಸ, ನಿಮ್ಮ ಚರಿತ್ರೆಯಲ್ಲಿ ನಮಗೆ ಜಾಗವಿಲ್ಲ ಎಂದು ಕೇಳುತ್ತಲೇ ಮತ್ತೊಂದು ಚರಿತ್ರೆ ಅಥವಾ ಪುರಾಣದ ವ್ಯಾಖ್ಯಾನವಿಲ್ಲದ ಮಹಿಳಾ ದೃಷ್ಟಿಕೋನದ ಲಿಂಗ ಸಮಾನತೆಯ ನೆಲೆಯಲ್ಲಿ ಮರು ಸೃಷ್ಟಿಸುವ ಮನಸ್ಥಿತಿ ಆಧುನಿಕ ಕನ್ನಡ ಮಹಿಳಾ ಕಾವ್ಯದಲ್ಲಡಗಿವೆ.

ಚರಿತ್ರೆಯಲ್ಲಿ ಮೂಡಿ ಬಂದ ಅಕ್ಕ ಹಲವು ವಿನ್ಯಾಸಗಳಲ್ಲಿ ಮಹಿಳಾ ಕಾವ್ಯದಲ್ಲಿ ಕಥಿಸುತ್ತಲೇ ಬಂದಿದ್ದಾಳೆ. ಇದು ವಿರೋಧದ ಹಿನ್ನಲೆಯಲ್ಲಲ್ಲ. ಹೆಣ್ಣಿನ ಅಂತರಂಗದ ವಿವಿಧ ಸ್ತರಗಳ ಪ್ರತಿನಿಧಿಯಾಗಿ ಹೆಚ್ಚು ಪ್ರಸ್ತುತಳಾಗುತ್ತಾ ಬಂದಿದ್ದಾಳೆ. ಸಂಸಾರದ ಬದ್ಧತೆಗೆ ಸಿಲುಕಿದ ಹೆಣ್ಣು ಎಲ್ಲವನ್ನೂ ಮೀರುವ ಮನಸ್ಸಿನವಳು. ಅದರಲ್ಲಿ ಗೆಲುವನ್ನೂ ಸಾಧಿಸಿದವಳು ಆದರೆ ಹೆಣ್ತನದ ಪ್ರಗತಿ ಪಥದ ದಾರಿಯಾದ ನೀನು ನನ್ನಂತೆ

ಸಂಸಾರದಲ್ಲಿದ್ದುಕೊಂಡೇ ಹೊಸ ಹಾದಿ ಕಂಡುಕೊಳ್ಳಬಹುದಿತ್ತು. ಇಹದ ಜೊತೆ ಜಂಜಾಟದ ನಡುವಿನ ಬದುಕಿಗೆ ಅಕ್ಕನನ್ನು ಆಧುನಿಕ ಕನ್ನಡ ಮಹಿಳಾ ಕಾವ್ಯಗಳು ಆಹ್ವಾನಿಸುತ್ತವೆ.

"ಇಹದ ಗಂಡನ ಕೂಡಿ ಬದುಕಿ
ಎಲ್ಲ ಬ್ರಹ್ಮಾಂಡಗಳ ತದಕಿ
ವಿಳಿಸಿ ನಿನ್ನದೇ ಆಸ್ಮಿತೆ
ಇಲ್ಲಿ ವಿಜೃಂಭಿಸಿದ ತರ್ಕಾತೀತ ಪ್ರಶ್ನೆ ಸವಾಲು
ದಿವ್ಯ ದಿಬ್ಬಗಳನ್ನು ನೀನೆದುರಿಸಿದ್ದರೆ
ಅಕ್ಕ ಮಹಾದೇವಿ ನಮೋ ಎನ್ನುತ್ತಿದ್ದೆ ನಮೋ....
ಅದಕ್ಕೇ ಅಕ್ಕ ಬಿಡು ಆ ಕದಳೀವನ
ಅಳಿಸಂಕುಲ ಮಾಮರ ಬೆಳದಿಂಗಳ
ಬಾನಮ್ಮಂತ ಸತಿಯಾಗಿ
ಜೊತೆಯಾಗಿ ನಮ್ಮೊಳಗೆ"[೨೯]

ಜೀವನದ ಪ್ರತಿ ಹಂತವನ್ನೂ ಅನುಭವಿಸುವ ಹಂಬಲ ಪ್ರತಿಯೊಬ್ಬರಿಗಿರಬೇಕು ಎಂಬ ಮಾತನ್ನು ಕವಿತೆ ಧ್ವನಿಸುತ್ತದೆ. ತನ್ನ ತನ ಇರುವುದು ಇರವಿಕೆಯಲ್ಲಿಯೇ ಹೊರತು ವಿಮುಖತೆಯಿಂದಲ್ಲ ಎಂಬ ಸಾರ್ವತ್ರಿಕ ಸತ್ಯ ಕವಿತೆಯಲ್ಲಡಗಿದೆ. ಅಕ್ಕನ ವ್ಯಕ್ತಿತ್ವವನ್ನು ಕೆಣಕುವ ರೀತಿಯಲ್ಲಿ ಕವಿತೆಯಿಲ್ಲ. ಸಂಸಾರದಲ್ಲಿ ದಿನನಿತ್ಯವೂ ಹೆಣಗುವ ಹೆಣ್ಣಿನ ಕಥೆ ಹಲವು ಪದರಗಳಲ್ಲಿ ತೆರೆದುಕೊಳ್ಳುತ್ತದೆ. ಇಂತಹ ಸಂಸಾರದಲ್ಲಿದ್ದುಕೊಂಡೇ ಹೆಣ್ಣು ಸಾಧಿಸುವ ರೀತಿ ಯಾವ ಸಾಧು ಸಂತ, ತತ್ವಜ್ಞಾನಿ, ಮೇದಾವಿಗಳಿಗೂ ಕಡಿಮೆ ಇಲ್ಲ ಎಂಬ ಅಂಶವನ್ನು ಅಕ್ಕನ ಮೂಲಕ ಜಗತ್ತಿಗೆ ಸಾರುವ ಪ್ರಯತ್ನವಿದೆ.

ನಮ್ಮ ಇತಿಹಾಸವನ್ನು ಗಮನಿಸಿದರೆ ಅನುಮಾನ ಇಲ್ಲವೇ ವೈಭವೀಕರಣವೇ ಹೆಣ್ಣಿನ ಬದುಕಿನ ಮಾನದಂಡಗಳು ಎಂಬಂತೆ ಕಂಡುಬರುತ್ತವೆ. ರಾಜ ಮಹಾರಾಜರುಗಳ ಪ್ರೇಮ ಅಥವಾ ಕಾಮಕ್ಕೆ ಬಲಿಯಾದ ಮತ್ತು ಬಳಸಿಕೊಂಡ ಹೆಣ್ಣುಗಳ ಚಿತ್ರಣಗಳೂ ಸಹ ಮರು ವ್ಯಾಖ್ಯಾನಕ್ಕೊಳಪಟ್ಟಿವೆ. ಇದರ ದಟ್ಟತೆ ಕಂಡುಬರುವುದು ಆಧುನಿಕ ಕನ್ನಡ ಮಹಿಳಾ ಕಾವ್ಯದಲ್ಲಿ ಅರಮನೆಯಾದರೂ ಒಲ್ಲದ ಹೆಣ್ಣಿಗೆ ಸೆರಮನೆಯಾಗಿಯೇ ಇರುತ್ತದೆ ಎಂಬುದನ್ನು ವಾಸ್ತವತೆಯ ಸಮೀಕರಣದೊಂದಿಗೆ ಮಹಿಳಾ ಕಾವ್ಯ ನಮ್ಮ ಮುಂದಿರಿಸಿದೆ.

"ಅಜ್ಜಿ ಕತೆಯಲ್ಲಿ ಅರಮನೆಯ ಒಡ್ಡೋಲಗಕ್ಕಿಂತ
ಅಂತಃಪುರದ ಹೊಸಿಲಿನದೇ ಚಿಂತೆ
ಹೆಣ್ಣೇ ದಿನ ಬೆಳಿಗ್ಗೆ ಹೊಸಿಲ ಸಾರಿಸು, ರಂಗೋಲಿಯಿಕ್ಕು ನಮಿಸು
ಎಂದೂ ತುಳಿಯಬೇಡ, ಕಾಲೂರ ಬೇಡ
ಹೊಸಿಲ ಬಾಗಿಲು ಕಾಯುತ್ತದೆ ನಿನ್ನ"[೩೦]

ಹೆಣ್ಣಿನ ಮೂಲಕವೇ ಮತ್ತೊಂದು ಹೆಣ್ಣಿಗೆ ಪಾಠದ ರೂಪದಲ್ಲಿ ಸಂಪ್ರದಾಯದ ಭೋಧನೆ ನಡೆಯುತ್ತಿರುವುದು ದುರಂತದ ಸಂಗತಿ. ಕನಸು ಕಾಣುವ, ಕಾಣದ ನಿಜವನ್ನು ಮನದಲ್ಲೇ ರೂಪಿಸುತ್ತಾ ಬದುಕನ್ನು ಕಳೆದ ಎಷ್ಟೋ ಹೆಣ್ಣುಗಳ ಜೀವನ ಚಿತ್ರಣವನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತದೆ. ಸಂಪ್ರದಾಯದ ಹೆಸರಿನಲ್ಲಿ ನಲುಗಿದ ಹೆಣ್ಣಿನ ಜೀವನದ ಕನ್ನಡಿಯಂತಿದೆ. ವಿಶಾಲ ಅರಮನೆಯಲ್ಲಿ ಸಂಕುಚಿತ ಮನಸ್ಸುಗಳಿದ್ದಾಗ ಹೆಣ್ಣಿನ ಭಾವನಾ ಪ್ರಪಂಚ ಕೂಡ ಸಂಕುಚಿತವೇ ಎನ್ನುವುದಕ್ಕೆ ರೂಪಕವಾಗಿ ಹೊಸಿಲಿದೆ. ಅದನ್ನು ದಾಟಿ ರಂಗೋಲಿ ಇಡುವುದೇ ಒಂದು ಬಿಡುಗಡೆಯಾದಂತೆ. ಅದರಾಚೆಗಿನ ಬದುಕನ್ನು ನಿಯಂತ್ರಿಸಲು ಮತ್ತದೇ ಅಜ್ಜಿಯ ಆಜ್ಞೆ ಎಂಬ ವಿಶಾದದ ಛಾಯೆಯೂ ಇದರಲ್ಲಡಗಿದೆ.

ಚರಿತ್ರೆಯಲ್ಲಿ ಹೋರಾಟವೆಂಬುದು ಮಹತ್ವದ ಘಟ್ಟ. ಈ ಹೋರಾಟವೆಂಬ ಹಾದಿ ಹೆಣ್ಣಿನ ದೃಷ್ಟಿಕೋನದಲ್ಲಿ ಅಳೆದಾಗ ವಸ್ತುಸ್ಥಿತಿಯ ಅರಿವು ಮತ್ತು ಜಾಗೃತ ಪ್ರಜ್ಞೆ ವಿಶಿಷ್ಟ ಮಗ್ಗುಲೊಂದನ್ನು ಪಡೆಯುತ್ತದೆ ಎಂಬುದಕ್ಕೆ ಆಧುನಿಕ ಕನ್ನಡ ಮಹಿಳಾ ಕಾವ್ಯ ಹಲವಿವೆ.

> "ಬಂಧನವಿದೆ ಅದಕೆ ಮಿತಿ ಇಲ್ಲ
> ಕ್ರೌರ್ಯವಿದೆ, ಭಿನ್ನಹಕ್ಕೆ ಕಾಳಜಿಗೆ ಅವಕಾಶವಿಲ್ಲ.
> ರಾತ್ರಿಯಿದೆ ಕತ್ತಲೆಯ ಮೌನ ಏಕಾಂತ
> ದೂರ ಜನ ಜಂಗುಳಿಯ ಗೋಡೆಗಳ ತಟ್ಟಿ
> ಬಲುದೂರದಿಂದ
> ನಗರದೆದೆಯಾಳದಲಿ ಮೊಳಗಿದೆಷ್ಟೋಗಂಟೆ
> ದನಿ ಕೇಳಿ ಬರುತಿಹುದು" [೫೧]

ಕವಿತೆಯಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚು ಒಂದೆಡೆಯಾದರೆ ಮನುಷ್ಯ ಬದುಕಿನ ಹಂಬಲವಿದೆ. ಸ್ವಾತಂತ್ರ್ಯ ಹೋರಾಟವೆಂದರೆ ಗಂಡಸು ಮಾತ್ರ ಹೋರಾಟದ ಕೇಂದ್ರ ಬಿಂದುವಲ್ಲ. ಅವನಿಗೆ ಬೆಂಬಲವಾಗಿ ನಿಲ್ಲುವ ಹೆಣ್ಣಿನಲ್ಲೂ ಹೋರಾಟದ ಕಿಚ್ಚಿದೆ ಎಂಬುದನ್ನು ಕವಿತೆ ಬಿಂಬಿಸುತ್ತದೆ. ಇದರ ಜೊತೆಗೆ ಬಂಧಿಯಾದ ಹೋರಾಟಗಾರರ ಹಂಬಲ ಕೇವಲ ಜೈಲು ಪಾಲಾಗುವುದಲ್ಲ. ಹೋರಾಟದಲ್ಲಿ ಬದುಕು ಸವೆಸಲಿಲ್ಲವಲ್ಲ ಎಂಬ ಕೊರಗಿನ ಗಂಡು ಮನಸ್ಥಿತಿಯ ಅನಾವರಣವನ್ನೂ ಮಹಿಳಾ ಕಾವ್ಯ ವಿಶಿಷ್ಟ ರೀತಿಯಲ್ಲಿ ಮಾಡಿತು. ಬಂಧಿಯಾದವನ ಮೂಕವೇದನೆಯನ್ನು

> "ವರ್ಷ ವರ್ಷಗಳಿಂದ ಅಸಹಾಯ ಯೌವ್ವನದ ನಿರಾಶ ಹಂಬಲವು
> ತೊಟ್ಟು ಬೇಡಿ ಸರಪಳಿಗಳನು ಮಲಗಿಹುದು.
> ಮಗ್ಗಲು ಹೊರಳಿಸುವಾಗ ಸರಪಳಿಯ ಝಣತ್ಕಾರ
> ಹೇಳುತಿದೆ ಕನಸಿನಲಿ ಬದುಕ ಹೋರಾಟದ ಗುರುತು
> ಬೆಲೆಯುಳ್ಳ ಆಯುಷ್ಯದೆನ್ನ ಜೀವನವನ್ನು

ಕಳೆದೆ ಬಂಧನದಲ್ಲಿ ದುಃಖಿನನಗೆ
ನನ್ನ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಸವೆಸಲಿಲ್ಲ
ದುಃಖಿ ನನಗೆ" [೩೨]

ಹೋರಾಟಗಾರನ ಮನಸ್ಥಿತಿಯ ಅನಾವರಣ ಇಲ್ಲಿದೆ. ಚರಿತ್ರೆಯಲ್ಲಿ ಮರೆಯಾಗಿ ಹೋದ ಎಷ್ಟೋ ಹೋರಾಟಗಾರರ ಒಟ್ಟಾರೆ ಚಿತ್ರಣವನ್ನು ಕವಿತೆ ನಮ್ಮ ಮುಂದಿಡುತ್ತದೆ. ಸ್ವಾತಂತ್ರ್ಯ ಎಂದಾಕ್ಷಣ ಬ್ರಿಟೀಷರು ಮಾತ್ರ ನೆನಪಿಗೆ ಬರುವುದಿಲ್ಲ. ಹೋರಾಟದಲ್ಲಿ ತೊಡಗಿದ ಯುವ ಜನತೆಯ ಅಸಹಾಯಕತೆ ಹೇಗೆ ಬದುಕು ಸವೆಸಿತು ಎಂಬುದನ್ನು ಆಧುನಿಕ ಕನ್ನಡ ಮಹಿಳಾ ಕಾವ್ಯ ಮನದಟ್ಟು ಮಾಡಿದೆ. ಹೋರಾಟದ ಕಿಚ್ಚು ಪುರುಷನಿಗೆ ಮಾತ್ರವಲ್ಲ ದೇಶದ ಪ್ರತಿಯೊಬ್ಬ ಪ್ರಜೆಯದು ಎಂಬುದನ್ನು ಹೇಳುತ್ತಲೇ ಹೆಣ್ಣಿನ ಪ್ರತಿನಿಧೀಕರಣದ ದಾಖಲನ್ನು ಮಾಡುತ್ತದೆ. ಚರಿತ್ರೆ ಎಂದರೆ ಗಂಡು ಮಾತ್ರವಲ್ಲ, ಅವನ ಇತಿಹಾಸದಲ್ಲಿ ಅವಳ ದಾಖಲೂ ಅಗತ್ಯ ಎಂಬುದನ್ನು ಮಹಿಳಾ ಸಾಹಿತ್ಯ ತೋರಿಸಿದೆ. ಅದರಲ್ಲೂ ಬಹುಮುಖ್ಯವಾಗಿ ಆಧುನಿಕ ಕನ್ನಡ ಮಹಿಳಾ ಕಾವ್ಯ ಇಂತಹ ಚರ್ಚೆಗೆ ಹೆಚ್ಚು ಪ್ರಾತಿನಿಧಿಕ ಒತ್ತನ್ನು ಕೊಟ್ಟಿದೆ. ನೆಲ್ಸನ್ ಮಂಡೇಲಾ ಕೇವಲ ಕ್ರಾಂತಿ ರೂಪವಲ್ಲ, ಮನುಜ ಮತದ ಸಾಕಾರ ರೂಪ ಎಂಬುದನ್ನು ಕವಿತೆಯಲ್ಲಿ ನೋಡಬಹುದು.

"ಕಾಲ ಕಾಲಕ್ಕೆ ಕ್ರಾಂತಿ
ಥರ ಥರದ ಹೆಸರು
ಬಗೆಬಗೆಯ ನೆಲ ಉಸಿರು
ಇತ್ಯಾದಿ ಪಡೆದದ್ದು ಸಿಡಿದೆದ್ದು
ಬೆಂಕಿ ನಿರಂತರ
ಚಿಮ್ಮುತ್ತಲೇ ಇರುವುದು
ಅದು ನಿಜದ ಕ್ರಾಂತಿ" [೩೩]

ಹೋರಾಟದ ಸ್ವರೂಪ ಹಲವು ಮಾದರಿಗಳಲ್ಲಿದೆ. ಆದರ್ಶದ ಬಗೆಗೆ ಮಾತನಾಡುತ್ತಾ, ಹೇಳುತ್ತಾ ಹೋಗುವುದಕ್ಕಿಂತ ಇಡೀ ಜನತೆಗೆ ಜಾಗೃತ ಪ್ರಜ್ಞೆಯನ್ನು, ಕ್ರಾಂತಿಯನ್ನು ಉಂಟು ಮಾಡುವುದೇ ನಿಜವಾದ ಹೋರಾಟವೆಂದು ತೋರಿಸಿದ್ದು ಮಂಡೇಲಾ. ಜೈಲಿನಲ್ಲಿದ್ದುಕೊಂಡೇ ಜಗತ್ತಿನ ಬಗೆಗೆ ಸ್ವಾತಂತ್ರ್ಯದ ಕಿಚ್ಚು ಹತ್ತಿಸಿದರು. ಯುವಜನತೆಗೆ ಇಂತಹವರು ಮಾದರಿಯಾಗಬೇಕು ಎಂಬುದು ಕವಿತೆಯ ಆಶಯ. ಒಳ್ಳೆಯದಕ್ಕೆ ಜಾತಿ ಧರ್ಮಗಳ ಸಂಕುಚಿತತೆ ಇರಬಾರದು. ಆರೋಗ್ಯಕರ ಸಮಾಜ ಇಂದು ಅತ್ಯಗತ್ಯ ಎಂಬ ಸಮಾಜಮುಖಿ ಧೋರಣೆಯೂ ಕವಿತೆಯಲ್ಲಿದೆ. ಜಾಗತಿಕ ಯುಗದಲ್ಲಿ ನಾವು ಮುಂದುವರೆದರೂ ಮಾನವೀಯತೆ ಕಡಿಮೆಯಾಗುತ್ತಿರುವ ಇಂತಹ ಹೊತ್ತಿನಲ್ಲಿ ಅಂಬೇಡ್ಕರ್, ಭಗತ್‌ಸಿಂಗ್, ವಿವೇಕಾನಂದ, ನೆಲ್ಸನ್ ಮಂಡೇಲಾ ಮುಂತಾದವರ ವಿಚಾರಗಳು ಹೆಚ್ಚು ಪ್ರಸ್ತುತವಾಗಬೇಕೆಂಬುದು ಕವಿತೆಯ ಆಶಯ. ಮುಂದುವರೆದು,

"ಮಂಡೇಲಾ
ಬರಿ ವ್ಯಕ್ತಿಯೆ ಆಫ್ರಿಕನ್ ಕೈದಿಯೆ
ಕರಿಯನೆ ಏಕಾಕಿ ಮುದುಕನೆ
ಅಲ್ಲ –
ಆದರ್ಶಗಳ ಸತ್ಯವಾಗಿಸಿಕೊಂಡು
ಆಫ್ರಿಕಾದ ಜೇಲಿನಲಿ ಕುಳಿತು ಬೆಳೆ ಬೆಳೆದು
ಈ ಶತಮಾನದೀ ಪ್ರಪಂಚದೀ
ದೇಶ ದೇಶದ ತುಂಬ
ಹೆಸರಾಗಿ ಮೆರೆದ ಇವನ ಹೆಸರು
ಉಂಡು ಇವನ ಅನುಭವ
ಮುನ್ನಡೆದು ಸಾಗಲಿ ಮನುಜ
ಕುಲವಿನ್ನು" ೫೪

ಪ್ರತಿಯೊಬ್ಬ ನಾಗರೀಕ ಪ್ರಜೆಯ ಆಶಯ ಕವಿತೆಯಲ್ಲಡಗಿದೆ. ಕ್ರಾಂತಿಕಾರಿ ಮನೋಭಾವ ತುಂಬಿದ ಮನಗಳಲ್ಲಿ ಕ್ರಾಂತಿ ಎಂಬುದು ಆರೋಗ್ಯಕರವಾದರೆ ಉತ್ತಮ ಸಮಾಜ ರೂಪಿಸಲು ಸಾಧ್ಯ ಎಂಬುದಕ್ಕೆ ನೆಲ್ಸನ್ ಮಂಡೇಲಾ ಉತ್ತಮ ಉದಾಹರಣೆಯಂತೆ ಕವಿತೆ ಚಿತ್ರಿಸಿದೆ. ಇಂತಹ ಕ್ರಾಂತಿಗಳು ಇಂದು ಹೆಚ್ಚು ಹೆಚ್ಚು ಪ್ರಸ್ತುತವಾಗಬೇಕು.

ನಮ್ಮ ದೇಶದ ಸ್ವಾತಂತ್ರ್ಯಕ್ಕೆ ದುಡಿದವರು ಹಲವು ಮಂದಿ. ರಾಷ್ಟ್ರಪಿತನಾದ ಮಹಾತ್ಮಗಾಂಧಿಯನ್ನು ಕೊಂದ ನಾಥೂರಾಂ ಗೂಡ್ಸೆಯನ್ನು ಅಹಿಂಸಾ ವಾದದಲ್ಲಿಯೇ ಮಾತನಾಡಿಸುವ ಪ್ರತಿಮಾ ಮಾದರಿಯಲ್ಲಿ ಮಹಿಳಾ ಕಾವ್ಯ ಚಿತ್ರಿಸಿದೆ.

"ಕೇಳು ಮಗೂ ನಾಥೂ ಸಿಟ್ಟಿಲ್ಲ
ನನ್ನ ಗುಂಡಿಗೆಗೆ ನೀನಿಟ್ಟ ಗುಂಡಿಗೆ
ನಿನ್ನಂಥ ಬಿಸಿರಕ್ತದ ಜನ ಹಸಿ
ಹಸಿಭಾವದಲ್ಲಿ ದುಡುಕಿದ್ದಕ್ಕೆ
ದುಡುಕಲಿಲ್ಲವೊ ಮಗೂ ನಾವೆಂದೂ
ಸ್ವಾತಂತ್ರ್ಯ ಸಮರದಲ್ಲೆಂದೆಂದೂ
ಸೇತು ಕಟ್ಟಿದಂತೆ ವಾನರ ಸೇನೆ
ಇಟ್ಟೆವು ಒಂದೊಂದೆ ಹೆಜ್ಜೆ ಶತಕೆ
ಶತಮಾನಕೆ ತಿನ್ನುತ್ತ ನೂರು ಹೆರೆಗೆ ಬೇನೆ!" ೫೫

ಎಂಬ ಸಾಲುಗಳಲ್ಲಿ ಹೋರಾಟದ ಹಿಂದಿನ ನೋವಿದೆ. ಅಖಂಡ ಭಾರತ ಒಡೆಯುವ ಸಂದರ್ಭದಲ್ಲಿ ಸಹೋದರ ಭಾವನೆಗಳು ದೂರಾದ ಹತಾಷೆಯೂ ಇದೆ. ಅಹಿಂಸಾವಾದಿ

ಯಾದ ಗಾಂಧಿ ಹಿಂಸೆಯಿಂದಲೇ ಹುತಾತ್ಮರಾದ ಧಾರುಣ ಸ್ಥಿತಿಯ ಅನಾವರಣವೂ ಇದೆ. ಬಾಪುವಿನ ಮಾತುಗಳಲ್ಲೇ ಸ್ವತಂತ್ರ್ಯ ಭಾರತದ ಮುಂದಿನ ಕರಾಳತೆ ಬಿಚ್ಚಿಡುವ ಗಟ್ಟಿತನವೂ ಇದೆ. ಕವಿತೆ ಮುಂದುವರೆದು

"ಕಾಲ ಪುರುಷನಿಗೇನು ಎಲ್ಲಿದೆ ಕರುಣೆ?
ಪರುಶುರಾಮ ಒಡೆದಂತೆ ತಾಯ ಹಣೆ
ತುಂಡಾಯ್ತೋ ನಮ್ಮ ಕನಸಿನ ಭಾರತ!
ಇರಿದು ಕೊಂಡಾಯ್ತೋ ಕರುಳಲ್ಲಿ ಖಡ್ಗ ಅನವರತ!" ೫೬

ಧರ್ಮದ ಹೆಸರಿನಲ್ಲಿ ದೇಶ ಇಭ್ಭಾಗವಾದಾಗ ಆದ ನೋವು, ಬಾಪು ಹುತಾತ್ಮರಾದರೂ ಅಂತರಾತ್ಮದಲ್ಲಿ ಕಾಡಿದ ನೋವಿನ ಪ್ರತಿರೂಪ ಕವಿತೆ. ಆದರೆ ಇಂದು ಅಹಿಂಸೆಯ ದಾರಿ ಹಿಂಸೆಯಲ್ಲಿ ಪರಿವರ್ತನೆ ಪಡೆದಿದೆ ಎಂಬುದನ್ನು ಸೂಕ್ಷ್ಮವಾಗಿ ಚರಿತ್ರೆಯ ಉದಾಹರಣೆಯೊಂದಿಗೆ ಕವಿತೆ ರೂಪಿತಗೊಂಡಿದೆ. ಹೋರಾಟಗಳು ಇಂದು ಬೇರೊಂದು ಮಗ್ಗುಲನ್ನು ಪಡೆದುಕೊಂಡು ರಕ್ತದೋಕುಳಿಯಾಡುತ್ತಿವೆ. ಶಾಂತಿ ಕದಡಿದೆ ಯಾರ ಮಾತಿಗೋ ತಲೆಬಾಗಿ ಯುವ ಶಕ್ತಿ ಹಾದಿ ತಪ್ಪಿದೆ ಎಂಬ ವಾಸ್ತವಾಂಶವನ್ನೂ ಕವಿತೆ ತೆರೆದಿಡುತ್ತದೆ.

ಸ್ವಾತಂತ್ರ್ಯ ಬಂದರೂ ಕಾರ್ಗಿಲ್ ಸಮರ ತಪ್ಪಿಲ್ಲ. ಇಂಡಿಯಾ ಪಾಕಿಸ್ತಾನ ಎಂದರೇ ಕಿಚ್ಚು ಹೊತ್ತಿಕೊಂಡ ಮುಖಭಾವ ಹೊಂದಾಣಿಕೆ ಎಂಬುದು ಮುಖವಾಡವಾದರೆ ಅದನ್ನು ಕಳಚುವ ಶಕ್ತಿ ನಮಗಿದೆ ಎಂಬುದನ್ನು ಚರಿತ್ರೆಯ ಹಲವಾರು ಘಟನೆಗಳು ನೆನಪಿಗೆ ತರುತ್ತವೆ. ತಾಯ ಸೆರಗಿನಂತಿರುವ ಕಾರ್ಗಿಲ್ ಅನ್ನು ವಶಪಡಿಸಿಕೊಳ್ಳಲು ಮಾಡಿದ ಹುನ್ನಾರವನ್ನು ಕವಿತೆಯ ಮೂಲಕ ಬಿಚ್ಚಿಡುತ್ತಾ ದೇಶ ಪ್ರೇಮದ ಕಿಚ್ಚನ್ನು ಪ್ರತಿಯೊಬ್ಬರಲ್ಲೂ ಹುಟ್ಟುವಂತೆ ಆಧುನಿಕ ಕನ್ನಡ ಮಹಿಳಾ ಕಾವ್ಯ ಮಾಡಿದೆ.

"ಬಾ ಎಂದೆನಾ ಹುಲ್ಲೆಯಂತೆ ಬಂದೆ
ನನ್ನ ಕಾಶ್ಮೀರು ಕಾರ್ಗಿಲ್ ದಾಟಿ
ಸಾಕಿನ್ನು ಸಾಕಬೇಡ ಒಣ ತಂಟೆ
ಅನ್ನುತ್ತಲೇ ಹೊತ್ತಿದ್ದೆ ಸ್ನೇಹದ ಗಂಟೆ!
ಯಾಕಿಷ್ಟು ವೈರಗಳ ಹುಚ್ಚೋ ನಿನಗೆ?
ನನ್ನ ಸಂಸ್ಕೃತಿಗೆ ಸ್ನೇಹ ಸಂಧಾನಗಳೇ ಮೆಚ್ಚು,
ಈಗಲಾದರೂ ಕಿತ್ತೊಗೆಯಲಾರೆಯಾ ಹಗೆಯ ಬೇರು?
ಹಾಗೆಂದೇ ತಂದೆ ತಿಳಿವಿನ ತೇರು!" ೫೭

ಭಾರತೀಯರು ಸಹಿಷ್ಣು ಹೃದಯದವರು, ಬಾಂಬು ಹಿಡಿದ ಕೈಗಳಲ್ಲೂ ಬಾಂಧವ್ಯ ಬಯಸುವ ಹೃದಯವಂತರು. ಸ್ನೇಹ ಸಂಸ್ಕೃತಿಗೆ ಬೆಲೆ ಕೊಡುವ ಮಂದಿಗೆ ಹುನ್ನಾರಗಳ

ಅರಿವಿರದು. ಅಂತವರನ್ನು ಕೆಣಕಿದರೆ ಎಂತಹ ಪರಿಸ್ಥಿತಿ ಬರುತ್ತದೆಂಬುದಕ್ಕೆ ಕಾರ್ಗಿಲ್ ಯುದ್ಧವೇ ನಿದರ್ಶನ. ಭರತ ಮಾತೆಯನ್ನು ತಾಯಂತೆ ಕಂಡ ಪ್ರತಿಯೊಬ್ಬ ಭಾರತೀಯನಿಗೂ ದೇಶ ಪ್ರೇಮ ಕಣ ಕಣದಲ್ಲೂ ಮನೆ ಮಾಡಿರುತ್ತದೆ ಎಂಬುದು ಕವಿತೆಯಲ್ಲಿ ಕೆಚ್ಚಿನಂತೆ ಚಿತ್ರಿತಗೊಂಡಿದೆ. ಗೋಮುಖ ವ್ಯಾಘ್ರನ ಮುಖವಾಡ ಹಾಕಿದ ಶತ್ರುಗಳನ್ನು ಹಿಡಿದು ಬಗ್ಗುಬಡಿದ ಹಲವು ಸೈನಿಕರು ದೇಶಕ್ಕಾಗಿ ಮಡಿದ ಉದಾಹರಣೆ ಹಲವಿವೆ. ಒಟ್ಟಾರೆಯಾಗಿ ನಾಡು, ನುಡಿ, ನೆಲ, ಜಲದ ವಿಚಾರಕ್ಕೆ ಬಂದರೆ ಭಾರತೀಯರ ಸ್ವಾಭಿಮಾನ ಕೆರಳುತ್ತದೆ ಎಂಬುದು ಕವಿತೆಯ ಸಾರವಾಗಿದೆ.

ಗಾಂಧಿ ಎಂದಿಗೂ ಪ್ರಸ್ತುತ. ಸ್ವತಂತ್ರ ಹೋರಾಟದ ರಾಷ್ಟ್ರಪಿತನಾಗಿ ಮಾತ್ರವಲ್ಲದೆ ರಾಷ್ಟ್ರದ ಏಳಿಗೆಗೆ ಎಲ್ಲ ವಲಯಗಳಲ್ಲೂ ಬದಲಾವಣೆಗೆ ಆಮೂಲಾಗ್ರವಾಗಿ ಹೋರಾಡಿದ ಹೋರಾಟಗಾರ. ಆ ನಗುವೆ ಎಲ್ಲರನ್ನೂ ಅಹಿಂಸಾ ಮಾರ್ಗದತ್ತ ಕೊಂಡೊಯ್ಯುವ ಗರಿಕೆಯಂತೆ ಎಂಬುದನ್ನು ಮಹಿಳಾ ಕಾವ್ಯ ಕಟ್ಟಿಕೊಟ್ಟಿದೆ.

“ಇಲ್ಲವೆಂದರೂ
ಇಲ್ಲವಾಗುವುದೇ?
ನೆನಪು
ಹುಲ್ಲು ಗರಿಕೆಯಂತೆ
ಹಸಿರಾಗಿದೆ.
ಆ ಚಿತ್ರ ಅವನದೇ
ಮಳೆ ಬಿಲ್ಲಿನಂತೆ
ಭರತ ಖಂಡದ ಮೇಲೆ ಬಾಗಿದೆ
ತಂಗಾಳಿ ಅದನು ತೂಗಿದೆ” [೫೮]

ಗರಿಕೆಗೆ ಒಂದಷ್ಟು ಜಾಗ ಸಿಕ್ಕರೆ ಸರ್ವವೂ ವ್ಯಾಪಿಸುವಂತೆ ಗಾಂಧಿಯ ಆ ಮುಗ್ಧ ನಗು, ದಿಟ್ಟ ಹೋರಾಟದ ಫಲವೇ ಇಂದಿನ ಸ್ವಾತಂತ್ರ್ಯದ ಫಲ ಎಂಬಂತೆ ಕವಿತೆ ಬಿಂಬಿತವಾಗುತ್ತದೆ. ಬ್ರಿಟೀಷರನ್ನು ಓಡಿಸಲು ಪಟ್ಟ ಶ್ರಮ, ಸಂಘಟನಾ ಮನೋಭಾವ ಎಲ್ಲವನ್ನೂ ತನ್ನ ತಾಳ್ಮೆ ಮತ್ತು ನಗುವಿನಿಂದಲೇ ಜಗತ್ತನ್ನು ಗೆಲ್ಲುವ ಶಕ್ತಿ ಗಾಂಧಿಗಿತ್ತು ಎಂಬುದನ್ನು ಧ್ವನಿಸುತ್ತದೆ. ಮುಂದುವರೆದು

“ಸರಕು ಸಂತೆಯಲಿ
ಗೌಜು ಗದ್ದಲದಲಿ
ತುಸು ನೂಲ
ತಾನೇ ನೂಲುತಿದೆ ಚರಕ
‘ಅರಿವೆ’ ಅರಿವೆಂಬ ರೂಪಕ

ಅಳಿಸಲಾಗದು ಅಚ್ಚೊತ್ತಿದಂತಿದೆ
ಅಷ್ಟು ಸುಲಭವಾಗಿ
ಆರದು
ಅವನು ಹಚ್ಚಿದ ದೀವಿಗೆ" [೫೯]

ಗುಡಿ ಕೈಗಾರಿಕೆಗಳ ಹರಿಕಾರ ಗಾಂಧಿ. ಹರಿಜನ ಉದ್ಧಾರ, ಮಧ್ಯಪಾನ ವಿರೋಧದ ಬಗ್ಗೆ ಸಂಚಲನ ಉಂಟುಮಾಡಿದ್ದ ಗಾಂಧಿ ಇಂದಿಗೂ ಪ್ರಸ್ತುತ. ಹಲವು ಮಹತ್ವ ಯೋಜನೆಗಳನ್ನು ಹುಟ್ಟು ಹಾಕುತ್ತಲೇ ಮಹಾತ್ಮನಾದ ವ್ಯಕ್ತಿ. ಇಂದಿಗೂ ಗಾಂಧಿ ಯೋಜನೆಗಳು ಬಡವರ ಬದುಕಿನ ಆಶಾಕಿರಣವಾಗಿದೆ. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಬಗ್ಗೆ ಎಷ್ಟೇ ಮಾತನಾಡಿದರೂ ಎಲ್ಲದಕ್ಕೂ ಮೂಲ ಮಂತ್ರ ಗಾಂಧಿಯ ಯೋಜನೆಗಳು.

ಹೆಣ್ಣು ಆದಿ ಅಂತ್ಯ ಎಂಬ ಮಾತನಾಡುವ ಪುರುಷ ವರ್ಗ ಅನಾದಿ ಕಾಲದಿಂದಲೂ ಅವಳನ್ನು ತನ್ನ ಅಂಕೆಯಲ್ಲೇ ಹಿಡಿದಿಟ್ಟುಕೊಂಡು ಬಂದಿರುವುದು ತಿಳಿದ ಸಂಗತಿ. ಒಂದಲ್ಲ ಒಂದು ರೀತಿ ರಿವಾಜುಗಳ ನೆಪವೊಡ್ಡಿ ಸಂಪ್ರದಾಯಕ್ಕೆ ಅವಳೇ ಶರಣಾಗುವಂತೆ ಮಾಡಿದ್ದು ಸಹ ದುರಂತವೇ. ಗಂಡಿನ ಒಳಗಿನ ಅನುಮಾನವನ್ನು ಸಾಕಾರ ರೂಪದಂತೆ ಪಾಲಿಸಿಕೊಂಡು ತನಗರಿವಿಲ್ಲದಂತೆ ಅದಕ್ಕೆ ಬಲಿಪಶುವಾದವಳೂ ಹೆಣ್ಣೇ. ಆದರೂ ಪುರುಷ ವರ್ಗವನ್ನು ಆದರ್ಶದ ಪರಮಾವಧಿಯಂತೆ ಕಾಣುತ್ತಾ ಗಂಡು ಹೆತ್ತರೇ ಸ್ವರ್ಗ ಪ್ರಾಪ್ತಿ ಎಂಬ ಕುರುಡು ನಂಬಿಕೆ ಈಗಲೂ ಹೋಗಿಲ್ಲ. ಇಂತಹ ಆಜ್ಞಾರೂಪಕ ವರ್ಗವನ್ನು 'ನಮ್ಮವರೇ' ಎಂಬ ಸ್ವಾಮಿ ನಿಷ್ಠೆಯೊಂದಿಗೆ ಪತಿವ್ರತಾ ಧರ್ಮದ ಹೆಸರಿನಲ್ಲಿ ನಾವುಗಳು ಪಾಲಿಸಿಕೊಂಡು ಬಂದಿದ್ದೇವೆ. ಚರಿತ್ರೆಯ ಅಂಶಗಳನ್ನು ಗಂಡಿನ ಕ್ರೌರ್ಯವನ್ನು ಕೆಲವೇ ಸಾಲುಗಳಲ್ಲಿ ವಿಡಂಬನೆಯ ಮೂಲಕ ಚರಿತ್ರೆಯ ಇಡೀ ಚಿತ್ರಣ ನಮ್ಮ ಕಣ್ಮುಂದೆ ಬರುವಂತೆ ಮಹಿಳಾ ಕಾವ್ಯ ರಚಿತಗೊಂಡಿದೆ.

"ಇವರೆ ನಮ್ಮವರು
ನಮ್ಮ ಕಾಯುವವರು
ಅನುರಾಗದ ಘನರಾಗವ
ಶೃತಿ ತಪ್ಪದೆ ಹಾಡಿ
ಪ್ರೀತಿಯಲ್ಲೇ ತೊಡಿಸುವರ
ನಮ್ಮ ಕೈಗೆ ಬೇಡಿ" [೬೦]

ಈ ಸಾಲುಗಳಲ್ಲಿ ತಣ್ಣನೆಯ ಪ್ರತಿಭಟನೆ ಅಡಗಿದೆ. ಇಡೀ ಕವಿತೆ ಪರಂಪರೆಯಿಂದ ಹೆಣ್ಣನ್ನು ನಡೆಸಿಕೊಂಡು ಬಂದ ರೀತಿಯ ಅನಾವರಣ ಮಾಡುತ್ತದೆ. ನಮ್ಮನ್ನು ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಸಾಮಾಜಿಕವಾಗಿ ಪ್ರತಿ ಹಂತದಲ್ಲೂ

ಬಂಧಿಸುವ ಕ್ರೂರತೆಯ ಕರಾಳ ದರ್ಶನ ಮಾಡಿಸುತ್ತದೆ. ಪುರಾಣ ಮತ್ತು ಚರಿತ್ರೆಗಳಲ್ಲಿ ಆದರ್ಶಗಳನ್ನು ಹೇಳುತ್ತಲೇ ಅವಳನ್ನು ಗತ ಕಾಲದಿಂದಲೂ ಬಳಕೆಯ ಸರಕನ್ನಾಗಿಸಿ ಕೊಂಡು ಬಂದ ರೀತಿಯನ್ನು ಈ ಕವಿತೆ ಚಿತ್ರಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಚರಿತ್ರೆಯಲ್ಲಿ ಚಿತ್ರಿತಗೊಂಡ ಹೆಣ್ಣಿನ ಬದುಕಿನ ದರ್ಶನವನ್ನು ಮತ್ತೊಬ್ಬ ಹೆಣ್ಣು ಅದನ್ನು ಕನ್ನಡಿಯಂತೆ ಕಂಡಾಗ ಅವಳಲ್ಲಾಗುವ ಸಾಂಸ್ಕೃತಿಕ ವ್ಯತ್ಯಾಸದ ಪ್ರತಿರೂಪದಂತಿದೆ ಈ ಕವಿತೆ ಆದರೂ ಇವರೆ ನಮ್ಮವರು ಎಂಬ ಮಾತಿನಲ್ಲಿ ವ್ಯಂಗ್ಯೋಕ್ತಿ ಮನೆ ಮಾಡಿದೆ.

ಶೋಷಿತರ, ದಲಿತರ ನೋವಿಗೆ ಸ್ಪಂದಿಸುವ ಮತ್ತು ಹೋರಾಡುವ ಮನಸ್ಸಿನ ಗಂಡಾಗಲೀ ಅಥವಾ ಹೆಣ್ಣಾಗಲೀ ಎಲ್ಲರಿಗೂ ಆಪ್ತವೇ. ಮಂಡೇಲಾರ ದಿಟ್ಟ ನಡೆ ಎಷ್ಟು ಅವಶ್ಯಕ ಮತ್ತು ಪ್ರಸ್ತುತ ಎಂಬ ಮಾತನ್ನು ಚಾರಿತ್ರಿಕ ದೃಷ್ಟಿಕೋನದಿಂದ ಮಹಿಳಾ ಕಾವ್ಯಗಳು ಕಂಡಿವೆ.

"ಕಾರಾಗೃಹದ ಕತ್ತಲಲ್ಲೂ
ನೇರ ನಡೆವ ನಿರ್ಭಯತೆ
ಯಾವ ದಬ್ಬಾಳಿಕೆಗೂ
ವಿಚಲಿತವಾಗದ ಸ್ಥಿರತೆ.
ನೀನಾಗಿರುವೆ
ಅಸ್ತಮಿಸದ ಸೂರ್ಯ
ಅಸಂಖ್ಯಾತ ದಲಿತರ ನೋವಿಗೆ
ತೂರ್ಯ
ಇನ್ನು ತಳಕಿತ್ತು ಓಡಲಿದೆ ಬಿಳಿಯ ಕ್ರೌರ್ಯ" ೬೧

ಮಂಡೇಲಾ ಪರದೇಶದವರಾದರೂ ತನ್ನ ಜನಗಳ ಬಗೆಗೆ ತೋರಿದ ಔದಾರ್ಯದ ಪ್ರೀತಿಯನ್ನು ಇಡೀ ಜಗತ್ತೇ ಮಾದರಿಯಾಗಿ ಸ್ವೀಕರಿಸಿದೆ. ಮಹಿಳಾ ಕಾವ್ಯದ ಮಹತ್ವವೆಂದರೆ ತಳ ಸಮುದಾಯದ, ಹೆಣ್ಣು ಮಕ್ಕಳ ಬಗೆಗಿನ ಕಾಳಜಿಗಳಿಗೆ ಹೋರಾಡಿದ ಮಹನೀಯರುಗಳನ್ನು ಯಾವುದೇ ಎಗ್ಗಿಲ್ಲದೆ ಸ್ವೀಕರಿಸುವುದು. ಆ ಮೂಲಕ ಚರಿತ್ರೆಯ ರಚನೆಯನ್ನು ಬೇರೊಂದು ನೋಟದಲ್ಲಿ ಕಾಣುವಂತೆ ಮಾಡುವುದು. ಸ್ತ್ರೀಯಾತ್ಮಕ ದೃಷ್ಟಿಕೋನದ ಚಿತ್ರಣ ಸಮಾಜದ ಹೊಸ ಹೊಳಹನ್ನು ಕಟ್ಟಿಕೊಡಲು ಸಹಾಯ ಮಾಡುವ ಮಾನದಂಡವೂ ಹೌದು.

ಆಧುನಿಕ ಕನ್ನಡ ಮಹಿಳಾ ಕಾವ್ಯ ಚರಿತ್ರೆಗೊಂದು ಹೊಸ ಭಾಷ್ಯ ಬರೆಯುತ್ತದೆಂಬುದಕ್ಕೆ ವಿನಯಾರವರ ಕವಿತೆಗಳೂ ನಿದರ್ಶನ. ಕವಯಿತ್ರಿಯೇ ಹೇಳುವಂತೆ

"ಕವಿತೆ ನನ್ನ ಪಾಲಿಗೆ ಅಜ್ಜಿಯ ಮಡಿಲಿನಂತೆ, ಅಂಟವಾಳಕಾಯ ವಾಸನೆಯ ಪಿಸಿದ ಸೀರೆಯ ತೊಡೆಮೇಲೆ ಮಲಗಿ, ತಲೆಮೇಲಿನ ಹರಕು ಮೋಡಗಳ ತಡಕಾಡಿ ಕಳೆದುಹೋದ ಚುಕ್ಕಿಗಳ ಹುಡುಕಾಡಿದಂತೆ ಅಜ್ಜಿಯ ಕೈಯ ಒಂದೇ ಒಂದು ಕೆಂಪುಗಾಜಿನ

ಬಳೆಯಂತೆ ಆ ಕೈತುತ್ತಿನೊಳಗಿನ ಗಂಜಿಯ ಅಗುಳಿನಂತೆ ಕಣ್ಣೀರನ್ನು ಕವಿತೆಯೊಂದಿಗೆ ನುಂಗುವುದು ಸುಲಭ ಎಂದು ಕಲಿಸಿಕೊಟ್ಟಿದ್ದ ಅಜ್ಜಿ ಅವಳ ಮಡಿಲಿಲ್ಲದ ಭಣ ಭಣದಲ್ಲಿ ಕವಿತೆಯ ಎದೆ ಮೇಲೆ ತಲೆಯಿಟ್ಟು ಬಿಕ್ಕುಗಳ ನುಂಗುವುದು ರೂಢಿಯಾಯಿತು. ನನ್ನೊಂದಿಗೆ ನಾನೇ ಮುಖಾಮುಖಿಯಾದಾಗ ಹುಟ್ಟಿದ ಅಕ್ಷರಗಳಿವು. ಆತಂಕಕ್ಕೆ, ಕಂಪನಕ್ಕೆ, ಖುಷಿಗೆ, ಪಿಸುಗಿಗೆ, ಮಿಸುಗಿಗೆ ದಕ್ಕಿದ ಭಾಷೆಗಳಿವು. ಕಡ ತಂದವಾಗಲಿ, ಹೊತ್ತು ತಂದವಾಗಲಿ ಏನೂ ಇಲ್ಲ. ಎಲ್ಲ ನಾನೇ ಬರಿ ನಾನೇ. ನನ್ನ ಮಿತಿ ಮತ್ತು ನನ್ನ ಪ್ರೀತಿಗಳೆಲ್ಲ ಇಲ್ಲಿವೆ ಎಂದುಕೊಂಡಿದ್ದೇನೆ" ೬೨ ಎನ್ನುವಾಗ ಚರಿತ್ರೆಯ ಆಳದ ಅರಿವಾಗುತ್ತದೆ. ಅಜ್ಜಿ ಮೊಮ್ಮಗಳ ಸಂಬಂಧಕ್ಕಿಂತ ಹೆಣ್ಣನ್ನು ಸಮಾಜ ಕಂಡುಕೊಂಡ ಬಗ್ಗೆ ಎಲ್ಲ ಮಿತಿಗಳನ್ನು ಮೀರಿ ನಡೆವಾಗ ಅವಳಲ್ಲಾಗುವ ಬದಲಾವಣೆ ಮತ್ತು ಜಾಗೃತ ಪ್ರಜ್ಞೆಯ ಸೂಕ್ಷ್ಮತೆಯು ಇವರ ಮಾತುಗಳಲ್ಲಡಗಿವೆ.

"ನನ್ನ ಕನಸಿನಲ್ಲಿ
ಸದ್ದಿಲ್ಲದೇ ಎದ್ದು ನಿಲ್ಲುತ್ತಿವೆ
ನಾನೇ ಹೆತ್ತ
ಪುಟ್ಟ ಪುಟ್ಟ ಮೆತ್ತ ಮೆತ್ತಗಿನ ಗೋರಿಗಳು
ನಾವೇ ನೇಯ್ದ ಹಸಿವಿನ ಹಳದಿ ಶಾಲೊಳಗೆ
ಸುಮ್ಮಾನದಿಂದ ಮಲಗಿವೆ ಅಸ್ಥಿಪಂಜರಗಳು" ೬೩

ಕುರುಕ್ಷೇತ್ರ ಯುದ್ಧ ಚರಿತ್ರೆಯಲ್ಲಿ ಮೂಡಿಸಿದ ಕರಾಳ ಛಾಯೆಯನ್ನು ಬಿಚ್ಚಿಡುತ್ತದೆ ಕವಿತೆ. ಯುದ್ಧವೆಂದರೆ ರಾಜ ಮಹಾರಾಜರ ಪ್ರತಿಷ್ಠೆಯ ಕಣದಂತೆ ಭಾವಿಸುವ ಜಗತ್ತಿಗೆ ಅಮಾಯಕ ಜನ ಬಲಿಯಾದ ಕರಾಳ ರೂಪ ಗೌಣವಾಗುತ್ತದೆ. ಬಲಾಬಲದ ನೆರಳಲ್ಲಿ ಬಲಿಯಾದ ಮುಗ್ಧ ಜನರನ್ನು ನಂಬಿದ ಕುಟುಂಬಗಳು, ಅವರ ನೋವುಗಳು ನಮಗೆ ಕಾಣಿಸುವುದೇ ಇಲ್ಲ ಏಕೆಂದರೆ ಇತಿಹಾಸದಲ್ಲಿ ಚರಿತ್ರೆ ದಾಖಲಾಗುವುದು ಪ್ರತಿಷ್ಠೆಯ ಉತ್ತುಂಗದಂತೆ ಅಸಹಾಯಕ ಹೆಣ್ಣು ಸೂತ್ರಧಾರನಾದ ಕೃಷ್ಣನನ್ನು ಕೇಳುತ್ತಾಳೆ. ಕವಿತೆ ಮುಂದುವರೆದು,

"ಕುರುಡು ಸಂಭೋಗಕ್ಕೆ ಕಣ್ಣಿಲ್ಲ ಕನಸಿಲ್ಲ
ಎಂದು ಸಾರುವ ಪಾಂಚಜನ್ಯವೆ ಹೇಳು
ಅಲ್ಲಿ ಹರಿದದ್ದು ಸುರಿದದ್ದು ಯಾವ ರಕ್ತ?
ರಕ್ತ ಕೀವಿನ ನಾತ ಕುಡಿಯುತ್ತ
ಕೊರೆವ ಮನಸ ಮುಡಿಪಿಟ್ಟು
ಮುದ್ದಿಸುವನೇ ಆ ಮಕ್ಕಳನ್ನೆಲ್ಲ
ಮತ್ತೊಮ್ಮೆ ಹೆತ್ತು ...." ೬೪

ಗಾಂಧಾರಿ ಸಾಮಾನ್ಯ ಹೆಣ್ಣಿನ ಪ್ರತಿರೂಪ ಪಡೆದಿದ್ದಾಳೆ. ನೂರೊಂದು ಜನ ಮಕ್ಕಳನ್ನು ಹೆತ್ತದ್ದು ಕಾಲ್ಪನಿಕವೇ ಇರಬಹುದು. ಕವಿತೆಯಲ್ಲಿ ಹೆಣ್ಣಿನ ಮನಸ್ಥಿತಿಯ ಪ್ರತಿನಿಧಿಯಾಗುತ್ತಾಳೆ ಗಾಂಧಾರಿ. ಮಹಾಭಾರತದ ಕುರುಕ್ಷೇತ್ರ ಯುದ್ಧ ಧರ್ಮ ಮಾರ್ಗವಾದರೆ ಮಹಿಳಾ ಕಾವ್ಯ ಅದನ್ನು ಕಂಡುಕೊಂಡದ್ದು ಸಾಮಾನ್ಯ ಮಾರ್ಗದಲ್ಲಿ. ಏಕೆಂದರೆ ರಾಜ್ಯ, ಅಧಿಕಾರಕ್ಕಿಂತ, ಮಾತೃತ್ವ, ಭ್ರಾತೃತ್ವ, ಸ್ವಾಭಿಮಾನದ ಮೂಲಕ ಮನುಷ್ಯತ್ವವನ್ನು ಗೆಲ್ಲುವ ಪ್ರತಿಮೆಗಳಾಗಿಯೂ ಮಹಾಭಾರತವಿದೆ. ಅದರಂತೆ ಸೂತ್ರಧಾರನಾದ ಕೃಷ್ಣ ಕವಿತೆಯಲ್ಲಿ ಅಧಿಕಾರ ಕೇಂದ್ರ ನಡೆಯ ಪ್ರತಿನಿಧಿಯೇ ಹೊರತು ಮಾತೃ ಹೃದಯದಿಂದ ದೂರ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಊರ್ಮಿಳೆ ಚರಿತ್ರೆಯ ದೃಷ್ಟಿಯಿಂದಲೂ ಪ್ರಮುಖಳಾದವಳು. ದೈವೀಕ ನೆಲೆಯ ಪ್ರತಿನಿಧಿಯಾಗದೆ ಸಾಮಾನ್ಯ ಹೆಣ್ಣಿನಂತೆ ಬಾಳಿ ತನ್ನದೇ ಚರಿತ್ರೆಯನ್ನು ಬರೆದವಳು ಊರ್ಮಿಳೆ. ರಾಮಾಯಣ ಎಂದರೆ ಸೀತೆ ಮಾತ್ರವಲ್ಲ. ಇಳೆಯೂ ಸಹ ಮರುಗುವಂತ ಮುಗ್ಧ ಮನಸ್ಸಿನವಳು ಊರ್ಮಿಳೆ ಎಂಬ ಮಾತನ್ನು ಹಲವು ಕವಿಗಳು ತಮ್ಮ ಕವಿತೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಊರ್ಮಿಳೆ ಎಂದರೆ ಹೊಸ ನೋಟದಲ್ಲಿ, ಚಿಂತನೆಗೆ ಒಳಗು ಮಾಡುವಂತಹ ಪಾತ್ರದಂತೆ ಇಂದಿಗೂ ಚಿತ್ರಿಸುತ್ತಲೇ ಬಂದಿದ್ದಾಳೆ.

"ತನ್ನದೇ ಹೆಜ್ಜೆಯಿಲ್ಲದವನೊಡನೆ
ಸಪ್ತಪದಿ ತುಳಿದೆನೇ ನಾನು?
ಉದುರಿದ ಪಾರಿಜಾತಕ್ಕೂ
ಮುದುರಿತ್ತಿದ್ದ ಮುಗ್ಧ ಹುಡುಗಿ!
ಕಣ್ಣ ಬೊಗಸೆ ತಂಬ ಕನಸ ತುಂಬಿ
ಅಗೆದಷ್ಟು ಮೊಗೆವ ಮಕರಂದ ಹೊತ್ತು
ಅಯೋಧ್ಯೆಗೆ ಬಂದೆ, ಅಯ್ಯೋ ...." [೬೫]

ಗಂಡಿಗೆ ಸ್ವಂತಿಕೆ ಇಲ್ಲದಾಗ ಹೆಣ್ಣಿನ ಬದುಕೇ ನಡೆ ಇಲ್ಲದಂತೆ ಎಂಬುದು ಊರ್ಮಿಳೆಯ ಮಾತು ಇಂತಹ ಊರ್ಮಿಳೆಯರು ಇಂದೂ ಇದ್ದೇ ಇರುತ್ತಾರೆ. ರಾಮಾಯಣದಲ್ಲಿ ಪ್ರಶ್ನಿಸದ ಊರ್ಮಿಳೆ ಕಾವ್ಯದ ಮೂಲಕ ತನ್ನ ಮನದಾಳದ ಇಂಗಿತವನ್ನು ಬಯಲಿಗೆ ಬರುವಂತೆ ಮಾಡಿದ್ದು ಬಹು ಮುಖ್ಯ ಸಂಗತಿ. ಅರಮನೆಯ ವೈಭೋಗವಿದ್ದರೂ ಅರಿತವನಿಲ್ಲದೇ ಹೋದರೆ ಹೆಣ್ಣಿನ ಬದುಕು ಒಂಟಿತನದ ನಿಸ್ಸಾರದಲ್ಲೇ ಸವೆಯುತ್ತದೆ ಎಂಬುದಕ್ಕೆ ಪ್ರತಿರೂಪದಂತಿದೆ. ಮುಂದುವರೆದು, ಲಕ್ಷ್ಮಣನಿಗೆ ಪ್ರಶ್ನೆ ಮಾಡುತ್ತಾಳೆ ಊರ್ಮಿಳೆ.

"ನನ್ನ ಮನ ಹಿಂಡಿ
ತಪತಪನೆ ಸುರಿವ ನೇತ್ರರಿನಲ್ಲಿ
ಭ್ರಾತೃ ಧರ್ಮದ ನಕ್ಷೆ ಕೊರೆದ ಆರ್ಯ

ಹೆಣ್ಣು ಮೂಗು ಮೊಲೆ ಕೊಯ್ದನೆತ್ತರಿನಲ್ಲಿ
ನನ್ನ ಕಣ್ಣೊಮ್ಮೆಯೂ ಕಾಣಲಿಲ್ಲವೆ ನಿನಗೆ?" [೬೬]

ಮೋಹಿಸಿದ ಹೆಣ್ಣಿನ ಮೇಲಿನ ಕೋಪ ಯುದ್ಧಕ್ಕೆ ಕಾರಣವಾಯಿತು. ಅಂತೆಯೆ ಹೆಂಡತಿಯಾದವಳ ಪ್ರೀತಿ ಕುರುಡೇ. ಭ್ರಾತೃ ಪ್ರೇಮದಲಿ ಬಿದ್ದ ನಿನಗೆ ನಾತಿಚರಾಮಿ ಹೇಳಿದ ಹೆಣ್ಣಿನ ಅಂತರಂಗದ ಅರಿವಾಗಲಿಲ್ಲವೇ? ಎಂದು ಊರ್ಮಿಳೆ ಪ್ರಶ್ನಿಸುವ ರೀತಿ ಇಂದು ಸಮಾಜದ ಎಷ್ಟೋ ಗಂಡಸರಿಗೆ ಪ್ರಶ್ನೆಯೂ ಆಗಿದೆ. ಕಣ್ಣಿಗೆ ಪಟ್ಟಿಕಟ್ಟಿದ ಕುದುರೆಯಂತೆ ರಾಮನನ್ನು ಅನುಸರಿಸಿದ ಲಕ್ಷ್ಮಣ ಒಂದು ಬಾರಿಯಾದರೂ ಊರ್ಮಿಳೆಯ ಮನಸ್ಸನ್ನು ಅರಿಯದೇ ಹೋದುದು ವಿಪರ್ಯಾಸ. ಇಂದಿಗೂ ಸಮಾಜವನ್ನು ಮೆಚ್ಚಿಸುವಂತಹ ಪೋಷಾಕು ಹಾಕಿಕೊಂಡು ನಂಬಿದ ಹೆಣ್ಣುಗಳನ್ನು ಮರು ಮಾತಿಲ್ಲದೇ ದೂರ ಮಾಡುವ ಪುರುಷ ವರ್ಗಕ್ಕೆ ಪ್ರಶ್ನೆಯಂತಿದೆ ಕವಿತೆ.

ಸತ್ತ ಮೇಲೆ ಗೋರಿ ಕಟ್ಟಿದರೇನು ಪ್ರಯೋಜನ! ಇರುವಾಗ ಪ್ರೀತಿಸದೆ ಹೋದರೆ ಶವದ ಮುಂದೆ ಅತ್ತರೇನು ಪ್ರಯೋಜನ ಎಂಬ ಮಾತನ್ನು ಮಹಿಳಾ ಕಾವ್ಯ ಪುಷ್ಟೀಕರಿಸುತ್ತದೆ.

"ನಾಸತ್ತ ಮೇಲೆ ಜನ ಮೆಚ್ಚಿಕೊಳ್ಳುವ
ತಾಜಮಹಲು – ಗೋಳಗುಮ್ಮಟಗಳು
ನನಗೆ ಬೇಡ ಹುಜೂರ
ನಾನಿರುವಾಗಲೇ
ರೊಟ್ಟಿ – ಬಟ್ಟೆ ತಲೆಯ ಮೇಲೊಂದು ಸೂರು
ಕೊಟ್ಟು ನೋಡು
ಯಾವ ಮಮತಾಜ ರಂಭಾಳಿಗಿಂತ
ಮಿಗಿಲಾಗಿ ಪ್ರೇಮಿಸುತ್ತೇನೆ" [೬೭]

ಈ ಮಣ್ಣಿನ ಬದುಕನ್ನು ಪ್ರೀತಿಸುವ ರೀತಿ ಕವಿತೆಯಲ್ಲಿದೆ. ಸ್ವರ್ಗದ ರಂಭೆ, ಚರಿತ್ರೆಯ ಮಮ್ತಾಜ್‌ಗಿಂತ ವಾಸ್ತವದ ಪ್ರೇಮಿಯ ಹಂಬಲ, ಪ್ರೇಮದ ತುಡಿತ ಕಂಡುಬರುತ್ತದೆ. ಇದು ಪ್ರತಿಯೊಬ್ಬರಲ್ಲಿ ಸಹಜವೂ ಹೌದು. ಸತ್ತ ಮೇಲೆ ಚರಿತ್ರೆ ಬರೆಯುವುದಕ್ಕಿಂತ, ಬದುಕಿದ್ದಾಗ ಜೀವನದ ಅಧ್ಯಾಯ ಬರೆಯುವ ಹಂಬಲ ಇಲ್ಲಿದೆ. ದಿನನಿತ್ಯದ ಅಗತ್ಯ ಪರಿಕರಗಳಾದ ಊಟ, ವಸತಿ ಮತ್ತು ಬಟ್ಟೆಯಿದ್ದರೆ ಸಾಮಾನ್ಯರಲ್ಲೂ ಅಸಮಾನ್ಯ ಪ್ರೀತಿ ಹುಟ್ಟುತ್ತದೆ ಎಂದು ಹೇಳುವುದರೊಂದಿಗೆ ಬಡತನದ, ಹಸಿವಿನ ಕರಾಳತೆಯನ್ನೂ ಬಿಚ್ಚಿಡುತ್ತದೆ. ಕವಿತೆ ಮುಂದುವರೆದು ಎಲ್ಲ ಅವಶ್ಯಕತೆಗಳು ಪೂರೈಸಿದಾಗ ಅವಳಲ್ಲಾಗುವ ಸಮಾಧಾನವನ್ನೂ, ಬದಲಾವಣೆಯನ್ನೂ ಚಿತ್ರಿಸುತ್ತದೆ.

"ಒಮ್ಮೆ ಬನ್ನಿ
ನಾನು ಹೊಟ್ಟೆ ತುಂಬಾ ಉಂಡು
ಮೈ ತುಂಬಾ ಉಟ್ಟು
ಪಲ್ಲಂಗದಲಿ ಮೈ ಚೆಲ್ಲಿದಾಗ
ಬನ್ನಿ ನಿಜಾಮರೆ, ಕನಸಾಗಿ ಬನ್ನಿ
ತಾಜಮಹಲಿನ ಹಾಡು ಕಟ್ಟುವ ಬಗ್ಗೆ
ಮಾತನಾಡೋಣ" ೬೮

ಚರಿತ್ರೆಯಲ್ಲಿ ತಾಜಮಹಲೆಂದರೆ ಪ್ರೀತಿಯ ಸಂಕೇತ ಎಂಬ ಅದ್ಭುತ ಸಂತೋಷವನ್ನು ಆಧುನಿಕ ಮಹಿಳಾ ಕಾವ್ಯದ ದೃಷ್ಟಿಕೋನದ ಬರಹಗಳು ಬೇರೊಂದು ಮಗ್ಗುಲಿಗೆ ಕೊಂಡೊಯ್ಯುತ್ತದೆ. ಶ್ರೀಮಂತ ಷಹಜಹಾನ್ ತನ್ನ ಮಮ್ತಾಜಳಿಗೆ ಕಟ್ಟಿದ ಗೋರಿಗಿಂತ, ಹಸಿವನ್ನು ಇಂಗಿಸಿ ಬದುಕು ನಡೆಸಲು ಅನುವಾಗುವುದೇ ನಿಜವಾದ ಜೀವನ. ಅದರಲ್ಲೇ ಹೆಣ್ಣು ಸಾರ್ಥಕ ಪಡುತ್ತಾಳೆ ಎಂಬುದನ್ನು ಕವಿತೆ ಸ್ಪಷ್ಟೀಕರಿಸುತ್ತದೆ. ತೋರಿಕೆ ಪ್ರೀತಿಗಿಂತ ವಾಸ್ತವ ಬದುಕಿನ ಪ್ರೀತಿಗೆ ಹೆಚ್ಚು ಒತ್ತು ಕೊಡಬೇಕೆಂಬ ಅಂಶವಿದೆ.

ಚರಿತ್ರೆಯಲ್ಲಿ ದೇವದಾಸಿಯರ ಬದುಕು ವೈಭವದಿಂದಲೋ, ಶೃಂಗಾರದಿಂದಲೋ ಚಿತ್ರಿತಗೊಂಡಿರುತ್ತದೆ. ಯೌವ್ವನ ಮುಗಿದ ಮೇಲೆ ಅವರ ಬದುಕಿನ ಧಾರುಣ ಜೀವನವೂ ಚರಿತ್ರೆ ದಾಖಲಿಸಿದೆ. ದೇವದಾಸಿಯ ಮಗಳ ಬದುಕಿನ ಚಿತ್ರಣ ಯಾವರೀತಿಯದು, ಅವಳ ಬದುಕಿನ ಹಂಬಲ ಬೇರೆಯಾದರೂ ಸಮಾಜದ ಜನರ ದೃಷ್ಟಿಕೋನ ಬೇರೆಯಾಗದು. ಎಂಬುದನ್ನು ಹಲವು ಸಿನಿಮಾಗಳು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿವೆ. ತನ್ನದಲ್ಲದ ತಪ್ಪಿಗೆ ಬಲಿಯಾದ ಹೆಣ್ಣಿನ ಬದುಕು ತನಗೇ ಪ್ರಶ್ನೆಯಾಗಿ ಉಳಿದರೆ ಅವಳಲ್ಲಿ ಉಂಟಾಗುವ ತಾಕಲಾಟಗಳನ್ನು ಹಲವು ಆಧುನಿಕ ಮಹಿಳಾ ಕಾವ್ಯ ಭಿನ್ನ ನೆಲೆಯೊಂದಿಗೆ ಕಟ್ಟಿಕೊಟ್ಟಿದೆ. ಇದರ ಜೊತೆಗೆ ಚರಿತ್ರೆಯ ಮತ್ತೊಂದು ಮುಖದ ಅನಾವರಣವನ್ನೂ ಎಳೆ ಎಳೆಯಾಗಿ ಬಿಡಿಸಿಕೊಡುತ್ತದೆ.

"ನಡು ಮಧ್ಯಾಹ್ನದಲ್ಲೇ
ಸಂಜೆಗತ್ತಲು ಕವಿಯುವಾಗ
ಎಲ್ಲಿ ಹುಡುಕಲಿ ನನ್ನ
ಕಳಕೊಂಡ ಮುಂಜಾವುಗಳನ್ನ
ಅಪ್ಪನಿಲ್ಲದೆ ಹಡೆದ
ಅವ್ವನ ಮೊಲೆಗಂಟಿನಲ್ಲೆ?
ಶಾಲೆಗೆ ಹಚ್ಚುವಾಗ
ತನ್ನ ಹೆಸರನ್ನೇ ಮರೆತ

ಅಪ್ಪನ ಚಪ್ಪಲಿನಲ್ಲೆ?
ತಂದೆಯ ಜಾಗದಲ್ಲಿ
ತಾಯಿ ಹೆಸರು ತುಂಬಿದ
ಮಾಸ್ತರರ ಪೆನ್ನಿನಲ್ಲೆ?
ಎಲ್ಲಿ ಹುಡುಕಲಿ ನನ್ನ
ಕಳಕೊಂಡ ಮುಂಜಾವುಗಳನ್ನು?" [೬೯]

ಹೆಣ್ಣಿನ ಅಂತರಂಗದ ನಿಜವಾದ ಪರಿಸ್ಥಿತಿಗೆ ಹಿಡಿದ ಕನ್ನಡಿಯಂತಿದೆ ಕವಿತೆ. ಮಹಿಳೆ ಏನು ಬರೆಯಬಲ್ಲಳು? ಅಡುಗೆ ಮನೆ ಸಾಹಿತ್ಯವನ್ನೇ? ಮುಂತಾದ ಪ್ರಶ್ನೆಗಳಿಗೆ ನೇರ ಉತ್ತರದಂತಿದೆ. ತನ್ನದಲ್ಲದ ತಪ್ಪಿಗೆ ಬಲಿಪಶುವಾಗುವ ಹೆಣ್ಣಿನ ಮೂಕ ವೇದನೆ ಹೇಳತೀರದು. 'ದೇವರದಾಸಿ' ಎಂಬ ನಿತ್ಯ ಸುಮಂಗಲಿಯ ಮಗಳಾಗಿ ಹುಟ್ಟಿದ ಹೆಣ್ಣಿಗೆ ಸಾಮಾಜಿಕವಾಗಿ ಅವಳನ್ನು ನಡೆಸಿಕೊಳ್ಳುವ ರೀತಿ ವಿಶಾದತೆಯಿಂದ ಕೂಡಿದೆ. ಕಾಮದಾಹ ದಹಿಸಿಕೊಂಡ ಗಂಡು ನಿರಾತಂಕವಾಗಿ ಓಡಾಡಿದರೆ, ಅದಕ್ಕೆ ಬಲಿಯಾದ ಹೆಣ್ಣು ಮಾತ್ರ ನಿರಂತರ ಸಂಕಟ ಪಟುವಂತೆ ಮತ್ತೊಂದು ಹೆಣ್ಣಿಗೆ ಜನ್ಮ ಕೊಡುವ ಪ್ರಸಂಗ. ಎಲ್ಲವೂ ಹೆಣ್ಣಿನ ಬದುಕಿನ ಕರಾಳತೆಯ ದರ್ಶನ ಮಾಡಿಸುತ್ತದೆ. ಗೆಳತಿಯ ಅಪ್ಪ, ಶಾಲೆಯ ಮಾಸ್ತರು ಎಲ್ಲರೂ ಪುರುಷರಾಗಿರುವಾಗ ತನ್ನಪ್ಪನ 'ಐಡೆಂಟಿಟಿ' ಯನ್ನು ಹುಡುಕಲು ಬಾಲ್ಯದಲ್ಲೇ ಹೆಣ್ಣು ತನ್ನ ತನಕ್ಕಾಗಿ ಹುಡುಕಾಟ ನಡೆಸಿ ಹೈರಾಣಾದಾಗ ಮುಂದೆ ಅವಳನ್ನು ಕಾಣುವ ರೀತಿ ಘೋರ ನರಕದಂತಿದೆ. ಕವಿತೆ ಓದುತ್ತಲೇ ಹೆಣ್ಣಿನ ಬಗೆಗಿರುವ ಇಂತಹ ವಾಸ್ತವ ಸ್ಥಿತಿಗಳು ನಮ್ಮ ಕಲ್ಪನೆಯಲ್ಲಿ ಮೂಡಿಬಂದಾಗ ಮೈ ನಡುಗುತ್ತದೆ. ಇಂತಹ ಪಾಪ ಕೃತ್ಯಕ್ಕಿಳಿಯುವಂತೆ ಮಾಡಿದ ಸಮಾಜದ ಅಧಿಕಾರಶಾಹಿ ಪದ್ಧತಿಯ ವ್ಯವಸ್ಥೆಗೆ ಅಸಹ್ಯ ಹುಟ್ಟಿಸುವಂತೆ ಮಾಡುತ್ತದೆ. ಇಡೀ ಕವಿತೆ ಹೆಣ್ಣಿನ ಬದುಕಿನ ದಾರುಣ ಸ್ಥಿತಿಯನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತದೆ. ಆ ಮೂಲಕ ಚರಿತ್ರೆಯ ಕರಿನೆರಳಿನ ಛಾಯೆಯ ದಟ್ಟತೆಯ ಅರಿವನ್ನೂ ಪ್ರತಿಫಲಿಸುತ್ತದೆ.

ಕಾಲಾನುಘಟ್ಟದಲ್ಲಿ ನಾವು ಆಧುನಿಕ ಕನ್ನಡ ಮಹಿಳಾ ಕಾವ್ಯವನ್ನು ಅಧ್ಯಯನ ಶಿಸ್ತಿಗೆ ಒಳಪಡಿಸಿದಂತೆಲ್ಲಾ ವಸ್ತು ಒಮ್ಮೆಯಾದರೂ ಆಲೋಚನಾ ಪರಿಧಿ ಹಾಗೂ ಶಿಸ್ತುಬದ್ಧ ಬರವಣಿಗೆ ಬೇರೊಂದು ಮಗ್ಗುಲನ್ನು ಪಡೆದುಕೊಳ್ಳುತ್ತವೆ. ಚರಿತ್ರೆಯಲ್ಲಿ ಹಾದುಹೋಗಿರುವ ಬುದ್ಧನ ನಡೆಯನ್ನು ಸ್ತ್ರೀವಾದಿ ದೃಷ್ಟಿಕೋನದಲ್ಲಿ ನಿಂತು ನೋಡಿದಾಗ ಅದು ಬೇರೊಂದು ಮಗ್ಗುಲನ್ನು ಪಡೆಯುತ್ತದೆ. ಒಂದು ವೇಳೆ ಬುದ್ಧ ಮತ್ತೊಮ್ಮೆ ಸಿಕ್ಕರೆ ಕೊಂದುಹಾಕು ಎಂಬ ಮಾತು ಆಕ್ರೋಶದಿಂದಲ್ಲ, ಹೆಣ್ಣಿನ ಅಂತರಂಗವನ್ನು ಅರಿಯದವನ ನಡೆಯನ್ನು ಕೊಲ್ಲುವುದೆಂದರ್ಥ.

"ಬುದ್ಧ ಎಂದರೆ
ಜಗಕೆ ಜೋಗುಳ ಹಾಡಿ
ನಿದ್ದೆಗೆಟ್ಟವನು
ನಡುರಾತ್ರಿ ಕದವಿಕ್ಕಿ
ಮನೆ ಬಿಟ್ಟವನು
ಬುದ್ಧ ಎಂದರೆ ನನಗೆ
ಯಶೋಧರೆಯ ಕಣ್ಣೀರು" [೭೦]

ಜಗತ್ತಿಗೆ ಬೆಳಕು ಕೊಟ್ಟ ಬುದ್ಧ ತನ್ನ ಹೆಂಡತಿಯ ಅಂತರಂಗವನ್ನು ಅರಿಯುವಲ್ಲಿ ಸೋತ ಎಂಬುದನ್ನು ದಿಟ್ಟತನದಲ್ಲಿ ಹೇಳುವಂತಿದೆ ಕವಿತೆ. ಬುದ್ಧ ಅರಮನೆಯಿಂದ ಹೊರಟ ನಂತರ ರಾಹುಲ ಮತ್ತು ಯಶೋಧರೆಯ ಜೀವನ ಗೌಣವಾಗುತ್ತದೆ. ಆದರೆ ಹೆಣ್ತನದ ದೃಷ್ಟಿಕೋನದಿಂದ ನೋಡಿದಾಗ ಯಶೋಧರೆಯ ಸಂಕಟ, ನೋವು ಹತಾಷೆ ಮುಖ್ಯವಾಗುತ್ತದೆ. ಬುದ್ಧನನ್ನು ನಾವು ಸರಿ ತಪ್ಪುಗಳ ತಕ್ಕಡಿಯಲ್ಲಿ ತೂಗುವುದಿಲ್ಲ. ಬದಲಿಗೆ ಹೆಂಡತಿ ಮಗನನ್ನು ತೊರೆದಾಗ ಬುದ್ಧನಲ್ಲಾಗುವ ಮಾನಸಿಕ ತೊಳಲಾಟಕ್ಕಿಂತ ಜಗತ್ತಿಗೆ ಬೆಳಕು ಕೊಡುವ ಹಂಬಲವೇ ಹೆಚ್ಚು ಎಂಬುದು ಕವಿತೆಯ ಅಂಶವಾಗಿದೆ.

ಕವಿತೆ ಮುಂದುವರೆದು ಚರಿತ್ರೆಯ ದೃಷ್ಟಿಕೋನದಿಂದ ಜಿಗಿದು ವಾಸ್ತವತೆಯ ಅರಿವಿನೊಂದಿಗೆ ಸಮೀಕರಿಸುತ್ತದೆ.

"ಬುದ್ಧ ಎಂದರೆ
ನಡೆಯುತ್ತ ನಿಂತವನು,
ನುಡಿಯುತ್ತ ಮೌನಿ
ಹೀಗೆಲ್ಲ ಇರುವ ಬುದ್ಧ
ಹೊರಗೆ ಕಂಡರೆ
ಕೊಂದು ಹಾಕು!"[೭೧]

"If you meet Buddha outside, Kill him" Linji

ಅಂತರಂಗದ ಬುದ್ಧನನ್ನು ಶೋಧಿಸುವ ಪ್ರಯತ್ನ ಇಲ್ಲಿದೆ. ಸಂಸಾರ ಜಂಜಡಗಳನ್ನು ತೊರೆದ ಬುದ್ಧ ಮಹಾಜ್ಞಾನಿಯಾದ. ಎಲ್ಲವನ್ನೂ ಬಿಟ್ಟು ಕೊಟ್ಟು ಸಾಧನೆಯ ಹಾದಿ ಸುಗಮವಾಗುವಂತೆ ಮಾಡಿದ ಹೆಂಡತಿ ಯಶೋಧರೆ ಕತ್ತಲಲ್ಲಿ ನಿಂತಳು. ಹೆಣ್ಣಿಗೆ ಬೇಕಾಗಿರುವುದು ಪಾರದರ್ಶಕ ಬದುಕು ಅದನ್ನು ಬುದ್ಧ ಪಾಲಿಸಲಿಲ್ಲ ಎಂಬ ಅರ್ಥ ಹತಾಷೆಯೊಂದಿಗೆ ಕವಿತೆಯಲ್ಲಡಗಿದೆ.

ಹೆಣ್ಣಿಗೆ ಸಿಗ್ಗು, ಸ್ವಾಭಿಮಾನ ಜೊತೆಗೆ ಭಯ ಕೂಡ ಆಭರಣಗಳು ಎಂದು ಚರಿತ್ರೆ, ಪುರಾಣಗಳಿಂದಲೂ ನಂಜಿಸಿ ಪಾಲಿಸಿಕೊಂಡು ಬಂದ ಪಾಠ. ಈ ಪಾಠವನ್ನು ಚಾಚೂ

ತಪ್ಪದೆ ಇಂದಿಗೂ ಒಂದಲ್ಲ ಒಂದು ರೀತಿಯಲ್ಲಿ ಪಾಲಿಸಿಕೊಂಡು ಬಂದಿದ್ದೇವೆ. ಚರಿತ್ರೆಯಲ್ಲಿ ಹೆಣ್ಣನ್ನು ಗಂಡು ದೃಷ್ಟಿಕೋನದಲ್ಲಿಯೇ ಹಿಡಿದಿಡಲಾಗಿತ್ತು. ಅಂತಹ ಚಾರಿತ್ರಿಕ ಪಾತ್ರಗಳು ಇಂದು ಮಹಿಳಾ ಕಾವ್ಯದ ಮುಖಾಂತರ ಬೇರೊಂದು ಮಗ್ಗುಲಿನ ಆಲೋಚನೆಯ ಪಾತ್ರಗಳಾಗಿಯೂ ಚರ್ಚಿತವಾಗುತ್ತಿರುವುದು ವಿಶೇಷ ಸಂಗತಿ.

“ಗಂಡುಬೀರಿ ಅಂಬೆಯನ್ನು ವರಿಸಲಿಲ್ಲ ಯಾರೂ
ಸತ್ತ ಸ್ವಾಭಿಮಾನದ ಜತೆಗೆ ಸುಟ್ಟು,
ಗಂಡೂ ಅಲ್ಲದೆ ಹೆಣ್ಣೂ ಅಲ್ಲದೆ ಎದ್ದು
ಯುದ್ಧಕ್ಕೆ ಬಂದಾಗ ಮಾತ್ರ ಹೆಣ್ಣೊಂದು ಜರಿದರು
ಬಿಲ್ಲು ಹಿಡಿಯದೆ, ಹಿಂದೆ!
ಇಷ್ಟಕ್ಕೂ
ಬಿನ್ನಾಣವನ್ನುಡಬೇಕು ಯಾಕೆ?
ನಯವಂಚನೆಯನ್ನು!
ಬಳೆ ತೊಟ್ಟರಷ್ಟೆ ಮದುವೇ,
ಕಾಡುವುದಷ್ಟೇನೇ ಕಣ್ಣ ಕಾಡಿಗೆ?” [೨]

ಇಂದು ನಾವು ಆಧುನಿಕರಾಗುತ್ತಿದ್ದೇವೆ. ನಾವೆಲ್ಲರೂ ಸಮಾನ ಮನಸ್ಕರು, ಗಂಡು ಹೆಣ್ಣಿನ ನಡುವೆ ಭೇಧವಿಲ್ಲ ಎಂದು ವೇದಿಕೆಯಲ್ಲಿ ಮಾತುಗಳನ್ನೇ ಹೇಳುತ್ತೇವೆಯೇ ಹೊರತು ಅದನ್ನು ಪರಿಪೂರ್ಣವಾಗಿ ಪಾಲಿಸುತ್ತಿಲ್ಲ. ಸಮಾಜಕ್ಕಾಗಿ ಹೋರಾಡುತ್ತೇನೆಂದು ಮಾತನಾಡುವವಳನ್ನು ಸಮಾಜ ಬೆರಗುಗಣ್ಣಿನಿಂದ ನೋಡುತ್ತದೆ. ತನಗಾಗಿ ಹೋರಾಟ ನಡೆಸುವ ಹೆಣ್ಣನ್ನು ‘ಬಜಾರಿ’ ಎಂಬ ಹಣೆಪಟ್ಟಿ ಕಟ್ಟಿಬಿಡುತ್ತದೆ. ಚರಿತ್ರೆಯಲ್ಲಿ ಕಾಣುವ ಅಂಬೆಯ ಬದುಕು ನಿರರ್ಥಕವೆಂದು ಬಿಂಬಿಸಿದವೇ ವಿನಃ ಮಹಾಭಾರತದ ಮುಖ್ಯ ಭಾಗವಾಗಲೇ ಇಲ್ಲ. ಬೃಹನ್ನಳೆಯಾದ ಅರ್ಜುನನ ವೇಷ ಸಾಂಧರ್ಬಿಕ ಉಡುಗೆಯೆಂದು ನಂಬಿಸುವ ಮಂದಿ ಹೆಣ್ತನವನ್ನೂ ಮೀರಿದ ಹೆಣು ಅಲ್ಲದ, ಗಂಡೂ ಅಲ್ಲದ ಅಂಬೆಯನ್ನು ಹೆಣ್ಣೆಂದೇ ಜರಿದದ್ದು ಗಂಡಿನ ಪರಮಾಧಿಕಾರಕ್ಕೆ ಹಿಡಿದ ಕನ್ನಡಿ. ಕವಿತೆ ಮುಂದುವರೆದು ಅಂಬೆಯಲ್ಲಾಗದಿದ್ದ ಬದಲಾವಣೆ ಅಕ್ಕನ ಮೂಲಕ ಕಂಡಿದ್ದು ಆಧುನಿಕ ಕನ್ನಡ ಮಹಿಳಾ ಕಾವ್ಯದ ವಿಶೇಷ.

“ಅಕ್ಕಾ
ನೀ ಕಳಚಿದ್ದು ಬಟ್ಟೆಯನ್ನಷ್ಟೆ ಅಲ್ಲ,
ಗಂಡ ಮೆಚ್ಚಿಸುವ ಸೋಗನ್ನೂ......
ಬಯಲ ಬಾಗಿಲಿಗೆ ಚಿಲಕವಿಲ್ಲ
ನಡೆ, / ಬರುವೆ ನಾನೂ ನಿನ್ನ ಹಿಂದೆ;

ಮತ್ತೆಂದು ಒಲವಿಗೆ ಸಲ್ಲದ
ಹೆಣ್ಣಾಗಿ ಹುಟ್ಟಲಾರೆ....." [೬೩]

ಹೆಣ್ಣಿನ ದೃಢ ಮನಸ್ಥಿತಿಯ ಅರಿವು ಕವಿತೆಯಲ್ಲಿದೆ ಹಾಗೂ ದ್ವಿಮುಖ ನೆಲೆಯಲ್ಲಿ ನಿಲ್ಲುತ್ತದೆ. ಸೇಡಿಗಾಗಿ ಮರುಜನ್ಮವೆತ್ತುವ ಅಂಬೆ ಹೆಣ್ತನವನ್ನೇ ಕಳೆದುಕೊಳ್ಳುವ ಪಾತ್ರವಾಗಿ ಚಿತ್ರಿತಳಾಗಿದ್ದರೆ, ವ್ಯವಸ್ಥೆಯ ವಿರುದ್ಧ ಸಿಡಿದೇಳುವ ಪಾತ್ರದಲ್ಲಿ ಅಕ್ಕನಿದ್ದಾಳೆ. ಗಂಡನ್ನು ಮೆಚ್ಚಿಸುವ ಸೋಗನ್ನು ಕಿತ್ತೊಗೆಯುತ್ತಾ ಅಕ್ಕ ಬಯಲಿಗೆ ಬಂದು ಹೊಸ ಬದುಕಿನ ಅನ್ವೇಷಣೆಗೆ ಹೊರಟಳು. ಇದೊಂದು ಚಾರಿತ್ರಿಕ ಘಟ್ಟದಲ್ಲಿ ಮಹತ್ವದ ಬದಲಾವಣೆಯೂ ಹೌದು. ಕವಿತೆಯ ಕೊನೆಯಲ್ಲಿನ ಸಾಲುಗಳು ಹೆಣ್ತನವನ್ನು ಧಿಕ್ಕರಿಸುವುದಿಲ್ಲ. ಬದಲಿಗೆ ವ್ಯವಸ್ಥೆಯ ಕ್ರೌರ್ಯಕ್ಕೆ ಬಲಿಯಾಗಬಾರದೆಂಬ ಸಂಕಲ್ಪ ಮಾಡುತ್ತವೆ. ಆಮೂಲಕ ಹೆಣ್ಣಿನ ಅಸ್ತಿತ್ವಕ್ಕೆ ಹೊಸ ಚರಿತ್ರೆಯ ಸೃಷ್ಟಿ ನೀಡುವುದು ಇದರ ಮುಖ್ಯ ಲಕ್ಷಣವೆನ್ನಬಹುದು.

ಚರಿತ್ರೆಯಲ್ಲಿ ಮಾಸದ ಹೆಣ್ಣು ಶಬರಿ. ರಾಮನ ಬರುವಿಕೆಗಾಗಿ ಕಾದ ಶಬರಿ ತನ್ನ ಅವಸರದಿಂದಲೇ ಬದುಕು ಸವೆಸಿದವಳು. ಪುರಾಣಗಳ ಪಾತ್ರಗಳು ಕಲ್ಪನೆ ಎಂದಾದರೆ ಅದನ್ನು ಚರಿತ್ರೆಯಲ್ಲಿ ಉಡುಗಿಸುವ ಹುನ್ನಾರ ಪುರುಷ ಪ್ರಧಾನ ವ್ಯವಸ್ಥೆಯದ್ದು. ಏಕೆಂದರೆ ಆದರ್ಶದ ನೆಪದಲ್ಲಿ ಹೆಣ್ಣನ್ನು ಪಾಲಿಸುವಂತೆ ಕಟ್ಟಿಹಾಕುವ ಹವಣಿಕೆಯ ದಟ್ಟವಾಗಿರುತ್ತದೆ. ಚರಿತ್ರೆಯ ಪಾತ್ರಗಳ ಕಲ್ಪನೆಯನ್ನೂ ತಲ್ಲಣಿಸುವಂತೆ, ಬೆರಗು ಹುಟ್ಟಿಸುವಂತೆ ಮಾಡಿದ್ದು ಆಧುನಿಕ ಮಹಿಳಾ ಕಾವ್ಯ.

"ನಿಮಗಿಷ್ಟವಾಗುತ್ತೆ–
ಸೀತೆ ರಾವಣನ್ನ ಮೆಚ್ಚಿದ್ದಳು
ದ್ರೌಪದಿಗೆ ಕರ್ಣನ ಮೇಲೆ ಪ್ರೀತಿ ಇತ್ತು
ಅಹಲ್ಯೆ ಬೇಕಂತಲೇ ಇಂದ್ರನನ್ನು ಅಪ್ಪಿದ್ದಳು
ತುಳಸಿಯೂ ವಿಷ್ಣು ಸಂಗ ಒಪ್ಪಿದ್ದಳು
ಅನ್ನುವೆಲ್ಲ ಕತೆಗಳು / ಯಾಕಂದರೆ
ನಿಮಗೆ ಖಾತ್ರಿಯಿದೆ;
ಹಾಗೆಲ್ಲ ನಡೆದಿರಲಿಕ್ಕಿಲ್ಲ ಅನ್ನುವ ನಂಬಿಕೆಯ ಮೇಲೆ
ಹಾಗೆಲ್ಲ ನಡೆಯುವುದೂ ಇಲ್ಲ ಅನ್ನುವ ಧೈರ್ಯದ ಮೇಲೆ" [೬೪]

ಮಹಿಳಾ ಕಾವ್ಯದ ಇಂತಹ ಭಿನ್ನ ನಿಲುವು ಮತ್ತು ದೃಷ್ಟಿಕೋನವೇ ಅವುಗಳ ಗಟ್ಟಿತನವನ್ನು ಒರೆಗೆ ಹಚ್ಚುತ್ತವೆ. ಕತೆಯ ಮೂಲಕ ರುಚಿಸುವ ಸಂಗತಿಗಳು ಒಂದು ವೇಳೆ ನಿಜವೇ ಆಗಿದ್ದರೆ ಆದರ್ಶ ಪುರುಷನ ರೂಪ ಪಡೆದ ಮಹನೀಯರುಗಳು ಇಂದು ಇರುತ್ತಿರಲಿಲ್ಲ. ಏಕೆಂದರೆ ಹೆಣ್ಣನ್ನು ಹೇಗೆ ನಡೆಸಿಕೊಂಡು ಬರಬೇಕು, ಅವಳ ಕಲ್ಪನೆಯನ್ನು ಹೇಗೆ ಮತ್ತೊಬ್ಬರ ಹೃದಯದಲ್ಲಿ ಬಿತ್ತಬೇಕೆಂಬುದು ಗಂಡಿಗೆ ತಿಳಿದಿದೆ. ಆ

ಮೂಲಕ ಚರಿತ್ರೆಯ ಪುಟಗಳನ್ನು ತನಗೆ ಬೇಕಾದಂತೆ ತಿರುವಿ ಹಾಕುವ ಕಲೆಯೂ ಅವನಲ್ಲಿ ಕರಗತವಾಗಿದೆ. ಸ್ತ್ರೀಯಾತ್ಮಕ ದೃಷ್ಟಿಯಿಂದ ಕಾಣುವ ಕವಿತೆ ವಾಸ್ತವದ ಅರಿವನ್ನು ನಿಜದ ನೆಲೆಯಲ್ಲಿ ಕಂಡಿದೆ. ಒಂದು ವೇಳೆ ಇಂತಹ ಊಹೆ ಮತ್ತು ಕಲ್ಪನೆಗಳು ನಿಜವಾದರೆ ಪುರುಷ ನಿರ್ಮಿತ ರಚನೆಗಳು ಒಮ್ಮೆಗೇ ಆಸ್ಫೋಟಗೊಳ್ಳುವ ಅಪಾಯವೂ ಇದೆ. ಕವಿತೆ ಮುಂದುವರೆದು

"ಕಾಯಿಸುವವರೆಲ್ಲ ಹಾಗೇನೆ
ಕಾಯುವವರಿಗಾಗಿ ಬರುವುದಿಲ್ಲ.....
ರಾಮ ಅಪ್ಪುದ್ದ ಹಾದಿ ನಡೆದಿದ್ದು
ಶಬರಿಗಾಗಿ ಏನಲ್ಲ" [೬೫]

ಹೆಣ್ಣಿನ ಮಾನಸಿಕ ತಲ್ಲಣದ ಪ್ರತಿರೂಪ ಶಬರಿ. ಹಣ್ಣು ಹಣ್ಣು ಮುದುಕಿಯಾದರೂ ಹಣ್ಣುಗಳನ್ನು ಆರಿಸುತ್ತಲೇ ರಾಮನ ನಿರೀಕ್ಷೆಯಲ್ಲೇ ಯೌವ್ವನವ ಕಳೆದವಳು. ರಾಮ ಬಂದ ಶಬರಿಗೆ ಮುಕ್ತಿಕೊಟ್ಟ, ರಾಮನನ್ನು ಕಾಣಲು ಅವಳಲ್ಲಿದ್ದ ಹಂಬಲ ಇವೇ ಮುಖ್ಯವಾಗುತ್ತವೆ ಹೊರತು, ಒಂದು ಹೆಣ್ಣಿನ ತಾಕಲಾಟ, ತಳಮಳ ಗೌಣವಾಗುತ್ತದೆ. ಶಬರಿಯ ನಿರೀಕ್ಷೆ ಗಟ್ಟಿತನದ್ದು. ರಾಮನ ಬರುವಿಕೆ ಅನಿರೀಕ್ಷಿತವಾದದ್ದು. ಇಲ್ಲಿ ಗಟ್ಟಿತನಕ್ಕಿಂತ ಅನಿರೀಕ್ಷಿತವೇ ಹೆಚ್ಚು ಗಟ್ಟಿಯಾಗಿ ಕಂಡದ್ದು. ಏಕೆಂದರೆ ಮುಕ್ತಿ ಮಾರ್ಗದ ಪ್ರತಿರೂಪವೇ ಗಂಡಲ್ಲವೇ? ರಾಮನ ಹಸಿವು ನೀಗಿಸಿದ ಶಬರಿ ಕಾಯುವಿಕೆಯಿಂದ ಮುಕ್ತಿ ಹೊಂದಿದಳೇ ಹೊರತು ಸ್ತ್ರೀವಾದಿ ದೃಷ್ಟಿಕೋನದಿಂದಲ್ಲ.

ಒಟ್ಟಾರೆಯಾಗಿ ಆಧುನಿಕ ಮಹಿಳಾ ಕಾವ್ಯ ಪುರಾಣ ಮತ್ತು ಚರಿತ್ರೆಯ ಅಂಶಗಳನ್ನು ಅಥವಾ ಪಾತ್ರಗಳನ್ನು ತೆಗೆದುಕೊಂಡು ಅವುಗಳಿಗೆ ತನ್ನದೇ ಮರು ವ್ಯಾಖ್ಯಾನಕೊಡುವಂತೆ ಮಾಡಿದೆ. ಬದುಕಿನೆದುರು ಬಯಲಾದ ಅಕ್ಕ, ಜೀವನದ ವಿಮುಖತೆಗೆ ಗುರಿಯಾದ ಬುದ್ಧ, ಜಗತ್ತನ್ನು ಮೆಚ್ಚಿಸುವಲ್ಲಿ ಹೈರಾಣಾದ ರಾಮ, ಸ್ವತಂತ್ರ್ಯಕ್ಕೆ ಹೋರಾಡಿದ ಗಾಂಧಿ, ಮಾಡದ ತಪ್ಪಿಗೆ ಗುರಿಯಾದ ಸೀತೆ, ಅಹಲ್ಯೆ, ಪ್ರಶ್ನೆಗಳಾಗೇ ಉಳಿದ ದ್ರೌಪದಿ ಮತ್ತು ಊರ್ಮಿಳೆ ಎಲ್ಲರೂ ಒಂದೊಂದು ಸಂದರ್ಭದಲ್ಲಿ ಒಂದೊಂದು ದೃಷ್ಟಿಕೋನಗಳ ಮುಖಾಂತರ ಕಥಿಸುತ್ತಲೇ ಬಂದಿದ್ದಾರೆ. ಬಹುಮುಖ್ಯವಾಗಿ ಆಧುನಿಕ ಮಹಿಳಾ ಕಾವ್ಯದಲ್ಲಿ ಹೊಸದೊಂದು ಮಗ್ಗುಲಿನ ವ್ಯಾಖ್ಯಾನ ಪಡೆದುಕೊಂಡಿದೆ. ಮಹಿಳಾ ಕಾವ್ಯ ಅಕ್ಕನನ್ನು ಎಷ್ಟರ ಮಟ್ಟಿಗೆ ಆಪ್ಯಾಯಮಾನವಾಗಿ ಕಂಡಿದೆ ಎಂದರೆ ಮನುಷ್ಯ ಜನ್ಮ ಸಾಕುಮಾಡಿಕೊಳ್ಳಲು ಅಕ್ಕನನ್ನೇ ಕೇಳುವಂತಿದೆ.

"ಅಕ್ಕಾ,
ನನಗೊಂದು ಕಲ್ಲು ದೇವನ ಕೊಡಿಸೇ!
ಎದೆಗಲ್ಲು ಮನುಷ್ಯನ
ಸಹವಾಸ ಸಾಕು........." [೬೬]

ಈ ಸಾಲುಗಳು ಬದುಕಿನ ಎಲ್ಲ ಹಂತಗಳನ್ನೂ ಒಮ್ಮೆಗೇ ನಿರ್ಭಿಡೆಯಿಂದ ಚಿತ್ರಿಸುತ್ತದೆ. ಸಮಾಜದಲ್ಲಿ ದಿನನಿತ್ಯದ ಜೀವನದ ಸಂಕಟ, ಹೆಣ್ಣಿನ ಹತಾಷೆ, ಅವಳಲ್ಲಾಗುವ ಬದಲಾವಣೆ ಎಲ್ಲವನ್ನೂ ಒಮ್ಮೆಲೆ ಕನ್ನಡಿಯಂತೆ ಹಿಡಿದಿಟ್ಟಿದೆ. ಅಂದರೆ ಗಂಡಿನ ಪ್ರಭುತ್ವ ಪ್ರಾಬಲ್ಯ ಮತ್ತು ಪ್ರಾತಿನಿಧ್ಯವನ್ನು ಧಿಕ್ಕರಿಸುವಂತೆಯೂ ಕವಿತೆ ಇದೆ. ಒಟ್ಟಾರೆಯಾಗಿ ಪುರಾಣ ಮತ್ತು ಚರಿತ್ರೆಗಳು ಒಂದೇ ನಾಣ್ಯದ ಎರಡು ಮುಖಗಳಂತಿದ್ದರೂ ಒಬ್ಬೊಬ್ಬ ಕವಯಿತ್ರಿಯಲ್ಲೂ ಒಂದೊಂದು ವಿನ್ಯಾಸವನ್ನು ಪಡೆದುಕೊಂಡಿವೆ. ಪಾತ್ರಗಳು ಪುನರಾವರ್ತನೆಯಾದರೂ ಅದು ಆ ಸಂದರ್ಭದಲ್ಲಿ ಧ್ವನಿಸುವುದು ಮುಖ್ಯವಾಗುತ್ತವೆ. ಆ ಕಾರಣಗಳಿಂದಲೇ ಚರಿತ್ರೆ ಮತ್ತು ಪುರಾಣದಲ್ಲಿ ಬರುವ ಪಾತ್ರಗಳು ಕಥಿಸುತ್ತಲೇ ಇದ್ದರೂ ಎಂದೂ ಸವಕಲಾಗದಿಲ್ಲದಿರುವುದು ಅವುಗಳ ಪ್ರಸ್ತುತತೆಯಿಂದಲೇ ಆಗಿದೆ.

೭.೩. ಅಸ್ಮಿತೆ : ತನ್ನ ತನದ ಹುಡುಕಾಟ ಮತ್ತು ಪ್ರತಿಭಟನಾತ್ಮಕ ನೆಲೆ.

ಪ್ರತಿಯೊಬ್ಬರಿಗೂ ತನ್ನ ಇರುವಿಕೆಯನ್ನು ಕಂಡುಕೊಳ್ಳುವ ಹಂಬಲ ಮತ್ತು ಸ್ವಾತಂತ್ರ್ಯ ಇದ್ದೇ ಇರುತ್ತದೆ. ಆದರೆ ಎಲ್ಲೋ ಒಂದು ಕಡೆ ಗಂಡು ಮತ್ತು ಹೆಣ್ಣಿನ ಬದುಕಿನ ಬಗೆಗೆ ಸಮಾಜ ತಳೆದ ತಾರತಮ್ಯವನ್ನು ಆಮೂಲಾಗ್ರವಾಗಿ ಗುರ್ತಿಸುವ ಮಟ್ಟಕ್ಕೆ ಹೆಣ್ಣು ಬೆಳೆದಿದ್ದಾಳೆ. ಮತ್ತು ಆ ಮೂಲಕ ತನ್ನ ತನದ ಛಾಪನ್ನು ಮೂಡಿಸಲು ಅವಳು ಪ್ರತಿಭಟನಾ ಮಾದರಿಯನ್ನೂ ಅನುಸರಿಸಿದ್ದಾಳೆ. ಅವಳ ಈ ಅಸ್ಮಿತೆ ಗಂಡ, ಮನೆ, ಮಕ್ಕಳು ಅಥವಾ ಸಂಸಾರಕ್ಕೆ ಮಾತ್ರ ಸೀಮಿತವಾಗಲಿಲ್ಲ. ತನ್ನಂತೆ ಇತರರೂ ಜಾಗೃತಗೊಳ್ಳಲಿ ಎಂಬ ಕ್ರಿಯಾ ಪ್ರಜ್ಞೆಯೂ ಅವಳಲ್ಲಿತ್ತು. ಆದ್ದರಿಂದಲೇ ಸಾಮಾಜಿಕವಾಗಿ ನಿತ್ಯ ನಿರಂತರ ಸಮಸ್ಯೆಗಳಂತೆ ಕಾಡುತ್ತಿರುವ ಹಸಿವು, ಬಡತನ, ಲಿಂಗ ತಾರತಮ್ಯ, ಹೆಣ್ಣು ಭ್ರೂಣಹತ್ಯೆ, ಲಿಂಗಪತ್ತೆ, ರಾಜಕೀಯ ಅಸಮಾನತೆ ಮುಂತಾದ ವಿಷಯಗಳ ಬಗ್ಗೆ ಗಂಭೀರವಾಗಿ ಚಿಂತಿಸುವ ಮಟ್ಟಕ್ಕೆ ತನ್ನನ್ನು ತಾನು ತಂದುಕೊಂಡಳು. ಇದಕ್ಕೆ ಪ್ರೇರಕ ಶಕ್ತಿಯಾಗಿ ಬಂದದ್ದು ಸ್ತ್ರೀವಾದ. ಆಧುನಿಕ ಮಹಿಳಾ ಕಾವ್ಯ ಹೆಣ್ತನದ ಮಾದರಿಗೆ ಮತ್ತು ಅಸ್ಮಿತೆಗೆ ಸಾಮಾಜಿಕ ಆಯಾಮ ಕೊಟ್ಟಿತು. ಬರವಣಿಗೆಯನ್ನು ಕ್ರಾಂತಿಕಾರಿಯಾಗಿಸುವುದರ ಜೊತೆಗೆ ಅರ್ಥವಂತಿಕೆ, ಪ್ರತಿಭಟನೆಯ ಪ್ರೇರಕ ಶಕ್ತಿಯಾಯಿತು. ಆ ಮೂಲಕ ಇಡೀ ಮಹಿಳಾ ಸಮುದಾಯದ ಬೆಳವಣಿಗೆಯ ಸಂಕೇತಗಳೂ ಆಯಿತು.

ಸಾಮಾಜಿಕ ಸಮಸ್ಯೆಗಳನ್ನು ಕುರಿತು ವ್ಯಂಗ್ಯ, ವಿಡಂಬನೆ ಮತ್ತು ಟೀಕೆಗಳೊಂದಿಗೆ ಕವಿತೆ ರಚಿಸುತ್ತಲೇ ತಮ್ಮ ಬರಹಗಳ ಮುಖಾಂತರವೇ ಚಿಕಿತ್ಸಕ ಪರಿಹಾರಗಳನ್ನೂ ತೊಟ್ಟದ್ದು ವಿಶೇಷ. ಹಸಿವೆಂದರೆ ಕೇವಲ ಊಟದ ಸಂಕೇತವಲ್ಲ ತಲೆಮಾರಿನಿಂದಲೂ ಜರುಗಬೇಕಾದ ಸಾಮಾಜಿಕ ಬದಲಾವಣೆಯ ಹಸಿವನ್ನು ಬರಹಕ್ಕಿಳಿಸಿದ್ದವು.

"ನಾ
ಇಂದು ಹಸಿದಿದ್ದೇನೆ

ನಿಮಗೆ ಮತ್ತೆ ಹೇಳಬೇಕಿಲ್ಲ
ನಾ ಅಂದರೆ ನಾನಲ್ಲ
ನಾನಾ ಎಂದು
ನನಗಿರುವ ಹಸಿವು
ನಾನಾಬಗೆ,
ಇದಕೆ ಸಮುದ್ರ ತೃಷೆ ನೆಲದೂಟ
ಆಕಾಶದಲೆ ವ್ಯಂಜನ ಮೆಲ್ಲಬೇಕೆನ್ನುವ
ಹಸಿವು" [೭೭]

ನವ್ಯ ಬರಹದಂತೆ ಕಂಡರೂ ಬರಹ ಸಾಮಾಜಿಕ ಸ್ತರ ವಿನ್ಯಾಸಗಳನ್ನು ಒಂದುಗೂಡಿಸುವ ಪ್ರಯತ್ನದಂತಿದೆ. ಹಸಿವು ಹಲವು ಅರ್ಥವ್ಯಾಪ್ತಿಯನ್ನು ಪಡೆದಿರುವಂತದ್ದು. ಹೆಣ್ಣಾದವಳು ಹಸಿವನ್ನು ಕುರಿತು ಬರೆಯುತ್ತಾಳೆಂದರೆ ಅದು ಅಡುಗೆ ಮನೆಯಲ್ಲಿರುವ ಉಪ್ಪು, ಮೆಣಸುಗಳಿಗೆ ಸಂಬಂಧಿಸಿದ್ದಲ್ಲ. ತನ್ನ ತನದ ಹುಡುಕಾಟಕ್ಕೆ ಒಂದು ಸ್ಪಷ್ಟತೆ ಕಂಡುಕೊಳ್ಳುವ ಹೋರಾಟವೂ ಹೌದು. ತಣ್ಣನೆಯ ಪ್ರತಿಭಟನೆಯೂ ಹೌದು. ಹೆಣ್ಣು ಹುಟ್ಟಿದಾಗಿನಿಂದ ಸಾಯುವವರೆಗೂ ಒಂದಲ್ಲ ಒಂದು ರೀತಿಯಲ್ಲಿ ಗಂಡಿನ ಅಂಕೆಯಲ್ಲೇ ಜೀವನ ಸವೆಸುವವಳು. ಅಂತವಳಿಗೆ ತನ್ನ ಸ್ವಂತಿಕೆಯ ಅರಿವನ್ನು ಕಂಡುಕೊಳ್ಳುವ ಹೋರಾಟದ ಪ್ರತಿರೂಪದಂತಿದೆ ಕವಿತೆ. ಮುಂದುವರೆದು ತನ್ನ ಬಗ್ಗೆ ತಾನೇ ಸ್ಪಷ್ಟತೆ ತಂದುಕೊಡುತ್ತಾ ಮತ್ತೆ ಪ್ರಶ್ನಿಸುತ್ತಲೇ ಮರೆಯಾಗುತ್ತದೆ.

"ಈಗ ನಿಮಗೆ ತಿಳಿದಿರಬಹುದು
ಈ ಹಸಿವೆಯ ಅರ್ಥ
ಇದರ ಬಣ್ಣ
ಇದು ಗುತ್ತಾಗಿ ಹುಲುಸಾಗಿಬೆಳೆಯುವ ರೀತಿ
ಇದರ ನಿತ್ಯನೂತನ ಹಸಿರು
ಹೆಸರು
ನಾನಾವೆ
ಹೇಳಿ ಈಗ, ನಾ ಎಂಥ ನಾವೆ?" [೭೮]

ಸಮಾನತೆಯ ಬಗ್ಗೆ ಬೊಬ್ಬೆ ಹೊಡೆಯುವ ನಾವುಗಳು ಮಹಿಳಾ ಸ್ವಾತಂತ್ರ್ಯದ ವಿಷಯ ಬಂದಾಗ ಯಾಕೆ ಮೌನಿಯಾಗುತ್ತೇವೆ? ಇದಕ್ಕೆ ಗಂಡೇ ಕಾರಣವೆಂದಲ್ಲ. ಗಂಡಿನಿಂದ ಪ್ರೇರೇಪಿಸಲ್ಪಟ್ಟ ಮಹಿಳಾವಾದಿಗಳೂ ವ್ಯಂಗ್ಯ ಅಥವಾ ಕುಹಕವಾಡುವುದಿದೆ. ಮಹಿಳಾ ಪ್ರಾತಿನಿಧ್ಯದ ಐಡೆಂಟಿಟಿಯ ಪ್ರಶ್ನೆಯನ್ನು ಸಹ ಕವಿತೆ ಎತ್ತುತ್ತದೆ. ೨೧ನೇ ಶತಮಾನದಲ್ಲೂ ಇಂತಹ ಪ್ರಶ್ನೆಗಳು ಎದುರಾಗುತ್ತದೆಂದರೆ ನಮ್ಮ ಆಲೋಚನೆ ಇನ್ನೂ

ಪ್ರಾಥಮಿಕ ಹಂತದ್ದು ಎಂಬ ಸ್ಪಷ್ಟತೆ ಇಲ್ಲಿದೆ. ಕವಿತೆ ಪ್ರಶ್ನಿಸುತ್ತಲೇ ಕೊನೆಯಾಗುತ್ತದೆ. ಅಂದರೆ ಪ್ರಶ್ನೆಗಳು ಹುಟ್ಟದೇ ಹೋದರೆ ಯಾವ ಉತ್ತರವೂ ಸ್ಪಷ್ಟತೆ ಪಡೆದುಕೊಳ್ಳುವುದಿಲ್ಲ ಎಂದು ಅರ್ಥ.

ಕನ್ನಡ ಸಾಹಿತ್ಯದಲ್ಲಿ ಹುಣ್ಣಿಮೆ ಮತ್ತು ಅಮಾವಾಸ್ಯೆಗಳನ್ನು ಬದುಕಿನ ಏರಿಳಿತಗಳಂತೆ ಕಂಡುಕೊಂಡಿವೆ. ಹೆಣ್ಣಿಗೆ ಕನಸು ಕಾಣುವುದು ನಿಶಿದ್ಧ. ಆದರೆ ಆ ಕನಸೇ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವ ಮಾರ್ಗವಾದರೆ ಎಂತಹ ಬದಲಾವಣೆಗಳಾಗುತ್ತವೆ ಎಂಬುದಕ್ಕೆ ಹುಣ್ಣಿಮೆಯ ಪ್ರತಿಬಿಂಬವು ಮಾದರಿಯಾಗುತ್ತದೆ.

“ಉಸಿರು ಉಸಿರಿನ ಕೂಡ
ತರುಣನಾಗುತ್ತಾನೆ
ದಣಿವು ಕಡಿಯುತ್ತಾನೆ
ಇವನ ನರ ನರದಲ್ಲಿ ಆಗ
ಸುಖದ ಆಸವ ಹರಿಸಿದಾ ಸಖಿ
ಯಾರೆಂದು
ಕೇಳಿದರೆ ಹೇಳುತ್ತಾನೆ
ಗೊತ್ತಿಲ್ಲ ನನಗೆ” [೬]

ಅಸ್ಮಿತೆಯ ಗಾಢತೆ ಇಲ್ಲಿದೆ. ನಮ್ಮ ವೇದ ಪುರಾಣಗಳಿಂದಲೂ, ಚರಿತ್ರೆಯಲ್ಲೂ ಹೆಸರಿಲ್ಲದ ಹೆಣ್ಣಿನ ಆಕ್ರಂದನ, ಅವಳ ನೋವಿಗೆ ಬೆಲೆಯೇ ಇಲ್ಲ. ಆದರೆ ಇದರ ಆತ್ಮವಿಮರ್ಶೆಯನ್ನು ಸ್ವತಃ ಅವಳೇ ಮಾಡಿಕೊಂಡರೆ ಕನ್ನಡಿಯಂತೆ ಸ್ಪಷ್ಟತೆ ಪಡೆಯುತ್ತದೆ. ಕೃಷ್ಣನಿಗಾಗಿ ಕಾದ ರಾಧೆ, ರಾಮನ ಬರುವಿಕೆಗಾಗಿ ಕಾದ ಶಬರಿ, ಮುಕ್ತಿಗಾಗಿ ಕಾದ ಅಹಲ್ಯೆ, ಗಂಡನ ಸನಿಹವಿದ್ದೂ ಬೇಡವಾದಂತಿದ್ದ ಮಂಡೋದರಿ ಎಲ್ಲರೂ ಹುಣ್ಣಿಮೆಯನ್ನು ಹುಡುಕ ಹೊರಟವರೆ. ಅಂದರೆ ತನ್ನ ತನದ ಧೃಡತೆಯನ್ನು ಕಂಡರೂ ಅದರ ಸ್ಪಷ್ಟತೆಯನ್ನು ಬಿಟ್ಟುಕೊಡದವರೆ. ಏಕೆಂದರೆ ಗಂಡಿನ ಪಾರಮ್ಯದ ಛಾಯೆ ಮುಕ್ತ ಆಲೋಚನೆಯನ್ನೂ ಮರೆ ಮಾಡಿತ್ತು. ಗೊತ್ತಿಲ್ಲ ನನಗೆ ಎಂಬ ಪದ ಹೆಣ್ಣಿನ ದೃಷ್ಟಿಕೋನದಲ್ಲಿ ವಿಶಾದದಿಂದ ಕೂಡುತ್ತದೆ ಎಂಬುದಕ್ಕೆ ಕವಿತೆ ಮುಂದುವರೆದು ಉತ್ತರಿಸುತ್ತದೆ.

“ನನಗೊಂದು ಹೆಸರುಂಟು ಆದರೆ
ಇವನು ಕರೆದಿದ್ದಾನೆ:
ಬೆಳಕಂತೆ ಕತ್ತಲದಲಿ
ಸುಖವಂತೆ ದುಃಖದಲ್ಲಿ
ಉತ್ಸಾಹದರಗಿಣಿಯಂತೆ

ಇವನ ಮನಸ ಕಾಡಲ್ಲಿ
ಹೀಗೆ ನೂರು ಹೆಸರಿಟ್ಟು........
ಯಾಕೆ ಕರೆಯುತ್ತಾನೆ
ಗೊತ್ತಿಲ್ಲ ನನಗೆ" ೮೦

ಪ್ರೇಮಕ್ಕಿಂತ ಕಾಮದ ಬಯಕೆ ತುಂಬಿದ ಗಂಡಿಗೆ ಯಾವ ಹೆಸರಾದರೂ ಸರಿಯೆ ಕರೆಯುತ್ತಾನೆ. ಆದರೆ ಅವಳ ನಿಜದ ಅರಿವಿನ ಹೆಸರೇ ಮರೆಯುವಂತೆ ಮಾಡುತ್ತಾನೆ. ಮತ್ತದೇ ತಾಕಲಾಟ ಅವಳಿಗೆ ಆದರೂ ಯಾವುದನ್ನೂ ಬಿಟ್ಟುಕೊಡದ ನಿಗೂಢತೆ ಅವನಲ್ಲಡಗಿದೆ. ಇದು ಗೊತ್ತಿದ್ದರೂ ಅವಳು ಗುರ್ತಿಸಿದರೂ ಹೇಳಲಾರದಂತ ಗೊಂದಲ ಹೆಣ್ಣಿಗೆ. ಕೊನೆಗೆ ತನ್ನನ್ನು ತಾನು ಕಂಡುಕೊಳ್ಳುವ ಹಂತಕ್ಕೆ ತಲುಪುತ್ತಾಳೆ. ಇದು ಸಮಾಜದ ಸಾಮಾನ್ಯ ಹೆಣ್ಣುಗಳ ತಾಕಲಾಟವೂ ಹೌದು. ಇದನ್ನು ಸಹಜವೆಂಬಂತೆ ಚಿತ್ರಿಸಿದರೂ ಹೆಣ್ಣಿನ ಇರುವಿಕೆಗೆ ಹುಡುಕಾಡುವ ಹಂಬಲ ಅವಳಲ್ಲಿ ದಟ್ಟವಾದಂತೆ ಕಂಡಿದೆ. ಗೊತ್ತಿಲ್ಲ ನನಗೆ ಎಂಬ ಸಾಲು ಅಂತ್ಯವನ್ನು ಸೂಚಿಸುವುದಿಲ್ಲ ಬದುಕಿನ ಮುನ್ನುಡಿಗೆ ಹಾದಿ ತೆರೆದು ಕೊಂಡಂತಿದೆ, ಅದೇ ಅಸ್ಮಿತೆಯೂ ಹೌದು.

'ನಾನು' ಎಂಬ ಪದ ಅಹಂಕಾರ ಸೂಚಕವಲ್ಲ. ಗಂಡಿಗಿರುವ ಐಡೆಂಟಿಟಿ ಹೆಣ್ಣಿಗಿಲ್ಲದಿರುವುದು ಬಹು ಚರ್ಚಿತ ವಿಚಾರ. ೨೧ನೇ ಶತಮಾನಕ್ಕೆ ಬಂದರೂ ಸಮಾನತೆ ಬಗ್ಗೆ ಮಾತನಾಡುವುದು ಸಮಂಜಸವೆ? ಕಾಲಬದಲಾಗಿಲ್ಲವೆ? ಎಂದು ಪ್ರಶ್ನೆಗಳ ಕೇಳಿದರೂ ಆಧುನಿಕತೆ ಬೆಳೆದಂತೆಲ್ಲಾ ನಮ್ಮ ಮನಸ್ಸುಗಳು ನಾಗರೀಕತೆಯನ್ನು ಪರಿಪೂರ್ಣವಾಗಿ ಸ್ವೀಕರಿಸಿಲ್ಲ. ಜೊತೆಗೆ ಆಲೋಚನಾ ಮನಸ್ಸುಗಳನ್ನೂ ಸಹ. ಹೆಣ್ಣು ತನ್ನ ತನದ ಹುಡುಕಾಟವನ್ನು ಪ್ರತಿಭಟನಾತ್ಮಕವಾಗಿಯೂ ಕಂಡುಕೊಳ್ಳಬಲ್ಲಳು ಎಂಬುದಕ್ಕೆ ಉದಾಹರಣೆಯಾಗಿ ಹಲವು ಮಹಿಳಾ ಕಾವ್ಯವಿದೆ. ಪ್ರತಿಭಟನೆ ಎಂದರೆ ಹಿಂಸಾತ್ಮಕವಲ್ಲ, ಆರೋಗ್ಯಕರವಾಗಿ ತನ್ನ ಸುತ್ತಮುತ್ತಲ ವಾತಾವರಣದಲ್ಲೇ ತನ್ನ ಅಸ್ಮಿತೆಯ ಅರಿವನ್ನು ಪಡೆದು ಕೊಳ್ಳುತ್ತಾಳೆ.

"ನಾನು ನಾನಾಗಿದ್ದೆ
ನನ್ನಾಸೆಗಳು ಅಂಕುರಿಸುವ
ಬಾಲ್ಯದಲ್ಲಿ
ಬೆಳೆಯುತ್ತಾ ಬೆಳೆಯುತ್ತಾ
ಹರೆಯದಲ್ಲಿ
ಸರೀಕರ ಪಾಲಿಗೆ ನಿಗೂಢಳಾದೆ
ಪಿತ, ಪತಿ ಪುತ್ರರ
ನೀತಿ ಸಂಹಿತೆಗಳಲ್ಲಿ ಹಣ್ಣಾದೆ

ಸಂತತಿಯ ಬೀಜಗಳಿಗೆ
ಬರೀ ಮಣ್ಣಾದೆ
ಕೊನೆಗೂ ನಾನು ನಾನಾಗದೆ ಉಳಿದೆ" [೮೧]

ಸಾಮಾಜಿಕ, ರಾಜಕೀಯ, ಧಾರ್ಮಿಕ ಎಲ್ಲ ಸ್ತರಗಳಲ್ಲೂ ಹೆಣ್ಣು ಹೇಗೆ ಅಂಕೆಗೆ ಒಳಪಡುತ್ತಾಳೆ ಎಂಬ ಸ್ಪಷ್ಟತೆ ಇಲ್ಲಿದೆ. ಎಲ್ಲದರಲ್ಲೂ ಹೊಂದಿಕೊಂಡ ಹೆಣ್ಣಿಗೆ, ಕೊನೆಗೆ ತನ್ನನ್ನೇ ತಾನು ಅರಿತುಕೊಳ್ಳುವಲ್ಲಿ ಅವಳು ಹೈರಾಣಾದ ಸ್ಥಿತಿ ಬದುಕಿಗೆ ಹಿಡಿದ ಕನ್ನಡಿ. ಏಕೆಂದರೆ ಶಿಕ್ಷಣವನ್ನು ಪಡೆದರೆ, ವಿದೇಶಗಳನ್ನು ಸುತ್ತಿದರೆ, ಅಥವಾ ವಿದೇಶೀ ವಸ್ತ್ರಗಳನ್ನು ಧರಿಸಿಬಿಟ್ಟರೆ ನಮಗೆ ಸಮಾನತೆ ದೊರೆತಿದೆ ಎನ್ನುವುದು ತಪ್ಪು. ಎಲ್ಲವನ್ನೂ ಹೊಂದಿಸಿ ಕೊಂಡು ಸರಿದೂಗಿಸಿಕೊಂಡು ಹೋಗುವ ಹೆಣ್ಣು 'ಕೊನೆಗೂ ನಾನು ನಾನಾಗದೆ ಉಳಿದೆ' ಎಂಬ ಮಾತಿನಲ್ಲಿ ವಿಶಾದದ ಛಾಯೆ ಅಡಗಿದೆ. ಇದು ಶೇಕಡಾ ೯೦ ರಷ್ಟು ಮಂದಿ ಹೆಣ್ಣು ಮಕ್ಕಳ ವಾಸ್ತವತೆಯೂ ಹೌದು.

"ಆಧುನಿಕ ಕಾಲಕ್ಕೆ ಶಿಕ್ಷಣ ವ್ಯವಸ್ಥೆಯ ಬಾಗಿಲುಗಳು ಸ್ತ್ರೀ ಪುರುಷರಿಬ್ಬರಿಗೂ ಸಮಾನವಾಗಿ ಮುಕ್ತಗೊಂಡಿವೆ ಎಂಬಂತೆ ಭಾಸವಾಗುತ್ತದೆ. ಈ ವ್ಯವಸ್ಥೆಯ ಚಿಂತನೆಗಳು, ಕಾರ್ಯಕ್ರಮಗಳು ವಸ್ತುನಿಷ್ಠ ಗುಣದ್ದಾಗಿದೆ ಎನ್ನಲಾಗುತ್ತದೆ. ಆದರೆ ಹೀಗಿದ್ದು ಶಿಕ್ಷಣದ ಪರಿಣಾಮಗಳು ಸ್ತ್ರೀ ಪುರುಷರ ಬದುಕುಗಳಲ್ಲಿ ಭಿನ್ನಗುಣದ್ದಾಗಿ ಕಾಣುವುದೇಕೆ ಎಂಬುದನ್ನು ವಿವರಿಸಿಕೊಳ್ಳುವುದು ಸುಲಭವಲ್ಲ. ಶಿಕ್ಷಣದ ಕೆಲವೇ ಕ್ಷೇತ್ರಗಳಲ್ಲಿ ಹೆಣ್ಣುಮಕ್ಕಳು ಪ್ರವೇಶ ಪಡೆಯಲು ಸಾಧ್ಯವಾಗುತ್ತದೆಂಬುದು, ಪ್ರಾಥಮಿಕ ಹಂತದಲ್ಲಿ ಚುರುಕಾಗಿಯೇ ಇದ್ದರೂ ಉನ್ನತ ಹಂತಗಳಲ್ಲಿ ಹೆಣ್ಣು ಮಕ್ಕಳು ಸಾಧನೆ ಮಾಡುವುದು ಸುಲಭದ ಮಾತಲ್ಲ ಎಂಬುದೂ ಚಿಂತಿಸಬೇಕಾದ ವಾಸ್ತವಗಳು. ಹೆಣ್ಣಿನ ಯೋಗ್ಯತೆಯೇ ಅಷ್ಟು ಎಂಬ ಸುಲಭದ ತೀರ್ಮಾನ ಸಾಧ್ಯವಿದ್ದೀತು. ಆದರೆ ಈ ಮಾತಿನಲ್ಲಿ ಒಪ್ಪಿಗೆಯಾಗುವ ತರ್ಕ ಶುದ್ಧತೆ ಇಲ್ಲ" [೮೨] ಎಂಬ ಮಾತುಗಳು ವಾಸ್ತವತೆಗೆ ಹಿಡಿದ ಕನ್ನಡಿ.

"ಗಂಡಿನ ಪರವಾಗಿ ಗಂಡಿನ ಅನುಕೂಲಕ್ಕಾಗಿ, ಗಂಡಿನಿಂದಲೇ ಸೃಷ್ಠಿಯಾದ ಭಾಷೆಯನ್ನೇ ಪ್ರಶ್ನೆಗಳಿಲ್ಲದೆ ಬಳಸಬೇಕಾದ ಅನಿವಾರ್ಯದಲ್ಲಿ ಹೆಣ್ಣು ಇದ್ದಾಳೆ. ದಿನನಿತ್ಯದ ಮಾತು ಕತೆಗಾದರೂ ಅಷ್ಟೇ ಸೃಜನಶೀಲ ಅಭಿವ್ಯಕ್ತಿಗಾದರೂ ಅಷ್ಟೇ ಸಹಜವಾಗಿಯೇ ಇದು ಮಹಿಳೆಯ ಧ್ವನಿಯನ್ನು ಉಡುಗಿಸಿ ಬಿಡುತ್ತದೆ. ಪ್ರಯತ್ನಪೂರ್ವಕವಾಗಿ ಧ್ವನಿ ಎತ್ತಲು ಹೋದರೆ ಕಂಪಿಸುತ್ತದೆ. ಶೃತಿ, ಲಯ, ಭಾವಗಳನ್ನ ಕೂಡಿಸಿಕೊಳ್ಳಲು ಹೆಣಗುತ್ತದೆ. ಧ್ವನಿ ಎತ್ತಲೋ, ಗುರಿ ಎತ್ತಲೋ ಎಂಬಂತೆ ಆದರೂ ಆಶ್ಚರ್ಯವಿಲ್ಲ. ಈ ತೊಂದರೆಗಳನ್ನೆಲ್ಲಾ ನಿವಾರಿಸಿಕೊಳ್ಳಬೇಕೆಂದರೆ ಆಕೆ ಪ್ರಜ್ಞಾಪೂರ್ವಕವಾಗಿ, ವಿಶಿಷ್ಟವಾಗಿ ಚಿಂತಿಸುವುದು ಅನಿವಾರ್ಯ. ಈ ಹಂತದಲ್ಲಿ ಶಿಕ್ಷಣವು ಅವಳ ನೆರವಿಗೆ ಬರುವಂತಿದ್ದರೆ ಆ ಮಾತು ಬೇರೆಯದಾಗುತ್ತಿತ್ತು. ಆದರೆ ಇಂದು ಅವಳಿಗೆ ದೊರೆಯುತ್ತಿರುವ ಶಿಕ್ಷಣವು ಹೆಣ್ಣಿನ

ಸೃಜನಶೀಲತೆಗೆ ಬಗ್ಗದೇ ಹೋಗುವ ಪುರುಷ ಭಾಷೆಯನ್ನೇ ಬಲವಂತವಾಗಿ ಅವಳ ಮೇಲೆ ಹೇರುತ್ತದೆ". [೬೩] ಈ ಮಾತುಗಳು ಮಹಿಳೆಗೆ ಶಿಕ್ಷಣ ಮಾತ್ರವಲ್ಲ ಅವಳ ಅರಿವನ್ನು ಹೆಚ್ಚಿಸಿಕೊಳ್ಳುವ ಮುಕ್ತ ಸ್ವಾತಂತ್ರ್ಯ ಅತ್ಯವಶ್ಯಕ ಎನ್ನುತ್ತವೆ.

ಈ ಎಲ್ಲ ಮಾತುಗಳು ಮಹಿಳೆಗೆ ದೊರೆತ ಸ್ವಾತಂತ್ರ್ಯ, ಬದುಕಿನ ಬದ್ಧತೆ ರೂಪಿತಗೊಂಡ ನೆಲೆಯನ್ನು ಪ್ರತಿನಿಧಿಸುತ್ತವೆ. ಆದ್ದರಿಂದಲೇ ಮಹಿಳೆಯನ್ನು ದ್ವಿತೀಯ ದರ್ಜೆಯವಳು ಎಂಬ ಮಾತುಗಳಿಗೆ ಪ್ರಗತಿಪರ ಚಿಂತನೆಗಳ ಮೂಲಕ ಮತ್ತು ವೈಚಾರಿಕ ದೃಷ್ಟಿಕೋನದ ಮೂಲಕ ಸ್ವಾವಲಂಬನೆಯ ಹಾದಿಯನ್ನು ಮಹಿಳೆ ಕಂಡುಕೊಂಡಳು. ಎಂಬುದನ್ನು ಮಹಿಳಾ ಸಾಹಿತ್ಯ ಚರಿತ್ರೆ ದಾಖಲಿಸುತ್ತದೆ. ಮಹಿಳಾ ಕಾವ್ಯ ಅವಸರದಿಂದ ಹುಟ್ಟಿದ್ದಲ್ಲ. ಶತಮಾನಗಳಿಂದ ಉಂಟಾದ ಒತ್ತಡ, ಬರೆಯಲೇಬೇಕೆಂಬ ತುಡಿತ ಮಹಿಳೆಯನ್ನು ಸಾಹಿತ್ಯದ ಕಡೆಗೆ ಒಲವು ಮೂಡುವಂತೆ ಮಾಡಿದ್ದು. ಇದಕ್ಕೆ ಪ್ರಮುಖ ಪ್ರೇರಣೆ ಸ್ತ್ರೀವಾದ. ಕಾವ್ಯ ಒಂದು ಕಲೆ ಎಂಬ ಮಾತನ್ನು ಮಹಿಳಾ ಕಾವ್ಯ ಸುಳ್ಳಾಗಿಸುತ್ತದೆ. ಏಕೆಂದರೆ ಬರವಣಿಗೆಯೇ ಬದುಕಲ್ಲ. ಮಹಿಳಾ ಕಾವ್ಯ ಬದುಕಿನ ಸೂಕ್ಷ್ಮತೆಯನ್ನು ಸಾಮಾಜಿಕ ಅಯಾಮದೊಂದಿಗೆ ತನ್ನನ್ನೂ ಕ್ರೂಢೀಕರಿಸಿಕೊಳ್ಳುವ ಮಾಧ್ಯಮವಾಗಿ ಕಂಡವು. ಇಲ್ಲಿ ಆದರ್ಶಕ್ಕಿಂತ ವಾಸ್ತವಕ್ಕೆ ಒತ್ತು ಕೊಟ್ಟದ್ದು ಪ್ರಮುಖ ಅಂಶ. ಇಂತದ್ದನ್ನೇ ಕಾವ್ಯ ಹುಟ್ಟುವ ಸಮಯವನ್ನು ಜೀವನದ ಉಸಿರಿನ ಸಂಕೇತದಂತೆ ಪ್ರತಿಬಿಂಬಿಸಿದ್ದು ಮಹಿಳಾ ಕಾವ್ಯದ ವಿಶೇಷ. ಆ ಮೂಲಕ ತನ್ನ ಅಸ್ಮಿತೆಯನ್ನು ಹೊಸದೊಂದು ದೃಷ್ಟಿಕೋನದಲ್ಲಿ ದಾಖಲಿಸಿವೆ.

"ಬದುಕ ರಂಗಿನಾಟದಲಿ
ನೋವಚೂರಿ ಚುಚ್ಚಿದಾಗ
ಕಾವ್ಯರಕ್ತ ಚಿಮ್ಮುತ್ತಿತ್ತು
ನೋವೆ ಜೀವನವೆಂದು
ಅರಿವಾದ ಹೊತ್ತಿನಲಿ
ಹರಿವ ರಕ್ತದಲ್ಲೆಲ್ಲ
ಉದ್ಗಾರಗಳು ಕರಗಿ
ನನ್ನುಸಿರೇ ಕಾವ್ಯವಾಯ್ತು!" [೬೪]

ಹೆಣ್ಣಿನದು ಸೀಮಿತ ಪ್ರಪಂಚ. ಹುಟ್ಟಿನಿಂದ ಸಾಯುವತನಕ ಗಂಡಿನ ನೆರಳನ್ನು ಅನುಸರಿಸಬೇಕೆಂಬ ಹಳೆಯ ವಾದಗಳನ್ನು ಒಮ್ಮೆಗೇ ತಿರಸ್ಕರಿಸುತ್ತವೆ ಈ ಸಾಲುಗಳು. 'ಕಾವ್ಯ' ಎಂಬ ಪದ ಕೋಮಲ, ಮಾಧುರ್ಯದ ಸಂಕೇತ. ಅವು ಹೆಣ್ಣಿನ ಆಭರಣಗಳು ಎಂಬ ಗಂಡಿನ ಮನಸ್ಥಿತಿಯನ್ನು ಪುನರ್ ವಿಮರ್ಶೆಗೊಳಪಡುಸುತ್ತವೆ. ಇಲ್ಲಿ ಕವಯಿತ್ರಿಯೇ ಪ್ರಾತಿನಿಧಿಕ ಪಾತ್ರ ಪಡೆದಿಲ್ಲ. ತನ್ನ ಮೂಲಕ ಧಮನಿತ ಸಮುದಾಯದ ಹೆಣ್ಣಿನ ಪ್ರತಿನಿಧೀಕರಣ ಈ ಕವಿತೆಯಲ್ಲಡಗಿದೆ. ಸಮಾಜದ ಒಟ್ಟಾರೆ ಮಹಿಳಾ ಸಮುದಾಯದ ಪ್ರಜ್ಞಾಪೂರ್ವಕ ನೋವನ್ನು ಬಿಂಬಿಸುವ ಮತ್ತು ಆ ಮೂಲಕ ನಿಜದ ಅರಿವನ್ನು

ಮೂಡಿಸುವ ಹಂಬಲ ಇಲ್ಲಿದೆ. ಎರಡು ಸಾಲುಗಳ ಕವಿತೆಕೂಡ ಇಡೀ ಬದುಕಿನ ಚಿತ್ರಣವನ್ನು ತಿಳಿಸುತ್ತದೆ. ಕಿರು ಕವಿತೆಗಳೂ ಬದುಕಿನ ವ್ಯಾಪಕ ಅರ್ಥವನ್ನು ಇಡಿಯಾಗಿ ಚಿತ್ರಿಸುತ್ತವೆನ್ನುವುದಕ್ಕೆ ಹನಿಗವನಗಳು ಉತ್ತಮ ಉದಾಹರಣೆ ಎನ್ನಬಹುದು. ಕವಿತೆ ಚುಟುಕಾದರೂ ಆ ಮೂಲಕ ಬದುಕನ್ನು ಕಂಡ, ಜೀವನದ, ಹತಾಷೆಯೊಂದಿಗಿನ ತಲ್ಲಣವನ್ನು ಹೆಣ್ಣು ಅನುಭವಿಸುವ ರೀತಿ ಎಲ್ಲವೂ ಕನ್ನಡಿಯಂತೆ ನಮ್ಮ ಮುಂದಿದೆ. ಬದುಕು ಮತ್ತು ಪ್ರೀತಿಯ ನಡುವೆ ಗಂಡು ನಿಂತಾಗ ಹೆಣ್ಣಿನ ಅಂತರಂಗ ಕಠೋರವಾಗುತ್ತದೆ ಎಂಬುದನ್ನು ಹಲವು ಕವಿತೆಗಳಲ್ಲಿ ನೋಡಬಹುದು.

"ನಾನುಬದುಕನ್ನು ಪ್ರೀತಿಸಿದೆ
ಗಂಡು ನನಗೊಲಿದ
ಬಂತೇಕೆ ಆಘಾತ
ಹಿಂಸೆ ಅನುಮಾನ ಕ್ರೌರ್ಯ
ಈಗನ್ನಿಸುತಿದೆ
ಪ್ರೀತಿಸಿಕ್ಕ ಬೇಕಾದರೆ
ಹೆಕ್ಕಿಪಡೆಯುವ
ಒಳಗಣ್ಣು ಬೇಕು!" [೮೫]

ಏಕವ್ಯಕ್ತಿ ಮಾದರಿಯಲ್ಲಿ ಕವಿತೆ ನಿಂತಿಲ್ಲ. ಗಂಡು ಹೆಣ್ಣು ನಿಸರ್ಗದತ್ತವಾದ ಸಂಬಂಧಗಳು ಆ ಮೂಲಕ ಮತ್ತೊಂದು ಜೈವಿಕ ಸಂಬಂಧ, ಕುಟುಂಬ ವ್ಯವಸ್ಥೆ ಎಲ್ಲವೂ ರೂಪಿಸಿಕೊಳ್ಳುತ್ತದೆ. ಬದುಕು ಏಕಮುಖ ನೆಲೆಯಲ್ಲಿ ನಿಂತಿಲ್ಲ ಆದರೂ ಬದುಕು ವ್ಯಕ್ತಿ ಕೇಂದ್ರಿತ. ಅಲ್ಲಿ ಸಮಾಜಮುಖೀ ಆಶಯಗಳೆಂದು ಬಿಂಬಿತವಾಗುವ ಗಂಡಿನ ಬಯಕೆಗಳು ಪ್ರವೇಶ ಪಡೆದಾಗ ಹೆಣ್ಣು ಅದನ್ನು ತಿರಸ್ಕರಿಸುತ್ತಾಳೆಂಬುದನ್ನು ಕವಿತೆ ನೇರವಾಗಿ ವಿಡಂಬಿಸುತ್ತದೆ. ಇಲ್ಲಿ ಸ್ವೇಚ್ಛೆಗಿಂತ ವಯಕ್ತಿಕ ಬದುಕಿನ ಸ್ವಾತಂತ್ರ್ಯ ಜೀವನ ಪ್ರೀತಿ ಮುಖ್ಯವಾದುದು. ತನ್ನ ತನದ ಇರುವಿಕೆಯನ್ನು ಕಂಡುಕೊಳ್ಳುವುದರ ಜೊತೆಗೆ ಸಾಮಾಜಿಕ ಸ್ತರ ವಿನ್ಯಾಸ ಮತ್ತು ಗಂಡಿನ ಅಧಿಕಾರದಾಹ, ಅನುಮಾನಗಳಿಗೆ ಪ್ರತಿಭಟನೆಯ ಹಾದಿಯನ್ನೂ ಹಿಡಿಯುತ್ತದೆ ಕವಿತೆ.

ಅಕ್ಕ, ಎಲ್ಲವನ್ನೂ ತೊರೆದು ಕದಳೀವನ ಹೊಕ್ಕಂತೆ ಗಂಡನ್ನು ತೊರೆವ ಹೆಣ್ಣು ಹೇಗೆ ಕಾವ್ಯದ ಕಡೆಗೆ ವಾಲುತ್ತಾಳೆಂಬುದು ಮತ್ತೊಂದು ಕವಿತೆಯಲ್ಲಿ ಧ್ವನಿತವಾಗಿದೆ.

"ಗಂಡು ಬೇಕಲ್ಲ ಹೆಣ್ಣಿಗೆ! / ಆದರೆ,
ಗಂಡನ್ನೊಲಿಸುವ ದಾರಿ / ಸತ್ಯದ್ದಲ್ಲವೆಂದು ತಿಳಿದಾಗ
ನಾನು ಕಾವ್ಯಕ್ಕೊಲಿದೆ. / ಪ್ರೇಮಿಸಲು ಧೈರ್ಯಬೇಕು
ಉಳಿಸಿಕೊಳ್ಳಲು ಅಂಜಿಕೆ ಸಾಕು" [೮೬]

ಈ ಸಾಲುಗಳಲ್ಲಿ ಆಧುನಿಕ ಹೆಣ್ಣು ಯಾವ ರೀತಿ ಬದುಕಬೇಕೆಂಬ ಆಶಯದ ನುಡಿಗಳಂತಿವೆ. ಅವಸರದ ಬದುಕಿನಲ್ಲಿ ಅನುಮಾನವೇ ಪರಮಾಧಿಕಾರ ಪಡೆದ ಇಂಥ ಹೊತ್ತಿನಲ್ಲಿ ಹೆಣ್ಣಿಗೆ ಬೇಕಾಗಿರುವುದು ಇಂತಹ ಧೃಢ ನಡತೆಯೇ ಗಂಡನ್ನು ಬಿಡುವ ಹೆಣ್ಣಿಗೆ ಕಾವ್ಯವೇ ಬದುಕಿನ ಹಾದಿ ತೋರುವ ಮಾರ್ಗವಾಯಿತೆಂದರೆ ಹೆಣ್ಣು ಬಿಡುಗಡೆಗಿಂತಲೂ ಬದಲಾವಣೆಗೆ ಹೆಚ್ಚು ಒತ್ತು ಕೊಡುತ್ತಾಳೆಂಬುದಕ್ಕೆ ಕವಿತೆ ಪ್ರತಿರೂಪದಂತಿದೆ. ಪ್ರೀತಿಗಿಂತ ಕಾಮವೇ ಮುಖ್ಯವಾದ ಬದುಕಿನಲ್ಲಿ ಎಲ್ಲವೂ ತಿರಸ್ಕಾರವೇ ಎಂಬುದನ್ನು ಕವಿತೆ ಮನಗಾಣಿಸುತ್ತದೆ. ಅಸ್ಮಿತೆಯ ಪ್ರತಿಫಲವನ್ನು ಕಂಡ ದಟ್ಟತೆಯನ್ನು ಇದು ಪುಷ್ಟೀಕರಿಸುತ್ತದೆ.

ಆಧುನಿಕ ಕನ್ನಡ ಮಹಿಳಾ ಕಾವ್ಯ ಅಸ್ಮಿತೆಯನ್ನು ಹಲವು ಮಗ್ಗುಲುಗಳಿಂದ ಕಂಡುಕೊಳ್ಳುವ ಪ್ರಯತ್ನ ಮಾಡಿವೆ. ಆದರೂ ಸಮಾಜ ನಿರಚನೆಯ ಸ್ತರಗಳು ಅವಳನ್ನು ಪ್ರತಿ ಹಂತದಲ್ಲೂ ಬಂಧಿಸಲ್ಪಡುತ್ತವೆ ಎಂಬುದನ್ನು **ಎಂ.ಎಸ್. ಆಶಾದೇವಿ** ಈ ರೀತಿ ವ್ಯಾಖ್ಯಾನಿಸುತ್ತಾರೆ.

"ಸಿಮೊನ್ ದ ಬೋವಾ ಹೆಣ್ಣಿನ ಸ್ಥಿತಿಗತಿಗಳು ಕಾಲದಿಂದ ಕಾಲಕ್ಕೆ ಬದಲಾಗದೆ ಯಥಾಸ್ಥಿತಿಯಲ್ಲಿ ಉಳಿದಿರುವುದಕ್ಕೆ ಕೊಡುವ ಕಾರಣ ಅರ್ಥವಾಗುವುದು ಇಂಥ ಸನ್ನಿವೇಶಗಳಲ್ಲಿ 'ಸಂಘಟನೆಯ ಕೊರತೆ' ಎಂದು ಸಿಮೊನ್ ಗುರ್ತಿಸುವ ವಾಸ್ತವವು ಒಂದು ಜಾಗತಿಯ ವಿದ್ಯಮಾನವಾಗಿದೆ. ಇಲ್ಲಿ ಸಂಘಟನೆ ಎನ್ನುವುದು ಹೆಣ್ಣಿನ ಬೌದ್ಧಿಕ, ಮಾನಸಿಕ, ಜೈವಿಕ ಹೀಗೆ ಎಲ್ಲ ಬಗೆಯ ಸಂಘಟನೆಗಳ ಮಟ್ಟಿಗೂ ನಿಜವೇ ಆಗಿರುತ್ತದೆ. ಸಂಘಟನೆಗೆ ಎರಡು ಮೂಲ ಆಶಯಗಳಿರುತ್ತವೆ. ಒಂದು ಆತ್ಮ ವಿಶ್ವಾಸವಾದರೆ ಇನ್ನೊಂದು ಆವರಣ ಸೃಷ್ಠಿ ಆದರೆ ಸಮುದಾಯವು ಅದರ ರಚನೆಯ ಸ್ವರೂಪದಲ್ಲಿಯೇ ಈ ಎರಡೂ ಹೆಣ್ಣಿಗೆ ಲಭ್ಯವಾಗದಿರುವ ಹಾಗೆ ನಿರಂತರವಾಗಿ ಎಚ್ಚರಿಕೆ ವಹಿಸುತ್ತಿರುತ್ತದೆ" [೮೭] ಎನ್ನುತ್ತಾರೆ.

ಈ ಮಾತುಗಳು ಹೆಣ್ಣನ್ನು ಗತಕಾಲದಿಂದ ಹೇಗೆ ನಂಬಿಸಿಕೊಂಡು ಬಂದಿದ್ದರು ಎಂಬುದನ್ನು ವಿಮರ್ಶಾ ಹಿನ್ನಲೆಯಲ್ಲಿ ತಿಳಿಸುತ್ತದೆ. ಆತ್ಮ ವಿಶ್ವಾಸ ಗಂಡಿನ ಸಂಕೇತವೆಂದು ಆ ಮೂಲಕ ತನಗೆ ಅನುಕೂಲವಾದ ವ್ಯಕ್ತಿಗತ ನಿಲುವನ್ನು ಬಹಳ ನಾಜೂಕಾಗಿ ಹೆಣ್ಣಿನ ಮೇಲೆ ಹೇರುತ್ತಾನೆ ಇದನ್ನೇ ನಾವು ಮೌಲ್ಯಗಳೆಂದು ಪರಿಪಾಲಿಸಿಕೊಂಡು ಬಂದಿದ್ದೇವೆ. ಎಂಬುದನ್ನು ಮಹಿಳಾ ಕಾವ್ಯ ವಿಡಂಬಿಸುತ್ತದೆ. ಅಡುಗೆ ಮನೆಯ ಪರಿಕರಗಳು ಹೆಣ್ಣಿನ ಅಂದವನ್ನು ಬಿಂಬಿಸಲು ಬಳಸುವ ವಸ್ತುಗಳಾಗುತ್ತವೆ. ಇದರ ಹಿಂದಿನ ಹುನ್ನಾರ ಗಂಡಿನ ಬಯಕೆಯ ಕಾಮನೆಗಳೂ ಯಾವುದಾದರೊಂದು ರೂಪದಲ್ಲಿ ತಣಿಯುವುದೇ ಆಗಿರುತ್ತದೆ. ಇಂತದ್ದರಲ್ಲೂ ಮಹಿಳಾ ಕಾವ್ಯ ಎಚ್ಚೆತ್ತ ಪ್ರಜ್ಞೆಯೊಂದಿಗೆ ಕೆಲಸ ಮಾಡಿದೆ.

ಮಹಿಳಾ ಕಾವ್ಯದಲ್ಲಿ ಅಸ್ಮಿತೆಯ ನೆಲೆಯ ಹುಡುಕಾಟ ನಡೆಸಿದಂತೆಲ್ಲಾ ನಮಗೆ ಕಂಡುಬರುವುದು ಪ್ರತಿಭಟನೆ ಅಂದರೆ ಗಂಡಿನ ವಿರೋಧಿತನವಲ್ಲ. ವ್ಯವಸ್ಥೆಯ ಹುನ್ನಾರಕ್ಕೆ

ಸಿಲುಕಿಸಿದ ಗಂಡಿನ ಪರಮಾಧಿಕಾರದ ನೆಲೆಯನ್ನು ಇಂತಹ ಜಾಗೃತತೆಯ ಮೂಲಕ ಇಡೀ ಹೆಣ್ಣುತನದ ಮಾದರಿ ಎಂದು ಹೇಳುವ ಹಳೆಯ ಮೌಲ್ಯಗಳನ್ನು ನಮ್ಮ ಕವಯಿತ್ರಿಯರು ಹೊಸ ಆಲೋಚನೆಗಳೊಂದಿಗೆ ಕವಿತೆಗಳ ಮೂಲಕ ಚಿತ್ರಿಸುತ್ತಾರೆ. ಸಮಾನತೆ, ಸ್ವಾತಂತ್ರ್ಯ, ಲಿಂಗ ಸಮಾನತೆಯ ಬಗ್ಗೆ ಉದ್ದುದ್ದ ಭಾಷಣ ಮಾಡುವ ಮಂದಿ ತನ್ನ ಮನೆಯಲ್ಲಿನ ಹೆಣ್ಣಿಗೆ ನಿರ್ಬಂಧ ವಿಧಿಸುವುದು ನಮಗೆ ಗೌಣವಾಗುತ್ತದೆ. ಇದನ್ನೇ ನಮ್ಮ ಮಹಿಳಾ ಕಾವ್ಯ ಮೂಲವಾಗಿ ಗುರ್ತಿಸುವಂತದ್ದು.

"ದೇಶಕ್ಕೆ ಸ್ವಾತಂತ್ರ್ಯ ಬಂದರೂ
ನನಗೆ ಮಾತ್ರ
ಬಳೆಯಿನ್ನೂ ಕೋಳವಾಗೇ ಇದೆ,
ತಾಳಿ ಉರುಳಾಗಿ ಬಿಗಿಯುತ್ತಿದೆ.
ತಾಳಲಾರೆನು ಇನ್ನು ಹೇಳುವೆನಾದರೂ ಯಾರಿಗೆ?" ೮೮

ಈ ಕವಿತೆ ಸಾಮುದಾಯಿಕ ಹೆಣ್ಣಿನ ಪ್ರತಿನಿಧೀಕರಣದಂತಿದೆ. ಆಧುನಿಕ ಜೀವನ ಶೈಲಿಯನ್ನು ಬಯಸುವ ನಾವುಗಳು ಆಲೋಚನೆಯಲ್ಲಿ ಮಂಕಾಗುತ್ತಿದ್ದೇವೆ. ಹೆಣ್ಣನ್ನು ಹೇಗೆ ನಡೆಯಿಸಿಕೊಂಡು ಬಂದಿದ್ದಾರೆ ಎಂಬುದನ್ನು ವರದಿ ಮಾಡುವ ಉದ್ದೇಶ ಮಾತ್ರ ಕವಿತೆಯಲ್ಲಿಲ್ಲ, ಬದಲಿಗೆ ಗತಕಾಲದಿಂದ ಪಾಲಿಸಿಕೊಂಡ ನಿಯಮಗಳಿಗೆ ಸಿಲುಕಿದ ಹೆಣ್ಣಿನ ಮುಖ ದರ್ಶನ ಮಾಡುತ್ತದೆ. ಕವಿತೆಯನ್ನು ಓದಿದಂತೆಲ್ಲಾ ಅದು ಕೇವಲ ಬರಹ ರೂಪವಾಗುಳಿಯುವುದಿಲ್ಲ. ಕನ್ನಡಿ ರೂಪದಂತೆ ದರ್ಶಿಸುತ್ತದೆ. ಕವಿತೆ ಮುಂದುವರೆದು

"ಹೇಳಿದರೆ
ನನ್ನ
ಜೀವಂತ ಹೂಳುವಿರಿ,
ಹೇಳದಿರೆ
ನನ್ನ ಹೇಡಿತನವ
ಹೊಗಳುವಿರಿ,
ಹೆಣ್ಣೆಂದ ಬಣ್ಣಿಸುವಿರಿ.
ಆಗೀಗ ಮಿಸುಕಾಡಲೆತ್ನಿಸುವ ನನ್ನ
ಮೆತ್ತಗೆ ಕತ್ತು ಹಿಸುಕುತ್ತಲೇ ಇರುವಿ,
ಎಷ್ಟೆಂದರೂ ನೀನು
ಗಂಡು ತಾನೆ? ೮೯

ಟೀಕೆಯಂತೆ ಕಂಡುಬರದೆ ಹಿಂದಿನಿಂದಲೂ ನಂಬಿಸಿಕೊಂಡ ಗಂಡಿನ ದರ್ಪವನ್ನೂ, ದರ್ಶನವನ್ನೂ ನೇರವಾಗಿ ಪ್ರಶ್ನಿಸುತ್ತದೆ. ಕವಿತೆಯಲ್ಲಿ ಎಲ್ಲೂ ಹೆಣ್ಣಿನ ವಿಶಾದದ ಛಾಯೆ ಕಂಡುಬರದೆ ಪರಿಸ್ಥಿತಿಯ ನಿಜದರ್ಶನ ಇಲ್ಲಡಗಿದೆ. ಶತಮಾನಗಳಿಂದ ನಡೆಸಿಕೊಂಡು ಬಂದ ಹೆಣ್ಣಿನ ಬದುಕಿನ ಕರಾಳತೆಯನ್ನು ಎಳೆ ಎಳೆಯಾಗಿ ಹೆಣ್ಣೇ ಬಿಚ್ಚಿಡುತ್ತಾಳೆ. ಗಂಡು ಮತ್ತು ಹೆಣ್ಣಿನ ಮೌಲ್ಯಗಳ ನಡುವಿನ ಅಂತರ ಹೇಗೆ ಸಾಮಾಜಿಕವಾಗಿ ಬಿಂಬಿತವಾಗಿದೆ ಮತ್ತು ಅದನ್ನು ನಂಬಿಸಿಕೊಂಡ ಗಂಡಿನ ದರ್ಪದ ಅಮಾನವೀಯತೆಯ ವಾಸ್ತವ ಚಿತ್ರಣ ಇಲ್ಲಡಗಿದೆ. ಗಂಡಿನ ದೃಷ್ಟಿಕೋನದಲ್ಲಿ ಸಮಾನತೆ ಹೇಗೆ ಕಂಡಿದೆ ಎಂಬುದನ್ನು ಹೆಣ್ಣು ನೋಟದ ಮೂಲಕ ವಾಸ್ತವದೊಂದಿಗೆ ಕವಿತೆ ಕೆಣಕುತ್ತದೆ. ನೀನು ಗಂಡೆ ತಾನೆ? ಎಂಬ ಪ್ರಶ್ನೆಯ ಮೂಲಕ ಪ್ರತಿಭಟಿಸುತ್ತದೆ.

ಸೀತೆ ಎಂದಾಕ್ಷಣ ಹೆಣ್ಣು ನೋಟದಲ್ಲಿ ಸಾಮಾನ್ಯ ಮಹಿಳೆಯ ಪ್ರತಿರೂಪ ನಮ್ಮ ಮುಂದೆ ಮೂಡುತ್ತದೆ. ಆದರ್ಶ, ಮರ್ಯಾದಾ ಪುರುಷನ ಮಡದಿಯಾದರೂ ಸೀತೆ ಎಂದೂ ಸಾಮಾನ್ಯ ಹೆಣ್ಣಿನ ಪ್ರತಿನಿಧೀಕರಣವೆ. ತನ್ನ ತನದ ಪ್ರತಿಬಿಂಬವನ್ನು ಸೀತೆ ಕವಿತೆಯ ಮೂಲಕ ಸಮಾಜಕ್ಕೆ ಹೇಳುತ್ತಾಳೆ.

"ನಾನು ಸೀತೆ
ಅಗ್ನಿ ಪರೀಕ್ಷೆಯ ನಂತರವೂ
ಪರಿತ್ಯಕ್ತೆ.
ಭೂಮಿಯ ಮಗಳಾಗಿಯೂ
ಜಾನಕಿಯಾಗಿದೆ.
ನನ್ನ ಸ್ವಂತ ಕನಸುಗಳಲ್ಲಿಯೂ
ರಾಮನ ಆಜ್ಞಾ ಪಾಲಕಿಯಾಗಿದೆ.
ಯಾರೋ ಮಾಡಿದ ತಪ್ಪಿಗೆ
ನಾನು ನರಳಿದ್ದೆ" ೯೦

ಮಾಡದ ತಪ್ಪಿಗೆ ಬಲಿಪಶುವಾದ ಸಾಮಾನ್ಯ ಹೆಣ್ಣಿನ ಚಿತ್ರಣ ಇಲ್ಲಿದೆ. ಕವಿತೆಯಲ್ಲಿ ರಾಮನ ಸೀತೆ ಗೌಣವಾಗುತ್ತಾಳೆ ಆದರೆ ಸಾಮಾಜಿಕವಾಗಿ ಬದಲಾಗಬೇಕಾದ ಹೆಣ್ಣಿನ ಪ್ರತಿನಿಧೀಕರಣದ ಸಂಕೇತವಾಗಿ ಸೀತೆ ನಿಲ್ಲುತ್ತಾಳೆ. ಗಾಂಧರ್ವ ವಿವಾಹವಾಗುವ ಸ್ವತಂತ್ರ್ಯ ಪುರಾಣಗಳಲ್ಲಿತ್ತು ಎಂಬ ಮಾತು ನಂಬಲಸಾಧ್ಯ ಏಕೆಂದರೆ ರಾಮಾಯಣದ ಸೀತೆಯನ್ನು ಪವಿತ್ರಳು, ಪತಿವ್ರತೆ ಎಂದು ನಂಬಿಸಲೋ, ಬಿಂಬಿಸಲೋ ರಾಮ ಹೆಣಗುತ್ತಾನೆ. ಆ ಮೂಲಕ ಹೆಣ್ಣಿಗೆ ಸಹನಾಶೀಲ ಗುಣ, ಬರಬೇಕೆಂಬ ಆಲೋಚನೆಯಿಂದ ಸೀತೆಯನ್ನು ವಿವಿಧ ಕಷ್ಟಗಳಿಗೆ ಗುರಿಮಾಡಿದ್ದು ಎಂಬ ಅನುಮಾನವೂ ಬರುತ್ತದೆ. ಹೆಣ್ಣಿನ ಮೂಲಕ ಹೆಣ್ಣಿನ ಬಂಧನ ಮತ್ತು ಪುರುಷನ ಕ್ರೌರ್ಯ ಈ ಕವಿತೆಯಲ್ಲಿದೆ. ಮುಂದುವರೆದು.

"ವಾಲ್ಮೀಕಿ ನನ್ನ
ಗರ್ಭೀಕರಿಸಿಕೊಳ್ಳದಿದ್ದರೆ
ನಾನು ಏನಾಗ ಬಹುದಿತ್ತು!
ಅನೇಕ ಸಂವತ್ಸರಗಳು
ಕುದಿ ಕುದಿದು
ಹದಗೊಂಡಿದೆ ಪಾಕ,
ಹೊಯ್ಯ ಬೇಕಾಗಿದೆ ಎರಕ.
ಯಾರ ಸುತೆಯಾಗಿ, ಸತಿಯಾಗಿ
ಮಾತೆಯಾಗಿ ಅಲ್ಲ,
ಬರಿ ಸೀತೆಯಾಗಿ"[೯೧]

ವಾಲ್ಮೀಕಿ ಚಿತ್ರಿತ ಸೀತೆಯಾದರೂ ಸಾಮಾಜಿಕ ಬದಲಾವಣೆಯ ಹಂತಕ್ಕೆ ತಂದಾಗ ಸೀತೆ ದಮನಿತ, ಶೋಷಿತ ವರ್ಗದ ಹೆಣ್ಣಿನ ಪ್ರತಿನಿಧಿಯಾಗಿ ನಿಲ್ಲುತ್ತಾಳೆಂಬುದಕ್ಕೆ ಕವಿತೆ ಉತ್ತಮ ಉದಾಹರಣೆ. ತನ್ನ ಮೂಲಕ ಸಾಮಾಜಿಕ ಬದಲಾವಣೆಯ ಕೇಂದ್ರಕ್ಕೆ ಅನೇಕ ಹೆಣ್ಣುಗಳನ್ನು ತಂದು ನಿಲ್ಲಿಸುವ ಪ್ರಯತ್ನ ಸೀತೆ ಮಾಡುತ್ತಾಳೆ. ಇಲ್ಲಿ ದೈವೀಕ ನೆಲೆಗಿಂತ ಶತಮಾನದ ಹೆಣ್ಣಿನ ಆಕ್ರಂದನವಿದೆ ಮತ್ತು ಪ್ರತಿಭಟನೆ ಇದೆ. ಮಾತೆ, ಸತಿ, ಸುತೆ ಯಾವ ಹಂತದಲ್ಲೂ ಗಂಡನ್ನು ಕೇಂದ್ರೀಕರಿಸುವ ಹೆಣ್ಣು ಬದಲಾವಣೆಗೆ ಹಾತೊರೆಯುವ, ತನ್ನೊಡಲಿನ ಸಿಟ್ಟನ್ನು ಒಮ್ಮೆಗೇ ಸ್ಫೋಟಿಸುವ ಚಿತ್ರಣ ಸೀತೆಯಲ್ಲಡಗಿದೆ. ತನ್ನ ತನದ ಹುಡುಕಾಟಕ್ಕಿಂತ ತನ್ನ ಅಸ್ತಿತ್ವವನ್ನು ದಾಖಲು ಮಾಡುವ ಪ್ರಯತ್ನವೂ ಇಲ್ಲಿದೆ.

ಮಾನವನ ಆಲೋಚನೆ ಜಾತಿ ಧರ್ಮಗಳಾಚೆಗಿನದು. ಇಂದು ಈ ಮಾತು ಕೇವಲ ಘೋಷಣೆಗೆ ಮಾತ್ರ ಸೀಮಿತವಾದವಂತಿದೆ. ಮರ್ಯಾದಾ ಹತ್ಯೆ, ಕೊಲೆ ಮುಂತಾದ ಹೀನಾಯ ಸ್ಥಿತಿಯನ್ನು ಮನುಷ್ಯ ಮೀರುತ್ತಿದ್ದಾನೆ. ಮಹಿಳಾ ಕಾವ್ಯ ಇಂತಹ ಚರ್ಚಾ ವಿಚಾರವನ್ನೂ ತಮ್ಮ ಕಾವ್ಯದ ವಸ್ತುವಾಗಿಸಿಕೊಂಡದ್ದು ವಿಶೇಷ. ಜಾತಿ ಸಂಕರದ ಚೌಕಟ್ಟಿನಾಚೆಗಿನ ಆಲೋಚನೆಯನ್ನು ಮೂಡುವಂತೆ ಮಾಡಿದ್ದು ಸಹ ಇವೆ. ಹೆಣ್ಣನ್ನೂ ಜಾತಿ ನೆಲೆಯಲ್ಲಿ ನೋಡುವ, ನಂತರದ ಸ್ಥಾನದಲ್ಲಿ ನೋಡುವವರಿಗೆ ಮಹಿಳಾ ಕಾವ್ಯ ಕೊಟ್ಟ ಉತ್ತರ, ಸಾಮಾಜಿಕ ಆಶಯ ಪ್ರಧಾನವಾದುದು.

"ನನ್ನ ಅಜ್ಜನ ಕುಲ ಯಾವುದೋ
ಅವನ ಅಜ್ಜನ ನೆಲೆ ಯಾವುದೋ
ನನ್ನ ಅಪ್ಪನ ಸೆಲೆ ಯಾವುದೋ
ನಾನೇನು ಬಲ್ಲೆ?
ನಾನು ಕಸಿ ಮಾವಿನ ಮರ

ಕಡಲಂಥ ಹೆಣ್ಣು
ತೆರೆಯಣ್ಣ...... ಕಣ್ಣು!" [೯೨]

ಗಂಡು ಹೆಣ್ಣುಗಳು ಸಮಾನಾಂತರ ರೇಖೆಯವು. ಆದರೆ ತಲೆ ತಲಾಂತರದ ಗೌರವವನ್ನು ಗಂಡು ದೊರಕಿಸಿಕೊಂಡನೇ ವಿನಃ ಹೆಣ್ಣು ಅದನ್ನು ದಕ್ಕಿಸಿಕೊಳ್ಳುವ ಅವಕಾಶವನ್ನು ಮರೆ ಮಾಚಿದ ಸಂದರ್ಭ ಇಲ್ಲಿದೆ. ದರ್ಪ, ಗೌರವದ ಪ್ರತೀಕವೆನಿಸಿಕೊಂಡ ಗಂಡು ಹೆಣ್ಣಿನ ಸ್ವತಂತ್ರ್ಯತೆಯನ್ನು ಅರಗಿಸಿಕೊಳ್ಳುವಲ್ಲಿ ಸೋತ. ಆದ್ದರಿಂದಲೇ ಹೆಣ್ಣನ್ನು ಅನುಸರಣೆಯ ಮಾರ್ಗದಲ್ಲಿಯೇ ಇರುವಂತೆ ಮಾಡಿದ ರೀತಿಯನ್ನು ಕವಿತೆ ಚಿತ್ರಿಸಿದೆ. 'ಕಡಲು' ಪ್ರಶಾಂತತೆ, ಭೋರ್ಗರೆತದ ಪ್ರತೀಕ ಇದರ ಬಳಕೆ ಮಿತಿಮೀರಿದರೆ ಆಗುವ ಅನಾಹುತ ಅಪಾರ ಹಾಗೆಯೇ ಹೆಣ್ಣನ್ನು ಕೈಗೊಂಬೆಯಾಗಿಸುವ ಗಂಡಿನ ಮನಸ್ಸಿಗೆ ಚಾಟಿಹೊಡೆದಂತಿದೆ ಕವಿತೆ. ತಲೆಮಾರಿನಿಂದ ಹೆಣ್ಣನ್ನು ಕಂಡ ರೀತಿಯನ್ನು ವಾಸ್ತವದ ನೆಲೆಗಟ್ಟಿನಲ್ಲಿ ಪ್ರತಿಭಟಿಸುತ್ತದೆ ಕವಿತೆ.

ಕನ್ನಡ ನಾಡು, ನುಡಿ, ನೆಲ ಜಲದ ಬಗ್ಗೆ ಪ್ರೀತಿ ಕಾಳಜಿಗಳು ಇದ್ದಾಗ ಮಾತ್ರ ತಾಯ್ನಾಡು ಸುಂದರವಾಗಿರುತ್ತದೆಂಬುದನ್ನು ಆಧುನಿಕ ಯುಗದ ಶೋಕಿಗೆ ಮಾರು ಹೋದ ಇಂದಿನ ಯುವ ಪೀಳಿಗೆ ತಾಯಿ ಮತ್ತು ತಾಯ್ನಾಡಿನ ಅಂತಃಕರಣವನ್ನೂ ಮರೆಯುತ್ತಿರುವುದು ವಿಷಾದಕರ ಸಂಗತಿ. ಸಂಬಂಧಗಳು ಬೆಸೆಯುವುದು, ಪ್ರೀತಿ ಪ್ರೇಮಗಳು ಮೂಡುವುದು ಆಡು ಭಾಷೆಯಿಂದ ಎಂಬುದನ್ನು ಹಲವು ಕವಿತೆಗಳು ಧ್ವನಿಸಿವೆ.

"ಅಪ್ಪ ಅಮ್ಮ ಅನ್ನು
ಕನ್ನಡ ಉಳಿಯುವುದು
ಕಳ್ಳು ಬಳ್ಳಿ ತಾನೆ
ನಂಟನು ಬೆಸೆಯುವುದು
ಹಳ್ಳ ಕೊಳ್ಳ ಅನ್ನು
ಕನ್ನಡ ಉಳಿಯುವುದು
ನೀರೊಂದಿದ್ದರೆ ಸಾಕು
ಊರು ಬೆಳೆಯುವುದು" [೯೩]

ದೇಶಾಭಿಮಾನ, ಭಾಷಾಭಿಮಾನದ ಪ್ರತೀಕದಂತಿದೆ. ಇಂಗ್ಲೀಷ್ ವ್ಯಾಮೋಹಿಗಳಾದ ನಾವು ನಮ್ಮತನವನ್ನು ಬಿಟ್ಟು ಕೊಡುತ್ತಿದ್ದೇವೆಂಬ ನೋವಿದೆ. ಇದರ ಜೊತೆಗೆ ಮಾತೃಭಾಷೆಯ ಮಹತ್ವವನ್ನು ತಿಳುಸುವ ಹಂಬಲವೂ ಇದೆ. ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರುವೆಂಬ ವಾಕ್ಯಕ್ಕೆ ಅರ್ಥಪೂರ್ಣತೆಯನ್ನು ತಂದು ಕೊಡುತ್ತದೆ. ಕವಿತೆ ಮುಂದುವರೆದು.

"ತಾಳು ಬಾಳು ಅನ್ನು
ಕನ್ನಡ ಉಳಿಯುವುದು
ಹಮ್ಮನು ಬಿಟ್ಟರೆ ತಾನೆ
ಒಮ್ಮತ ಮಾಡುವುದು" [೯೪]

'ಕನ್ನಡ' ಹೆಸರಿನಲ್ಲೇ ಮಾಧುರ್ಯತೆ ಇದೆ. ಆದರೆ ಇಂದು ಜಾಗತೀಕರಣದ ಪ್ರಭಾವದಿಂದ ನಾವು ನಿರಭಿಮಾನಿಗಳಾಗುತ್ತಿದ್ದೇವೆ. ಮೊಬೈಲ್ ಪ್ರಪಂಚ ಇಂದಿನ ಮಕ್ಕಳನ್ನು ವ್ಯಸನಿಗಳಂತೆ ಮಾಡಿದೆ. ಇದರ ಅರಿವು ನಮಗಿದ್ದರೂ, ಎಚ್ಚೆತ್ತುಕೊಳ್ಳಬೇಕಾದ ಜಾಗೃತ ಪ್ರಜ್ಞೆ ನಮಗಿಲ್ಲದಿರುವುದು ದುರಂತದ ಸಂಗತಿ. ಕವಿತೆಯಲ್ಲಿ ಪ್ರತಿಭಟನೆಯ ಜೊತೆಗೆ ಅಸ್ಮಿತತೆಯೂ ಮನೆ ಮಾಡಿದೆ. ಇಂದಿನ ಯುವ ಪೀಳಿಗೆಯನ್ನು ಜಾಗೃತರನ್ನಾಗಿ ಮಾಡುವ ಹಂಬಲವೂ ಇದೆ.

ಜಾತಿ ಮತ್ತು ಧರ್ಮಗಳು ಸಾಮ್ಯತೆಯಲ್ಲಿದ್ದಾಗ ಬದುಕು ಸುಂದರವಾಗುತ್ತದೆಂಬ ಮಾತು ಅಕ್ಷರ ಸಹ ಸತ್ಯ. ಆದರೆ ಇಂದು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ನಾವು ಮುಂದಿದ್ದೇವೆಯೇ ಹೊರತು ವಿಶಾಲ ಹೃದಯಿಗಳಾಗಲ್ಲ. ವಿದ್ಯೆಯ ಜೊತೆಗೆ ಮೂಢನಂಬಿಕೆ ಅಜ್ಞಾನವನ್ನೂ ಅರಳಿಸಿಕೊಂಡಿದ್ದೇವೆ. ಇಂತಹ ಮಾರ್ಗಗಳು ಹೆಣ್ಣಿನ ಬದುಕಿಗೆ ಆಘಾತಕಾರಿ ಎಂಬುದನ್ನು ಕವಿತೆಗಳು ಚಿತ್ರಿಸಿವೆ.

"ಹಿಂದೂ ಹುಡುಗ ಮುಸ್ಲಿಂ ಹುಡುಗಿಯನ್ನು
ಮದುವೆಯಾದರೆ ಏನಾಗುತ್ತೆ?
ಏನೂ ಆಗೊಲ್ಲ,
ಮುದ್ದಾದ ಎರಡು ಮಕ್ಕಳಾಗುತ್ತೆ!
ರಾಮನನ್ನು ಅಲ್ಲಾಹುವಿನ ಪಕ್ಕದಲ್ಲಿ
ಇಟ್ಟರೆ ಏನಾಗುತ್ತೆ?
ಏನೂ ಆಗೊಲ್ಲ
ಶಕ್ತಿ-ಭಕ್ತಿ ಎರಡೂ ಹೆಚ್ಚಾಗುತ್ತೆ!" [೯೫]

ಸಮನ್ವಯತೆಯ ಅವಶ್ಯಕತೆಯನ್ನು ಕವಿತೆ ಧ್ವನಿಸುತ್ತದೆ. ದೇಶ ಮತ್ತು ಧರ್ಮದ ಹೆಸರಿನಲ್ಲಿ ನಡೆಯುವ ಅಮಾನವೀಯ ಘಟನೆಗಳನ್ನು ವಿರೋಧಿಸುತ್ತಲೇ ಸಹಬಾಳ್ವೆಯ ಮಾದರಿಯನ್ನು ಪ್ರತಿಪಾದಿಸುತ್ತದೆ. ಪ್ರಸ್ತುತ ಅಗತ್ಯವಿರುವುದೂ ಇಂತದ್ದೇ. ಕೇವಲ ಬಾಯಿ ಮಾತಿನ, ಪ್ರಕಟಣೆಯ ವಿಚಾರಗಳನ್ನೂ ಪ್ರತಿಭಟಿಸುತ್ತ 'ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು' ಎಂಬ ಘೋಷವನ್ನು ಪುನರುಚ್ಚರಿಸುತ್ತದೆ. ಹಿಂಸಾತ್ಮಕ ನೆಲೆಯನ್ನು ಪ್ರತಿಭಟಿಸುತ್ತಲೇ, ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುತ್ತದೆ. ತಲೆತಲಾಂತರದಿಂದ ವಿರೋಧಿಗಳಂತೆ ಬಂದ ರಾಷ್ಟ್ರಗಳ ಭಾವೈಕ್ಯತೆಯನ್ನು ಜಾಗೃತಗೊಳಿಸುತ್ತದೆ ಕವಿತೆ. ಮುಂದುವರೆದು,

"ಹಿಂದೂಸ್ಥಾನ – ಪಾಕಿಸ್ಥಾನ
ಒಂದಾದರೆ ಏನಾಗುತ್ತೆ?
ಏನೂ ಆಗೊಲ್ಲ,
ಅಶಾಂತಿ, ಆತಂಕ ಕಮ್ಮಿಯಾಗತ್ತೆ!
ಹೇಳು..........ಏನಾಗುತ್ತೆ, ಏನಾಗುತ್ತೆ?
ಏನೂ ಆಗೊಲ್ಲ,
ಒಂದು ಹಳೆಯ ರೋಗ ವಾಸಿಯಾಗುತ್ತೆ!" [೬]

ಪ್ರೀತಿ ಪ್ರೇಮಕ್ಕೆ ದೇಶ, ಭಾಷೆ ಮತ್ತು ಧರ್ಮಗಳ ಗಡಿಗಳಿಲ್ಲ ಎಂಬುದನ್ನು ಕವಿತೆ ಸಾರವತ್ತಾಗಿ ಕಟ್ಟಿಕೊಡುತ್ತದೆ. ವಾಸ್ತವದಲ್ಲಿ ಇದರ ಅಗತ್ಯ ಅನಿವಾರ್ಯವೂ ಹೌದು. ಕವಿತೆಯಲ್ಲಿ ಏನಾಗುತ್ತೆ? ಎಂಬ ಪದ ಕೇವಲ ಪ್ರಶ್ನೆಯಲ್ಲ. ಪ್ರತಿಭಟನಾತ್ಮಕ ನೆಲೆಯಲ್ಲೂ ಇದು ಧ್ವನಿತಗೊಂಡಿದೆ. ಹಳೆಯ ಮೌಢ್ಯಗಳನ್ನು, ದ್ವೇಷ ಅಸೂಯೆಗಳನ್ನು ಮರೆಯಬೇಕಾದ ಅಗತ್ಯ ಇಂದಿದೆ. ಆದ್ದರಿಂದಲೇ ಹಿಂಸಾತ್ಮಕ ನೆಲೆಯ ಕರಾಳತೆಯನ್ನು ನಿಜದ ಅರಿವಿಗೆ ತರುವ ಪ್ರಯತ್ನ ಇಲ್ಲಿದೆ. ಬದುಕಿನ ಅನನ್ಯತೆಯನ್ನು ಸ್ವಾಗತಿಸುವ ಸಾಮಾಜಿಕ ಕಳಕಳಿಯೂ ದಟ್ಟವಾಗಿದೆ.

ಒಟ್ಟಾರೆಯಾಗಿ ಅಸ್ಮಿತೆ ಪ್ರತಿಯೊಂದು ಸಂದರ್ಭದಲ್ಲಿ ಪ್ರತಿಯೊಬ್ಬರಲ್ಲೂ ಜಾಗೃತವಾಗಿರಬೇಕು. ತನ್ನ ತನದ ಅರಿವಿಲ್ಲದವ ಮನುಷ್ಯನಾಗಿರಲಾರ ಎಂಬ ಮಾತು ಅಕ್ಷರ ಸಹ ಸತ್ಯ. ಇಂತಹುದನ್ನು ಮಹಿಳಾ ಕಾವ್ಯ ದಟ್ಟವಾಗಿ ಗರ್ಭೀಕರಿಸಿಕೊಂಡಿವೆ. ಸಾಹಿತ್ಯವೆಂದರೆ 'ಚೌಕಟ್ಟು' ಎಂಬ ಹಳೆಯ ಮಾದರಿಗಳನ್ನು ಮುರಿದು ಹೊಸ ಅನ್ವೇಷಣೆಗೆ ಮುಖಮಾಡಿದ್ದು ಆಧುನಿಕ ಮಹಿಳಾ ಕಾವ್ಯವೆಂದರೆ ತಪ್ಪಿಲ್ಲ.

ಮನೆಯ ಹೊರಗೆ ಕಾಲಿಡಲು ಅಂಜುತ್ತಿದ್ದ ಹೆಣ್ಣು ಇಂದು ಅಂತರಿಕ್ಷದಲ್ಲಿ ಹಾರಾಡುವಂತೆ ಮಾಡಿದ್ದು ಶಿಕ್ಷಣ. ಇದು ಗತಕಾಲದ ಹೆಣ್ಣಿನ ಮಾದರಿಯನ್ನು ನವೀನ ಆಲೋಚನೆಗೆ ಒಳಗು ಮಾಡುವಂತೆ ಪ್ರೇರೇಪಿಸಿತು. ಆ ಮೂಲಕ ಹೆಣ್ಣು ತನ್ನ ತನದ ಹುಡುಕಾಟದ ದಾಖಲಾತಿ ಮಾಡುವಂತಾಯಿತು. ಗಂಡಿನ ಪ್ರತಿರೋಧಕ್ಕಿಂತ ಹೆಚ್ಚಾಗಿ ಮಹಿಳಾ ಕಾವ್ಯ ಮಾಡಿದ್ದು ಸ್ತ್ರೀ ವಿಶಿಷ್ಟಾತ್ಮಕತೆಯನ್ನು. ಅಂದರೆ ಹಳೆಯ ಮೌಲ್ಯಗಳಲ್ಲೇ ಸಿಲುಕಿದ ಹೆಣ್ಣಿನ ಮನಸ್ಥಿತಿಯನ್ನು ಹೊಸ ಆಲೋಚನೆಯತ್ತ ಸೆಳೆಯುವಂತೆ ಮಾಡಿದ್ದು. ಆ ಮೂಲಕ ತನ್ನ ತನದ ದಾಖಲನ್ನು, ಮೌಲ್ಯಯುತವಾಗಿಸುವಂತೆ ಮಾಡಿದ್ದು ವಿಶಿಷ್ಟತೆಯೇ ಸರಿ.

ಗಂಡು ನಿರ್ಮಿತ ಹಳೆಯ ಮಾದರಿಯನ್ನು ಒಮ್ಮೆಗೇ ಪ್ರತಿಭಟಿಸದೆ ಹೊಸ ಆಲೋಚನೆಗೆ ಒಳಗು ಮಾಡುವಂತೆ ಮಾಡಿದ್ದು ಆಧುನಿಕ ಮಹಿಳಾ ಕಾವ್ಯ. ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಜೀವ ಮೂಲ ಆಲೋಚನೆಗಳನ್ನು ಹೊಸ ದೃಷ್ಟಿಯಲ್ಲಿ

ರಚಿತವಾದ ಗಂಡಿನ ಕಲ್ಪಿತ ಹೆಣ್ಣು ಪಾತ್ರಗಳನ್ನು ಪುನರ್ ವ್ಯಾಖ್ಯಾನಿಸಿ ಆ ಮೂಲಕ ಹೊಸ ನೋಟದಲ್ಲಿ ನೋಡುವಂತೆ ಮಹಿಳಾ ಕಾವ್ಯ ಮಾಡಿದೆ. ಒಟ್ಟಾರೆಯಾಗಿ ಆಧುನಿಕ ಮಹಿಳಾ ಕಾವ್ಯದಲ್ಲಿ ಕಂಡುಬರುವ ಪ್ರಮುಖ ಅಂಶವೆಂದರೆ ತನ್ನ ತನದ ದಾಖಲು ಮತ್ತು ಆ ಮೂಲಕ ಹೆಣ್ಣಿನ ಪ್ರತಿನಿಧೀಕರಣದ ಮಹತ್ವವನ್ನು ಸಮಾಜಕ್ಕೆ ತೋರಿಸುವುದು. ಮೌಲ್ಯಗಳಲ್ಲೇ ಕೊಳೆತ ಹೆಣ್ಣಿನ ಹೊಸ ಸೃಷ್ಟಿಯನ್ನು ಕಾವ್ಯದ ಮೂಲಕ ಮರು ದಾಖಲನ್ನು ಹೊಸತನದೊಂದಿಗೆ ಮೂಡುವಂತೆ ಮಾಡಿದ್ದು ಆಧುನಿಕ ಕನ್ನಡ ಮಹಿಳಾ ಕಾವ್ಯ ಎನ್ನಬಹುದು.

೭.೪ ಪ್ರತಿಮಾ ಮಾದರಿ : ನಿರೀಕ್ಷೆ , ಹತಾಷೆಗಳಲ್ಲಿ

ಸಾಹಿತ್ಯದಲ್ಲಿ ಹೆಣ್ಣು ಪ್ರತಿಮಾ ಮಾದರಿಯಲ್ಲೇ ಗುರ್ತಿಸಿಕೊಂಡವಳು. ಏಕೆಂದರೆ ಪುರಾಣ ಮತ್ತು ಚರಿತ್ರೆಗಳು ಹೆಣ್ಣನ್ನು ಸಾರ್ವಕಾಲಿಕ ಸತ್ಯವೆಂಬಂತೆ ಬಿಂಬಿಸಿದ್ದವು. ಆ ಮೂಲಕ ಮುಂದಿನ ಪೀಳಿಗೆಯವರು ಅನುಸರಿಸಲೆಂಬಂತೆ ಅವಳ ಬಗೆಗಿನ ತಿಳಿವನ್ನು ಚೌಕಟ್ಟಿನೊಳಗೇ ಕಟ್ಟಿಕೊಟ್ಟಿದ್ದವೆಂಬ ಮಾತು ಇತಿಹಾಸ. ಕಳೆದ ನಲವತ್ತು ವರ್ಷಗಳಲ್ಲಿ ಕನ್ನಡ ಸಾಹಿತ್ಯದಲ್ಲಿ ಹಲವಾರು ಬದಲಾವಣೆಗಳಾಗಿವೆ. ಅಂದರೆ ಬರವಣಿಗೆಯ ಮಾದರಿಗಳು ಮತ್ತು ಬರಹಗಾರರ ಆಲೋಚನೆಗಳೂ ಬದಲಾವಣೆ ಕಂಡಿರುವುದು ಸ್ವಾಗತಾರ್ಹ. ಹಳೆಯ ಕಂದಾಚಾರಗಳಿಗೆ ಜೋತು ಬೀಳುವಂತಹ ಕಾಲ ಸರಿದಿದೆ. ಆದರೂ ಆಧುನಿಕತೆಗೆ ಮಾರು ಹೋದ ಜನ ಮೌಢ್ಯದಲ್ಲೇ ಮುಳುಗುವ ಸ್ಥಿತಿ ದಟ್ಟವಾದಂತಿದೆ. ಈ ಎಲ್ಲ ಅಂಶಗಳಿಗೆ ಚಿಕಿತ್ಸಾ ರೂಪದಲ್ಲಿ ಉತ್ತರ ಕಂಡುಕೊಳ್ಳುವಂತೆ ಮಾಡಿದ್ದು ಆಧುನಿಕ ಮಹಿಳಾ ಕಾವ್ಯ. ತಮ್ಮ ಬರವಣಿಗೆಯಲ್ಲಿ ಪರಂಪರೆಯ ಮೌಢ್ಯತೆಯನ್ನು ಪರ್ಯಾಯ ಮಾರ್ಗವಾಗಿ ಸೃಜನಶೀಲತೆ ತಂದುಕೊಟ್ಟದ್ದು ಸಹ ಆಧುನಿಕ ಮಹಿಳಾಕಾವ್ಯ.

'ಪ್ರತಿಮೆ' ಎಂಬ ಪದ ಕನ್ನಡ ವಿಮರ್ಶಾಲೋಕದಲ್ಲಿ ಬಹು ವ್ಯಾಪಕ ಅರ್ಥ ಪಡೆದುಕೊಂಡಿದೆ. ಖ್ಯಾತ ವಿಮರ್ಶಕರಾದ ಒ.ಎಲ್.ನಾಗಭೂಷಣಸ್ವಾಮಿ ತಮ್ಮ ವಿಮರ್ಶೆಯ ಪರಿಭಾಷೆಯಲ್ಲಿ 'ಪ್ರತಿಮೆ'ಯನ್ನು ಕುರಿತು ಈ ರೀತಿ ವ್ಯಾಖ್ಯಾನಿಸುತ್ತಾರೆ.

"ಇಂದ್ರಿಯಗಳ ಗ್ರಹಿಕೆಯನ್ನು ಅಭಿವ್ಯಕ್ತಿಸುವ ಯಾವುದೇ ಪದ ಅಥವಾ ಪದಗಳ ಸಮೂಹ ಪ್ರತಿಮೆ" [೯೭]

"ಕಣ್ಣಿಗೆ ಕಟ್ಟುವಂತಿರುವ ಶಬ್ದ ಚಿತ್ರಗಳು, ವಸ್ತು, ಕ್ರಿಯೆ, ಮತ್ತು ಅಮೂರ್ತ ಆಲೋಚನೆ, ಭಾವನೆಗಳನ್ನು ವಿವರಣಾತ್ಮಕವಾಗಿ ಮೂರ್ತವಾಗಿ ಭಾಷೆಯಲ್ಲಿ ವಿವರಿಸುವುದು ಪ್ರತಿಮೆ"[೯೮]

"ಅನೇಕ ಪ್ರತಿಮೆಗಳ ಸಯೋಜನೆಯಿಂದ ರೂಪ ತಳೆಯುವ ಕವನ ತಾನೇ ಒಂದು ಪ್ರತಿಮೆಯಾಗುತ್ತದೆ ಎಂದಿದ್ದಾರೆ".[೯೯]

ಇವರ ಈ ಎಲ್ಲ ವ್ಯಾಖ್ಯಾನಗಳನ್ನು ಗಮನಿಸಿದರೆ ಕವಿತೆಗಳ ದಟ್ಟತೆ ಕೇವಲ ಪದ ಪುಂಜಗಳಲ್ಲಿ ಮಾತ್ರವಲ್ಲದೆ ಅರ್ಥ ವ್ಯಾಪಕತೆಯೂ ವಿಶಿಷ್ಟತೆಯನ್ನು ಪಡೆದಿದೆ ಎನ್ನಬಹುದು. ಒಟ್ಟಾರೆ ಕಾವ್ಯದ ವ್ಯಾಖ್ಯಾನ ಮಾತ್ರವಲ್ಲದೆ ಮಹಿಳಾ ಕಾವ್ಯದ ಅಂತರ್ ಸೃಜಿತ್ವ ಎಷ್ಟು

ಸಾರವತ್ತಾದುದು ಎಂಬುದನ್ನು ನಾವು ಆಧುನಿಕ ಮಹಿಳಾ ಕಾವ್ಯವನ್ನು ವ್ಯಾಖ್ಯಾನಿಸುವ ಸಂದರ್ಭಗಳಲ್ಲಿ ಸಮೀಕರಿಸಬಹುದಾಗಿದೆ.

೨೦ನೇ ಶತಮಾನ ಜಾಗತಿಕವಾಗಿ ಬದಲಾವಣೆಗೊಳಪಟ್ಟ ಕಾಲಘಟ್ಟ. ಪ್ರಮುಖವಾಗಿ ಸಾಮಾಜಿಕ ಮೌಲ್ಯಗಳೆಂಬಂತೆ ಪರಿಗಣಿಸಲ್ಪಟ್ಟ ಅಂಶಗಳು ವೈಚಾರಿಕ ಚರ್ಚೆಗೆ ಕಾರಣವಾದುದು ವಿಶಿಷ್ಟವಾದ ಸಂಗತಿಯಾಗಿದೆ. ಅಂದು ಹೆಚ್ಚು ಪ್ರಚಲಿತದಲ್ಲಿದ್ದ ಭಾವ ಪ್ರಧಾನ ಅಂಶಗಳು ಮನರಂಜನಾತ್ಮಕ ಕಾರ್ಯಕ್ರಮಗಳು ಹೊಸ ಆಲೋಚನೆಯ ಹಾದಿ ಹಿಡಿದವು. ಸೃಜನಾತ್ಮಕ ಬೆಳವಣಿಗೆಗೆ ಕಾರಣವಾದವು. ಹೆಣ್ಣಿನ ಭಾವನಾತ್ಮಕ ಮೌಲ್ಯಗಳೆಂಬಂತೆ ಬಿಂಬಿತವಾಗಿದ್ದ ಪ್ರತಿಮಾ ಮಾದರಿಗಳು ಹೊಸ ಹಾದಿ ಬಯಸಿದವು. ಭಾವ ಪ್ರಪಂಚದ ಮಾದರಿಗಳು ಈ ಕಾಲ ಘಟ್ಟದಲ್ಲಿ ಕ್ಲೀಷೆಯಂತೆ ಬಿಂಬಿತವಾಗಿದ್ದು ಮತ್ತು ಆ ಮೂಲಕ ಹೊಸ ಆಲೋಚನೆ ಬೆಸೆಯುವಲ್ಲಿ ೨೦ನೇ ಶತಮಾನದ ಉತ್ತರಾರ್ಧ ಕಾರಣ.

೧೯೭೦ರ ದಶಕ ಮಹಿಳಾ ಸಾಹಿತ್ಯ ಲೋಕದಲ್ಲಿ ಹೊಸ ಅಲೆಯನ್ನು ಸೃಷ್ಟಿಸಿತು. ಆ ಮೂಲಕ ಕಾವ್ಯದ ರಚನೆಯ ಕಡೆಗೆ ಮಹಿಳೆಯರನ್ನು ಮುಖ ಮಾಡುವಂತೆ ಮಾಡಿದ್ದು ಈ ದಶಕವೆ. ಆಲೋಚನಾ ಭಿನ್ನತೆ ಹೊಸತನವನ್ನು ಪಡೆದುಕೊಂಡು, ಬರವಣಿಗೆಯು ಸ್ವತಂತ್ರತೆಯ ಕಡೆಗೆ ಮುಖ ಮಾಡಿತು. ನಂತರ ಬಂದ ಕವಯಿತ್ರಿಯರು ಪ್ರತಿಯೊಂದನ್ನೂ ಸೂಕ್ಷ್ಮ ದೃಷ್ಟಿಯಿಂದ ಅವಲೋಕಿಸುತ್ತಾ ಪ್ರಸ್ತುತ ವಿಚಾರಗಳತ್ತ ಗಮನ ಹರಿಸುವಂತೆ ಬರೆದರು. ಗಂಡು ಹೆಣ್ಣಿನ ನಡುವಿನ ತಾರತಮ್ಯ ವಿಚಾರಗಳು ಹೊಸ ಅಲೆಯೊಂದನ್ನು ಸೃಷ್ಟಿಸಿದವು. ಸಾಮಾನ್ಯ ವಿಚಾರಗಳೂ ಸಹ ಚರ್ಚೆಗೊಳಪಟ್ಟವು.

ಉದಾ:- ಮದುವೆ, ಉದ್ಯೋಗ, ಜೀವನ ನಿರ್ವಹಣೆ, ಗಂಡು ಹೆಣ್ಣಿನ ನಡುವಿನ ಸಂಬಂಧಗಳಲ್ಲಿನ ಬಿರುಕು ಇತ್ಯಾದಿಗಳು ಮುಕ್ತವಾಗಿ ಚರ್ಚಿಸುವ ಹಂತಕ್ಕೆ ಬಂದದ್ದು ಸ್ವಾಗತಾರ್ಹ. ಆಧುನಿಕ ಮಹಿಳಾ ಕಾವ್ಯದಲ್ಲಿ ಹಲವು ಅಂಶಗಳು ಬಹು ಚರ್ಚಿತಗೊಂಡಿವೆ. ಪ್ರಮುಖವಾಗಿ ಪ್ರತಿಯೊಬ್ಬ ಕವಯಿತ್ರಿಯರು ಕಂಡುಕೊಳ್ಳುವ, ಅದನ್ನು ಬರವಣಿಗೆಯಲ್ಲಿ ಸೃಜಿಸುವ ಅಂಶವೆಂದರೆ ಪ್ರತಿಮೆಯ ಸಂಕೇತ. ಈ ಪ್ರತಿಮಾ ಮಾದರಿಗಳು ಒಬ್ಬೊಬ್ಬ ಕವಯಿತ್ರಿಯರ ಕಲ್ಪನೆಯಲ್ಲೂ ವಿಶಿಷ್ಟತೆ ಪಡೆದುಕೊಂಡು ರಚಿತವಾಗಿವೆ. ಅವು ಪ್ರಶ್ನಾರ್ಥಕ ನೆಲೆಯ ರೂಪದಲ್ಲಿ, ಪ್ರಕೃತಿ ಸಂಬಂಧದ ನೆಲೆ, ಆತ್ಮ ಸಂಗಾತದ ನೆಲೆ, ಸಾಂಸಾರಿಕ ನೆಲೆ, ಭಾವನಾತ್ಮಕ ನೆಲೆ, ಎಲ್ಲವೂ ಅಂತ್ಯಗೊಳ್ಳುವುದು ಗಂಡು ಹೆಣ್ಣಿನ ಮೂಲಕವೆ. ಆದ್ದರಿಂದ ಈ ಎಲ್ಲ ಅಂಶಗಳನ್ನು ಒಟ್ಟಾರೆ ದೃಷ್ಟಿಕೋನದಲ್ಲಿ ತೆರೆದಿಡುವ ಪ್ರಯತ್ನವಾಗಿದೆ. ಪುರಾಣ ಪ್ರಧಾನ ಪಾತ್ರಗಳೆಲ್ಲವು ಮಹಿಳಾ ಕಾವ್ಯದಲ್ಲಿ ಪುನರ್ ಸೃಜಿಸಿವೆ. ಅನುಭವ ಮತ್ತು ಅಂತರಂಗದ ಕುಲುಮೆಯಲ್ಲಿ ಉಜ್ಜಲ್ಪಟ್ಟು ಪ್ರಜ್ವಲಿಸುವ ಪ್ರತಿ ಕಾವ್ಯ ಒಂದೊಂದು ಪ್ರತಿಮೆಗಳ ಸಂಕೇತವೆನ್ನಬಹುದು. ಈ ಪ್ರತಿಮೆಗಳ ಮುಖ್ಯ ಆಶಯ ತನ್ನ ಮೂಲಕ

ಸಮಾಜವನ್ನು ವಿಭಿನ್ನ ನೋಟದಲ್ಲಿ ಕಟ್ಟಿಕೊಳ್ಳುವ ತವಕ. ಆ ಮೂಲಕ ಪ್ರಕೃತಿ ಸಂಬಂಧದ ನಡುವಿನ ಕಲ್ಪಿತ ಚಿತ್ರಗಳನ್ನು ವಾಸ್ತವತೆಯೊಂದಿಗೆ ಕ್ರೂಢೀಕರಿಸುವುದು. ಆ ಮೂಲಕ ಲೈಂಗಿಕತೆಯ ಪ್ರತೀಕಗಳಾಗಿ ಪ್ರಕೃತಿ ಸಂಬಂಧಗಳನ್ನು ಬೆಸೆಯುವುದಾಗಿದೆ. ಇವೆಲ್ಲಕ್ಕಿಂತ ಹೆಚ್ಚಿನದಾಗಿ ಪ್ರಕೃತಿಯಾಚೆಗಿನ ಸಂಬಂಧವನ್ನು ಗಟ್ಟಿಗೊಳಿಸುತ್ತಲೇ ಗಂಡು ಹೆಣ್ಣಿನ ಸಂಬಂಧಾಂತರವನ್ನು ಹೊಸ ನೆಲೆಯಲ್ಲಿ ಕಂಡುಕೊಳ್ಳುವ ದಿಟ್ಟತೆ ಮತ್ತು ವಿಶಿಷ್ಠತೆ ಆಧುನಿಕ ಮಹಿಳಾ ಕಾವ್ಯದ್ದು. ಈ ಎಲ್ಲ ಕಾರಣಗಳಿಂದ ಆಧುನಿಕ ಕನ್ನಡ ಮಹಿಳಾ ಕಾವ್ಯದಲ್ಲಿ ಬಿಂಬಿತವಾದ ಪ್ರತಿಮೆಗಳ ಬಂಧನವನ್ನು ಪ್ರತಿಯೊಬ್ಬ ಕವಯಿತ್ರಿಯ ಕವಿತೆಗಳ ಹಿನ್ನಲೆಯಲ್ಲಿ ನೋಡುವ ಪ್ರಯತ್ನವೆನ್ನಬಹುದು.

ಹೆಣ್ಣಿನ ತ್ಯಾಗ, ಬದುಕಿನ ಗುಣಗಳೇ ಸಮಾಜಕ್ಕೆ ಆದರ್ಶಗಳೆಂದು ನಂಬಿಸಿಕೊಂಡು ಬಂದ ಕಾಲ ಈಗ ದೂರವಾಗಿದೆ. ತಾಯಿ ತನ್ನ ಮಗಳಿಗೆ ಮೂಢ ನಂಬಿಕೆಗಳನ್ನು ಬಳುವಳಿಯಾಗಿ ನೀಡದೆ, ಸಂಪ್ರದಾಯದ ಹುಸಿ ನಂಬಿಕೆಯಲ್ಲಿ ಸಿಲುಕದೆ ಗಟ್ಟಿತನದ ದಿಟ್ಟ ಧೈರ್ಯವಂತೆಯನ್ನಾಗಿ ರೂಪಿಸುವ ಹಲವು ಕವಿತೆಗಳು ಒಂದೊಂದು ಪ್ರತಿಮೆಯೆ.

"ಋತು ಚಕ್ರದೊಳಹೊಗುವ, ಹೊರಬರುವ
ಜೈವಿಕ ಪರಿವರ್ತನೆಗೆ ಪಕ್ಕಾಗಿ
ಗಟ್ಟಿಗೊಳಬೇಕಾದ ಕಾಲಮಾನ.
ಬದುಕಿನಲಿ ಪ್ರೌಢ ಹೆಜ್ಜೆಯೂರಲು
ಬಯಸಿ ತಹತಹಿಸಿ ನಿಂತಿರುವ
ನಿನ್ನ ಕಾಲುಗಳಿಗೆ ಬರಲಿ ದಿಟ್ಟಶಕ್ತಿ" ೧೦೦

ಈ ಸಾಲುಗಳಲ್ಲಿ ಹೆಣ್ಣಿನ ಅವಸ್ಥಾಂತರದ ಅನಾವರಣ ಸೂಕ್ಷ್ಮಗೊಂಡಿದೆ. ಜೈವಿಕತೆಯಿಂದ ವಿಶಿಷ್ಟತೆ ಪಡೆದ ಹೆಣ್ಣು ಗಂಡಿನ ದೃಷ್ಟಿಕೋನದಲ್ಲಿ ಕೀಳಾಗುತ್ತಲೇ ಬಂದಿದ್ದಾಳೆ. ಆದರೆ ಹೆಣ್ಣಾದವಳು ಮತ್ತೊಬ್ಬ ಹೆಣ್ಣಿಗೆ ಧೈರ್ಯ ತುಂಬುವ ರೀತಿ ಸ್ವಂತಿಕೆಯ ಅರಿವನ್ನು ಜಾಗೃತವಾಗುವಂತೆ ಮಾಡುತ್ತದೆ. ಕೋಮಲ, ಮೃದು ಹೃದಯದ ಸಂಕೇತವೆಂದು ಹೆಣ್ಣನ್ನು ಬಿಂಬಿಸಿದ ಪುರುಷ ವರ್ಗದ ಕಣ್ಣಾವಲು ಅವಳನ್ನು ತನ್ನ ಬಯಕೆಯಂತೆ ರೂಪಿಸಲು ಸದಾ ಹುನ್ನಾರ ನಡೆಸುತ್ತಲೇ ಇರುತ್ತದೆ. ಆದ್ದರಿಂದ ಬದುಕಿನಲ್ಲಿ ಹೊಸ ಬೆಳಕನ್ನು ಕಾಣಲು ಸದಾ ಜಾಗರೂಕಳಾಗಬೇಕೆಂಬ ಸಂದೇಶ ಇಲ್ಲಿದೆ. ಋತುಚಕ್ರ ಹೆಣ್ಣಿನ ಹೆಣ್ತನದ ಸಂಕೇತವೇ ಹೊರತು, ಸೂತಕದ ಛಾಯೆಯಲ್ಲ, ಇದರಿಂದ ಗಂಡಿನ ಜನನಕ್ಕೆ ಕಾರಣವಾದ ಹೆಣ್ಣಿನ ಗರ್ಭ ವಿಶಿಷ್ಟವಾದುದೇ ಹೊರತು ಮೈಲಿಗೆಯಲ್ಲ ಎಂಬ ಮಾತನ್ನು ಸಾರಿ ಹೇಳುತ್ತ ಹೆಣ್ಣಿನ ಜನ್ಮದ ಶ್ರೇಷ್ಠತೆ ಮತ್ತು ವಿಶಿಷ್ಟತೆಯ ಬಗ್ಗೆ ಧ್ವನಿಸುತ್ತದೆ.

ಕವಿತೆ ಮುಂದುವರೆದು, ಹೆಣ್ಣು ಎಚ್ಚರಗೊಂಡು ಅವಳಲ್ಲಿ ಹೆಣ್ತನದ ಕೆಚ್ಚು ಜಾಗೃತಗೊಂಡಾಗ ಎಂತಹ ಬದಲಾವಣೆಗಳಾಗಬೇಕು ಎಂಬುದನ್ನು ತಿಳಿಸುತ್ತದೆ.

"ಹೋರಾಟ ನಿನ್ನದಾಗಿರಲಿ
ಶಾಂತಿ ಹಿಂಸೆಯ ನೇರಮಾರ್ಗ
ಹೊಸ ಬೆಳಕು ಮೂಡಲಿ
ಈ ದೇಶ ತನ್ನ ಪ್ರಾಣಕೋಶ
ಎನ್ನುವ ಪ್ರತಿಯೊಂದು ಕೂಸು ಪಡೆಯಲಿ
ಹೊಸ ಬದುಕು, ಹೊಸ ಆತ್ಮವಿಶ್ವಾಸ." [೧೦೧]

ಶತಮಾನಗಳಿಂದ ಧ್ವನಿ ಕಳೆದುಕೊಂಡ ಹೆಣ್ಣಿಗೆ ಒಮ್ಮೆಲೇ ಮಾತು ಬಂದಾಗ ಅವಳಲ್ಲಿ ಉಂಟಾಗುವ ಸಂಚಲನದ ಹರಿವಿನ ವೇಗವನ್ನು ಕವಿತೆ ನೆನಪಿಸುತ್ತದೆ. ಹೆಣ್ಣಾದವಳು ಇಲ್ಲಿ ಪ್ರತಿಮೆಗಳಲ್ಲಿ ಅಡಕವಾಗದೆ, ಸಮಾಜದ ವೈರುಧ್ಯಗಳಾದ ಬಡತನ, ಜಾತಿ, ಅಸಮಾನತೆಯ ಬೇರನ್ನು ಬುಡ ಸಮೇತ ಕೀಳಬೇಕೆಂಬ ಹಂಬಲವಿದೆ. ಅಂದರೆ ತನ್ನ ಉದ್ಧಾರದ ಜೊತೆಗೆ ಸಮಾಜವನ್ನೂ ತನ್ನೊಂದಿಗಿನ ಬೆಳವಣಿಗೆಯಂತೆ ಭಾವಿಸುವುದು. ಇದು ಸಾಮಾಜಿಕ ಬದಲಾವಣೆಯ ಬಗೆಗಿನ ಕಾಳಜಿಗೆ ಹಿಡಿದ ಕನ್ನಡಿ. ಹೊಸ ಬದುಕು ಮತ್ತು ಹೊಸ ಆತ್ಮವಿಶ್ವಾಸಗಳು ಪ್ರತಿಯೊಬ್ಬರ ಜೀವನದ ಆಶಯವಾಗಬೇಕು. ಆಗ ಮಾತ್ರ ಆರೋಗ್ಯಕರ ಸಮಾಜ ಜೀವಂತವಾಗಿರುತ್ತದೆ ಎಂಬ ಅಂಶವನ್ನೂ ಸಾರಿ ಹೇಳುತ್ತದೆ. ಗಂಡಿನ ಆಲೋಚನೆಯ ಮಾದರಿಗಿಂತ ಭಿನ್ನವಾಗಿ ಮತ್ತು ನೇರವಾದ ಮಾತುಗಳಲ್ಲಿ ಪ್ರತಿಯೊಬ್ಬರೂ ಜಾಗೃತರಾಗಬೇಕೆಂಬುದನ್ನು ಕವಿತೆ ನೆನಪಿಸುತ್ತದೆ.

ಬರವಣಿಗೆಯೂ ಒಂದು ಮಾದರಿಯೆ. ಪ್ರಕೃತಿಯೊಂದಿಗೆ ಮನುಷ್ಯ ಮಾತನಾಡಲು ಪ್ರಾರಂಭಿಸಿದರೆ ಅವನಿಗರಿವಿಲ್ಲದಂತೆಯೇ ಪದ ಪುಂಜಗಳು ಪುಂಕಾನುಪುಂಖವಾಗಿ ಜ್ವಲಿಸುತ್ತವೆಂಬುದಕ್ಕೆ ಆಧುನಿಕ ಮಹಿಳಾ ಕಾವ್ಯವೇ ಉತ್ತಮ ಉದಾಹರಣೆ ಎನ್ನಬಹುದು. ಪಂಚಭೂತಗಳನ್ನು ಸ್ವಲ್ಪ ಕಾಲ ನಿಲ್ಲಿಸಿ ತನ್ನ ಸಂವೇದನೆಗೆ ಒಳಗು ಮಾಡಿಕೊಳ್ಳುವಂತಹ ಸೂಕ್ಷ್ಮತೆ ಕವಯಿತ್ರಿಯರದು. ನವೋದಯ ಕವಿಗಳ ಪ್ರಕೃತಿ ಪ್ರೇಮ, ತನ್ಮಯತೆ ಆಧುನಿಕ ಮಹಿಳಾ ಕಾವ್ಯದಲ್ಲೂ ಕಂಡಿದ್ದು ವಿಶೇಷ. ಇದರ ಜೊತೆಗೆ ತನ್ಮಯತೆಯಲ್ಲೇ ತಲ್ಲೀನವಾಗದೆ, ವಾಸ್ತವತೆಯ ಅರಿವು ಸದಾ ಜಾಗೃತವಾಗಿರುವ ಅಂಶವನ್ನು ಹಲವು ಕವಿತೆಗಳು ಒಳಗೊಂಡಿವೆ.

"ಗಾಳಿ ಗಾಳಿಯ ಗುಂಟ
ತೇಲಿ ಹೋಗುತ್ತಿದ್ದ
ಹಾಡಿ ನೆಳೆಯೆಳೆಯನ್ನು ಹಿಡಿದೆ
'ಯಾಕೆ ಗುನುಗುನಿಸುತ್ತೀ?'
ಇಳಿಬಿಸಿಲ ಧೂಳ ಬರ್ಚಿಯ ಚುಚ್ಚಿ
ಉತ್ತರವು ಹಾಡಿತು–

ನನ್ನನ್ನು
ನಿನ್ನ ಶಬ್ದಗಳ ಅರ್ಥಗಳ
ಉಸಿರುಗಟ್ಟಿಸುವ ಕತ್ತಲೆಯ ಕೋಣೆಗಳಲ್ಲಿ
ಹೀಗೆ ಬಿಗಿದಿಟ್ಟು ಯಾಕೆ ಜಡಿದೆ?
ಈಗ ಗೊತ್ತೇ
ರೋದನದ ಕಲ್ಲು ಬೆಟ್ಟಗಳು ಧ್ವನಿಸುವ ಹಾಗೆ
ನಾನೇಕೆ ಮಿಡಿದೆ?" [೧೦೨]

ಸಾಹಿತ್ಯದ ಲಯಕ್ಕೆ ಪ್ರಕೃತಿ ಸಿಲುಕಿದಾಗ, ಅದನ್ನು ಚಿತ್ರಿಸುವ ಕವಿ ಮನೋವ್ಯಾಪಾರವನ್ನು ಕಟ್ಟಿಕೊಡುತ್ತದೆ ಕವಿತೆ. ಬರಹಗಳ ರೂಪದಲ್ಲಿ ಅಥವಾ ವ್ಯಾಖ್ಯಾನಗಳ ರೂಪದಲ್ಲಿ ಮಾತ್ರ ಸಿಲುಕದೆ ಉದಾತ್ತತೆಯ ಸಂಕೇತಗಳಲ್ಲಿ ಪ್ರಕೃತಿ ಮೈ ತಳೆಯುತ್ತದೆ. ಅಂತೆಯೇ ಹೆಣ್ಣಿನ ಮನಸ್ಸಿನ ಭಾವನೆಗಳು ಪ್ರಕೃತಿಯೊಂದಿಗೆ ಹೇಗೆ ಸಂಬಂಧ ಹೊಂದಿವೆ ಎಂಬ ಸೂಕ್ಷ್ಮತೆಯೂ ಇಲ್ಲಿದೆ. ಹೆಣ್ಣು ಕಲ್ಲನ್ನೂ ತನ್ನ ಭಾವನೆಗಳಿಂದ ಕರಗಿಸುತ್ತಾ, ಮೆದುವಾಗಿಸುತ್ತಾಳೆ ಎಂಬುದಕ್ಕೆ ಈ ಕವಿತೆ ಉತ್ತಮ ಉದಾಹರಣೆ. ಕವಿತೆ ಮುಂದುವರೆದು ಭಾವನೆಗಳೊಂದಿಗೆ ಬದುಕಿನ ಅನಾವರಣ ಮಾಡುತ್ತದೆ.

"ಇದು ಬದುಕು
ಇರಬಹುದೆ?
ಎರಡು ಭಾಷೆಗಳಲ್ಲಿ ಅಲ್ಪ ಅಂತರದಲ್ಲಿ
ಅರ್ಥಗಳ ದಿಕ್ಕುಗಳು ಹೀಗೆ ಎದುರು
ಬದುರಾಗುವುದು
ವಿಮುಖಗೊಳ್ಳವುದು
ಇರಬಹುದು ಬದುಕು" [೧೦೩]

ಹತಾಷೆ ಮತ್ತು ನಿರೀಕ್ಷೆಗಳಲ್ಲಿ ಕವಿತೆ ಅಂತ್ಯಗೊಳ್ಳುತ್ತದೆ. ಆದರೂ ಗೊಂದಲಕ್ಕೆ ಅವಕಾಶವಿಲ್ಲ ಬದುಕಿನ ಬಗೆಗಿನ ಬಯಕೆಗಳು ಉತ್ತುಂಗದಲ್ಲಿದ್ದಾಗ ಆಯ್ಕೆಯ ಅವಕಾಶ ಮರೆಯಾಗುವ ಸಂದರ್ಭವನ್ನು ಸಾರವತ್ತಾಗಿ ಚಿತ್ರಿಸುತ್ತದೆ. ಬದುಕು ಒಂದೇ ಆದರೂ ಅದನ್ನು ರೂಪಿಸಿಕೊಳ್ಳುವ ಕ್ರಮ ಹಲವು. ಅಂತೆಯೆ ಗಂಡಿನ ನಿರೀಕ್ಷೆಗಳನ್ನು ಹೆಣ್ಣಿನ ಹತಾಷೆಗಳಲ್ಲಿ ಬದುಕು ಒಂದು ಪ್ರತಿಮೆಯ ಸಂಕೇತವಾಗುವ ಕ್ರಮವನ್ನು ಮುಖಾಮುಖಿಯಾಗಿಸುತ್ತದೆ. ಪ್ರಕೃತಿಯೊಂದಿಗೆ ಸಮೀಕರಿಸಿ ಕವಯಿತ್ರಿ ಕವಿತೆ ರಚಿಸಿದ್ದರೂ ಗಂಡಿನ ಹಪಹಪಿಕೆ, ಹೆಣ್ಣಿನ ತಲ್ಲಣ ಪ್ರತಿ ಸಾಲಿನಲ್ಲೂ ಮನೆ ಮಾಡಿದೆ.

ಚರಿತ್ರೆಯಲ್ಲಿ ಸಾಗಿ ಹೋದ ಬುದ್ಧನನ್ನು, ಸಾಂಸಾರಿಕವಾಗಿ ಬಂಧನಕ್ಕೊಳಪಟ್ಟ ಹೆಣ್ಣು ತನ್ನ ಮನೆಗೆ ಆಹ್ವಾನಿಸುವ ಮೂಲಕ ಬುದ್ಧನ ಬೇರೆಯದೇ ಚಿತ್ರಣವನ್ನು

ಕಟ್ಟಿಕೊಡುತ್ತಾಳೆ. ಇಲ್ಲಿ ಬುದ್ಧನ ಆದರ್ಶ, ತ್ಯಾಗ ಗುಣಗಳಿಗಿಂತ ವಾಸ್ತವದ ಸಾಮಾಜಿಕ ಪರಿಸ್ಥಿತಿಯ ನಿಜದ ಅರಿವನ್ನು ಮೂಡಿಸುವ ಉದ್ದೇಶದಿಂದ ಈ ಪ್ರಯತ್ನ ನಡೆಯುತ್ತದೆ. ಬುದ್ಧ ಇಂದು ಬಜಾರಿನಲ್ಲೂ ಸಿಕ್ಕುತ್ತಾನೆ! ಎಂಬ ಮಾತು ಹಲವು ಅರ್ಥಗಳಿಗೆ ಎಡೆಮಾಡಿಕೊಡುತ್ತದೆ.

"ಬಜಾರಿನಲ್ಲಿ ಇದ್ದ ಬುದ್ಧ
ರಾಮ, ಕೃಷ್ಣ, ಶಿವ, ಗಾಂಧಿ
ಅಂಬೇಡ್ಕರ್ ಅವರ ಜೊತೆಗೆ ಕುಳಿತಿದ್ದ
ಆದರವೇ ಜಾಜ್ವಲ್ಯ ಮಾನ ಕಣ್ಣುಗಳು
ಸೆಳೆದವು, ಹೊಳೆದವು ಫಳ ಫಳ
ಪುಳಕಿತಳಾಗಿ ಮನೆಗೆ ಕರೆದೆ, ಬಂದ." [೧೦೪]

ಮಹಾತ್ಮರ ಮಾತುಗಳಿಗಿಂತ ಅವರ ಭಾವಚಿತ್ರಗಳೇ ಇಂದು ಹೆಚ್ಚು ಪ್ರಸಿದ್ದಿಗೆ ಬರುತ್ತಿವೆ ಎಂಬುದಕ್ಕೆ ಕವಿತೆ ಸಾಕ್ಷಿ. ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡು ಆಯೋಜಿಸುವ ಕಾರ್ಯಕ್ರಮಗಳಿಂದು ಬೇರೆಯದೇ ಮಾರ್ಗ ಅನುಸರಿಸುತ್ತಿರುವುದು ವಿಪರ್ಯಾಸದ ಸಂಗತಿ. ಸೂಕ್ಷ್ಮವಾಗಿ ಗಮನಿಸಿದಂತೆಲ್ಲಾ ಇಡೀ ಕವಿತೆಯಲ್ಲಿ ಆದರ್ಶದ ಮಾತುಗಳ ಮೂಲಕ ಸಮಾಜದಲ್ಲಿ ನಡೆಯುವ ಕ್ರೌರ್ಯದ ಅನಾವರಣವಾಗುತ್ತದೆ. ದಿನನಿತ್ಯ ನಮ್ಮ ನಡುವೆಯೇ ನಡೆಯುವ ಸಂಗತಿಗಳೇ ಎಂಬಂತೆ ಭಾಸವಾಗುತ್ತದೆ. ಕಾಲ ಎಷ್ಟೇ ಸರಿದರು ಬುದ್ಧನ ಆದರ್ಶಗಳು ಮಾತ್ರ ಪ್ರಜ್ವಲಿಸುತ್ತಲೇ ಮುಂದಿನ ಪೀಳಿಗೆಗೆ ದಾರಿ ದೀಪವಾಗುತ್ತವೆ ಎಂಬ ಅರ್ಥವನ್ನು ಕೊಡುತ್ತದೆ. ಮುಂದುವರೆದು ಬುದ್ಧನನ್ನು ವೈಭವೀಕರಿಸಿ ಮಾತನಾಡಿದ ಮಾತ್ರಕ್ಕೆ ನಾವು ಬದಲಾಗುವುದಿಲ್ಲ ಎಂಬ ಮಾತು ಪ್ರಸ್ತುತತೆಗೆ ಹಿಡಿದ ಕನ್ನಡಿ.

"ಇನಿತೂ ಬದಲಾಗಿಲ್ಲ............ಅದೇ
ಗುಂಡುಮುಖ, ತುಂಡುಬಾಯಿ
ಮೊಂಡು ಕೈ, ಹರಿದ ಅಂಗವಸ್ತ್ರ
ಅದೇ ಮೌನ, ಸಮಾಧಾನ.
ನಾವೂ ಅಷ್ಟೆ, ಇನಿತೂ ಬದಲಾಗಿಲ್ಲ!
ಅದೇ ವೇಗ, ಅದೇ ಭೋಗ,
ಅದೇ ತನ್ನಾ........ಅದೇ ತಲ್ಲಣ!!" [೧೦೫]

ಬುದ್ಧನ ತಾಳ್ಮೆಗೆ, ಸಹನೆಗೆ ವಿರುದ್ಧತೆಯ ಸಂಕೇತದಂತಿದೆ ಕವಿತೆ. ವೈಚಾರಿಕ ನೆಲೆಯಲ್ಲಿ ಚರ್ಚಿಸುವ ವಿಚಾರಗಳು ಇಂದು 'ಆದರ್ಶ' ಎಂಬ ಕೂಪದಲ್ಲಿ ಕೊಳೆಯುತ್ತಿರುವುದು ನಾಚಿಕೆಗೇಡಿನದು. ಅಂಬೇಡ್ಕರ್, ಬುದ್ಧ, ಬಸವ, ಗಾಂಧಿಯನ್ನು ಇಂದು ಅಭಿಮಾನದಿಂದ ಮೆರೆಸುತ್ತಿದೇವೆಯೇ ಹೊರತು ಅವರ ತತ್ವ, ಸಿದ್ಧಾಂತ, ವಿಚಾರಗಳನ್ನಲ್ಲ. ಇದನ್ನು

ಕವಿತೆ ಯಾವುದೇ ವೈಭವೀಕರಣವಿಲ್ಲದೆ, ಕ್ಲೀಷೆ ಇಲ್ಲದೆ, ವಾಸ್ತವದ ಪರಿಧಿಗೆ ತಂದು ತಣ್ಣನೆಯ ಕಿಡಿ ಹೊತ್ತಿಸುತ್ತಾ ಆ ಮೂಲಕ ಹೊಸ ಆಲೋಚನೆಗೆ ದಾರಿ ಮಾಡಿಕೊಡುತ್ತದೆ. ಹತಾಷೆಯ ಪರಿಧಿಯಾಚೆಗಿನ ನಿರೀಕ್ಷೆಯನ್ನು ಹುಟ್ಟಿಸುವ ಪ್ರತಿಮಾ ಮಾದರಿಗೆ ಉತ್ತಮ ಸರಕಾಗಿದೆ.

ಯುದ್ಧ ಮತ್ತು ಭಯೋತ್ಪಾದನೆ ಇಂದು ಸಾಮಾಜಿಕ ಮತ್ತು ಸಾಂಕ್ರಾಮಿಕ ರೋಗಗಳಂತೆ ಬಿಂಬಿತವಾಗುತ್ತಿವೆ. ಬ್ರಾತೃತ್ವ ಮತ್ತು ವಿಶ್ವ ಪ್ರೇಮಗಳು ಇಂದು ಮಾನವ ಪ್ರೇಮದಲ್ಲಿ ಮರೆಯಾಗುತ್ತಿವೆ. ಯುದ್ಧದ ಭೀಕರತೆ, ಅನಾಹುತಗಳ ಅನಾವರಣ ಇಂದು ವಾಸ್ತವ ಜೀವನದಲ್ಲಿ ತಲ್ಲಣ ಎಬ್ಬಿಸಿ ಮಾನವೀಯ ಸಂಬಂಧಗಳಲ್ಲೂ ಬಿರುಕುಂಟಾಗುತ್ತಿವೆ. ಇದನ್ನು ಸಾಮಾಜಿಕ ಕಳಕಳಿ ಮತ್ತು ಕಾಳಜಿಯೊಂದಿಗೆ ಆಧುನಿಕ ಮಹಿಳಾ ಕಾವ್ಯ ಚಿತ್ರಿಸಿದೆ ಮತ್ತು ಆ ಮೂಲಕ ಸಮಾಜಕ್ಕೆ ಬೇಕಿರುವ ಅಂಶಗಳನ್ನು ಪಡೆಯುವ ಹಂಬಲವೂ ಹಲವು ಕವಿತೆಗಳಲ್ಲಡಗಿವೆ. ಕೋವಿ ಹಿಡಿದ ಕೈಗಳಿಂದ ಬೇಡುವುದು ಪ್ರೀತಿಯನ್ನು ಎಂಬ ಸಂದೇಶ ಹೊತ್ತ ಕವಿತೆಗಳು ಹಲವಿವೆ. ಆದರೆ ಇಂದು ಕೋವಿ ಹಿಡಿಯದ ಕೈಗಳೇ ಭಯಾನಕ ರೀತಿಯಲ್ಲಿ ಮನುಷ್ಯರನ್ನು ಹಿಂಸಿಸುತ್ತಿದ್ದಾರೆ. ಗೋಮುಖ ವ್ಯಾಘ್ರನ ರೀತಿ ವರ್ತಿಸುತ್ತಾ ಮಾನವೀಯ ಮೌಲ್ಯಗಳನ್ನು ಮರೆತು ಅವಮಾನಿಸುವ ಸಂಗತಿ ಹೇಯವಾದುದು. ಕೋವಿ ಹಿಡಿಯದೆಯೂ ಭಯೋತ್ಪಾದಕ ಚಟುವಟಿಕೆಗಳು ಅಮಾಯಕರ ಮೇಲೆ ನಡೆಯುವ ಕ್ರಿಯೆ ಧಾರುಣವಾದುದು.

"ಹೌದು..........
ಕೋವಿ ಹಿಡಿಯದ ಕೈಗಳೇ
ಕಂಬನಿ ಒರೆಸಬೇಕು!
ಸಾವಿನೊಡನೆ ಸೆಣೆಸಾಡಿದರೂ
ಘನತೆಯಿಂದ.................
ಗೆಳೆಯಾ...................
ಕೋವಿ, ಗುಂಡು, ರಕ್ತ, ಚೀತ್ಕಾರ
ಈ ಭುವಿಗೆ ತುಂಬ ಹಳತು.
ಬದುಕ ಬೆಳಗಿಸಲು ಹೊಸ ಅಸ್ತ್ರಗಳೇನಾದರೂ
ನಿನ್ನ ಬಳಿ ಇವೆಯಾ, ಹೇಳು................" ೧೦೬

ಬಡತನ ಮತ್ತು ಹಸಿವು ಮನುಷ್ಯನನ್ನು ಎಂತಹ ದಯನೀಯ ಮತ್ತು ಕ್ರೌರ್ಯ ಸ್ಥಿತಿಗೂ ತಲುಪಿಸುತ್ತದೆ ಎಂಬುದಕ್ಕೆ ಕವಿತೆಯ ಸಾಲುಗಳೇ ಸಾಕ್ಷಿ. 'ಸಂಪತ್ತಿನ ಕ್ರೂಢೀಕರಣದ ಹಂಬಲ ಇರುವವನಿಗೆ ಸಂಬಂಧಗಳ ಅರಿವಾಗದು.' ಎಂಬ ಮಾತು ಅರ್ಥಪೂರ್ಣತೆ ಪಡೆಯುತ್ತದೆ. 'ಗೆಳೆಯಾ' ಎಂಬ ಪದ ವಿಶ್ವಪ್ರೇಮದ ಸಂಕೇತವಾಗಿ ನಿಲ್ಲುತ್ತದೆ. 'ಆಧುನಿಕತೆ'

ಕೇವಲ ಶ್ರೀಮಂತಿಕೆಯ ನೆಲೆಯಲ್ಲಿ ನಿಲ್ಲದೆ ಸಾರ್ವತ್ರೀಕರಣವಾದಾಗ ಮಾತ್ರ ಸಹಬಾಳ್ವೆ ಸಾಧ್ಯ ಎಂಬುದನ್ನು ಒತ್ತಿ ಹೇಳುತ್ತದೆ. ಒಟ್ಟಾರೆಯಾಗಿ ಬದಲಾವಣೆಗಳ ನಿರೀಕ್ಷೆಯ ನೆಲೆಯಂತಿದೆ.

ವ್ಯವಸ್ಥೆಯ ಸುಳಿಗೆ ಸಿಲುಕಿದ ಹೆಣ್ಣು ಮೌನ ಮತ್ತು ಮೂಕಳಾಗಿರುವುದು ಶತಮಾನಗಳಿಂದ ತಿಳಿದುಬಂದ ಸಂಗತಿ. ಆದರೆ ಹುಟ್ಟಿನಿಂದಲೇ ಮೂಕಳಾದ ಹೆಣ್ಣು, ಗಂಡಿನ ಸಂಭೋಗಕ್ಕೆ ಸರುಕಾದ ಸಂದರ್ಭದಲ್ಲಿ ಅವಳಲ್ಲಿನ ಧೈರ್ಯ ಮತ್ತು ಆಕ್ರೋಶ ಪ್ರತಿಭಟನೆಯ ಗುಣ ಭಿನ್ನತೆಯಿಂದ ಕೂಡುತ್ತದೆ.

"ಮೂಕಿಯನ್ನು ಮದುವೆಯಾದ
ಆಹಾ ಎಂಥ ವೈಭೋಗ!
ಬೆಳಗು ಬೈಗು ಸಂಜೆ ರಾತ್ರಿ
ನಿಂತು ಕುಳಿತು ಮತ್ತೆ ಮಲಗಿ
ಎಣೆಯಿಲ್ಲದ ಸಂಭೋಗ!
ನೋವಿನೊಂದು ನರಳಿಗೆ
ಕಣ್ಣನೋಟದಲ್ಲಿ ಬಂಧಿ
ಬತ್ತದಂಥ ಬವಳಿಕೆ
ಉದ್ಗಾರಗಳನೂ ಮರೆತು
ತೆರೆದು ಬಿದ್ದು ಕೊಂಡಳು" [೧೦೭]

ಶತಮಾನಗಳಿಂದ ಹೆಣ್ಣನ್ನು ಮೂಕಿಯನ್ನಾಗಿಸಿಕೊಂಡು ಬಂದ ಸಮಾಜವನ್ನು ವಿಡಂಭಿಸಿದಂತಿದೆ ಕವಿತೆ. ಮೂಕಿಯನ್ನು ಮದುವೆಯಾಗಬಾರದೆಂದಲ್ಲ. ಗಂಡಿನ ಅಹಮಿಕೆ, ಆಸೆ, ಲೈಂಗಿಕ ಕಾಮನೆಗಳು ಎಂತಹ ಪರಿಸ್ಥಿತಿಯಲ್ಲೂ ಜಾಗೃತವಾಗಿರುತ್ತವೆ ಎಂಬುದನ್ನು ಕವಿತೆ ಪ್ರತಿನಿಧಿಸುತ್ತದೆ. ಕಾಮವೇ ತುಂಬಿಕೊಂಡವನಿಗೆ ಹೆಣ್ಣಿನ ಆಕ್ರಂದನ ಮರೆಯಾಗುತ್ತದೆ ಎಂಬ ಮಾತು ಮೂಕಿಯ ಪ್ರತಿಮೆಯಲ್ಲೂ ಧ್ವನಿಸುತ್ತದೆ. ಮಾತು ಬರುವ ಹೆಣ್ಣಿಗೆ ಪ್ರತಿಭಟನೆಗೆ ಅವಕಾಶವಿದ್ದರೂ ಸಂದರ್ಭಗಳು ಕಟ್ಟಿಹಾಕುತ್ತವೆ. ಆದರೆ ಮಾತು ಬಾರದ ಹೆಣ್ಣು ಹೇಗೆ ದಿಟ್ಟತೆಯಿಂದ ವರ್ತಿಸುತ್ತಾಳೆಂಬುದಕ್ಕೆ ಇಡೀ ಕವಿತೆಯ ಓದು ಸಾಕ್ಷಿಯಂತಿದೆ. ಕವಿತೆ ಧೀರ್ಘವಾದಂತೆಲ್ಲಾ ಗಂಡಿನ ಕಾಮಧಾರೆ ಬೇರೊಂದು ಮಗ್ಗುಲನ್ನು ಪಡೆಯುತ್ತದೆ. ತಾಯ್ತನದ ಸುಖವರಸಿದವಳಿಗೆ ಗರ್ಭದ ಮೇಲೆ ಗಂಡನೇ ಒದ್ದಾಗ ಅವಳಿಗಾದ ನೋವು ಗರ್ಭಪಾತದಿಂದ ಹೊರಬರುತ್ತದೆ. ಆದರೆ ಅವಳ ದಿಟ್ಟತೆ ಬದುಕಿನ ಹಂಬಲ ಗಟ್ಟಿಯಾಗುತ್ತದೆ. ಕವಿತೆ ಕೊನೆಯಲ್ಲಿ ಹೆಣ್ಣಿನ ಮುಕ್ತತೆ ಮತ್ತು ಬಿಡುಗಡೆಯ ಸ್ವಾತಂತ್ರ್ಯವನ್ನು ನಿರಾಳತೆಯಲ್ಲಿ ತಂದು ನಿಲ್ಲಿಸುತ್ತದೆ. ಇಲ್ಲಿ ನಿರೀಕ್ಷೆ ಮತ್ತು ಹತಾಷೆಗಳು ಮೌನವಾಗುತ್ತಾ ಹೊಸದೊಂದು ಬದುಕಿನ ಹಂಬಲದಲ್ಲಿ ನೆಲೆ ನಿಲ್ಲುತ್ತವೆ.

"ಅಮ್ಮ ಪಿಂಡವನ್ನು

ನೆಲದೊಳಗೆ ಹೂಳಿ
ಸ್ನಾನಮಾಡಿ ಬಂದು
ಕಣ್ಣೀರು ಕರೆಯುತ್ತ ಕೂತರೆ
ಇವಳು ರೂಮಿನಲ್ಲಿ
ಮಾಯದಾಕಾರದಲ್ಲಿ
ಹುಟ್ಟಿಬರುವ
ಚೇಳೋ ಹಾವೋ ಸತ್ತಂತೆನಿಸಿ
ನಿರಾಳದ ನಿಟ್ಟುಸಿರುಗೈದಳು!
ಅವನು ಅವಳು
ಎಂದೂ ಮತ್ತೊಮ್ಮೆ
ಪರಸ್ಪರ ನೋಡಲಿಲ್ಲ!" [೧೦೮]

ತಾಯಿ ಮಗಳ ಸಂಬಂಧಗಳಲ್ಲಿ ಹೊಂದಿಕೆ ಇದ್ದರೂ ಆಲೋಚನೆಯಲ್ಲಿ ಭಿನ್ನತೆ ದಟ್ಟವಾಗಿ ಕಂಡು ಬರುತ್ತದೆ. ತನಗೆ ಬೇಡವಾದವಳೆಂದು ತೊರೆದ ಗಂಡು ಮತ್ತೊಂದು ಬದುಕನ್ನು ಕಟ್ಟಿಕೊಳ್ಳಲು ಹವಣಿಸಿದರೆ, ಯಾವುದೇ ಪ್ರತಿಭಟನೆಯಿಲ್ಲದೆ ಎಲ್ಲವನ್ನೂ ತೊರೆಯುವ ಹೆಣ್ಣಿನ ದಿಟ್ಟ ಶಕ್ತಿ ಮಹತ್ವದ್ದು. ಮೂಕಿಯಾದರೂ ಅವಳ ಭಾವನೆಗಳಿಗೆ ಮಾತು ಬರುವಂತೆ ಮಾಡಿದ್ದು ಆಧುನಿಕ ಮಹಿಳಾಕಾವ್ಯ. ಇಂದು ಹೆಣ್ಣು ಸಾಮಾಜಿಕವಾಗಿ ಬದಲಾಗಿದ್ದಾಳೆ, ವೇಗದ ಬದುಕಿಗೆ ಚಾಲನೆ ನೀಡಿದ್ದಾಳೆ, ಅಂತರಿಕ್ಷದಲ್ಲಿ ಹಾರಾಡುತ್ತಿದ್ದಾಳೆ ಎಂಬ ಮಾತಿನೊಂದಿಗೆ ಹೆಣ್ಣಿನ ಸಾಧನೆಯನ್ನು ತೋರಿಸಿದ್ದರೂ, ವಾಸ್ತವವಾಗಿ ಹೆಣ್ಣಿನ ಸ್ಥಿತಿಯ ಅರಿವು ಅಗತ್ಯವಿದೆ. ತನಗಲ್ಲದ್ದನ್ನು ಬಿಟ್ಟುಕೊಡುವುದಕ್ಕಿಂತ ದೂರ ಮಾಡಿಕೊಳ್ಳುವ ಗುಣ ಮತ್ತು ದಿಟ್ಟತೆ ಹೆಣ್ಣಿಗಿರಬೇಕು ಎಂಬುದನ್ನು ಕವಿತೆ ಒತ್ತಿಹೇಳುತ್ತದೆ. ಇದು ಹೆಣ್ಣಿನ ಬದುಕಿನ ಒಳನೋಟಕ್ಕೆ ಪ್ರತಿಮೆಯೂ ಹೌದು.

ಆಧುನಿಕ ಮಹಿಳಾ ಕಾವ್ಯವನ್ನು ಅಧ್ಯಯಿಸ ಹೊರಟಂತೆಲ್ಲಾ ಹೆಣ್ಣಿನ ಬದುಕಿನ ಅಂತರಂಗದ ನಿವೇದನೆಗಳು ಗಂಡಿನ ನಿರೀಕ್ಷೆಯಂತಿಲ್ಲ. ಹತಾಷೆ ಮತ್ತು ನಿರೀಕ್ಷೆಗಳು ಮನುಷ್ಯ ಬದುಕಿನ ಸಹಜ ಗುಣಗಳು. ಅಂತೆಯೆ ಅವುಗಳೊಂದಿಗೆ ಗುದ್ದಾಡುತ್ತಲೇ ಬದುಕನ್ನು ಸವೆಸುವ ಹಂಬಲ ಹೆಣ್ಣಿಗಿಲ್ಲ ಎಂಬುದನ್ನು ದಟ್ಟವಾಗಿ ಮಹಿಳಾ ಕಾವ್ಯ ಕಟ್ಟಿಕೊಡುತ್ತದೆ. 'ಬಿಟ್ಟುಕೊಡುವುದಕ್ಕಿಂತ ಬಿಟ್ಟುಬಿಡುವ' ದಿಟ್ಟತೆ ಮಹಿಳೆಗಿದೆ ಎಂಬುದು ಅವುಗಳ ಆಶಯ.

ಉದಾ:– ಗಂಡಿನ ಪ್ರೀತಿ, ಅನ್ಯೈತಿಕ ಸಂಬಂಧ, ಅನುಮಾನದಿಂದ ತುಂಬಿದ ಸಂಸಾರಗಳಲ್ಲಿನ ಬಿರುಕು ಎಲ್ಲವನ್ನು ವಾಸ್ತವತೆಯೊಂದಿಗೆ ಸಮೀಕರಿಸಿ ನೋಡುವ ಗುಣ ಹೆಣ್ಣಿಗಿದೆ ಎಂಬುದನ್ನು ತಿಳಿಸಿಕೊಡುತ್ತವೆ.

"ನನಗಿಲ್ಲದ್ದನ್ನು, / ನನ್ನದಲ್ಲದ್ದನ್ನು,
ತಡಕುತ್ತ ಹೊರಟಾಗ, / ಎದೆ ತಲ್ಲಣಿಸಿ
ಬೆವರ ಹನಿಸಿದಾಗ, ಮನವೆಲ್ಲ ಒದ್ದೆ ಮುದ್ದೆಯಾಗಿ
ನರಳುತ್ತದೆ.
ಮೈಮರೆತಾಗಲೆಲ್ಲಾ / ಕಣ್ಣಲ್ಲಿ ಕನಸು
ಅರಳುತ್ತವೆ, / ತೆರೆಯೆಳೆದು
ತಟ್ಟಿ ಮಲಗಿಸುತ್ತೇನೆ.
ದಕ್ಕಲಾರದ್ದೆಲ್ಲಾ
ಕನವರಿಕೆಯಾಗಿ / ಬಿಕ್ಕಳಿಕೆಯಾಗಿ
ಹೊರ ಬೀಳುತ್ತವೆ" [೧೯]

ಕವಿ ಮನೋವ್ಯಾಪಾರಕ್ಕೆ ಉತ್ತಮ ಉದಾಹರಣೆ. ಕವಿತೆ ಕಲ್ಪನೆಗೂ, ವಾಸ್ತವಕ್ಕೂ ಮೀರಿದ ಪ್ರತಿಮೆಯನ್ನು ಅನಾವರಣ ಮಾಡುತ್ತದೆ. ಕನಸು ಪ್ರತಿಯೊಬ್ಬರ ಸ್ವತ್ತು ಆದರೆ ಆ ಕನಸಿನ ಸಿರಿಗೆ ಜೋತು ಬಿದ್ದಾಗ ಮನುಷ್ಯ ಮರುಳನಾಗುತ್ತಾನೆ. ಆದರೆ ಇಲ್ಲಿ ಕವಿತೆ ಬೇರೊಂದು ಮಗ್ಗುಲಿನ ಬದುಕನ್ನು ಚಿತ್ರಿಸುತ್ತದೆ. ಎಲ್ಲವನ್ನೂ ಸ್ವೀಕರಿಸುವ ಗುಣದೊಂದಿಗೆ ದಕ್ಕಲಾರದ್ದನ್ನೂ ಬಿಕ್ಕಳಿಕೆಯ ಮೂಲಕ ಹೊರ ಹಾಕುವ ಕ್ರಿಯೆಯೆ ಬದುಕಿನ ಸಾರ್ಥಕತೆ ಎಂಬ ಅರಿವನ್ನು ಸಹಜವಾಗಿ ಮೂಡಿಸುತ್ತದೆ. ಬೆಳದಿಂಗಳು ವಾಸ್ತವದ ಪ್ರತಿಮೆಯಾದರೆ ಕರೆಂಟು ಹೋದಾಗಿನ ಕತ್ತಲು ಕೃತಕತೆಯಾಗುತ್ತದೆ. ಇದೇ ಮನುಷ್ಯ ಬದುಕಿನಲ್ಲಿ ಗಂಡು ಹೆಣ್ಣಿನ ಸಂಬಂಧಗಳ ಸೂಕ್ಷ್ಮತೆಯನ್ನು ಹತಾಷೆ ಮತ್ತು ನಿರೀಕ್ಷೆಗಳೊಂದಿಗೆ ಕಂಡು ಕೊಂಡ ಜೀವನ ದರ್ಶನವೆನ್ನಬಹುದು.

ಬದುಕು ಅದಮ್ಯತೆಯ ಸಂಕೇತ. ಪ್ರತಿಯೊಬ್ಬರಲ್ಲೂ ಜೀವನೋತ್ಸಾಹ ತುಂಬಲು ಸಹಕಾರಿಯಾದುದು ಈ ಬದುಕೆ. ಇಂತಹುದನ್ನು ಇಂದಿನ ಯುವ ಪೀಳಿಗೆ ಬಹಳ ಕ್ಲೀಷೆಯ ರೂಪದಲ್ಲಿ ಅರ್ಥೈಸುತ್ತಿರುವುದು ಸರಿಯಲ್ಲ. ಸಾಮಾಜಿಕವಾಗಿ ಬದುಕಿನ ಅಗಾಧತೆ ಪ್ರತಿಯೊಬ್ಬನ ಹಕ್ಕಿನ ರೂಪವಾಗುವ ಬದಲು, ಸಂಕುಚಿತಾರ್ಥದಲ್ಲಿ ಬಿಂಬಿತವಾಗುವ ಸಂಗತಿಗಳು ಹಲವಿವೆ. ಪ್ರತಿಮೆ ಎಂದರೆ ಅದು ಗಂಡು ಹೆಣ್ಣಿನ ಬದುಕಿನ ಪ್ರೀತಿ ಪ್ರೇಮಗಳ ಹತಾಷೆ ಅಥವಾ ನಿರೀಕ್ಷೆಗಳಲ್ಲೇ ನಿಲ್ಲದೆ ಸಾಮಾಜಿಕ ಆಶಯಗಳೂ ಮುಖ್ಯವಾಗುತ್ತವೆಂಬುದನ್ನು ಹಲವು ಕವಿತೆಗಳು ಧ್ವನಿಸಿವೆ. 'ಮಾನವ ಜನ್ಮ ದೊಡ್ಡದು ಇದ ಹಾಳು ಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರಾ' ಎಂಬ ದಾಸವಾಣಿಯಂತೆ ಆಧುನಿಕ ಮಹಿಳಾ ಕಾವ್ಯ ಸಮಾಜಮುಖಿ ಚಿಂತನೆಯ ನೆಲೆಯು ಸ್ವಾಗತಾರ್ಹ.

"ಬದುಕಂಬೋದು
ಸಿಗರೇಟ ಸೇದಿ
ಸೆರೆ ಕುಡಿದು ಮರೆಯುವಷ್ಟು
ಸಣ್ಣದದಯೇನು?" [೧೧೦]

ಎಂದು ಪ್ರಶ್ನಾರ್ಥಕವಾಗಿಯೆ ಆರಂಭವಾಗುವ ಕವಿತೆಯಲ್ಲಿ ಸಾಮಾಜಿಕ ಕಳಕಳಿ ವೈಜ್ಞಾನಿಕ ಸಲಹೆ, ಭವಿಷ್ಯದ ಕರಾಳ ದಿನಗಳು ಹಾಗೂ ದುಶ್ಚಟಗಳಿಗೆ ದಾಸನಾದರೆ ಆಗುವ ಅನಾಹುತ ಮುಂತಾದವುಗಳ ದರ್ಶನ ಮಾಡಿಸುತ್ತದೆ. ಇದರ ಜೊತೆಗೆ ಎಂತಹ ಸಂದರ್ಭದಲ್ಲೂ ಆತ್ಮವಿಶ್ವಾಸ ಕುಂದಬಾರದೆಂಬ ಜೀವನೋತ್ಸಾಹವನ್ನೂ ತುಂಬುತ್ತದೆ.

"ಸುಟ್ಟ ಬದುಕು ಬಾಳೋದಕ್ಕಿಂತ
ಗಟ್ಟಿ ಬದುಕು ಆಳೋದ್ರೊಳಗ
ಸುಗ್ಗಿಯ ಸೊಗಸದ" [೧೧೧]

ನೀತಿಯ ಸಾಲುಗಳು ಮಾತ್ರವಾಗಿರದೆ ಬಂದದ್ದನ್ನು ಎದುರಿಸುವ ಎದೆಗಾರಿಕೆ ಪ್ರತಿಯೊಬ್ಬರಲ್ಲೂ ಇರಬೇಕೆಂಬುದು ಕವಿತೆಯ ಆಶಯ. ಧೂಮಪಾನ ಇಂದು ಗಂಡಿನ ಅಥವಾ ಹೆಣ್ಣಿನ ಸಮಯ ಕಳೆಯಲು ಬಳಸುವ ಸಾಧನವಾಗಿ ಮಾತ್ರ ಇಲ್ಲ. ಅಂತಸ್ತು ಮತ್ತು ಅಹಂಕಾರದ ಸಂಕೇತಗಳಾಗಿಯೂ ಮಾರ್ಪಡುತ್ತಿವೆ. ಇಂದಿನ ಯುವ ಜನತೆ ಕ್ಷಣಿಕ ಸುಖದ ಆಸೆಗೆ ಬಲಿಯಾಗುವ ಕರಾಳತೆಯನ್ನೂ ಎಳೆ ಎಳೆಯಾಗಿ ಬಿಚ್ಚಿಡುತ್ತದೆ. ಸಮಾಜಮುಖಿ ಆಶಯ ಇಲ್ಲಿ ಪ್ರತಿಮೆಯಾಗಿ ಜೀವ ತಳೆದಿದೆ.

ಸಾಹಿತ್ಯವೂ ಸಂಗಾತಿಯಾಗುತ್ತದೆ. ನಿರಾಕಾರದ ಆಲೋಚನೆಗಳಿಗೆ ಆಕಾರ ಕೊಡುವಂತೆ ಮಾಡಿದ್ದು ಬರಹಗಳು. ಗೆಳೆಯನಂತೆ ಕಂಡ ಕವಿತೆಯೊಂದಿಗೆ ಆತ್ಮಸಂಗಾತ ನಡೆಸಿದ್ದು ಬರಹದೊಂದಿಗೆ ಅಂಟಿದ ನಂಟನ್ನು ಬೆಸೆಯುತ್ತದೆ. ಇದರ ದಟ್ಟತೆ ಆಧುನಿಕ ಕನ್ನಡ ಮಹಿಳಾ ಕಾವ್ಯದಲ್ಲಿ ಕಂಡುಬಂದದ್ದು ವಿಶೇಷ.

"ನನ್ನೆದೆಯ ಹೊಲದಲ್ಲಿ
ಹೂವ ಬಿತ್ತಿದ ಜಾಣ
ನೋವ ಮರೆಸಿದಗೆಳೆಯಾ
ಕವಿತೆರಾಯ!
ನಿನಗಾಗಿ / ನಾ ಕೊಡುವುದೇನು?
ಕರುಳ ಕೊಟ್ಟಿದ್ದೇನೆ / ಮರುಳುಗೆಟ್ಟಿದ್ದೇನೆ" [೧೧೨]

ಇಲ್ಲಿ ಹತಾಷ ಭಾವನೆ ಎಲ್ಲಿಯೂ ಸುಳಿಯುವುದಿಲ್ಲ. ಕವಿತೆಯೊಂದಿಗಿನ ಸಾಂಗತ್ಯ ಮತ್ತು ಸಾಮಿಪ್ಯ ಬದುಕಿನ ಸಂಬಂಧಾಂತರ ಎಳೆಯನ್ನು ಹದವಾಗಿ ತೆರೆದಿಡುತ್ತದೆ. ಬದುಕು ನಿಂತ ನೀರಾಗದಂತೆ ಕವಿತೆ ಸಹಕರಿಸುತ್ತದೆ. ಧೈರ್ಯ ತುಂಬುತ್ತದೆ.

ಬರಹದೊಂದಿಗಿನ 'ಜೀವಕೊರಳ ಸಖ್ಯ' ಕವಿತೆಯೊಂದಿಗೆ ರೂಪ ಪಡೆಯುತ್ತದೆ. ಅಂತೆಯೆ ಕವಿಯೊಂದಿಗಿನ ಸಾಹಿತ್ಯದ ಮಾತು ಮನುಷ್ಯತ್ವದ ಸೂಕ್ಷ್ಮ ಎಳೆಗಳನ್ನು ಬಿಚ್ಚಿಡುವಲ್ಲಿ ಯಶಸ್ವಿಯೂ ಆಗುತ್ತದೆ. ಮುಂದುವರೆದು ಕೃತಕ ಜೀವನದ ಎಲ್ಲೆಯನ್ನು ದಾಟಿದ ಕವಯಿತ್ರಿಗೆ ಅಕ್ಷರಗಳೇ ಭಾವನೆಗಳಾಗಿ ಮಾರ್ಪಡುವುದು ಮುಖ್ಯ ಸಂಗತಿ. ಇಲ್ಲಿ ಕವಯಿತ್ರಿ ಗೌಣಳಾಗಿ ಪ್ರತಿ ಹೆಣ್ಣಿನ ಮನಸ್ಥಿತಿಯ ಚಿತ್ರಣ ಕಣ್ಮುಂದೆ ನಿಲ್ಲುತ್ತದೆ.

"ನನಗೆ ನಾನೆಂದೂ / ಮರಳಿ ಸಿಗಲಾರೆ,
ನಿನ್ನೆದೆಯ ನೆರಳಲ್ಲಿ / ನೆಲೆನಿಂತ ಜೀವ
ನನ್ನದಾಗೇ ಇಲ್ಲ / ನನಗೆ ನಾನೇ ಇಲ್ಲ
ಎಲ್ಲ ಅಕ್ಷರಗಳಲ್ಲಿ / ಹರಿಯಿತಲ್ಲ!" [೧೧೩]

ಹತಾಷೆಗಿಂತ ಧನ್ಯತಾ ಭಾವ ಇಲ್ಲಿದೆ. ಬದುಕು ಬದಲಿಸಲು ಹಲವು ಮಾರ್ಗಗಳಿದ್ದರೂ ಕವಿತೆಯೊಂದಿಗಿನ ಒಡನಾಟದಿಂದ ಮತ್ತೊಬ್ಬರ ಬದುಕಿಗೆ ದರ್ಶನವಾಗುತ್ತದೆಂಬುದಕ್ಕೆ ಕವಿತೆ ಸಾಕ್ಷಿಯಾಗುತ್ತದೆ. ಈ ಎಲ್ಲದಕ್ಕೂ ಮೂಲ ಕಾರಣ ಅಕ್ಷರ ಕ್ರಾಂತಿ. ಅಕ್ಷರಗಳ ಅರಿವು ಸಮಾಜವನ್ನು ಆಮೂಲಾಗ್ರವಾಗಿ ಶೋಧಿಸುವಂತೆ ಮಾಡಿದ್ದರಿಂದಲೇ ಸಮಾಜ ಆರೋಗ್ಯಕರವಾಗಿರುವುದು ಎಂಬ ಮಾತನ್ನು ಧ್ವನಿಸುತ್ತದೆ. ಇದು ಮಹಿಳಾ ಲೋಕದ ಸ್ವತಂತ್ರ ಮನೋಧರ್ಮವನ್ನೂ ಬಿಂಬಿಸುತ್ತದೆ. ಇಲ್ಲಿ ಕೊಡುವುದಕ್ಕಿಂತ ಪಡೆದುಕೊಂಡ ಬಗೆ ಸಾರ್ಥಕತೆ ಪಡೆಯುತ್ತದೆ. ನನ್ನನ್ನು ನಾನು ಹುಡುಕುವ ಕೆಲಸ ಹತಾಷೆಯಿಂದಲ್ಲದೆ ಸಮಾಜದೊಂದಿಗೆ ಹೆಣ್ಣು ಬೆರೆತು ಹೋದ ಮತ್ತು ಆ ಮೂಲಕ ಹೊಸದೊಂದು ಹೊಳಹಿಗೆ ಕಾರಣವಾದ ಅಕ್ಷರದ ಮಹತ್ವ ಚಿತ್ರಿಸುತ್ತ ಕವಿತೆಯ ಒಂದು ಪ್ರತಿಮೆಯಾಗಿ ನೆಲೆನಿಲ್ಲುತ್ತದೆ.

ಸುತ್ತ ಮುತ್ತಲಿನ ಪರಿಸರ, ಅಡುಗೆ ಮನೆಯ ಪರಿಕರಗಳು, ಪ್ರಾಣಿ ಪಕ್ಷಿಗಳು ಕವನಗಳ ರಚನೆಗೆ ಸ್ಫೂರ್ತಿಯಾಗುತ್ತವೆ. ಮನೆಗೇ ಸೀಮಿತಳಾದ ಹೆಣ್ಣು ತನ್ನೊಂದಿಗೆ ಒಡನಾಟ ನಡೆಸಿದ ಸುತ್ತಲಿನ ವಸ್ತುಗಳೊಂದಿಗೆ ಭಾವನೆಗಳನ್ನು ಬೆಸೆದುಕೊಂಡಿರುತ್ತಾಳೆ. ಅದು ಸ್ವಗತದಿಂದಲೋ, ನಿರೀಕ್ಷೆಗಳಿಂದಲೋ ಅಥವಾ ವ್ಯವಸ್ಥೆಯ ಕಡೆಗಿನ ಹುಸಿ ಮುನಿಸಿನಿಂದಲೋ ಯಾವುದಾದರೊಂದು ರೀತಿಯಲ್ಲಿ ಅವುಗಳ ಆಪ್ತತೆ ಸಹಜವೆಂಬಂತೆ ರೂಢಿಗತವಾಗಿರುತ್ತವೆ. ಬದಲಾವಣೆಯ ಅರಿವಿರದ ಆದರೂ ಜೀವನಾಡಿಯಂತೆ ಸ್ಪಂದಿಸುವ ಸಂಸಾರವೇ ಒಂದು ಬಾವಿಯ ಪ್ರಪಂಚವೆಂಬಂತೆ ಹಲವು ಕವಿತೆಗಳು ನಮ್ಮ ಮುಂದಿವೆ.

"ಎಲ್ಲ ಮನೆಗಳಲ್ಲೂ ಒಂದೊಂದು ಬಾವಿಕಟ್ಟೆ
ಬಾವಿಕಟ್ಟೆಯ ಬದುಕು ತಳಕ್ಕೆ / ತೂತುಮಾಡಿ ನೀರನ್ನೆಲ್ಲಾ
ಹರಿಯ ಬಿಡಬೇಕೆನಿಸುತ್ತಿಲ್ಲ / ಹರಿದ್ವರಿದು ಗಂಗೆ ತುಂಗೆ ಯಮುನೆ
ಕಾವೇರಿಯಂತೆ ಸಮುದ್ರ ಸೇರ / ಬೇಕೆನಿಸುತ್ತಿಲ್ಲ" [೧೧೪]

ಕವಿತೆ ಹಳ್ಳಿ ಸೊಗಡಿನ ಮುಗ್ಧ ಸಂಪ್ರದಾಯಬದ್ಧ ಜೀವನವನ್ನು ಮಾತ್ರ ತೆರೆದಿಡುವುದಿಲ್ಲ. ಬದಲಾವಣೆಯನ್ನು ಬಯಸದ, ಏಕಮುಖ ಚಿಂತನೆಯ ಜೀವನ ಕ್ರಮ. ಸಾಂಪ್ರದಾಯಿಕ ಬದುಕಿನಲ್ಲೂ ಹಾಸು ಹೊಕ್ಕಾಗಿರುವುದನ್ನು ಕವಿ 'ಬಾವಿಕಟ್ಟೆ'ಯ ಪ್ರತಿಮೆಯಲ್ಲಿ ಹಿಡಿದಿಟ್ಟಿದ್ದಾರೆ. ಕವಿತೆಯ ಆಳ ಹೊಕ್ಕಂತೆಲ್ಲಾ ನಮಗೆ ಭಾಸವಾಗುವುದು ಹೆಣ್ಣನ್ನು, ಹೆಣ್ಣಿನ ನಡತೆಯನ್ನು ಸಂಪ್ರದಾಯಗಳ ಸಂಕೋಲೆಯಲ್ಲಿ ಬಂಧಿಸಿದ ರೀತಿ. ಆದರೆ ಎಲ್ಲೂ ಗಂಡಿನ ನಡೆಗೆ ರೀತಿ ನೀತಿಗಳ ಅನುಸರಣೆ ಇಲ್ಲ ಎಂಬುದನ್ನು ಕವಿತೆ ತಿಳಿಸುತ್ತದೆ. ಆದರೆ ಬದಲಾವಣೆ ಎಂಬುದು ಬಾಹ್ಯ ಕ್ರಮದಲ್ಲಾದರೂ ಅದೂ ಸಹ ಹೆಣ್ಣಿನ ಮೇಲೆ ಪರಿಣಾಮ ಬೀರುವುದು ಸಂಪ್ರದಾಯದ ಮೂಲಕವೆ. ಎಂತಹ ಬದಲಾವಣೆಗಳಾದರೂ ಹೆಣ್ಣಿನ ಆಂತರಿಕ ಆಲೋಚನೆಯ ಒತ್ತಡ ಕಡಿಮೆಯಾಗುವುದಿಲ್ಲ ಎಂಬ ನಿಜದ ಅರಿವು ಕವಿಗಿದೆ.

ಅಡುಗೆ ಮನೆ ಹೆಣ್ಣಿಗೆ ಬಳುವಳಿ ಎಂಬುದು ಅನಾದಿ ಕಾಲದಿಂದಲೂ ಸರ್ವವಿಧಿತ. ಆದರೂ ಪಾಕ ಪ್ರವೀಣರೆಂದರೆ ನೆನಪಿಗೆ ಬರುವುದು ನಳ ಮಹಾರಾಜ. ಇದು ವಿಪರ್ಯಾಸವೇ ಸರಿ. ಕಾಲ ಬದಲಾದಂತೆ ಅಡುಗೆ ಮನೆಯೂ ಅಂದ ಹೆಚ್ಚಿಸಿಕೊಂಡಿತು. ಆದರೂ ಅದರ ಕಾವಿನ ಸ್ಪರ್ಷ ಮಾತ್ರ ಹೆಣ್ಣಿಗೇ ಎಂಬಂತೆ ಸದಾ ಅಂಟಿನ ಜೊತೆ ನಂಟಾಯಿತು. ಅಡುಗೆ ಮನೆಯ ಕ್ರಿಯೆಗಳೇ ಹೆಣ್ಣಿನ ಮಾನಸಿಕ ಆಲೋಚನೆಗಳು ವಿಶಿಷ್ಟತೆ ಪಡೆಯುತ್ತವೆ ಎಂಬುದು ಮುಖ್ಯ ಸಂಗತಿ.

"ಒಳಗೆ ಕುಕ್ಕರು ಕೂಗುತ್ತಿದೆ ಒತ್ತಡದಿಂದ
ಒಲೆ ಬದಲಾದರೇನು ಉರಿ ಬದಲಾಗಿದೆಯೇ
ಅಡುಗೆಯ ಅನುಭವ ಇಬ್ಬರಿಗೂ ಇದೆ
ಉಷ್ಣತೆಯ ತಾಪಕ್ಕೆ ಮುಚ್ಚಳ ಹಾರೀತು
ಕುಕ್ಕರಲ್ಲವೇ ತಾನೆ ತಣಿಯಲೆಂದು
ಕಾಯಲಾಗುವುದಿಲ್ಲ
ಆವಿ ಹೋಗಲೇಬೇಕು ಹೊರಗೆ" [೧೧೫]

ತಲೆಮಾರುಗಳಿಂದ ಬಳುವಳಿಯಂತೆ ಸಾಗಿ ಬಂದ ಒತ್ತಡ ಮತ್ತು ತಲ್ಲಣಗಳನ್ನು ಆಧುನಿಕ ಹೆಣ್ಣು ಸಹಿಸದೆ ಪ್ರತಿಭಟಿಸುವ ರೀತಿ ಈ ಕುಕ್ಕರಿನ ಪ್ರತಿಮೆ ಅನಾವರಣಗೊಂಡಿದೆ. ತೋರ್ಪಡಿಕೆಯ ಪ್ರೀತಿ ಬಾಹ್ಯ ಕ್ರಿಯೆಗಳಲ್ಲಿ ಬದಲಾವಣೆಯಂತೆ ಕಂಡರೂ, ಅಂತರಂಗದ ತಲ್ಲಣ, ತೊಳಲಾಟಗಳು ಬದಲಾಗದ ಸ್ಥಿತಿಯನ್ನು ವಾಸ್ತವಗೊಳಿಸುತ್ತದೆ. ಒಲೆ ಬದಲಾದರೂ ಉರಿ ಬದಲಾಗದ ಕ್ರಿಯೆ ಪರಂಪರೆಯನ್ನು ನೆನಪಿಸುತ್ತದೆ. ಕಾಲ ಸರಿದರೂ, ಬದಲಾದರೂ ಹೆಣ್ಣು ಬಯಸುವುದು ಮುಕ್ತ ವಾತಾವರಣವನ್ನು. ಹೊಸ ರೂಪಾಂತರಗಳಲ್ಲಿ ಬಿಗಿ ಹಿಡಿವ ಬಂಧಗಳನ್ನಲ್ಲ ಅಥವಾ ಆ ಮೂಲಕ ಕಟ್ಟಿಹಾಕುವ ಸಮಾಜದ ಕಟ್ಟುಪಾಡುಗಳನ್ನೂ

ಅಲ್ಲ. ಇಂತಹ ಎಲ್ಲ ಸಂಕೋಲೆಗಳನ್ನು ಯಾರೂ ಸರಿಸುವುದಿಲ್ಲ. ಸರಿಸಲು ಬರುವರೆಂಬ ಹಂಬಲವೂ ಇಲ್ಲದೆ ಸ್ವಯಂ ಜವಾಬ್ದಾರಿಯಿಂದ ಬಿಡುಗಡೆ ಹೊಂದುವ ಹಂಬಲ ಇಲ್ಲಿದೆ.

ಗತವನ್ನು ನೆನಪಿಸದೆ ಪ್ರಸ್ತುತತೆಗೆ ಬೆಸೆಯಬೇಕು. ಆಗ ಮಾತ್ರ ಹೊಸ ನೋಟ ಸಾಧ್ಯ ಎಂಬುದು ಜೀವನೋತ್ಸಾಹದ ಸಂಕೇತ. ಬದುಕು ಕೇವಲ ಆಕ್ರಂದನವಾಗದೆ ಆಕ್ರೋಶವಾದಾಗ ಜೀವನ ಸ್ವಂತಿಕೆ ಪಡೆಯುತ್ತದೆ ಎಂಬುದು ಬರಹ ರೂಪಗೊಂಡಿವೆ.

"ರುಬ್ಬುವುದಾದರೆ ರುಬ್ಬುವುದು
ಕುಟ್ಟುವುದಾದರೆ ಕುಟ್ಟುವುದು
ಮೈಮನಗಳ ಕಸುವು
ಫಲಿತವಷ್ಟೇ ಮುಖ್ಯ.
ಕಣ್ಣ ಮುಂದೆಯೆ ಸತಿಮಾಡಿ
ಇಂದೆಲ್ಲಗುಡಿ ಕಟ್ಟಿ
ಕೈಮುಗಿಯುವ ಮಂದಿಯನ್ನೆಲ್ಲ
ಪತಪತನೆ ರುಬ್ಬುಗಲ್ಲಿಗೆ ಇಕ್ಕಿ
ನಾದುವಂತೆ ಕುಟ್ಟಬೇಕು" [೧೧೬]

ಹೆಣ್ಣು ಸಹ ಮೂರ್ತಿ ಎಂದು ಬಿಂಬಿಸಿ ನಂಬಿಸಿಕೊಂಡು ಬಂದ ಸಮಾಜಕ್ಕೆ ಚಾಟಿ ಏಟಿನ ರೂಪದಲ್ಲಿ ಧ್ವನಿತಗೊಂಡಿದೆ. ಯಾವುದನ್ನು ಸಹಿಸಿಕೊಳ್ಳಬೇಕೆಂದು ವ್ಯವಸ್ಥೆ ಸೃಷ್ಟಿಸಿದೆಯೊ ಅದನ್ನೇ ಧಿಕ್ಕರಿಸುವ ಹಂತಕ್ಕೆ ಇಂದು ಹೆಣ್ಣು ತಲುಪಿದ್ದಾಳೆ. ಇಂತಹ ಅನ್ಯಾಯಗಳನ್ನು ಎದುರಿಸುತ್ತಲೇ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವ ಹೆಣ್ಣಿನ ಹಂಬಲ ಗಟ್ಟಿತನದ್ದು. ಇದನ್ನು ಕಾರ್ಯರೂಪಕ್ಕೆ ತರಬೇಕಾಗಿರುವುದು ಅವಳೇ ಹೊರತು ಮತ್ತಾರಲ್ಲ ಎಂಬುದನ್ನು ಒತ್ತಿ ಹೇಳುತ್ತದೆ. ಇಂತಹ ಸಂದರ್ಭ ಸಾಧ್ಯವಾದದ್ದು ರುಬ್ಬುಗಲ್ಲಿನ ಪ್ರತಿಮೆಯ ಮೂಲಕ.

ಆಕ್ರಮಣ ಪದ ವ್ಯಾಪಕಾರ್ಥ ಪಡೆದಿದೆ. ಸಮಯದ ಅಥವಾ ಸಮಸ್ಯೆಯ ಬಲೆಗೆ ಸಿಲುಕಿದಾಗ ಅಮಾಯಕರ ಬಲಿ ಹೇಗಾಗುತ್ತದೆ ಎಂಬುದಕ್ಕೆ ಹಲವು ನಿದರ್ಶನಗಳಿವೆ. ಪಕ್ಷಿಗಳಲ್ಲೂ ಕ್ರೌರ್ಯ ಅಡಗಿದೆ ಎಂದಾದರೆ ವಿಪರೀತ ಬುದ್ಧಿಯ ಮನುಷ್ಯನ ವರ್ತನೆ ಅತಿರೇಕವೆ ಸರಿ.

"ಎದುರಿಗಿತ್ತು ಹೊಂಚುತ್ತಿದ್ದ ಗಿಡುಗ
ಹೆದರಿ ಮುದುಡಿದ್ದ ಹಕ್ಕಿಯ
ಮೇಲೆರಗಲು ಕಾಯುತ್ತಿತ್ತು
ಮೃತ್ಯು ಬಾಯ್ದೆರೆದು ನಿಂತಿತ್ತು.

ಹಕ್ಕಿ ನಡುಗಿತ್ತು, ಹಕ್ಕಿ ಚೀರಿತ್ತು
ಸಹಾಯಕ್ಕಾಗಿ ಮೊರೆ ಇಟ್ಟಿತ್ತು
ಆನೆಗಿದ್ದ ಸಹಾಯ ಹಕ್ಕಿಗಿರಲಿಲ್ಲ
ಬಿಡಿಸಲಾರೂ ಬರಲಿಲ್ಲ.
ಆಗಸದಿಂದ ಇಳಿಯುತ್ತಿತ್ತು ಮೆಲ್ಲ ಮೆಲ್ಲ
ಮಾನಮುಚ್ಚಿದ ರೆಕ್ಕೆಪುಕ್ಕ ಎಲ್ಲಿ
ಹಕ್ಕಿ ಆಕ್ರಮಣಕ್ಕೊಳಗಾದ ಕುರುಹಾಗಿ
ಗಿಡುಗನ ಗೆಲುವಿನ ಸಂಕೇತವಾಗಿ" [೧೧೭]

ಎರಡು ಪ್ರತಿಮೆಗಳ ಅನಾವರಣಗೊಂಡಿದೆ ಕವಿತೆಯಲ್ಲಿ. ಹಕ್ಕಿ ಮತ್ತು ಗಿಡುಗ ಗಂಡು ಹೆಣ್ಣು ಬಡವ ಮತ್ತು ಶ್ರೀಮಂತರ ರೂಪ ಪಡೆಯುತ್ತದೆ. ಪ್ರಸ್ತುತ ಕಾಡುತ್ತಿರುವ ಸಮಸ್ಯೆಗಳನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತಲೇ ವ್ಯವಸ್ಥೆಯ ಕ್ರೌರ್ಯವನ್ನು ಹುನ್ನಾರವನ್ನು ಪ್ರತಿಮೆಗಳ ಮೂಲಕ ತೆರೆದಿಡುತ್ತದೆ. ಅಸಹಾಯಕತೆಗೆ ನಲುಗಿದ ಎಷ್ಟೋ ಹೆಣ್ಣುಗಳನ್ನು ಈ ಕವಿತೆ ಪ್ರತಿನಿಧಿಸುತ್ತಲೇ, ಆ ಮೂಲಕ ಎಚ್ಚರದ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ಸಾವು ಮಾತ್ರ ಅಂತ್ಯವಲ್ಲ, ದುರಾಸೆ ತುಂಬಿದ ಮನಸ್ಸಿಗೆ ಎಲ್ಲವೂ ಸಾವಿನ ನೆರಳಂತೆ ಕಂಗೊಳಿಸುತ್ತದೆಂಬುದಕ್ಕೆ ಕವಿತೆ ಸಾಕ್ಷಿ. ಆಕ್ರಮಣದ ರೀತಿ ಅನೇಕ ಗಂಡು-ಹೆಣ್ಣಿನ ಗಂಡ-ಹೆಂಡತಿಯ ರೂಪಗಳು ಆದರ್ಶವೆಂದು ತೋರಿದರೂ ಹಲವು ಸಂದರ್ಭಗಳು ಗಂಡಿನ ಕ್ರೂರತೆ ಹೆಣ್ಣನ್ನು ವ್ಯವಸ್ಥಿತ ರೂಪದಲ್ಲಿ ಆಕ್ರಮಿಸುತ್ತದೆ. ಈ ಆಕ್ರಮಣ ಮದುವೆ ಎಂಬ ಪ್ರತಿಮೆಯ ಮೂಲಕ ದುರಂತದ ಅರಿವಾಗಿಸುತ್ತದೆ.

"ಪತಿಯಾಗುವವನ ಕೈಹಿಡಿದು
ಸಪ್ತಪದಿಯ ತುಳಿಯುವಾಗ ಅರಳಿತ್ತು ಪ್ರೀತಿ
ಆದರೆ ಕನಸುಗಳು ನನಸಾಗಲಿಲ್ಲ.
ಮಧ್ಯಾಹ್ನದ ಕಾದ ಉರಿಯಲಿ ಅವಳ ಸುಟ್ಟು
ಮುಸ್ಸಂಜೆಯ ರಂಗಿನಲಿ ಅವಳ ಮರೆತು
ಅವನು ಮುನ್ನಡೆದಿದ್ದ, ಅವಳ ಹಿಂದೆಯೇ ಬಿಟ್ಟು" [೧೧೮]

ಪಂಚ ಭೂತಗಳ ಸಾಕ್ಷಿ ಎಂಬುದು ಕೇವಲ ಆಚರಣೆಗೆ ಸೀಮಿತ. ಅದೇ ಪಂಚ ಭೂತಗಳನ್ನು ಬಳಸಿಕೊಂಡ ಗಂಡು, ಹೆಣ್ಣನ್ನು ಹಿಂಸಿಸುವ ಮೂಲಕ ಕ್ರೌರ್ಯದ ಬೀಡಾಗುತ್ತಾನೆ ಕಾಲ ಬದಲಾದರೂ ಅಲ್ಲೊಂದು, ಇಲ್ಲೊಂದರಂತೆ ಇಂತಹ ಸನ್ನಿವೇಶಗಳು ನಮ್ಮ ಮುಂದೆ ಕಂಡುಬರುತ್ತವೆ. ಗಂಡಿಗೆ ಎರಡು-ಮೂರು ಮದುವೆಗೆ ಅವಕಾಶವಿದ್ದರೆ ಅದು ಅವನ ಹಕ್ಕಾಗುತ್ತದೆ. ಅದೇ ಹೆಣ್ಣಿನ ಬಗೆಗೆ ಮಾತನಾಡುವಾಗ ಮೌನ ವಹಿಸುತ್ತೇವೆ. ಇಲ್ಲಿ ಗಂಡು ಹೆಣ್ಣಿನ ತಾರತಮ್ಯಕ್ಕಿಂತ ಬದುಕನ್ನು ಕಟ್ಟಿಕೊಳ್ಳುವ ಸಂದರ್ಭದಲ್ಲಿ ಪ್ರತಿ

ಹಂತದಲ್ಲೂ ಎಚ್ಚರ ವಹಿಸಬೇಕೆಂಬ ಅಂಶವನ್ನೂ ಉಚ್ಚರಿಸುತ್ತದೆ. 'ಮದುವೆ' ಎಂಬ ಪ್ರತಿಮೆ ಎಲ್ಲ ಸಾಧ್ಯತೆಗಳಿಗೂ ಸಾಧನವಾಗುವ ಪ್ರತೀಕದಂತಿದೆ. ನಾಳೆಗಳ ಬಗ್ಗೆ ಪ್ರತಿಯೊಬ್ಬರಿಗೂ ಒಂದೊಂದು ಕಲ್ಪನೆ ಇದ್ದೇ ಇರುತ್ತದೆ. ಗಂಡು ಹೆಣ್ಣಿನ ದೃಷ್ಟಿಕೋನದಲ್ಲಿ ನಾಳೆಗಳ ಆಲೋಚನೆ ಭಿನ್ನವಾದುದು ಮತ್ತು ನಿಗೂಢವಾದುದು.

ಅದಮ್ಯ ಜೀವನೋತ್ಸಾಹ ಮುಪ್ಪಿನಲ್ಲೂ ಕೈಗೂಡುತ್ತದೆ ಎಂಬುದನ್ನು ಕವಿ ಮನಸ್ಸು ಸಾಕಾರಗೊಳಿಸುತ್ತದೆ.

"ನನ್ನ ಮನಸ್ಸೊಂದು
ಬಿಳಿಯಹಾಳೆ.
ಅದಿರಲಿ ನೀವು ಬರೆದಂತೆ
ಇರುವುದು ನನ್ನ ನಾಳೆ!
ನನಗಿಲ್ಲ ನನ್ನತನ
ಬರೆದದ್ದ ಅಳಿಸುವ ದಿಟ್ಟತನ.
ಅವನೂ ಬರೆದ
ಅವನಿಗೊಪ್ಪುವಂತೆ.
ಮನಸ್ಸು ನನ್ನದು
ಹಾಳೆನನ್ನದು
ಲಿಪಿಕಾರರು ಮಾತ್ರ ಬೇರೆ ಬೇರೆ.
ನನ್ನದಲ್ಲದ ಲೇಖನಿಯಲ್ಲೆ
ಬರೆಯುತ್ತಾ ಬಂದ
ನನ್ನಜೀವನದ ಕೊನೆಯ ಸಾಲುಗಳ
ನಾನೇ ಬರೆಯುವ
ಸಾಹಸ ತೋರಿ ಬರೆದೇ ಬಿಟ್ಟೆ
ಭವಿಷ್ಯ ತುಂಬಿದ ನನ್ನನಾಳೆ" [೧೧೯]

ದೇಹ ಮಾಗಿದರೂ ಮನಸ್ಸು ಮಾಗುವುದಿಲ್ಲ ಎಂಬುದನ್ನು ತಿಳಿಸುತ್ತದೆ. ಶತಮಾನ ಗಳಿಂದಲೂ ಹೆಣ್ಣು ಹಂತ ಹಂತವಾಗಿ ಹಸ್ತಾಂತರಳಾಗುತ್ತಲೇ ಬಂದ ಬಗೆಯನ್ನು ಪ್ರತಿಭಟನಾತ್ಮಕ ನೆಲೆಯಲ್ಲಿ ಕಟ್ಟಿಕೊಡುತ್ತದೆ. 'ನಾಳೆ' ಎಂಬ ಪ್ರತಿಮೆ ಜೀವಂತಿಕೆ, ಉತ್ಸಾಹದ ಸಂಕೇತ. ವಯಸ್ಸು ಗೌಣವಾಗಿ ಜೀವನ ನವುರಾಗುತ್ತದೆ. ಸಾವಿನ ಸಂದರ್ಭದಲ್ಲೂ ಸ್ವಂತಿಕೆ ಕಾಪಾಡಿಕೊಳ್ಳುವ, ಅಸ್ಮಿತೆ ಕಂಡುಕೊಳ್ಳುವ ಹಂಬಲ ಇಲ್ಲಿದೆ. ಜೊತೆಗೆ ಪಡೆದೇ ತೀರುವೆನೆಂಬ ಹಠದೊಂದಿಗೆ ಕವಿತೆ ಅಂತ್ಯವಾಗುತ್ತದೆ. ಕಾಯುವಿಕೆ ತಾಳ್ಮೆಯಾದರೂ ಹಂಬಲ ಪ್ರತಿಭಟನಾತ್ಮಕವಾದುದು. ಇದರ ಅಗತ್ಯತೆಯು ಹೆಚ್ಚಾಗಬೇಕಾದ

ಅನಿವಾರ್ಯತೆಯೂ ಇಂದಿದೆ. ಸ್ವಗತದ ಪ್ರತಿಮೆಯನ್ನು ಹೊರ ಹಾಕಿದರೂ ಸ್ವತಂತ್ರ್ಯತೆಯ ಹಂಬಲ ದಟ್ಟವಾದುದು. ಪ್ರತಿಭಟನೆಯೆಂಬುದು ಹಲವು ಮಾದರಿಗಳಿಂದ ಕೂಡಿರುವಂತದ್ದು. ಧರ್ಮ ಹೆಣ್ಣಿಗೆ ದಾರಿಯನ್ನು ತೋರಿಸುವ ಸಂಕೇತವಾದರೆ, ಬೀಸುಕಲ್ಲು ಕ್ರಾಂತಿಯ ನೆಲೆಯಾಗುತ್ತದೆ.

"ಕುಟ್ಟು-ಬೀಸೂವ ಕಲ್ಲುಗಳ ಮುಂದೆ
ಅತ್ತು ಕರೆದುದುಸಾಕು.
'ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿಗರೀಯಸಿ.'
ಎಂದವರ ಜುಟ್ಟು ಹಿಡಿದು ಕೇಳೋಣ
ಜನನಿಗೆ ಭೂಮಿ ಎಲ್ಲಿ?
ತವರೂರು ಯಾಕೆ ಜಾಲಿಯ ಮರವಾತು?
ಗಂಡನ ಮನೆಯೇಕೆ ಮಾಸ್ತಿಯ ಕಲ್ಲಾತು?" [೧೨೦]

ಹೆಣ್ಣನ್ನೇ ಸಮಾಜ ಒಂದು ಪ್ರತಿಮೆಯನ್ನಾಗಿಸಿದ ಮತ್ತು ಆ ಮೂಲಕ ಮಾದರಿಯನ್ನಾಗಿಸಲು ಹೊರಟ ಹುನ್ನಾರದ ಅನಾವರಣ ಇಲ್ಲಿದೆ. ವೈಭವೀಕರಣ ಇಲ್ಲ ಕೃತಕತೆಯಂತೆ ಕಂಡಾಗ ಪ್ರಶ್ನೆಗೊಳಪಡುತ್ತದೆ. ಅಡುಗೆಮನೆಯಿಂದ ಆರಂಭವಾದ ಹೆಣ್ಣಿನ ಶೋಷಣೆ ಆದರ್ಶದ ನೆಪದಲ್ಲಿ ಹೆಣ್ಣು ಸತಿ ಹೋಗುವ ಅಮಾನುಷತೆ ಗಂಡಿಗೆ ಬಳುವಳಿ. ಬೀಸುಕಲ್ಲಿನಿಂದ ಆರಂಭವಾದ ಬದುಕು ಮತ್ತದೇ ಮಾಸ್ತಿಗಲ್ಲಿನಲ್ಲಿ ಅಂತ್ಯವಾಗುವ ಧಾರುಣತೆ ಗಂಡಿನ ಕ್ರೌರ್ಯಕ್ಕೆ ಹಿಡಿದ ಕನ್ನಡಿ. ಎರಡೂ ಒತ್ತಾಯ ಪೂರ್ವಕವೇ. ಬಿಡುಗಡೆ ಬಯಸುವ ಹಂಬಲ ಹೆಣ್ಣಿನದಾದರೆ ಬಂಧಿಸುವ ಹುನ್ನಾರ ಗಂಡಿನದು. ವ್ಯವಸ್ಥೆಗೆ ಸಿಲುಕಿಸುವವರಿರುವಾಗ ವ್ಯವಧಾನವಿನ್ನೆಲ್ಲಿ?

"ಉಸಿರಾಟಲು ನಾವು ಗಾಳಿಯು ಬೇಕೆಂದು
ಬೀದಿಗೆ ಬಂದರೆ ಹಾದರಗಿತ್ತೆಂದು ಪಟ್ಟವ ಕಟ್ಟಿದರು
ಸೂಳ್ಯಾಗಿ ಸೇವೆ ಮಾಡಲು ಬಿಟ್ಟರು
ದೇವಾದಾಸಿಯೆಂದು ಮೀಸಲಾಗಿಟ್ಟರು
ಇಷ್ಟೆಲ್ಲ ಸಹಿಸಿ ನಗುನಗುತ್ತಿದ್ದರೆ
ದೇವತೆ ಎಂದು ಕೊಂದುಬಿಟ್ಟರು ತಾಯಿ.
ಎದ್ದೇಳು ಸಾಕಿನ್ನು" [೧೨೧]

ಆರೋಪಕ್ಕಿಂತ ವ್ಯವಸ್ಥೆಯ ಮೇಲಿನ ಸಿಟ್ಟು ಇಲ್ಲಿದೆ. 'ಕ್ಷಮಯಾ ಧರಿತ್ರಿ' ಎಂದು ಪಟ್ಟ ಕಟ್ಟುವಾಗಿನ ಸಂತಸ ಅವಳ ಬಯಕೆಯ ಪೂರೈಕೆಗೆ ಅವಕಾಶ ಕೊಡುವಲ್ಲಿ ಮೂಕವಾಗುತ್ತದೆ. ಇದು ಹೆಣ್ಣನ್ನು ರೂಪಿಸಿದ, ಅವಳನ್ನು ತಿದ್ದಿದ ಬಗೆಯನ್ನು ಅನಾವರಣಗೊಳಿಸುತ್ತದೆ. ತಲೆಮಾರಿನ ತಳಮಳ, ಹಪಹಪಿಕೆ, ಹೆಣ್ಣಿಗಾದ ಅವಮಾನ

ಎಲ್ಲವೂ ಹೆಣ್ಣಿನಿಂದಲೇ ಸಿಡಿಯುತ್ತದೆ. ಇಲ್ಲಿ ಹೆಣ್ಣೇ ಒಂದು ಪ್ರತಿಮೆಯಾಗಿ ನಿಲ್ಲುತ್ತಾಳೆ. ಆ ಮೂಲಕ ತನ್ನವರಿಗಾದ ನೋವು ಮುಂದಿನ ಪೀಳಿಗೆಗೆ ಎಚ್ಚರದ ಸಂದೇಶವಾಗಲೆಂಬ ಅರಿವಿದೆ. ಇಂತಹ ದುಷ್ಟ ಪದ್ಧತಿಗಳು ಇಂದು ಕಣ್ಮರೆಯಾಗುತ್ತಿರುವ ಕಾಲದಲ್ಲಿ ಮತ್ತೊಂದು ರೀತಿಯ ಸಂಕಷ್ಟಗಳು ಎದುರಾಗುವ ಅರಿವಿದೆ. ಸಮಾನತೆಯ ಅಂಶ ಧರ್ಮದಿಂದ ಆಚೆಗಿರಬೇಕೆಂಬ ಜ್ಞಾನವೂ ಜಾಗೃತವಾಗಿದೆ. ಅಸ್ಮಿತೆಯ ಅರಿವಾದಾಗ ನಾನೆಂಬುದು ಪ್ರತಿಮೆಯಾಗಿ ಬದುಕಿನ ದಾರಿಯನ್ನು ಹದಗೊಳಿಸುತ್ತದೆ. ಅದಮ್ಯ ಜೀವನೋತ್ಸಾಹ ಪ್ರತಿ ಕ್ಷಣದಲ್ಲೂ ಚಿಗುರೊಡೆಯುತ್ತದೆ.

"ಮಣ್ಣ ಒಡಲಲಿ ಬಿದ್ದ ಬೀಜ
ಬಿಸಿ ಉಂಡು ಹದಗೊಂಡು
ಹಸಿರುಟ್ಟು ಹೊರಬರುವಂತೆ
ನಿನ್ನೊಡಲ ಬಿಡಿ ಅಪ್ಪುಗೆಯಲಿ
ಅರಳಬೇಕು ನಾನು.
ಮಣ್ಣ ಮೇಲಿನ ಬೇಲಿಯಾಚೆಯ ಹೂವಿಗೂ
ಬದುಕುಂಟು ಭಾವವುಂಟು
ಚದುರಿದ ಕನಸುಗಳು ಹದಗೆಟ್ಟ ಮನಸುಗಳ
ಬಾಂಧವ್ಯದ ಬೆಸುಗೆಗೆ ದಿಕ್ಸೂಚಿಯಗಿ
ನನ್ನವರ ಸಿರಿ ಮೊಗದಲಿ ಸೊಬಗ
ತುಂಬ ಬೇಕು ನಾನು" [೨೨]

ಇಲ್ಲಿನ ಸ್ಥಾಯಿ ಭಾವ ಹೆಣ್ಣೇ ಆದರೂ ಸಾಮುದಾಯಿಕ ಪ್ರಜ್ಞೆ ಒಟ್ಟಂದದಲ್ಲಿ ಚಿಗುರೊಡೆಯುತ್ತದೆ. ಪ್ರಕೃತಿಗೆ ದೊರೆತ ಸ್ವಚ್ಛಂದ ಬದುಕು ತನಗೇಕೆ ಇಲ್ಲ? ಎಂಬ ಪ್ರಶ್ನೆಗಳನ್ನೆತ್ತುತ್ತಲೇ ಸಾಮೂಹಿಕ ಪ್ರಜ್ಞೆಯಲ್ಲಿ ಲೀನವಾಗುತ್ತದೆ. ಆ ಮೂಲಕ ಸಾಮಾಜಿಕ ಆಶಯದ ಸತ್ಯವನ್ನು ತೆರೆದು ತೋರಿಸುತ್ತದೆ. ಇಲ್ಲಿ ಎಲ್ಲ ಸಾಲುಗಳಲ್ಲೂ ಒಂದೊಂದು ಪ್ರತಿಮೆ ತನ್ನದೇ ಆದ ನೆಲೆಗಟ್ಟಿನಲ್ಲಿ ತೆರೆದುಕೊಳ್ಳುತ್ತದೆ. ಹೆಣ್ಣು ಸ್ಥಾಯಿ ಭಾವಕ್ಕೆ ಸ್ಫೂರ್ತಿಯ ಪ್ರತಿಮೆಯೆ ವಿನಃ ಅವಳ ಸಂಕಟ, ನೋವು ಹತಾಷೆ ಮುಂತಾದುವುಗಳು ಸಂಚಾರಿಗಳಾಗಿ ಮುಕ್ತತೆ ಬಯಸುವತ್ತ ಹೆಜ್ಜೆ ಹಾಕುತ್ತವೆ. ಇಲ್ಲಿ ರಚಿತಗೊಂಡ ನಿಸರ್ಗ ಹೆಣ್ಣಿನ ಸಂಕಟ ಮತ್ತು ತಲ್ಲಣಗಳನ್ನು ಪ್ರತಿನಿಧಿಸುವ ಆಮೂಲಕ ಪ್ರತಿಧ್ವನಿಸುವ ಪ್ರತಿಮೆಗಳೂ ಹೌದು.

ಬದುಕು ಪ್ರತಿಯೊಬ್ಬರ ಜೀವನದ ಕನ್ನಡಿ. ಇಲ್ಲಿ ಉಳಿದವೆಷ್ಟೋ ಕಳೆದವೆಷ್ಟೋ ಇವುಗಳ ನಡುವಿನ ಆತ್ಮ ವಿಮರ್ಶೆ ಗಂಡು ಹೆಣ್ಣಿನ ಜೀವನದಲ್ಲಿನ ಬೆಸುಗೆಯಂತೆ ಆತ್ಮ ವಿಮರ್ಶೆಗೆ ಆಧ್ಯಾತ್ಮದ ತೆಳು ಪದರ ದೊರೆತರೆ ಪ್ರತಿಯೊಬ್ಬರಿಗೂ ಬದುಕಿನ ಕನ್ನಡಿ ತೆರೆದುಕೊಳ್ಳುತ್ತದೆ. ಸ್ವಗತವೂ ಪ್ರತಿಮೆಯಾಗುತ್ತದೆ. ಆ ಮೂಲಕ ಅವಲೋಕನ ಮತ್ತೊಂದು ಲೋಕಕ್ಕೆ ಕರೆಯುತ್ತದೆ. ಬಹುಶಃ ಎಂಬ ಊಹೆಯೆ ಪ್ರತಿಮೆಯಾಗಿ ನಿಲ್ಲುವುದು ಇಲ್ಲಿಯೆ.

“ಬಹುಃಶ
ಬಯಸಿದ್ದೆಲ್ಲವೂ ಸಿಕ್ಕಿಬಿಟ್ಟಿದ್ದರೆ
ಸದಾ ತುಡಿವ ಆತ್ಮಗಳೊಂದಿಗಿನ ಬಂಧ
ಗೌಣವಾಗಿ ಬಿಡುತ್ತಿತ್ತೇನೋ,
ಕಾಯುವಿಕೆಯ ಸ್ವಾದ
ಕಳೆದುಕೊಂಡ ಪ್ರೇಮವೊಂದರ
ನಿರಂತರ ಕಾಡುವಿಕೆ
ನನ್ನೊಳಗೆ ಬೇರೂರುತ್ತಿರಲಿಲ್ಲವೇನೋ” [೧೨೩]

ಪ್ರತಿಮೆಗಳ ಆಗರ ಆತ್ಮ ನಿವೇದನೆ. ಇದು ಏಕವ್ಯಕ್ತಿ ನೆಲೆಯಲ್ಲಿ ನಿಲ್ಲದೆ ಸಮುದಾಯದ ಚಲನಶೀಲ ತುಡಿತವನ್ನು ಪ್ರತಿನಿಧಿಸುತ್ತದೆ. ಮನುಷ್ಯ ಸಹಜವಾದ ಕ್ರಿಯೆಗಳು ಸ್ವ ಆತ್ಮವಿಮರ್ಶೆಯೊಂದಿಗೆ ಸಾರ್ಥಕತೆ ಪಡೆಯುತ್ತದೆ. ಇದು ನಿರಂತರವಾಗಿ ಪ್ರತಿ ಹಂತದಲ್ಲೂ ನಡೆಯುವ ಕ್ರಿಯೆಯೂ ಹೌದು. ಆದರೆ ಯಾವುದೇ ಉತ್ಪ್ರೇಕ್ಷೆ ಇಲ್ಲದೆ, ಹತಾಷೆ ಇಲ್ಲದೆ ಜೀವನ ದರ್ಶಿಸುತ್ತದೆ.

ಯುಗಾದಿ ಹಲವು ಹೊಸತನಗಳ ಸಂಕೇತ. ಹೊಸ ಹುಟ್ಟು, ನಾವಿನ್ಯತೆ ಬದುಕಿನ ಬದಲಾವಣೆಯ ಹಾದಿಯಲ್ಲಿ ಇದಿರುತ್ತದೆ. ಹಸಿವು ಮತ್ತು ಬದುಕು ಪ್ರತಿಮೆಗಳಾಗಿ ಹತಾಶೆ ಮತ್ತು ನಿರೀಕ್ಷೆಗಳ ಕೇಂದ್ರ ಬಿಂದುಗಳಾಗುತ್ತವೆ.

“ಬೇವು ಬೆಲ್ಲದಂತೆ ಬದುಕು
ನನ್ನವ್ವನ ಸವೆದ ಪಾದಗಳಲ್ಲಿ
ಮೂಡಿದ ಪ್ರತೀ ಬಿರುಕಿಗೂ
ಒಂದೊಂದು ಯುಗಾದಿಯ ಬರೆ ಇದೆ
ಅಪ್ಪನ ಹಣೆಯ ಸುಕ್ಕುಗಳಲ್ಲಷ್ಟೇ
ಆಚರಿಸದ ಹಬ್ಬಗಳ ನೆನಪಿದೆ......
ಈ ಯುಗಾದಿಗಾದರೂ ಹೊಸದೊಂದು ಅಂಗಿಕೊಳ್ಳಬೇಕೆಂಬ
ನನ್ನಣ್ಣನ ಕನಸು
ಅದೆಷ್ಟೋ ಯುಗಾದಿಗಳಿಂದಲೂ ಹಾಗೇ ಇದೆ.
ಬೆವರಿಳಿಸಿ ದುಡಿವ ಈ ದಿನಗಳಲ್ಲು
ಬೇವಾಗಿಯಷ್ಟೇ ನೆನಪಿರುವ
ಆಯುಗಾದಿ ಕಾಡುತ್ತವೆ.........” [೧೨೪]

‘ಯುಗಾದಿ’ ಪ್ರತಿಮೆ ಪ್ರತಿಯೊಬ್ಬರ ಜೀವನ ಚಕ್ರವನ್ನು, ಕಳೆದ ಬಾಲ್ಯವನ್ನು ಮತ್ತೊಮ್ಮೆ ತಿರುಗಿಸುತ್ತದೆ. ಹಸಿವು, ಬಡತನ, ಅಸಮಾನತೆ, ಆಕ್ರಂದನ, ಹತಾಷೆ, ನಿರೀಕ್ಷೆ, ಸಿಟ್ಟು,

ಸೆಡವು, ಆಸೆ ಎಲ್ಲದರ ಆಗರ ಯುಗಾದಿ. ತಲೆಮಾರಿನ ಸಂಕಟ ಮತ್ತು ಸಂಭ್ರಮಗಳು ಕೆಳ ಮತ್ತು ಮಧ್ಯಮ ವರ್ಗದ ಜನರಲ್ಲಿ ಹೇಗೆ ಹೊಯ್ದಾಟ ನಡೆಸುತ್ತವೆಂಬುದಕ್ಕೆ ನಿದರ್ಶನ. ದುಡಿಮೆ ಸ್ವಂತಿಕೆಯಾಗುವ ಬದಲು ನಿರೀಕ್ಷೆಗಳ ಪಟ್ಟಿಯಲ್ಲಿ ಅದೂ ಸೇರುತ್ತದೆ. ಜೀವನದ ಪ್ರತಿಬಿಂಬ ಯುಗಾದಿ. ಪ್ರತಿಮೆಯ ಸಂಕೇತವೂ ಹೌದು.

ಒಟ್ಟಾರೆಯಾಗಿ ಈ ಸಾಮಾಜಿಕ ಬದಲಾವಣೆ ಎಂಬುದು ನಿರಂತರ ಕ್ರಿಯೆ. ಈ ಕ್ರಿಯೆ ಹೆಚ್ಚು ಚಲನಶೀಲವಾದಾಗಲೇ ಸಮಾಜದ ಸಂರಚನೆ ವ್ಯವಸ್ಥಿತ ರೂಪದಲ್ಲಿ ಮೂಡಲು ಸಹಕಾರಿಯಾಗುತ್ತದೆ. ಇದು ಶಿಕ್ಷಣ, ಕುಟುಂಬ, ಜನರ ಜೀವನ ಮಾದರಿ, ಆಲೋಚನಾ ವಿಧಾನ ಇತ್ಯಾದಿಗಳಲ್ಲಿ ಕಂಡು ಬಂದಾಗ ಮಾತ್ರ ಬದಲಾವಣೆ ಎಂಬುದು ಅರ್ಥಗರ್ಭಿತವಾಗುತ್ತದೆ. ಸಾಮಾಜಿಕ ಬದಲಾವಣೆ ಎಂಬುದು ಸಾರ್ವತ್ರಿಕವಾದುದು. ಇದು ನಿರಂತರವಾಗಿ ತನ್ನ ಪ್ರಭಾವವನ್ನು ಬೀರುತ್ತಿರುತ್ತದೆ. ಆದ್ದರಿಂದಲೇ ಇಂದು ಕ್ರಾಂತಿ, ಹೋರಾಟಗಳು, ಹೊಸ ಬಿರುಸನ್ನು ಪಡೆದಿವೆ. ನಾವು ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ೧೯೭೦ರಿಂದೀಚೆಗೆ ಆದ ಬದಲಾವಣೆ ಸಮಾಜದಲ್ಲಿ ಎಂತಹ ಬಿರುಸನ್ನುಂಟು ಮಾಡಿತು ಮತ್ತು ಆಮೂಲಕ ಇದು ಸಾಹಿತ್ಯದಲ್ಲಿ ತಂದ ಹೊಸ ಮಾರ್ಪಾಡುಗಳು ಸಮಾಜದ ಸುಶಿಕ್ಷಿತ ಜನ ಹೇಗೆ ಒಪ್ಪಿಕೊಂಡರು ಎಂಬ ಅಂಶವನ್ನು ತಿಳಿಯುವುದಾಗಿದೆ. ಬಹಳ ಮುಖ್ಯವಾಗಿ ಮಹಿಳೆಯಿಂದಾದ ಅಕ್ಷರ ಕ್ರಾಂತಿ ತಲೆಮಾರುಗಳಿಂದ ಕಂಡುಕೊಂಡ ಬದುಕಿನ ಹೊಸನೆಲೆ ಮತ್ತು ಆಲೋಚನೆಗಳು ಇಲ್ಲಿಯವರೆಗೂ ಎಂತಹ ಪರಿಣಾಮಗಳನ್ನುಂಟು ಮಾಡಿವೆ ಎಂಬುದು. ಸಾಹಿತ್ಯದಲ್ಲಿ ಮಹಿಳಾ ಸಾಹಿತ್ಯದ ರೂಪುರೇಷೆ, ಅಂದರೆ ಮಹಿಳಾ ಕಾವ್ಯದ ಉತ್ಕೃಷ್ಟತೆ ಹಾಗೂ ಸಾಮಾಜಿಕ ಕಳಕಳಿಯನ್ನು ಕವಿತೆಗಳಿಂದ ಅರ್ಥೈಸುವುದಾಗಿದೆ. ಒಂದು ಕವಿತೆ ಕಟ್ಟಿಕೊಡುವ ಸಮುದಾಯದ ಚಿತ್ರಣ ಹೇಗೆ ಸಮಾಜದ ಬದಲಾವಣೆಗೆ ದಾರಿದೀಪವಾಗುತ್ತದೆ ಎಂಬುದನ್ನು ಆಧುನಿಕ ಕನ್ನಡ ಮಹಿಳಾ ಕಾವ್ಯದ ಅಧ್ಯಯನ ಅರಿವಾಗಿಸಿತು ಹಾಗೂ ಕಾಲಘಟ್ಟವನ್ನು ಗಣನೆಗೆ ತೆಗೆದುಕೊಂಡಾಗ ಪ್ರತಿಯೊಬ್ಬ ಕವಿಯ ಆಲೋಚನೆ ಭಿನ್ನವಾದರೂ ಎಲ್ಲರ ಆಶಯ ಒಂದೇ. ಅದುವೇ ಸಾಮಾಜಿಕ ಬದಲಾವಣೆ. ಆದ್ದರಿಂದ ಆಧುನಿಕ ಕನ್ನಡ ಮಹಿಳಾ ಕಾವ್ಯವು ಬದಲಾವಣೆಯ ಹೊಸ ದಿಗಂತಕ್ಕೆ ದಾರಿದೀಪ.

ಉಲ್ಲೇಖಗಳು

೧. ಹೇಮಾಪಟ್ಟಣಶೆಟ್ಟಿ, ಕಣ್ಣುಗಳಲ್ಲಿಕನಸತುಂಬಿ, ೧೯೯೩, ಪು.ಸಂ.೭

೨. ಹೇಮಾಪಟ್ಟಣಶೆಟ್ಟಿ, ಕಣ್ಣುಗಳಲ್ಲಿ ಕನಸತುಂಬಿ, ೧೯೯೩ ಪು.ಸಂ.೮

೩. ಹೇಮಾಪಟ್ಟಣಶೆಟ್ಟಿ ; ಕಣ್ಣುಗಳಲ್ಲಿ ಕನಸತುಂಬಿ, ೧೯೯೩, ಪು.ಸಂ.೩೯

೪. ಹೇಮಾಪಟ್ಟಣಶೆಟ್ಟಿ ; ಕಣ್ಣುಗಳಲ್ಲಿ ಕನಸತುಂಬಿ, ೧೯೯೩, ಪು.ಸಂ.೪೦

೫. ಸುಕನ್ಯಾಮಾರುತಿ; ನಾನೆಂಬ ಮಾಯೆ (ಸ). ೧೯೭೮-೨೦೦೭ ಪು.ಸಂ.೫೯

೬ ಸುಕನ್ಯಾಮಾರುತಿ; ನಾನೆಂಬ ಮಾಯೆ (ಸ). ೧೯೭೮-೨೦೦೭ ಪು.ಸಂ.೬೦

೭ ಸುಕನ್ಯಾಮಾರುತಿ; ನಾನೆಂಬ ಮಾಯೆ (ಸ). ೧೯೭೮-೨೦೦೭ ಪು.ಸಂ.೧೧೨

೮. ಮಾಲತಿಪಟ್ಟಣಶೆಟ್ಟಿ; ಮುನ್ನುಡಿಯಿಂದ, ೧೯೯೯ . ಪು.ಸಂ.೮

೯. ಮಾಲತಿಪಟ್ಟಣಶೆಟ್ಟಿ; ಮೌನಕರಗುವ ಹೊತ್ತು, ೧೯೯೯. ಪು.ಸಂ.೪೪

೧೦. ಮಾಲತಿಪಟ್ಟಣಶೆಟ್ಟಿ, ಮೌನಕರಗುವ ಹೊತ್ತು, ೧೯೯೯. ಪು.ಸಂ.೪೫

೧೧. ಸವಿತಾನಾಗಭೂಷಣ; ಕಾಡುಲಿಲ್ಲಿ ಹೂಗಳು, ೨೦೦೯. ಪು.ಸಂ.೧೨೭

೧೨. ಸವಿತಾನಾಗಭೂಷಣ, (ಸಮಗ್ರ) ಮುನ್ನುಡಿಯಿಂದ, ೨೦೦೯. ಪು.ಸಂ.೧೨

೧೩. ಸವಿತಾನಾಗಭೂಷಣ,; ದರುಶನ . ೨೦೦೯ ಪು.ಸಂ.೧೬

೧೪. ವಿನಯಾ, ಬಾಯಾರಿಕೆ . ೨೦೦೨. ಪು.ಸಂ.೨೬

೧೫. ವಿನಯಾ,; ಬಾಯಾರಿಕೆ . ೨೦೦೨. ಪು.ಸಂ.೨೯

೧೬. ವಿನಯಾ,; ಬಾಯಾರಿಕೆ . ೨೦೦೨. ಪು.ಸಂ.೩೦

೧೭. ಎಸ್.ಮಾಲತಿ, ಹೇಳಬೇಕೆನಿಸಿದ್ದು, ೨೦೦೧. ಮುನ್ನುಡಿಯಿಂದ

೧೮. ಎಸ್.ಮಾಲತಿ, ಹೇಳಬೇಕೆನಿಸಿದ್ದು . ೨೦೦೧. ಪು.ಸಂ.೧

೧೯. ಎಸ್.ಮಾಲತಿ,; ಹೇಳಬೇಕೆನಿಸಿದ್ದು . ೨೦೦೧. ಪು.ಸಂ.೨೩

೨೦. ಎಸ್.ಮಾಲತಿ,; ಹೇಳಬೇಕೆನಿಸಿದ್ದು . ೨೦೦೧. ಪು.ಸಂ.೨೪

೨೧. ಎಸ್.ಮಾಲತಿ,; ಹೇಳಬೇಕೆನಿಸಿದ್ದು . ೨೦೦೧. ಪು.ಸಂ.೯೯

೨೨. ಎಸ್.ಮಾಲತಿ,; ಹೇಳಬೇಕೆನಿಸಿದ್ದು . ೨೦೦೧. ಪು.ಸಂ.೧೦೦

೨೩. ಚೇತನಾತೀರ್ಥಹಳ್ಳಿ, ಶಬರಿಯ ಅವಸರ, ೨೦೧೪. ಬೆನ್ನುಡಿಯಿಂದ

೨೪. ಚೇತನಾತೀರ್ಥಹಳ್ಳಿ, ಶಬರಿಯ ಅವಸರ, ೨೦೧೪. ಪು.ಸಂ.೩೩

೨೫. ಚೇತನಾ ತೀರ್ಥಹಳ್ಳಿ, ಶಬರಿಯ ಅವಸರ, ೨೦೧೪. ಪು.ಸಂ.೩೪

೨೬. ರಾಮಲಿಂಗಪ್ಪ.ಟಿ.ಬೇಗೂರು, ಮಹಿಳೆ-ಚರಿತ್ರೆ ಪುರಾಣ, ೨೦೧೪. ಪು.ಸಂ.೨೨

೨೭. ಮಾಲತಿ ಪಟ್ಟಣಶೆಟ್ಟಿ, ಮೌನಕರಗುವ ಹೊತ್ತು, ೧೯೯೯. ಪು.ಸಂ.೨

೨೮. ಮಾಲತಿ ಪಟ್ಟಣಶೆಟ್ಟಿ, ಮೌನಕರಗುವ ಹೊತ್ತು, ೧೯೯೯. ಪು.ಸಂ.೨

೨೯. ಮಾಲತಿ ಪಟ್ಟಣಶೆಟ್ಟಿ, ಮೌನಕರಗುವ ಹೊತ್ತು, ೧೯೯೯. ಪು.ಸಂ.೨೪

೩೦. ಮಾಲತಿ ಪಟ್ಟಣಶೆಟ್ಟಿ, ಮೌನಕರಗುವ ಹೊತ್ತು, ೧೯೯೯. ಪು.ಸಂ.೨೫

೩೧. ಮಾಲತಿ ಪಟ್ಟಣಶೆಟ್ಟಿ, ಮೌನಕರಗುವ ಹೊತ್ತು, ೧೯೯೯. ಪು.ಸಂ.೩೮

೩೨. ಸವಿತಾ ನಾಗಭೂಷಣ, ದರುಶನ . ೨೦೦೯ ಪು.ಸಂ.೬೦

೩೩. ಸವಿತಾ ನಾಗಭೂಷಣ, ದರುಶನ . ೨೦೦೯ ಪು.ಸಂ.೬೦

೩೪. ಸವಿತಾ ಬನ್ನಾಡಿ,	ಅವಳಕವಿತೆ ,	೨೦೧೫-೧೬	ಬೆನ್ನುಡಿಯಿಂದ
೩೫. ವಿನಯಾ,	ಬಾಯಾರಿಕೆ,	೨೦೦೨,	ಪು.ಸಂ.೧೮
೩೬. ವಿನಯಾ,	ಬಾಯಾರಿಕೆ,	೨೦೦೨,	ಪು.ಸಂ.೨೦
೩೭. ಸುಕನ್ಯಾ ಮಾರುತಿ,	ನಾನೆಂಬ ಮಾಯೆ,	೧೯೭೮-೨೦೦೭	ಬೆನ್ನುಡಿ
೩೮. ಸುಕನ್ಯಾ ಮಾರುತಿ,	ನಾನೆಂಬ ಮಾಯೆ,	೧೯೭೮-೨೦೦೭	ಪು.ಸಂ.೨೨
೩೯. ಸುಕನ್ಯಾ ಮಾರುತಿ,	ನಾನೆಂಬ ಮಾಯೆ,	೧೯೭೮-೨೦೦೭	ಪು.ಸಂ.೨೨
೪೦. ಸುಕನ್ಯಾ ಮಾರುತಿ,	ನಾನೆಂಬ ಮಾಯೆ,	೧೯೭೮-೨೦೦೭	ಪು.ಸಂ.೮೭
೪೧. ಸುಕನ್ಯಾ ಮಾರುತಿ,	ನಾನೆಂಬ ಮಾಯೆ,	೧೯೭೮-೨೦೦೭	ಪು.ಸಂ.೮೮
೪೨. ಚೇತನಾ ತೀರ್ಥಹಳ್ಳಿ,	ಶಬರಿಯ ಅವಸರ,	೨೦೧೪,	ಪು.ಸಂ.೨೬
೪೩. ಚೇತನಾ ತೀರ್ಥಹಳ್ಳಿ,	ಶಬರಿಯ ಅವಸರ,	೨೦೧೪,	ಪು.ಸಂ.೩೫
೪೪. ಚೇತನಾ ತೀರ್ಥಹಳ್ಳಿ,	ಶಬರಿಯ ಅವಸರ,	೨೦೧೪,	ಪು.ಸಂ.೪೦
೪೫. ಚೇತನಾ ತೀರ್ಥಹಳ್ಳಿ,	ಶಬರಿಯ ಅವಸರ,	೨೦೧೪,	ಪು.ಸಂ.೪೩
೪೬. ಚೇತನಾ ತೀರ್ಥಹಳ್ಳಿ,	ಶಬರಿಯ ಅವಸರ,	೨೦೧೪,	ಪು.ಸಂ.೪೩
೪೭ ಚೇತನಾ ತೀರ್ಥಹಳ್ಳಿ,	ಶಬರಿಯ ಅವಸರ,	೨೦೧೪,	ಪು.ಸಂ.೪೪
೪೮. ರಾಮಲಿಂಗಪ್ಪ.ಟಿ.ಬೇಗೂರು,	ಮಹಿಳೆ-ಚರಿತ್ರೆ ಪುರಾಣ,	೨೦೧೪,	ಪು.ಸಂ.೨೨
೪೯. ರಾಮಲಿಂಗಪ್ಪ.ಟಿ.ಬೇಗೂರು,	ಮಹಿಳೆ-ಚರಿತ್ರೆ ಪುರಾಣ,	೨೦೧೪,	ಪು.ಸಂ.೫೪
೫೦. ರಾಮಲಿಂಗಪ್ಪ.ಟಿ.ಬೇಗೂರು,	ಮಹಿಳೆ-ಚರಿತ್ರೆ ಪುರಾಣ,	೨೦೧೪,	ಪು.ಸಂ.೫೮
೫೧. ಹೇಮಾ ಪಟ್ಟಣಶೆಟ್ಟಿ ,	ಕಣ್ಣುಗಳಲ್ಲಿ ಕನಸತುಂಬಿ,	೧೯೯೩,	ಪು.ಸಂ.೬೬
೫೨. ಹೇಮಾ ಪಟ್ಟಣಶೆಟ್ಟಿ ,	ಕಣ್ಣುಗಳಲ್ಲಿ ಕನಸತುಂಬಿ,	೧೯೯೩,	ಪು.ಸಂ.೬೭
೫೩. ಹೇಮಾ ಪಟ್ಟಣಶೆಟ್ಟಿ ,	ಕಣ್ಣುಗಳಲ್ಲಿ ಕನಸತುಂಬಿ,	೧೯೯೩,	ಪು.ಸಂ.೪೮
೫೪. ಹೇಮಾ ಪಟ್ಟಣಶೆಟ್ಟಿ ,	ಕಣ್ಣುಗಳಲ್ಲಿ ಕನಸತುಂಬಿ,	೧೯೯೩,	ಪು.ಸಂ.೪೯
೫೫. ಹೇಮಾ ಪಟ್ಟಣಶೆಟ್ಟಿ ,	ಕಣ್ಣುಗಳಲ್ಲಿ ಕನಸತುಂಬಿ,	೧೯೯೩,	ಪು.ಸಂ.೧೬
೫೬ ಹೇಮಾ ಪಟ್ಟಣಶೆಟ್ಟಿ ,	ಕಣ್ಣುಗಳಲ್ಲಿ ಕನಸತುಂಬಿ,	೧೯೯೩,	ಪು.ಸಂ.೧೭
೫೭ ಸವಿತಾ ನಾಗಭೂಷಣ,	ದರುಶನ ,	೨೦೦೯	ಪು.ಸಂ.೨೭
೫೮. ಸವಿತಾ ನಾಗಭೂಷಣ,	ದರುಶನ ,	೨೦೦೯	ಪು.ಸಂ.೨೮
೫೯. ಸವಿತಾ ನಾಗಭೂಷಣ,	ದರುಶನ ,	೨೦೦೯	ಪು.ಸಂ.೨೯
೬೦. ಡಿ.ಬಿ.ರಜಿಯಾ ,	ಆಯ್ದ ಕವಿತೆಗಳು	೨೦೧೦	ಪು.ಸಂ.೧೧
೬೧. ಡಿ.ಬಿ.ರಜಿಯಾ,	ಆಯ್ದ ಕವಿತೆಗಳು	೨೦೧೦	ಪು.ಸಂ.೧೯
೬೨. ವಿನಯಾ,	ಬಾಯಾರಿಕೆ,	೨೦೦೨,	ಪು.ಸಂ.೩೨
೬೩. ವಿನಯಾ,	ಬಾಯಾರಿಕೆ,	೨೦೦೨,	ಪು.ಸಂ.೯
೬೪. ವಿನಯಾ,	ಬಾಯಾರಿಕೆ,	೨೦೦೨,	ಪು.ಸಂ.೧೦
೬೫. ವಿನಯಾ,	ಬಾಯಾರಿಕೆ,	೨೦೦೨,	ಪು.ಸಂ.೧೮
೬೬ ವಿನಯಾ,	ಬಾಯಾರಿಕೆ,	೨೦೦೨,	ಪು.ಸಂ.೨೦
೬೭ ಸುಕನ್ಯಾ ಮಾರುತಿ,	ನಾನೆಂಬ ಮಾಯೆ,	೧೯೭೮-೨೦೦೭	ಪು.ಸಂ.೧೪೧

೬೮.	ಸುಕನ್ಯಾ ಮಾರುತಿ,	ನಾನೆಂಬ ಮಾಯೆ,	೧೯೭೮-೨೦೦೭	ಪು.ಸಂ.೧೪೨
೬೯.	ಸುಕನ್ಯಾ ಮಾರುತಿ,	ನಾನೆಂಬ ಮಾಯೆ,	೧೯೭೮-೨೦೦೭	ಪು.ಸಂ.೨೩೪
೭೦.	ಚೇತನಾ ತೀರ್ಥಹಳ್ಳಿ,	ಶಬರಿಯ ಅವಸರ,	೨೦೧೪,	ಪು.ಸಂ.೧೭
೭೧.	ಚೇತನಾ ತೀರ್ಥಹಳ್ಳಿ,	ಶಬರಿಯ ಅವಸರ,	೨೦೧೪,	ಪು.ಸಂ.೧೮
೭೨.	ಚೇತನಾ ತೀರ್ಥಹಳ್ಳಿ,	ಶಬರಿಯ ಅವಸರ,	೨೦೧೪,	ಪು.ಸಂ.೨೦
೭೩.	ಚೇತನಾ ತೀರ್ಥಹಳ್ಳಿ,	ಶಬರಿಯ ಅವಸರ,	೨೦೧೪,	ಪು.ಸಂ.೨೦
೭೪.	ಚೇತನಾ ತೀರ್ಥಹಳ್ಳಿ,	ಶಬರಿಯ ಅವಸರ,	೨೦೧೪,	ಪು.ಸಂ.೪೫
೭೫.	ಚೇತನಾ ತೀರ್ಥಹಳ್ಳಿ,	ಶಬರಿಯ ಅವಸರ,	೨೦೧೪,	ಪು.ಸಂ.೪೬
೭೬.	ಚೇತನಾ ತೀರ್ಥಹಳ್ಳಿ,	ಶಬರಿಯ ಅವಸರ,	೨೦೧೪,	ಪು.ಸಂ.೭೯
೭೭.	ಹೇಮಾ ಪಟ್ಟಣಶೆಟ್ಟಿ ,	ಕಣ್ಣುಗಳಲ್ಲಿ ಕನಸತುಂಬಿ,	೧೯೯೩,	ಪು.ಸಂ.೧೧
೭೮.	ಹೇಮಾ ಪಟ್ಟಣಶೆಟ್ಟಿ ,	ಕಣ್ಣುಗಳಲ್ಲಿ ಕನಸತುಂಬಿ,	೧೯೯೩,	ಪು.ಸಂ.೧೨
೭೯.	ಹೇಮಾ ಪಟ್ಟಣಶೆಟ್ಟಿ ,	ಕಣ್ಣುಗಳಲ್ಲಿ ಕನಸತುಂಬಿ,	೧೯೯೩,	ಪು.ಸಂ.೧೨
೮೦.	ಹೇಮಾ ಪಟ್ಟಣಶೆಟ್ಟಿ ,	ಕಣ್ಣುಗಳಲ್ಲಿ ಕನಸತುಂಬಿ,	೧೯೯೩,	ಪು.ಸಂ.೧೩
೮೧.	ಡಿ.ಬಿ.ರಜಿಯಾ,	ಆಯ್ದ ಕವಿತೆಗಳು	೨೦೧೦	ಪು.ಸಂ.೧೬
೮೨.	ಹೆಚ್.ಎಸ್.ಶ್ರೀಮತಿ (ಸಂ)	ಮಹಿಳಾ ಸಾಹಿತ್ಯ ಚರಿತ್ರೆ	೨೦೦೬	ಮುನ್ನುಡಿ
೮೩.	ಹೆಚ್.ಎಸ್.ಶ್ರೀಮತಿ (ಸಂ)	ಮಹಿಳಾ ಸಾಹಿತ್ಯ ಚರಿತ್ರೆ	೨೦೦೬	ಪು.ಸಂ.೧೮
೮೪.	ಎಸ್.ಮಾಲತಿ,	ಹೇಳಬೇಕೆನಿಸಿದ್ದು ,	೨೦೦೧,	ಪು.ಸಂ.೨೧
೮೫.	ಎಸ್.ಮಾಲತಿ,	ಹೇಳಬೇಕೆನಿಸಿದ್ದು ,	೨೦೦೧,	ಪು.ಸಂ.೪೩
೮೬.	ಎಸ್.ಮಾಲತಿ,	ಹೇಳಬೇಕೆನಿಸಿದ್ದು ,	೨೦೦೧,	ಪು.ಸಂ.೪೪
೮೭.	ಎಂ.ಎಸ್.ಆಶಾದೇವಿ,	ನಡುವೆ ಸುಳಿವ ಆತ್ಮ,	೨೦೧೧	ಪು.ಸಂ.೮೮
೮೮.	ಸುಕನ್ಯಾ ಮಾರುತಿ,	ನಾನೆಂಬ ಮಾಯೆ,	೧೯೭೮-೨೦೦೭	ಪು.ಸಂ.೧೦೦
೮೯.	ಸುಕನ್ಯಾ ಮಾರುತಿ,	ನಾನೆಂಬ ಮಾಯೆ,	೧೯೭೮-೨೦೦೭	ಪು.ಸಂ.೧೦೧
೯೦.	ಸುಕನ್ಯಾ ಮಾರುತಿ,	ನಾನೆಂಬ ಮಾಯೆ,	೧೯೭೮-೨೦೦೭	ಪು.ಸಂ.೨೨೨
೯೧.	ಸುಕನ್ಯಾ ಮಾರುತಿ,	ನಾನೆಂಬ ಮಾಯೆ,	೧೯೭೮-೨೦೦೭	ಪು.ಸಂ.೨೨೩
೯೨.	ಸುಕನ್ಯಾ ಮಾರುತಿ,	ನಾನೆಂಬ ಮಾಯೆ,	೧೯೭೮-೨೦೦೭	ಪು.ಸಂ.೨೨೩
೯೩.	ಸವಿತಾ ನಾಗಭೂಷಣ,	ದರುಶನ .	೨೦೦೯	ಪು.ಸಂ.೧೩
೯೪.	ಸವಿತಾ ನಾಗಭೂಷಣ,	ದರುಶನ .	೨೦೦೯	ಪು.ಸಂ.೧೪
೯೫.	ಸವಿತಾ ನಾಗಭೂಷಣ,	ದರುಶನ .	೨೦೦೯	ಪು.ಸಂ.೧೭
೯೬.	ಸವಿತಾ ನಾಗಭೂಷಣ,	ದರುಶನ .	೨೦೦೯	ಪು.ಸಂ.೧೭
೯೭.	ಒ.ಎಲ್.ನಾಗಭೂಷಣಸ್ವಾಮಿ,	ವಿಮರ್ಶೆಯ ಪರಿಭಾಷೆ,	೧೯೯೮,	ಪು.ಸಂ.೪೬
೯೮.	ಒ.ಎಲ್.ನಾಗಭೂಷಣಸ್ವಾಮಿ,	ವಿಮರ್ಶೆಯ ಪರಿಭಾಷೆ,	೧೯೯೮,	ಪು.ಸಂ.೪೪
೯೯.	ಒ.ಎಲ್.ನಾಗಭೂಷಣಸ್ವಾಮಿ,	ವಿಮರ್ಶೆಯ ಪರಿಭಾಷೆ,	೧೯೯೮,	ಪು.ಸಂ.೪೩
೧೦೦.	ಹೇಮಾ ಪಟ್ಟಣಶೆಟ್ಟಿ ;	ಕಣ್ಣುಗಳಲ್ಲಿ ಕನಸತುಂಬಿ,	೧೯೯೩,	ಪು.ಸಂ.೩೦
೧೦೧.	ಹೇಮಾ ಪಟ್ಟಣಶೆಟ್ಟಿ ;	ಕಣ್ಣುಗಳಲ್ಲಿ ಕನಸತುಂಬಿ,	೧೯೯೩,	ಪು.ಸಂ.೩೨

೧೦೨.	ಹೇಮಾ ಪಟ್ಟಣಶೆಟ್ಟಿ ;	ಕಣ್ಣುಗಳಲ್ಲಿ ಕನಸತುಂಬಿ.	೧೯೯೩.	ಪು.ಸಂ.೩೬
೧೦೩.	ಹೇಮಾ ಪಟ್ಟಣಶೆಟ್ಟಿ ;	ಕಣ್ಣುಗಳಲ್ಲಿ ಕನಸತುಂಬಿ.	೧೯೯೩.	ಪು.ಸಂ.೩೭
೧೦೪.	ಸವಿತಾ ನಾಗಭೂಷಣ.	ದರುಶನ .	೨೦೦೯	ಪು.ಸಂ.೨೧
೧೦೫.	ಸವಿತಾ ನಾಗಭೂಷಣ.	ದರುಶನ .	೨೦೦೯	ಪು.ಸಂ.೨೨
೧೦೬.	ಸವಿತಾ ನಾಗಭೂಷಣ.	ದರುಶನ .	೨೦೦೯	ಪು.ಸಂ.೩೨
೧೦೭.	ಎಸ್.ಮಾಲತಿ.	ಹೇಳಬೇಕೆನಿಸಿದ್ದು.	೨೦೦೧	ಪು.ಸಂ.೬
೧೦೮.	ಎಸ್.ಮಾಲತಿ.	ಹೇಳಬೇಕೆನಿಸಿದ್ದು.	೨೦೦೧	ಪು.ಸಂ.೮
೧೦೯.	ಸುಕನ್ಯಾ ಮಾರುತಿ.	ನಾನೆಂಬ ಮಾಯೆ.	೧೯೭೮-೨೦೦೭	ಪು.ಸಂ.೧೨೫
೧೧೦.	ಸುಕನ್ಯಾ ಮಾರುತಿ.	ನಾನೆಂಬ ಮಾಯೆ.	೧೯೭೮-೨೦೦೭	ಪು.ಸಂ.೧೫೦
೧೧೧.	ಸುಕನ್ಯಾ ಮಾರುತಿ.	ನಾನೆಂಬ ಮಾಯೆ.	೧೯೭೮-೨೦೦೭	ಪು.ಸಂ.೧೫೧
೧೧೨.	ಸುಕನ್ಯಾ ಮಾರುತಿ.	ನಾನೆಂಬ ಮಾಯೆ.	೧೯೭೮-೨೦೦೭	ಪು.ಸಂ.೧೮೧
೧೧೩.	ಸುಕನ್ಯಾ ಮಾರುತಿ.	ನಾನೆಂಬ ಮಾಯೆ.	೧೯೭೮-೨೦೦೭	ಪು.ಸಂ.೧೮೨
೧೧೪.	ಕವಿತಾ ರೈ.	ಹಕ್ಕಿ ಹರಿವ ನೀರು.	೧೯೯೯	ಪು.ಸಂ.೨೪
೧೧೫.	ಕವಿತಾ ರೈ.	ಹಕ್ಕಿ ಹರಿವ ನೀರು.	೧೯೯೯	ಪು.ಸಂ.೨೬/೨೭
೧೧೬.	ಕವಿತಾ ರೈ.	ಹಕ್ಕಿ ಹರಿವ ನೀರು.	೧೯೯೯	ಪು.ಸಂ.೫೧
೧೧೭.	ಉಷಾ ಪಿ ರೈ.	ಹಕ್ಕಿ ಮತ್ತು ಗಿಡುಗ.	೨೦೦೪	ಪು.ಸಂ.೪/೫
೧೧೮.	ಉಷಾ ಪಿ ರೈ.	ಹಕ್ಕಿ ಮತ್ತು ಗಿಡುಗ.	೨೦೦೪	ಪು.ಸಂ.೧೮
೧೧೯.	ಉಷಾ ಪಿ ರೈ.	ಹಕ್ಕಿ ಮತ್ತು ಗಿಡುಗ.	೨೦೦೪	ಪು.ಸಂ.೫೪
೧೨೦.	ಅನುಸೂಯ ಕಾಂಬಳೆ.	ಮತ್ಸ್ಯಗಂಧಿಯ ಹಾಡು.	೨೦೧೧	ಪು.ಸಂ.೫೫
೧೨೧.	ಅನುಸೂಯ ಕಾಂಬಳೆ.	ಮತ್ಸ್ಯಗಂಧಿಯ ಹಾಡು.	೨೦೧೧	ಪು.ಸಂ.೫೫
೧೨೨.	ಅನುಸೂಯ ಕಾಂಬಳೆ.	ಮತ್ಸ್ಯಗಂಧಿಯ ಹಾಡು.	೨೦೧೧	ಪು.ಸಂ.೯೫
೧೨೩.	ಮಂಜುಳಾ ಹುಲಿಕುಂಟೆ.	ದೀಪದುಳುವಿನ ಕಾತರ.	೨೦೧೭	ಪು.ಸಂ.೫
೧೨೪.	ಮಂಜುಳಾ ಹುಲಿಕುಂಟೆ.	ದೀಪದುಳುವಿನ ಕಾತರ.	೨೦೧೭	ಪು.ಸಂ.೧೧

* * * * *

ಅಧ್ಯಾಯ – ೮

ಸಮಾರೋಪ

೮.೧ ಪ್ರಸ್ತುತ ಅಧ್ಯಯನದ ಫಲಿತಗಳು

೮.೨ ಹೆಚ್ಚಿನ ಅಧ್ಯಯನದ ಸಾಧ್ಯತೆಗಳು.

ಅಧ್ಯಾಯ – ೮

ಸಮಾರೋಪ

ಇಪ್ಪತ್ತನೇ ಶತಮಾನದ ಉತ್ತರಾರ್ಧ ಮತ್ತು ಇಪ್ಪತ್ತೊಂದನೇ ಶತಮಾನದ ಆರಂಭದ ದಶಕ ಮಹಿಳಾ ಸಾಹಿತ್ಯ ಲೋಕಕ್ಕೆ ಹೊಸ ಹಾದಿಯನ್ನು ತೆರೆದ ಸಂದರ್ಭ. ಈ ಕಾಲಘಟ್ಟ ಕನ್ನಡ ಸಾಹಿತ್ಯದಲ್ಲಿ ಹೊಸ ಕ್ರಾಂತಿಯನ್ನುಂಟು ಮಾಡಿತು. ಎಪ್ಪತ್ತರ ದಶಕದ ನಂತರ ಬಂದ ಆಧುನಿಕ ಮಹಿಳಾ ಕಾವ್ಯ ತನ್ನ ವಸ್ತು, ಆಶಯ, ಮತ್ತು ಅಭಿವ್ಯಕ್ತಿ ವಿಧಾನದಲ್ಲಿ ವಿಶಿಷ್ಟತೆ ಹೊಂದಿದೆ. ಇದು ಬಯಸುವುದು ಮತ್ತು ಕೇಂದ್ರೀಕರಿಸುವುದು ಸಾಮಾಜಿಕ ಸಂಗತಿಗಳನ್ನು, ಇವೇ ಕಾವ್ಯದ ಪ್ರಾತಿನಿಧಿಕ ಅಂಶಗಳೆಂಬಂತೆ ಕಂಡಿವೆ. ನಿಸರ್ಗದಲ್ಲಿ ಬದಲಾವಣೆ ಸಹಜವೆಂಬಂತೆ ಈ ಕಾಲಘಟ್ಟದಲ್ಲಿ ಬಂದ ಕವಯಿತ್ರಿಯರು ತಮ್ಮ ಸುತ್ತಲಿನ ಕೌತುಕದ ಘಟನೆಗಳು, ಕ್ರೌರ್ಯದ ಸಂಗತಿಗಳನ್ನು, ಕೌಟುಂಬಿಕ ಹಿಂಸೆ, ಬದುಕಿನ ಒತ್ತಡ ಮತ್ತು ತಲ್ಲಣ, ಸಂಕಟಗಳನ್ನು ಅವರ ಕಾವ್ಯದ ವಸ್ತುಗಳನ್ನಾಗಿಸಿ ಕೊಂಡರು. ಇವರ ಕಾವ್ಯದಲ್ಲಿ ರಚಿತಗೊಂಡ ಸಂಗತಿಗಳು, ಸಾಮಾಜಿಕ ಸಮಸ್ಯೆ ಮತ್ತು ಕಾಳಜಿಯನ್ನು ಕುರಿತಂತವು.

ಇಲ್ಲಿನ ಕವಯಿತ್ರಿಯರು ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ, ಅಸಹಾಯಕ ಹೆಣ್ಣಿನ ಪ್ರತಿರೂಪವಾಗಿ, ಸಮಾಜವನ್ನು ಪ್ರತಿನಿಧಿಸುವ ಸ್ತ್ರೀಯಾಗಿ ಕಂಡ ಸಮಸ್ಯೆಗಳು, ಸಂಕಟಗಳು, ನೋವು, ಹತಾಷೆ ಮುಂತಾದವುಗಳನ್ನು ತಮ್ಮ ಭಾಷಿಕ ಅಭಿವ್ಯಕ್ತಿಯ ಮೂಲಕ ಬರಹ ರೂಪಕ್ಕಿಳಿಸಿದರು. ಅಲ್ಲದೆ ಸಾರ್ವಜನಿಕ ಜೀವನದಲ್ಲಿ ಮಹಿಳೆ ಅನುಭವಿಸುವ ಸಂಕಟಗಳಿಗೆ ಸ್ಪಂದಿಸುತ್ತಲೇ ಸಮಾಜದಿಂದ ಅವರು ಬಯಸುವಂತಹ ಸಮಾನತೆಯೂ ಇವರ ಕಾವ್ಯದಲ್ಲಿ ಅರಳಿದ್ದು ವಿಶೇಷ. ಆಧುನಿಕ ಮಹಿಳಾ ಕಾವ್ಯವನ್ನು ಅಧ್ಯಯಿಸಿದಂತೆಲ್ಲ ಉಪಮೆ ಮತ್ತು ರೂಪಕಗಳನ್ನು ತಿರಸ್ಕರಿಸುತ್ತಾ ಹೊಸ ಬದಲಾವಣೆಯನ್ನು ಕಂಡುಕೊಳ್ಳುವ ನೆಲೆಯಲ್ಲಿ ನಿಲ್ಲುತ್ತದೆ.

ಕವಯಿತ್ರಿಯಾಗುವುದಕ್ಕಿಂತ ಮುಂಚೆ ಮಹಿಳೆಯಾಗಿ ಸಮಾಜವನ್ನು ಕಂಡ ರೀತಿ ಬೆರಗು ಹುಟ್ಟಿಸುವಂತದ್ದು. ಕಾವ್ಯ ರಚಿಸುವಾಗ ಕೇವಲ ತಮ್ಮೊಳಗಿನ ಭಾವನೆಗಳನ್ನು ತೋರ್ಪಡಿಸುವುದಿಲ್ಲ. ಶೋಷಣೆಯ ಸಮಾಜದ ಮುಖವಾಡ ಕಳಚುವಂತೆ ಮಾಡಿದರು. ಕನ್ನಡ ಮಹಿಳಾ ಕಾವ್ಯದ ವಿಶಿಷ್ಟತೆ ಪುರಾಣ ಪಾತ್ರಗಳ ಮರು ರಚನೆಯಲ್ಲಿದೆ. ಸ್ಥಾಪಿತ

ಮೌಲ್ಯಗಳನ್ನು ಕಂಡುಕೊಳ್ಳುವುದು ಮತ್ತು ಆ ಮೂಲಕ ಮತ್ತೊಂದು ಬಗೆಯಲ್ಲಿ ಚಿತ್ರಿಸುವುದು. ವಾಸ್ತವ ನೆಲೆಯೊಂದಿಗೆ ಗಟ್ಟಿಗೊಳಿಸುವುದಾಗಿದೆ. ಸಾಮಾಜಿಕ ಬದಲಾವಣೆಯನ್ನು ಬಯಸುವ ಮಹಿಳಾ ಕಾವ್ಯದಲ್ಲಿ ಪ್ರಮುಖವಾಗಿ ವ್ಯಕ್ತಿ ವಿಶಿಷ್ಟ ಅನುಭವ, ಸ್ವತಂತ್ರ್ಯ ಮನೋವೃತ್ತಿ, ಸ್ವಗತದ ಮಾದರಿಗಳು ಪ್ರಮುಖ ಅಭಿವ್ಯಕ್ತಿ ಕ್ರಮದಂತೆ ಕಂಡರೂ, ಮೂಲ ಕಾಳಜಿ ಸಮಾಜವೆ. ಸಾರ್ವಜನಿಕ ಜೀವನ ಸಮಾಜಮುಖಿ ಆಶಯಗಳಿಗೆ ಒತ್ತು ಕೊಡಬೇಕೆಂಬ ಒತ್ತಡ ಇವುಗಳದ್ದು. ಮಹಿಳಾ ಬರವಣಿಗೆ ಎಂದರೆ ಕೊಂಕು ನುಡಿಯುವ ಕಾಲ ಇಂದು ಸರಿದಿದೆ. ಒತ್ತಡದ ನಡುವೆಯೂ ಅವಳು ಒತ್ತು ನೀಡುವುದು ಬದಲಾವಣೆ ಸಹಿತ ಸಮಾಜವನ್ನು. ಮಹಿಳಾ ಕಾವ್ಯದಲ್ಲಿ ವಾಚ್ಯರೂಪದ, ಅರ್ಪಣಾ ಮನೋಭಾವದ, ಆತ್ಮವಿಮರ್ಶೆಯ, ಸ್ವಗತದ ಕವಿತೆಗಳಿವೆ. ಇವೆಲ್ಲವನ್ನೂ ಚಿತ್ರಿಸಿದ್ದರ ಉದ್ದೇಶ ಬದಲಾವಣೆಗೆ ತನ್ನನ್ನು ತಾನು ತಂದುಕೊಳ್ಳುವುದು ಮತ್ತು ಆ ಮೂಲಕ ಚಿಂತನೆಗೆ ದಾರಿ ಮಾಡಿಕೊಡುವುದು. ಮಹಿಳಾ ಕಾವ್ಯ ಎಂದಾಕ್ಷಣ ಮಹಿಳಾ ಆಶಯಗಳಿಗೆ ಮಾತ್ರ ಸೀಮಿತವೆಂದಲ್ಲ ಚಿಂತಿಸುವ ಮನಸ್ಸುಗಳಿಗೆ ಅವಕಾಶವೆಂಬಂತೆ ಇವು ಹೊಸ ಆಲೋಚನೆಗೆ ಸದಾ ತೆರೆದಿರುತ್ತವೆ. ಎಲ್ಲ ಮಾತುಗಳ ಪ್ರಮುಖ ಆಶಯ ಮಹಿಳಾ ಕಾವ್ಯ ಏಕಮುಖಿ ಚಿಂತನೆಯ ನೆಲೆಯಲ್ಲಿ ರಚಿತಗೊಂಡುವಲ್ಲ ಅಥವಾ ಏಕವ್ಯಕ್ತಿ ನೆಲೆಯಲ್ಲಿ ನಿಲ್ಲುವುದೂ ಇಲ್ಲ. ಸಮುದಾಯದ ಮುಖಾಂತರ ಸಾಮಾಜಿಕ ಆಶಯ ಇವುಗಳ ಒಟ್ಟಂದದಲ್ಲಿ ಸಿಗುವಂತದ್ದಾಗಿದೆ. ಮಹಿಳಾ ಕಾವ್ಯ ಇತ್ತೀಚೆಗೆ ಬೇಕಾಗಿರುವಂತಹ ಸಮಾಜಮುಖಿ ಆಶಯಗಳತ್ತ ಗಮನಹರಿಸಿ ಹೊಸ ನೋಟಕ್ಕೆ ದಾರಿ ಮಾಡಿಕೊಟ್ಟಿರುವುದು ಗಮನಾರ್ಹ ಸಂಗತಿ.

೮.೧ ಪ್ರಸ್ತುತ ಅಧ್ಯಯನದ ಫಲಿತಗಳು

೧. ಪುರುಷ ನಿರ್ಮಿತ ಮತ್ತು ಪುರುಷ ಕೇಂದ್ರಿತ ವ್ಯವಸ್ಥೆಯ ಭಾಗಗಳಾದ ಕಲೆ, ಸಾಹಿತ್ಯ, ಭಾಷೆ, ರಾಜಕಾರಣ ಹಾಗೂ ಧರ್ಮದ ಮೌಲ್ಯಗಳನ್ನು ಪ್ರಶ್ನಿಸಿರುವುದು ಮತ್ತು ವಿರೋಧಿಸಿರುವುದು.

೨. ಎಲ್ಲ ಬಗೆಯ ಧರ್ಮ, ಜಾತಿ, ವರ್ಗ, ಲಿಂಗ – ಅಸಮಾನತೆಗಳನ್ನು ತಿರಸ್ಕರಿಸಿರುವುದು ಮತ್ತು ಈ ಸಂಕೋಲೆಗಳ ಮಿತಿಗಳಿಂದ ಹೊರಬರಲು ಯತ್ನಿಸುವುದು.

೩. ಬರಹವನ್ನೇ ಸಾಮಾಜಿಕ ಪ್ರತಿಭಟನೆಯ ಅಸ್ತ್ರವನ್ನಾಗಿ ಬಳಸಿಕೊಂಡು ಕಾವ್ಯ ಸೃಷ್ಟಿಯ ಹೊಸ ಹೊಸ ನೆಲೆಗಳನ್ನು ಶೋಧಿಸಿದ್ದು.

೪. ಪುರುಷನ ಸಾಮಾಜಿಕ ಉನ್ನತಿಯ ರೀತಿಯಲ್ಲಿಯೇ ತನ್ನ ಬದುಕಿನ ಗತಿಯನ್ನು ಮಹಿಳೆಯು ಬದಲಿಸಿಕೊಳ್ಳಲು ಬಯಸಿ ಮುಂದುವರೆದದ್ದು. ಉನ್ನತ ಶಿಕ್ಷಣ,

ಹೊಸ ಬಗೆಯ ಚಿಂತನೆಗಳು, ಹೊಸ ಸಾಮಾಜಿಕ ಸಂಬಂಧಗಳು, ಕುಟುಂಬ ಕಲ್ಪನೆಯಿಂದ ಆಚೆಗೆ, ವಿವಾಹದಿಂದ ಆಚೆಗೆ ಹೊಸ ಬಾಂಧವ್ಯಗಳನ್ನು ಮಹಿಳೆ ಹುಡುಕಿಕೊಳ್ಳುತ್ತಿರುವುದು. ಲಿವಿಂಗ್ ಟುಗೇದರ್, ಬಾಡಿಗೆ ತಾಯ್ತನ, ಕಾಫಿ ಹೌಸ್.

೫. ಹಿಂದಿನ ಪುರಾಣ ಮತ್ತು ಚರಿತ್ರೆಯ ಮಹಿಳಾ ಸಿದ್ಧ ಮಾದರಿಯ ಪಾತ್ರ ಕಲ್ಪನೆಗಳನ್ನು ಧಿಕ್ಕರಿಸಿ, ಪ್ರಶ್ನಿಸಿ ಪುರುಷ ರಾಜಕಾರಣವನ್ನು ನೇರವಾಗಿ ಬಯಲು ಮಾಡಿರುವುದು. ಜೊತೆಗೆ ಈ ಪಾತ್ರಗಳನ್ನು ಹೆಣ್ಣಿನ ಮನಸ್ಥಿತಿಯ ಮೂಲಕವೇ ಮರುವ್ಯಾಖ್ಯಾನ ಮಾಡಲು ಯತ್ನಿಸಿರುವುದು.

೬. ಈ ಹೊತ್ತಿನ ಎಲ್ಲಾ ಸಾಮಾಜಿಕ, ಧಾರ್ಮಿಕ, ರಾಜಕೀಯ ಅನ್ಯಾಯ ಅಸಮಾನತೆ ಮತ್ತು ಭ್ರಷ್ಟತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಕೆಲವಾದರೂ ಸೂಚನೆಗಳನ್ನು ಮಹಿಳಾ ದೃಷ್ಟಿಕೋನದ ಮೂಲಕ ನೀಡಿರುವುದು.

೭. ಅರಿತು ಬಾಳುವ ಗುಣ, ಜಾಗೃತಿ, ಸಂಘಟನೆ, ಹೋರಾಟ ಮೊದಲಾದ ಸಾಮೂದಾಯಿಕ ಧನಾತ್ಮಕ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸುವುದು.

೮. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳೆಂಬ ಮಾನವೀಯ ಮೌಲ್ಯಗಳನ್ನು ಸಮಾಜದಲ್ಲಿ ಶೋಧಿಸಿ, ಇವುಗಳನ್ನು ಕಾವ್ಯ ರಚನೆಯ ಮೂಲಕ ಪ್ರೋತ್ಸಾಹಿಸುವುದು.

೯. ಬಹಳ ಮುಖ್ಯವಾಗಿ ಹೆಣ್ಣಿನ ಘನತೆ, ಗೌರವ ಮತ್ತು ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುವುದನ್ನು ಸಹಿಸಿಕೊಳ್ಳದೆ ಅದನ್ನು ಸಾಧ್ಯವಾದಷ್ಟು ವಿರೋಧಿಸುವುದು.

೮.೨ ಹೆಚ್ಚಿನ ಅಧ್ಯಯನದ ಸಾಧ್ಯತೆಗಳು.

'ಸಾಮಾಜಿಕ ಬದಲಾವಣೆಗಳ ಸಂದರ್ಭದಲ್ಲಿ ಆಧುನಿಕ ಕನ್ನಡ ಮಹಿಳಾ ಕಾವ್ಯಗಳ ಅಧ್ಯಯನ' ಎಂಬ ವಿಷಯವನ್ನು ಕುರಿತು ಅಧ್ಯಯನವನ್ನು ಕೈಗೊಂಡಾಗ ಸಾಮಾಜಿಕ ಬದಲಾವಣೆಯ ಅಂಶಗಳನ್ನು ಕೇಂದ್ರೀಕರಿಸಿ ಇನ್ನೂ ಹಲವಾರು ನೆಲೆಗಳಿಂದ ಅಧ್ಯಯನ ಮಾಡಬಹುದಾದ ಸಾಧ್ಯತೆಗಳು ಕಂಡುಬಂದಿವೆ. ಅವುಗಳನ್ನು ಈ ಚಿಂತನೆಯ ನೆಲೆಗಳಿಂದ ಗುರ್ತಿಸಬಹುದಾದ ಸಾಧ್ಯತೆಗಳಿವು ಎಂದು ಹೇಳಬಹುದು.

೧. ಆಧುನಿಕ ಕನ್ನಡ ಮಹಿಳಾ ಕಾವ್ಯದಲ್ಲಿ ಬೆಳೆಗೆರೆ ಜಾನಕಮ್ಮ, ಪ್ರತಿಭಾ ನಂದಕುಮಾರ್, ಶಶಿಕಲಾ ವೀರಯ್ಯಸ್ವಾಮಿ, ಹೆಚ್.ಎಲ್.ಪುಷ್ಪ, ಕೆ.ಷರೀಫಾ, ಬಿ.ಟಿ.ಲಲಿತಾನಾಯಕ್, ಲಲಿತಾ ಸಿದ್ದಬಸವಯ್ಯ, ದು.ಸರಸ್ವತಿ ಮುಂತಾದವರು ತಮ್ಮ ಕಾವ್ಯದ ಮೂಲಕ ವಿಶಿಷ್ಟರಾಗಿದ್ದಾರೆ. ಪ್ರಸ್ತುತಕ್ಕೆ ಇಂತಹ ಚರ್ಚೆಗಳು, ಚಿಂತನೆಗಳ ಅಗತ್ಯ ಹೆಚ್ಚಿದೆ.

೨. ಪುರುಷ ನೆಲೆಯ ಕೇಂದ್ರೀಕರಣ ಕಾವ್ಯದ ಮೇಲೆ ಹೆಚ್ಚಿದೆ. ಅದರಾಚೆಗಿನ ಸಾಮಾಜಿಕ ನ್ಯಾಯವನ್ನು ಕಂಡುಕೊಳ್ಳುವ ಪ್ರಯತ್ನವಾಗಬೇಕು.

೩. ಸ್ತ್ರೀವಾದದ ಪ್ರಭಾವವನ್ನು ಕುರಿತು ಚಿಂತಿಸುವ ನಾವುಗಳು, ಸ್ತ್ರೀಯಾತ್ಮಕ ನೆಲೆಯಲ್ಲಿ ಮಹಿಳಾ ಸ್ವಾತಂತ್ರ್ಯವನ್ನು ಗ್ರಹಿಸುವ ಹಂತಕ್ಕೆ ತಲುಪಬೇಕು.

೪. ಎಲ್ಲ ಸಾಹಿತ್ಯಗಳಿಗಿಂತ ಭಿನ್ನ ಧೋರಣೆ ಹೊಂದಿದ ಮಹಿಳಾ ಸಾಹಿತ್ಯ ತನ್ನ ಪ್ರತ್ಯೇಕತೆಯೊಂದಿಗೆ ವಿಶಿಷ್ಟತೆಯನ್ನು ಉಳಿಸಿಕೊಂಡಿದೆ. ಆದಾಗ್ಯೂ ಹೊಸ ನೋಟಗಳ ಅವಶ್ಯಕತೆಯ ಅಗತ್ಯವಿದೆ.

೫. ಮುಕ್ತತೆ ಎಂಬುದು ಮಹಿಳಾ ಕಾವ್ಯದ ಅಂಶವಾದರೂ ಸಮಾಜದಲ್ಲಿ ದಿನನಿತ್ಯ ನಡೆಯುವ ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಹೆಣ್ಣು ಮಕ್ಕಳ ಮಾರಾಟ ಮುಂತಾದ ಅಮಾನವೀಯ ಘಟನೆಗಳನ್ನು ನಾವು ಆದಷ್ಟು ಗೌಪ್ಯವಾಗಿಡಲು ಬಯಸುತ್ತೇವೆ. ಇದರಿಂದ ನಿರಂತರ ಶೋಷಣೆ ಹೆಚ್ಚುತ್ತದೆಯೆ ವಿನಃ ನ್ಯಾಯ ಸಿಗುವುದಿಲ್ಲ. ಇಂತದ್ದು ಕಾವ್ಯಗಳ ಪ್ರಧಾನ ಚಿಂತನೆಯಾದರೆ ಸಾಮಾಜಿಕ ಬದಲಾವಣೆ ಪರಿಪೂರ್ಣತೆಯನ್ನು ಪಡೆಯಬಹುದು.

ಮನುಷ್ಯ ತನ್ನ ದಿನನಿತ್ಯದ ಜೀವನ ಜಂಜಾಟಗಳನ್ನು ಹೊರಹಾಕಲು ಕಲೆಯ ಮೊರೆಹೋದ. ತನ್ನ ಭಾವನೆ, ಕಲ್ಪನೆಗಳನ್ನು, ಅವನ ಅನುಭವವನ್ನು ವ್ಯಕ್ತಪಡಿಸಲು ಕಂಡುಕೊಂಡಿದ್ದು ಸಾಹಿತ್ಯವನ್ನು ಇಂತಹ ಸೃಜನಶೀಲತೆಗೆ ವೇದಿಕೆಯಾಗಿದ್ದು ಕಾವ್ಯ. ಕಾಲಘಟ್ಟಗಳ ಮುಂದುವರಿಕೆ, ಆಲೋಚನಾ ಭಿನ್ನತೆ ಮತ್ತು ಬದಲಾವಣೆ, ಶಿಕ್ಷಣ, ಸಂಘಟನೆಗಳ ಮುಖೇನ ಮಹಿಳೆ ತನ್ನ ಅನುಭವಗಳನ್ನು ಸಾಕಾರಗೊಳಿಸಿಕೊಂಡದ್ದು ಕಾವ್ಯದ ಮುಖಾಂತರ. ವ್ಯವಸ್ಥೆಯ ಬಿಗಿಹಿಡಿತ, ಸಂಪ್ರದಾಯಗಳ ಉಸಿರು ಕಟ್ಟಿಸುವಿಕೆಯಿಂದ ಬಿಡಿಸಿಕೊಳ್ಳಬೇಕೆಂಬ ಹಂಬಲ ಅವಳಲ್ಲಿ ಮೂಡಿದ್ದು ಸಾಹಿತ್ಯದಿಂದ. ಕಾವ್ಯದ ಮುಖಾಂತರ ಹೊಸಪ್ರಪಂಚ ಕಂಡ ಅವಳು, ಸಮಾಜದ ಆಗು ಹೋಗುಗಳನ್ನು ಬೆರಗುಗಣ್ಣಿನಿಂದ ನೋಡುತ್ತಲೇ ಬಂಡಾಯ ಪ್ರಜ್ಞೆಯನ್ನು ಬೆಳೆಸಿಕೊಂಡಳು. ಅಂತರ್ಗತ ಮತ್ತು ವಾಸ್ತವ ನೆಲೆಯಲ್ಲಿನ ಆಗು ಹೋಗುಗಳನ್ನು ಬರವಣಿಗೆಯಲ್ಲಿ ಕ್ರೋಢೀಕರಿಸಿ ಹೊಸ ಸಮಾಜವನ್ನು ಕಾಣುವ ಬಯಕೆ ಅವಳದು. ಆದ್ದರಿಂದ ಸಾಮಾಜಿಕ ಬದಲಾವಣೆ ಎಂಬುದು ಆಧುನಿಕ ಕನ್ನಡ ಮಹಿಳಾ ಕಾವ್ಯದಲ್ಲಿ ನಿರಂತರ ಪ್ರಕ್ರಿಯೆಯಂತೆ ಕಂಡು ಬಂದಿರುವುದು ವಿಶೇಷ.

* * * * *

ಅನುಬಂಧ

ಅ. ಮೂಲ ಆಕರಗಳು

ಆ. ಸಮಕಾಲೀನ ಕವಯಿತ್ರಿಯರ ಕವನ ಸಂಕಲನಗಳು

ಇ. ಗ್ರಂಥ ಋಣ

ಅನುಬಂಧ

ಕವನ ಸಂಕಲನಗಳು, ಮೂಲ ಆಕರಗಳು

೧.	ಪುಷ್ಪ ಎಚ್. ಎಲ್.,	ಲೋಹದ ಕಣ್ಣು.,	೨೦೦೯.,	ಲೋಹಿಯಾ ಪ್ರಕಾಶನ, ಬಳ್ಳಾರಿ.
೨.	ಪುಷ್ಪ.ಎಚ್. ಎಲ್.,	ಅಮೃತ ಮತಿಯ ಸ್ವಗತ.,	೧೯೯೨.,	ಅನ್ವೇಷಣೆ ಪ್ರಕಾಶನ, ಬೆಂಗಳೂರು.
೩.	ಪ್ರತಿಭಾನಂದಕುಮಾರ್.,	ರಸ್ತೆಯಂಚಿನಗಾಡಿ.,	೧೯೯೧.,	ಕನ್ನಡಸಂಘ, ಕ್ರೈಸ್ಟ್‌ಕಾಲೇಜು, ಬೆಂಗಳೂರು.
೪.	ಪ್ರತಿಭಾ ನಂದಕುಮಾರ್.,	ಪ್ರತಿಭಾ ನಂದಕುಮಾರ್	ಈತನಕ., ೧೯೯೮.,	ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು.
೫.	ಪ್ರತಿಭಾನಂದಕುಮಾರ್.,	ಆಹಾಪುರುಷಾಕಾರಂ.,	೨೦೦೦.,	ನೆಲೆಮನೆ ಪ್ರಕಾಶನ, ಧಾರವಾಡ.
೬.	ಪ್ರತಿಭಾನಂದಕುಮಾರ್.,	ಆಯ್ದ ಕವಿತೆಗಳು.,	೨೦೦೭.,	ಅಕ್ಷರಪ್ರಕಾಶನ, ಹೆಗ್ಗೋಡು, ಹಾಸನ.
೭.	ಪ್ರತಿಭಾನಂದಕುಮಾರ್.,	ಮುದುಕಿಯರಿಗಿದು ಕಾಲವಲ್ಲ.,	೨೦೧೨.,	ಅಂಕಿತ ಪುಸ್ತಕ ಬೆಂಗಳೂರು.
೮.	ಪ್ರತಿಭಾನಂದಕುಮಾರ್.,	ಕಾಫಿಹೌಸ್.,	೨೦೧೨.,	ಅಂಕಿತ ಪ್ರಕಾಶನ, ಬೆಂಗಳೂರು.
೯.	ಲಲಿತಾ ಸಿದ್ದಬಸವಯ್ಯ.,	ಮೊದಲ ಸಿರಿ.,	೨೦೦೧.,	ಚಿನ್ಮಯಿ ಪ್ರಕಾಶನ, ತುಮಕೂರು.
೧೦.	ಲಲಿತಾ ಸಿದ್ದಬಸವಯ್ಯ.,	ಬಿಡಿಹರಳು.,	೨೦೦೨.,	ಚಿನ್ಮಯಿ ಪ್ರಕಾಶನ, ತುಮಕೂರು.
೧೧.	ಲಲಿತಾ ಸಿದ್ದಬಸವಯ್ಯ.,	ದಾರಿನೆಂಟ.,	೨೦೦೯.,	ಚಿನ್ಮಯಿ ಪ್ರಕಾಶನ, ತುಮಕೂರು.
೧೨.	ಲಲಿತಾನಾಯಕ್ ಬಿ.ಟಿ.,	ಬಿದಿರುಮೆಳೆ ಕಂಟಿಯಲಿ.,	೧೯೯೭.,	ಅಂಕಿತ ಪ್ರಕಾಶನ, ಬೆಂಗಳೂರು.
೧೩.	ಶಶಿಕಲಾವೀರಯ್ಯ ಸ್ವಾಮಿ.,	ಗುಬ್ಬಿಮನಿ.,	೧೯೮೭.,	ನೆಲೆಮನೆ ಪ್ರಕಾಶನ, ಮೈಸೂರು.
೧೪.	ಶಶಿಕಲಾವೀರಯ್ಯ ಸ್ವಾಮಿ.,	ಹೆಂಗ ಹೇಳಲೇ ಗೆಳತಿ.,	೧೯೮೯.,	ನೆಲೆಮನೆ ಪ್ರಕಾಶನ, ಮೈಸೂರು.
೧೫.	ಶಶಿಕಲಾವೀರಯ್ಯಸ್ವಾಮಿ.,	ಮಧ್ಯಂತರದ ಒಂದು ಗದ್ಯಗೀತೆ	೨೦೦೪.,	ನೆಲೆಮನೆ ಪ್ರಕಾಶನ, ಮೈಸೂರು.
೧೬.	ಶ್ಯಾಮಸುಂದರರಾವ್ ಡಿ.ಕೆ.,	ಬೆಳೆಗೆರೆ ಜಾನಕಮ್ಮ ಕಲ್ಯಾಣ(ಸ.).,	೨೦೧೧.,	ಕಾಮಧೇನು ಪುಸ್ತಕಭವನ, ಬೆಂಗಳೂರು.
೧೭.	ಷರೀಪಾ .ಕೆ.,	ನೊರೇನಳ ಅಂತರಂಗ.,	೧೯೯೭.,	ನಿಷರ್ಹ ಪ್ರಕಾಶನ, ಹರಿಹರ.

ಇತರೆ ಕವಯಿತ್ರಿಯರ ಕವನಸಂಕಲನಗಳು

೧.	ಅಕ್ಷತಾ ಹುಂಚದಕಟ್ಟೆ.,	ನೀರಮೇಲಣ ಚಿತ್ರಣ.,	೨೦೧೫.,	ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.
೨.	ಅನುಸೂಯ ಕಾಂಬಳೆ.,	ಮತ್ಸ್ಯಗಂಧಿಯ ಹಾಡು	೨೦೧೧.,	ಕೆಂಗುಲಾಬಿ ಪ್ರಕಾಶನ, ಆಜಾದ್‌ನಗರ, ಕೂಡ್ಲಗಿ.
೩.	ಉಷಾ ಪಿ. ರೈ.,	ಹಕ್ಕಿ ಮತ್ತು ಗಿಡುಗ.,	೨೦೦೪.,	ಸಾತ್ವಿಕ ಪ್ರಕಾಶನ, ಬೆಂಗಳೂರು.
೪.	ಉಷಾ .ಸ.,	ಹವಳ ಹಾರಿದ ಹೊತ್ತು.,	೨೦೦೫.,	ಅಭಿನವ ಪ್ರಕಾಶನ, ಬೆಂಗಳೂರು.
೫.	ಕವಿತಾ ರೈ.,	ಹಕ್ಕಿಹರಿವ ನೀರು.,	೧೯೯೯.,	ಕನ್ನಡಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು.
೬.	ಗುಡಿಬಂಡೆ ಪೂರ್ಣಿಮಾ.(ಸಂ).,	ಮುಂದೇನೆ ಸಖಿ ಮುಂದೇನೆ.,	೧೯೮೨.,	ವಿದ್ಯಾನಂದ ಪ್ರಕಾಶನ, ಗುಡಿಬಂಡೆ.
೭.	ಗುಡಿಬಂಡೆ ಪೂರ್ಣಿಮಾ.,	ನನಗನಿಸಿದ್ದು.,	೧೯೮೦.,	ವಿದ್ಯಾನಂದ ಪ್ರಕಾಶನ, ಗುಡಿಬಂಡೆ.
೮.	ಚೇತನಾ ತೀರ್ಥಹಳ್ಳಿ.,	ಶಬರಿಯ ಅವಸರ.,	೨೦೧೪.,	ಅಂಕಿತ ಪುಸ್ತಕ, ಬೆಂಗಳೂರು.
೯.	ಚಂದ್ರಿಕಾ ಪಿ.,	ನಿಮ್ಮ ಚರಿತ್ರೆಯಲ್ಲಿ ನಮಗೆ ಜಾಗವಿಲ್ಲ.,	೧೯೯೮.,	ಕನ್ನಡಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು.
೧೦.	ಮಾಲತಿ ಪಟ್ಟಣ ಶೆಟ್ಟಿ.,	ಮೌನ ಕರಗುವ ಹೊತ್ತು.,	೧೯೯೯.,	ನೆಲೆ ಪ್ರಕಾಶನ, ಸಿಂದಗಿ.
೧೧.	ಮಾಲತಿ ಎಸ್.,	ಹೇಳಬೇಕೆನಿಸಿದ್ದು.,	೨೦೦೧.,	ಇಳಾಪ್ರಕಾಶನ, ಬೆಂಗಳೂರು.
೧೨.	ಮಂಜುಳಾ ಹುಲಿಕುಂಟೆ.,	ದೀಪದುಳುವಿನ ಕಾತರ.,	೨೦೧೭.,	ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.
೧೩.	ರಜಿಯಾ ಡಿ. ಬಿ.,	ರಜಿಯಾ ಅವರ ಕವಿತೆಗಳು.,	೨೦೧೦.,	ಲೋಹಿಯಾ ಪ್ರಕಾಶನ, ಬಳ್ಳಾರಿ.
೧೪.	ವಿನಯಾ.,	ಬಾಯಾರಿಕೆ.,	೨೦೦೨.,	ಲಡಾಯಿ ಪ್ರಕಾಶನ, ಗದಗ.
೧೫.	ಶ್ರೀನಿವಾಸರಾಜು ಚಿ.(ಸಂ).,	ಪರಿಮಳದ ಸುಗ್ಗಿ.,	೨೦೦೫.,	ನವಕರ್ನಾಟಕ ಪಬ್ಲಿಕೇಷನ್.ಬೆಂಗಳೂರು.
೧೬.	ಸುಕನ್ಯಾ ಮಾರುತಿ	ನಾನೆಂಬಮಾಯೆ.,	೨೦೦೭	ಸಪ್ನ ಬುಕ್‌ಹೌಸ್, ಬೆಂಗಳೂರು.

೧೭.	ಸವಿತಾನಾಗಭೂಷಣ.,	ದರುಶನ.,	೨೦೦೯.,	ಲೋಹಿಯಾ ಪ್ರಕಾಶನ, ಬಳ್ಳಾರಿ.
೧೮.	ಸವಿತಾ ನಾಗಭೂಷಣ.,	ಕಾಡುಲಿಲ್ಲಿ ಹೂಗಳು.,	೨೦೦೬.,	ರೂಪ ಪ್ರಕಾಶನ, ಮೈಸೂರು.
೧೯.	ಸಬಿತಾ ಬನ್ನಾಡಿ (ಸಂ).,	ಅವಳ ಕವಿತೆ., ಕವಲಕ್ಕಿ,	೨೦೧೭.,	ಕವಿ ಪ್ರಕಾಶನ, ಉತ್ತರ ಕನ್ನಡ.
೨೦.	ಸಂಧ್ಯಾರೆಡ್ಡಿ ಕೆ.ಆರ್.,	ಇನ್ನೊಂದು ದನಿ.,	೨೦೦೪.,	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೨೧.	ಸಂಧ್ಯಾರೆಡ್ಡಿ ಕೆ.ಆರ್.,	ಮೂವತ್ತೈದರ ಹೊಸ್ತಿಲು.,	೧೯೯೦.,	ಸಪ್ನ ಬುಕ್‌ಹೌಸ್, ಬೆಂಗಳೂರು.
೨೨.	ಹೇಮಾಪಟ್ಟಣ ಶೆಟ್ಟಿ.,	ಕಣ್ಣುಗಳಲಿ ಕನಸುತುಂಬಿ.,	೧೯೯೩.,	ಅನನ್ಯ ಪ್ರಕಾಶನ, ಧಾರವಾಡ.

* * * * *

ಗ್ರಂಥ ಋಣ

೧.	ಆಶಾದೇವಿ ಎಂ.ಎಸ್.	ನಾರಿಕೇಳ	೨೦೧೭	ಅಕ್ಷರ ಪ್ರಕಾಶನ, ಹೆಗ್ಗೋಡು
೨.	ಆಶಾದೇವಿ ಎಂ. ಎಸ್.	ನಡುವೆ ಸುಳಿವ ಆತ್ಮ	೨೦೧೧	ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.
೩.	ಗೀತಾ ಪ್ರಸಾದ್	ಆಧುನಿಕ ಮಹಿಳಾ ಅಭಿವ್ಯಕ್ತಿ	೨೦೦೯	ಧಾತ್ರಿ ಪುಸ್ತಕ, ಬೆಂಗಳೂರು.
೪.	ಚಂದ್ರಶೇಖರ್ .ಟಿ. ಆರ್.	ಮಹಿಳಾ ಅಧ್ಯಯನ ಪರಿಭಾಷೆ	೨೦೧೬	ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
೫.	ಚಿಂತಾಮಣಿ ಕೊಡ್ಲುಕೆರೆ	ಅಂತರಂಗದ ಆಕಾಶ	೨೦೦೬	ಚಿತ್ರಮೂಲ ಪ್ರಕಾಶನ, ಅಘನಾಶಿನಿ ಉತ್ತರಕನ್ನಡ.
೬.	ತಿಪ್ಪೇರುದ್ರಸ್ವಾಮಿ ಎಚ್	ತೌಲನಿಕ ಕಾವ್ಯ ಮೀಮಾಂಸೆ	೧೯೯೦	ಡಿ.ವಿ.ಕೆ.ಮೂರ್ತಿ ಪ್ರಕಾಶನ, ಬೆಂಗಳೂರು.
೭.	ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ (ಸಂ).	ಸ್ತ್ರೀವಾದಿ ಸಾಹಿತ್ಯ ವಿಮರ್ಶೆ	೨೦೧೪	ಅಭಿನವ ಪ್ರಕಾಶನ, ಬೆಂಗಳೂರು.
೮.	ನಟರಾಜ ಬೂದಾಳು ಎಸ್	ಕನ್ನಡ ಕಾವ್ಯ ಮೀಮಾಂಸೆ	೨೦೧೬	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೯.	ನಾಗರಾಜ ಡಿ. ಆರ್.,	ಶಕ್ತಿಶಾರದೆಯ ಮೇಳ	೨೦೧೫	ಅಕ್ಷರ ಪ್ರಕಾಶನ ಶಿವಮೊಗ್ಗ
೧೦.	ನಾಗಭೂಷಣಸ್ವಾಮಿ ಓ.ಎಲ್	ವಿಮರ್ಶೆಯ ಪರಿಭಾಷೆ	೧೯೯೮	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೧೧.	ಮುಗಳಿ ರಂ.ಶ್ರೀ.,	ಕನ್ನಡ ಸಾಹಿತ್ಯ ಚರಿತ್ರೆ	೨೦೦೯	ಗೀತಾಬುಕ್‌ಹೌಸ್, ಬೆಂಗಳೂರು.
೧೨.	ರಂಗಸ್ವಾಮಿ ಬೆಳಕವಾಡಿ	ಸಮಾಜಶಾಸ್ತ್ರದ ಮೂಲತತ್ವಗಳು	೨೦೦೯	ಶುಭ ಸ್ಟೋರ್, ಬೆಂಗಳೂರು.
೧೩.	ರಾಘವೇಂದ್ರರಾವ್ ಎಚ್.ಎಸ್	ಕಣ್ಣಹನಿಗಳೆ ಕಾಣಿಕೆ	೨೦೧೨	ಇಳಾ ಪ್ರಕಾಶನ, ಬೆಂಗಳೂರು.
೧೪.	ರಾಘವೇಂದ್ರರಾವ್ ಎಚ್.ಎಸ್	ಹಾಡೇ ಹಾದಿಯ ತೋರಿತು	೧೯೯೫	ಕ್ರೈಸ್ಟ್ ಕಾಲೇಜು, ಬೆಂಗಳೂರು
೧೫.	ರಾಮೇಗೌಡ(ಸಂ)	ಮಹಿಳಾ ಅಧ್ಯಯನದ ವಿವಿಧ ಆಯಾಮಗಳು.	೨೦೦೮	ರೂಪ ಪ್ರಕಾಶನ, ಮೈಸೂರು.
೧೬.	ರಾಮಲಿಂಗಪ್ಪ.ಟಿ.ಬೇಗೂರು	ಮಹಿಳೆ: ಚರಿತ್ರೆ, ಪುರಾಣ	೨೦೧೪	ಅಂಕಿತಪುಸ್ತಕ, ಬೆಂಗಳೂರು.
೧೭.	ವಿಜಯಲಕ್ಷ್ಮೀ ಕೆ. ಎಂ.	ಸ್ತ್ರೀವಾದ–ಸಾಹಿತ್ಯದ ಒಂದು ಚಳುವಳಿ	೨೦೦೫	ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು.
೧೮.	ವೀರಣ್ಣ ಸಿ.,	ಕನ್ನಡ ಕಾವ್ಯ ಕಂಡ ಹೆಣ್ಣು	೨೦೧೦	ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು.
೧೯.	ವಿವಿಧ ಲೇಖಕಿಯರಿಂದ	ಸಂಗಮ., ಪುಷ್ಟಿ–ಸೃಷ್ಟಿ	೧೯೯೪	ಸಂದೀಪಸಾಹಿತ್ಯ, ಅತ್ರಾಡಿ, ಉಡುಪಿ.

೨೦.	ವಿವಿಧ ಲೇಖಕರು	ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ.	೨೦೦೬	ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೨೧.	ವಿನಯಾ.(ಸಂ).	ಭಾರತೀಯ ಮಹಿಳಾ ಸಾಹಿತ್ಯ	೨೦೧೭	ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
೨೨.	ಶಿವಾನಂದ ಎಸ್. ವಿರಕ್ತಿಮಠ (ಸಂ)	ಮಹಿಳಾ ಅಧ್ಯಯನ	೨೦೦೮	ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೩.	ಶ್ರೀಮತಿ ಎಚ್.ಎಸ್. ಶಿವಾನಂದ ಎಸ್. ವಿರಕ್ತಿಮಠ ಕೃಷ್ಣ.ಜಿ (ಸಂ)	ಹೆಣ್ಣು ಮತ್ತು ಭಾಷೆ	೨೦೦೭	ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೪.	ಶ್ರೀಮತಿ ಎಚ್.ಎಸ್.	ಸ್ತ್ರೀವಾದ	೨೦೦೩	ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೫.	ಶ್ರೀಮತಿ ಎಚ್.ಎಸ್ (ಸಂ)	ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ	೨೦೦೬	ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೬.	ಶ್ರೀಮತಿ ಎಚ್. ಎಸ್.	ಹೆಣ್ಣುತನ ಎಂಬ ಕಣ್ಕಟ್ಟು	೨೦೧೦	ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.
೨೭.	ಶ್ರೀಮತಿ ಎಚ್. ಎಸ್ (ಸಂ)	ದಿ ಸೆಕೆಂಡ್ ಸೆಕ್ಸ್	೨೦೧೧	ಪ್ರಗತಿ ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.
೨೮.	ಶೈಲಜಾ ಹಿರೇಮಠ	ಮಹಿಳಾ ಅಧ್ಯಯನ	೨೦೦೬.,	ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೯.	ಶೇಖರ್ ಎಂ.ಎಸ್ (ಸಂ)	ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಹಿಳಾ ಪರ ಕಾಳಜಿಗಳು	೨೦೦೭	ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೩೦.	ಶಾಮರಾಯ ತ.ಸು.	ಕನ್ನಡ ಸಾಹಿತ್ಯ ಚರಿತ್ರೆ	೨೦೦೬	ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.
೩೧.	ಸುಲತಾ ವಿದ್ಯಾಧರ(ಸಂ)	ಹರಿವ ತೊರೆಗೆ ನೂರು ತೊಡರು	೨೦೧೫	ಶ್ರೀಚಕ್ರ ಪ್ರಕಾಶನ, ಮೂಡುಬಿದರೆ.
೩೨.	ಸುಮಿತ್ರಾಬಾಯಿ ಬಿ. ಎನ್.	ಮಹಿಳೆ ಮತ್ತು ಸಾಹಿತ್ಯ	೨೦೦೮	ರೂಪ ಪ್ರಕಾಶನ, ಮೈಸೂರು.
೩೩.	ಸುಮಿತ್ರಾಬಾಯಿ ಬಿ. ಎನ್. ಎ.ವಿ.ನಾವಡ(ಸಂ)	ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು	೨೦೦೦	ಕನ್ನಡ ವಿಶ್ವವಿದ್ಯಾಲಯ, ಹಂಪಿ.
೩೪.	ಸುಮಿತ್ರಾಬಾಯಿ ಬಿ. ಎನ್.	ಸರಹದ್ದುಗಳ ಆಚೆ ಈಚೆ	೨೦೦೯.,	ಇಳಾ ಪ್ರಕಾಶನ, ಬೆಂಗಳೂರು.
೩೫.	ಸೋ.ಮು ಭಾಸ್ಕರಾಚಾರ್	ಆಧುನಿಕ ಕನ್ನಡ ಕಾವ್ಯದಲ್ಲಿ ಮಾತೃತ್ವದ ಸ್ವರೂಪ	೨೦೧೦.,	ಕಿರಣ್ ಪ್ರಕಾಶನ, ತುಮಕೂರು.
೩೬.	ಹೆಣ್ಣೆಂದರೆ ಶಕ್ತಿಯು.	ಮಹಿಳಾ ಜಾಗೃತಿ ಲೇಖನಗಳ ಸಂಗ್ರಹ	೨೦೧೨.,	ಕ.ರಾ.ಮ.ಸಂ. ಒ.ರಾ.ಸಮಿತಿ, ಬೆಂಗಳೂರು.
೩೭.	ಹೇಮಲತಾ ಎಚ್. ಎಮ್.	ಮಹಿಳಾ ಸಬಲೀಕರಣ ಒಂದು ಪರಿಕಲ್ಪನೆ.	೨೦೧೬	ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.

* * * * *